ಸಾಮಾನ್ಯನಿಗೆ
ಸಾಹಿತ್ಯ ಚರಿತ್ರೆ
೪

ಚಂಪೂ ಕವಿಗಳು

ಪಿ. ವಿ. ನಾರಾಯಣ

ಸಪ್ನ

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ

೪

ಚಂಪೂ ಕವಿಗಳು

ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ

ಚಂಪೂ ಕವಿಗಳು

ಪಿ. ವಿ. ನಾರಾಯಣ

ಸಪ್ನ ಬುಕ್ ಹೌಸ್®
3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009
ದೂರವಾಣಿ : 40114455

CHAMPU KAVIGALU : by **Dr. P. V. Narayana**, published by **Sapna Book House (P) Ltd.**, R.O. # 11, 3rd Main Road, Gandhinagar, Bangalore - 9. Tel. : 40114455.

[K.B. 1442]

ISBN : **978-81-280-1094-1**

ಪ್ರಥಮ ಮುದ್ರಣ : 1975
ಮೂರನೆಯ ಮುದ್ರಣ : ನವೆಂಬರ್ 2009

ಪುಟಗಳು : x + 239 = 249	ಪ್ರತಿಗಳ ಸಂಖ್ಯೆ : 1000
ಬೆಲೆ ರೂ. : 125/–	Paper Used : 18.6 Kg (70 gsm) N.S. Maplitho Book Size : 1/8 Demy

ಹಂಚಿಕೆದಾರರು : ಕರ್ನಾಟಕ ಬುಕ್ ಏಜೆನ್ಸಿ
ನಂ. 11, 2ನೇ ಮಹಡಿ, 3ನೇ ಮುಖ್ಯ ರಸ್ತೆ
ಗಾಂಧಿನಗರ, ಬೆಂಗಳೂರು - 560 009

ಅಕ್ಷರ ಜೋಡಣೆ : ದಿವ್ಯ ಪ್ರಿಂಟ್ರಾನಿಕ್ಸ್, ಬೆಂಗಳೂರು

ಮುಖಪುಟ ವಿನ್ಯಾಸ : ಮೋನಪ್ಪ, ಬೆಂಗಳೂರು

ಮುದ್ರಣ : ರವಿ ಗ್ರಾಫಿಕ್ಸ್, ಬೆಂಗಳೂರು

ಸಂಪಾದಕರ ಮಾತು

ಇದು ಸಾಹಿತ್ಯ ಚರಿತ್ರೆಗಳ ಸುಗ್ಗಿಯ ಕಾಲ; ಕನ್ನಡ ಸಾಹಿತ್ಯ ಸಂಪತ್ತನ್ನು ಅಳೆದು-ಸುರಿದು ಪರಿಚಯ ಮಾಡಿಕೊಡುವ ಕೆಲಸ ಎಂದಿಗಿಂತ ಮಿಗಿಲಾಗಿ ಇಂದು ನಡೆಯ ತೊಡಗಿದೆ. ಕರ್ನಾಟಕದ ಏಕೀಕರಣವಾದ ಮೇಲಂತೂ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಪರಿಚಯವನ್ನು ಬಹುಮುಖವಾಗಿ ಮಾಡಿಕೊಡುವ ಪ್ರಯತ್ನಗಳು ರಭಸದಿಂದ ನಡೆಯುತ್ತಿರುವುದು ಅತ್ಯಂತ ಸಹಜವೂ, ಉಚಿತವೂ, ಅಗತ್ಯವೂ ಆಗಿದೆ. ಈ ಕಾರ್ಯ ಪರಂಪರೆಯಲ್ಲಿ, ಬೆಂಗಳೂರು ವಿಶ್ವ ವಿದ್ಯಾಲಯವು, ಜನ್ಮಭೂಮಿ ಪ್ರೆಸ್ ಟ್ರಸ್ಟ್‌ನ ಶ್ರೀ ಬಿ. ಎನ್. ಗುಪ್ತ ಅವರ ಉದಾರವಾದ ಕೊಡುಗೆಯ ನೆರವಿನಿಂದ, ಹತ್ತು ಕಿರು ಸಂಪುಟ ಗಳಲ್ಲಿ ಸಿದ್ಧಪಡಿಸಿ ಪ್ರಕಟಿಸುತ್ತಿರುವ 'ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ'ಯ ಯೋಜನೆಯೂ ಒಂದು.

ಈ ಯೋಜನೆಯ ಹೆಸರೇ ಸೂಚಿಸುವಂತೆ, ಇದು ಸಾಮಾನ್ಯರಿಗಾಗಿ ಬರೆದ ಸಾಹಿತ್ಯ ಚರಿತ್ರೆ. ಸಾಹಿತ್ಯ ಚರಿತ್ರೆಯನ್ನು ಕುರಿತು ಇತ್ತೀಚೆಗೆ ಕರ್ನಾಟಕದಲ್ಲಿ ನಡೆಯುತ್ತಿರುವ ಕೆಲಸಗಳೆಲ್ಲ ಬಹುಮಟ್ಟಿಗೆ, ವಿದ್ವಾಂಸರನ್ನೋ, ಸಾಹಿತ್ಯವನ್ನು ವಿಶೇಷವಾದ ರೀತಿಯಲ್ಲಿ ಅಧ್ಯಯನ ಮಾಡುವವರನ್ನೋ ಉದ್ದೇಶಿಸಿದವುಗಳು. ಆದರೆ ಈ ಪ್ರೌಢ ಪರಿಣತ ವರ್ಗದ ಆಚೆ ಇರುವ, ಸಾಹಿತ್ಯಾಸಕ್ತರಾದ ಸಾಮಾನ್ಯರಿಗೆ, ಕನ್ನಡ ಸಾಹಿತ್ಯ ಚರಿತ್ರೆಯನ್ನು ಮುಟ್ಟಿಸುವ ಪ್ರಯತ್ನಗಳು ಅಷ್ಟಾಗಿ ನಡೆದಿಲ್ಲವೆಂದೇ ಹೇಳಬೇಕು. ಈ ದಿಕ್ಕಿನಲ್ಲಿ ಈಗ ಸಿದ್ಧವಾಗಿರುವ ಈ ಹತ್ತು ಕಿರು ಸಂಪುಟಗಳು ಮೊದಲ ಪ್ರಯತ್ನವೆನ್ನಬಹುದು.

ಒಂದು ಸಾವಿರ ವರ್ಷಕ್ಕೂ ಮೀರಿದ ಕನ್ನಡ ಸಾಹಿತ್ಯದ ಇತಿಹಾಸವನ್ನು ಸರಳವಾಗಿ, ನಿರ್ದುಷ್ಟವಾಗಿ ಮತ್ತು ಆಕರ್ಷಕವಾಗಿ ಸಾಮಾನ್ಯರಿಗೆ ಪರಿಚಯ ಮಾಡಿಕೊಡಬೇಕೆಂಬುದೇ ಈ ಸಂಪುಟಗಳ ಉದ್ದೇಶ. ಇಲ್ಲಿ 'ಸಾಮಾನ್ಯರು' ಎಂದರೆ, ವಿದ್ವಾಂಸರಲ್ಲದ, ಆದರೆ ಕನ್ನಡ ಸಾಹಿತ್ಯ ಹಾಗೂ ಸಂಸ್ಕೃತಿಯ ಬಗೆಗೆ ತಕ್ಕಮಟ್ಟಿಗೆ ಆಸಕ್ತಿ-ಅಭಿರುಚಿಯನ್ನುಳ್ಳ ಓದುಗರು ಎಂದು ಅರ್ಥ. ಇಂಥವರಿಗೆ, ವಿಸ್ತಾರವಾದ ಕನ್ನಡ ಸಾಹಿತ್ಯವನ್ನು ಪರಿಚಯ ಮಾಡಿಕೊಡ ಬೇಕಾದರೆ ಬರವಣಿಗೆ ಮುಖ್ಯವಾಗಿ ತಿಳಿಯಾಗಿರಬೇಕು; ವಿದ್ವತ್‌ಪ್ರಿಯವಾದ ಚರ್ಚೆಗಳನ್ನು ಬದಿಗಿರಿಸಿ, ಮುಖ್ಯ ವಿಷಯಗಳ ಸಾರಾಂಶವನ್ನು ಕೊಡಬೇಕು; ನಿರೂಪಣೆ ವರ್ಣನಾತ್ಮಕವೂ ಕಥನಾತ್ಮಕವೂ ಆಗಿರಬೇಕು; ಪ್ರಾತಿನಿಧಿಕವಾದ ಪ್ರಮುಖ ಕವಿಗಳನ್ನು ಕೇಂದ್ರದಲ್ಲಿರಿಸಿ ಕೊಂಡು ಅವರಿಗೆ ಹಿನ್ನೆಲೆಯಾದ ಯುಗಧರ್ಮದಲ್ಲಿ ಅಂದಂದಿನ ಸಾಹಿತ್ಯಕ್ಕೆ ಒದಗಿದ ಪ್ರೇರಣೆಗಳನ್ನೂ, ಅಂದಂದಿನ ಸಾಹಿತ್ಯಕ ಸಾಧನೆಗಳನ್ನೂ ಪರಿಚಯ ಮಾಡಿಕೊಡುವಂತಿರ ಬೇಕು; ಬರವಣಿಗೆ ಪರಿಚಯಾತ್ಮಕವಾಗಿರಬೇಕು ಎಂದರೆ, ಅದು ತಕ್ಕಮಟ್ಟಿನ ವಿಮರ್ಶನ

ಪ್ರಯತ್ನಗಳಿಂದಾಗಲಿ, ಮೌಲ್ಯಮಾಪನ ದೃಷ್ಟಿಯಿಂದಾಗಲಿ ಹೊರತಾಗಿರಬೇಕೆಂದು ಅರ್ಥವಲ್ಲ; ಬರವಣಿಗೆ ಸರಳವಾಗಿರಬೇಕು ಎಂದರೆ ವಿಷಯವನ್ನು ತೀರಾ ಸರಳಗೊಳಿಸ ಬೇಕೆಂದಲ್ಲ, ಹೇಳುವ ಭಾಷೆ ಸರಳವಾಗಿರಬೇಕು. ಒಟ್ಟಿನಲ್ಲಿ ಓದುಗರಿಗೆ ಸಮಗ್ರ ಕನ್ನಡ ಸಾಹಿತ್ಯದ ತಕ್ಕಮಟ್ಟಿನ ಪರಿಚಯವಾಗುವುದರ ಜತೆಗೆ, ಕನ್ನಡ ಕವಿ-ಕೃತಿಗಳನ್ನು ಮೂಲದಲ್ಲಿಯೇ ಓದಬೇಕೆನ್ನುವ ಒಂದು ರುಚಿಯನ್ನು ಹುಟ್ಟಿಸುವಂತಿರಬೇಕು. ಈ ಕೆಲವು ಉದ್ದೇಶಗಳನ್ನು ಈ ಸಂಪುಟಗಳ ರಚನೆಯ ಹಿನ್ನೆಲೆಗೆ ಇರಿಸಿಕೊಳ್ಳಲಾಗಿದೆ. ಈ ಉದ್ದೇಶ ಎಷ್ಟರಮಟ್ಟಿಗೆ ಸಫಲವಾಗಿದೆ ಎನ್ನುವುದನ್ನು ಓದುಗರೇ ಹೇಳಬೇಕು.

ಈ ಹತ್ತು ಸಂಪುಟಗಳ ವಿಶೇಷವೆಂದರೆ, ಇಡೀ ಕನ್ನಡ ಸಾಹಿತ್ಯದ ಚರಿತ್ರೆಯನ್ನು ಚಂಪೂ, ಶಾಸ್ತ್ರ ಸಾಹಿತ್ಯ, ವಚನ, ಷಟ್ಪದಿ ಹೀಗೆ ಪ್ರಮುಖವಾದ ಸಾಹಿತ್ಯ ರೂಪಗಳನ್ನು ಮೂಲಮಾನವನ್ನಾಗಿ ಮಾಡಿಕೊಂಡು ಬರೆದದ್ದು ಇದೇ ಮೊದಲು. ಮತ್ತು ಈ ಬರವಣಿಗೆ ಸಾಧ್ಯವಾದ ಮಟ್ಟಿಗೆ ಇದುವರೆಗೂ ಉಪಲಬ್ಧವಾದ ಸಾಮಗ್ರಿಯನ್ನು ಬಳಸಿಕೊಳ್ಳು ವುದಲ್ಲದೆ, ಕೆಲವು ಸಂಪುಟಗಳಲ್ಲಿ ಹೊಸ ದೃಷ್ಟಿಕೋನವನ್ನೂ ಪ್ರತಿಪಾದಿಸುವಂತೆ ರಚಿತ ವಾಗಿದೆ. ಈ ಹತ್ತು ಕಿರು ಸಂಪುಟಗಳನ್ನು ಓದಿದ ಯಾರಿಗಾದರೂ, ಕನ್ನಡ ಸಾಹಿತ್ಯದ ಸಾಧನೆಯ ಪರಿಚಯ ತಕ್ಕಮಟ್ಟಿಗೆ ಆಗುವುದೆಂಬುದರಲ್ಲಿ ಅನುಮಾನವಿಲ್ಲ.

ಈ ಯೋಜನೆಯಲ್ಲಿ ವಿಶ್ವಾಸದಿಂದ ಸಹಕರಿಸಿದ ಎಲ್ಲರಿಗೂ ನಮ್ಮ ಅನಂತ ವಂದನೆಗಳು.

1975 ಜಿ. ಎಸ್. ಶಿವರುದ್ರಪ್ಪ

ಪ್ರಕಾಶಕರ ಮಾತು

ಡಾ. ಜಿ. ಎಸ್. ಶಿವರುದ್ರಪ್ಪನವರು ಬೆಂಗಳೂರು ವಿಶ್ವ ವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದ ಕಾಲದಲ್ಲಿ ಕೈಕೊಂಡ ಹಲವು ಯೋಜನೆಗಳಲ್ಲಿ, "ಸಾಮಾನ್ಯನಿಗೆ ಸಾಹಿತ್ಯ ಚರಿತ್ರೆ"ಯ ಹತ್ತು ಸಂಪುಟಗಳ ಪ್ರಕಟಣ ಯೋಜನೆಯೂ ಒಂದು. 1975ರಲ್ಲಿ ಪ್ರಕಟ ವಾದ ಈ ಸಂಪುಟಗಳು ಮತ್ತೆ 1999ರಲ್ಲಿ ಬೆಂಗಳೂರು ವಿಶ್ವವಿದ್ಯಾಲಯ ದಿಂದ ಪ್ರಕಟವಾದದ್ದನ್ನು ಹೊರತುಪಡಿಸಿದರೆ ಈವರೆಗೆ ಸಾಹಿತ್ಯಾಸಕ್ತ ಸಹೃದಯರಿಗೆ ಅವು ಅಲಭ್ಯವಾಗಿಯೇ ಉಳಿದವು. ಮೂರೂವರೆ ದಶಕಗಳ ಹಿಂದೆ ಪ್ರಕಟವಾದ ಈ ಸಂಪುಟಗಳನ್ನು ಸಾರ್ವಜನಿಕರ ಬೇಡಿಕೆಯ ಮೇರೆಗೆ ಬೆಂಗಳೂರಿನ 'ಸಪ್ನ ಬುಕ್ ಹೌಸ್', ಹತ್ತೂ ಸಂಪುಟಗಳ ಲೇಖಕರ ಅನುಮತಿಯನ್ನು ಪಡೆದು ಇದೀಗ ಪ್ರಕಟಿಸಲು ಮುಂದಾಗಿದೆ. ಈ ಸಂಪುಟ ಗಳಲ್ಲಿ ಮಂಡಿತವಾಗಿರುವ ಸಾಹಿತ್ಯ ಚರಿತ್ರೆಯ ಸ್ವರೂಪವನ್ನು ವಿಶಿಷ್ಟತೆ ಯನ್ನೂ ಕುರಿತು, ಮೊದಲ ಮುದ್ರಣದ ಸಂದರ್ಭದ ಸಂಪಾದಕರ ಮಾತನ್ನು ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ.

ಇಂತಹ ಯೋಜನೆಯನ್ನು ಪೂರ್ಣಗೊಳಿಸಲು ನಮ್ಮೊಂದಿಗೆ ಸಹಕರಿಸಿದ ಈ ಮಾಲೆಯ ಎಲ್ಲಾ ಲೇಖಕ ಬಳಗಕ್ಕೂ ಹಾಗೂ ವಿಶೇಷವಾಗಿ ಸಂಪಾದಕರಾದ ರಾಷ್ಟ್ರಕವಿ ಡಾ. ಜಿ. ಎಸ್. ಶಿವರುದ್ರಪ್ಪನವರಿಗೂ ನಮ್ಮ ಹೃತ್ಪೂರ್ವಕ ಧನ್ಯವಾದಗಳು.

ಇಂತಹದ್ದೊಂದು ಮಹತ್ವದ ಯೋಜನೆಯನ್ನು ಸಕಾಲದಲ್ಲಿ ಹೊರ ತರಲು ನಮ್ಮೊಂದಿಗೆ ಸಹಕರಿಸಿದ ದಿವ್ಯ ಪ್ರಿಂಟ್ರಾನಿಕ್ಸ್‌ನ ಶ್ರೀ ರಾಮಕೃಷ್ಣ ಹಾಗೂ ಸಿಬ್ಬಂದಿವರ್ಗಕ್ಕೆ, ಕಲಾವಿದರಾದ ಶ್ರೀ ಮೋನಪ್ಪನವರಿಗೆ ಮತ್ತು ಅಂದವಾಗಿ ಮುದ್ರಿಸಿದ ರವಿ ಗ್ರಾಫಿಕ್ಸ್‌ನವರಿಗೆ ನಮ್ಮ ಕೃತಜ್ಞತೆಗಳು.

ಪ್ರಕಾಶಕರು

ಪರಿವಿಡಿ

ಸೂಚನೆ

ಈ ಸಂಪುಟಗಳ ಒಬ್ಬೊಬ್ಬ ಲೇಖಕರೂ, ತಾವು ವಿವೇಚಿಸುವ ಸಾಹಿತ್ಯ ಪ್ರಕಾರದಲ್ಲಿ ರಚಿತವಾದ ಒಟ್ಟು ಕೃತಿಗಳ ಸಂಖ್ಯೆಯ ಬಗ್ಗೆ ಕೊಡುವ ಅಂಕಿ-ಅಂಶಗಳಲ್ಲಿ ವ್ಯತ್ಯಾಸಗಳಿರುವ ಸಂಭವವಿದೆ. ಆದುದರಿಂದ ಈ ಸಂಪುಟದ ಅನುಬಂಧವಾಗಿ, ಶ್ರೀ ಎಸ್. ಶಿವಣ್ಣ ಅವರು ಸಿದ್ಧಪಡಿಸಿರುವ 'ಗ್ರಂಥ ಸಂಖ್ಯಾ ವಿವರಸೂಚಿ'ಯು ಈ ಎಲ್ಲ ವ್ಯತ್ಯಾಸಗಳಿಗೆ ಒಂದು ತಿದ್ದುಪಡಿಯೂ ಮತ್ತು ಸದ್ಯಕ್ಕೆ ಅಧಿಕೃತವೂ ಆದದ್ದಾಗಿದೆ. ಓದುಗರು ದಯಮಾಡಿ ಅದನ್ನು ಗಮನಿಸಬೇಕು.

‘ಚಂಪು’ವಿನ ವಿವರಣೆ ಮತ್ತು ಮೊದಲ ಹಂತ

■

ಚಂಪು ಎಂಬುದು ಒಂದು ವಿಶಿಷ್ಟವಾದ ಕಾವ್ಯ ಪ್ರಕಾರದ ಹೆಸರು. ಅದಕ್ಕೆ ಅನೇಕ ಲಕ್ಷಣಗಳಿವೆಯೆಂದು ಅಲಂಕಾರ ಶಾಸ್ತ್ರಜ್ಞರು ಹೇಳುತ್ತಾರೆ. ಚಂಪುವಿನ ಮುಖ್ಯ ಲಕ್ಷಣವೆಂದರೆ ಅದು ಗದ್ಯ ಪದ್ಯಗಳೆರಡನ್ನೂ ಒಳಗೊಂಡ ದೀರ್ಘವಾದ ಕಾವ್ಯ. ಅದರಲ್ಲಿಯೂ ಗದ್ಯಕ್ಕಿಂತ ಪದ್ಯವೇ ಅಲ್ಲಿ ಹೆಚ್ಚಾಗಿರುತ್ತದೆ. ಈ ಪದ್ಯ ಭಾಗದಲ್ಲಿ ಅನೇಕ ಬಗೆಯ ಪದ್ಯ ಜಾತಿಗಳನ್ನು ಕವಿಗಳು ಬಳಸಿದ್ದಾರೆ. ಸಂಸ್ಕೃತದ ಬಗೆಬಗೆಯ ವೃತ್ತಗಳು ಕನ್ನಡದ ಚಂಪು ಕಾವ್ಯದಲ್ಲಿ ಬಳಕೆಗೊಂಡಿದ್ದರೂ ಅವುಗಳಲ್ಲಿ ಮುಖ್ಯವಾಗಿ ಆರು ಹೆಚ್ಚಾಗಿ ಬಳಕೆಯಾದವು. ಇವುಗಳಿಗೆ ಒಟ್ಟಾಗಿ ‘ಖ್ಯಾತ ಕರ್ಣಾಟಕಂ’ಗಳು ಎಂದೇ ಹೆಸರು. ಸಂಸ್ಕೃತದ ಅನೇಕ ಬಗೆಯ ವೃತ್ತಗಳಲ್ಲಿ ಕರ್ಣಾಟಕ ಅಥವಾ ಕನ್ನಡ ಭಾಷೆಯಲ್ಲಿ ಪ್ರಸಿದ್ಧವಾದ ಆರು ವೃತ್ತಗಳು–ಎಂಬುದು ‘ಖ್ಯಾತ ಕರ್ಣಾಟಕ’ಗಳು ಎಂಬುದರ ಅರ್ಥ. ಈ ಆರು ಪದ್ಯ ಜಾತಿಗಳೆಂದರೆ ಚಂಪಕಮಾಲೆ, ಉತ್ಪಲಮಾಲೆ, ಮತ್ತೇಭವಿಕ್ರೀಡಿತ, ಶಾರ್ದೂಲ ವಿಕ್ರೀಡಿತ, ಸ್ರಗ್ಧರೆ ಮತ್ತು ಮಹಾಸ್ರಗ್ಧರೆ ಎಂಬ ಹೆಸರಿನ ವೃತ್ತಗಳು, ಇವುಗಳಲ್ಲದೆ ತ್ರಿಪದಿ, ಅಕ್ಕರ ಮುಂತಾದ ಕನ್ನಡ ಪದ್ಯ ಜಾತಿಗಳೂ, ರಗಳೆ ಎಂಬ ಪದ್ಯ ಜಾತಿಯೂ ಚಂಪು ಕಾವ್ಯಗಳಲ್ಲಿ ಬಂದಿದೆ.

ಚಂಪುವಿನಲ್ಲಿ ಈ ರೀತಿಯಾದ ರಚನೆಯು ಬಂದಿರುವುದಕ್ಕೆ ಏನು ಕಾರಣವಿರಬಹುದು ಎಂಬುದನ್ನು ಕುರಿತು ಸ್ವಲ್ಪ ಆಲೋಚಿಸಬಹುದು. ಇಲ್ಲಿ ಅನೇಕ ಬಗೆಯ ಪದ್ಯ ಜಾತಿಗಳನ್ನು ಕವಿಗಳು ಬಳಸಿದ್ದಾರೆಂಬುದನ್ನು ಮೇಲೆ ಹೇಳಿದ್ದೇವೆ. ಒಂದೇ ರೀತಿಯ ಪದ್ಯದಲ್ಲಿ ಇಡೀ ದೊಡ್ಡ ಕಾವ್ಯವನ್ನು ಬರೆದರೆ ಕೇಳುವವರಿಗೆ ಬೇಸರವಾಗುತ್ತದೆಯಲ್ಲವೇ? (ಹಿಂದಿನ ಕಾಲದಲ್ಲಿ ಕಾವ್ಯಗಳನ್ನು ವಾಚನ ಮಾಡುತ್ತಿದ್ದರು ಎಂಬುದನ್ನು ನೆನಪಿಸಿಕೊಳ್ಳಬೇಕು.) ಅದಕ್ಕಾಗಿಯೇ ಬೇರೆ ಬೇರೆ ಬಗೆಯ ವೃತ್ತಗಳನ್ನು ಬಳಸಿರಬಹುದೆಂಬುದನ್ನು ಸುಲಭವಾಗಿ ಊಹಿಸಬಹುದು. ಅಲ್ಲದೆ ಪ್ರಾಯಶ: ಕವಿಗೆ ಅದರಿಂದ ಇನ್ನೊಂದು ಪ್ರಯೋಜನವು ಇದ್ದಿರಬೇಕು. ಅದೆಂದರೆ ಕವಿಯು ಹೇಳಬೇಕಾದ ಭಾವನೆಗಳು ಒಂದೇ ರೀತಿಯಾಗಿರದೆ ಬೇರೆ ಬೇರೆಯವಾಗಿರುತ್ತವೆ, ಅಥವಾ ಕತೆಯ ಬೇರೆ ಬೇರೆಯ ಸಂದರ್ಭಗಳಲ್ಲಿ ಬೇರೆ ಬೇರೆ ಬಗೆಯ ಭಾವನೆಗಳನ್ನು ಕವಿಯು ವರ್ಣಿಸಬೇಕಾಗುತ್ತದೆ. ಆಗ ಈ ಎಲ್ಲಾ ಭಾವನೆಗಳನ್ನೂ ಒಂದೇ ಬಗೆಯ ಪದ್ಯದಲ್ಲಿ ಸಮರ್ಪಕವಾಗಿ ಹೇಳಲು ಸಾಧ್ಯವಾಗುವುದಿಲ್ಲ. ಭಾವನೆಗೆ ತಕ್ಕಂತೆ ಇರುವ ಭಾಷೆಯಲ್ಲಿ ಪದ್ಯ ಬರೆಯಬೇಕಾದರೆ ಅನೇಕ ವೃತ್ತಗಳು ಕವಿಗೆ ತುಂಬ ಪ್ರಯೋಜನಕ್ಕೆ ಬರುತ್ತವೆ. ಕವಿಯು ಚಿಕ್ಕದೊಂದು

ಭಾವನೆಯನ್ನು ಹೇಳಬೇಕಾದಾಗ ದೊಡ್ಡ ಪದ್ಯದಲ್ಲಿ ಅದನ್ನು ಹೇಳಲು ಹೊರಟರೆ ಅರ್ಧಕ್ಕೆ ಅವನ ಭಾವನೆಯು ಮುಗಿದು ಹೋಗಬಹುದು; ಆದರೆ ಪದ್ಯದ ನಿಯಮವನ್ನು ಪಾಲಿಸುವುದಕ್ಕಾಗಿ ಮಿಕ್ಕ ಪದ್ಯ ಭಾಗದಲ್ಲಿ ಏನನ್ನೋ ಹೇಳಬೇಕಾಗಬಹುದು. ಆಗ ಪದ್ಯದ ಸೌಂದರ್ಯವೇ ಕೆಡಬಹುದು. ಹಾಗೆಯೇ ದೀರ್ಘವಾದ ಭಾಗವನ್ನು ಹೇಳಲು ಸಣ್ಣದಾದ ಪದ್ಯ ಜಾತಿಯನ್ನು ಆರಿಸಿ ಕೊಂಡಾಗಲೂ ಕವಿಗೆ ಕಷ್ಟವೆನಿಸುತ್ತದೆ; ಚಿಕ್ಕ ಪದ್ಯದಲ್ಲಿ ತನ್ನ ಭಾವನೆಯೆಲ್ಲವನ್ನೂ ಸರಿಯಾಗಿ ಹೇಳಲಾಗದೆ ಸಂಕ್ಷಿಪ್ತವಾಗಿ ಹೇಳಬೇಕಾಗುತ್ತದೆ. ಆಗ ಪದ್ಯದಲ್ಲಿನ ಭಾವನೆಯು ಅಸ್ಪಷ್ಟವಾಗಿ ಬಿಡಬಹುದು. ಆದ್ದರಿಂದ ಚಿಕ್ಕ ಭಾವನೆಯನ್ನು ಹೇಳಲು ಚಿಕ್ಕ ಪದ್ಯ ದೊಡ್ಡ ಭಾವನೆಯನ್ನು ಹೇಳಲು ದೊಡ್ಡ ಪದ್ಯ ಎಂಬುದು ಸರಿಯಾದ ಕ್ರಮ. ಎಲ್ಲಾ ಭಾವನೆಗಳೂ ಒಂದೇ ಬಗೆಯಾಗಿರುವುದಿಲ್ಲವಲ್ಲ. ಕೋಪವು ಭಯಕ್ಕಿಂತ ಬೇರೆಯಾದದ್ದು, ಪೌರುಷವು ಪ್ರೀತಿಗಿಂತ ಭಿನ್ನವಾದದ್ದು. ಅಂತಹ ಭಾವನೆಗಳುಂಟಾದಾಗ ನಾವು ನಮ್ಮ ನಿತ್ಯ ಜೀವನದಲ್ಲಿ ಅವುಗಳನ್ನು ಹೇಳಿಕೊಳ್ಳುವ ರೀತಿಯಲ್ಲಿ ವ್ಯತ್ಯಾಸಗಳಿರುವುದನ್ನು ಗಮನಿಸಬಹುದು. ಎಂದರೆ ಭಾವನೆಗೆ ತಕ್ಕ ಭಾಷೆಯು ಸಹಜವಾದದ್ದು. ಕವಿಯೂ ತನ್ನ ಭಾವನೆಗೆ ತಕ್ಕ ಓಟವನ್ನುಳ್ಳ ಪದ್ಯಜಾತಿಯನ್ನು ಬಳಸಿದರೆ ಅವನ ರಚನೆಯು ಸುಂದರವಾಗುತ್ತದೆ. ಆದ್ದರಿಂದಲೇ ಚಂಪುವಿನಲ್ಲಿ ಬೇರೆ ಬೇರೆ ಬಗೆಯ ವೃತ್ತಗಳನ್ನು ಬಳಸುವ ರೂಢಿ ಬಂದಿರಬೇಕು.

ಇನ್ನು ಗದ್ಯ. ಚಂಪುವಿನಲ್ಲಿ ಬರುವ ಗದ್ಯವು ಸಾಧಾರಣವಾದ ವಿಷಯಗಳನ್ನು ನಿರೂಪಿಸುವುದಕ್ಕೆ ಮಾತ್ರ ಕವಿಗಳು ಬಳಸಿಕೊಳ್ಳುತ್ತಾರೆ. ಏನಾದರೂ ವಿವರಣೆಯನ್ನು ನೀಡಬೇಕಾದಾಗಲೋ ಯಾವುದಾದರೂ ಸಾಧಾರಣ ಸಂಗತಿಯನ್ನು ನಿರೂಪಿಸುವಾಗಲೋ ಗದ್ಯವನ್ನು ಬಳಸುವುದೇ ಹೆಚ್ಚು.* ಈ ರೀತಿ ಚಂಪುವಿನ ಗದ್ಯ–ಪದ್ಯ ಮಿಶ್ರಣ, ಮತ್ತು ಪದ್ಯ ಭಾಗದಲ್ಲಿ ವಿವಿಧ ವೃತ್ತಗಳ ಬಳಕೆ–ಇವುಗಳಿಂದ ಕವಿಯು ತನ್ನ ಭಾವನೆಗಳನ್ನು ಹೇಳಿ ಕೊಳ್ಳುವುದಕ್ಕೆ ಸುಲಭವಾಗುತ್ತದೆ. ಕಾವ್ಯವು ವೈವಿಧ್ಯದಿಂದ ಕೂಡಿ ಕೇಳುವವನಿಗೆ ಬೇಸರವಾಗುವುದು ಕಡಿಮೆಯಾಗುತ್ತದೆ.

ಚಂಪುವು ದೀರ್ಘವಾದ ಕಾವ್ಯ. ವಿಸ್ತಾರವಾದ ಕತೆಯನ್ನು ಅನೇಕ ವರ್ಣನೆಗಳೊಂದಿಗೆ ಹೇಳುವುದರಿಂದಾಗಿ ಅದು ದೀರ್ಘವಾಗುವುದು ಸಹಜ. ಅದನ್ನು ಕತೆಯ ವಿವಿಧ ಘಟ್ಟಗಳಿಗನುಗುಣವಾಗಿ ಲಂಬ, ಸಂಧಿ, ಅಶ್ವಾಸ ಎಂಬ ಹೆಸರಿನಿಂದ ವಿಭಾಗಗಳಾಗಿ ವಿಂಗಡಿಸಿರುತ್ತಾರೆ. ಚಂಪು ಕಾವ್ಯಗಳಲ್ಲಿ ಮಹಾಕಾವ್ಯದ ಕಥಾವಸ್ತುವನ್ನೇ ಬಳಸಿರುತ್ತಾರೆ. ಕನ್ನಡ ಚಂಪೂ ಕಾವ್ಯಗಳಲ್ಲಿ ರಾಮಾಯಣ–ಮಹಾಭಾರತದ ಕತೆಗಳನ್ನು ಹೇಳಿರುವುದನ್ನು ಕಾಣಬಹುದು, ಭಾಗವತ ಮುಂತಾದ ಪುರಾಣಗಳ ಕತೆಗಳ ನಿರೂಪಣೆಯಿದೆ. ಅಲ್ಲದೆ ಬೇರೆ ಭೇರೆ ಮತಧರ್ಮದ ಕವಿಗಳು ತಮ್ಮ ಧರ್ಮವೇ ಶ್ರೇಷ್ಠವೆಂಬುದನ್ನು ಸಾರಲು ಅದಕ್ಕೆ ತಕ್ಕ ಕತೆಗಳನ್ನು ಚಂಪೂ ರೂಪವಾಗಿ

---

* ಇದು ಸ್ಥೂಲವಾದ ಕಲ್ಪನೆ. ವಾಸ್ತವವಾಗಿ ಗದ್ಯ–ಪದ್ಯಗಳನ್ನು ಇಂಥದೇ ಉದ್ದೇಶಕ್ಕೆ ಬಳಸಬೇಕೆಂಬ, ಬಳಸುತ್ತಿದ್ದೇವೆಂಬ ಬಗ್ಗೆ ಕವಿಗಳಿಗೆ ಅಂಥ ನಿಯತವಾದ ಪೂರ್ಣ ಕಲ್ಪನೆ ಇರಲಿಲ್ಲ.

ಹೇಳಿದ್ದಾರೆ. ಅಲ್ಲಿ ತೀರ್ಥಂಕರರ ಕತೆಗಳನ್ನೂ ಶರಣರ ಕತೆಗಳನ್ನೂ ಕಾಣಬಹುದು. ಪ್ರಸಿದ್ಧವಾದ ಕತೆಗಳನ್ನೇ ತಮ್ಮ ಉದ್ದೇಶಕ್ಕೆ ಅನುಗುಣವಾಗಿ ಬದಲಾಯಿಸಿಕೊಂಡು ಹೇಳಿರುವುದೂ ಉಂಟು. ಚಂಪು ಕಾವ್ಯಗಳಲ್ಲಿ ಸಾಮಾನ್ಯವಾಗಿ ಶೃಂಗಾರ, ವೀರ, ಶಾಂತ ಎಂಬ ರಸಗಳು ಪ್ರಮುಖವಾಗಿರುತ್ತದೆ. ಮಿಕ್ಕವು ಇವನ್ನು ಅನುಸರಿಸಿಕೊಂಡು ಬರುತ್ತವೆ ಎಂಬುದು ಸಾಮಾನ್ಯ ನಿಯಮ.

ಚಂಪು ಕಾವ್ಯಗಳಲ್ಲಿ ಹದಿನೆಂಟು ವರ್ಣನೆಗಳು ಬಂದಿರಬೇಕೆಂಬ ಒಂದು ನಿಯಮವಿದೆ. ಇದನ್ನು ಎಲ್ಲ ಚಂಪು ಕವಿಗಳು ಅನುಸರಿಸಿಲ್ಲವಾದರೂ ಬಹುಮಂದಿ ಅದನ್ನು ಒಪ್ಪಿಕೊಂಡು ಹದಿನೆಂಟು ವರ್ಣನೆಗಳಿಂದೊಡಗೂಡಿದ ಕಾವ್ಯಗಳನ್ನೇ ರಚನೆ ಮಾಡಿದ್ದಾರೆ. ಈ ವರ್ಣನೆಗಳೆಂದರೆ ಸಮುದ್ರ, ಪರ್ವತ, ನಗರ, ರಾಜಕುಮಾರನ ವಿವಾಹ, ಅವನಿಗೆ ಪುತ್ರೋತ್ಸವ, ಸೂರ್ಯೋದಯ, ಚಂದ್ರೋದಯ, ಋತು ವರ್ಣನೆ, ಅರಣ್ಯ, ಜಲಕ್ರೀಡೆ, ಮದ್ಯಪಾನ, ವಿಪ್ರಲಂಭ ಶೃಂಗಾರ ಅಥವಾ ವಿರಹ, ಸಂಭೋಗ ಶೃಂಗಾರ ಅಥವಾ ಪ್ರೇಮಿಗಳ ಮಿಲನ, ಮಂತ್ರಾಲೋಚನೆ, ಜೂಜು, ಪ್ರಯಾಣ, ಯುದ್ಧ ಮತ್ತು ವಿಜಯ–ಎಂಬಿವುಗಳು. ಮಹಾ ಕಾವ್ಯಗಳಲ್ಲಿ ಸಾಮಾನ್ಯ ವಾಗಿ ರಾಜನಿಗೋ ದೇವತೆಗೋ ಅಥವಾ ಅಂತಹ ಶ್ರೇಷ್ಠ ವ್ಯಕ್ತಿಗೋ ಸಂಬಂಧಿಸಿದ ಕತೆಗಳನ್ನು ಹೇಳುತ್ತಿದ್ದುದರಿಂದ ಅವರಿಗೆ ಜೀವನದಲ್ಲಿ ಕಾಣುವ ವಿಶಿಷ್ಟ ವಿಷಯ ಗಳನ್ನು ವರ್ಣಿಸಬೇಕೆಂಬ ಉದ್ದೇಶದಿಂದ ಇವುಗಳಲ್ಲಿ ಕೆಲವು ವರ್ಣನೆಗಳಿರಬೇಕೆಂದು ಹಿಂದಿನವರು ಭಾವಿಸಿದ್ದಿರಬೇಕು. ಅಲ್ಲದೆ ಮಹಾಕಾವ್ಯವು ಕೇವಲ ಮನರಂಜನೆಗ ಮಾತ್ರವಲ್ಲದೆ ಪುರುಷಾರ್ಥ ಸಾಧನೆಗೂ ಸಹಾಯಕವಾಗಬೇಕೆಂಬುದು ನಮ್ಮ ಪೂರ್ವಿಕರ ಭಾವನೆಯಾಗಿದ್ದಿತು. ಅಂತಹ ಕಾವ್ಯವನ್ನು ಬರೆಯುವವನು ಜೀವನದಲ್ಲಿ ಅಪಾರವಾದ ಅನುಭವವನ್ನು ಗಳಿಸಿರಬೇಕು. ಅದಕ್ಕಾಗಿ ಅವನು ಜೀವನವನ್ನು ನಾನಾ ದೃಷ್ಟಿಯಲ್ಲಿ ಕಾಣಲು ಯಾತ್ರೆ ಮುಂತಾದವುಗಳನ್ನು ಕೈಕೊಂಡು ನಾನಾ ಜನರ ರೀತಿ ನೀತಿಗಳನ್ನೂ ಕಷ್ಟ ನಿಷ್ಠುರಗಳನ್ನೂ ಅವನು ಅರ್ಥಮಾಡಿಕೊಳ್ಳಬೇಕು. ಅವನ ಈ ಎಲ್ಲ ಅನುಭವವನ್ನು ಮಹಾಕಾವ್ಯದಲ್ಲಿ ಪ್ರತಿಬಿಂಬಿಸಬೇಕು ಎಂಬ ಹಿರಿಯ ಆದರ್ಶ ವಿದ್ದಿದ್ದರಿಂದ ಅದಕ್ಕನುಗುಣವಾಗಿ ಕಾವ್ಯದಲ್ಲಿ ಅನೇಕ ಬಗೆಯ ವರ್ಣನೆಗಳಿರಬೇಕು ಎಂಬ ನಿಯಮವನ್ನು ಮಾಡಿದರೋ ಏನೋ. ಆದರೆ ಈ ನಿಯಮವನ್ನು ಪಾಲಿಸ ಬೇಕೆಂಬ ಆತುರದಲ್ಲಿ ಸಾಮಾನ್ಯ ಕವಿಗಳು ಬೇಕಿರಲಿ ಬೇಕಿಲ್ಲದಿರಲಿ, ಇದರಿಂದ ಕಾವ್ಯದ ಕತೆಗೆ ಸಹಾಯಕವಾಗಲಿ ಬಿಡಲಿ ವರ್ಣನೆಗಳನ್ನು ಮಾತ್ರ ತುಂಬಿಬಿಟ್ಟರು.

ಚಂಪೂ ಕಾವ್ಯಗಳ ಮೊದಲಲ್ಲಿ ಕವಿಯು ತನ್ನ ಇಷ್ಟ ದೈವವನ್ನು ಪ್ರಾರ್ಥಿಸುತ್ತಾನೆ. ಇದನ್ನು ಮಂಗಳಪದ್ಯವೆಂದು ಕರೆಯುತ್ತಾರೆ. ಸಾಮಾನ್ಯವಾಗಿ ತಾನು ಗೌರವಿಸುವ ಹಿಂದಿನ ಕವಿಗಳನ್ನು ಸ್ತುತಿಸುವ ಪದ್ಯಗಳು ಕಾವ್ಯದ ಪ್ರಾರಂಭದಲ್ಲಿರು ತ್ತವೆ. ತಾನು ಬರೆಯುತ್ತಿರುವ ಕಾವ್ಯದ ವೈಶಿಷ್ಟ್ಯವೇನು, ತನ್ನ ಕಾವ್ಯವು ಹೇಗೆ ವಿಶಿಷ್ಟ ವಾದುದು ಎಂಬ ವಿವರಗಳನ್ನೂ ಇಲ್ಲಿಯೇ ಕವಿಯು ಹೇಳಿರುತ್ತಾನೆ. ಈ ಭಾಗದಲ್ಲಿ ಕೆಲವು ಕವಿಗಳು ತಮ್ಮ ವಂಶ, ತಮ್ಮ ಹಿರಿಯರು, ಗುರುಪರಂಪರೆ–ಈ ವಿವರ

ಗಳನ್ನೂ ನೀಡುತ್ತಾರೆ. ಪ್ರತಿ ಸಂಧಿ ಅಥವಾ ಆಶ್ವಾಸದ ಕೊನೆಗೆ ತನ್ನ ಬಿರುದುಗಳನ್ನು ಹೇಳಿಕೊಂಡು ಯಾರಿಂದ ರಚಿತವಾದ ಕಾವ್ಯದಲ್ಲಿ ಯಾವ ಭಾಗವು ಮುಗಿಯಿತು ಎಂಬ ಬಗ್ಗೆ ಸೂಚನೆಗಳನ್ನು ನೀಡಲಾಗುತ್ತದೆ. ಕಾವ್ಯದ ಕೊನೆಯಲ್ಲಿ ಕವಿ ಮತ್ತೆ ತನ್ನ ಸ್ವಂತ ವಿಷಯಗಳನ್ನು ಹೇಳಿಕೊಂಡಿರಬಹುದು; ಅಲ್ಲಿ ತನ್ನ ಕಾವ್ಯವನ್ನು ಓದುವುದ ರಿಂದಾಗುವ ಫಲವೆಂತಹದೆಂಬುದನ್ನು ಕವಿ ಹೇಳುತ್ತಾನೆ. ಇದಕ್ಕೆ 'ಫಲಶ್ರುತಿ' ಎಂದು ಹೆಸರು. ಕಾವ್ಯದ ಮೊದಲಲ್ಲಿಯೋ ಕೊನೆಯಲ್ಲಿಯೋ ತನಗೆ ಆಶ್ರಯದಾತರಾದ ರಾಜ ಅಥವಾ ಸಾಮಂತ ಅಥವಾ ಇತರರು–ಇವರುಗಳ ಬಗ್ಗೆಯೂ ಕೆಲವು ವಿಷಯ ಗಳನ್ನು ಕವಿಯು ಹೇಳಿರುತ್ತಾನೆ. ಈ ಭಾಗಗಳಿಂದಲೇ ನಮಗೆ ಕಾವ್ಯದ ಕರ್ತೃಗಳ ಜೀವನಕ್ಕೆ ಸಂಬಂಧಪಟ್ಟ ವಿಷಯಗಳು ದೊರಕುವುದು. ಎಲ್ಲ ಕವಿಗಳೂ ಒಂದೇ ಬಗೆಯಲ್ಲಿ ತಮ್ಮ ಜೀವನದ ವಿವರಗಳನ್ನೇನೂ ಹೇಳಿರುವುದಿಲ್ಲ; ಆದರೂ ಕವಿಯು ತನ್ನ ವಿಷಯವನ್ನೇನಾದರೂ ತಿಳಿಸಿದ್ದರೆ ಹಾಗೆ ಮಾಡಿರುವುದು ಈ ಭಾಗಗಳಲ್ಲಿಯೇ. ಆದ್ದರಿಂದ ಕವಿಗಳ ಬಗ್ಗೆ ಹೇಳುವಾಗ, ಸಾಹಿತ್ಯ ಚರಿತ್ರೆಯನ್ನು ಅಧ್ಯಯನ ಮಾಡುವವನಿಗೆ, ಈ ಭಾಗಗಳು ತುಂಬ ಉಪಯುಕ್ತವಾಗುತ್ತವೆ.

ಚಂಪೂ ಕಾವ್ಯಗಳಲ್ಲಿ ಬಹುಪಾಲು ಹಳಗನ್ನಡದಲ್ಲಿ, ಸಂಸ್ಕೃತ ಪದಗಳಿಂದ ಹೆಚ್ಚಾಗಿ ಕೂಡಿ, ರಚಿತವಾಗಿರುವಂತಹವು. ಬೇರೆ ಬೇರೆ ಕವಿಗಳು ವಿವಿಧ ಬಗೆಯಾಗಿ ಸಂಸ್ಕೃತ ಶಬ್ದಗಳ ಬಳಕೆ ಮಾಡಿದ್ದರೂ ಇವೆಲ್ಲಕ್ಕೂ ಸಮಾನ ಭಾಷಾರೂಪ ವೊಂದಿರುತ್ತದೆ. ಕೆಲವು ಕವಿಗಳು ಹೆಚ್ಚು ಕನ್ನಡ ಶಬ್ದಗಳನ್ನು ಬಳಸಿರಬಹುದು, ಮತ್ತೆ ಕೆಲವರು ಸಂಸ್ಕೃತ ಪದಗಳನ್ನು ಬಳಸಿದ್ದರೂ ಅವು ಕನ್ನಡಕ್ಕೆ ಹೊಂದಿಕೊಳ್ಳುವಂತೆ ಸೇರಿಸಿರಬಹುದು, ಮತ್ತೂ ಕೆಲವರು ಸಂಸ್ಕೃತ ಶಬ್ದಗಳನ್ನೇ ಬಳಸುವುದಿಲ್ಲವೆಂದು ಹಟತೊಟ್ಟು ಆ ಶಬ್ದಗಳಿಂದ ರೂಪಗೊಂಡ ಕನ್ನಡ ಮಾತುಗಳನ್ನು ಬಳಸಿರಬಹುದು. ಆದರೆ ಚಂಪು ಕಾವ್ಯಕ್ಕೆ ಹೊರನೋಟಕ್ಕೆ ಕಾಣುವ ಸಾಮಾನ್ಯ ಆಕಾರವಿರುತ್ತದೆ. ಈ ಆಕಾರವು ಬಂದಿರುವುದು ಚಂಪುವಿನಲ್ಲಿ ಬರುವ ಗದ್ಯ–ಪದ್ಯ ಮಿಶ್ರಣ ಮತ್ತು ಸಂಸ್ಕೃತ ವೃತ್ತಗಳ ಬಳಕೆಯಿಂದಲೇ, ಸಂಸ್ಕೃತ ವೃತ್ತಗಳು ಆ ಭಾಷೆಯ ಜಾಯಮಾನಕ್ಕೆ ತಕ್ಕ ಮಟ್ಟುಗಳು, ಅವುಗಳನ್ನೋದುವುದಕ್ಕೆ ನಿಗದಿಯಾದ ರೀತಿಗಳಿರುತ್ತವೆ. ಆ ವೃತ್ತಗಳನ್ನು ಕನ್ನಡದಲ್ಲಿ ಬಳಸಿದಾಗ, ಎಂದರೆ ಅಚ್ಚ ಗನ್ನಡವನ್ನೇ ಉಪಯೋಗಿಸಿದಾಗ, ಇಲ್ಲವೇ ಆ ಪದ್ಯಗಳನ್ನು ಸಂಸ್ಕೃತದಲ್ಲಿ ಓದುವ ಹಾಗೆ ಓದಲು ಸಾಧ್ಯವಾಗುವುದಿಲ್ಲ. ಇಲ್ಲಿ, ಉಪಯೋಗಿಸುವ ಕನ್ನಡವು ಕನ್ನಡ ಮಟ್ಟುಗಳಲ್ಲಿ ಹೊಂದಿಕೊಳ್ಳುವಂತೆ ಹೊಂದಿಕೊಳ್ಳುವುದಿಲ್ಲ. ಆದ್ದರಿಂದಲೇ ಚಂಪುಕಾವ್ಯಗಳಲ್ಲಿ ಸಂಸ್ಕೃತಮಯವಾದ ಭಾಷೆಯ ಬಳಕೆಯು ಅನಿವಾರ್ಯವಾಯಿತೆಂದು ಕಾಣುತ್ತದೆ. ಅದಲ್ಲದೆ ನಮಗೆ ಸಿಕ್ಕುವ ಮೊಟ್ಟ ಮೊದಲ ಕಾವ್ಯವೇ ಚಂಪು. ಆ ಕಾಲಕ್ಕೆ ಸಂಸ್ಕೃತದ ಪ್ರಭಾವ ಕನ್ನಡ ಸಾಹಿತ್ಯದ ಮೇಲೆ ಅಪಾರವಾಗಿತ್ತು. ಕನ್ನಡದಲ್ಲಿ ಕಾವ್ಯರಚನೆಯನ್ನು ಮಾಡಿದವರು ಸಂಸ್ಕೃತ–ಪ್ರಾಕೃತ ಭಾಷೆಗಳಲ್ಲಿಯೂ ಉದ್ದಾಮ ಪಂಡಿತರಾಗಿರು ತ್ತಿದ್ದರು. ಆಗ ಸಂಸ್ಕೃತವು ದೇವ ಭಾಷೆಯೆಂಬ ನಂಬಿಕೆಯಿದ್ದುದರಿಂದಲೂ, ನಮ್ಮ ಧರ್ಮಕ್ಕೆ ಸಂಬಂಧಿಸಿದ ಗ್ರಂಥಗಳೆಲ್ಲ ಸಂಸ್ಕೃತದಲ್ಲಿಯೇ ಇದ್ದದ್ದರಿಂದಲೂ

ಸಂಸ್ಕೃತದಲ್ಲಿ ಬರೆಯುವುದು, ಕೊನೆಯಪಕ್ಷ ಸಂಸ್ಕೃತ ಶಬ್ದಗಳನ್ನು ಹೆಚ್ಚಾಗಿ ಬಳಸಿ ಕನ್ನಡವನ್ನು ಬರೆಯುವುದು ಹೆಗ್ಗಳಿಕೆಯ ಕುರುಹಾಗಿತ್ತು. ಆದ್ದರಿಂದ ಆಗಿನ ಕಾಲದ ಕನ್ನಡ ಕವಿಗಳು ಹೆಚ್ಚುಸಂಸ್ಕೃತ ಪ್ರಚುರವಾದ ಕಾವ್ಯಗಳನ್ನು ಬರೆದರು. ಮುಂದಿನ ಕವಿಗಳೂ ಇದೇ ಮಾದರಿಯನ್ನೇ ಅನುಸರಿಸಿದ್ದರಿಂದ ಎಲ್ಲ ಚಂಪು ಕಾವ್ಯಗಳಲ್ಲಿ ಸಂಸ್ಕೃತ ಶಬ್ಧಗಳ ಮೇಲುಗೈಯನ್ನು ಕಾಣುತ್ತೇವೆ. ಆದರೂ ಇವರಲ್ಲಿ ಹಲವರು ಅಲ್ಲಿಯೇ ಕನ್ನಡತನವನ್ನು ಮೆರೆಯಲು ಪ್ರಯತ್ನಿಸಿದರೆಂಬುದನ್ನು ಮರೆಯುವಂತಿಲ್ಲ.

ಚಂಪುವಿನ ಇತಿಹಾಸ

'ಚಂಪು' ಎಂಬ ಶಬ್ದವು ಯಾವ ಭಾಷೆಯ ಪದ ಎಂಬ ಬಗ್ಗೆಯೇ ವಿದ್ವಾಂಸರಲ್ಲಿ ಒಮ್ಮತವಿಲ್ಲ. ಇದರ ಮೂಲವನ್ನು ಕೆಲವರು ಸಂಸ್ಕೃತದಲ್ಲಿ ಹುಡುಕಿ ಇದು ಸಂಸ್ಕೃತ ಶಬ್ದವೆಂದು ಹೇಳಿದರೆ, ಇದು 'ಚೆನ್' (ಸುಂದರವಾದುದು) ಎಂಬ ಕನ್ನಡ ಪದದಿಂದ ಬಂದಿದೆಯೆಂದು ಮತ್ತೆ ಕೆಲವರು ವಾದಿಸುತ್ತಾರೆ. ಹಾಗೆಯೇ ಚಂಪು ಎಂಬ ಕಾವ್ಯ ಪ್ರಕಾರವು ಸಂಸ್ಕೃತದಲ್ಲಿ ಮೊದಲು ಕಾಣಿಸಿಕೊಂಡಿತೆಂದು ಕೆಲವು ವಿದ್ವಾಂಸರು ಹೇಳಿದರೆ, ಮತ್ತೆ ಕೆಲವರು ಇದು ಕನ್ನಡದಲ್ಲಿಯೇ ಮೊದಲು ಹುಟ್ಟಿತೆಂದು ಹೇಳುತ್ತಾರೆ. ಕನ್ನಡವು ಮಿಕ್ಕೆಲ್ಲ ರೀತಿಯಲ್ಲಿಯೂ ಸಂಸ್ಕೃತವನ್ನು ಅನುಕರಿಸಿರುವುದು ನಿಜ; ಆದರೆ ಅನುಕರಿಸಿದುದು ಹೊಸತೇನನ್ನೂ ಸೃಷ್ಟಿಸಲಾರ ದೆಂದು ಹೇಳಲಾಗದು, ಚಂಪುವು ಸಂಸ್ಕೃತಕ್ಕೆ ಕನ್ನಡವು ಕೊಟ್ಟ ಕಾಣಿಕೆಯೆಂದು ಕೆಲವು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ವಾದವಿವಾದಗಳಿಗೆ ಕಾರಣ 'ಚಂಪು' ಎಂಬ ಶಬ್ದದ ಮೂಲವು ಯಾವುದು ಎಂಬ ಬಗ್ಗೆಯಾಗಲೀ ಈ ಬಗೆಯ ಕಾವ್ಯ ರೂಪವು ಯಾವ ಭಾಷೆಯಲ್ಲಿ ಮೊದಲು ಕಾಣಿಸಿಕೊಂಡಿತೆಂಬ ವಿಷಯ ವಾಗಿಯಾಗಲೀ ತುಂಬ ಪ್ರಾಚೀನ ಲೇಖಕರು ಯಾರೂ ಸ್ಪಷ್ಟವಾಗಿ ಹೇಳದಿರುವುದು.

ಸಂಸ್ಕೃತದಲ್ಲಿ ವೇದಗಳಲ್ಲಿಯೇ ಗದ್ಯ-ಪದ್ಯಗಳ ಸಮ್ಮಿಶ್ರಣವಿದೆ. ಇದೇ ಮುಂದೆ ಚಂಪುರೂಪವು ಮೈದಾಳಲು ಕಾರಣವೆಂದು ಕೆಲವರು ಹೇಳುತ್ತಾರೆ. ಬ್ರಾಹ್ಮಣಗಳು, ಉಪನಿಷತ್ತುಗಳಲ್ಲಿಯೂ, ಮಹಾಭಾರತ-ಭಾಗವತ-ವಿಷ್ಣು ಪುರಾಣಗಳಲ್ಲಿಯೂ ಇದೇ ರೀತಿ ಗದ್ಯ-ಪದ್ಯಗಳು ಸೇರಿರುವುದನ್ನು ಕಾಣಬಹುದು. 'ಪಂಚತಂತ್ರ'ವೆಂಬ ಪ್ರಾಚೀನ ಗ್ರಂಥದಲ್ಲಿ ಗದ್ಯದಲ್ಲಿ ಕತೆಯನ್ನು ಹೇಳಿ, ನೀತಿಯನ್ನು ಪದ್ಯದಲ್ಲಿ ನಿರೂಪಿಸುವ ರೀತಿ ಯನ್ನು ಅನುಸರಿಸಲಾಗಿದೆ. ಮಹಾಯಾನವೆಂಬ ಬೌದ್ಧಧರ್ಮದ ಶಾಖೆಯ ಜನರಿಗೆ ಪವಿತ್ರ ಗ್ರಂಥವಾಗಿರುವ 'ಲಲಿತ ವಿಸ್ತರ'ವು ಗದ್ಯ-ಪದ್ಯಗಳೆರಡನ್ನೂ ಉಪಯೋಗಿಸಿ ಬುದ್ಧನ ಕತೆಯನ್ನು ಹೇಳುತ್ತದೆ. ಬೌದ್ಧ ಜಾತಕ ಕತೆಗಳ ಸಂಸ್ಕೃತ ಅನುವಾದವಾದ ಆರ್ಯಶೂರ ಎಂಬ ಕವಿಯ 'ಜಾತಕಮಾಲಾ' ಗದ್ಯಪದ್ಯಗಳೆರಡನ್ನೂ ಒಳಗೊಂಡಿದೆ. ಈ ಕಾವ್ಯದ ಚೀನೀಭಾಷೆಯ ಅನುವಾದವು ಕ್ರಿ.ಶ. ೪೩೪ರಲ್ಲಿ ರಚಿತವಾಯಿತಾದ್ದ ರಿಂದ ಚಂಪೂ ಸಂಪ್ರದಾಯವು ಸಂಸ್ಕೃತ ಭಾಷೆಯಲ್ಲಿ ತುಂಬ ಪ್ರಾಚೀನವಾದು ದೆಂದು ಹಲವರು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ನಮಗೆ ದೊರಕುವ ಮೊದಲನೆಯ ಸಂಸ್ಕೃತ ಭಾಷೆಯ ಚಂಪು ಕಾವ್ಯವು ಹತ್ತನೆಯ ಶತಮಾನಕ್ಕೆ ಸೇರಿದ

ತ್ರಿವಿಕ್ರಮಭಟ್ಟ ಎಂಬ ಕವಿಯ 'ನಲಚಂಪು' ಎಂಬುದು, ಅದೇ ಶತಮಾನದಲ್ಲಿಯೇ ಸೋಮದೇವನ 'ಯಶಸ್ತಿಲಕ ಚಂಪು' ಎಂಬ ಕಾವ್ಯವೂ ರಚಿತವಾಯಿತು. ಅಲ್ಲಿಂದ ಮುಂದೆ ಅನೇಕ ಚಂಪೂ ಕಾವ್ಯಗಳು ಸಂಸ್ಕೃತದಲ್ಲಿ ರಚಿತವಾಗಿವೆ.

ಗಂಗರಾಜನಾದ ಮಹೇಂದ್ರಾತಕ ಎರೆಯಪ್ಪ (೮೮೬–೯೧೩) ಎಂಬ ರಾಜನ ಆಶ್ರಯದಲ್ಲಿ ಒಂದನೆಯ ಗುಣವರ್ಮನೆಂಬ ಕವಿಯು (ಮುಂದೆ ಹದಿಮೂರನೆಯ ಶತಮಾನದಲ್ಲಿ ಗುಣವರ್ಣನೆಂಬ ಹೆಸರಿನ ಮತ್ತೊಬ್ಬ ಕನ್ನಡ ಕವಿಯು ಬರುತ್ತಾನೆ. ಆದ್ದರಿಂದ ಗೊಂದಲವಾಗದಿರಲೆಂದು ಕಾಲ ಕ್ರಮದಲ್ಲಿ ಮೊದಲು ಬಂದ ಇವನನ್ನು ಒಂದನೆಯ ಗುಣವರ್ಮನೆಂದು ಕರೆಯುವುದು ವಾಡಿಕೆ) 'ಹರಿವಂಶ' ಮತ್ತು ಶೂದ್ರಕ ಎಂಬ ಎರಡು ಚಂಪು ಕಾವ್ಯಗಳನ್ನು ರಚಿಸಿದ್ದನೆಂಬುದಕ್ಕೆ ಹಲವು ಆಧಾರಗಳಿವೆ. ಈ ಕಾವ್ಯಗಳು ಈಗ ಸಿಕ್ಕಿಲ್ಲ. ಮುಂದೆ ಕೆಲವರು ಬೇರೆ ಬೇರೆ ಕಾವ್ಯಗಳ ಒಳ್ಳೆಯ ಪದ್ಯಗಳನ್ನಾರಿಸಿ ಸಂಕಲನ ಗ್ರಂಥಗಳನ್ನು ಮಾಡುವಾಗ, ವ್ಯಾಕರಣ–ಅಲಂಕಾರ ಶಾಸ್ತ್ರ ಗ್ರಂಥಗಳಲ್ಲಿ ಉದಾಹರಣೆಗಳನ್ನು ನೀಡುವಾಗ, ತಾವು ಗುಣವರ್ಮನ ಈ ಕೃತಿಗಳಿಂದ ಈ ಪದ್ಯಗಳನ್ನು ಆರಿಸಿಕೊಂಡಿರುವಂತೆ ಹೇಳುತ್ತಾರೆ. ಈ ಉದಾಹರಣೆಗಳಲ್ಲಿ ಕೆಲವು ಪದ್ಯಗಳಾದರೆ ಮತ್ತೆ ಕೆಲವು ಗದ್ಯ ಭಾಗಗಳು. ಹೀಗೆ ಈ ಕೃತಿಗಳು ಗದ್ಯ–ಪದ್ಯಗಳೆರಡನ್ನೂ ಒಳಗೊಂಡಿದ್ದರಿಂದ ಅವು ಚಂಪೂ ಕಾವ್ಯಗಳೇ ಆಗಿರಬೇಕೆಂದು ವಿದ್ವಾಂಸರು ತೀರ್ಮಾನಿಸುತ್ತಾರೆ. ಕನ್ನಡದಲ್ಲಿ ದೊರಕುವ ಮೊದಲನೆಯ ಗ್ರಂಥವೆಂದರೆ ಸುಮಾರು ಕ್ರಿ.ಶ. ೮೫೦ರ 'ಕವಿರಾಜಮಾರ್ಗ'. ಅದು ಕಾವ್ಯದ ಬೇರೆ ಬೇರೆ ಅಂಶಗಳಾದ ಅಲಂಕಾರ, ರಸ, ಬೇರೆ ಬೇರೆಯ ಕಾವ್ಯಪ್ರಕಾರಗಳು ಇತ್ಯಾದಿಗಳ ಬಗ್ಗೆ ವಿವರಿಸುವ ಗ್ರಂಥ, ಇಂತಹ ಶಾಸ್ತ್ರ ಗ್ರಂಥವೊಂದು ಯಾವುದೇ ಭಾಷೆಯಲ್ಲಿ ಬರಬೇಕಾದರೆ ಆ ಭಾಷೆಯಲ್ಲಿ ಸಾಕಷ್ಟು ಹೆಚ್ಚಿನ ಸಾಹಿತ್ಯವು ರಚಿತವಾಗಿದ್ದಿರಬೇಕು. ಕಾವ್ಯವು ಬಂದಮೇಲೆಯೇ ಕಾವ್ಯ ವಿಷಯವನ್ನು ಚರ್ಚಿಸುವ ಶಾಸ್ತ್ರಗ್ರಂಥ ಬರಬಹುದು. ಈ 'ಕವಿರಾಜಮಾರ್ಗ'ದಲ್ಲಿ ಮೊದಲನೆಯ ಪರಿಚ್ಛೇದದ ಇಪ್ಪತ್ತೇಳನೆಯ ಪದ್ಯದಲ್ಲಿ ಕನ್ನಡ ಕಾವ್ಯಗಳಲ್ಲಿ ಗದ್ಯಪದ್ಯ ಸಮ್ಮಿಶ್ರಿತವಾದ ಕಾವ್ಯಗಳಿದ್ದುವೆಂದು ಹೇಳಿದೆ. ಮೇಲೆ ಹೇಳಿದ 'ನಲಚಂಪು' ಮತ್ತು ಯಶಸ್ತಿಲಂಕಚಂಪು'ಗಳನ್ನು ಬರೆದ ಕವಿಗಳು ಕರ್ನಾಟಕದವರು. ಆದ್ದರಿಂದ ಚಂಪು ಕಾವ್ಯರೂಪವು ಮೊಟ್ಟಮೊದಲು ಕನ್ನಡದಲ್ಲಿ ಕಾಣಿಸಿಕೊಂಡಿತು; ಅದನ್ನು ಕನ್ನಡ ನಾಡಿನಲ್ಲಿದ್ದ ಸಂಸ್ಕೃತ ಕವಿಗಳು ಮೊದಲು ಆ ಭಾಷೆಯಲ್ಲಿ ಅಳವಡಿಸಿದರು ಎಂದು ಮತ್ತೆ ಹಲವರು ವಿದ್ವಾಂಸರು ವಾದಿಸುತ್ತಾರೆ.

ನಮಗೆ ಸಿಕ್ಕಿದ ಕೆಲವು ಆಧಾರಗಳಿಂದ ಹೇಳಬೇಕಾದರೆ ಮೇಲೆ ಆಗಲೇ ಸೂಚಿಸಿದ ಮೊದಲನೆಯ ಗುಣವರ್ಮನೇ ಕನ್ನಡದಲ್ಲಿ ಚಂಪು ಕಾವ್ಯಗಳನ್ನು ರಚಿಸುವವರಲ್ಲಿ ಪ್ರಾಯಶಃ ಮೊದಲನೆಯವನು. ಇವನು ಪ್ರಾಯಶಃ ಜೈನ ಮತಕ್ಕೆ ಸೇರಿದವನು. ಇವನು ಗಂಗರಾಜನಿಂದ 'ಮಹೇಂದ್ರಾಂತಕ' ಎಂಬ ಬಿರುದನ್ನು ಪಡೆದಿದ್ದ ಎರೆಯಪ್ಪ ಎಂಬುವವನಲ್ಲಿ ಅಶ್ರಿತನಾಗಿದ್ದನು. ಈ ರಾಜನು ಆಳಿದ ಕಾಲವು ಕ್ರಿ.ಶ. ೮೮೬ರಿಂದ ೯೧೩ರವರೆಗೆ, ಆದ್ದರಿಂದ ಈ ಕವಿಯೂ ಇದೇ ಕಾಲದಲ್ಲಿ ಕಾವ್ಯ

ರಚನೆಯನ್ನು ಮಾಡಿದ. ಪ್ರಾಯಶಃ ಇವನ ಕೃತಿಗಳು ಎರಡು; 'ಹರಿವಂಶ' ಮತ್ತು 'ಶೂದ್ರಕ' 'ಹರಿವಂಶ'ವೂ ಚಂಪು ಕಾವ್ಯವಾಗಿದ್ದಿರಬೇಕೆಂದು ಹಲವರ ಅಭಿಮತ. ಈ ಕಾವ್ಯದ ಹೆಸರನ್ನೂ ಬೇರೆಡೆಯಲ್ಲಿ ದೊರಕುವ ಇದರ ಕೆಲವು ಪದ್ಯಗಳನ್ನೂ ನೋಡಿದರೆ ಇದು ಹರಿವಂಶದಲ್ಲಿ ಹುಟ್ಟಿದ ನೇಮಿನಾಥನೆಂಬ ಇಪ್ಪತ್ತೆರಡನೆಯ ತೀರ್ಥಂಕರನ ಬಗ್ಗೆ ಬರೆದ ಪುರಾಣ ಕಾವ್ಯವಾಗಿರುವಂತೆ ತೋರುತ್ತದೆ. 'ಶೂದ್ರಕ' ಎಂಬುದು ಹಿಂದೆ ಸಂಸ್ಕೃತದಲ್ಲಿ ಪ್ರಚಲಿತವಾಗಿದ್ದ ಶೂದ್ರಕನೆಂಬ ರಾಜನಿಗೆ ಸಂಬಂಧಿಸಿದ ಕತೆಯನ್ನೊಳಗೊಂಡ ಕಾವ್ಯ. ಇದು ಸಹ ಚಂಪು ಕಾವ್ಯವೇ. ನಮಗೆ ಬೇರೆ ಬೇರೆಯ ಕಡೆಗಳಲ್ಲಿ ದೊರೆಯುವ 'ಶೂದ್ರಕ' ಕಾವ್ಯದ ಅನೇಕ ಪದ್ಯಗಳಲ್ಲಿ ಗುಣವರ್ಮನ ಆಶ್ರಯದಾತನಾದ ಎರೆಯಪ್ಪನಿಗಿದ್ದ ಬಿರುದುಗಳೂ ಬಂದಿವೆ. ಆದ್ದರಿಂದ ಈ ಕಾವ್ಯದ ನಾಯಕನೊಂದಿಗೆ ತನ್ನ ಆಶ್ರಯದಾತನನ್ನು ಸಮೀಕರಿಸಿ ಈ ಕೃತಿಯನ್ನು ರಚಿಸಿರಬೇಕೆಂದು ಹಲವರು ಅಭಿಪ್ರಾಯಪಡುತ್ತಾರೆ; ಇದು ಮುಂದೆ ಈ ರೀತಿ ಮಾಡಿದ ಪಂಪ ಮುಂತಾದ ಕವಿಗಳಿಗೆ ಪ್ರೇರಣೆ ನೀಡಿರಬೇಕೆಂದು ಇವರ ಅಭಿಮತ. ಈ ರೀತಿ ಗುಣವರ್ಮನೇ ಮುಂದಿನ ಬಹುಮಂದಿ ಜೈನಕವಿಗಳು ಮಾಡಿದಂತೆ ಪುರಾಣ ಕಾವ್ಯವೊಂದನ್ನು ರಚಿಸುವ ಸಂಪ್ರದಾಯಕ್ಕೆ ಕನ್ನಡದಲ್ಲಿ ಮೇಲುಪಂಕ್ತಿಯನ್ನು ಹಾಕಿದವನು. ಈ ದೃಷ್ಟಿಯಿಂದ ಇವನ ಕಾವ್ಯಗಳು ತುಂಬ ಪ್ರಮುಖವಾದವು. ಆದರೆ ದುರದೃಷ್ಟವಶಾತ್ ಈ ಕಾವ್ಯಗಳು ನಮಗೆ ದೊರೆತಿಲ್ಲ.

ಕ್ರಿ.ಶ. ೯೫೦ರಲ್ಲಿ ಕಾವ್ಯ ರಚನೆಯನ್ನು ಮಾಡಿದ ಪೊನ್ನನು ತಾನು "ಕನ್ನಡ ಗವಿತೆಯೊಳ್ ಅಸಗಂಗಂ ನೂರ್ಮಡಿ" ಎಂದು ಹೇಳಿಕೊಳ್ಳುತ್ತಾನೆ. ಜಯಕೀರ್ತಿ ಎನ್ನುವ ಛಂದಃಶಾಸ್ತ್ರಕಾರನು ತನ್ನ 'ಛಂದೋನುಶಾಸನ' ಎನ್ನುವ ಸಂಸ್ಕೃತ ಗ್ರಂಥದಲ್ಲಿ ಅಸಗನು ಕನ್ನಡ ಕುಮಾರಸಂಭವವನ್ನು ಬರೆದಿರುವನೆಂದು ಹೇಳುತ್ತಾನೆ. ಪೊನ್ನನು ಹೇಳಿದ ಅಸಗನೂ ಇವನೂ ಪ್ರಾಯಶಃ ಒಂದೇ, ಇವನೂ ಜೈನ ಕವಿಯಾಗಿದ್ದಿರ ಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಆದ್ದರಿಂದ ಅಸಗನು ಬರೆದಿರುವ 'ಕುಮಾರಸಂಭವ' ಶಿವಪಾರ್ವತಿಯರಿಗೆ ಸಂಬಂಧಿಸಿದ ಕೃತಿಯಾಗಿರದೆ ಅದು ಜೈನಕೃತಿಯಾಗಿರ ಬೇಕೆಂದು ವಿದ್ವಾಂಸರು ಊಹಿಸುತ್ತಾರೆ. ಸಂಸ್ಕೃತದಲ್ಲಿ ಒಬ್ಬ ಅಸಗನೆಂಬ ಕವಿಯ 'ವರ್ಧಮಾನ ಪುರಾಣ' ಮತ್ತು 'ಶಾಂತಿಪುರಾಣ'ಗಳೆಂಬ ಕಾವ್ಯಗಳು ದೊರಕಿವೆ. ಈ ಕವಿಯೂ ಕನ್ನಡ ಕಾವ್ಯಗಳನ್ನು ಬರೆದ ಆಸಗನೂ ಒಬ್ಬನೇ, ಬೇರೆಯವರೇ ಎಂಬ ಬಗ್ಗೆ ವಿದ್ವಾಂಸರಲ್ಲಿ ಏಕಾಭಿಪ್ರಾಯವಿಲ್ಲ. ಆಸಗನ ಕನ್ನಡ ಕೃತಿಯಾದ 'ಕುಮಾಸಂಭವ'ವು ಚಂಪೂಕೃತಿಯಾಗಿದ್ದಿರಬಹುದು.

ಹದಿನೈದನೆಯ ಶತಮಾನದಲ್ಲಿ 'ಸೂಕ್ತಿ ಸುಧಾರ್ಣವ'ವೆಂಬ ಸಂಕಲನ ಗ್ರಂಥವೊಂದನ್ನು ಸಿದ್ಧಪಡಿಸಿದ ಮಲ್ಲಿಕಾರ್ಜುನನು ತನ್ನ ಈ ಗ್ರಂಥಕ್ಕೆ ಆರಿಸಿಕೊಂಡ ಪದ್ಯಗಳಲ್ಲಿ ಗುಣನಂದಿಯ ಪದ್ಯಗಳೂ ಇವೆಯೆಂದು ಹೇಳಿಕೊಳ್ಳುತ್ತಾನೆ. ಹಾಗೆಯೇ ಹದಿನಾರನೆಯ ಶತಮಾನದ ನಂಜುಂಡ ಕವಿಯು ಗುಣನಂದಿಯ ಬರಹದಲ್ಲಿ 'ಇಂಪುವಡೆದ ಕವಿತಾಲಹರಿಯ ಸೊಂಪು' ಇದೆಯೆಂದು ಹೇಳುತ್ತಾನೆ. ಕೇಶಿರಾಜನು

'ಶಬ್ದಮಣಿ ದರ್ಪಣ'ವೆಂಬ ವ್ಯಾಕರಣ ಗ್ರಂಥಕ್ಕೆ ಉದಾಹರಣೆಗಳಾಗಿ ಕೊಡಲು ಆರಿಸಿಕೊಂಡ ಪದ್ಯಗಳಲ್ಲಿ ಗುಣನಂದಿಯವೂ ಇವೆಯೆಂದು ಹೇಳುತ್ತಾನೆ. ಆದರೆ ಈ ಗುಣನಂದಿಯು ಯಾರು, ಅವನ ಕಾಲವಾವುದು, ಕೃತಿಗಳಾವುದು ಎಂಬ ಬಗ್ಗೆ ನಮಗೆ ಯವುದೇ ನಿಶ್ಚಯವಾದ ವಿಷಯವು ತಿಳಿದಿಲ್ಲ.

ಈ ಮೇಲೆ ಹೇಳಿದ ಕವಿಗಳು 'ಕವಿರಾಜಮಾರ್ಗ'ದ ಕಾಲಕ್ಕಿಂತ ಈಚಿನವರು, ಪಂಪನಿಗಿಂತ ಪೂರ್ವದವರು. ಆದರೆ ಕವಿರಾಜಮಾರ್ಗದಲ್ಲಿಯೇ ಆ ಹಿಂದೆ ವಿಮಳೋದಯ, ನಾಗರ್ಜುನ, ಜಯಬಂಧು, ದುರ್ವಿನೀತ, ಶ್ರೀವಿಜಯ, ಕವೀಶ್ವರ, ಪಂಡಿತಚಂದ್ರ, ಲೋಕಪಾಲ ಮುಂತಾದ ಗದ್ಯ ಪದ್ಯ ಕವಿಗಳ ಹೆಸರುಗಳನ್ನು ಹೇಳಲಾಗಿದೆ. ಅದೇ ಗ್ರಂಥದಲ್ಲಿ ಆ ಹಿಂದೆಯೂ 'ಗದ್ಯ ಪದ್ಯ ಸಮ್ಮಿಶ್ರಿತ'ವಾದ ಕಾವ್ಯಗಳಿದ್ದವೆಂದೂ ಹೇಳಿದೆ. ಹೀಗಾಗಿ ಈ ಮೇಲಿನ ಕವಿಗಳಲ್ಲಿಯೇ ಯಾರಾದರೂ ಚಂಪೂ ಕಾವ್ಯಗಳನ್ನು ಬರೆದಿರಬಹುದೇ ಎಂಬ ಬಗ್ಗೆ ಅನುಮಾನವುಂಟಾಗುತ್ತದೆ. ಆದರೆ ಈ ವಿಷಯದಲ್ಲಿ ನಮಗೆ ತಿಳಿದಿರುವುದು ತುಂಬ ಕಡಿಮೆ.

ಜೈನ ಚಂಪೂ ಕವಿಗಳು

ಪಂಪ

ಪಂಪನು ಕನ್ನಡದ ಆದಿಕವಿಯೆಂದು ಪ್ರಸಿದ್ಧನಾಗಿದ್ದಾನೆ. ಈ ಹಿಂದೆಯೇ ನೋಡಿದಂತೆ ಪಂಪನಿಗಿಂತ ಹಿಂದೆಯೇ ಅನೇಕ ಕನ್ನಡ ಕವಿಗಳು ಕಾವ್ಯಗಳನ್ನು ಬರೆದಿರುವರೆಂಬುದಕ್ಕೆ ದಾಖಲೆಯಿದೆ, ಹಾಗೆಯೇ ನಮಗೆ ಸಿಕ್ಕಿರುವ ಮೊದಲನೆಯ ಕನ್ನಡದ ಪೂರ್ಣಗ್ರಂಥವೆಂದರೆ ಕವಿರಾಜಮಾರ್ಗ, ಹೀಗಿದ್ದರೂ ಪಂಪನನ್ನು ಆದಿಕವಿಯೆಂದು ಕರೆಯಲು ಕಾರಣವೆಂದರೆ ಅವನು ಮುಂದಿನ ಜೈನಕವಿಗಳಿಗೆ ಮಾರ್ಗದರ್ಶನವನ್ನು ಮಾಡಿದುದು, ನಮಗೆ ಸಿಕ್ಕಿರುವ ಕನ್ನಡದ ಮೊದಲನೆಯ ಕಾವ್ಯವು ಪಂಪನದೇ ಆಗಿರುವುದು, ಮತ್ತು ಪಂಪನು ಕನ್ನಡದ ಅತ್ಯಂತ ದೊಡ್ಡ ಕವಿಗಳಲ್ಲಿ ಮೊದಲನೆಯವನಾಗಿರುವುದು.

ಪಂಪನು ತನ್ನ ಕಾವ್ಯಗಳಲ್ಲಿ ಸ್ವಂತ ವಿಷಯವನ್ನು ಸಾಕಷ್ಟು ಹೇಳಿಕೊಂಡಿದ್ದಾನೆ. ಅಲ್ಲದೆ ಪಂಪನಿಗೆ ಸಂಬಂಧಿಸಿದ ಮುಖ್ಯವಾದ ಶಿಲಾಶಾಸನವೊಂದು ಆಂಧ್ರ ಪ್ರದೇಶದ ಗಂಗಾಧರಂನಲ್ಲಿ ದೊರೆತಿದೆ. ಅವನ ಕಾವ್ಯಗಳು ಹಾಗೂ ಈ ಶಾಸನದಲ್ಲಿ ಬರುವ ವಿಷಯಗಳನ್ನು ಒಟ್ಟುಗೂಡಿಸಿ ಪಂಪನ ಸ್ವಂತ ಜೀವನಕ್ಕೆ ಸಂಬಂಧಿಸಿದ ಈ ಕೆಲವು ವಿವರಗಳನ್ನು ನೀಡಬಹುದು. ಪಂಪನ ಪೂರ್ವಿಕರು ಇದ್ದದ್ದು ವೆಂಗಿಮಂಡಲವೆಂಬ ಪ್ರಾಂತದ ವೆಂಗಿಪಟು ಎಂಬ ಊರಿನಲ್ಲಿ. ವೆಂಗಿ ಮಂಡಲವೆಂದರೆ ಆಗ ಕೃಷ್ಣಾ ಗೋದಾವರಿ ನದಿಗಳ ಮಧ್ಯದಲ್ಲಿ ಬಂಗಾಳ ಕೊಲ್ಲಿಯವರೆಗೆ ಹರಡಿದ್ದ ವಿಸ್ತಾರವಾದ ನಾಡು. ಆ ಊರಿನಲ್ಲಿ ಹಿಂದೆ ದೊಡ್ಡ ವಿದ್ವಾಂಸನೂ ಅನೇಕ ಯಜ್ಞಯಾಗಾದಿಗಳನ್ನು ಮಾಡಿದವನೂ ಆದ ಮಾಧವ ಸೋಮಯಾಜಿಯೆಂಬ ಬ್ರಾಹ್ಮಣನಿದ್ದನು. ಇವನ ಮಗ ಅಭಿಮಾನ ಚಂದ್ರ, ತುಂಬ ದೊಡ್ಡ ದಾನಿ. ಇವನಿಗೆ ಮೇಮುಲವಾಡದ (ಆಂಧ್ರ ಪ್ರದೇಶದ ಕರೀಂನಗರ ಜಿಲ್ಲೆಯಲ್ಲಿದೆ) ಚಾಲುಕ್ಯರೆಂಬ ರಾಜರ ಆಶ್ರಯವು ದೊರೆಯಿತು. ಆದ್ದರಿಂದ ಇವನು ನಿಂಡುಂಗೊಂಡೆಯೆಂಬ ಗ್ರಾಮಕ್ಕೆ ಬಂದು ನೆಲಸಿದ. ಇವನ ಮಗನೇ ವೇದ ವೇದಾಂಗಗಳಲ್ಲಿ ಪಂಡಿತನಾಗಿದ್ದ ಕೊಮರಯ್ಯನೆಂಬುವನು; ಇವನ ಮಗ ಭೀಮಪಯ್ಯ. ಈ ಭೀಮಪಯ್ಯನಿಗೆ ಬೆಳ್ವೊಲವೆಂಬ ನಾಡಿನ ಅಣ್ಣಿಗೇರಿ (ಧಾರವಾಡ ಜಿಲ್ಲೆಯ ನವಲಗುಂದ ತಾಲ್ಲೂಕು) ಎಂಬ ಊರಿನ ಸಿಂಘ ಜೋಯಿಸನ ಮೊಮ್ಮಗಳಾದ ಅಬ್ಬಣಬ್ಬೆಯೊಡನೆ ಮದುವೆಯಾಯಿತು. ಇವರ ಮಕ್ಕಳು ಪಂಪ ಮತ್ತು ಜಿನವಲ್ಲಭ ಎಂಬುವವರು.

ಪಂಪನ ತಂದೆಯಾದ ಭೀಮಪಯ್ಯನು ವೈದಿಕಧರ್ಮವನ್ನು ಬಿಟ್ಟು ಜೈನ ಧರ್ಮವನ್ನು ಸ್ವೀಕರಿಸಿದ. ಬ್ರಾಹ್ಮಣಕುಲವು ಶ್ರೇಷ್ಠವಾದುದು, ಅಹಿಂಸಾ ಧರ್ಮವಾದ ಜೈನಧರ್ಮವನ್ನು ಸ್ವೀಕರಿಸಿ ಆ ಕುಲವನ್ನು ಮತ್ತಷ್ಟು ಶ್ರೇಷ್ಠವನ್ನಾಗಿ ಮಾಡಿದವನು ತನ್ನ ತಂದೆಯೆಂದು ಪಂಪನಿಗೆ ತುಂಬ ಹೆಮ್ಮೆ.

ಪಂಪನ ಕಾವ್ಯಗಳು ಎರಡು: 'ಆದಿಪುರಾಣ' ಮತ್ತು 'ವಿಕ್ರಮಾರ್ಜುನ ವಿಜಯ' ಅಥವಾ ಪಂಪಭಾರತ. ಆದಿಪುರಾಣದಲ್ಲಿ, ಅದು ಅವನು ಬರೆದ ಮೊದಲನೆಯ ಕಾವ್ಯವಾದುದರಿಂದ, ತನ್ನ ಸ್ವಂತ ವಿಷಯವನ್ನು ಹೆಚ್ಚಾಗಿ ಹೇಳಿಕೊಂಡಿದ್ದಾನೆ. ಅದರ ಪ್ರಕಾರ ಪಂಪನು ಹುಟ್ಟಿದುದು ದುಂದುಭಿ ಸಂವತ್ಸರದಲ್ಲಿ ಎಂದರೆ ಕ್ರಿ.ಶ. ೯೦೨ರಲ್ಲಿ. ಪಂಪನು ತನ್ನ ಆಕಾರದ ಬಗ್ಗೆ ಹೇಗೆ ಹೇಳಿಕೊಂಡಿದ್ದಾನೆ:

ಕದಲೀಗರ್ಭಶ್ಯಾಮಂ
ಮೃದುಕುಟಿಲ ಶಿರೋರುಹಂ, ಸರೋರುಹವದನಂ,
ಮೃದುಮಧ್ಯಮ ತನು, ಹಿತಮಿತ
ಮೃದುವಚನಂ, ಲಲಿತ ಮಧುರ ಸುಂದರವೇಷಂ (ಆದಿಪು. ೧–೨೯)

ಅವನ ದೇಹದ ಬಣ್ಣವು 'ಕದಲೀಗರ್ಭ' ಎಂದರೆ ಬಾಳೆಯ ಮೋತೆಯಂತಹ ಎಣ್ಣೆಗೆಂಪು. ಅವನ ತಲೆಗೂದಲು ಮೃದುವಾಗಿಯೂ ಗುಂಗುರಾಗಿಯೂ ಇತ್ತು. ಮುಖವು ಕಮಲದಂತೆ ಸುಂದರವಾದುದು. ಅಷ್ಟು ದಪ್ಪವೂ ಅಲ್ಲದೆ ತೀರ ತೆಳುವೂ ಅಲ್ಲದ ದೇಹ. ಅವನು ಹಿತವಾಗಿಯೂ ಮಿತವಾಗಿಯೂ ಮೃದುವಾಗಿಯೂ ಮಾತ ನಾಡುವ ಸ್ವಭಾವವನ್ನು ಪಡೆದಿದ್ದುದಲ್ಲದೆ ಸುಂದರನಾಗಿದ್ದ. ಪಂಪನ ಗುರು ದೇವೇಂದ್ರಮುನಿ ಎನ್ನುವವನು. ಜಯನಂದಿ ಎನ್ನುವವನೂ ಸ್ವಲ್ಪಕಾಲ ಇವನ ಗುರು ವಾಗಿದ್ದನು. ಪಂಪನು ಈ ಗುರುಗಳಿಂದ ಕಾವ್ಯ-ಶಾಸ್ತ್ರಗಳ ವಿದ್ಯೆಯನ್ನು ಪಡೆದನು. ಅದರ ಜೊತೆ ಶಸ್ತ್ರಾಸ್ತ್ರಗಳ ಪ್ರವೀಣತೆಯನ್ನೂ ಪಡೆದು ದೊಡ್ಡ ಯೋಧನೂ ಆದನು.

ಪಂಪನು ಕಲಿಯೂ, ಕವಿಮನೋಭಾವದವನೂ ಆಗಿ ಬೆಳೆದಾಗ ವೇಮುಲ ವಾಡದಲ್ಲಿ ಆಳುತ್ತಿದ್ದವನು ಇಮ್ಮಡಿ ಅರಿಕೇಸರಿಯೆಂಬ ಚಾಲುಕ್ಯ ರಾಜ, ಇವನು ರಾಷ್ಟ್ರಕೂಟ ಚಕ್ರವರ್ತಿಗಳಿಗೆ ಸಾಮಂತನಾಗಿದ್ದವನು. ಈ ಅರಿಕೇಸರಿಯ ತನ್ನ ಓರಗೆಯ ವಯಸ್ಸಿನವನಾದ ಪಂಪನ ಪ್ರತಿಭೆಯನ್ನು ಗುರುತಿಸಿ ಅವನನ್ನು ತನ್ನ ಆಸ್ಥಾನಕವಿಯನ್ನಾಗಿ ಮಾಡಿಕೊಂಡನು. ಇಬ್ಬರೂ ಸ್ನೇಹಿತರಾಗಿದ್ದರೇ ವಿನಾ ಒಬ್ಬ ರಾಜ. ಇನ್ನೊಬ್ಬ ಅವನ ಆಶ್ರಯದಲ್ಲಿದ್ದವನು ಎಂಬ ಭಾವನೆಯಿಂದ ಕೂಡಿರಲಿಲ್ಲ. ಈ ಸ್ನೇಹದ ನೆನಪನ್ನು ಶಾಶ್ವತವನ್ನಾಗಿ ಮಾಡಬೇಕೆಂಬ ಉದ್ದೇಶದಿಂದಲೇ ಪಂಪನು 'ವಿಕ್ರಮಾರ್ಜುನ ವಿಜಯ'ದಲ್ಲಿ ಅರ್ಜುನ-ಅರಿಕೇಸರಿ ಒಂದೇ ಎಂಬಂತೆ ಭಾವಿಸಿ ಕೊಂಡು ಅರ್ಜುನನ ಪ್ರತಾಪ, ಉದಾರ ಗುಣಗಳನ್ನು ಹೊಗಳುವ ನೆಪದಲ್ಲಿ ತನ್ನ ಆಶ್ರಯದಾತನನ್ನು ಹೊಗಳಿದ್ದಾನೆ.

ಪಂಪನ ಕಾವ್ಯಗಳು ಆಗಲೇ ತಿಳಿಸಿರುವಂತೆ ಎರಡು. ಅವುಗಳಲ್ಲಿ ಮೊದಲ

ನೆಯದು 'ಆದಿಪುರಾಣ'. ಈ ಕಾವ್ಯವನ್ನು ಕ್ರಿ.ಶ. ೯೪೨ನೇ ಇಸವಿ ಅಕ್ಟೋಬರ್ ೧೬ನೆಯ ತಾರೀಖಿಗೆ ಸರಿಹೋಗುವ ಶಕವರ್ಷ ೮೬೩ನೇ ಪ್ಲವ ಸಂವತ್ಸರದ ಕಾರ್ತಿಕ ಶುಕ್ಲಪಕ್ಷದ ಪಂಚಮಿ ಭಾನುವಾರದಂದು ಬರೆದು ಮುಗಿಸಿದಂತೆ ಹೇಳಿ ಕೊಂಡಿದ್ದಾನೆ. ಇದನ್ನು ಕವಿಯು ಮೂರು ತಿಂಗಳಲ್ಲಿ ಬರೆದು ಮುಗಿಸಿದನಂತೆ, ಅನಂತರ 'ವಿಕ್ರಮಾರ್ಜುನ ವಿಜಯ'ವನ್ನು ಆರು ತಿಂಗಳಲ್ಲಿ ಬರೆದನಂತೆ, ಇದನ್ನು ಬರೆದದ್ದು ಯಾವಾಗ ಎಂದು ಕವಿ ಹೇಳಿಲ್ಲ. ಪಂಪನ ಈ ಕಾವ್ಯರಚನೆಯನ್ನು ಗೌರವಿಸಲು ಅರಿಕೇಸರಿಯು ಅಪಾರ ಹಣವನ್ನು ಮೆಚ್ಚುಗೆಯಾಗಿ ಕೊಟ್ಟನು. ಅರಿಕೇಸರಿಗೆ 'ಗುಣಾರ್ಣವ'ನೆಂಬ ಬಿರುದಿತ್ತು: ಅದಕ್ಕನುಗುಣವಾಗಿ ಪಂಪನಿಗೆ 'ಕವಿತಾ ಗುಣಾರ್ಣವ'ನೆಂಬ ಪ್ರಶಸ್ತಿಯು ದೊರೆಯಿತು. ಪಂಪನು ಅರಿಕೇಸರಿಯನ್ನು ವಿಕ್ರಮಾರ್ಜುನನಿಗೆ ಹೋಲಿಸಿದ್ದರಿಂದ ಅವನಿಗೆ ಅದು ಬಿರುದಾಗಿ ಉಳಿದು ಬಂತು. ತನ್ನನ್ನು ತುಂಬ ಸ್ನೇಹದಿಂದ ನಡೆಸಿಕೊಂಡ ಅರಿಕೇಸರಿಯ ಹೆಸರನ್ನು ಪಂಪನು ಈ ರೀತಿ ಸದಾಕಾಲ ಉಳಿಯುವಂತೆ ಮಾಡಿದ್ದಾನೆ. ಇಲ್ಲದಿದ್ದರೆ ಸಾಮಂತನಾಗಿದ್ದ ಅವನ ಹೆಸರು ಇಷ್ಟರ ಮಟ್ಟಿಗೆ ಪ್ರಸಿದ್ಧವಾಗುತ್ತಿರಲಿಲ್ಲ.

ಆದಿಪುರಾಣ

ಪಂಪನ 'ಆದಿಪುರಾಣ'ವು ಮೊದಲನೆಯ ತೀರ್ಥಂಕರನಾದ ಪುರುದೇವನ ಚರಿತ್ರೆ. ಇದಕ್ಕೆ ಮೂಲವಾದುದು ಒಂಬತ್ತನೆಯ ಶತಮಾನದಲ್ಲಿ ಬಾಳಿದ ರಾಷ್ಟ್ರಕೂಟ ಚಕ್ರವರ್ತಿ ಅಮೋಘವರ್ಷನ ಗುರುಗಳಾದ ಜೀನಸೇನಾ ಚಾರ್ಯರು ಬರೆದ 'ಪೂರ್ವಪುರಾಣ'; ಮುಂದಿನ ಭಾಗವನ್ನು ಇವರ ಶಿಷ್ಯರಾದ ಗುಣಭದ್ರಾಚಾರ್ಯರು ಬರೆದರು. ಈ ಎರಡೂ ಸೇರಿ 'ಮಹಾ ಪುರಾಣ'ವೆನ್ನಿಸಿಕೊಳ್ಳುತ್ತದೆ. ಇದು ಜೈನರಿಗೆ ಪೂಜ್ಯರಾದ 'ತ್ರಿಷಷ್ಟಿಶಲಾಕಾ ಪುರುಷ'ರ ದಿವ್ಯಚರಿತ್ರೆಯನ್ನು ಒಳಗೊಂಡಿದೆ. ತ್ರಿಷಷ್ಟಿಶಲಾಕಾಪುರುಷರೆಂದರೆ ಇಪ್ಪತ್ತುನಾಲ್ಕು ಜನ ತೀರ್ಥಂಕರರು, ಹನ್ನೆರಡು ಜನ ಚಕ್ರವರ್ತಿಗಳು, ಒಂಬತ್ತು ಮಂದಿ ಬಲದೇವರು, ಒಂಬತ್ತು ಮಂದಿ ವಾಸುದೇವರು ಹಾಗೂ ಒಂಬತ್ತು ಮಂದಿ ಪ್ರತಿವಾಸುದೇವರು–ಹೀಗೆ ಒಟ್ಟು ಅರವತ್ತಮೂರು ಮಂದಿ. ಈ ತೀರ್ಥಂಕರರ ಚರಿತ್ರೆಯನ್ನು ಹೇಳುವುದು ಜೈನಪುರಾಣಗಳ ವಸ್ತು. ಸಂಸಾರದಲ್ಲಿ ಸಿಕ್ಕಿಕೊಂಡು ಬವಣೆ ಪಡುತ್ತಿರುವ ಜೀವವು ಸಮ್ಯಕ್ ಜ್ಞಾನ, ಸಮ್ಯಕ್ ದರ್ಶನ, ಸಮ್ಯಕ್ ಚಾರಿತ್ರಗಳೆಂಬ ರತ್ನತ್ರಯವನ್ನಾಶ್ರಯಿಸಿ ಈ ಸಂಸಾರವನ್ನು ದಾಟಿ ಮುಕ್ತಿ ಪಡೆಯುವುದು ತೀರ್ಥಂಕರರ ಜೀವನ ಚರಿತ್ರೆಗಳನ್ನು ಹೇಳುವಾಗ ಕವಿಗಳು ವರ್ಣಿಸುವ ಜೀವನವಿಕಾಸಕ್ರಮ. ಈ ಜೀವನ ವಿಕಾಸದ ಕೊನೆಯ ಮೆಟ್ಟಲು ತೀರ್ಥಂಕರತ್ವ; ಅದನ್ನು ದಾಟಿದ ಮೇಲೆ ಶಾಶ್ವತವಾದ ಮೋಕ್ಷ.

ತೀರ್ಥಂಕರನಾಗುವ ಜೀವವು ಹೇಗೆ ಹಿಂದಿನ ಜನ್ಮಗಳಲ್ಲಿ ಕಷ್ಟವನ್ನನು ಭವಿಸಿ ಪಾಪವನ್ನು ಕಡಿಮೆ ಮಾಡಿಕೊಂಡಿತೆಂಬುದನ್ನು ನಿರೂಪಿಸುವುದು 'ಭವಾವಳಿ' (ಎಂದರೆ ತೀರ್ಥಂಕರರ ಹಿಂದಿನ ಜನ್ಮಗಳ) ವರ್ಣನೆಯ ಉದ್ದೇಶ. ಪ್ರತಿಯೊಂದು ಜನ್ಮದಲ್ಲೂ ತನ್ನ ಕರ್ಮವನ್ನು ಕಡಿಮೆಮಾಡಿ ಕೊಳ್ಳುತ್ತ ಮೋಕ್ಷಕ್ಕೆ ಹತ್ತಿರವಾದ ಜೀವ

ತಳೆದು ಹುಟ್ಟುವುದು ತೀರ್ಥಂಕರನ ಜನ್ಮದಲ್ಲಿ. ತೀರ್ಥಂಕರ ಜೀವನವು ಪುರಾಣಗಳಲ್ಲಿ ಐದು ಹಂತಗಳಲ್ಲಿ ವರ್ಣಿತವಾಗಿರುತ್ತದೆ. ಅವುಗಳೆಂದರೆ 'ಗರ್ಭಾವತರಣ ಕಲ್ಯಾಣ', ತೀರ್ಥಂಕರ ಶಿಶುವು ತಾಯಿಯ ಗರ್ಭವನ್ನು ಪ್ರವೇಶಿಸುವುದು, 'ಜನ್ಮಾಭಿಷೇಕ ಕಲ್ಯಾಣ'–ಹುಟ್ಟುವುದು, 'ಪರಿನಿಷ್ಕ್ರಮಣ ಕಲ್ಯಾಣ'– ವೈರಾಗ್ಯವುಂಟಾಗುವುದು. 'ಕೇವಲ ಜ್ಞಾನ ಕಲ್ಯಾಣ' ಅತ್ಯಂತ ಶ್ರೇಷ್ಠ ಜ್ಞಾನವುಂಟಾಗುವುದು, ಮತ್ತು 'ಪರಿನಿರ್ವಾಣ ಕಲ್ಯಾಣ' ಮೋಕ್ಷಕ್ಕೆ ಸೇರುವುದು.

ತೀರ್ಥಂಕರನೊಬ್ಬನ ಚರಿತ್ರೆಯನ್ನು ಹೇಳುವಾಗ ಚಕ್ರವರ್ತಿಯೊಬ್ಬನ ಚರಿತ್ರೆಯನ್ನು ಹೇಳುವುದು ವಾಡಿಕೆ. ಚಕ್ರರತ್ನವನ್ನು ಪಡೆದು ಚಕ್ರವರ್ತಿಯು ಭೂಮಂಡಲವನ್ನೆಲ್ಲ ಗೆದ್ದು ಅಪಾರವಾದ ಸಂಪತ್ತನ್ನೂ ಕನ್ಯಾರತ್ನಗಳನ್ನೂ ಕಾಣಿಕೆಯಾಗಿ ಪಡೆದು ರಾಜಧಾನಿಗೆ ಹಿಂದಿರುಗುತ್ತಾನೆ. ಅಲ್ಲಿ ಚಕ್ರರತ್ನವನ್ನು ಪೂಜಿಸಿ ಜಿನಮಹಿಮೆಯನ್ನು ಕೊಂಡಾಡಿ ದೇವತೆಗಳೆಲ್ಲ ಸೇರಿ ಚರ್ಕವರ್ತಿಗೆ ಸಾಮ್ರಾಜ್ಯ ಪಟ್ಟಾಭಿಷೇಕವನ್ನು ಮಾಡುತ್ತಾರೆ. ಅನಂತರ ಚಕ್ರವರ್ತಿಯು ಮಹಾ ವೈಭವದಿಂದ ರಾಜ್ಯಭಾರ ಮಾಡುತ್ತಾನೆ. ಈ ಮೇಲಿನದು ಎಲ್ಲ ಜೈನ ಪುರಾಣಗಳ ಸ್ಥೂಲವಾದ ಕತೆಯ ಹಂದರ. ಬೇರೆ ಬೇರೆ ತೀರ್ಥಂಕರರು, ಚಕ್ರವರ್ತಿಗಳ ಜೀವನದಲ್ಲಿನ ವಿವರಗಳು ಬೇರೆಯಾಗುತ್ತವೆ. ಅಷ್ಟೆ, ಆದ್ದರಿಂದ ಪುರಾಣರಚನೆಯೆಂದರೆ ಒಂದು ನಿಶ್ಚಿತವಾದ ಚೌಕಟ್ಟಿನಲ್ಲಿ ಕಾವ್ಯರಚನೆ ಮಾಡಬೇಕಾಗುತ್ತದೆ, ಆದ್ದರಿಂದ ಕವಿಗೆ ಇಲ್ಲಿ ಸ್ವಾತಂತ್ರ್ಯವು ಕಡಿಮೆ, ಆದರೆ ಪ್ರತಿಭಾಶಾಲಿಗಳಾದ ಕವಿಗಳು ಈ ಚೌಕಟ್ಟಿನಲ್ಲಿಯೇ ಅಲ್ಲಲ್ಲಿ ಸುಂದರವಾದ ಸನ್ನಿವೇಶಗಳನ್ನು ನಿರ್ಮಿಸುತ್ತಾರೆ; ಅಂತಹ ಕವಿಗಳಲ್ಲಿ ಪಂಪನು ಶ್ರೇಷ್ಠನೆನಿಸಿ ಕೊಂಡವನು.

'ಆದಿಪುರಾಣ'ವು ಹದಿನಾರು ಆಶ್ವಾಸಗಳುಳ್ಳ ದೀರ್ಘವಾದ ಪುರಾಣ ಕಾವ್ಯ. ಮೊದಲಿನ ಆರು ಆಶ್ವಾಸಗಳಲ್ಲಿ ಪುರುದೇವನ ಹಿಂದಿನ ಒಂಬತ್ತು ಜನ್ಮಗಳ ಕತೆಯಿದೆ, ಏಳರಿಂದ ಹತ್ತನೆಯ ಆಶ್ವಾಸದವರೆಗೆ ಪುರುದೇವನ ಜನನ ಬಾಲ್ಯ, ವಿದ್ಯಾಭ್ಯಾಸ, ವಿವಾಹ, ರಾಜ್ಯಭಾರ, ವೈರಾಗ್ಯ, ತಪಸ್ಸು, ಕೇವಲ ಜ್ಞಾನ, ಸಮವಸರಣ–ಇವುಗಳ ವರ್ಣನೆಯಿದೆ; ಹನ್ನೊಂದರಿಂದ ಹದಿನಾರನೆಯ ಆಶ್ವಾಸದವರೆಗೆ ಭರತ ಚಕ್ರವರ್ತಿಯ ಕತೆಯು ನಿರೂಪಿತವಾಗಿದೆ. ಪುರುದೇವ ಅಥವಾ ಆದಿದೇವನು ಪಡೆದ ಒಂಬತ್ತು ಜನ್ಮಗಳಾವುವೆಂಬುದನ್ನು ಪಂಪನೇ ಹೀಗೆ ಸಂಗ್ರಹವಾಗಿ ಒಂದು ಪದ್ಯದಲ್ಲಿ ಹೇಳುತ್ತಾನೆ:

ಭೋಗಕಾಂಕ್ಷೆಯೊಳ್ ಜಯವರ್ಮಂ, ಬಳಿಕೀ ಮಹಾಬಳಂ, ಲಲಿತಾಂಗಂ, ವಜ್ರಜಂಘಂ
ಭೋಗಾಭೂಮಿಜಂ ಶ್ರೀಧರದೇವಂ, ಸುವಿಧಿನರಾಧಿಪನ್, ಅಚ್ಯುತೇಂದ್ರಂ,
ಸಾಗರಾಂತಂ ನೆಲನನಿತುಮಂ ಚಕ್ರದಿಂ ಬೆಸಕಯ್ಸಿದ ವಜ್ರನಾಭಿಯಾಗಿ
ಸರ್ವಾರ್ಥಸಿದ್ಧಿಯೊಳ್ ಪುಟ್ಟ ಬಂದಿಲ್ಲಿ ತಾನಾದಿದೇವನಾದಂ

(ಆದಿಪು. ೧೧–೪೪)

(ಜಯವರ್ಮನು ಮಹಾಬಳ, ಲಲಿತಾಂಗ, ವಜ್ರಜಂಘ, ಆರ್ಯ, ಶ್ರೀಧರದೇವ, ಸುವಿಧಿ, ಅಚ್ಯುತೇಂದ್ರ, ವಜ್ರನಾಭಿ, ಅಹಮಿಂದ್ರನೆಂಬ ಒಂಬತ್ತು

ಜನ್ಮಗಳನ್ನು ತಾಳಿ ಕೊನೆಗೆ ಆದಿದೇವನಾಗಿ ಜನ್ಮವೆತ್ತಿದನು.) ಇವುಗಳಲ್ಲಿ ವಜ್ರ ಜಂಘನ ಜನ್ಮದವರೆಗೂ ಆತನು ಅನುಭವಿಸಿದ ಭೋಗ ವೈಭವಗಳ ಕತೆಯಿದೆ, ಮುಂದೆ ಆ ಭೋಗದ ಆಸೆಯು ಕಡಿಮೆಯಾಗುತ್ತಾ ಆಗುತ್ತಾ ಬಂದು ಪುರುದೇವನ ಜನ್ಮದಲ್ಲಿ ವೈರಾಗ್ಯದ ತುತ್ತತುದಿಯನ್ನು ಮುಟ್ಟಿದ ಕತೆಯಿದೆ.

ಪುರಾಣದ ಚೌಕಟ್ಟಿನಲ್ಲಿಯೂ ಪಂಪನು ಹಲವಾರು ಸುಂದರ ಸಂದರ್ಭಗಳನ್ನು ಅತ್ಯಂತ ಕಾವ್ಯಮಯವಾದ ರೀತಿಯಲ್ಲಿ ಚಿತ್ರಿಸುತ್ತಾನೆ. ಜಯವರ್ಮನ ನಾಲ್ಕನೆಯ ಜನ್ಮವಾದ ವಜ್ರಜಂಘನ ಪ್ರೇಮಪ್ರಕರಣವು ಕನ್ನಡ ಸಾಹಿತ್ಯದಲ್ಲಿ ಚಿತ್ರಿತವಾದ ಅತ್ಯಂತ ಶ್ರೇಷ್ಠ ಚಿತ್ರಗಳಲ್ಲೊಂದು. ಅದರ ಪರಿಚಯವನ್ನು ಸ್ವಲ್ಪಮಟ್ಟಿಗೆ ಮಾಡಿಕೊಳ್ಳೋಣ.

ಹಿಂದಿನ ಜನ್ಮದಲ್ಲಿ ಲಲಿತಾಂಗ–ಸ್ವಯಂಪ್ರಭೆಯರೆಂಬ ಪ್ರೇಮಿಗಳಾಗಿದ್ದು ಸಂಪೂರ್ಣ ಭೋಗವನ್ನನುಭವಿಸದೆ ಮುಂದಿನ ಜನ್ಮದಲ್ಲಿ ವಜ್ರ ಜಂಘ ಶ್ರೀಮತಿಯರಾಗಿ ಹುಟ್ಟುತ್ತಾರೆ, ತಮ್ಮ ಹಿಂದಿನ ಜನ್ಮದ ಪ್ರೇಮವನ್ನು ನೆನಪಿಸಿಕೊಂಡು ವ್ಯಥೆಪಡುತ್ತಾರೆ. ಶ್ರೀಮತಿಯ ಹಿಂದಿನ ಜನ್ಮದ ನೆನಪಿನಿಂದಲೇ ಅವನ ಚಿತ್ರವೊಂದನ್ನು ಬರೆದು ಅವನನ್ನು ಹುಡುಕಲು ಪಂಡಿತೆಯೆಂಬ ದಾದಿಯೊಡನೆ ಅದನ್ನು ಕಳಿಸುತ್ತಾಳೆ. ಅವಳು ವಜ್ರಜಂಘನನ್ನು ಗುರುತಿಸಿ ಶ್ರೀಮತಿಯ ವಿಷಯವನ್ನು ಹೇಳಿದಾಗ ಇಬ್ಬರಿಗೂ ಮದುವೆಯಾಗುತ್ತದೆ. ಅವರನ್ನು ಊರಿಗೆ ಕಳಿಸಲು ಸ್ವಲ್ಪದೂರ ಹೋಗಿದ್ದ ಲಕ್ಷ್ಮೀಮತಿ–ವಜ್ರದಂತರೆಂಬ ಶ್ರೀಮತಿಯ ತಾಯ್ತಂದೆಯರು ಬೀಳ್ಕೊಳ್ಳುವಾಗ ಮಗಳಿಗೆ ಬುದ್ಧಿವಾದ ಹೇಳುತ್ತಾರೆ. ಆಗಿನ ಬುದ್ಧಿವಾದವು 'ಶಾಕುಂತಲ' ನಾಟಕದಲ್ಲಿ ಕಣ್ವರು ಶಕುಂತಲೆಗೆ ಹೇಳಿದ ಬುದ್ಧಿವಾದವನ್ನು ಹೋಲುತ್ತದೆ. ತಂದೆಯು ಅಳಿಯನನ್ನು ಕೇಳುತ್ತಾನಂತೆ:

ಬಗೆದುಂ ನಿನ್ನನ್ವವಾಯೋನ್ನತಿಯನ್, ಇವಳತಿಸ್ನೇಹಸಂಬಂಧಮಮಂ ನೀನ್
ಬಗೆದುಂ, ಸಂದೆಮ್ಮ ನಣ್ಪಂ ಬಗೆದುಂ, ಅಱಿಯದೇನಾನುಮೆಂದಾಗಳುಂ ಮೆ
ಲ್ಲಗೆ ನೀನ್ ಕಲ್ಪಿಪ್ಪುದೆಮ್ಮಂ ನೆನೆದೆರ್ದೆಗಿಡದಂತಾಗಿ ಪಾಲಿಪ್ಪುದಿಂತೀ
ಮೃಗಶಾಬೇಕ್ಷಾಕ್ಷಿಯಂ ಮನ್ನಿಸುವುದಿನಿತನಾಂ ಬೇಡಿದೆಂ ವಜ್ರಜಂಘಾ ॥

(ಆದಿಪು. ೪–೫೫)

(ನೀನು ಶ್ರೇಷ್ಠ ವಂಶದವನು ಇವಳು ನಿನ್ನನ್ನು ತುಂಬ ಪ್ರೀತಿಸುತ್ತಾಳೆ. ನಮಗೀಗ ಹತ್ತಿರದ ನಂಟಸ್ತನವೇರ್ಪಟ್ಟಿದೆ–ಇವುಗಳನ್ನು ಗಮನಿಸಿ ಈ ಹುಡುಗಿಯು ತಿಳಿಯದೆ ಏನಾದರೂ ಅನ್ನಬಾರದ್ದನ್ನು ಅಂದರೆ ನಯವಾಗಿ ಅವಳನ್ನು ತಿದ್ದು, ನಮ್ಮನ್ನು ನೆನೆಸಿಕೊಂಡು ದುಃಖಗೊಳ್ಳದಂತೆ ಇವಳನ್ನು ಪ್ರೀತಿಯಿಂದ ನೋಡಿಕೊ. ವಜ್ರಜಂಘನೇ, ಈ ನನ್ನ ಬೇಡಿಕೆಯನ್ನು ನಡೆಸಿಕೊಂಡು.) ಅನಂತರ ತಾಯ್ತಂದೆಯರು ಮಗಳಿಗೆ ಹೇಳುವ ಬುದ್ದಿವಾದ:

ಮನಮಱಿದಂಜಿ ಬೆರ್ಚಿ ಬೆಸಕಯ್, ನಿಜವಲ್ಲಭನೇನನೆಂದೊಡಂ
ಕಿನಿಸದಿರ್, ಒಂದಿದಗ್ರಮಹಿಷೀ ಪದದಲ್ಲಿ ಪದಸ್ಥೆಯಾಗು, ನಂ

ದನರನಗಣ್ಯ ಪುಣ್ಯಧನರಂ ಪಡೆ, ಎಂದಮರ್ದಪ್ಪಿಕೊಂಡು ತ
ತ್ತನುಜೆಯನಗಲ್ಕೆಯೊಳ್ ನೆಗಪಿದರ್ ಬಸಮಲ್ಲದ ಬಾಷ್ಪವಾರಿಯಂ
(ಆದಿಪು. ೪–೫೬)

(ಗಂಡನ ಮನಸ್ಸನ್ನು ಅರಿತುಕೊಂಡು ಎಚ್ಚರಿಕೆಯಿಂದ ವರ್ತಿಸು, ಗಂಡನು ಏನೇ ಅನ್ನಲಿ ಕೋಪ ಮಾಡಿಕೊಳಬೇಡ, ನಿನಗೆ ದೊರೆತ ಮಹಾರಾಣಿ ಪಟ್ಟದಲ್ಲಿ ಅಧಿಕಾರಸ್ಥಳಾಗು, ಪುಣ್ಯವಂತರಾದ ಮಕ್ಕಳನ್ನು ಪಡೆ–ಎಂದು ಪ್ರೀತಿಯಿಂದ ತಬ್ಬಿಕೊಂಡು ಕಣ್ಣೀರನ್ನು ತಡೆಯಲಾರದೆ ಮಗಳ ಅಗಲಿಕೆಯಿಂದ ದುಃಖಿತರಾದರು.) ಸ್ವಲ್ಪ ದೂರ ಅಳಿಯ–ಮಗಳನ್ನು ಕಳಿಸಿ ಬರಲು ಹೊರಟಿದ್ದ ತಂದೆ–ತಾಯಿಯರಿಗೆ ಮಗಳನ್ನು ಬಿಟ್ಟು ಬರುವುದೇ ಕಷ್ಟ; ಅನಿವಾರ್ಯವಾಗಿ ವಾಪಸ್ಸು ಬರುವಾಗ:

ಪೊಡೆವಡುವಪ್ಪಿಕೊಳ್ವ, ನೆನೆಯುತ್ತಿರಿಮೆಂಬ, ಸಮಸ್ತವಸ್ತುವಂ
ಕುಡುವ, ಪಲರ್ಮೆಯಿಂ ಪರಸಿ ಸೇಸೆಯನಿಕ್ಕುವ, ಬುದ್ಧಿವೇಳ್ವ, ಕೈ
ಯೆಡೆ ನಿಮಗೆಂದೊಡಂಬಡಿಪ, ನಲ್ಲರಗಲ್ಕೆಗೆ ಕಣ್ಗನೀರ್ಗಳಂ
ಮಿಡುವ ಬಹುಪ್ರಕಾರ ಜನ ಸಂಕಟಮೊಪ್ಪಿದುದಾ ಪ್ರಯಾಣದೊಳ್ (ಆದಿಪು. ೪–೫೭)

(ಕಿರಿಯರು ಹಿರಿಯರಿಗೆ ನಮಸ್ಕರಿಸಿದರೆ, ಅವರು ಕಿರಿಯರನ್ನು ಮೇಲೆತ್ತಿ ಅಪ್ಪಿಕೊಳ್ಳುವ, ಮರೆಯಬೇಡಿ ಎಂದು ಕೇಳಿಕೊಳ್ಳುವ, ತಂದೆತಾಯಿ ಹಿರಿಯರು ಬುದ್ಧಿ ಹೇಳುವ, ಇವಳಿನ್ನು ನಿಮ್ಮ ವಸ್ತು ಒಪ್ಪಿಸಿದ್ದೇವೆ ಎಂದು ಹೇಳುವ, ಪ್ರೀತಿಪಾತ್ರರಾದ ವರ ಅಗಲಿಕೆಯಿಂದ ದುಃಖಿಸುವ ನಾನಾ ಬಗೆಯ ಸಂಕಟದ ಚಿತ್ರಗಳು ಆ ಪ್ರಯಾಣದ ಸನ್ನಿವೇಶದಲ್ಲಿ ಕಾಣಿಸಿದವು.) ಈ ಪ್ರಸಂಗವು ಎಷ್ಟು ಸಹಜವಾಗಿ ಚಿತ್ರಿತವಾಗಿದೆ! ಕೊನೆಯ ಪದ್ಯದಲ್ಲಿ ಆ ಸಂದರ್ಭದಲ್ಲಿ ವಿಧವಿಧವಾದ ಜನರು ನಡೆದುಕೊಳ್ಳುವ ರೀತಿಯನ್ನು ಎಷ್ಟು ಸಂಕ್ಷೇಪವಾಗಿ ಎಷ್ಟು ಸುಂದರವಾಗಿ ಕಣ್ಣಿಗೆ ಕಟ್ಟುವಂತೆ ಕವಿ ಚಿತ್ರಿಸಿದ್ದಾನೆ!

ಇದಕ್ಕಿಂತಲೂ ಸುಂದರವಾಗಿರುವುದು ವಜ್ರಜಂಘ–ಶ್ರೀಮತಿಯರ ಸಾವಿನ ಚಿತ್ರಣ, ಅವರಿಬ್ಬರೂ ಒಂದು ರಾತ್ರಿ ಏಕಾಂತದಲ್ಲಿ ಮಲಗಿರುತ್ತಾರೆ, ಅಂದು ಆ ಕೋಣೆಯ ಗವಾಕ್ಷಿಯನ್ನು ತೆರೆಯಲು ಮರೆತಿರುತ್ತಾರೆ, ಇವರು ನಿದ್ದೆ ಹೋಗಿದ್ದಾರೆ, ಕಾಳಾಗರು ಧೂಪವು ಕೋಣೆಯನ್ನೆಲ್ಲ ತುಂಬಿಕೊಂಡು ಉಸಿರಾಡುವುದಕ್ಕೆ ಆಸ್ಪದ ವಿಲ್ಲದೆ ಇಬ್ಬರೂ ಉಸಿರು ಕಟ್ಟಿ ಸಾಯುತ್ತಾರೆ, "ಕಾಳಾಗರು ಧೂಪಂ... ಕೊಂದುದು ಕೃಷ್ಣೋರಗಂ ಕೊಲ್ವವೊಲ್!" ಕಪ್ಪಾದ ಅಗರಿನ ಹೊಗೆಯು ಕೃಷ್ಣ ಸರ್ಪದ ಹಾಗೆ ಆ ಪ್ರೇಮಿಗಳನ್ನು ಕೊಲ್ಲುತ್ತದೆ, ಜೀವಿಸಿದ್ದಾಗ ಅತ್ಯಂತ ಅನ್ಯೋನ್ಯವಾಗಿ ಬಾಳಿದ ಅವರು ಸಾಯುವಾಗಲೂ ಜೊತೆಯಾಗಿಯೇ ಸತ್ತರು–ಈ ಮಾತಿನಲ್ಲಿಯೇ ಅವರಿಬ್ಬರು ಎಷ್ಟರ ಮಟ್ಟಿಗೆ ಒಬ್ಬರಿಗೊಬ್ಬರು ಹಚ್ಚಿಕೊಂಡಿದ್ದರೆಂಬುದು ತಿಳಿಯುತ್ತದೆ, ಪ್ರತಿನಿತ್ಯ ಸುವಾಸನೆಯ ಹೊಗೆಯನ್ನು ಹಾಕಿರಬೇಕೆಂದು ಇವರೇ ಆಳಿಗೆ ಹೇಳಿದ್ದರು. ಅವನು ಆ ದಿನ ಹೊಗೆ ಹಾಕಿದ, ಗಾಳಿ ಬರಲು ಅವಕಾಶವಿಲ್ಲದಂತೆ ಗವಾಕ್ಷಿಯನ್ನೂ ಮುಚ್ಚಿದ, ಇದೇ ಆ ದಂಪತಿಗಳ ಸಾವಿಗೆ ಕಾರಣವಾಯಿತು, ಬೆಳಿಗ್ಗೆ ಇತರರು ಕಂಡಾಗ ಅವರ ಶವಗಳು ಇದ್ದ ಬಗೆಯನ್ನು ಪಂಪನು ಚಿತ್ರಿಸುವ ರೀತಿಯಿದು:

ಬಿಡದೆ ಪೊಗೆ ಸುತ್ತೆ ತೋಳಂ
ಸಡಿಲಿಸದಾ ಪ್ರಾಣವಲ್ಲಭರ್ ಪ್ರಾಣಮನ್ ಅಂ
ದೊಡಗಳೆದರ್, ಓವರೋಪರೊ
ಳೊಡಸಾಯಲ್ ಪಡೆದರ್, ಇನ್ನವೇಂ ಸಯ್ಪೊಳವೇ? (ಆದಿಪು. ೫–೨೪)

(ಅವರಿಬ್ಬರನ್ನೂ ಹೊಗೆಯು ಆವರಿಸಿದ್ದರೂ ಆ ಪ್ರಾಣವಲ್ಲಭರು ಪರಸ್ಪರರನ್ನು ತಬ್ಬಿಕೊಂಡಿದ್ದರು, ಹಾಗೆಯೇ ಜೊತೆಯಲ್ಲಿಯೇ ಸಾವನ್ನಪ್ಪಿದರು, ಹೀಗೆ ಪ್ರೇಮಿಗಳು ಜೊತೆಯಲ್ಲಿ ಸಾಯುವುದಕ್ಕಿಂತಲೂ ಬೇರೆಯ ಪುಣ್ಯವೇನಿದೆ?) ಇಲ್ಲಿ ಜೊತೆಯಲ್ಲಿ ಪ್ರಾಣ ಬಿಟ್ಟ ಪ್ರೇಮಿಗಳನ್ನು 'ಪ್ರಾಣವಲ್ಲಭರ್' ಎಂದು ಕರೆದಿರುವುದು ಎಷ್ಟು ಸಮಂಜಸವಾಗಿದೆ! ಈ ಪ್ರಸಂಗವು ಕೇವಲ ಮೂರು ಶ್ಲೋಕಗಳಲ್ಲಿ ಮುಗಿದಿದೆ 'ಪೂರ್ವಪುರಾಣ'ದಲ್ಲಿ; ತನ್ನ ಸ್ವಂತ ಪ್ರತಿಭೆಯಿಂದ ಇದನ್ನು ಪಂಪನು ತುಂಬ ಸುಂದರವಾಗಿ ಮಾಡಿದ್ದಾನೆ.

'ಆದಿಪುರಾಣ'ದಲ್ಲಿನ ಇನ್ನೊಂದು ಸುಂದರವಾದ ಸನ್ನಿವೇಶವೆಂದರೆ ಆದಿನಾಥನ 'ಪರಿನಿಷ್ಕ್ರಮಣ' ಘಟನೆ. ಪುರುದೇವನು ಸಾಮಂತ ಸಮೂಹದೊಡನೆ ಸಭೆಯಲ್ಲಿರುತ್ತಾನೆ. ಅವನನ್ನು ನೃತ್ಯ ಕಾರ್ಯಕ್ರಮದ ಮೂಲಕ ಸಂತೋಷ ಪಡಿಸಬೇಕೆಂದು ಇಂದ್ರನು ಅದಕ್ಕೆ ಏರ್ಪಾಟು ಮಾಡುತ್ತಾನೆ. ಸುರಸಂಗೀತ ಪ್ರಾರಂಭವಾಯಿತು. ನೀಳಾಂಜನೆಯೆಂಬ ದೇವನರ್ತಕಿಯು ನಾಟ್ಯರಂಗಕ್ಕೆ ಬರುತ್ತಾಳೆ, ಅವಳು ಬಂದ ರೀತಿಯೆಂತಹುದು! ಗೀತವಾದ್ಯ ನೃತ್ಯಲೀಲೆಗಳು ಇವಳಿಗಿಲ್ಲದೆ ಬೇರೆಯವರಿಗೆ ಒಪ್ಪಲಾರದು, ಇವಳೇ ನಿಜವಾದ ಗಣಿಕಾ ತಿಲಕಗಳು, ತನ್ನ ನೃತ್ಯದಿಂದ ದಿನನಿತ್ಯವೂ ಇಂದ್ರನಿಗೆ ಮೆಚ್ಚುಗೊಳ್ಳುವವಳು

ಎನಿಸಿದ ನೀಳಾಂಜನೆ ಕ
ಬ್ಬಿನ ಬಿಲ್ಲಂ ಮಸೆದ ಮದನನಲರ್ಗಣೆ ಬರ್ದುಕಿ
ತ್ತೆನಿಸುತ್ತೊಳಪೊಕ್ಕಳ್ ಭೋಂ
ಕೆನೆ ನಿಖಿಳಜನಾಂತರಂಗಮಂ ರಂಗಮುಮಂ (ಆದಿಪು. ೯–೧೯)

(ಕಬ್ಬಿನ ಬಿಲ್ಲಿಗೆ ಕಾಮನ ಬಾಣವು ಸೇರಿ ಜೀವಂತ ಮೂರ್ತಿಯಾಯಿತೋ ಎನಿಸುವ ನೀಳಾಂಜನೆಯು ನಾಟ್ಯವನ್ನು ನೋಡಲು ಕುಳಿತಿದ್ದವರ ಅಂತರಂಗವನ್ನೂ ರಂಗವನ್ನೂ ಪ್ರವೇಶಿಸಿದಳು.) ಅವಳು ಬಂದ ಕ್ಷಣವೇ ಎಲ್ಲರ ಮನಸ್ಸನ್ನು ಹೊಕ್ಕಳು! ಸರಿ ನರ್ತನಕ್ಕೆ ಪ್ರಾರಂಭವಾಯಿತು. ನಾನಾ ರಸಭಾವಗಳು ಮಡುಗಟ್ಟಿದ ಭಂಗಿಗಳಲ್ಲಿ ನರ್ತಿಸಿದ ಅವಳು "ಅನಂಗಜಂಗಮಲತೆ"ಯಂತೆ (ಓಡಾಡುವಮನ್ಮಥ ಬಳ್ಳಿ) ಕಾಣಿಸಿದಳು. ತೆರೆ ಸರಿದಾಗ ಬೊಗಸೆಯಲ್ಲಿದ್ದ ಹೂಗಳನ್ನೆರಚಿದಳು, ನರ್ತನಕ್ಕೆ ಪ್ರಾರಂಭಿಸಿದಳು. ಅವಳಿಂದ ನರ್ತನಕ್ಕೆ ಒಂದು ಹೊಸ ಕಳೆ ಬಂತು.

ತಾಳದ ಲಯಮಂ ನಿಱಿಸಿ, ನೀ
ಳಾಳಕ ಹಾರದ ಪೊದಟ್ಟ ಮುತ್ತು ಎಂಬಿವು ಮುಂ
ಮೇಳಿಸಿ ಕೈಕೊಂಡುವು. ಲುಳಿ
ತಾಳಕಿ ಕೈ ಕೊಂಡಳೆಂಬುದೊಂದಚ್ಚರಿಯೇ! (ಆದಿಪು ೯–೨೪)

(ತಾಳದ ಲಯಕ್ಕೆ ಸರಿಯಾಗಿ ಅವಳ ಸೀರೆಯ ನಿರಿ, ಕಪ್ಪು ಕೂದಲು ಹಾಗೂ ಹಾರದ ಮುತ್ತುಗಳು-ಈ ಮೂರು ಸೇರಿ ಕುಣಿದವು, ಎಂದ ಮೇಲೆ ಅವಳು ಕುಣಿಯುವುದರಲ್ಲಿ ಏನಾಶ್ಚರ್ಯ!) ತನ್ನ ಹುಬ್ಬಿನ ಚಲನೆಯಿಂದ ಪಕ್ಕವಾದ್ಯಗಳವರಿಗೆ ಸೂಚನೆಯೀಯುತ್ತಿದ್ದಳು. ಅವಳು ನಾಟ್ಯರಂಗವನ್ನು ಹೊಕ್ಕು-ದೂರ ಸರಿದು ನರ್ತಿಸುತ್ತಿದ್ದ ರೀತಿಯದು:

> **ಪುಗುವ ಪೊರಮಡವ ತೆಱನೆರ್ದೆ**
> **ವುಗವಳ್ ಪೊರಮಡುವಳ್ ಎನಿಸೆ, ಪೊಸತಮರ್ದಂ ಮೇ**
> **ಗುಗುಟ್ಟಿಪಳೆನಿಸೆ ಮುಗುಳ್ನಗೆ**
> **ನಗೆಮೊಗದ ಬೆಡಂಗು ಅವಳ್ಗದೇನೋಪ್ಪಿದುದೋ** (ಆದಿಪು. ೯-೩೦)

(ರಂಗದಲ್ಲಿ ಬಂದು ಹೋಗುವುದರಿಂದ ಅವಳು ಜನರ ಮನಸ್ಸನ್ನು ಹೊಕ್ಕು ಬರುತ್ತಿದ್ದಾಳೆಂದೆನಿಸುತ್ತಿತ್ತು. ಅಮೃತವನ್ನೇ ಉಗುಳುತ್ತಿದ್ದಾಳೆಯೋ ಎನ್ನುವಂತಹ ಮುಗುಳ್ನಗು ಅವಳಿಗೆ ಶೋಭಾಯಮಾನವಾಗಿತ್ತು.) ಅವಳ ಕಣ್ಣಬೆಳಕು ದೆಸೆದೆಸೆಯಲ್ಲಿ ಬೆಳ್ದಿಂಗಳು ತುಂಬಿದಂತೆ ಮಾಡಿತು. ಅವಳ ನರ್ತಿಸುವ ರೀತಿಯು ಮನ್ಮಥನೆಂಬ ಮದ್ದಾನೆಯು ಜನರನ್ನು ಹಿಡಿದು ಈಡಾಡಿದ ಹಾಗೆ ಅಲುಗಾಡಿಸಿತು. ಅವಳ ನಾಟ್ಯದ ನಾನಾ ಭಂಗಿಗಳು ದೇವಾನುದೇವತೆಗಳು ಮೆಚ್ಚಿಕೆಗೂ ಒಳಗಾದವು. ಅಷ್ಟೆ ಅಲ್ಲ 'ಸುರಗಣಿಕಾ ನಾಟ್ಯರಸಂ ಪರಮನ ಚಿತ್ತಮುಮನೆಯ್ದೆ ರಂಜಿಸಿದುದು'. ಶುದ್ಧವಾದ ಸ್ಫಟಿಕದಲ್ಲಿ ಬೇರೆಯ ವಸ್ತುವಿನ ಕಾಂತಿಯು ರಂಜಿಸುವಹಾಗೆ ಅವಳ ನಾಟ್ಯವು ಆದಿನಾಥನಿಗೂ ಸಂತೋಷವೆನ್ನಿಸುತ್ತಿತ್ತು.

ಆದರೆ ಈ ಸುಂದರ ನಾಟ್ಯವು ದೀರ್ಘಕಾಲ ಮುಂದುವರೆಯಲಿಲ್ಲ ಬಳ್ಳಿಂಚಿನಂತಹ ಆ ಸುಂದರಿಯು ಮಿಂಚು ಹೊಳೆದು ಕಣ್ಮರೆಯಾಗುವ ಹಾಗೆ ರಂಗದಿಂದ ತನ್ನ ಆಯುಸ್ಸು ತೀರಿದ್ದರಿಂದ ಮರೆಯಾದಳು ರಸಭಂಗವಾಗ ಬಾರದೆಂದು ಇಂದ್ರನು ಅವಳ ಹಾಗೇ ಇನ್ನೊಂದು ಪಾತ್ರವನ್ನು ನಿಯಮಿಸಿ ನಾಟ್ಯವು ಮುಂದುವರಿಯವಂತೆ ಮಾಡಿದ. ಈ ರಹಸ್ಯ ಯಾರಿಗೂ ತಿಳಿಯಲಿಲ್ಲ. ಆದರೆ ಪುರುದೇವನಿಗೆ ತಿಳಿಯಿತು, ಜೊತೆಗೆ ಈ ದೇಹವು ಎಷ್ಟು ಕ್ಷಣಿಕವೆಂಬುದೂ ಅರ್ಥವಾಯಿತು: ಸಂಸಾರದ ಬಗ್ಗೆ ಅವನ ಹಿಂದಿನ ಜನ್ಮಗಳಲ್ಲಿ ಕ್ರಮಕ್ರಮವಾಗಿ ಪಡೆದು ಹೆಚ್ಚಿಸಿಕೊಂಡಿದ್ದ ವೈರಾಗ್ಯ ಇಲ್ಲಿ ತೀವ್ರವಾಗಿ ಕಾಣಿಸಿಕೊಂಡಿತು. ದೇಹ ಸೌಂದರ್ಯ ವೈಭವ ಯೌವನ ಹಣ ಸಂಪತ್ತು ಆಯಸ್ಸು ಇವುಗಳು ಮಿಂಚಿನ ಹೊಳಹು ಮೋಡದ ನೆರಳು ಕಾಮನಬಿಲ್ಲು ನೀರಿನ ಗುಳ್ಳೆಗಳಷ್ಟೇ ಕ್ಷಣಿಕವಾದವುಗಳೆಂಬ ಅರಿವಾಯಿತು. ಎಷ್ಟೋ ಜನ್ಮಗಳನ್ನೆತ್ತಿ ಭೋಗವನ್ನು ಅನುಭವಿಸಿದ್ದರೂ ತನಗಿನ್ನೂ ಇದರ ವ್ಯಾಮೋಹವು ನಾಶವಾಗಲಿಲ್ಲವಲ್ಲ ಎಂದು ದುಃಖವಾಯಿತು. ಈ ಪ್ರಸಂಗವು ಆದಿನಾಥನ ವೈರಾಗ್ಯಕ್ಕೆ ಈ ರೀತಿ ಕಾರಣವಾಯಿತು.

ಆದಿನಾಥನ ಭವಾವಳಿಗಳಲ್ಲಿ ಕವಿಯು ಭೋಗದ ನಿಷ್ಫಲತೆಯನ್ನು ಚಿತ್ರಿಸಿದ್ದರೆ, ಭರತ ಚಕ್ರವರ್ತಿಯ ಕತೆಯಲ್ಲಿ ಅಹಂಕಾರವು ಎಷ್ಟು ನಿಷ್ಫಲವಾದುದೆಂಬುದನ್ನು

ಚಿತ್ರಿಸಿದ್ದಾನೆ. ಆದಿನಾಥನ ಹಿರಿಯ ಮಗನಾದ ಭರತನು ಭೂಮಂಡಲವನ್ನೆಲ್ಲ ತನ್ನ ಚಕ್ರರತ್ನದ ಸಹಾಯದಿಂದ ಗೆಲ್ಲುತ್ತಾನೆ. ಅದನ್ನು ಮುಂದಿಟ್ಟುಕೊಂಡು ಹೊರಟ ಭರತನನ್ನು ಯಾರೂ ಪ್ರತಿಭಟಿಸಲೇ ಇಲ್ಲ, ಎಲ್ಲರೂ ತಾವಾಗಿಯೇ ಅವನ ಸಾಮಂತರಾಗಿರಲು ಒಪ್ಪಿ ಕಪ್ಪ ಕಾಣಿಕೆಗಳನ್ನರ್ಪಿಸಿದರು. ಹೀಗೆ ತನ್ನನ್ನು ಎದುರಿಸುವವರೇ ಇಲ್ಲವೆಂಬ ಹೆಮ್ಮೆಯಿಂದ ಅವನು ವೃಷಭಾಚಲಕ್ಕೆ ಬರುತ್ತಾನೆ. ಅಲ್ಲಿ ತನ್ನ ಗೆಲವಿನ ವಿಷಯವನ್ನು ಶಾಸನವಾಗಿ ಕೆತ್ತಿಸಬೇಕೆಂದು ಅಲ್ಲಿನ ಬಂಡೆಗಳನ್ನೆಲ್ಲ ನೋಡುತ್ತಾನೆ. ಆದರೆ ಎಲ್ಲ ಬಂಡೆಗಳ ಮೇಲೂ ಹಿಂದಿನ ರಾಜರ ಪ್ರತಾಪವು ವರ್ಣಿತವಾಗಿರುವುದನ್ನು ನೋಡಿ 'ಸೋರ್ದುದು ಕೊಳಗೊಂಡ ಗರ್ವರಸಂ!' ಆದರೂ ಸಂಪ್ರದಾಯಕ್ಕೆ ಕಟ್ಟುಬಿದ್ದು, ಒಂದು ಬಂಡೆಯ ಮೇಲಿದ್ದ ಬರಹವನ್ನು ಒರೆಸಿ ತನ್ನ ತನ್ನ ಹಿರಿಮೆಯನ್ನು ಬರೆಸುತ್ತಾನೆ.

ಹೀಗೆ ಜಗತ್ತನ್ನೇ ಗೆದ್ದು ಬಂದ ಭರತನಿಗೆ ತನ್ನ ತಮ್ಮಂದಿರಾದ ಬಾಹುಬಲಿ ಮುಂತಾದವರೇ ತಲೆಬಾಗಲಿಲ್ಲ. ಅವರನ್ನೆಲ್ಲ ತಹಬಂದಿಗೆ ತರಬೇಕೆಂದು ಭರತನಿಗೆ ಚಪಲ. ಇದನ್ನು ತಿಳಿದು ಬಾಹುಬಲಿಯ ಹೊರತು ಮಿಕ್ಕ ನೂರು ಮಂದಿ ತಮ್ಮಂದಿರು ಇದರಿಂದ ದುಃಖಿತರಾದರು. ಅವರು ಅಲೋಚಿಸಿದ ರೀತಿಯಿದು :

ಪಿರಿಯಣ್ಣಂ ಗುರು ತಂದೆಯೆಂದೆಱಗುವಂ, ಮುನ್ನೆಲ್ಲಮಿತೀಗಳಾ
ಳರಸೆಂಬೊಂದು ವಿಭೇದಮಾದೊಡೆಱಕಂ ಚಿಃ ಕಷ್ಟಮಲ್ತೇ, ವಸುಂ
ಧರೆಗಯ್ಯಂ ದಯೆಗೆಯ್ಯೆ ಮುನ್ ಪಡೆದುದರ್ಕೆ ಇಂತೀತನೊಳ್ ತೊಟ್ಟ ಕಿಂ
ಕರಭಾವಂ ನಮಗಕ್ಕಿಗೊಟ್ಟು ಮಡಗೂಟುಣ್ಬಂದಮಂ ಪೋಲದೇ?

(ಆದಿಪು. ೧೪–೩೨)

(ಹಿರಿಯ ಅಣ್ಣನು ಗುರುವಿಗೆ ತಂದೆಗೆ ಸಮಾನವೆಂದು ತಲೆಬಾಗ ಬೇಕಾದುದು ನ್ಯಾಯ. ಆದರೆ ತಾನು ಅರಸು ನಾವೆಲ್ಲ ಆಳುಗಳೆಂದು ಅಣ್ಣನು ಭೇದ ಮಾಡುವುದಾದರೆ ಅವನಿಗೆ ನಮಸ್ಕರಿಸಲಾಗದು. ತಂದೆಯು ದಯೆಯಿಟ್ಟು ಈ ರಾಜ್ಯವನ್ನು ಕೊಟ್ಟಿದ್ದಾನೆ. ಆದರೂ ಅಣ್ಣನಿಗೆ ಸೇವಕರಂತಿರುವುದೆಂದರೆ ಅಕ್ಕಿಯನ್ನು ಕೊಟ್ಟು ಎಂಜಲನ್ನು ತಿಂದಂತೆಯೇ.) ಹೀಗೆ ಆಲೋಚಿಸಿ ಅವರಿಗೆ ಬೇಸರವಾಗಿ ತಪಸ್ಸಿಗೆ ಹೊರಟು ಹೋಗುತ್ತಾರೆ. ಆದರೆ ಬಾಹುಬಲಿಯು ಮಾತ್ರ ಛಲದಿಂದ ಅಣ್ಣನನ್ನು ಎದುರಿಸಲು ಸಿದ್ಧವಾಗುತ್ತಾನೆ. ತನಗೆ ಅಧೀನನಾಗಿರಬೇಕೆಂದು ಭರತನು ಹೇಳಿ ಕಳುಹಿಸಿದ ದೂತನಿಂದ ಚಕ್ರವರ್ತಿಯ ವಿಜಯಗಳನ್ನು ಕೇಳಿದ ಬಾಹುಬಲಿಯು ಅಣ್ಣನನ್ನು ಅಪಹಾಸ್ಯ ಮಾಡುತ್ತಾನೆ :

ಭರತಂ ಪಟ್ಖಂಡ ಭೂವಲ್ಲಭನೆನೆ ಸಿರಿಯಂ ಗೆಂಟಱಿಕೊಳ್ ಕೇಳ್ದು ರಾಗಂ
ಬೆರಸಿರ್ಪ ನಣ್ಪೆ ಸಾಲ್ಗುಂ ಕರೆದೊಡೆ ಬೆಸನೇನೆಂಬ ಜೀಯೆಂಬ ದೇವಂ
ಬರಸೆಂಬಾಳೆಂಬ ದೈನ್ಯಕ್ಕೆಲವೊ ತನುವನಾನೊಡ್ಡುವಂತು ಆದಿದೇವಂ
ಪುರುದೇವಂ ದೇವದೇವಂ ಕುಡೆ ನೆಲಕ್ಕಾರೊಳಂ ಪಥಮುಂಟೇ?

(ಆದಿಪು. ೧೪–೭೭)

(ಅಣ್ಣನಾದ ಭರತ ಆರು ಖಂಡಗಳ ಅಧಿಪತಿಯಾದರೆ, ಅವನ ಐಶ್ವರ್ಯದ

ಸುದ್ದಿಯನ್ನು ದೂರದಿಂದಲೇ ಕೇಳಿ ಸಂತೋಷಪಡುವ ಈ ವಿಶ್ವಾಸವಷ್ಟೆ ನಮಗಿರಲಿ. ಆದರೆ, ಆತ ಕರೆದರೆ ಅಪ್ಪಣೆ ಮಾಡಿದರೆ. ಏನು ಸೇವೆ ಮಾಡಲಿ ಮಹಾಸ್ವಾಮಿ, ದೇವರೇ, ಅವನು ಅರಸ ನಾನು ಆಳು ಎಂಬ ದೈನ್ಯಕ್ಕೆ ನನ್ನ ಶರೀರವನ್ನು ತಗ್ಗಿಸುವವನು ನಾನಲ್ಲ. ಆ ತಂದೆಯಾದ ಆದಿದೇವ ಕೊಟ್ಟ ನೆಲಕ್ಕೆ ಯಾರ ಜತೆಗೆ ಯಾರಿಗೂ ಪಂಥವೇಕೆ?)

ಎಂದು ದೂತನಿಗೆ ಹೇಳುತ್ತಾನೆ, ಸರಿ. ಎರಡೂ ಪಕ್ಷಗಳವರು ಶೂರರೂ ಹಟವಾದಿಗಳೂ ಆದದ್ದರಿಂದ ಯುದ್ಧದ ಮೂಲಕವೇ ಸಮಸ್ಯೆಯ ಬಗೆಹರಿಯ ಬೇಕೆಂದಾಯಿತು. ಉಭಯ ಪಕ್ಷದ ಸಲಹೆಗಾರರು ಹೇಳಿದರು : ಭರತ-ಬಾಹುಬಲಿ ಗಳಿಬ್ಬರೂ ಚರಮದೇಹಧಾರಿಗಳು (ಇದೇ ಇವರ ಕೊನೆಯ ಹುಟ್ಟು.) ಇವರ ಯುದ್ಧವು ಅತಿಕ್ರೂರ ಗ್ರಹಗಳ ಕಾದಾಟದಂತೆ ಭಯಂಕರವಾಗಿರುತ್ತದೆ. ಅಪಾರ ಜನರು ಸಾಯಬೇಕಾಗುತ್ತದೆ. ಆದ್ದರಿಂದ ಇವರಿಬ್ಬರಲ್ಲಿ ಧರ್ಮ ಯುದ್ಧವಾಗಲಿ ಎಂದು ತೀರ್ಮಾನಿಸಿದರು.

ಈ ಅಣ್ಣ ತಮ್ಮಂದಿರಿಗೆ ಮೂರು ರೀತಿಯ ಯುದ್ಧಗಳಾಯಿತು. ದೃಷ್ಟಿಯುದ್ಧ, ಜಲಯುದ್ಧ, ಮಲ್ಲಯುದ್ಧ. ಬಾಹುಬಲಿ ಎತ್ತರದ ವ್ಯಕ್ತಿ ಅಣ್ಣ ಸ್ವಲ್ಪ ಕುಳ್ಳ. ಆದ್ದರಿಂದ ನಿಟ್ಟಿಸಿ ನೋಡುವ ದೃಷ್ಟಿಯುದ್ಧ, ಕೊಳದಲ್ಲಿ ನಿಂತು ನೀರನ್ನು ಒಬ್ಬರೊಬ್ಬರ ಮೇಲೆರಚುವ ಜಲಯುದ್ಧ, ಇಬ್ಬರೂ ಏಕಾಂಗಿಗಳಾಗಿ ಸೆಣೆಸಾಡುವ ಮಲ್ಲಯುದ್ಧ- ಮೂರರಲ್ಲಿಯೂ ಬಾಹುಬಲಿಯೇ ಗೆದ್ದ. ಎಲ್ಲ ಬಗೆಯಲ್ಲಿಯೂ ತನಗೆ ಸೋಲಾದು ದನ್ನು ಕಂಡ ಭರತನಿಗೆ ನಿರಾಶೆಯ ಕತ್ತಲೆ ಕವಿಯಿತು. ವಿವೇಕ ಮಸುಳಿಸಿತು. ಬಾಹುಬಲಿಯನ್ನು ಆಹುತಿ ತೆಗೆದುಕೊಳ್ಳುವಂತೆ ಚಕ್ರರತ್ನಕ್ಕೆ ಆಜ್ಞೆ ಮಾಡುತ್ತಾನೆ. ಆದರೆ ಆಶ್ಚರ್ಯ! ಬಾಹುಬಲಿಗೆ ತೊಂದರೆಯನ್ನುಂಟು ಮಾಡುವುದಿರಲಿ, ಅದು ಅವನಿಗೆ ಪ್ರದಕ್ಷಿಣೆ ಹಾಕಿ ಪಕ್ಕದಲ್ಲಿ ನಿಂತುಬಿಟ್ಟಿತು! ಇದನ್ನು ನೋಡಿದ ಜನರು ಭರತನು ಇಂಥ ನೀಚ ಕೆಲಸಕ್ಕೆ ಕೈಹಾಕಬಾರದಾಗಿತ್ತೆಂದು ಆಡಿಕೊಂಡರು. ಇದನ್ನು ಕೇಳಿ ಭರತನು ನಾಚಿ ನೀರಾಗಿಬಿಟ್ಟ. ಇದನ್ನು ಕಂಡು ಬಾಹುಬಲಿಗಾದ ಭಾವನೆಯು ಇನ್ನೂ ಆಶ್ಚರ್ಯಕರವಾದುದು. ತಮ್ಮನ್ನು ಗೆದ್ದನೆಂಬ ಹೊಟ್ಟೆಯುರಿಯಿಂದ ಅವನನ್ನ ಕೊಲ್ಲುವುದಕ್ಕೂ ತನ್ನ ಅಣ್ಣನು ಅಲೋಚಿಸಿದನಲ್ಲ. ಈ ರಾಜ್ಯ ವ್ಯಾಮೋಹವು ಎಷ್ಟು ಹೀನಾಯವಾದದ್ದು ಎನಿಸಿತು.

ಸೋದರರೊಳ್ ಸೋದರರಂ
ಕಾದಿಸುವುದು, ಸುತನಂ ತಂದೆಯೆಡೆಯೊಳ್ ಬಿಡ
ದುತ್ಪಾದಿಸುವುದು ಕೋಪಮನ್, ಆಳ
ವೀ ದೊರೆತನೆ ತೊಡರ್ವುದೆಂತು ರಾಜ್ಯಶ್ರೀಯೊಳ್ (ಆದಿಪು. ೧೪-೧೨೨)

(ಈ ರಾಜ್ಯ ಸಂಪತ್ತು ಬಹಳ ಕೆಟ್ಟದು : ಸಹೋದರರ ಮೇಲೆ ಸಹೋದರರನ್ನು, ಮಗನನ್ನು ತಂದೆಯ ಮೇಲೆ ಬಿಡದೆ ಎತ್ತಿ ಕಟ್ಟುತ್ತದೆ. ಇದರ ಸಾಮರ್ಥ್ಯ ಹೀಗಿರುವಾಗ, ಇಂಥ ರಾಜ್ಯಶ್ರೀಯನ್ನು ಹೇಗೆ ತಾನೇ ಒಪ್ಪಿ ಕೊಳ್ಳಲಿ?)

ಈ ನಶ್ವರವಾದ ರಾಜ್ಯವನ್ನು ಬಿಸುಟು ಶಾಶ್ವತವಾದ ಮೋಕ್ಷ ರಾಜ್ಯವನ್ನು ಸಂಪಾದಿಸುತ್ತೇನೆ ಎಂದು ನಿರ್ಧರಿಸಿದನು. ನಾಚಿಕೆ–ಅವಮಾನಗಳಿಂದ ಕುಗ್ಗಿ ತಲೆತಗ್ಗಿಸಿ ನಿಂತಿದ್ದ ಅಣ್ಣನ ಕಡೆಗೆ ನೋಡಿ ಬಾಹುಬಲಿಯು ಹೇಳಿದ :

ನೆಲಸುಗೆ ನಿನ್ನ ವಕ್ಷದೊಳೆ ನಿಶ್ಚಳಮೀ ಭಟಖಡ್ಗಮಂಡಲೋ
ತ್ಪಲವನ ವಿಭ್ರಮಭ್ರಮರಿಯಪ್ಪ ಮನೋಹರಿ ರಾಜ್ಯಲಕ್ಷ್ಮಿ, ಭೂ
ವಲಯಮನಯ್ಯನಿತ್ತುದುಮನಾಂನಿನಗಿತ್ತೆನ್, ಇದೇವುದಣ್ಣ ನೀ
ನೊಲಿದ ಲತಾಂಗಿಗಂ ಧರೆಗಮಾಟಿಸಿದಂದು ನೆಗೞ್ತೆ ಮಾಸದೇ? (ಆದಿಪು. ೧೪–೧೩೦)

(ವೀರರ ಖಡ್ಗಗಳ ಸಮೂಹವೆಂಬ ನೈದಿಲೆಯ ವನಗಳಲ್ಲಿ ಚಂಚಲವಾದ ಭ್ರಮರದಂತೆ ವಿಹರಿಸುವ ಈ ಮನೋಹರಿಯಾದ ರಾಜ್ಯಲಕ್ಷ್ಮಿ ನಿನ್ನ ಎದೆಯಲ್ಲಿ ನಿಶ್ಚಲವಾಗಿ ನೆಲಸಲಿ : ನಮ್ಮಿಬ್ಬರಿಗೂ ತಂದೆಯಾದ ಆದಿದೇವನು ಕೊಟ್ಟ ರಾಜ್ಯವನ್ನೇ ನಿನಗೊಪ್ಪಿಸುತ್ತಿದ್ದೇನೆ : ಇದೇನು ಮಹಾ ದೊಡ್ಡದು! ನೀನು ಪ್ರೀತಿಸಿದ ಹೆಣ್ಣಿಗೆ ಹಾಗೂ ರಾಜ್ಯಕ್ಕೆ ಆಸೆ ಪಟ್ಟರೆ ನನ್ನ ಕೀರ್ತಿಗೆ ಕಳಂಕವಲ್ಲದೆ!) ಎಂದು ಹೇಳಿ ಯುದ್ಧ ಮಾಡಿ ಗೆದ್ದಿದ್ದ ರಾಜ್ಯವನ್ನು ಭರತನಿಗೇ ಕೊಟ್ಟು ಬಿಡುತ್ತಾನೆ.

ಈ ಪ್ರಸಂಗವು ಪಂಪನ ಶ್ರೇಷ್ಠವಾದ ಪ್ರತಿಭೆಗೆ ನಿದರ್ಶನವಾಗಿದೆ. ಈ ಇಬ್ಬರ ಪಾತ್ರವನ್ನು ಕವಿ ಅತ್ಯಂತ ಸುಂದರವಾಗಿ ಚಿತ್ರಿಸಿದ್ದಾನೆ. ತನ್ನನ್ನು ಎದುರಿಸುವರೇ ಇಲ್ಲ ವೆಂದು ಅಹಂಕಾರಗೊಳ್ಳುವ ಭರತ, ಅವನನ್ನೇ ಗೆದ್ದರೂ ಉದಾರವಾಗಿ ರಾಜ್ಯವನ್ನು ಅಣ್ಣನಿಗೆ ದಾನ ಮಾಡಿಬಿಡುವ ಬಾಹುಬಲಿ–ಇವರಿಬ್ಬರ ನಡವಳಿಕೆಯು ನಮ್ಮ ಕಣ್ಣ ಮುಂದೆ ನಿಲ್ಲುತ್ತದೆ. ಈ ರೀತಿ ಪಂಪನ 'ಆದಿಪುರಾಣ'ವು ಪುರಾಣದ ಲಕ್ಷಣವನ್ನು ಅನುಸರಿಸಿ ರಚಿತವಾಗಿದ್ದರೂ, ಅದನ್ನು ಬರೆದವನು ಶ್ರೇಷ್ಠ ಕವಿಯಾದ್ದರಿಂದ ಅಲ್ಲಲ್ಲಿ ಉತ್ತಮ ಕಾವ್ಯ ಗುಣಗಳಿಂದ ಕೂಡಿದೆ. ಪಂಪನ ಗುರಿಯೂ ಇದೇ. "ನೆಗೞ್ದಿ ಪುರಾಣದೊಳಱಿವುದು ಕಾವ್ಯಧರ್ಮಮಂ ಧರ್ಮಮುಮಂ" ಎಂಬ ಕವಿಯ ಉದ್ದೇಶವಿಲ್ಲಿ ಸಫಲವಾಗಿದೆ. ಹೀಗೆ "ಆದಿ ಪುರಾಣ ರಚನೆಯಲ್ಲಿ ಪಂಪನು ಕೈ ಕಟ್ಟಿಸಿಕೊಂಡು ಪಟ್ಟುಗಳನ್ನು ತೋರಿಸುವ ಗರಡಿಯಾಳಿನಂತೆ ಕಾಣಿಸುತ್ತಾನೆ."[೧] ಯಾದರೂ "ಇದರಲ್ಲಿ ಪಂಪನು ಜೈನಧರ್ಮದ ಒಳ ತಿರುಳನ್ನು ರಮ್ಯವಾಗಿ ನಿರೂಪಿಸಿದ್ದಾನೆ."[೨]

ಪಂಪ ಭಾರತ

ಪಂಪನಿಗಿಂತ ಮುಂಚೆಯೇ ಕನ್ನಡದಲ್ಲಿ ಮಹಾಭಾರತ ಕತೆಯನ್ನೊಳಗೊಂಡ ಕಾವ್ಯಗಳು ರಚಿತವಾಗಿದ್ದಂತೆ ತೋರುತ್ತದೆ. ಆದರೆ ಯಾವ ಕಾವ್ಯವೂ ದೊರಕಿಲ್ಲ. ಆದರೆ ಆ ಕಾವ್ಯಗಳಲ್ಲಿ ಯಾವುದೂ ಇಡೀ ಭಾರತದ ಕತೆಯನ್ನು ಹೇಳಿದಂತಹವು ಗಳಲ್ಲ. ವ್ಯಾಸಭಾರತದ ಕತೆಯ ಒಟ್ಟು ಸ್ವರೂಪವನ್ನು ತೋರಿಸುವ ಕಾವ್ಯಗಳಾವುವೂ ಕನ್ನಡದಲ್ಲಿಲ್ಲ; ಅಂತಹ ಕೃತಿಯನ್ನು ರಚಿಸ ಬೇಕಾದರೆ ಪಂಪನೆ ರಚಿಸಬೇಕು ಎಂದು ಪಂಡಿತರೆಲ್ಲ ಹೇಳಲು ತಾನು ಈ ಕಾವ್ಯವನ್ನು ಬರೆದಂತೆ ಪಂಪನೇ ಹೇಳಿಕೊಂಡಿ ದ್ದಾನೆ. ವ್ಯಾಸನ ಭಾರತವಲ್ಲದೆ ಜೈನ ಸಂಪ್ರದಾಯದ ಭಾರತದ ಕತೆಯನ್ನು

ಅನುಸರಿಸದೆ ವ್ಯಾಸಭಾರತದ ಕತೆಯನ್ನೇ ಅನುಸರಿಸಿ ತನ್ನ ಕಾವ್ಯವನ್ನು ಬರೆದಿರುವುದು ಅವನ ವಿಶಾಲ ಮನೋಭಾವವನ್ನು ತೋರಿಸುತ್ತದೆ. ಹೀಗೆ ಮಾಡಲು ಅವನಿಗೆ ಕೆಲವು ಕಾರಣಗಳೂ ಇದ್ದುವು. ತಾನು ಆದಿಪುರಾಣದಲ್ಲಿ ಜಿನಾಗಮವನ್ನೂ ಪಂಪ ಭಾರತದಲ್ಲಿ ಲೌಕಿಕವನ್ನೂ ಬೆಳಗಿರುವೆನೆಂದು ಕವಿ ಕಾವ್ಯದ ಕೊನೆಯಲ್ಲಿ ಹೇಳಿಕೊಳ್ಳುತ್ತಾನೆ. ಎಂದರೆ ಭಾರತವು ಪಂಪನಿಗೆ ಲೌಕಿಕ ಕಾವ್ಯ, ಅಲ್ಲಿ ಜೈನಧರ್ಮದ ಶ್ರೇಷ್ಠತೆಯನ್ನಾಗಲೀ ಅದರ ಧಾರ್ಮಿಕ ವಿವರಣೆಗಳನ್ನಾಗಲೀ ನೀಡುವುದು ಅವನಿಗೆ ಮುಖ್ಯವಲ್ಲ. ಆ ಕೆಲಸವನ್ನು 'ಆದಿಪುರಾಣ'ದಲ್ಲಿ ಮಾಡಿದ್ದಾನೆ. ಇಲ್ಲಿನ ಅವನ ಉದ್ದೇಶವೆಂದರೆ ಅರ್ಜುನನೊಡನೆ ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಮೇಳೈಸಿ ಹೇಳುವುದು : ಭಾರತದ ಕತೆಯನ್ನು ಹೇಳುವುದರೊಡನೆ ಅರಿಕೇಸರಿಯ ಗುಣ–ಪ್ರತಾಪಗಳನ್ನು ವರ್ಣಿಸುವುದು ಅವನ ಗುರಿ. ಅದಕ್ಕೇ ತನ್ನ ಭಾರತವನ್ನು ಅವನು 'ಸಮಸ್ತಭಾರತ'ವೆಂದು ಕರೆದುಕೊಂಡಿದ್ದಾನೆ. ಈ ಮಾತಿಗೆ ಎರಡು ಅರ್ಥಗಳಿವೆ : ವ್ಯಾಸ ಮಹರ್ಷಿಯ ಮಹಾಭಾರತದ ಕತೆಯನ್ನೆಲ್ಲ ಹೇಳಿರುವುದರಿಂದ ಇದು 'ಸಮಸ್ತಭಾರತ'. "ಅಲ್ಲದೆ 'ಸಮಸ್ತಭಾರತ' ಎಂಬ ಪದದಲ್ಲಿ ಇನ್ನೊಂದು ಅರ್ಥವೂ ಅಡಕವಾಗಿದೆಯೆಂದು ಕೆಲವು ವಿದ್ವಾಂಸರ ಅಭಿಪ್ರಾಯ 'ಸಮಾಸ' ಎಂದರೆ ಕೂಡಿಸುವುದು: ಈ ಕಾವ್ಯದಲ್ಲಿ ಭಾರತ ಕಥೆಯ ಜೊತೆಗೆ ತನ್ನ ಪ್ರಭುವಿನ ಚರಿತ್ರೆಯೂ ಕೂಡಿ ಬಂದಿದೆಯೆಂಬುದನ್ನೂ ಪಂಪನು ಈ ಮಾತಿನಿಂದ ಸೂಚಿಸಿರಬಹುದು"[೩] ಎಂಬ ಮುಳಿಯ ತಿಮ್ಮಪ್ಪಯ್ಯನವರ ಮಾತು ಗಮನಾರ್ಹ.

ವ್ಯಾಸಭಾರತವನ್ನು ಸಂಕ್ಷೇಪವಾಗಿಯೂ ಸಮರ್ಪಕವಾಗಿಯೂ ಹೇಳುವುದು ಸುಲಭವಲ್ಲ. ಪಂಪನಿಗೂ ಇದು ತಿಳಿದಿದೆ. ಆದ್ದರಿಂದಲೇ 'ವ್ಯಾಸ ಮುನಿಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿವ್ಯಾಸನೆನ್ ಎಂಬ ಗರ್ವಮೆನಗಿಲ್ಲ' (ವ್ಯಾಸಮುನಿವರ್ಯರ ವಿಶಾಲವಾದ ಕಾವ್ಯ ಸಮುದ್ರವನ್ನು ಸುಲಭವಾಗಿ ಈಸಬಲ್ಲೆ, ನಾನು ವ್ಯಾಸನಷ್ಟೇ ಪ್ರತಿಭಾವಂತ ಎಂಬ ಗರ್ವವು ನನಗಿಲ್ಲ) ಎಂದು ವಿನಯದಿಂದ ಹೇಳಿಕೊಂಡಿದ್ದಾನೆ. ಪಾತ್ರರಚನೆ ಹಾಗೂ ಸನ್ನಿವೇಶ ಚಿತ್ರಣಗಳಲ್ಲಿ ಅವನು ವ್ಯಾಸನನ್ನು ಹಿಂಬಾಲಿಸಿದ್ದಾನೆ. ಆದರೂ ಅವನಿಗೆ ಈ ಕಾವ್ಯದಿಂದ ಮತ್ತೊಂದು ಉದ್ದೇಶವನ್ನು ಸಾಧಿಸುವ ಗುರಿಯಿತ್ತು: ಅದೆಂದರೆ ಅರಿಕೇಸರಿಯನ್ನು ಅರ್ಜುನನ ನೆವದಿಂದ ಹೊಗಳುವುದು. ಅದಕ್ಕಾಗಿ ಅವನು ಕೆಲವು ವ್ಯತ್ಯಾಸಗಳನ್ನು ತನ್ನ ಕಥಾಸರಣಿಯಲ್ಲಿ ಮಾಡಿಕೊಂಡಿದ್ದಾನೆ. ಅವುಗಳಲ್ಲಿ ಮುಖ್ಯವಾದುವು ಇವು; (i) ಇಲ್ಲಿಯ ಕಥಾನಾಯಕ ಧರ್ಮರಾಯನಲ್ಲ ಅರ್ಜುನ, ಆದ್ದರಿಂದಲೇ ಭಾರತದ ಯುದ್ಧವಾದ ಮೇಲೆ ಪಟ್ಟಾಭಿಷೇಕವಾಗುವುದು ಅರ್ಜುನ ಸುಭದ್ರೆಯರಿಗೇ ಹೊರತು ವ್ಯಾಸ ಭಾರತದಲ್ಲಿರುವಂತೆ ಧರ್ಮರಾಯ–ದ್ರೌಪದಿಯರಿಗಲ್ಲ. (ii) ಅರ್ಜುನನು ಸುಭದ್ರೆಯನ್ನು ಮದುವೆಯಾಗುವುದು ಅವಳನ್ನು ಸನ್ಯಾಸಿಯ ವೇಷದಲ್ಲಿ ಅಪಹರಿಸುವುದರ ಮೂಲಕವಲ್ಲ, ಪರಸ್ಪರ ಅನುರಾಗದಿಂದ ಕೃಷ್ಣನ ಸಹಾಯದಿಂದ ಬಲರಾಮನಿಗೆ ತಿಳಿಯದಂತೆ ಇಂದ್ರಪ್ರಸ್ಥಕ್ಕೆ ಅವರು ಹೋಗುತ್ತಾರೆ. (iii) ಕೃಷ್ಣನು ಶಿಶುಪಾಲನನ್ನು ಕೊಲ್ಲುವುದು ತನ್ನ ಚಕ್ರದಿಂದಲ್ಲ, ಅರ್ಘ್ಯವನ್ನು ಕೊಟ್ಟ ತಟ್ಟೆಯಿಂದ (iv) ದುರ್ಯೋಧನನು

ವೈಶಾಂಪಾಯನ ಸರೋವರದಲ್ಲಿ ಅಡಗಿ ಕುಳಿತದ್ದು ಭೀಷ್ಮರ ಸಲಹೆಯಂತೆ ಕಾಲವಂಚನೆ ಮಾಡಲು, ವ್ಯಾಸಭಾರತದಲ್ಲಿರುವಂತೆ ಭಯದಿಂದಲ್ಲ. ಅಲ್ಲದೆ ಕೆಲವು ಪಾತ್ರಗಳ ಹೆಸರನ್ನೂ ಅವನು ವ್ಯತ್ಯಾಸ ಮಾಡಿದ್ದಾನೆ. ಹೀಗೆ ವ್ಯತ್ಯಾಸಮಾಡಿದ್ದರಿಂದ ಸ್ವಲ್ಪ ತೊಡಕೂ ಉಂಟಾಯಿತೆನ್ನಿ. ಭಾರತದ ಕೇಂದ್ರ ಘಟನೆಯೆಂದರೆ ದ್ರೌಪದಿಗೆ ದುರ್ಯೋಧನ–ದುಶ್ಯಾಸನರು ಮಾಡಿದ ಅವಮಾನ, ಮುಡಿಯನ್ನು ಬಿಚ್ಚಿದ್ದು ಈ ಘಟನೆಯನ್ನು ಮಹತ್ವವನ್ನು ದುಶ್ಯಾಸನನ್ನು ಕೊಂದು ಭೀಮನ ಬಾಯಲ್ಲಿ ಕವಿಯೇ ಹೇಳಿಸುತ್ತಾನೆ. :

> **ಇದಱೊಳ್ ಶ್ವೇತಾತಪತ್ರಸ್ಥಗಿತ ದಶಾದಿಶಾಮಂಡಲಂ ರಾಜಚಕ್ರಂ**
> **ಪುದಿದಟ್ಟೂಡಿತ್ತು ಅಡಂಗಿತ್ತಿದಱೊಳ್ ಕುರುರಾಜಾನ್ವಯಂ; ಮತ್ ಪ್ರತಾಪ**
> **ಕ್ಕಿದಱಿಂದಂ ನೋಡಗುರ್ವುರ್ವಿದುದು: ಇದುವೆ ಮಹಾಭಾರತಕ್ಕಾದಿಯಾಯ್ತು**
> **ಬ್ಜದಳಾಕ್ಷಿ ಪೇಟಿ, ಸಾಮಾನ್ಯಮೇ ಬಗೆಯ ಭವತ್ಕೇಶಪಾಶಪ್ರಪಂಚಂ**
>
> (ಪಂ. ಭಾ. ೧೨–೧೫೬)

(ನಿನ್ನ ತಲೆಯ ಕೂದಲೇನು ಸಾಮಾನ್ಯವೇ, ಇದರಲ್ಲಿ ಸಮಸ್ತ ಭೂಮಂಡಲವೆನ್ನಲ್ಲ ವ್ಯಾಪಿಸಿರುವ ಸಾಮ್ರಾಜ್ಯವು ಸೇರಿ ನಾಶವಾಯಿತು ಇದರಲ್ಲಿ ಕುರುವಂಶವೇ ಅಡಗಿದೆ. ಇರಿಂದ ನನ್ನ ಕಾರ್ಯಕ್ಕೆ ಬಿರುಸುಂಟಾಯಿತು, ಇದು ಮಹಾಭಾರತ ಯುದ್ಧಕ್ಕೆ ಕಾರಣವಾಯ್ತು.) ಎಂದರೆ ದ್ರೌಪದಿಯ ಕಷ್ಟ–ನಿಷ್ಟುರಗಳೇ ಮಹಾಭಾರತಕ್ಕೆ ಕಾರಣ. ಆದರೂ ಪಂಪಭಾರತದಲ್ಲಿ ಪಟ್ಟದ ರಾಣಿಯಾಗುವುದು ಹೆಚ್ಚು ಕಣ್ಣಿಗೇ ಬೀಳದ ಸುಭದ್ರೆ! ಅರ್ಜುನನೊಡನೆ ಅರಿಕೇಸರಿಯನ್ನು ಮೇಳೈಸಿದುದರಿಂದ ಪಂಪನಿಗೆ ದ್ರೌಪದಿಯನ್ನು ಪಂಚವಲ್ಲಭೆಯನ್ನಾಗಿ ಮಾಡಲು ಇಷ್ಟವಾಗಲಿಲ್ಲ. ಆದ್ದರಿಂದ ಅವಳು ಅರ್ಜುನನ ಹೆಂಡತಿ ಮಾತ್ರ ಎನ್ನುವಂತೆ ವ್ಯತ್ಯಾಸಮಾಡಿದ. ಆದರೆ ದ್ರೌಪದಿಯು ತನ್ನ ಕಷ್ಟ ಕಾಲದಲ್ಲಿ ಮೊರೆಹೋಗುವುದು ಭೀಮನನ್ನು, ಅವಳ ಕಷ್ಟವನ್ನು ಕಂಡು ಹೆಚ್ಚು ಮರುಗುವವನೂ ಅವಳಿಗೆ ಸಹಾಯಮಾಡುವವನೂ ಭೀಮನೇ! ಹೀಗೆ ಕೆಲವೆಡೆಗಳಲ್ಲಿ ಈ ಮಾರ್ಪಾಡುಗಳನ್ನು ಪಂಪನನ್ನೇ ಗೊಂದಲಕ್ಕೀಡುಮಾಡಿದೆ. ಅವನು ಈ ವ್ಯತ್ಯಾಸಗಳನ್ನು ತರಲು ಕಾರಣ ಆಗಲೇ ನೋಡಿದಂತೆ ಅರ್ಜುನ–ಅರಿಕೇಸರಿಗಳ ಸಮೀಕರಣ. ಆದ್ದರಿಂದಲೇ ಪಂಪನು ತನ್ನ ಕಾವ್ಯಕ್ಕೆ ಕೊಟ್ಟ ಹೆಸರು 'ವಿಕ್ರಮಾರ್ಜುನ ವಿಜಯ' ಎಂದು.

'ವಿಕ್ರಮಾರ್ಜುನ ವಿಜಯ'ವು ಹದಿನಾಲ್ಕು ಆಶ್ವಾಸಗಳಲ್ಲಿ ಸಾಗುವ ಕಾವ್ಯ. ಹದಿನಾಲ್ಕನೆಯ ಆಶ್ವಾಸದ ಐವತ್ತೆರಡನೆಯ ಪದ್ಯವಾದ ಮೇಲಿನ ವಚನದಲ್ಲಿ ಪಂಪನೇ ತಾನು ಭಾರತದಲ್ಲಿ ಹೇಳಿರುವ ವಿಷಯಗಳನ್ನು ಪಟ್ಟಿ ಮಾಡುತ್ತಾನೆ. ವಿವಿಧ ಅಧ್ಯಾಯಗಳಲ್ಲಿ ಆ ವಿಷಯಗಳು ಹೀಗೆ ಬರುತ್ತವೆ: (೧) ಅರ್ಜುನನ ಜನನ (೨) ಪಾಂಡವರು ವನವಾಸಕ್ಕೆ ಹೊರಡುವುದು (೩) ಅರಗಿನ ಮನೆಯನ್ನು ಸುಡುವುದು, ಹಿಡಿಂಬನ ವಧೆ, ಬಕಾಸುರನ ವಧೆ ದ್ರೌಪದೀಸ್ವಯಂವರ ಮತ್ತು ವಿವಾಹ (೪) ಯುಧಿಷ್ಠಿರನ ಪಟ್ಟಬಂಧ, ಇಂದ್ರಪ್ರಸ್ಥನಗರಕ್ಕೆ ಬರುವುದು, ಅರ್ಜುನನ ದಿಗ್ವಿಜಯ, ದ್ವಾರಾವತೀ ಪ್ರವೇಶ (೫) ಸುಭದ್ರಾಹರಣ, ಅವಳೊಡನೆ ಅರ್ಜುನನ

ವಿವಾಹ, ಖಾಂಡವ ವನವನ್ನು ಅಗ್ನಿ ಸುಟ್ಟ ಪ್ರಸಂಗ (೬) ಮಯದರ್ಶನ, ನಾರದಾಗಮನ, ಜರಾಸಂಧವಧೆ, ರಾಜಸೂಯಯಾಗ, ಶಿಶುಪಾಲವಧೆ, ದ್ಯೂತ ಪರಿಕರ (೭) ದ್ರೌಪದಿಯ ಮಾನಭಂಗ, ವನಪ್ರವೇಶ, ಕಿಮ್ಮೀರವಧೆ, ಕಾಮ್ಯಕನವ ಪ್ರವೇಶ, ಸೈಂಧವನ ಸೆರೆ, ಚಿತ್ರಾಂಗದನೊಡನೆ ಯುದ್ಧ, ಕಿರಾತ ದೂತನ ಆಗಮನ, ದ್ರೌಪದೀವಾಕ್ಯ, ಇಂದ್ರನಿಂದ ದಿವ್ಯಾಸ್ತ್ರಗಳನ್ನು ಪಡೆದದ್ದು, ಇಂದ್ರಕೀಲದೆಡೆಗೆ ಹೊರಟದ್ದು (೮) ಈಶ್ವರಾರ್ಜುನ ಯುದ್ಧ ದಿವ್ಯಾಸ್ತ್ರಲಾಭ, ಅರ್ಜುನ ಇಂದ್ರಲೋಕಕ್ಕೆ ಹೋದದ್ದು, ನಿವಾತಕಚರವಧೆ, ಕಾಳಕೇಯ ಪೌಲೋಮರ ವಧೆ, ಸೌಗಂಧಿಕ ಕಮಲವನ್ನು ತಂದದ್ದು, ಜಟಾಸುರವಧೆ, ಮಾಯಾ ಗಜದಿಂದ ಅರಣೀಹರಣ, ವಿರಾಟಪುರಕ್ಕೆ ಬಂದದ್ದು, ಕೀಚಕವಧೆ, ದಕ್ಷಿಣೋತ್ತರ ಗೋಗ್ರಹಣ (೯) ಅಭಿಮನ್ಯು ವಿವಾಹ, ಮಂತ್ರಾಲೋಚನ, ದೂತಕಾರ್ಯ, ಕುರುಕ್ಷೇತ್ರಪ್ರಯಾಣಂ (೧೦) ಭೀಷ್ಮ ಕರ್ಣ ವಿವಾದ, ಯುದ್ಧ, ಶ್ವೇತವಧೆ, ಭೀಷ್ಮರ ಶರಶಯನ (೧೧) ದ್ರೋಣಾಭೀಷೇಕ, ಅಭಿಮನ್ಯುವಧೆ, ಸೈಂಧವವಧೆ (೧೨) ಘಟೋತ್ಕಚವಧೆ, ದ್ರೋಣನು ತನ್ನ ಆಯುಧ ವನ್ನು ಬಿಸುಟದ್ದು. ಅಶ್ವತ್ಥಾಮ ಕರ್ಣವಿವಾದ, ಕರ್ಣಾಭಿಷೇಕ, ಸಂಸಪ್ತಕವಧೆ, ದುಶ್ಯಾಸನವಧೆ, ದ್ರೌಪದಿಯ ಮುಡಿಯನ್ನು ಕಟ್ಟಿದ್ದು, ಕರ್ಣ–ಅರ್ಜುನರ ಕಾಳಗ, ಕರ್ಣನ ಸಾವು (೧೩) ಶಲ್ಯಾಭಿಷೇಕ ಶಲ್ಯನ ಸಾವು ಭೀಮ–ದುರ್ಯೋಧನರ ಗದಾಯುದ್ಧ, ದುರ್ಯೋಧನ ವಧೆ, ಉಪಪಾಂಡವರ ಸಾವು (೧೪) ಸ್ತ್ರೀಪರ್ವ, ಅರ್ಜುನನ ಪಟ್ಟಾಭಿಷೇಕ.

ಪಂಪನು ಎಲ್ಲ ಪ್ರಸಂಗಗಳನ್ನೂ ತುಂಬ ಸಂಕ್ಷೇಪವಾಗಿಯಾದರೂ ಶ್ರೇಷ್ಠವಾದ ರೀತಿಯಲ್ಲಿಯೂ ಹೇಳಿದ್ದಾನೆ. ಒಂದು ಲಕ್ಷ ಶ್ಲೋಕಗಳಿರುವ ವ್ಯಾಸ ಭಾರತವನ್ನು ಸಂಗ್ರಹವಾಗಿ ಹೇಳುವುದು ಸುಲಭದ ವಿಷಯವಲ್ಲ. ಜೊತೆಗೆ ತೀ.ನಂ.ಶ್ರೀ. ಅವರು ಹೇಳುವಂತೆ "ವಿಕ್ರಮಾರ್ಜುನ ವಿಜಯವು ಕನ್ನಡದ ಕನ್ನಡಿಯಲ್ಲಿ ಚಿಕ್ಕದಾಗಿ ಬಿದ್ದ ವ್ಯಾಸಭಾರತದ ನೆರಳಲ್ಲ: ಅಲ್ಲಿಯ ಚಿನ್ನವನ್ನು ಶೋಧಿಸಿ ತಂದು ಹೊಸದಾಗಿ ಎರಕ ಹೊಯ್ದು ಒಪ್ಪವಿಟ್ಟು ನಿಲ್ಲಿಸಿದ ನೂತನ ಪುತ್ಥಳಿ ಅದು." ಹೀಗೆ ಮಾಡುವುದಕ್ಕಾಗಿ ದೀರ್ಘವಾದ ಪ್ರಸಂಗವನ್ನು ಅತ್ಯಂತ ಕಡಿಮೆ ಅವಕಾಶದಲ್ಲಿ ಪಂಪನು ಹೇಳಿ ಮುಗಿಸಬಲ್ಲ. ಹದಿನೆಂಟು ಅಧ್ಯಾಯಗಳ, ಏಳುನೂರು ಶ್ಲೋಕಗಳ ಭಗವದ್ಗೀತೆಯ ಪ್ರಸಂಗವನ್ನು ಪಂಪನು ಹಿತಮಿತವಾಗಿ ಒಂದೇ ಒಂದು ಪದ್ಯ ಮತ್ತು ಕೆಲವು ಸಾಲುಗಳ ಗದ್ಯದಲ್ಲಿ ಹೇಳಿ .ಮುಗಿಸುತ್ತಾನೆ. ಅರ್ಜುನನ ಮನಸ್ಸಿನಲ್ಲಿ ತನ್ನ ದಾಯಾದಿ ಗಳನ್ನು ಕೊಲ್ಲಬೇಕಲ್ಲ ಎಂಬ ಅಳುಕು ಕಾಣಿಸಿಕೊಂಡಾಗ, ಅವನ ಮನಸ್ಸಿನ ವ್ಯಾಮೋಹವನ್ನು ಕಳೆಯಲು ಶ್ರೀ ಶ್ರೀ ಕೃಷ್ಣನು ತನ್ನ ದಿವ್ಯಸ್ವರೂಪವನ್ನು ತೋರಿಸಿ ಹೀಗೆ ಹೇಳುತ್ತಾನೆ :

ಅದಿರದಿದಿರ್ಚಿ ತಳ್ತಿಱಿಯಲೀ ಮಲೆದೊಡ್ಡಿದ ಚಾತುರಂಗಮಂ
ಬುದು ನಿನಗೊಡ್ಡಿ ನಿಂದುದು, ಇದನೋವದೆ ಕೊಲ್ವೊಡೆ ನೀನುಮನ್ನೆಕ
ಜ್ಜದೊಳೆಸಗು, ಎಂದು ಸೈತಜಿತನ್ ಆದಿಯ ವೇದರಹಸ್ಯದೊಳ್ ನಿರಂ
ತದ ಪರಿಚರ್ಯೆಯಿಂ ನೆಱೆಯೆ ಯೋಜಿಸಿದಂ ಕದನ ತ್ರಿಣೇತ್ರನಂ (ಪಂ.ಭಾ. ೧೦–೬೪)

(ಮನಸ್ಸಿನಲ್ಲಿ ಯಾವ ಅಳುಕೂ ಇಲ್ಲದೆ ನೀನು ಯುದ್ಧ ಮಾಡಲೆಂದೇ ಈ ಸೈನ್ಯವು ನಿನಗೆ ಎದುರಾಗಿ ನಿಂತಿದೆ, ಇವರು ನನ್ನವರೆಂಬ ಮೋಹವಿಲ್ಲದೆ ಕೊಲ್ಲಬೇಕಾದರೆ ಅದು ನನ್ನ–ಕೃಷ್ಣನ–ಸೃಷ್ಟಿಕರ್ತನ–ಕೆಲಸವೆಂದು ತಿಳಿದು ಸಿದ್ಧನಾಗು–ಎಂದು ಶ್ರೀಕೃಷ್ಣನು ವೇದರಹಸ್ಯದಲ್ಲಿ ತಿಳಿಸಿ ಅರ್ಜುನನನ್ನು ಯುದ್ಧ ಮಾಡುವಂತೆ ಮಾಡಿದನು.) ಈ ಪದ್ಯದಲ್ಲಿ ಭಗವದ್ಗೀತೆಯ ಸಾರವನ್ನೆಲ್ಲ ಭಟ್ಟಿಯಿಳಿಸಿದ್ದಾನೆ ಪಂಪ. ತನ್ನನ್ನು 'ಹಿತಮಿತಮೃದುವಚನನ್' ಎಂದು ಕರೆದುಕೊಂಡದ್ದು ಇಂತಹ ಸಂದರ್ಭಗಳಲ್ಲಿ ಸಾರ್ಥಕವಾಗಿದೆ.

ಇಡೀ ಒಂದು ಪ್ರಸಂಗವನ್ನೇ ಕಣ್ಣಿಗೆ ಕಟ್ಟಿದಂತೆ ಪಂಪಕವಿಯು ಹೇಗೆ ಹಿಡಿದಿಡಬಲ್ಲ ಎಂಬುದಕ್ಕೆ ಮತ್ತೊಂದು ಉದಾಹರಣೆಯನ್ನು ನೋಡಬಹುದು. ಶಂತನು ಮಹಾರಾಜನು ಒಂದು ಬಾರಿ ಬೇಟೆಗೆ ಹೋಗಿದ್ದಾಗ ಯೋಜನ ಗಂಧಿಯಾದ ಸತ್ಯವತಿಯ ದೇಹಪರಿಮಳದಿಂದ ಅವಳನ್ನು ಮೋಹಿಸಿ ಅವಳನ್ನು ಮದುವೆಯಾಗುವಂತೆ ಕೇಳಿದ ಪ್ರಸಂಗವನ್ನು ತೋರಿಸುವ ಪದ್ಯ:

ಮೃಗಯಾವ್ಯಾಜದಿನೊರ್ಮೆ ಶಂತನು ತೊಳಲ್ತುರ್ಪಂ ಪಳಂಚಲ್ಕೆ ತ
ನ್ಮೃಗಶಾಬಾಕ್ಷಿಯ ಕಂಪು ತಟ್ಟೆ ಮಧುಪಂಬೋಲ್ ಸೋಲ್ತು ಕಂಡೊಲ್ದು ನ
ಲ್ಮೆಗೆ ದಿವ್ಯಂಬಿಡಿವಂತೆವೋಲ್ ಪಿಡಿದು, 'ನೀಂ ಬಾ ಪೋಪಂ' ಎಂದಂಗೆ ಮೆ
ಲ್ಲಗೆ ತತ್ಕನ್ಯಕೆ ನಾಣ್ಚಿ, 'ಬೇಡುವೊಡೆ ನೀವೆಮ್ಮಯ್ಯನಂ ಬೇಡಿರೇ'

(ಪಂ.ಭಾ. ೧–೭೦)

ಎಂದು ಹೇಳಿದಳಂತೆ (ಬೇಟೆಯ ಕಾರಣದಿಂದ ಅಲೆದಾಡುತ್ತಿದ್ದ ಶಂತನು ಸತ್ಯವತಿಯ ದೇಹದ ಕಂಪಿಗೆ ದುಂಬಿಯಂತೆ ಸೋತು, ತನ್ನ ಪ್ರೀತಿಯು ಸತ್ಯವೆಂದು ಪ್ರಮಾಣಮಾಡಲು ದಿವ್ಯವನ್ನು ಹಿಡಿದಂತೆ ಅವಳ ಕೈಯನ್ನು ಹಿಡಿದುಕೊಂಡು 'ನನ್ನೊಡನೆ ಬಾ ಹೋಗೋಣ' ಎನ್ನುತ್ತಾನೆ. ಅದರಿಂದ ನಾಚಿದ ಆ ಕುಮಾರಿಯು 'ನನ್ನನ್ನು ಮದುವೆಯಾಗುವುದಾದರೆ ನಮ್ಮ ತಂದೆಯನ್ನು ಕೇಳಿ' ಎಂದು ಹೇಳು ತ್ತಾಳೆ). ಒಂದೇ ಪದ್ಯದಲ್ಲಿ ಕವಿಯು ಅಗಾಧವಾದ ಅರ್ಥವನ್ನು ತುಂಬಿ ಬಿಟ್ಟಿದ್ದಾನೆ. ಸತ್ಯವತಿಯ ದೇಹ ಪರಿಮಳಕ್ಕೆ ಶಂತನು ಸೋತದ್ದು ಹೂವಿನ ಕಂಪಿಗೆ ದುಂಬಿಯು ಸೋತ ರೀತಿಯಲ್ಲಿತ್ತು ಎಂದು ಹೇಳುವುದು ಎಷ್ಟು ಸಮಂಜಸವಾಗಿದೆ! ಅವಳ ಕೈ ಹಿಡಿದದ್ದನ್ನು ತನ್ನ ಪ್ರೀತಿಯು ನಿಜವಾದದ್ದೆಂದು ತೋರಿಸಲು ದಿವ್ಯವನ್ನು ಹಿಡಿದಂತೆ ಎಂದು ಹೇಳುವುದರಲ್ಲಿ ಪಂಪನು ಶಂತುವಿನ ಪ್ರೀತಿಯ ಆಳವನ್ನೇ ವರ್ಣಿಸಿ ಬಿಟ್ಟಿದ್ದಾನೆ. ಅವನು 'ಬಾ ಹೋಗೋಣ' ಎಂದು ಕರೆದದ್ದಕ್ಕೆ 'ನಮ್ಮ ತಂದೆಯನ್ನು ಕೇಳಿ ವಿವಾಹವಾಗಿ' ಎಂದು ನಾಲ್ಕಾರು ಪದ್ಯಗಳಲ್ಲಿ ಹೇಳುವುದನ್ನು ಒಂದೇ ಮಾತಿನಲ್ಲಿ ಕವಿಯು ಸೂಚಿಸಿಬಿಟ್ಟಿದ್ದಾನೆ. ತಾನು ಮದುವೆಯಾದ ಹೆಂಡತಿಯಾಗಿ ಮಾತ್ರ ಬರುವವಳು ಎಂದೂ ತನ್ನ ತಂದೆಗೆ ತಿಳಿಯದಂತೆ ಬರುವವಳಲ್ಲವೆಂದೂ ಇಷ್ಟಾದರೂ ತಾನೂ ಅವನನ್ನು ಪ್ರೀತಿಸಿರುವುದೂ ಈ ಎಲ್ಲ ಅರ್ಥವೂ ಇಲ್ಲಿ ಸೇರಿದೆ. ಹೀಗೆ ಪಂಪನ ಸಂಗ್ರಹ ಪ್ರಜ್ಞೆಯು ಶ್ರೇಷ್ಠ ದರ್ಜೆಯದು.

ಸಂಗ್ರಹವಾಗಿ ಹೇಳುವುದಲ್ಲದೆ ಪಂಪನು ಸಂದರ್ಭಗಳಿಗೆ ತಕ್ಕಂತೆ ಕೆಲವು ವಿಷಯಗಳನ್ನು ಹೊಸದಾಗಿ ಸೇರಿಸಿ ಸ್ವಂತಿಕೆಯನ್ನೂ ತೋರಿಸುತ್ತಾನೆ. ಯುದ್ಧ ವರ್ಣನೆಗಳಲ್ಲಿ ತನ್ನ ಕಾಲದ ಕನ್ನಡಿಗರ ಯುದ್ಧ ರೀತಿಯನ್ನು ಹೇಳುತ್ತಾನೆ. ತಾನೇ ಸ್ವತಃ ಯೋಧನಾಗಿದ್ದುದರಿಂದ ಇದನ್ನು ಸಮರ್ಥವಾಗಿ ಮಾಡುವುದಕ್ಕೆ ಅವನು ಯೋಗ್ಯನೇ ಆಗಿದ್ದಾನೆ. ಅರ್ಜುನ ಮುಂತಾದವರ ಅಸ್ಥಾನಗಳನ್ನು ವರ್ಣಿಸುವಾಗ ಆ ಕಾಲದ ಕನ್ನಡ ರಾಜರ ಆಸ್ಥಾನವನ್ನೇ ವರ್ಣಿಸಿರಬಹುದು. ಅವನು ಸೇರಿಸುವ– ಪ್ರಾಯಶಃ ಅವನ ಕಾಲದಲ್ಲಿ ಜನರು ಹೇಳುತ್ತಿದ್ದ ಒಂದು ಪ್ರಸಂಗವನ್ನು ನೋಡಬಹುದು. ಮದಗಜವೊಂದು ಬ್ರಾಹ್ಮಣರು ಯಜ್ಞಕ್ಕಾಗಿ ಬಳಸುವ ಆರಣಿಯನ್ನು ಕಚ್ಚಿಕೊಂಡು ಹೋದಾಗ, ವನವಾಸದಲ್ಲಿದ್ದ ಪಾಂಡವರಲ್ಲಿ ಧರ್ಮರಾಯನನ್ನುಳಿದು ಮಿಕ್ಕ ನಾಲ್ವರು ಅದನ್ನು ತರಲು ಹೋಗಿ ಬಾಯಾರಿಕೆಯಿಂದ ನೀರು ಕುಡಿಯಲೆಂದು ಬಂದು ಕೊಳವೊಂದರ ಬಳಿ ಸತ್ತು ಬೀಳುತ್ತಾರೆ. ಹೀಗಿರುವಾಗ ದುರ್ಯೋಧನನ ಅಪ್ಪಣೆಯ ಪ್ರಕಾರ ಅವನ ಪುರೋಹಿತನಾದ ಕನಕಸ್ವಾಮಿಯೆಂಬುವನು ಪಾಂಡವರಿಗೆ ಕೇಡಾಗುವಂತೆ ಹೋಮಮಾಡುತ್ತಾನೆ. ಆ ಬೆಂಕಿಯಿಂದ ಕಪ್ಪು ಮೈ ಸಿಡಿಲಿನಂತಹ ಡಾಡೆ ಉರಿಯ ಚೆಂಡಿನಂತಹ ಕಣ್ಣುಗಳುಳ್ಳ ಕೀರ್ತಿಗೆಯೆಂಬ ಉಗ್ರದೇವತೆ ಬಂದು 'ಏನಪ್ಪಣೆ' ಎಂದು ಕೇಳಿದಾಗ, ಪಾಂಡವರು ಎಲ್ಲಿದ್ದರೂ ಅವರನ್ನು ಕೊಲ್ಲು ಎಂದು ಪುರೋಹಿತನು ಹೇಳುತ್ತಾನೆ. ಅದರಂತೆಯೇ ಆ ದೇವತೆಯು ಕೊಳದ ಬಳಿಗೆ ಬಂದಾಗ, ಅವರನ್ನು ಕೊಂದಿದ್ದ ದೈವವು ಪ್ರತ್ಯಕ್ಷವಾಗಿ 'ಈ ನಾಲ್ವರನ್ನೂ ನಾನು ಆಗಲೇ ಕೊಂದಿದ್ದೇನೆ, ಅವರನ್ನು ಮುಟ್ಟಬೇಡ, ನೀನೇನು ನನಗಿಂತಲೂ ಬಲಶಾಲಿಯೋ' ಎಂದು ಗದರಿಕೊಳ್ಳುತ್ತದೆ; ಅನಂತರ 'ನೀನು ಜಾತಿದೈವವಾಗಿದ್ದರೆ ನನ್ನ ಎಂಜಲನ್ನು ತಿನ್ನುತ್ತಿಯೇನು?' ಎಂದು ಕೇಳುತ್ತದೆ. ಆಗ ಕೀರ್ತಿಗೆಯು ಅವರನ್ನು ತಿನ್ನುವುದಿಲ್ಲವೆಂದು ಹೇಳಿ ತಾನಾರನ್ನು ತಿನ್ನಲಿ ಎಂದು ಕೇಳುತ್ತದೆ. 'ಯಾರು ನಿನ್ನನ್ನು ಅಕಾರಣವಾಗಿ ಹುಟ್ಟಿಸಿರುವನೋ ಅವನನ್ನೇ ತಿನ್ನು' ಎಂದು ಆ ದೈವವು ಹೇಳಲು ಕೀರ್ತಿಗೆಯು ಹಾಗೆ ಆಗಲೆಂದು ವಾಪಸ್ಸು ಬಂದು ಕನಕಸ್ವಾಮಿ ಯನ್ನೇ ತಿಂದು ಹಾಕುತ್ತದೆ. ಈ ಸ್ವಾರಸ್ಯಕರವಾದ ಕತೆಯೂ ಬೇರೆಲ್ಲಿಯೂ ಕಾಣುವು ದಿಲ್ಲ. 'ಕನಕನ ಬೇಳ್ವೆ ತಗುಳ್ದುದು ಕನಕನಂ' (ಕನಕನ ಯಜ್ಞವು ಕನಕನನ್ನೇ ಸೇರಿತು) ಎಂದು ಈ ಸಂದರ್ಭದಲ್ಲಿ ಪಂಪನು ಹೇಳುವುದರಿಂದಲೂ, 'ತಾನಿಟ್ಟಬೇತಾಳ ತನ್ನ ತಿಂದಿತೆಂಬಂತೆ' ಎಂಬ ಗಾದೆ ಮಾತು ವಚನಗಳಲ್ಲಿ ಸಿಗುವುದರಿಂದಲೂ ಈ ಮಾತಿಗೆ ಹಿನ್ನೆಲೆಯಾದ ಕತೆಯು ಜನರಲ್ಲಿ ಆ ಕಾಲಕ್ಕೆ ರೂಢಿಯಲ್ಲಿರಬೇಕು. ಅದನ್ನು ಪಂಪ ಅನುಕೂಲಕ್ಕೆ ತಕ್ಕಂತೆ ತನ್ನ ಕಾವ್ಯದಲ್ಲಿ ಬಳಸಿಕೊಂಡಿರಬೇಕು.

ತನ್ನ ಸ್ವಂತ ಮನೋಭಾವವನ್ನೂ ಪಂಪನು ಕೆಲವೇಳೆ ಕಾವ್ಯದಲ್ಲಿ ಪರೋಕ್ಷವಾಗಿ ಹೇಳಿಕೊಳ್ಳುತ್ತಾನೆ. ಅರ್ಜುನನು ದಿಗ್ವಿಜಯಕ್ಕೆ ಹೊರಟು ಕುರುಜಾಂಗಣ ದೇಶಕ್ಕೆ ಬರುತ್ತಾನೆ, ಅಲ್ಲಿನ ಪ್ರಕೃತಿ ಸೌಂದರ್ಯವು ಅವನನ್ನು ಆಕರ್ಷಿಸುತ್ತದೆ. ಪಂಪನು ಈ ನೆವದಲ್ಲಿ ಪ್ರಕೃತಿಯ ಸುಂದರ ಚಿತ್ರಗಳನ್ನು ಕೊಡುವುದರ ಜೊತೆಗೆ,

ತನ್ನ ಮನಸ್ಸನ್ನು ಸೆಳೆದಿದ್ದ ತನ್ನ ತಾಯಿಯ ತವರು ಪ್ರದೇಶವಾದ ಬನವಾಸಿಯನ್ನು (ಈಗಿನ ಉತ್ತರ ಕನ್ನಡ-ಶಿವಮೊಗ್ಗ ಜಿಲ್ಲೆಗಳು ಸೇರುವ ಭಾಗ) ಮನದುಂಬಿ ಹೊಗಳುತ್ತಾನೆ:

ಸೊಗಯಿಸಿ ಬಂದ ಮಾಮರನೆ, ತಳ್ತೆಲೆವಳ್ಳಿಯೆ, ಪೂತ ಜಾತಿ ಸಂ
ಪಗೆಯೆ, ಕುಕಿಲ್ವ ಕೋಗಿಲೆಯೆ, ಪಾಡುವ ತುಂಬಿಯೆ, ನಲ್ಲರೊಳ್ಮೊಗಂ
ನಗೆಮೊಗದೊಳ್ ಪಳಂಚಲೆಯೆ ಕೂಡುವ ನಲ್ಲರೆ, ನೋಟಕ್ಕೊಡಾವ ಬೆ
ಟ್ಟುಗಳೊಳಮ್, ಆವ ನಂದನಂಗಳೊಳಮ್, ಬನವಾಸಿದೇಶದೊಳ್ (ಪಂ.ಭಾ. ೪-೨೮)

(ಆ ಬನವಾಸಿ ದೇಶದ ಯಾವ ಬೆಟ್ಟದಲ್ಲಿ ನೋಡಿದರೂ ಉದ್ಯಾನ ವನಗಳಲ್ಲಿ ನೋಡಿದರೂ ಹಣ್ಣಿನಿಂದ ತುಂಬಿ ಹೋಗಿರುವ ಮಾವಿನ ಮರಗಳು ಚಿಗುರಿದ ಬಳ್ಳಿಗಳು ಹೂ ಬಿಟ್ಟ ಜಾಜಿ ಸಂಪಗೆಯ ಗಿಡಮರಗಳು, ಹಾಡುವ ತುಂಬಿಗಳು ಮುಖದಲ್ಲಿ ಮುಗುಳ್ನಗೆಯಿಂದ ಕೂಡಿ ಸಲ್ಲಾಪವಾಡುವ ಪ್ರೇಮಿಗಳು-ಈ ಸುಂದರ ದೃಶ್ಯವೇ ಕಾಣಿಸುತ್ತವೆ.) ಪಂಪನ ಆಸೆಯೆಂತಹುದು ಕೇಳಿರಿ:

ಚಾಗದ ಭೋಗದಕ್ಕರದ ಗೇಯದ ಗೊಟ್ಟಿಯಲಂಪಿನಿಪುಗ
ಳ್ಗಾಗರಮಾದ ಮಾನಸರೆ ಮಾನಸರ್! ಅಂತವರಾಗಿ ಪುಟ್ಟಲೇ
ನಾಗಿಯುಮೇನೋ ತೀರ್ದಪುದೆ ? ತೀರದೊಡಂ ಮಱಿದುಂಬಿಯಾಗಿ ಮೇಣ್
ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ಬನವಾಸಿದೇಶದೊಳ್ (ಪಂ.ಭಾ. ೪-೨೯)

(ತ್ಯಾಗ, ಭೋಗ, ವಿದ್ಯೆ, ಸಂಗೀತ, ಕೂಟಗಳು ಇವುಗಳಿಂದ ಕೂಡಿರುವ ಜೀವನವನ್ನು ಸಾಗಿಸುವವರೇ ನಿಜವಾದ ಮನುಷ್ಯರು. ಅಂತಹವರಾಗಿ ಹುಟ್ಟಬೇಕು. ಹಾಗಾಗದಿದ್ದರೆ ಬನವಾಸಿಯಲ್ಲಿ ಮರಿದುಂಬಿಯಾಗಿಯೋ ಕೋಗಿಲೆಯಾಗಿಯೋ ಹುಟ್ಟಬೇಕು.) ತಂಪಾದ ದಕ್ಷಿಣದ ಗಾಳಿ ಬೀಸಿದಾಗ ಒಳ್ಳೆಯ ಮಾತು ಕಿವಿಗೆ ಬಿದ್ದಾಗ, ಇಂಪಾದ ಸಂಗೀತವನ್ನು ಕೇಳಿದಾಗ, ಅರಳು ಮಲ್ಲಿಗೆಯನ್ನು ಕಂಡಾಗ, ಪ್ರೇಮ ಸುಖವನ್ನನುಭವಿಸಿವಾಗ, ವಸಂತೋತ್ಸವವಾದಾಗ-ಎಂದರೆ ಎಲ್ಲ ಒಳ್ಳೆಯ ಸುಖಗಳಿಗೆಯಲ್ಲಿ-ಯಾರು ತಡೆದರೂ ತನ್ನ ಮನಸ್ಸು ಬನವಾಸಿದೇಶವನ್ನು ನೆನೆಸಿಕೊಳ್ಳುತ್ತದೆಯೆಂದು ಹೇಳುತ್ತಾನೆ. ಇಲ್ಲಿ ಪಂಪನ ಮನಸ್ಸೇ ತೆರೆದಿರುವುದು ಸ್ಪಷ್ಟ.

ಪಂಪನು ರಸಿಕ, ಆದರೆ ಅಷ್ಟೇ ವಿಶಾಲವಾದ ಮನಸ್ಸುಳ್ಳವನು. ಆದ್ದರಿಂದ ಅವನು ಕೆಲವೊಮ್ಮೆಯಾದರೂ ಜಾತಿ-ಕುಲಗಳನ್ನು ಕಿತ್ತೊಗೆಯ ಬಲ್ಲ. ಈ ತನ್ನ ಮನೋಭಾವವನ್ನು ಒಂದೆಡೆ ಜಾತಿಯ ಕಾರಣದಿಂದ ಅವಮಾನಕ್ಕೊಳಗಾದ ಕರ್ಣನ ಬಾಯಿಂದ ಕವಿಯು ಹೇಳಿಸುತ್ತಾನೆ;

ಕುಲಮನೆ ಮುನ್ನಮುಗ್ಗಪಿಡಿಪಿರೇಂ ಗಳ, ನಿಮ್ಮ ಕುಲಂಗಳಾಂತು ಮಾ
ರ್ಮಲೆವನನ್ ಅಟ್ಟ ತಿಂಬುವೆ, ಕುಲಂ ಕುಲಮಲ್ತು : ಚಲಂ ಕುಲಂ ಗುಣಂ
ಕುಲಂ ಅಭಿಮಾನಂ ಕುಲಂ, ಅಣ್ಮು ಕುಲಂ, ಬಗೆವಾಗಳ್ ಈಗಳ್ ಈ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾಡುಗುಂ

(ಪಂ.ಭಾ. ೧೦-೨೧)

(ಮಾತೆತ್ತಿದರೆ ಕುಲದ ಮಾತನ್ನೇ ಎತ್ತುವಿರಲ್ಲ. ಯುದ್ಧದಲ್ಲಿ ನಿಮ್ಮ ಈ ಕುಲವು ಶತ್ರುವನ್ನು ಕೊಲ್ಲುತ್ತದಯೇನು? ಈ ಕುಲವು ನಿಜವಾದ ಕುಲವಲ್ಲ, ಚಲ, ಗುಣ ಸ್ವಾಭಿಮಾನ ಪರಾಕ್ರಮ ಇವುಗಳೇ ನಿಜವಾದ ಕುಲಗಳು. ನಿಮ್ಮ ಕುಲದ ಹೆಮ್ಮೆಯೇ ನಿಮ್ಮನ್ನು ಈ ಯುದ್ಧದಲ್ಲಿ ಹಾಳುಮಾಡುತ್ತದೆ.)

ಹಾಗೆಯೇ ಕರ್ಣ-ದುರ್ಯೋಧನರ ಸ್ನೇಹಾತಿಶಯವನ್ನು ವರ್ಣಿಸುವಾಗ ಕವಿಯು ಮೈ ಮರೆಯುತ್ತಾನೆ. ಪ್ರಾಯಶಃ ಪಂಪನಿಗೆ ಆಗ ತನ್ನ ಮತ್ತು ಅರಿಕೇಸರಿಯ ಸ್ನೇಹವು ಅವನ ಮನಸ್ಸಿನಾಳದಲ್ಲಿ ಎಚ್ಚರವಾಗಿದ್ದತೇನೋ! ಏಕೆಂದರೆ ಇವರಿಬ್ಬರ ಸಂಬಂಧವು ಸ್ವಾಮಿ-ಸೇವಕ ಸಂಬಂಧವಾಗದೇ ಆತ್ಮೀಯವಾದುದಾಗಿತ್ತು. ಹಾಗೆಯೇ ಕರ್ಣ-ದುರ್ಯೋಧನರ ಸ್ನೇಹವೂ. ಎಲ್ಲರ ಅವಹೇಳನಕ್ಕೊಳಗಾದ ಕರ್ಣನನ್ನು ದುರ್ಯೋಧನನ್ನು ಅಂಗರಾಜ್ಯಕ್ಕೆ ಒಡೆಯನಾಗಿ ಮಾಡಿ 'ಬೇಡಿಕೊಳ್ಳು' ತ್ತಾನಂತೆ;

ಪೊಡೆಮಡುಮರ್ ಜೀಯೆಂಬರ್
'ಕುಡು' 'ದಯೆಗೆಯ್' 'ಏಂ ಪ್ರಸಾದಂ' ಎಂಬಿವು ಪೆಱರೊಳ್
ನಡೆಗೆ, ಎಮ್ಮ-ನಿನ್ನಯೆಡೆಯೊಳ್
ನಡೆಯಲ್ವೇಡ. ಎನಗೆ ಕೆಳೆಯನೈ ರಾಧೇಯಾ (ಪಂ.ಭಾ. ೨-೮೫)

ಎಂದು. (ಇತರರು ನನಗೆ ಸಮಸ್ಕರಿಸುತ್ತಾರೆ, 'ಸ್ವಾಮಿ' ಎಂದು ಕರೆಯುತ್ತಾರೆ. ದಯೆಮಾಡಬೇಕು' 'ಪ್ರಸಾದ' ಎಂದು ಮುಂತಾಗಿ ಬೇರೆಯವರು ಕರೆಯಲಿ, ಆದರೆ ನೀನು ಹಾಗೆ ಮಾಡಬಾರದು. ನಾವಿಬ್ಬರೂ ಗೆಳೆಯರು.) ಇವರಿಬ್ಬರ ಸ್ನೇಹವು ಎಂತಹದು! ಪಂಪನು ಇದನ್ನು ಒಂದು ಪದ್ಯದಲ್ಲಿಯೇ ಪ್ರಸಂಗವೊಂದನ್ನು ಅಡಗಿಸಿ ಅದ್ಭುತವಾಗಿ ಹೇಳುತ್ತಾನೆ:

ನೆತ್ತಮನಾಡಿ ಭಾನುಮತಿ ಸೋಲ್ತೊಡೆ, ಸೋಲಮನೀವುದೆಂದು ಕಾ
ಡುತ್ತಿರೆ ಲಂಬಣಂ ಪಱಿಯೆ, ಮುತ್ತಿನ ಕೇಡನೆ ನೋಡಿ ನೋಡಿ ಬ
ಳ್ಕುತ್ತಿರೆ ಏವಮಿಲ್ಲದೆ, ಇವನ್ ಆಯ್ದುದೊ ತಪ್ಪದೆ ಪೇೞಿಮ್, ಎಂಬ ಭೂ
ಪೋತ್ತಮನಂ ಬಿಸುಟ್ಟು ಇರದೆ ನಿಮ್ಮೊಳೆ ಪೊಕ್ಕೊಡೆ ಬೇಡನಲ್ಲನೆ (ಪಂ.ಭಾ. ೯-೬೯)

(ಪಗಡೆಯಾಟದಲ್ಲಿ ಭಾನುಮತಿಯು ತನಗೆ ಸೋತುಹೋಗಲು ತಾನು ಪಣವನ್ನು ಕೊಡು ಎಂದು ಅವಳ ಕೊರಳಿನ ಮುತ್ತಿನ ಹಾರಕ್ಕೆ ಕೈ ಹಾಕಿದಾಗ ಅದು ಹರಿದು ಚೆಲ್ಲಾಪಿಲ್ಲಿಯಾಯಿತು. ಅದನ್ನು ಕಂಡು ತಾನು ಕಂಪಿಸಿತ್ತಿರಲು ದುರ್ಯೋಧನನು 'ಈ ಮುತ್ತುಗಳನ್ನು ಆರಿಸಿಕೊಡಲೆ?' ಎಂದು ಕೇಳಿದನು. ಇಂತಹ ರಾಜಶ್ರೇಷ್ಠನನ್ನು ಬಿಟ್ಟು ನಿಮ್ಮ ಕಡೆ ಸೇರಿದರೆ ನಾನು ನೀಚನಾಗುವುದಿಲ್ಲವೇ?) ಇದು ಕರ್ಣನೇ ಹೇಳುವ ಮಾತು, ಕೃಷ್ಣನು ಬಂದು ಕರ್ಣನಿಗೆ ಪಾಂಡವರು ನಿನ್ನ ಸಹೋದರರು, ಅವರ ಪಕ್ಷಕ್ಕೆ ಸೇರು ಎಂದು ಹೇಳಿದಾಗ ದುರ್ಯೋಧನನು ಕರ್ಣನ ಬಗ್ಗೆ ಎಂತಹ ನಂಬಿಕೆ-ಸ್ನೇಹಗಳ ಅಮೃತವನ್ನು ಸುರಿಸಿದ್ದಾನೆಂಬುದನ್ನು ಈ ಪದ್ಯವು ಅತ್ಯಂತ ಸುಂದರವಾಗಿ ವರ್ಣಿಸುತ್ತದೆ. ತನ್ನ ಹೆಂಡತಿಯಾದ ಭಾನುಮತಿಯೊಡನೆ ಕರ್ಣನು ಪಗಡೆಯಾಡಲು

ಅವಕಾಶವಿದೆ. ಪ್ರಾಯಶಃ ಆಟದಲ್ಲಿ ಪಣವಾಗಿ ಒಡ್ಡಿದ ಮುತ್ತಿನ ಸರವನ್ನು ಅವಳ ಕೊರಳಗೇ ಕೈಹಾಕಿ ಕರ್ಣನು ಕೀಳುತ್ತಾನೆ. ಆದರೂ ದುರ್ಯೋಧನನಿಗೆ ಅವನ ಮೇಲೆ ಅಸಮಧಾನವಿಲ್ಲ. ಅಷ್ಟೇ ಅಲ್ಲ, ಮುತ್ತುಗಳು ನೆಲದಲ್ಲಿ ಚೆಲ್ಲಾಪಿಲ್ಲಿಯಾದಾಗ 'ಆರಿಸಿಕೊಡಲೆ?' ಎಂದು ಕೇಳುತ್ತಾನೆ. ಎಂತಹ ಸುಂದರವಾದ ಪದ್ಯವಿದು! 'ಎನಗೆ ಕೆಳೆಯನ್ನೆ ರಾಧೇಯಾ' ಎಂದದ್ದು ಬರಿಯಾ ಬಾಯಿಮಾತಿನ ಉಪಚಾರವಲ್ಲ, ಅಕ್ಷರಶಃ ನಿಜ. ಅಂತಹ ಗೆಳೆಯನನ್ನು ನಡುನೀರಲ್ಲಿ ಕೈ ಬಿಟ್ಟು, ತನ್ನನ್ನು ಪಾಂಡವರು ಸೇವೆಮಾಡುತ್ತಾರೆಂದು ಅವರ ಪಕ್ಷವನ್ನು ಸೇರಿದರೆ ತಾನು ನೀಚನೆನಿಸಿಕೊಳ್ಳುತ್ತೇನೆ ಎಂಬ ಕರ್ಣನ ಮಾತು ಎಷ್ಟೊಂದು ಸತ್ಯ!

ಪಂಪನು ವ್ಯತ್ಯಾಸ ಮಾಡಿಕೊಂಡು ನಿರೂಪಿಸಿರುವ ಪ್ರಸಂಗಗಳಲ್ಲಿ ಶಿಶುಪಾಲ ವಧೆಯ ಪ್ರಸಂಗವೂ ಒಂದು. ಧರ್ಮರಾಯನು ರಾಜಸೂಯ ಯಾಗವನ್ನು ಮಾಡುವಾಗ ಅಗ್ರ ಪೂಜೆಯು ಯಾರಿಗೆ ಸಲ್ಲಬೇಕೆಂದು ಕೇಳಲು ಹಿರಿಯರೆಲ್ಲರೂ ಶ್ರೀಕೃಷ್ಣನ ಹೆಸರನ್ನು ಸೂಚಿಸುತ್ತಾರೆ. ಅದರಿಂದ ಶಿಶುಪಾಲನು ಕ್ರೋಧಗೊಳ್ಳುತ್ತಾನೆ. ಕೋಪದಿಂದ ಅವನು ಹಾರಾಡುವ ರೀತಿಯೂ, ಅವನ ಪಾಪದ ಬಟ್ಟಲು ತುಂಬುವುದನ್ನು ಕಾಯುವ ಶ್ರೀಕೃಷ್ಣನ ಗಂಭೀರ ವರ್ತನೆಯೂ ಕಣ್ಣಿಗೆ ಕಟ್ಟುವ ಹಾಗೆ ಚಿತ್ರಿತವಾಗಿದೆ. ಶ್ರೀ ಕೃಷ್ಣನ ಹೆಸರು ಕೇಳಿದಾಕ್ಷಣವೇ ಸಿಡಿಲಿನಂತೆ ಕೆರಳಿ ಶಿಶುಪಾಲನು "ಭೀಷ್ಮನು ಅಯೋಗ್ಯವಾಗಿ ಶ್ರೀಕೃಷ್ಣನಿಗೆ ಅಗ್ರಪೂಜೆಯು ಸಲ್ಲಬೇಕೆಂದು ಹೇಳಿದರೆ ಬುದ್ಧಿಯಿಲ್ಲದೆ ನೀನೂ ಅದನ್ನು ಒಪ್ಪುವುದೆ? ಕೃಷ್ಣನ ಬಗ್ಗೆ ನಿನಗೆ ಗೌರವವಿದ್ದರೆ ನಿನ್ನ ಮನೆಯಲ್ಲಿ ಅವನಿಗೆ ಮರ್ಯಾದೆ ಮಾಡು. ಅತ್ಯಂತ ಪರಾಕ್ರಮಶಾಲಿಯಾದ ನಾನಿರುವಾಗ ಈ ದನಕಾಯುವವನಿಗೆ ಅಗ್ರಪೂಜೆಯೇ?" ಎಂದು ಗರ್ಜಿಸುತ್ತಾನೆ, ಧರ್ಮರಾಯನನ್ನುದ್ದೇಶಿಸಿ. ಅನಂತರ ಹೇಳುವ ಮಾತನ್ನು ನೋಡಿ:

ಕುಡವೇೞ್ದನ, ಕುಡುವನ ಕುಡೆ
ಪಡೆವನ ಪೆಂಪೇಂ ನೆಗೞ್ತೆವಡೆಗುಮೊ। ಪೇೞ್ವಂ
ಕುಡವೇೞ್ಗೆಮ। ಕುಡುವಣ್ಣಂ
ಕುಡುಗೆಮ ಕುಡೆ ಕೊಳ್ವ ಕಲಿಯನಱಿಯಲ್ಕಕ್ಕುಂ (ಪಂ.ಭಾ. ೬-೪೯)

(ಅಗ್ರಪೂಜೆಯನ್ನು ಶ್ರೀಕೃಷ್ಣನಿಗೆ ಕೊಡಬೇಕೆಂದು ಹೇಳಿದವನ, ಕೊಡುವವನ. ಕೊಟ್ಟದ್ದನ್ನು ಪಡೆಯುವವನ ಹೆಚ್ಚಳವು ಎಷ್ಟು ಪ್ರಸಿದ್ಧಿಯಾಗುವುದೊ ನೋಡೋಣ! ಕೊಡು ಎಂದು ಹೇಳುವವನು ಹೇಳಲಿ, ಕೊಡುವವನು ಕೊಡಲಿ, ಆದರೆ ಹಾಗೆ ಕೊಟ್ಟುದನ್ನು ತೆಗೆದುಕೊಳ್ಳುವವನು ಎಂತಹ ಕಲಿಯೋ ನೋಡಿಕೊಳ್ಳೋಣವಾಗುತ್ತದೆ.) "ಈ ಕಡೆಯ ಪದ್ಯದ ಕನ್ನಡವನ್ನೂ, ಅದರ ಪರಿಹಾಸ್ಯವನ್ನೂ, ಧಿಕ್ಕಾರವನ್ನೂ ಕ್ರೋಧವನ್ನೂ ಶೌರ್ಯವನ್ನೂ ಪಂಪನಲ್ಲದೆ ಬೇರೆ ಯಾರು ಬರೆಯಬಲ್ಲರು?"[೪]

ಅನಂತರ ಶಿಶುಪಾಲನು ಕೃಷ್ಣನ ಕಡೆಗೆ ತಿರುಗಿ ನಾನಾ ವಿಧವಾಗಿ ನಿಂದಿಸುತ್ತಾನೆ, ಅವನನ್ನು ಗೋವಳನೆನ್ನುತ್ತಾನೆ. ಹೇಡಿಯೆಂದು ಜರೆಯುತ್ತಾನೆ, ಅವನ ಮೋಸ ತಟವಟಗಳು ತನ್ನ ಮುಂದೆ ನಡೆಯದೆಂದು ಎಚ್ಚರಿಸುತ್ತಾನೆ, ತಾನಿರುವ

ಸಭೆಯಲ್ಲಿ ಅರ್ಘ್ಯವನ್ನು ಸ್ವೀಕರಿಸಿದ್ದಾದರೆ ಅವನ ಬಿಸಿರಕ್ತವನ್ನು ಕುಡಿಯುತ್ತೇನೆಂದು ಗರ್ಜಿಸುತ್ತಾನೆ. ಕೃಷ್ಣನು ಮೀನು ಆಮೆ ಹಂದಿಗಳ ಅವತಾರವನ್ನು ತಾಳಿ ದೊಂಬ ವಿದ್ಯೆಯನ್ನು ತೋರಿಸಬಲ್ಲ. ಆದರೆ ತಾನು ಅವನನ್ನು ಬಲಿಹಾಕಲು ಅರಿತಿರುವೆನೆಂದು ಹಳಿಯುತ್ತಾನೆ. ಅವನು ಕೋಪದಿಂದ ಆರ್ಭಟಿಸಿ ನಿಂದೆಯ ಮಳೆಯನ್ನು ಸುರಿಯುತ್ತಿರುವಾಗ ಕಾಣಿಸುತ್ತಿದ್ದ ರೀತಿಯಿದು:

ಪೊಳೆದುಳ್ಕುವ ಕುಡು ದಾಡೆಯ
ಪೊಳಪು, ನೊಸಲ್ಗಡರ್ದು ಪೊಡರ್ವ ಎಸೆವಿನಮ್ ಅ
ವ್ವಳಿಸುವ ಮುಳಿಸಿನ ದಳ್ಳುರಿ
ಗಳನ್ ಉಗುಳ್ವವೊಲ್ ಉಗುಳ್ದನಸುರನ್ ಉರಿವ ಪಟಿಗಳಂ (ಪಂ.ಭಾ. ೬-೫೯)

(ಹೊಳೆಯುವ ಕೋರೆದಾಡೆಗಳಿಂದಲೂ ಹಣೆಯ ಮೇಲೆ ಹಾರುವ ಹುಬ್ಬುಗಳಿಂದಲೂ ಕೂಡಿ ಶಿಶುಪಾಲನು ಕೋಪದ ಬೆಂಕಿಯನ್ನುಗುಳುವಂತೆ ಉರಿಯುವ ನಿಂದೆಯನ್ನು ಉಗುಳಿದನು.) ಇವನ ಈ ಅವಿವೇಕದ ಮಾತುಗಳಿಂದ ಸಭೆಯಲ್ಲಿದ್ದವರೆಲ್ಲ ದಿಗ್ಭ್ರಾಂತರಾಗುತ್ತಾರೆ. ಆದರೆ ಶ್ರೀಕೃಷ್ಣನು ಮಾತ್ರ ಗಂಭೀರವಾಗಿಯೇ ಶಿಶುಪಾಲನಿಗೆ ಈ ರೀತಿ ಹೇಳಿದನು: "ನಿನ್ನ ತಾಯಿ ಸಾತ್ವತಿಯು ಮಗುವಾಗಿದ್ದ ನಿನ್ನನ್ನು ನನ್ನ ತೊಡೆಯ ಮೇಲಿರಿಸಿದಾಗ ನಿನ್ನ ಹೆಣೆಗಣ್ಣು ಕೆಟ್ಟಿತು. ಇದರಿಂದ ನಿನ್ನ ಮೃತ್ಯುವು ನನ್ನ ಕೈಯಲ್ಲಿದೆಯೆಂದು ನಿನ್ನ ತಾಯಿಯು ಅರಿತಳು. 'ಇವನು ತಿಳಿಯದೆ ಮಾಡುವ ನಿಂದೆಗಳನ್ನು ನೂರರವರೆಗೂ ಕ್ಷಮಿಸಬೇಕೆ'ಂದು ಕೇಳಿದಳು, ಅದರಂತೆ ನೀನು ನೂರು ತಪ್ಪುಗಳನ್ನು ಮಾಡುವವರೆಗೂ ಕ್ಷಮಿಸುವೆನು." ಆದರೆ ಶಿಶುಪಾಲನ ನಿಂದೆ ಮುಂದುವರಿಯಿತು. ನೂರು ನಿಂದೆಗಳಾದ ಮೇಲೆ ಕೋಪದಿಂದ ಕೂಡಿದ ಶ್ರೀ ಕೃಷ್ಣನು

ಮುಳಿದು ತನಗರ್ಘ್ಯಮೆತ್ತಿದ
ತಳಿಗೆಯೊಳಿಡೆ ತಿಱಿದ ತೆಱದೆ ತಲೆ ಪಱಿದಾಗಳ್
ಕಳಕಳಿಸಿ ನಗುತುಮಿರ್ದುದು
ತಳಿಗೆಯ ಮೇಲೆ, ಅಸುರನದಟಿದೇನಚ್ಚರಿಯೋ (ಪಂ ಭಾ. ೬-೬೪)

(ಕೋಪಗೊಂಡು ತನಗೆ ಅರ್ಘ್ಯವನ್ನಿಟ್ಟಿದ್ದ ತಟ್ಟೆಯನ್ನೆಸದಾಗ ಶಿಶುಪಾಲನ ತಲೆಯು ಹೂವನ್ನು ಕಿತ್ತ ರೀತಿಯಲ್ಲಿ ಕತ್ತರಿಸಿಹೋಗಿ ತಟ್ಟೆಯ ಮೇಲೆ ನಗುತ್ತ ಕುಳಿತಿದ್ದಿತು. ಅವನ ಪರಾಕ್ರಮ ಎಷ್ಟು ಆಶ್ಚರ್ಯಕರವಾದುದು!)

ಅರ್ಜುನನನ್ನು ತನ್ನ ಕಾವ್ಯದ ನಾಯಕನನ್ನಾಗಿ ಮಾಡಿಕೊಂಡಿದ್ದರಿಂದ ಪಂಪನು ಕರ್ಣನನ್ನು ಪ್ರತಿನಾಯಕನನ್ನಾಗಿ ಮಾಡಿಕೊಂಡಿದ್ದಾನೆ. ಅದರೊಡನೆ ಕರ್ಣನ ಹುಟ್ಟು ಬೆಳವಣಿಗೆಗಳಲ್ಲಿ ದುರಂತವೊದಗಿದುದು ಪಂಪನ ಮನಸ್ಸನ್ನು ಕರಗಿಸಿದೆ, ಅವನ ಪಾತ್ರವು ಕವಿಯ ಮನಸ್ಸನ್ನು ಸಂಪೂರ್ಣವಾಗಿ ಆಕರ್ಷಿಸಿದೆ. ಹೀಗಾಗಿ ಕರ್ಣನ ಪಾತ್ರವನ್ನು ಈ ಕವಿಯು ತನ್ಮಯತೆಯಿಂದ ಚಿತ್ರಿಸಿದ್ದಾನೆ. ಪಂಪನ ಕರ್ಣ ಉದಾತ್ತನಾದ, ವಿಧಿವಶದಿಂದ ದುರಂತಕ್ಕೀಡಾದ ಮಹಾವ್ಯಕ್ತಿಯಂತೆ ಕಾಣುತ್ತಾನೆ. ದೂರ್ವಾಸರ ಮಂತ್ರದ ಮಹಿಮೆಯನ್ನು ಪರೀಕ್ಷಿಸಬೇಕೆಂಬ ಕುತೂಹಲ

ಚಾಪಲ್ಯಗಳಿಗೊಳಗಾಗಿ ಕುಂತಿ ಸೂರ್ಯನಿಂದ ಮಗುವನ್ನು ಪಡೆಯುತ್ತಾಳೆ–ಅವನೇ ಕರ್ಣ, ಆದರೆ ಆಗಿನ್ನೂ ಅವಳು ಕನ್ಯೆಯಾಗಿದ್ದುದರಿಂದ 'ನಿಧಾನಮನೀಡಾಡುವಂತೆ ಕೂಸಂ ಗಂಗೆಯೊಳೀಡಾಡಿ ಬಂದಳ್' (ನಿಧಿಯನ್ನು ಎಸೆಯುವೆ ಹಾಗೆ ಆ ಕೂಸನ್ನು ಗಂಗಾನದಿಯಲ್ಲಿ ಹಾಕಿದಳು.) ಅನಂತ ಬೆಸ್ತರವನ ಕೈಗೆ ಸಿಕ್ಕಿದ ಆ ಮಗು ರಾಧೇಯನೆಂಬ ಹೆಸರಿನಿಂದ ಬೆಳೆದು ಯುವಕನಾದ ಮೇಲೆ ಪರಶುರಾಮನ ಕೋಪಕ್ಕೆ ಒಳಗಾಗಬೇಕಾಯಿತು. ಕರ್ಣನ ತೊಡೆಯ ಮೇಲೆ ಪರಶು ರಾಮನು ಒಮ್ಮೆ ತಲೆಯಿಟ್ಟು ನಿದ್ದೆ ಹೋಗಿದ್ದಾಗ ಇಂದ್ರನು ಕಳಿಸಿದ ವಜ್ರ ಕಿರೀಟಗಳು ಕರ್ಣನ ಎರಡು ತೊಡೆಗಳನ್ನು ಕೊರೆದವು, ಆದರೂ ಗುರುವಿಗೆ ತೊಂದರೆಯಾಗಬಾರದೆಂದು ಅದನ್ನು ಆತ ಸಹಿಸಿದ. ಆದರೆ ರಕ್ತವು ಸೋಕಿದಾಗ ಎಚ್ಚೆತ್ತ ಪರಶುರಾಮನು ಈತನು ಕ್ಷತ್ರಿಯನಿರಬೇಕೇ ಹೊರತು ಬೇರೆಯವನಲ್ಲವೆಂದು ತಿಳಿದು, ತನಗೆ ಸುಳ್ಳು ಹೇಳಿ ವಿದ್ಯೆಯನ್ನು ಕಲಿತದ್ದರಿಂದ ಅವಸಾನ ಕಾಲದಲ್ಲಿ ಬ್ರಹ್ಮಾಸ್ತ್ರವು ಕೈಗೊಡದಿರಲಿ ಎಂದು ಶಾಪವೀಯುತ್ತಾನೆ.

ಮುಂದೆ ಅರ್ಜುನನಿಗೆ ಇವನು ತಕ್ಕ ಪ್ರತಿಸ್ಪರ್ಧಿಯಾಗುತ್ತಾನೆಂಬ ಕಾರಣದಿಂದ ದುರ್ಯೋಧನನು ಕರ್ಣನನ್ನು ಸತ್ಕರಿಸಿ ತನ್ನ ಹೃದಯ ಮಿತ್ರನನ್ನಾಗಿ ಮಾಡಿಕೊಳ್ಳು ತ್ತಾನೆ. ಅವರಿಬ್ಬರ ಸ್ನೇಹದ ರೀತಿಯೆಂತಹು ದೆಂಬುದನ್ನು ನಾವಾಗಲೇ ನೋಡಿದ್ದೇವೆ. ಕರ್ಣನು ದುರ್ಯೋಧನನೊಡನೆ ಸೇರಿ ಅನೇಕ ಅಧರ್ಮಕೃತ್ಯಗಳನ್ನು ಮಾಡಿದ ನಿಜ. ಆದರೆ ಅವನು ಮಾಡಿದ ಅನ್ಯಾಯಕ್ಕಿಂತ ಅವನಿಗೆ ಆದ ಅನ್ಯಾಯವೇ ಹೆಚ್ಚು. ಕರ್ಣನನ್ನು ದುರ್ಯೋಧನನಿಂದ ಅಗಲಿಸಿದರೆ ಪಾಂಡವರಿಗೆ ದೊಡ್ಡ ಸಮಸ್ಯೆಯೊಂದು ಪರಿಹಾರವಾಗುತ್ತದೆಂಬುದನ್ನು ತಿಳಿದ ಶ್ರೀಕೃಷ್ಣನು ಕುಂತಿಯ ಸಹಾಯವನ್ನು ಪಡೆದು ಒಡೆಯುವ ಉಪಾಯಕ್ಕೆ ಕೈ ಹಾಕುತ್ತಾನೆ. ಪಾಂಡವರ ದೂತನಾಗಿ ಬಂದ ಕೃಷ್ಣನು ಯುದ್ಧ ನಡೆಯುವುದೆಂದೇ ತೀರ್ಮಾನವಾದಮೇಲೆ ಹಸ್ತಿನಾವತಿಯಿಂದ ಹೊರಡುವಾಗ ಕರ್ಣನ ಬಳಿಗೆ ಬಂದು ತನ್ನನ್ನು ಅಷ್ಟು ದೂರ ಕಳಿಸಿಕೊಡುವೆಯಂತೆ ಬಾ ಎಂದು ಕರೆದುಕೊಂಡು ಬರುತ್ತಾನೆ. ಊರ ಹೊರಗೆ ಬಂದಮೇಲೆ ಅವನ ಕಿವಿಯಲ್ಲಿ ಭೇದದ ಮಾತುಗಳನ್ನು ತುಂಬ ಉಪಾಯವಾಗಿ ಆಡುತ್ತಾನೆ :

ಭೇದಿಸಲೆಂದು ದಲ್ ನುಡಿದರೆನ್ನದಿರ್, ಒಯ್ಯನೆ ಕೇಳ ಕರ್ಣ, ನಿ
ನ್ನಾದಿಯೊಳಬ್ಬೆ ಕೊಂತಿ, ನಿನಗಮ್ಮನಹರ್ಪತಿ ಪಾಂಡುನಂದನರ್
ಸೋದರರ್, ಎಯ್ದೆ ಮಯ್ದುನನೆನಾಂ: ಪೆಱತೇನ್ ಪಡೆಮಾತೊ ನಿನ್ನದೀ
ಮೇದಿನಿ, ಪಟ್ಟಮುಂ ನಿನತೆ, ನೀನಿರೆ ಮತ್ತೆ ಪೆಱರ್ ನರೇಂದ್ರರೇ? (ಪಂ. ಭಾ. ೯–೬೪)

(ನಿಮ್ಮಲ್ಲಿ ಒಡಕುಂಟುಮಾಡಲೆಂದೇ ಈ ಮಾತನ್ನಾಡುತ್ತಿರುವೆನೆಂದು ಭಾವಿಸ ಬೇಡ. ನಿನ್ನ ತಾಯಿ ಕುಂತಿ, ಸೂರ್ಯನೇ ನಿನ್ನ ತಂದೆ, ಪಾಂಡವರು ತಮ್ಮಂದಿರು, ನಾನು ನಿನ್ನ ಮೈದುನ. ಇನ್ನೇನು ಹೇಳಲಿ? ಈ ರಾಜ್ಯ ಪಟ್ಟಗಳೆಲ್ಲ ನಿನ್ನವೇ. ನೀನಿರುವಾಗ ಬೇರೆಯವರು ರಾಜರಾಗಲು ಸಾಧ್ಯವೇ?) ಹೀಗೆಂದು ಹೇಳಿದುದಲ್ಲದೆ.,

ದುರ್ಯೋಧನನು ಈ ವಿಷಯವನ್ನು ತಿಳಿದಿದ್ದನೆಂದೂ ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕೆಂಬ ಸ್ವಾರ್ಥ ಉದ್ದೇಶದಿಂದ ನಿನ್ನ ಬಗ್ಗೆ ವಿಶ್ವಾಸವನ್ನು ತೋರಿಸುತ್ತಿದ್ದಾನೆಂದು ಕರ್ಣನ ಕಿವಿಯಲ್ಲಿ ಊದಿದ. ತಾನು ಯುದ್ಧದಲ್ಲಿ ಎದುರಿಸಿ ಕೊಲ್ಲಬೇಕಾಗಿರುವ ಪಾಂಡವರು ತನ್ನ ತಮ್ಮಂದಿರೆಂಬ ವಿಷಯ ತಿಳಿದಾಗ ಕರ್ಣನ ಮನಸ್ಸು ಅಪಾರವಾದ ಸಂಕಟಕ್ಕೊಳಗಾಯಿತು. ಆದರೆ ದುರ್ಯೋಧನನನ್ನು ಕೈ ಬಿಡುವಂತಿಲ್ಲ. ಈ ವಿಷಯವನ್ನೇಕೆ ತಮಗೆ ತಿಳಿಸಿದರೆಂದು ಪೇಚಾಡುತ್ತಾನೆ. ಈ ವಿಷಯವನ್ನು ಕೇಳಿದಾಗ

ಎನೆಯನೆ ಬಾಷ್ಪವಾರಿ ಪುಳಕಂಬೆರಸೂರ್ಮೆಯೆ ಪೊಣ್ಮೆ, ಮುನ್ನೆ ನೀ
ಮನಗಿದನೇಕೆ ಪೇೞ್ದಿರೊ. ನೆಗೞ್ತೆಯನಾಂಪಿನಂ ಸುಯೋ
ಧನನೆನಗೊಳ್ಕೈದ ಕೃತಮಂ ಪೆಱಗಿಕ್ಕಿ ನೆಗೞ್ತೆ ಮಾಸೆ ನ
ಣ್ಪಿನ ನೆವದಿಂದೆ ಪಾಂಡವರನಾನೊಳಪೊಕ್ಕೊಡೆ ನೀಮೆ ಪೇಸಿರೇ? **(ಪಂ.ಭಾ.೯-೬೮)**

(ಹೀಗೆನ್ನಲು ರೋಮಾಂಚನದೊಡದೆ ಕಣ್ಣೀರು ಹೊಮ್ಮಿ ಕರ್ಣನು ಹೇಳಿದನು; ಈಗ ನನಗೆ ಈ ವಿಷಯವನ್ನೇಕೆ ಹೇಳಿದಿರಿ? ದುಯೋಧನನು ತುಂಬಿದ ಪ್ರೀತಿಯಿಂದ ಮಾಡಿದ ಉಪಕಾರವನ್ನು ನೆನೆಯದೆ ನಂಟುತನದ ನೆವದಿಂದ ನಾನು ಪಾಂಡವರನ್ನು ಸೇರಿದರೆ ನೀವೂ ಹೇಸಿಕೊಳ್ಳುವುದಿಲ್ಲವೇ?) 'ನೀವೂ ಹೇಸಿಕೊಳ್ಳುವುದಿಲ್ಲವೇ?' ಎಂಬ ಮಾತಿನಿಂದ ಕರ್ಣನು ತನ್ನ ನಿರ್ಧಾರವನ್ನು ಹೇಳಿಬಿಡುತ್ತಾನೆ. ತನ್ನ-ದುರ್ಯೋಧನರ ಸ್ನೇಹಾತಿಶಯವನ್ನು ವಿವರಿಸುತ್ತಾರೆ. ಆದರೇನು ಕೃಷ್ಣನ ಉದ್ದೇಶ ಪೂರ್ತಿ ನೆರವೇರಿತು. ಕರ್ಣ-ದುರ್ಯೋಧನರನ್ನು ಆಗಲಿಸಬಲ್ಲೆನೆಂಬ ಭ್ರಮೆ ಅವನಿಗೂ ಇರಲಿಲ್ಲ. ಆದರೆ ಕರ್ಣನು ದೃಢಮನಸ್ಸಿನಿಂದ ಪಾಂಡವರ ಮೇಲೆ ಕೈ ಮಾಡಲು ಸಾಧ್ಯವಾಗದಿರುವಂತೆ ಅವನ ಮನಸ್ಸನ್ನು ಇಬ್ಭಾಗ ಮಾಡಿದ, ಇದರಿಂದ ಕರ್ಣನ ದುರಂತ ನಿಶ್ಚಯವಾಯಿತು. ತಮ್ಮಂದಿರ ಮೇಲಣ ಪ್ರೀತಿ-ಆಪ್ತಗೆಳೆಯನ ಸ್ನೇಹ ಇವುಗಳ ಮಧ್ಯೆ ಕರ್ಣನ ಮನಸ್ಸು ಉಯ್ಯಾಲೆಯಾಡಿತು, ಚಿಂತೆಯಿಂದ ಕೂಡಿದ ಕರ್ಣನು ತನ್ನ ಮನೆಗೆ ಬಂದು ದೀರ್ಘಕಾಲದ ಆಲೋಚನೆಯ ನಂತರ ಬಂದ ತೀರ್ಮಾನವು ಹೃದಯಕರಗಿಸುವಂಥದು:

ಕುರುಪತಿಗಿಲ್ಲ ದೈವಬಲಂ, ಆಜಿಗೆ ಮೇಲ್ಮಲೆಗೆಯ್ವರಾಗಳುಂ
ಗುರು ಗುರುಪುತ್ರ ಸಿಂಧುಸುತರ್, ಆಳ್ದನುಮೆನ್ನನೆ ನಚ್ಚಿ ಪೆರ್ಚಿ ಮುಂ
ಪೊರೆದನ್, ಇದಿರ್ಚಿ ಕಾದುವರುಮೆನ್ನಯ ಸೋದರರ್, ಎಂತು ನೋಡಿ ಕೊ
ಕ್ಕರಿಸದೆ ಕೊಲ್ವೆನ್, ಎನ್ನೊಡಲನಾಂ ತವಿಪೆಂ ರಣರಂಗಭೂಮಿಯೊಳ್

(ಪಂ.ಭಾ. ೯-೭೦)

(ದುರ್ಯೋಧನಿಗೆ ದೈವ ಬಲವಿಲ್ಲ, ದ್ರೋಣ ಅಶ್ವತ್ಥಾಮ ಭೀಷ್ಮರುಗಳು ತೋರಿಕೆಗೆ ಮಾತ್ರ ಯುದ್ಧ ಮಾಡುವವರು, ರಾಜನಾದರೋ ನನ್ನನ್ನೇ ನಂಬಿ ಕಾಪಾಡಿದ್ದಾನೆ. ಆದರೆ ನನ್ನನ್ನು ಎದುರಿಸುವವರು ತಮ್ಮಂದಿರು, ಇದನ್ನು ತಿಳಿದೂ ಹಿಂಜರಿಯದೆ ಕೊಲ್ಲಲು ಸಾಧ್ಯವಿಲ್ಲ. ಆದ್ದರಿಂದ ಯುದ್ಧ ಭೂಮಿಯಲ್ಲಿ ನನ್ನ ದೇಹವನ್ನೇ ನೀಗುತ್ತೇನೆ.)

ಕೃಷ್ಣನು ಈ ರೀತಿ ಕರ್ಣನ ಮನಸ್ಸನ್ನು ಕೆಡಿಸಿದ್ದಲ್ಲದೆ ಅವನಲ್ಲಿಗೆ ಕುಂತಿಯನ್ನೂ ಕಳಿಸುತ್ತಾನೆ. ಒಂದು ಭಾನುವಾರದಂದು ಸೂರ್ಯನಿಗೆ ಅರ್ಘ್ಯವನ್ನೂ ಕೊಡಲು ಕರ್ಣನು ಬಂದಿದ್ದಾಗ ಗಂಗಾನದೀ ತೀರದಲ್ಲಿ ಕುಂತಿಯು ಕಾಣಿಸಿಕೊಳ್ಳುತ್ತಾಳೆ. ಅವಳಿಗೆ ಕರ್ಣನು ನಮಸ್ಕಾರ ಮಾಡುತ್ತಾನೆ. ಸೂರ್ಯನೇ ಬಂದು ನಿನ್ನ ತಾಯಿಯು ನಿನ್ನಡೆಗೆ ಬಂದಿರುವುದು ಪುರಿ ಗಣೆಯನ್ನು ಬೇಡುವುದಕ್ಕಾಗಿ ಅದನ್ನು ಕೊಡಬೇಡ ಎಂದು ಎಚ್ಚರಸುತ್ತಾನೆ. ಆದರೆ ದಾನಶೂರನಾದ ಕರ್ಣನು ಅದನ್ನು ಗಮನಿಸಿದೆ ತಾಯಿಗೆ ಕೈ ಮುಗಿದು ನನ್ನ ಪುಣ್ಯವೇ ಬಂದಂತೆ ನೀವು ಬಂದಿದ್ದೀರಿ ಎಂದು ಹೇಳುತ್ತಾನೆ. ಅಲ್ಲದೆ

ಚಲಮುಂ ಚಾಗಮುಂ ಆಳವುಂ
ಕಲಿತನಮುಂ ಕುಲಮುಮ್ ಈಗಳೆನ್ನಯ ಮೆಯ್ಯೊಳ್
ನೆಲಸಿದವು ನಿಮ್ಮ ಕರುಣಾ
ಬಲದಿಂ, ನೀವೆನ್ನನಿಂದು ಮಗನೆಂದುದರಿಂ **(ಪಂ.ಭಾ. ೯–೮೦)**

(ನಿಮ್ಮ ಕರುಣೆಯಿಂದ, ನಿಮ್ಮ ಮಗನೆಂದು ನನ್ನನ್ನು ಕರೆದದ್ದರಿಂದ ಈಗ ನನ್ನ ಮೈಯಲ್ಲಿ ಚಲ ತ್ಯಾಗ ಪರಾಕ್ರಮ ಶೌರ್ಯ ಕುಲಗಳೆಲ್ಲ ಬಂದು ನೆಲಸಿದವು.) ಸರಿ, ಕರ್ಣನು ರಾಜನಾಗಬೇಕೆಂದು ಕುಂತಿಯೂ ಕೇಳಿಕೊಳ್ಳುತ್ತಾಳೆ. ಆದರೆ ಈ ಮಾತನ್ನು ಕೇಳಿ ಮುಗುಳ್ನಕ್ಕ ಕರ್ಣನು ತಾಯಿಗೆ ಹೇಳುವ ಮಾತನ್ನು ಕೇಳಿರಿ:

ಭಯಮುಂ ಲೋಭಮುವೆಂಬ ತೆಮ್ಮುತೆರಡುಂ ಪಾಪಕ್ಕೆ ಪಕ್ಕಾಗೆ ಪಾ
ಟಿಯನೊಕ್ಕು ಆಳ್ದನಗೆಯ್ದ ಸತ್ಕೃತಮುಮಂ ಪಿಂತಿಕ್ಕಿ ಜೋಳಕ್ಕೆ ತ
ಪ್ಪಿಯುಂ ಇಂ ಬಾಳ್ವುದೆ? ಪೂಣ್ದು ನಿಲ್ಲದಿಕೆಯಿಂ ಬಾಳ್ವಂತು ವಿಖ್ಯಾತ ಕೀ
ರ್ತಿಯವೊಲೀಯೊಡಲ್, ಅಬ್ಬೆ ಪೇೞಿಮೆನಗೇಂ ಕಲ್ಪಾಂತರಸ್ಥಾಯಿಯೇ

(ಪಂ.ಭಾ. ೯–೮೪)

(ತಾಯೇ, ಭಯ–ಲೋಭಗಳೆಂಬ ಪಾಪಗಳಿಗೆ ಸಿಕ್ಕಿ, ಕ್ರಮವಾದ ದಾರಿಯನ್ನು ಬಿಟ್ಟು ಸ್ವಾಮಿಯ ಉಪಕಾರವನ್ನು ಲೆಕ್ಕಿಸದೆ ಅನ್ನವಿಟ್ಟವನನ್ನು ಕೈಬಿಟ್ಟು ಬದುಕಿರಬಹುದೇ? ಪ್ರತಿಜ್ಞೆಯನ್ನು ತಪ್ಪಿ ಬಾಳಬೇಕಾದರೆ ಕೀರ್ತಿಯಂತೆ ನನ್ನ ದೇಹವೇನು ಶಾಶ್ವತವೇ?) ಎಂಥ ಮಾತು! ಸ್ನೇಹದಲ್ಲಿ ಆದ್ದಿ ಹೋಗಿರುವ ಕರ್ಣನಿಗೆ ಯಾವ ಆಕರ್ಷಣೆಯೂ ಮನಸ್ಸನ್ನು ಕೆಡಿಸಲು ಸಾಧ್ಯವಿಲ್ಲ. ಅಲ್ಲದೆ "ಬೆಸ್ತರವನೆನಿಸಿಕೊಂಡಿದ್ದಾಗಲೇ ನಾನು ಸ್ವಲ್ಪವೂ ಗುಣವನ್ನು ಬಿಟ್ಟರಲಿಲ್ಲ. ಇನ್ನು ನಿಮ್ಮ ಮಗನೆನಿಸಿಕೊಂಡ ಮೇಲೆ ಗುಣವನ್ನು ಬಿಸುಡಲು ಸಾಧ್ಯವೇ? ನನ್ನ ಹಂಬಲವನ್ನು ಬಿಟ್ಟುಬಿಡಿರಿ" ಎಂದು ಹೇಳಿದಾಗ ಕುಂತಿಗೇ ತಾನು ಎಂಥ ಮಾತನ್ನು ಹೇಳಿದೆನೆಂದು ನಾಚಿಕೆಯಾಗಿರಬೇಕು. ಕೊನೆಗೆ ಪಾಂಡವರ ಮೇಲೆ ಪುರಿಗಣೆಯನ್ನು ಪ್ರಯೋಗಿಸುವುದಿಲ್ಲವೆಂದು ತಾಯಿಗೆ ಕರ್ಣನು ಮಾತು ಕೊಡುತ್ತಾನೆ. ಈ ಸಂದರ್ಭದಲ್ಲಿ ಪಂಪನು ಕರ್ಣನ ಮೂಲಕ ಆಡಿಸಿರುವ ಮಾತುಗಳ ವೈಖರಿಯೆಂಥದು! ಈ ಪ್ರಸಂಗದ ಕರ್ಣನ ದೃಢ ಮನಸ್ಸಿನ ರೀತಿ ಹೇಗೆ ಮನಸ್ಸನ್ನು ಹೊಗುತ್ತದೆ! ಅವನ ಗಂಭೀರ ಪಾತ್ರಕ್ಕೆ ಅನುಗುಣವಾದ ಮಾತುಗಳು. ಹೆಚ್ಚು ಕಡಿಮೆಯಿಲ್ಲದೆ ಆಡುವ ಮಿತವಾದ ಮಾತುಗಳು, ಸ್ನೇಹ–ಸ್ವಾಮಿ ಭಕ್ತಿಗಳ

ಪರಾಕಾಷ್ಠೆ, ಸ್ವಾರ್ಥವಿಲ್ಲದೆ ಎರಡು ವಿರುದ್ಧ ಸೆಳೆತಗಳಿಗೊಳಗಾಗಿ ತನ್ನನ್ನೇ ಆಹುತಿಯನ್ನಾಗಿ ಮಾಡಿಕೊಳ್ಳುವ ನಿರ್ಧಾರ–ಇವುಗಳೆಲ್ಲವೂ ಕರ್ಣನ ಪಾತ್ರವನ್ನು ತಮ್ಮ ಹೃದಯದಲ್ಲಿ ನೆಲೆನಿಲ್ಲುವಂತೆ ಮಾಡುತ್ತವೆ!

ಧರ್ಮಸಂಕಟದಲ್ಲಿ ಸಿಕ್ಕಿಕೊಂಡ ಕರ್ಣನು ಮುಂದೆ ನಡೆದುಕೊಳ್ಳುವ ರೀತಿಯು ಅತ್ಯಂತ ಸಹಜವಾದುದು. ದ್ರೋಣ–ಭೀಷ್ಮರೆಲ್ಲ ತೋರಿಕೆಗೆ ಯುದ್ಧ ಮಾಡುವವರು, ನಿಷ್ಠಾವಂತನಾಗಿದ್ದ ತಾನು ಈಗ ಒಂದೇ ಮನಸ್ಸಿನಿಂದ ಯುದ್ಧ ಮಾಡಲಾಗದಂತೆ ಕೃಷ್ಣ–ಕುಂತಿಯರು ಮಾಡಿ ಬಿಟ್ಟಿದ್ದಾರೆ: ಆದರೆ ದುರ್ಯೋಧನನಿಗೆ ಒಳ್ಳೆಯದಾಗಬೇಕೆಂದು ಅವನ ಹಂಬಲ, ಈ ತನ್ನ ನಿಸ್ಸಹಾಯಕತೆ–ಹತಾಶ ಮನೋಭಾವಗಳಿಂದ ಕರ್ಣನು ಕೆಲವೊಮ್ಮೆ ಉದ್ವೇಗಗೊಳ್ಳುತ್ತಾನೆ. ಅಂತಹ ಒಂದು ಸನ್ನಿವೇಶವೆಂದರೆ ಭೀಷ್ಮರಿಗೆ ಸೇನಾಧಿಪತ್ಯವನ್ನು ಕಟ್ಟುವ ಪ್ರಸಂಗ. ಕೌರವರ ಕಡೆಯಲ್ಲಿ ಅತ್ಯಂತ ಹಿರಿಯರಾದ ಭೀಷ್ಮರಿಗೆ ಸೇನಾಪತಿಯ ಪಟ್ಟವನ್ನು ದುರ್ಯೋಧನನು ಕಟ್ಟಿದಾಗ ಅವರನ್ನು ಕರ್ಣನು ಮೂದಲಿಸುತ್ತಾನೆ:

ಭಗವತಿಯೇಱುವೆಟ್ಟ ತೆಱದಿಂ ಕತೆಯಾಯ್ತಿವರೇಱು, ನೀನಿದಂ
ಬಗೆದಿವರಿನ್ನುಮಾಂತಿಱಿವರೆಂದು ವಿಮೋಹಿಸಿ ವೀರಪಟ್ಟಮಂ
ಬಗೆಯದೆ ಕಟ್ಟಿದೈ, ಗುರುಗಳಂ ಕುಲವೃದ್ಧರನಾಜಿಗುಯ್ದು ಕೆ
ಮ್ಮಗೆ ಪಗೆವಾಡಿಯೊಳ್ ನಗಿಸಿಕೊಂಡಡೆ ಬಂದಪುದೇಂ ಸುಯೋಧನಾ

(ಪಂ.ಭಾ. ೧೦–೧೬)

(ದೇವತೆಯ ಮೈ ಮೇಲೆ ಬರುವಂತಹ ರೀತಿಯಲ್ಲಿ ಭೀಷ್ಮರ ಶೌರ್ಯವು ಈಗ ಕಥೆಯಾಗಿಬಿಟ್ಟಿದೆ. ಇದನ್ನು ತಿಳಿಯದೆ ಇವರಿನ್ನೂ ಯುದ್ಧ ಮಾಡಬಲ್ಲರೆಂಬ ಭ್ರಮೆಯಿಂದ ಇವರಿಗೆ ಸೇನಾಧಿಪತ್ಯವನ್ನು ವಹಿಸಿದ್ದೀಯೆ. ಇಂತಹ ಮುದುಕರನ್ನು ಯುದ್ಧರಂಗಕ್ಕೆ ಕಳುಹಿಸಿ ಶತ್ರುಗಳು ನಮ್ಮನ್ನು ಕಂಡು ಅಪಹಾಸ್ಯ ಮಾಡುವಂತೆ ಮಾಡಿಕೊಂಡರೆ ಏನು ಬಂದಹಾಗಾಯಿತು–ಎಂದು ದುರ್ಯೋಧನನನ್ನು ಕೇಳುತ್ತಾನೆ.) 'ಪಗೆವರ ನಿಟ್ಟೆಲ್ವಂ ಮುರಿವೊಡೆನಗೆ ಪಟ್ಟಂಗಟ್ಟಾ' (ಶತ್ರುಗಳ ಮೂಳೆ ಮುರಿಯಬೇಕಾದರೆ ನನಗೆ ಸೇನೇಧಿಪತ್ಯವನ್ನು ವಹಿಸು) ಎಂದು ತನ್ನ ಶೌರ್ಯವನ್ನು ಮೆರಿಯುತ್ತಾನೆ. ಆದರೆ ಇಲ್ಲಿಯೂ ದ್ರೋಣ ಮುಂತಾದವರಿಂದ ಕುಲದ ಕಾರಣಕ್ಕಾಗಿ ಅವಮಾನಿರತನಾಗುತ್ತಾನೆ. ಆ ಕೋಪದಿಂದ ಒಂದು ಘೋರಪ್ರತಿಜ್ಞೆಯನ್ನೂ ದುಡುಕಿನಿಂದ ಮಾಡಿಬಿಡುತ್ತಾನೆ:

ಗಂಗಾಸುತಂ ಪೃಥಾಸುತ
ರಂ ಗೆಲ್ದೊಡೆ ತಪಕೆ ಪೋಪೆನ್, ಅವರ್ಗಳ ಕಯ್ಯೊಳ್
ಗಾಂಗೇಯನೞಿದೊಡಹಿತರ
ನಾಂ ಗೆಲೆ ತಳ್ತಿಱಿವೆನ್, ಅನ್ನೆಗಂ ಬಿಲ್ವಿಡಿಯೆಂ (ಪಂ.ಭಾ. ೧೦–೨೨)

(ಭೀಷ್ಮರು ಪಾಂಡವರನ್ನು ಗೆದ್ದರೆ ನಾನು ತಪಸ್ಸಿಗೆ ಹೊರಟುಹೋಗುತ್ತೇನೆ. ಅವರಿಂದ ಭೀಷ್ಮರು ಸತ್ತರೆ ಆಗ ಪಾಂಡವರೊಡನೆ ಹೋರಾಡಿ ನಾನು ಗೆಲ್ಲುತ್ತೇನೆ. ಅಲ್ಲಿಯವರಿಗೂ ಬಿಲ್ಲನ್ನು ಹಿಡಿಯುವುದಿಲ್ಲ.) ತನ್ನ ಕೋಪದ ಭರದಲ್ಲಿ ಯುದ್ಧಮಾಡುವುದಿಲ್ಲ

ವೆಂಬ ತನ್ನ ಪ್ರತಿಜ್ಞೆಯಿಂದ ಪ್ರೀತಿಯ ಸ್ನೇಹಿತನಾದ ದುರ್ಯೋಧನನಿಗೇ ತೊಂದರೆಯಾಗುತ್ತದೆಂಬ ವಿವೇಕವನ್ನೂ ಕಳೆದು ಕೊಳ್ಳುತ್ತಾನೆ.

ಕರ್ಣನು ಭೀಷ್ಮರ ಮಹಿಮೆಯನ್ನರಿಯದೆಯೇ ಆಡಿದ ಮಾತುಗಳಿವು. ಆದರೆ ಭೀಷ್ಮರು ತುಂಬಿದ ಕೊಡ. ತಮ್ಮ ತಂದೆಗಾಗಿ ರಾಜ್ಯದ ಒಳಿತಿಗಾಗಿ ಆಜನ್ಮ ಬ್ರಹ್ಮಚರ್ಯವನ್ನು ತಾಳಿದ ಸಂಯಮ ಹಾಗೂ ಮನೋದಾರ್ಢ್ಯಗಳು ಅವರದು. ಅಂತಹವರು ಕರ್ಣನಂತೆ ಹಾರಾಡಲಾರರು. ಆದರೆ ಕರ್ಣನಂತಹ ಜವಾಬ್ದಾರಿಯುತ ಸ್ಥಾನದಲ್ಲಿರುವವನು ತಮ್ಮ ಶೌರ್ಯದ ಬಗ್ಗೆ ಸಂಶಯದ ಮಾತುಗಳನ್ನಾಡಿದಾಗ ಅದನ್ನು ಕೇಳಿ ಸುಮ್ಮನೆ ಕೂತಿರಲೂ ಆರರು. ಅವರು ಕರ್ಣನಿಗೆ ಕೊಟ್ಟ ಉತ್ತರದಲ್ಲಿ ಅವರ ಉದಾತ್ತ ಹಿರಿಯ ವ್ಯಕ್ತಿತ್ವವು ಗೋಚರವಾಗುತ್ತದೆ. ಅವರು ಹೇಳುತ್ತಾರೆ:

ಕಲಿತನದುರ್ಕು, ಜವ್ವನದ ಸೊರ್ಕು, ನಿಜೇಶನ ನಚ್ಚು, ಮಿಕ್ಕತೋ
ಳ್ವಲದ ಪೊಡರ್ಪು, ಕರ್ಣ ನಿನ್ನಗುಳ್ಳನಿತೇನ್ ಎನಗುಂಟೆ? ಭಾರತಂ
ಕಲಹಂ ಇದಿರ್ಚುವಂ ಹರಿಗಂ, ಅಪ್ಪೊಡೆ ಮೊಕ್ಕಳಮೇಕೆ ನೀಂ ಪಳಂ
ಚಲೆದಪೆಯಣ್ಣ ಸೂಟ್ಪಡೆಯಲಪ್ಪುದು ಕಾಣ ಮಹಾಜಿರಂಗದೊಳ್

(ಪಂ.ಭಾ. ೧೦-೨೩)

(ಕರ್ಣ, ಕಲಿತನದ ಉಕ್ಕೂ, ಯೌವನದ ಸೊಕ್ಕೂ, ಸ್ವಾಮಿಯ ನಂಬಿಕೆಯೂ ಬಾಹುಬಲದ ಔಜ್ವಲ್ಯವು ನಿನಗಿರುವಷ್ಟು ನನಗೆಲ್ಲಿದೆ? ಆದರೆ ಭಾರತವೆಂಬುದು ಯುದ್ಧ, ನಮ್ಮ ವಿರುದ್ಧ ಬಣದಲ್ಲಿ ಕೃಷ್ಣನಿದ್ದಾನೆ. ಆದ್ದರಿಂದ ಇಷ್ಟೊಂದೇಕೆ ಹಾರಾಡುತ್ತಿದ್ದೀಯೆ. ನಿನ್ನ ಸರದಿಯೂ ಬರುತ್ತದೆ. ಕಾಯುತ್ತಿರು.) ಈ ಪದ್ಯದಲ್ಲಿಯಂತೂ ಭೀಷ್ಮರು ಮುಂದಾಗುವುದನ್ನು ಮುನ್ನುಡಿಯುವ ಮಹರ್ಷಿಯಂತೆ ಮಾತನಾಡುತ್ತಿದ್ದಾರೆ. ಇದು ಸಾಮಾನ್ಯ ಯುದ್ಧವಲ್ಲ. ಶ್ರೀ ಕೃಷ್ಣನನ್ನು ಎದುರಿಸಬೇಕಾದ ಯುದ್ಧವೆಂದು ಹೇಳುವುದರ ಮೂಲಕ ಕೃಷ್ಣನಿಗೆ ತಮ್ಮ ಗೌರವವನ್ನು ಸಲ್ಲಿಸುವುದರ ಜೊತೆಗೆ ಈ ಯುದ್ಧದಲ್ಲಿ ಗೆಲ್ಲುವುದು ಅಷ್ಟೊಂದು ಸುಲಭವಲ್ಲ ಎಂದೂ ಎಚ್ಚರಿಸುತ್ತಿದ್ದಾರೆ. ಅಲ್ಲದೆ ಕೇವಲ ಹಾರಾಡಿದರೆ ಏನು ಪ್ರಯೋಜನ, ನಿನ್ನ ಸರದಿಯೂ ಬರುತ್ತದೆ, ಆಗ ನೀನೇನು ಮಾಡುವೆಯೋ ನೋಡೋಣ ಎಂದು ಹೇಳುವುದರಲ್ಲಿ ನಾನು ಈ ಯುದ್ಧವನ್ನು ಗೆಲ್ಲಲಾರೆ, ನೀನೂ ಗೆಲ್ಲಲಾರೆ ಎಂಬ ಅರ್ಥವೇ ಅಡಕವಾಗಿದೆ. ಪಾಂಡವ-ಕೌರವರ ಬಲಾಬಲಗಳನ್ನು ತಿಳಿದಿರುವುದಲ್ಲದೆ, ಶ್ರೀಕೃಷ್ಣನ ಜಾಣ್ಮೆಯನ್ನು ಹೃದ್ಗತ ಮಾಡಿಕೊಂಡಿರುವ ಭೀಷ್ಮರು ಹೀಗೆ ಮಾತನಾಡಬಲ್ಲರು, ಅವರು ಹೇಳಿದುದು ನಿಜವಾಗುತ್ತದೆ. ಆದರೆ ಅವರು ಇಷ್ಟಕ್ಕೇ ಸುಮ್ಮನಾಗಲಿಲ್ಲ. ತಾವು ಎಂತಹ ಭಯಂಕರ ರೀತಿಯಲ್ಲಿ ಯುದ್ಧ ಮಾಡಬಲ್ಲರೆಂಬುದನ್ನು ಪ್ರತಿಜ್ಞೆಯೊಂದರ ಮೂಲಕ ತೋರ್ಪಡಿಸಿ ಕೊಳ್ಳುತ್ತಾರೆ: ಚಕ್ರವನ್ನು ಹಿಡಿಯುವುದಿಲ್ಲವೆಂದು ಪ್ರತಿಜ್ಞೆ ಮಾಡಿರುವ ಕೃಷ್ಣನಿಂದ ಚಕ್ರವನ್ನು ಹಿಡಿಸುತ್ತೇನೆ. ಶ್ರೀಕೃಷ್ಣನನ್ನೊಳಗೊಂಡ ಅರ್ಜುನನ ರಥವನ್ನು ತಮ್ಮ ಬಾಣದಿಂದ ಎಂಟು ಗಾವುದ ಹಿಂದೆ ಹೋಗುವಂತೆ ಮಾಡುತ್ತೇನೆ. ಪ್ರತಿ ನಿತ್ಯವೂ ಹದಿನೈದು ಸಾವಿರ ರಾಜರನ್ನು ಯುದ್ಧದಲ್ಲಿ ಕೊಲ್ಲುತ್ತೇನೆ ಎಂಬುದೇ ಆ ಪ್ರತಿಜ್ಞೆ.

ಕರ್ಣನ ದುಡುಕಿನ ಅವೇಶದ ಪರಿಚಯವಾಗುವಂತೆಯೇ ಇಲ್ಲಿ ಭೀಷ್ಮರ ಆಳವಾದ ವ್ಯಕ್ತಿತ್ವದ ಪರಿಚಯವಾಗುತ್ತದೆ. ಇದು ಕರ್ಣನ ಅನುಭವಕ್ಕೂ ಬರುತ್ತದೆ. ಈ ಸನ್ನಿವೇಶದಲ್ಲಿ ಹಾರಾಡಿದ ಕರ್ಣನು ತಾನೇ ಸೇನಾಧಿಪತಿಯಾದಾಗ ಮೊಟ್ಟ ಮೊದಲು ಮಾಡಿದ ಕೆಲಸವೆಂದರೆ ಭೀಷ್ಮರಲ್ಲಿಗೆ ಬಂದು ಕ್ಷಮಾಪಣೆಯನ್ನು ಕೇಳಿದುದು: ಅವರನ್ನು ಹೀಯಾಳಿಸಿದ್ದ ಕರ್ಣನೇ ಈಗ ಹೇಳುವ ಮಾತನ್ನು ಕೇಳಿ:

ಆಂ ಮಾತನಱಿಯದೆ ಮುಳಿದೆಂ
ನಿಮ್ಮಡಿಯಂ ನೋಯೆ ನುಡಿದೆಂ, ಉಱದೇಳಿಸಲೇ
ನೆಮ್ಮಳವೆ? ಮಱಿವುದಾಮನ
ದುಮ್ಮಚ್ಚಮನಜ್ಜ, ನಿಮ್ಮನೆರೆಯಲೆ ಬಂದೆಂ (ಪಂ.ಭಾ. ೧೨-೫೪)

(ಅಜ್ಜಾ ನಾನು ತಿಳಿಯದೆ ಕೋಪದ ಮಾತುಗಳನ್ನಾಡಿ ನಿಮ್ಮನ್ನು ನೋಯಿಸಿದೆ. ತಮ್ಮನ್ನು ಹೀಯಾಳಿಸಲು ನಾವೆಷ್ಟರವರು? ಆ ನೋವನ್ನು ಮರೆತು ಬಿಟ್ಟು ನಮಗೆ ಅನುಗ್ರಹಸಬೇಕೆಂದು ಬೇಡಿಕೊಳ್ಳಲಿಕ್ಕಾಗಿಯೇ ಬಂದಿದ್ದೇನೆ.)

ಧುರದೊಳ್ ನಿಮ್ಮಡಿಯಂ ಗೆಲ
ಲರಿಯರನ್ ಆ ಪಾಂಡುಸುತರನ್ ಎಮ್ಮಂದಿಗರ
ಚ್ಚರಿಯಲ್ತೆ ಗೆಲ್ವರೆಂಬುದು.
ಹರಿಗನೊಳಿರಿದೆಂತುಮೆನ್ನ ಚಲಮನೆ ಮೆಱಿವೆಂ (ಪಂ.ಭಾ. ೧೨-೫೫)

(ನೀವೇ ಗೆಲ್ಲಲಾರದಂತಹ ಆ ಪಾಂಡವರನ್ನು ನಮ್ಮಂತಹವರು ಗೆಲ್ಲುವೆವೆಂದು ಹೇಳುವುದು ಅಚ್ಚರಿಯಲ್ಲವೆ? ಕೃಷ್ಣನಿರುವ ಅವರ ವಿರುದ್ಧವಾಗಿ ಹೋರಾಡಿ ಚಲವನ್ನು ಮರೆಯುತ್ತೇನೆ.) ಈ ಮಾತನ್ನು ಕೇಳಿದಾಗ ಕರ್ಣನ ಬಗ್ಗೆ ನಮಗೆ ಹೆಚ್ಚು ಆತ್ಮೀಯಭಾವ ಮೂಡುತ್ತದೆ. ಶೌರ್ಯ-ಪ್ರತಾಪ-ನಿಷ್ಠೆಗಳಿಂದ ಕೂಡಿದ ಕರ್ಣನು ದುಡುಕಿ ಮಾತನಾಡಿದುದು ದೊಡ್ಡ ವಿಷಯವಲ್ಲ. ಅಷ್ಟೇ ಸಜ್ಜನಿಕೆಯಿಂದ ತನ್ನ ದುಡುಕಿಗೆ ಪಶ್ಚಾತ್ತಾಪಪಡುವುದು ದೊಡ್ಡದು. ಮನುಷ್ಯ ಸ್ವಭಾವದ ಪರಿಚಯವಿರುವ ಮಹಾಕವಿಯು ಮಾತ್ರವೇ ಇಂಥ ಪ್ರಸಂಗಗಳನ್ನು ಇಷ್ಟು ಸೊಗಸಾಗಿ ಮೂಡಿಸಬಲ್ಲನು. ಅವರವರ ವಯಸ್ಸು ವ್ಯಕ್ತಿತ್ವಗಳಿಗನುಣವಾಗಿ ನಡೆದುಕೊಳ್ಳುವ ಈ ಚಿತ್ರ ಕಣ್ಣೆದುರಿಗೆ ನಡೆದಷ್ಟೇ ಪರಿಣಾಮಕಾರಿಯಾಗಿದೆ.

ಹೀಗೆ ಸ್ವಾಮಿ ನಿಷ್ಠೆಯಿಂದ ಮೆರೆದು ಸ್ನೇಹಕ್ಕಾಗಿ ತನ್ನ ಜೀವನವನ್ನೇ ನೀಡಿದ ಕರ್ಣನ ಪಾತ್ರವು ಪಂಪನ ಮನಸ್ಸನ್ನು ಬಹುವಾಗಿ ಆಕರ್ಷಿಸಿಬಿಟ್ಟಿದೆ. ಆದ್ದರಿಂದಲೇ ಮಹಾಪರಾಕ್ರಮವನ್ನು ತೋರಿಸಿ ಅಸುನೀಗಿದ ಕರ್ಣನನ್ನು ಕುರಿತು ಹೀಗೆ ಹೇಳುತ್ತಾನೆ:

ನೆನೆಯದಿರಣ್ಣ ಭಾರತದೊಳಿಂ ಪೆಱರಾರುಮನ್, ಒಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ; ಕರ್ಣನೊಳಾರ್ದೊರೆ! ಕರ್ಣನೇಱು, ಕ
ರ್ಣನ ಕಡುನನ್ನಿ, ಕರ್ಣನಳವು, ಅಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನಮಲ್ತೆ ಭಾರತಂ

(ಪಂ.ಭಾ. ೧೨-೨೧೭)

(ಭಾರತದಲ್ಲಿ ಬೇರಾರನ್ನೂ ನೆನೆಯಬೇಡಿ, ಒಂದೇ ಮನಸ್ಸಿನಿಂದ ನೆನೆಯುವ ಹಾಗಿದ್ದರೆ ಕರ್ಣನನ್ನು ನೆನೆಪಿಸಿಕೊಳ್ಳಿ, ಕರ್ಣನಿಗೆ ಸಮನಾರು! ಕರ್ಣನ ಶೌರ್ಯ ಕರ್ಣನ ಸತ್ಯವಂತಿಕೆ, ಕರ್ಣನ ಸಾಹಸ, ಶ್ರೇಷ್ಠವ್ಯಕ್ತಿಯಾದ ಕರ್ಣನ ತ್ಯಾಗ ಹೀಗೆ ಕರ್ಣನ ವಿಷಯದಿಂದ ತುಂಬಿರುವ ಭಾರತವು ಕರ್ಣ ರಸಾಯನವಾಗಿದೆ.) ಭಾರತವು ಕರ್ಣರಸಾಯನ ಎನ್ನುವಲ್ಲಿ ಕವಿ ಚಮತ್ಕಾರವಾಗಿ ಸುಂದರವಾಗಿ ಎರಡು ಅರ್ಥಗಳನ್ನಿರಿಸಿದ್ದಾನೆ. ಕಾವ್ಯವು ಕರ್ಣನ ವಿಷಯದಿಂದಾಗಿ ರಸಾಯನದಂತೆ ಮಧುರವಾಗಿದೆ ಎಂಬುದು ಒಂದು ಅರ್ಥವಾದರೆ, ಅದು ಕರ್ಣಕ್ಕೆ (ಕಿವಿಗೆ) ರಸಾಯನದಂತೆ ಮಧುರವಾಗಿದೆ ಎಂಬುದು ಇನ್ನೊಂದು, ಪ್ರತಿ ನಾಯಕನಾದ ಕರ್ಣನ ಬಗ್ಗೆ ಪಂಪನು ಸುಂದರವಾದ ಚರಮಗೀತೆಯನ್ನು ಹಾಡಿ ಅವನಿಗೆ ತನ್ನ ಗೌರವವನ್ನು ಸಲ್ಲಿಸಿದ್ದಾನೆ.

ಪಂಪನು ಈ ಕಾವ್ಯವು ಲೌಕಿಕ ಕಾವ್ಯವಾಗಿರುವುದರಿಂದಲೇ ಕೃಷ್ಣನಿಗೆ ವಿಶೇಷ ವಾದ ಸ್ಥಾನವಿಲ್ಲ ಇಲ್ಲಿ. ಕಾವ್ಯದ ಕೊನೆಗೆ ಭಾರತದ ವಿವಿಧ ಪಾತ್ರಗಳ ವೈಶಿಷ್ಟ್ಯವನ್ನು ಕುರಿತು ಒಂದು ಪದ್ಯವಿದೆ.

> **ಚಲದೊಳ್ ದುರ್ಯೋಧನಂ, ನನ್ನಿಯೊಳಿನತನಯಂ, ಗಂಡಿನೊಳ್ ಭೀಮಸೇನಂ,**
> **ಬಲದೊಳ್ ಮದ್ರೇಶನ್, ಅತ್ಯುನ್ನತಿಯೊಳಮರ ಸಿಂಧೂದ್ಭವಂ, ಚಾಪವಿದ್ಯಾ**
> **ಬಲದೊಳ್ ಕುಂಭೋದ್ಭವಂ, ಸಾಹಸದ ಮಹಿಮೆಯೊಳ್ ಫಲ್ಗುಣಂ, ಧರ್ಮದೊಳ್ ನಿ**
> **ರ್ಮಲಚಿತ್ತಂ ಧರ್ಮಪುತ್ರನ್ ಮಿಗಿಲ್, ಇವರ್ಗಳಿನೀ ಭಾರತಂ ಲೋಕಪೂಜ್ಯಂ**
>
> **(ಪಂ.ಭಾ. ೧೪-೬೪)**

(ಚಲದಲ್ಲಿ ದುರ್ಯೋಧನನೂ, ಸತ್ಯದಲ್ಲಿ ಕರ್ಣನೂ, ಧೈರ್ಯದಲ್ಲಿ ಭೀಮನೂ, ಬಲದಲ್ಲಿ ಶಲ್ಯನೂ, ಔನ್ನತ್ಯದಲ್ಲಿ ಭೀಷ್ಮನೂ, ಬಿಲ್ಲುವಿದ್ಯೆಯಲ್ಲಿ ದ್ರೋಣನೂ ಸಾಹಸದಲ್ಲಿ ಅರ್ಜುನನೂ, ನಿರ್ಮಲ ಮನಸ್ಸಿನಿಂದ ಧರ್ಮ ರಾಯನೂ ಶ್ರೇಷ್ಠರು: ಇವರುಗಳಿಂದಾಗಿ ಈ ಭಾರತವು ಪವಿತ್ರವಾಗಿದೆ.) ಇಲ್ಲಿ ಕೃಷ್ಣನಿಗೆ ಸ್ಥಾನವೇ ಇಲ್ಲ. ಶ್ರೀ ಕೃಷ್ಣನು ಅತ್ಯಂತ ಶ್ರೇಷ್ಠನಾದದ್ದರಿಂದಲೂ ಲೋಕ ನಾಟಕದ ಸೂತ್ರಧಾರನಾದುದ ರಿಂದಲೂ ಅವನು ಎಲ್ಲೆಡೆಯೂ ಇದ್ದಾನೆ; ಹೀಗಾಗಿ ಅವನ ಹೆಸರನ್ನು ಹೇಳಬೇಕಾ ಗಿಲ್ಲ. ಅದು ಈ ಎಲ್ಲ ಪಾತ್ರಗಳ ಹಿಂದೆಯೂ ಇದೆ ಎಂದು ಕೆಲವು ವಿದ್ವಾಂಸರು ವ್ಯಾಖ್ಯಾನ ಮಾಡುತ್ತಾರೆ, ಆದರೆ ಪಂಪನು ಈ ಕಾವ್ಯವನ್ನು ಲೌಕಿಕ ಕಾವ್ಯವೆಂದೇ ಕರೆದಿದ್ದಾನೆ. ಆದ್ದರಿಂದ ಶ್ರೀಕೃಷ್ಣನು ಅವನಿಗೆ ಒಬ್ಬ ಲೌಕಿಕವ್ಯಕ್ತಿಯಾಗಿದ್ದಾನೆ. ಕೆಲವು ಕಡೆ ಅವನನ್ನು ಅತ್ಯಂತ ಮಹಿಮಾವಂತನೆಂದು ವರ್ಣಿಸಿರುವುದು ಮೂಲ ಭಾರತವನ್ನು ಅನುಸರಿಸಿ. ಆದರೆ ಪಂಪನ ದೃಷ್ಟಿಯಲ್ಲಿ ಅವನು ಪಾಂಡವ ಪಕ್ಷಪಾತಿ ಯಾದ ಒಬ್ಬ ಶ್ರೇಷ್ಠ ಮುತ್ಸದ್ದಿ. ಅವನು ಅರ್ಜುನನಿಗೆ ಸಲಹೆ-ಸೂಚನೆಗಳನ್ನೀಯು ತ್ತಾನೆ. ಧೈರ್ಯ ತುಂಬುತ್ತಾನೆ. ಪ್ರೋತ್ಸಾಹ ನೀಡುತ್ತಾನೆ. ಆದರೆ ಮೂಲಭಾರತ ದಲ್ಲಿರುವಂತೆ ಅವನು ಅರ್ಜುನನ ಹಿಂದಿರುವ ಶಕ್ತಿಯೇನಲ್ಲ. ಇಲ್ಲಿನ ಅರ್ಜುನನು ಮೂಲಭಾರತದಂತೆ ಕೃಷ್ಣನ ಕೈಯ ಬೊಂಬೆಯಲ್ಲ. ಅವನೂ ಮಹಾ ಪರಾಕ್ರಮಿಯೂ ಸಾಹಸಿಯೂ ಸ್ವಾಭಿಮಾನಿಯೂ ಆದ ರಾಜ. ಅರ್ಜುನನ್ನೂ

ಅರಿಕೇಸರಿಯನ್ನೂ ಸಮನ್ವಯಗೊಳಿಸಿರುವುದೂ ಈ ವ್ಯತ್ಯಾಸಕ್ಕೆ ಕಾರಣವಿರಬೇಕು. ಅವನು ಶ್ರೀಕೃಷ್ಣನಿಗೆ ಒಮ್ಮೆ ಹೇಳುತ್ತಾನೆ.

ಒತ್ತಿ ತಱುಂಬಿ ನಿಂದ ರಿಪುಭೂಜ ಸಮಾಜದ ಬೇರ್ಗಳಂ ನಭ
ಕ್ಕೆತ್ತದೆ ಬಂದು ತನ್ನ ಮಱೆವೊಕ್ಕೊಡೆ ಕಾಯದೆ, ಚಾಗದೊಳ್ಪಿನ
ಚೊತ್ತದೆ ಮಾಣ್ದು ಬಾಳ್ವ ಪುಱುವಾನಸನ್ ಅಜಾಂಡಮೆಂಬುದೊಂ
ದತ್ತಿಯ ಪಣ್ಣೊಳಿರ್ಪ ಪುಱುವಲ್ಲದೆ ಮಾನಸನೇ ಮುರಾಂತಕಾ? (ಪಂ.ಭಾ. ೫-೭೫)

(ಎದುರಾಗಿ ಮೇಲೆ ಬೀಳುವ ರಾಜರೆಂಬ ಮರಗಳ ಬೇರನ್ನು ಕಿತ್ತು ಬಿಸಾಕದೆ, ತನಗೆ ಶರಣು ಬಂದಾಗ ಕಾಪಾಡದೆ, ತ್ಯಾಗವೆಂಬ ಗುಣದ ಅಚ್ಚೊತ್ತದೆ ಬಾಳಿದರೆ ಅವನು ಮನುಷ್ಯನೆನಿಸಿಕೊಳ್ಳವನೇನು? ಉಹ್ಞೂ, ಬ್ರಹ್ಮಾಂಡವೆಂಬ ಅತ್ತಿಯ ಹಣ್ಣಿನಲ್ಲಿರುವ ಒಂದು ಹುಳು ಅವನು.) ಆದ್ದರಿಂದ ಇಂತಹ ಅರ್ಜುನನು ಇಲ್ಲಿ ಸಹಜ ಸ್ವಾಭಿಮಾನಿಯಾಗಿದ್ದಾನೆ.

ಹೀಗೆ ಲೌಕಿಕ ಧಾರ್ಮಿಕಗಳೆಂಬ ಕಾವ್ಯಗಳನ್ನು ರಚಿಸಿ, ಲೌಕಿಕ ಕಾವ್ಯದಲ್ಲಿ ತನ್ನ ಆಶ್ರಯದಾತನನ್ನು ಶ್ಲೇಷೆಯಿಂದ ಹೊಗಳುವ ರೀತಿಗೆ ನಮಗೆ ತಿಳಿದಂತೆ ಪಂಪನು ಮಾರ್ಗದರ್ಶಕ. ಕನ್ನಡ ಭಾಷೆಯ ಸೌಂದರ್ಯ ಶಕ್ತಿಗಳನ್ನು ಬಳಸಿಕೊಂಡದ್ದು ಇವನ ಹಿರಿಮೆಗಳಲ್ಲೊಂದು. ಅವನ 'ದೇಸಿ'ಯನ್ನು ಮುಂದಿನ ಅನೇಕ ಕವಿಗಳು ಮನಸಾರೆ ಹೊಗಳಿದ್ದಾರೆ. ಚಂಪೂ ಎಂಬ ಪ್ರಕಾರವನ್ನು ತುಂಬಾ ಚೆನ್ನಾಗಿ ಬಳಸಿಕೊಂಡವರಲ್ಲಿಯೂ ಪಂಪನು ಅಗ್ರಗಣ್ಯಕವಿ. ಜೀವನದಲ್ಲಿನ ಸ್ವಾಮಿನಿಷ್ಠೆ, ಸ್ನೇಹ, ವಿಶ್ವಾಸ ಮುಂತಾದ ಜೀವನ ಮೌಲ್ಯಗಳನ್ನು ಕಾವ್ಯರೂಪದಲ್ಲಿ ಸುಂದರವಾಗಿ ಚಿತ್ರಿಸಿದ ಕವಿಯಿವನು. ಹೀಗಾಗಿ ಇವನೇ ಕನ್ನಡದ ಮೊದಲನೆಯ ಕವಿಯಲ್ಲದಿದ್ದರೂ 'ಆದಿ ಕವಿ'ಯೆನಿಸಿ ಕೊಂಡಿದ್ದಾನೆ. ಮುಂದಿನ ಚಂಪೂ ಕವಿಗಳಿಗೆಲ್ಲ ಅವನು ಆದರ್ಶಪ್ರಾಯ ನಾಗಿದ್ದಾನೆ: ರನ್ನನಂತಹ ಕವಿ ಅವನ ಕಾವ್ಯದ ಒಂದು ಆಶ್ವಾಸನ್ನೇ ಮುಖ್ಯವಾಗಿರಿಸಿ ಕೊಂಡು ತನ್ನ 'ಗದಾಯುದ್ಧ' ವೆಂಬ ಕೃತಿಯನ್ನು ರಚಿಸಿದ್ದಾನೆ. ನಾಗಚಂದ್ರನೆಂಬ ಮತ್ತೊಬ್ಬ ಕವಿಯೂ ತನ್ನನ್ನು 'ಅಭಿನವ ಪಂಪ'ನೆಂದು ಕರೆದುಕೊಂಡು ತಾನು ತೃಪ್ತಿಪಡುವುದರ ಜೊತೆಗೆ, ಈ ಕವಿಗೆ ಅಪಾರವಾದ ಗೌರವವನ್ನು ಸಲ್ಲಿಸಿದ್ದಾನೆ. 'ಪಸರಿಪ ಕನ್ನಡಕ್ಕೊಡೆಯನೊರ್ವನೆ ಸತ್ಕವಿಪಂಪನಾವಗಂ' (ಯಾವಾಗಲೂ ವಿಶಾಲ ವಾಗುತ್ತಿರುವ ಕನ್ನಡ ಕಾವ್ಯ ಕ್ಷೇತ್ರದಲ್ಲಿ ಪಂಪನೇ ಅಗ್ರಗಣ್ಯವಾದ ಸತ್ಕವಿ) ಎಂದು ನಾಗರಾಜನೆಂಬ ಕವಿಯು ಹೇಳಿರುವುದು ಅನೇಕ ದೃಷ್ಟಿಗಳಿಂದ ಇಂದಿಗೂ ನಿಜ. ಯಾವ ಕಾಲದ ಯಾವ ಕಾವ್ಯ ವಿಮರ್ಶೆಯ ಅಳತೆಗೋಲಿನಿಂದ ಅಳೆದರೂ ಪಂಪನು ಶ್ರೇಷ್ಠವಾದ ಕವಿಯೆನಿಸಿಕೊಳ್ಳುತ್ತಾನೆ.

ಪೊನ್ನ

ಪೊನ್ನನು ಕಾವ್ಯವು ರಚಿಸಿದ ಕಾಲವೆಂದರೆ ಕ್ರಿ.ಶ. ೯೫೦ರ ಸುಮಾರಿನಲ್ಲಿ. ಅವನು ರಾಷ್ಟ್ರಕೂಟ ಚಕ್ರವರ್ತಿಯಾದ ಮೂರನೆಯ ಕೃಷ್ಣ(೯೩೯-೯೬೮)ನ ಆಸ್ಥಾನ ಕವಿಯಾಗಿ

ಕಾವ್ಯರಚನೆಯನ್ನು ಮಾಡಿದನು. ಸಂಸ್ಕೃತ ಕನ್ನಡ ಭಾಷೆಗಳೆರಡರಲ್ಲಿಯೂ ಪೊನ್ನನಿಗೆ ಅಗಾಧವಾದ ಪಾಂಡಿತ್ಯವಿತ್ತು. ಇವನ ಆಶ್ರಯದಾತನು ಚಕ್ರವರ್ತಿಯಾಗಿದ್ದನು. ಆದ್ದರಿಂದ ಕೃಷ್ಣನು ಇವನಿಗೆ "ಉಭಯ ಕವಿ ಚಕ್ರವರ್ತಿ" ಎಂಬ ಬಿರುದನ್ನು ಕೊಟ್ಟನು ಜೈನ ಕವಿಯಾದ ಪೊನ್ನನು 'ವಿರಾಗಿ'ಯಾಗಿದ್ದಂತೆ ತೋರುತ್ತದೆ. ತನ್ನನ್ನು 'ಸವಣ' 'ಕುರುಳ್ಗಳ ಸವಣ' (ಸವಣ ಎಂದರೆ ಜೈನಸನ್ಯಾಸಿ ಎಂದರ್ಥ) ಎಂದು ಕರೆದುಕೊಂಡಿರುವುದೇ ಹೀಗೆ ಊಹಿಸಲು ಕಾರಣ. ತನ್ನ ಕಾವ್ಯದಲ್ಲಿ ಈತನು ತನ್ನ ಇಬ್ಬರು ಗುರುಗಳಾದ ಇಂದ್ರಮುನಿ ಮತ್ತು ಜೀನಚಂದ್ರರನ್ನು ಸ್ಮರಿಸಿದ್ದಾನೆ. ಈತನ ಕಾವ್ಯಗಳು ಮೂರು ಅಥವಾ ನಾಲ್ಕು. 'ಶಾಂತಿ ಪುರಾಣ' 'ಭುವನೈಕ ರಾಮಾಭ್ಯುದಯ,' 'ಜಿನಾಕ್ಷರಮಾಲೆ,' 'ಗತಪ್ರತ್ಯಾಗತ'ವೆಂಬ ಕೃತಿಯೂ ಇವನದೇ ಎಂದೂ ಇದು ಸಂಸ್ಕೃತ ಕೃತಿಯೆಂದೂ ವಿದ್ವಾಂಸರು ಊಹಿಸುತ್ತಾರೆ. ಈ ಕೃತಿಗಳಲ್ಲಿ 'ಶಾಂತಿಪುರಾಣ' ಮತ್ತು 'ಜಿನಾಕ್ಷರ ಮಾಲೆ'ಗಳು ಮಾತ್ರ ಸಿಕ್ಕಿವೆ.

'ಜಿನಾಕ್ಷರಮಾಲೆ'ಯು ಕ ಕಾರದಿಂದ ಳ ಕಾರದವರೆಗೆ ಆಯಾ ಅಕ್ಷರಗಳಿಂದ ಪ್ರಾರಂಭವಾಗುವಂತೆ ೩೯ ಕಂದಪದ್ಯಗಳಲ್ಲಿ ಜಿನನ ಸ್ತೋತ್ರವನ್ನು ಮಾಡುವ ಕೃತಿ. ಈಗ ದೊರೆಯದಿರುವ 'ಭುವನೈಕ ರಾಮಾಭ್ಯುದಯ'ವೆಂಬ ಕಾವ್ಯವು ಹದಿನಾಲ್ಕು ಆಶ್ವಾಸಗಳಿಂದ ಕೂಡಿದ ಕೃತಿಯೆಂದೂ ಅದು ಹದಿನಾಲ್ಕು ಲೋಕದ ಬೆಲೆಗೆ ಸಮನೆಂದೂ 'ಶಾಂತಿಪುರಾಣ'ದ ಹನ್ನೆರಡನೆಯ ಆಶ್ವಾಸದ ಅರವತ್ತಾರನೇ ಪದ್ಯದಲ್ಲಿ ಕವಿಯೇ ಹೇಳಿಕೊಂಡಿದ್ದಾನೆ. ಶಂಕರಗಂಡ ಎಂಬುವವನಿಗೆ 'ಭುವನೈಕರಾಮ'ನೆಂಬ ಬಿರುದಿತ್ತೆಂಬುದಾಗಿ ತಿಳಿದು ಬರುತ್ತದೆ. ಈ ಕಾವ್ಯವು ಪಂಪಭಾರತದಂತೆ ಶಂಕರಗಂಡ ನನ್ನು ರಾಜಕೀಯ ಶ್ಲೇಷೆಯಿಂದ ಸ್ತುತಿಸುವ ಕಾವ್ಯವಾಗಿರಬೇಕೆಂದು ಕೆಲವು ವಿದ್ವಾಂಸರು ಊಹಿಸುತ್ತಾರೆ. ಆದರೆ ಶಂಕರಗಂಡನು ಒಬ್ಬ ಸಾಮಂತ, ಪೊನ್ನನು ಆಶ್ರಯ ಪಡೆದಿದ್ದುದ್ದು ಚಕ್ರವರ್ತಿಯ ಆಸ್ಥಾನದಲ್ಲಿ; ಆದ್ದರಿಂದಾಗಿ ಚಕ್ರವರ್ತಿಗೆ ಬದಲಾಗಿ ಸಾಮಂತನನ್ನು ಕಥಾನಾಯಕನನ್ನಾಗಿ ಪೊನ್ನನು ವರ್ಣಿಸಿರಲಾರ ಎಂದು ಮತ್ತೆ ಕೆಲವರು ವಾದಿಸುತ್ತಾರೆ. ಇದು ಲೌಕಿಕವಾದ ರೀತಿಯಲ್ಲಿ ರಾಮಾಯಣವನ್ನು ಹೇಳುವ ನೆವದಲ್ಲಿ ತನ್ನ ಆಶ್ರಯದಾತನ ಇತಿಹಾಸವನ್ನು ತಿಳಿಸುವ ಕಾವ್ಯವಾಗಿರ ಬೇಕೆಂದು ಮತ್ತೂ ಕೆಲವರ ಊಹೆ, 'ಶಬ್ದ ಮಣಿದರ್ಪಣ'ವೆಂಬ ವ್ಯಾಕರಣ ಗ್ರಂಥದಲ್ಲಿ ಉದಾಹರಣ ಪದ್ಯಗಳಾಗಿ ಕೇಶಿರಾಜನು ಕೊಟ್ಟಿರುವ ಈ ಕಾವ್ಯದ ಕೆಲವು ಪದ್ಯಗಳನ್ನು ನೋಡಿದರೆ 'ಭುವನೈಕರಾಮಾಭ್ಯುದಯ'ವು ಉತ್ತಮವಾದ ಕಾವ್ಯವಾಗಿರ ಬೇಕೆಂದನಿಸುತ್ತದೆ. 'ಗತಾಪ್ರತ್ಯಾಗತ'ದ ಬಗ್ಗೆ ಏನನ್ನು ಹೇಳಲೂ ಸಧ್ಯಕ್ಕೆ ಆಧಾರಗಳಿಲ್ಲ.

ಪೊನ್ನನ ಹೆಸರು ಈಗ ನಿಂತಿರುವುದು 'ಶಾಂತಿಪುರಾಣ'ದ ಆಧಾರದ ಮೇಲೆ. ಇದರಲ್ಲಿ ಕವಿಯು ತನ್ನ ವಿಷಯವಾಗಿ ಒಂದೆರಡು ಮಾತುಗಳನ್ನು ಹೇಳಿಕೊಂಡಿ ದ್ದಾನೆ. ಈತನು ಹಿಂದಿನ ಕವಿಗಳಾರನ್ನೂ ನೆನೆಸಿಕೊಂಡಿಲ್ಲ. ಆದರೆ ಕೆಲವು ಕವಿಗಳ ಹೆಸರನ್ನು ಹೇಳಿ ಅವರಿಗಿಂತ ತನ್ನ ಕವಿತಾಶಕ್ತಿಯು ಎಷ್ಟೋ ಪಟ್ಟು ಮೇಲು ಎಂದು ಬಡಾಯಿ ಕೊಚ್ಚಿಕೊಳ್ಳುತ್ತಾನೆ. ಈ ಪದ್ಯವನ್ನು ನೋಡಿ:

ಕನ್ನಡ ಕವಿತೆಯೊಳ್ ಅಸಗಂ
ಗಂ ನೂರ್ಮಡಿ ರೇಖೆಗಗ್ಗಳಂ ಸಕ್ಕದದೊಳ್
ಮುನ್ನುಳ್ಳ ಕಾಳಿದಾಸಂ
ಗಂ ನೂರ್ಮಡಿ ರಚನೆಯೊಳ್ ಕುರುಳ್ಗಳ ಸುವಣಂ (ಶಾಂ.ಪು. ೧-೧೧)

(ತಾನು ಕನ್ನಡದ ಕಾವ್ಯವನ್ನು ಬರೆಯುವುದರಲ್ಲಿ ಅಸಗನಿಗೆ ನೂರು ಪಾಲು ಶ್ರೇಷ್ಠ: ಹಾಗೆಯೇ ಸಂಸ್ಕೃತ ಕಾವ್ಯ ರಚನೆಯಲ್ಲಿ ಕಾಳಿದಾಸನಿಗಿಂತ ನೂರು ಪಟ್ಟು ಮೇಲು.) ಆದರೆ ಕಾಳಿದಾಸನ ಕಾವ್ಯಗಳಲ್ಲಿ ಬರುವ ವರ್ಣವೆಗಳನ್ನು ಅನಾಮತ್ತಾಗಿ ಕನ್ನಡದಲ್ಲಿ ಇಳಿಸಿದ್ದಾವೆ. "ಪೊನ್ನನ ವರ್ಣನೆಯು ಕಾಳಿದಾಸನ ವರ್ಣನೆಯು ತುಂಬಿದ ಪಡಿ ಅಚ್ಚು. ಕಾಳಿದಾಸನ ಕೈವಾಡವನ್ನು ಪೊನ್ನನ ವರ್ಣನೆಯಲ್ಲಿ ಬಹಳ ವಿಶದವಾಗಿ ನೋಡಬಹುದು. ಪೊನ್ನನು ಕಾಳಿದಾಸನ ವರ್ಣನಾ ರೀತಿಯನ್ನೇ ಅನುಸರಿಸಿ ಅವನಿಂದ ಪದ್ಯಗಳನ್ನು ಭಾಷಾಂತರಿಸಿರುತ್ತಾನೆ: ರಘುವಂಶದ ಸರ್ಗಸರ್ಗಗಳನ್ನೇ ಭಾಷಾಂತರಿಸಿ ತನ್ನವೆಂದು ಹೇಳಿಕೊಂಡಿದ್ದಾನೆ."[೫] ಈ ಪ್ರಭಾವವು ಮಿಗಿಲಾಗಿ ಕಾಣುವುದು ಶಾಂತಿಪುರಾಣದ ಜ್ಯೋತಿಃಪ್ರಭೆಯ ಸ್ವಯಂವರ ವರ್ಣನೆ ಹಾಗೂ ಶಾಂತೀಶ್ವರನ ದಿಗ್ವಿಜಯ ವರ್ಣನೆ ಇವುಗಳಲ್ಲಿ: ಇವು ಕ್ರಮವಾಗಿ ಕಾಳಿದಾಸನ ರಘುವಂಶ ಕಾವ್ಯದ ಸ್ವಯಂಪ್ರಭೆಯ ಸ್ವಯಂವರ ಹಾಗೂ ರಘುಮಹಾ ರಾಜನ ದಿಗ್ವಿಜಯ ವರ್ಣನೆಗಳ ಬಹುಮಟ್ಟಿನ ಭಾಷಾಂತರಗಳಾಗಿವೆ. ಇವು ಒಳ್ಳೆಯ ಭಾಷಾಂತರಗಳಾಗಿರಬಹುದು, ಆದರೆ ತಾನು ಕಾಳಿದಾಸನಿಗಿಂತ ನೂರ್ಮಡಿ ಎಂದು ಹೇಳಿಕೊಂಡಿದ್ದರ ಗತಿಯೇನು? ಅಸಗನ ವಿಷಯದಲ್ಲಿಯೂ ಈ ಕವಿ ಹೀಗೆಯೋ ಏನೋ! ಅಲ್ಲದೇ ಇತರ ಸಂಸ್ಕೃತ ಕವಿಗಳ ಕಾವ್ಯಗಳನ್ನು ಆಳವಾಗಿ ಅಭ್ಯಾಸಮಾಡಿ ಅಲ್ಲಿನ ಭಾವನೆಗಳೆಷ್ಟನ್ನು ತನ್ನ ಕಾವ್ಯದಲ್ಲಿ ಅಳವಡಿಸಿಕೊಂಡಿದ್ದಾನೆಯೋ!

ಇಷ್ಟಾದರೂ ಪೊನ್ನ ಸ್ವಲ್ಪ ಶಕ್ತಿಯಿರುವ ಕವಿ. ಸಂಸ್ಕೃತ-ಕನ್ನಡ ಭಾಷೆಗಳ ಮೇಲೆ ಅಪಾರವಾದ ಹತೋಟಿಯಿದೆ ಇವನಿಗೆ. ಭಾಷೆಯನ್ನು ಲೀಲಾಜಾಲವಾಗಿ ಬಳಸಬಲ್ಲವನಿವನು. ಇದು 'ಶಾಂತಿಪುರಾಣ'ದಿಂದ ನಮಗೆ ಗೋಚರವಾಗುತ್ತದೆ. ಈ ಪುರಾಣವನ್ನು ಕವಿಯು 'ಪುರಾಣ ಚೂಡಾಮಣಿ'ಯೆಂದು ಕರೆದಿದ್ದಾನೆ. ಇದು ಹನ್ನೆರಡು ಅಶ್ವಾಸಗಳುಳ್ಳ ದೊಡ್ಡ ಚಂಪೂ ಕಾವ್ಯ. ಹದಿನಾರನೆಯ ತೀರ್ಥಂಕರನೂ ಐದನೆಯ ಚಕ್ರವರ್ತಿಯೂ ಆದ ಶಾಂತಿನಾಥನ ಕಥೆಯೇ ಇದರ ವಸ್ತು. ಮೊದಲೊಂಬತ್ತು ಆಶ್ವಾಸಗಳವರೆಗೂ ಇವನ ಹಿಂದಿನ ಹನ್ನೊಂದು ಜನ್ಮಗಳ ಕತೆಯಿದೆ. ಅವನ ಆ ಜನ್ಮಗಳೆಂದರೆ : ಶ್ರೀಷೇಣ, ಭೋಗಭೂಮಿಜ, ಶ್ರೀದೇವ, ಅಮಿತತೇಜ, ಮಣಿಚೂಳ, ಅಪರಾಜಿತ, ಅಚ್ಯುತೇಂದ್ರ, ವಜ್ರಾಯುಧ, ಅಹಮಿಂದ್ರ, ಮೇಘರಥ ಮತ್ತು ಮಹೇಂದ್ರ, ಕೊನೆಯ ಮೂರು ಆಶ್ವಾಸಗಳಲ್ಲಿ ಮಾತ್ರ ಶಾಂತಿನಾಥನ ಚರಿತ್ರೆಯನ್ನು ಹೇಳಲಾಗಿದೆ. ಹೀಗಾಗಿ ಶಾಂತಿನಾಥನ ಕತೆಗಿಂತ ಅವನ ಭವಾವಳಿಗೇ ಇಲ್ಲಿ ಪ್ರಾಧಾನ್ಯವಿರುವುದು. "ಭವಾವಳಿಯ ಕಥೆಗೆ ಆಗಮ ಧರ್ಮಗಳ ವಿಚಾರಗಳಿಗೆ ಪೊನ್ನನು ಹೆಚ್ಚಿನ ಗಮನಕೊಟ್ಟಂತೆ ಕಾಣುವುದರಿಂದಲೋ ಏನೋ ಈತನ ಕೃತಿಯಲ್ಲಿ ಪಂಪನ ಕೃತಿಯಲ್ಲಿ ಕಂಡುಬರುವ 'ಕಾವ್ಯಧರ್ಮ'ದ

ಮನೋಹರತೆ ಘನತೆಗಳು ಇರುವುದಿಲ್ಲ; ಇದು ಉತ್ತಮ ಕಾವ್ಯವೆಂಬುದಕ್ಕಿಂತ ಉತ್ತಮ ಜೈನ ಪುರಾಣವೆಂದರೆ ಒಪ್ಪುವುದು."[೬]

ಕೆಲವು ಸಂದರ್ಭಗಳಲ್ಲಿ ಉತ್ತಮ ಕಾವ್ಯರಚನೆಯನ್ನು ಮಾಡಬಲ್ಲ ಶಕ್ತಿ ಕವಿ ಪೊನ್ನನಿಗಿದೆ. ಪೂರ್ವ ವಿದೇಹ ದೇಶದ ಉದ್ಯಾನದಲ್ಲಿ ತುಂಬಿಗಳು ಹೂವಿನ ಮಕರಂದವನ್ನು ಸವಿಯುವುದನ್ನೂ ಗಿಳಿಗಳು ಕೋಗಿಲೆಗಳು ಹಣ್ಣಿನ ರಸವನ್ನು ಹೀರುವುದನ್ನೂ ಕವಿಯು ಈ ರೀತಿಯಾಗಿ ಚಿತ್ರಿಸುತ್ತಾನೆ.

ಮೆಯ್ವಸಮೊಂದೆ ಪೂವಿನೊಳೆ ಪೋಗಿ ಮೊಗಂಮುಱಿದಳ್ಳೆಗೊಂಬಿನೊಳ್
ಪಾಯ್ವುದುಂ, ಒಂದೆ ಪಣ್ಣರಸಮಂ ಸವಿದಾಱದೆ ಚಂಚುವಂ ಕೆಲ
ಕ್ಕುಯ್ವುದುಂ, ಒಂದೆ ಕೋರಕದೊಳಟ್ಕಮೆವೆತ್ತವಚತ್ತು ಲಂಘನಂ
ಗೆಯ್ವುದುಂ ಆದುದಾ ಮಧುಪಕೀರಪಿಕಾಳಿ ನಂದನಂಗಳೊಳ್ **(ಶಾಂ.ಪು. ೧–೬೩)**

(ಒಂದೇ ಹೂವಿನ ರಸವನ್ನು ಹೀರಿ ಪಕ್ಕಗಳಲ್ಲಿ ತೂರುವುದೂ, ಒಂದೇ ಹಣ್ಣಿನ ರಸವನ್ನು ಸವಿಯಲಾರದೆ ಕೊಕ್ಕನ್ನು ಪಕ್ಕಕ್ಕೆ ತಿರುಗಿಸುವುದೂ, ಒಂದೇ ಮೊಗ್ಗನ್ನು ಸವಿಯಲಾರದದೂ ದುಂಬಿ ಗಿಳಿ ಕೋಗಿಲೆಗಳ ಸ್ಥಿತಿಯಾಯಿತು: ಅದನ್ನೇ ಜೀರ್ಣಿಸಿ ಕೊಳ್ಳಲಾರದೆ ಅವು ಅಜೀರ್ಣದಿಂದ ನರಳುವಂತಾಯಿತು.) ಉದ್ಯಾನವನದ ಹೂ ಹಣ್ಣು ಮೊಗ್ಗುಗಳು ಎಷ್ಟು ಗಾತ್ರದವಾಗಿತ್ತೆಂಬುದನ್ನು ಕವಿ ಈ ರೀತಿ ಚಮತ್ಕಾರವಾಗಿ ವರ್ಣಿಸಿದ್ದಾನೆ. ಹಾಗೆಯೇ ಆ ದೇಶದ ಬತ್ತದ ಗದ್ದೆಗಳನ್ನು ಈ ಕೋಮಲವಾದ ಚಿತ್ರದೊಂದಿಗೆ ವರ್ಣಿಸುತ್ತಾನೆ:

ಅಮಿತ ಗುಣವರ್ಣನ ಪ್ರ
ಕ್ರಮಕ್ಕೆ ಸಲೆ ನಾಣ್ಚೆ ತಲೆಯನೆಱಗಿದ ಸುಜನೋ
ತ್ತಮರಂತೆ ಭರದಿನೆಱಗಿದು
ವು ಅಮೇಯ ಪರಿಪಕ್ವ ಗಂಧಶಾಲಿವನಂಗಳ್ **(ಶಾಂ.ಪು. ೧–೫೯)**

(ತಮ್ಮನ್ನು ಇತರರು ಹೊಗಳಲು ಪ್ರಾರಂಭಿಸಿದಾಗ ನಾಚಿ ತಲೆಯನ್ನು ತಗ್ಗಿಸುವ ಶ್ರೇಷ್ಠ ವ್ಯಕ್ತಿಗಳಂತೆ ಪಕ್ವವಾದ ಗಂಧಶಾಲಿಯ ಪೈರುಗಳು ಬಾಗಿದ್ದವು.) ಅದರಂತೆಯೇ ಕವಿಯು ಮಾವಿನ ಮರವನ್ನು ವರ್ಣಿಸುವ ರೀತಿಯೂ ಸುಂದರವಾಗಿದೆ:

ಮಿದಿದೆಗಳಗಾಯ್ ಬಸಂತದ ಮೊದಲ್, ನೆರೆದೊಪ್ಪುವ ದೋರೆಗಾಯ್ ಬಸಂ
ತದ ನಡು, ಪಣ್ ಬಸಂತದ ಸೆಱಂಗೆನೆ ತನ್ಮಯನಪ್ಪಿನಂ ಬಸಂ
ತದ ನಿಮಿರ್ದಾದಿಮಧ್ಯಮವಸಾನಮೊಡಂಬಡೆ ತನ್ನೊಳಂ ಬಸಂ
ತದೊಳಮದೇಂ ಬಸಂತದಗುಂತಿಗೆ ಬಾಜಿಸ್ಕೊದಲಾಯ್ತೊ ಮಾಮರಂ
(ಶಾಂ.ಪು. ೭–೧೪೩)

(ಎಳೆಯ ಕಾಯಿಯೇ ವಸಂತ ಮಾಸದ ಆರಂಭ, ದೋರೆಗಾಯಿ ವಸಂತದ ಮಧ್ಯ, ಹಣ್ಣು ಅದರ ಕೊನೆ ಎಂಬುದನ್ನು ತನ್ನಲ್ಲಿಯೇ ಸೇರಿಸಿಕೊಂಡಂತೆ; ತನ್ನಲ್ಲಿಯೂ ವಸಂತದಲ್ಲಿಯೂ ಅತಿಶಯವಾದ ವಸಂತದ ಜೀವನವು ಪ್ರಾರಂಭವಾದಂತೆ ಮಾವಿನ ಮರವು ಶೋಭಿಸುತ್ತಿತ್ತು.)

ಏಳನೆಯ ಅಶ್ವಾಸದಲ್ಲಿ ನರಕದ ವರ್ಣನೆಯಿದೆ. ಪಾಪವನ್ನು ಮಾಡಿದವರಿಗೆ ವಿಧಿಸುವ ಶಿಕ್ಷೆಗಳ ಸ್ವರೂಪವನ್ನು ಕವಿ ಅಲ್ಲಿ ವರ್ಣಿಸಿದ್ದಾನೆ. ಆ ಕಾಲದ ಸಾಮಾನ್ಯ ಜನರಲ್ಲಿದ್ದ ನರಕದ ಬಗೆಗಿನ ನಂಬಿಕೆಗಳೊಡನೆ ಕವಿಯ ಕಲ್ಪನೆಯೂ ಇಲ್ಲಿ ಸೇರಿದೆ. ಪಾಪಿಗೆ ಕೊಡುವ ಒಂದು ಶಿಕ್ಷೆ:

ನೆಲದೊಳ್ ಬಿಟ್ಟಡಗಿಂಡೆಯಾಗೆ ನೆಱಿನಂ ನಟ್ಟುರ್ಚಿದುಗ್ರಾಯುಧಾ
ವಲಿಯಿಂದುರ್ವಿಸುವ ಇಂದ್ರ ಜಾಲಿಗನವೋಲ್ ಜೋಲ್ದುಂ ನೆಱಿಲ್ದುಂ ಸಮಾ
ಕುಲಿತರ್ ಮೋಹಿಸಿ ಮುಚ್ಚೆವೋಗೆ ಪರಿತಂದುತ್ತಪ್ತಲೋಹದ್ರವಂ
ಜಲಮೆಂದಲ್ಲಿಯ ನಾರಕರ್ ತಳಿವುದುಂ ತಾತ್ಕಾಲಿಕರ್ ನಾರಕರ್ (ಶಾ.ಪು. ೭–೮೯)

(ನೆಲದ ಮೇಲೆ ನಟ್ಟಿರುವ ನಾನಾ ಆಯುಧಗಳ ಮೇಲೆ ಬಿದ್ದಾಗ ದೇಹವೆಲ್ಲ ಮಾಂಸದ ಮುದ್ದೆಯಂತಾಗುತ್ತದೆ; ದೇಹಕ್ಕೆ ನಟ್ಟಿರುವ ಆಯುಧಗಳು ಜೋತಾಡುತ್ತಾ ಅವರು ಯಕ್ಷಿಣಿಗಾರರಂತೆ ಕಾಣಿಸುತ್ತ ನೋವಿನಿಂದ ನರಳಿ ಮೂರ್ಚೆಹೋಗಲು ಅಲ್ಲಿನವರು ಅವರ ಮೇಲೆ ಕಾದಿರುವ ಲೋಹದ್ರವವನ್ನು ನೀರಿನಂತೆ ಸುರಿಯುತ್ತಾರೆ.) ಇನ್ನೊಂದು ಬಗೆಯ ಶಿಕ್ಷೆ:

ಕರ್ವಿನಗಾಣದೊಳ್ ಮಱುಗುವಾಣದೊಳ್ ಎಣ್ಣೆಯ ಕುಂಡದೊಳ್ ಕನ
ಲ್ದುರ್ವಿಸುವಚ್ಚಗೊಂಡದೊಳ್ ಅಗುರ್ವಿಸೆ ಸೀಳಿಸಿ ಮಾಣದಿಕ್ಕೆ ಪೋ
ಟ್ಟುರ್ವಗಿ ಮಾಡಿ ತಾಳಿಸೆ ಸುರುಳ್ವಿನೆಗಂ ನೆರೆ ಸಾಯನಂತಕಂ
ಚರ್ವಿತಚರ್ವಣಕ್ಕವನ ನೋವಿದನಾಗಳೆ ಸಾಯಲೀಗುಮೆ (ಶಾಂ.ಪು. ೭–೯೫)

(ಕಬ್ಬಿನಗಾಣದಲ್ಲಿ ಕುದಿಯುವ ಪಾಕದಲ್ಲಿ ಎಣ್ಣೆಯ ಕೊಪ್ಪರಿಗೆಲ್ಲಿ ನಿಗಿನಿಗಿ ಹೊಳೆಯುವ ಬೆಂಕಿಯಲ್ಲಿ ಹಾಕಲು ಹೋಳುಗಳನ್ನು ಕೆಲಕಾಲವಿಟ್ಟರೆ ದೇಹವು ಸುರುಟಿಕೊಳ್ಳುವಂತೆ ಸುರಟಿಕೊಂಡು ಸಾಯದೆ ಆ ನೋವನ್ನು ಅನುಭವಿಸುವಂತೆ ಯಮನು ಮಾಡುತ್ತಾನೆ.) ಪರಸ್ತ್ರೀಯರನ್ನು ಮೋಹಿಸಿದ್ದವರಿಗೆ ನೀಡುವ ಶಿಕ್ಷೆಯಿದು:

ಪರವಧುವನಲ್ಲದೆ ಆಂತಃ
ಪುರವಧುವಂ ಮೆಚ್ಚೆಯೆಂದು ತಂದಪ್ಪಿಸುವರ್
ಪರಿತಪ್ತಲೋಹಮಯ ಸುಂ
ದರಿಯಂ ಸುಂದರಿಯರಲ್ಲಿ ಮೊರೆಯಿಲ್ಲದರೊಳ್ (ಶಾಂ.ಪು. ೭–೮೯)

('ಬೇರೆಯ ಹೆಣ್ಣನ್ನಲ್ಲದೆ ನಿನ್ನ ಅಂತಃಪುರಸ್ತ್ರೀಯನ್ನು ಮೆಚ್ಚುವುದಿಲ್ಲ ಅಲ್ಲವೇ ನೀನು' ಎಂದು ಕಾದ ಲೋಹದ ಹೆಣ್ಣಿನ ಪ್ರತಿಮೆಗೆ ಅಪ್ಪಿಸುತ್ತಾರೆ.)

ಹೀಗೆ ಪೊನ್ನನು ಹಲವೆಡೆಗಳಲ್ಲಿ ಉತ್ತಮವಾದ ಪದ್ಯಗಳನ್ನೂ ಸುಂದರ ಸನ್ನಿವೇಶಗಳನ್ನೂ ರಚಿಸಬಲ್ಲ ಸಾಮರ್ಥ್ಯವಿರುವ ಕವಿ. ಪೊನ್ನನು ತನ್ನ ಪುರಾಣ ಕಾವ್ಯದಲ್ಲಿ ಭವಾವಳಿ ಮತ್ತು ಮತಪ್ರಕ್ರಿಯೆಗಳಂತಹ ವಿಚಾರಗಳಿಗೆ ಹೆಚ್ಚು ಗಮನ ನೀಡಿದ್ದರಿಂದ ಅದು ಒಳ್ಳೆಯ ಜೈನಪುರಾಣವೆನ್ನಿಸಿ ಕೊಳ್ಳಬಹುದೇ ಹೊರತು ಪಂಪನ 'ಆದಿ ಪುರಾಣ'ದಂತೆ ಸುಂದರವಾದ ಕಾವ್ಯವೂ ಆಗಿ ಮನಸೆಳೆಯಲಾರದು. ಹದಿನೆಂಟು ವರ್ಣನೆಗಳೂ ಜೈನ ಪುರಾಣದ ಎಲ್ಲ ಲಕ್ಷಣಗಳೂ ಈ 'ಶಾಂತಿ

ಪುರಾಣ'ದಲ್ಲಿವೆ, ನಿಜ. ಆದರೆ ಪಂಪನು ತನ್ನ ಪುರಾಣದಲ್ಲಿ ಸಾಧಿಸಿದ ಧರ್ಮ ಕಾವ್ಯಧರ್ಮಗಳ ಸಮನ್ವಯವನ್ನು ಇಲ್ಲಿ ನಾವು ಕಾಣಲಾರೆವು.

ರನ್ನ

ರನ್ನನು ಬೆಳುಗರೆ ನಾಡಿನಲ್ಲಿರುವ ಬೆಳುಗಲಿ ಐನೂರು ಪ್ರಾಂತದಲ್ಲಿರುವ ಜಂಬುಖಂಡಿ ಎಪ್ಪತ್ತರಲ್ಲಿ ಶ್ರೇಷ್ಠವಾದ ಮುದುವೊಳಲು (ಈಗಿನ ಮುಧೋಳ) ಎಂಬ ಊರಿನಲ್ಲಿ ಸೌಮ್ಯ ಸಂವತ್ಸರದಲ್ಲಿ ಎಂದರೆ ಕ್ರಿ.ಶ. ೯೪೯ರಲ್ಲಿ ಹುಟ್ಟಿದನು. ಈತನು ಬಳೆಗಾರ ಕುಲದ ಅಬ್ಬಲಬ್ಬೆ ಮತ್ತು ಜಿನವಲ್ಲ ಭೇಂದ್ರ ಎಂಬ ದಂಪತಿಗಳ ಮಗ; ದೃಢಬಾಹು, ರೇಚಣ, ಮಾರಯ್ಯ ಎಂಬುವವರು ಇವನ ಸಹೋದರರು; ಇವನಿಗೆ ಜಕ್ಕಿ-ಶಾಂತಿ ಎಂಬ ಇಬ್ಬರು ಹೆಂಡತಿಯರು. ಮಗ ರಾಯ, ಮಗಳು ಅತ್ತಿಮಬ್ಬೆ, ಇವನ ಗುರು ಅಜಿತ ಸೇನಾಚಾರ್ಯರು. ಆಶ್ರಯದಾತನು ಚಾವುಂಡರಾಯ. ಇವನು ಚಾಲುಕ್ಯ ಚಕ್ರವರ್ತಿಯರಾದ ತೈಲಪ ಹಾಗೂ ಅವನ ಮಗ ಸತ್ಯಾಶ್ರಯ ಇರಿವಬೆಡಂಗ ಇವರ ಆ ಸ್ಥಾನದಲ್ಲಿ ಕವಿಯಾಗಿದ್ದನು. ತೈಲಪನು ಇವನಿಗೆ ಕವಿ ಚಕ್ರವರ್ತಿ ಎಂಬ ಬಿರುದನ್ನಿತ್ತನು. ಅಲ್ಲದೆ ಕವಿರತ್ನ, ಅಭಿನವ ಕವಿಚಕ್ರವರ್ತಿ, ಕವಿ ಕುಂಜರಾಂಕುಶ, ಉಭಯಕವಿ ಎಂಬ ಬಿರುದುಗಳೂ ಇದ್ದವು. ಈ ವಿಷಯಗಳೆಲ್ಲ ಇವನ ಒಂದು ಕಾವ್ಯವಾದ 'ಅಜೀತತೀರ್ಥಕರ ಪುರಾಣತಿಲಕ'ದ ಕೊನೆಯಲ್ಲಿ ಕವಿಯಿಂದಲೇ ನಿರೂಪಿತವಾಗಿದೆ. ಸಿಕ್ಕಿರುವ ಈತನ ಇನ್ನೊಂದು ಕಾವ್ಯವೆಂದರೆ 'ಗದಾಯುದ್ಧ' ಅಥವಾ 'ಸಾಹಸಭೀಮ ವಿಜಯ' ತಾನು 'ಪರಶುರಾಮಚರಿತ' ಹಾಗೂ 'ಚಕ್ರೇಶ್ವರಚರಿತ' ಎಂಬ ಕಾವ್ಯಗಳನ್ನೂ ಬರೆದಂತೆ 'ಅಜಿತಪುರಾಣ'ದ ಕೊನೆಯಲ್ಲಿ ಹೇಳಿಕೊಂಡಿದ್ದಾನೆ. ಆದರೆ ಇವು ನಮಗೆ ಸಿಕ್ಕಿಲ್ಲ.

ರನ್ನನು 'ಅಜಿತಪುರಾಣ'ದ ಹನ್ನೆರಡನೆಯ ಆಶ್ವಾಸದ ಮೂವತ್ತೇಳನೆಯ ಪದ್ಯದಲ್ಲಿ ಹೀಗೆ ಹೇಳುತ್ತಾನೆ:

> **ಕವಿಜನದೊಳ್ ರತ್ನತ್ರಯ**
> **ಪವಿತ್ರಮೆನೆ ನೆಗಳ್ದ ಪಂಪನುಂ ಪೊನ್ನಿಗನುಂ**
> **ಕವಿರತ್ನನುಮೀ ಮೂವರ್**
> **ಕವಿಗಳ್ ಜಿನಸಮಯ ದೀಪಕರ್ ಪೆಱರೊಳರೆ?** (ಅಜಿಪು. ೧೨-೩೭)

(ಕವಿಗಳಲ್ಲೆಲ್ಲ ರತ್ನತ್ರಯರೆಂದು ಪ್ರಸಿದ್ಧರಾದ ಪಂಪ-ಪೊನ್ನ-ರನ್ನರುಗಳು ಜೈನಧರ್ಮವನ್ನು ಉದ್ಧರಿಸುವವರು, ಬೇರೆಯವರಿದ್ದಾರೆಯೇ.) ಈ ಮೂವರು ಕವಿಗಳಿಗೆ ರತ್ನತ್ರಯರೆಂಬ ಹೆಸರು ವಾಡಿಕೆಯಾಗಿಬಿಟ್ಟಿದೆ. ಅಲ್ಲದೆ ತನ್ನ ಕಾವ್ಯ ರಚನಾ ಸಾಮರ್ಥ್ಯದಲ್ಲಿ ರನ್ನನಿಗೆ ತುಂಬ ಆತ್ಮವಿಶ್ವಾಸವಿದೆ.ತಾನು ಸರಸ್ವತೀ ಭಂಡಾರದ ಮುದ್ರೆಯನ್ನೊಡೆದೆನೆಂದು ಕವಿ ಹೇಳಿಕೊಳ್ಳುತ್ತಾನೆ. ತನ್ನ ಕಾವ್ಯವನ್ನು ವಿಮರ್ಶೆಮಾಡುವುದು ಸಾಮಾನ್ಯನಿಂದ ಸಾಧ್ಯವಿಲ್ಲ, ತನ್ನ ಕೃತಿಯ ಪರೀಕ್ಷೆಯನ್ನು ಮಾಡುವವನು ತುಂಬ ಧೈರ್ಯಶಾಲಿಯೇ ಆಗಿರಬೇಕೆಂದು ಹೇಳಿಕೊಳ್ಳುತ್ತಾನೆ:

ರತ್ನ ಪರೀಕ್ಷಕನಾಂ ಕೃತಿ
ರತ್ನ ಪರೀಕ್ಷಕನೆನೆಂದು ಫಣಿಪತಿಯ ಫಣಾ
ರತ್ನಮುಮಂ ರನ್ನನ ಕೃತಿ
ರತ್ನಮುಮಂ ಪೇಟ್ ಪರೀಕ್ಷಿಪಂಗೆಂಟೆರ್ದೆಯೇ (ಗದಾ. ೧-೪೪)

(ತಾನು ರತ್ನ ಪರೀಕ್ಷಕನೆಂದು ಸರ್ಪದ ಹೆಡೆಯ ಮೇಲಿರುವ ರತ್ನವನ್ನು ಪರೀಕ್ಷಿಸುವೆನೆಂದು ಹೇಳಲು ಸಾಧ್ಯವೇ? ಹಾಗೆಯೇ ಕಾವ್ಯ ವಿಮರ್ಶಕನಿಗೆ ರನ್ನನ ಕೃತಿ ರತ್ನವನ್ನು ಪರೀಕ್ಷಿಸಲು ಅಪಾರವಾದ ಧೈರ್ಯವು ಬೇಕು.) ಈ ಹೆಮ್ಮೆಯ ಮಾತುಗಳಲ್ಲಿ ಸ್ವಲ್ಪ ನಿಜಾಂಶವಿದೆ. ರನ್ನನು ಕನ್ನಡದ ಉತ್ತಮ ಕವಿಗಳಲ್ಲೊಬ್ಬ; ಅವನ 'ಗದಾಯುದ್ಧ' ಕಾವ್ಯವು ತುಂಬ ಶಕ್ತಿಯುತವಾದ ಶೈಲಿಯಲ್ಲಿದ್ದು ಆ ಕಾಲದ ವೀರ ಮನೋಭಾವವನ್ನು ಪ್ರತಿಬಿಂಬಿಸುತ್ತದೆ. ಇವನೂ ಪಂಪನು ತೋರಿಸಿಕೊಟ್ಟ ಮಾರ್ಗ ದಲ್ಲಿ ನಡೆದು 'ಅಜಿತ ಪುರಾಣ'ವೆಂಬ ಧಾರ್ಮಿಕ ಕಾವ್ಯವನ್ನೂ 'ಗದಾಯುದ್ಧ'ವೆಂಬ ಲೌಕಿಕ ಕಾವ್ಯವನ್ನೂ ಬರೆದಿದ್ದಾನೆ. ಈ ಲೌಕಿಕ ಕಾವ್ಯದಲ್ಲಿ ಪಂಪನಂತೆಯೇ ತನ್ನ ಕಾವ್ಯ ನಾಯಕನೊಡನೆ ಆಶ್ರಯದಾತನನ್ನು ಸಮೀಕರಿಸಿ ಸುತ್ತಿಸಿದ್ದಾನೆ.

ಅಜಿತ ಪುರಾಣ

ಈ ಕಾವ್ಯವು ಎರಡನೆಯ ತೀರ್ಥಂಕರನಾದ ಅಜಿತಸ್ವಾಮಿಯ ಕತೆಯನ್ನು ಹನ್ನೆರಡು ಆಶ್ವಾಸಗಳಲ್ಲಿ ವಿಸ್ತರಿಸುವುದಾಗಿದೆ. ಪೊನ್ನನ 'ಶಾಂತಿ ಪುರಾಣ'ದ ಒಂದು ಸಾವಿರ ಪ್ರತಿಗಳನ್ನು ಮಾಡಿಸಿ ಹಂಚಿದ ದಾನ ಚಿಂತಾಮಣಿ ಎನಿಸಿದ್ದ ಅತ್ತಿಮಬ್ಬೆ ಯೆಂಬ ಜೈನ ಶ್ರಾವಕಿಯೊಬ್ಬಳು ರನ್ನನಿಂದ ಈ ಪುರಾಣ ಕಾವ್ಯವನ್ನು ಬರೆಯಿಸಿ ದಳು. ಅದಕ್ಕಾಗಿಯೇ ರನ್ನನು ಕಾವ್ಯದ ಪ್ರಾರಂಭದಲ್ಲಿ ಸಾಕಷ್ಟು ದೀರ್ಘವಾಗಿ ಅತ್ತಿಮಬ್ಬೆಯ ಪವಿತ್ರ ಜೀವನವನ್ನು ಹೊಗಳಿದ್ದಾನೆ. ಇದು ಪಂಪನ 'ಆದಿಪುರಾಣ' ದಷ್ಟು ಶ್ರೇಷ್ಠವಾದ ಕಾವ್ಯವಾಗಿಲ್ಲ. ಆದರೆ ಇಲ್ಲಿ ಇತರ ಜೈನ ಪುರಾಣಗಳಲ್ಲಿ ಬರುವ ಭವಾವಳಿಯ ಗೊಂದಲವಿಲ್ಲ, ಜೊತೆಗೆ ಅಷ್ಟೊಂದು ಮತೀಯ ವಿವರಣೆಗಳೂ ಇಲ್ಲ, ಶೈಲಿಯು ಸುಲಭವಾಗಿದೆ.

ಕಾವ್ಯ ಪ್ರಾರಂಭದಲ್ಲಿ ಬರುವ ಅತ್ತಿಮಬ್ಬೆಯ ಚರಿತ್ರೆಯೂ ಈ ಗ್ರಂಥದ ಪ್ರಮುಖವಾದ ಒಂದು ಭಾಗ. ಪೊನ್ನನಿಂದ 'ಶಾಂತಿಪುರಾಣ'ವನ್ನು ಬರೆಯಿಸಿದ್ದ ಮಲ್ಲಪ-ಪುನ್ನಿಮಯ್ಯರೆಂಬ ಸೋದರರು ತೈಲಪ ಚಕ್ರವರ್ತಿಯ ಸೇನಾಧಿಕಾರಿಗಳಾ ಗಿದ್ದರು. ಅವರಲ್ಲಿ ಪುನ್ನಿಮಯ್ಯನು ಯುದ್ಧವೊಂದರಲ್ಲಿ ಸತ್ತನು. ಮಲ್ಲಪನು ತೈಲಪನ ಮಗನಾದ ಸತ್ಯಾಶ್ರಯನ ಅಸ್ಥಾನದಲ್ಲಿ ಮುಖ್ಯಾಧಿಕಾರಿಯಾದ. ಇವನಿಗೆ ಐದು ಗಂಡು-ಮೂರು ಹೆಣ್ಣು ಮಕ್ಕಳಿದ್ದರು. ಹೆಣ್ಣು ಮಕ್ಕಳಲ್ಲಿ ಅತ್ತಿಮಬ್ಬೆ-ಗುಂಡಮಬ್ಬೆ ಎಂಬಿಬ್ಬರನ್ನು ನಾಗದೇವನೆಂಬುವವನಿಗೆ ಮದುವೆ ಮಾಡಿಕೊಟ್ಟರು. ಅತ್ತಿಮಬ್ಬೆಯ ಮಗ ಅಣ್ಣಿಗ ದೇವ. ಇವನಿನ್ನೂ ಮಗುವಾಗಿರುವಾಗಲೇ ನಾಗದೇವನು ಯುದ್ಧ ವೊಂದರಲ್ಲಿ ಹೋರಾಡಿ ಮೃತನಾದ. ಆಗ ಅವನ ಕಿರಿಯ ಹೆಂಡತಿಯಾದ ಗುಂಡಮಬ್ಬೆಯು

ಎರಡೆ ವಲಂ ಕುಲವಧುಗಾ
ಚರಿಸಲ್ ಪತಿಯಿಂ ಪರೋಕ್ಷದೊಳ್, ಜಿನದೀಕ್ಷಾ
ಚರಣಂ ಮೇಣ್ ಶುಭಚರಿತದ
ಮರಣಂ ಮೇಣಳಿಪಿಂದೆ ಬಾಳ್ವದು ದೊರೆಯೇ (ಅಜಿಪು. ೧-೪೬)

(ಗಂಡನು ಸತ್ತಾಗ ಕುಲಸತಿಗೆ ಎರಡೇ ಕಾರ್ಯಗಳು-ವ್ರತವನ್ನು ಸ್ವೀಕರಿಸಿ ಬಾಳುವುದು, ಇಲ್ಲವೇ ಗಂಡನೊಡನೆ ಸಹಗಮನ. ಆಸೆಯನ್ನಿಟ್ಟುಕೊಂಡು ಬಾಳುವುದು ಸರಿಯೇ?) ಎಂದು ತಿಳಿದು ತಾನು ಗಂಡನೊಡನೆ ಸಹಗಮನ ಮಾಡಲು ನಿರ್ಧರಿಸುತ್ತಾಳೆ; ಅತ್ತಿಮಬ್ಬೆಯು ಮಗುವನ್ನು ನೋಡಿಕೊಳ್ಳುವ ಕಾರಣದಿಂದ ಬದುಕಿದರೂ ಜೈನ ದೀಕ್ಷೆಯ ಕಠಿಣ ವ್ರತಗಳನ್ನು ಕೈಗೊಳ್ಳುತ್ತಾಳೆ.

ಈ ಅತ್ತಿಮಬ್ಬೆಯೇ 'ಅಜಿತ ಪುರಾಣ'ವನ್ನು ಬರೆಯಿಸಿದವಳು. ಅವಳ ಮುಂದಿನ ಜೀವನ ಅತ್ಯಂತ ಧಾರ್ಮಿಕವಾಗಿ ಸಾಗುತ್ತದೆ. ಇದರಿಂದ ಪಕ್ವವಾದ ಅವಳ ಬದುಕನ್ನು ರನ್ನನು ಈ ಪದ್ಯದಲ್ಲಿ ತುಂಬ ಸುಂದರವಾಗಿ ವರ್ಣಿಸುತ್ತಾನೆ:

ಉತ್ತಮ ಗೋತ್ರೋದ್ಭವೆ,
ಸದ್ವ್ರತೆ, ಮಹಾಸತಿ, ವಿನೇಯ ಚೂಡಾಮಣಿ, ತಾ
ನೆತ್ತ ಉಳಿದರೆತ್ತ? ಪಿಕ್ಕುವೊ
ಡತ್ತಿಯ ಪಣ್ ಅತ್ತಿಮಬ್ಬೆ, ಅಲ್ಲದರ ಗುಣಂ (ಅಜಿಪು. ೧-೧೧)

(ಉತ್ತಮ ಕುಲದಲ್ಲಿ ಜನಿಸಿದವಳೂ ಒಳ್ಳೆಯ ನಡತೆಯವಳೂ ಮಹಾ ಪತಿವ್ರತೆಯೂ ವಿನಯವಂತರಲ್ಲಿ ಶ್ರೇಷ್ಠಳೂ ಆದ ಅತ್ತಿಮಬ್ಬೆಯೆಲ್ಲಿ ಉಳಿದವರೆಲ್ಲಿ? ಆಕೆಯು ಹಿಸುಕಿದರೆ ಅತ್ತಿಯ ಹಣ್ಣಿನಂತೆ ಮೃದು, ಆದರೆ ಗುಣವು ಮಾತ್ರ ಅದರದಲ್ಲ.) ಅವಳ ಪಕ್ವತೆ-ಮೃದುತೆಗಳನ್ನು ಅತ್ತಿಯ ಹಣ್ಣಿಗೆ ಹೋಲಿಸಿರುವುದು ತುಂಬ ಉಚಿತವಾಗಿದೆ. ಅಂತಹ ಶ್ರೇಷ್ಠ ದಾನಿಯೂ ಗುಣವಂತಳೂ ಇರುವ ನಾಡು ಪವಿತ್ರವಾಗುತ್ತದೆಯೆಂದು ಕವಿಯ ನಂಬಿಕೆ. ಅವಳು ಶ್ರವಣಬೆಳ್ಗೊಳದ ಬೆಟ್ಟವನ್ನು ಇಳಿವಯಸ್ಸಿನಲ್ಲಿ ಹತ್ತುತ್ತಿರುವಾಗ ಅವಳಿಗಾದ ಅಯಾಸವನ್ನು ಹೋಗಲಾಡಿಸಲು ಆಕಾಲದಲ್ಲಿ ಮಳೆಯಾಯಿತೆಂದು ಕವಿಯು ಹೇಳುತ್ತಾನೆ. ಆಕೆಯ ಸ್ತುತಿಯನ್ನು ರನ್ನನು ಈ ರೀತಿ ಮಾಡುತ್ತಾನೆ.

ಅಳುರದು ಕಿರ್ಚು, ಮುಟ್ಟದು ವಿಷಾಹಿ-ಮಹಾಸತಿಯಿರ್ದ ಮಂಡಲಂ
ಬೆಳೆವುದು ಬೇಡಿದಂತೆ ಮಟಿ ಕೊಳ್ವುದೆನಿಪ್ಪ ಜಸಕ್ಕೆ ನೋಂತ ಭೂ
ತಿಲಕಪವಿತ್ರೆಯಂ ಗುಣಪವಿತ್ರೆಯನಾ ಸತಿಯಂ ಮಹಾಸತೀ
ತಿಲಕೆಯನ್ ಅತ್ತಿಮಬ್ಬರಸಿಯಂ ಪೆಸರ್ಗೊಳ್ವುದು ಪುಣ್ಯಕಾರಣಂ

(ಅಜಿಪು. ೧-೭೬)

(ಈ ಮಹಾಸತಿಯಿರುವೆಡೆಗಳಲ್ಲಿ ಬೆಂಕಿಯು ಸುಡುವುದಿಲ್ಲ, ವಿಷಸರ್ಪವು ಕಚ್ಚುವುದಿಲ್ಲ. ಇವಳಿರುವ ಪ್ರದೇಶದಲ್ಲಿ ಬೇಕೆನಿಸಿದಷ್ಟು ಮಳೆಯಾಗುವುದು. ಇಂತಹ ಕೀರ್ತಿಯನ್ನು ಪಡೆದವಳೂ ಶ್ರೇಷ್ಠ ಗುಣವಂತಳೂ ಮಹಾಸತಿ ಶ್ರೇಷ್ಠಳೂ ಆದ ಅತ್ತಿಮಬ್ಬೆಯ ಹೆಸರು ಹೇಳುವುದರಿಂದಲೇ ಪುಣ್ಯವುಂಟಾಗುತ್ತದೆ.) ಕವಿ ಈ ರೀತಿ

ಅತ್ತಿಮಬ್ಬೆಯ ಬಗ್ಗೆ ಒಂದು ಖಂಡಕಾವ್ಯವನ್ನೇ ರಚಿಸಿ ತನ್ನ ಗೌರವವನ್ನು ಸಮರ್ಪಿಸಿದ್ದಾನೆ: ಅವನೇ ರಚಿಸಿದ ಲಕ್ಕುಂಡಿಯ ಒಂದು ಶಾಸನದಲ್ಲಿಯೂ ಅತ್ತಿಮಬ್ಬೆಯ ಬಗ್ಗೆ ಅವನಿಗಿದ್ದ ಭಾವನೆಗಳು ವ್ಯಕ್ತವಾಗಿವೆ.

ಈ ಪುರಾಣ ಕಾವ್ಯದ ತುಂಬ ಸುಂದರವಾದ ಸನ್ನಿವೇಶವೆಂದರೆ ಸುಸೀಮ ನಗರದ ರಾಜನಾದ ವಿಮಲವಾಹನನಿಗೆ ವೈರಾಗ್ಯವುಂಟಾಗುವ ಪ್ರಸಂಗ. ಅವನ ಮನಸ್ಸಿನ ಒಂದು ಭಾಗವು ಇನ್ನೊಂದು ಭಾಗಕ್ಕೆ (ವೈರಾಗ್ಯ ಪರವಾದ ಭಾಗವು ಲೌಕಿಕ ಪರವಾದ ಭಾಗಕ್ಕೆ) ಉಪದೇಶಿಸುವ ಪ್ರಪಂಚದ ನಶ್ವರತೆ. ಇದೊಂದು ನಾಟಕೀಯ ಸ್ವಗತದಂತೆ ವರ್ಣಿತವಾಗಿ ಸುಂದರವಾಗಿದೆ, ಸರಳವಾಗಿದ್ದು ಹೃದಯವನ್ನು ಹೊಗುತ್ತದೆ.

ಮತಿಗೆಟ್ಟು ಜೀವ ಧರ್ಮಾ
ಮೃತಮಂ ಸೇವಿಸದೆ ಅಧರ್ಮಮಂ ಸೇವಿಸಿ ದು
ರ್ಗತಿಗಿಳಿದು ಈ ಜವನೆಂಬ ಅಱ
ಸಿ ತಿಂಬ ದೈವಕ್ಕೆ ಪೋಗಿ ಪಾಟಂಬಡುವೈ (ಅಜಿಪು. ೨–೫೮)

(ಎಲೈ ಜೀವವೇ, ಧರ್ಮವೆಂಬ ಅಮೃತವನ್ನು ಕುಡಿಯದೆ ಬುದ್ಧಿಗೆಟ್ಟು ಅಧರ್ಮವನ್ನು ಸೇವಿಸಿ ದುರ್ಗತಿಗಿಳಿದು ಜನರನ್ನು ಹುಡುಕಿ ತಿನ್ನುವ ಯಮನೆಂಬ ದೈವಕ್ಕೆ ತುತ್ತಾಗಿ ಹಾಳಾಗುತ್ತೀಯೆ.)

ಎನಿತಂ ಕುಕ್ಕುಟಗುದಿದಪೆ,
ಎನಿತಂ ಕಕ್ಕಟಗಟಲ್ದಪೈ, ಜೀವನೇ ನೀ
ನೆನಿತಂ ಮಲ್ಮಲ ಮಱುಗುವೆ
ಎನಿತಂ ಸಂಸಾರದೊಳಗೆ ತಿಱ್ರನೆ ತಿರಿವಯ್? (ಅಜಿಪು. ೨–೬೧)

(ಎಲೈ ಜೀವವೇ, ಎಷ್ಟು ಎಂದು ನೀನು ಈ ಜೀವನದಲ್ಲಿ ಕೊತಕೊತ ಕುದಿಯುತ್ತೀಯೇ, ಎಷ್ಟೆಂದು ಶಕ್ತಿಗುಂದುತ್ತೀಯೆ, ಎಷ್ಟು ಎಂದು ನರಳುತ್ತೀಯೆ, ಈ ಸಂಸಾರದಲ್ಲಿ ತಿರುಗುತ್ತೀಯೆ.)

ಕಡೆಯಿಲ್ಲದ ಸಂಸಾರದ
ಕಡೆಗಾಣಲ್ ಬಗೆವೆಯಪ್ಪೊಡೆ ಎನ್ನುಕ್ತಿಗೊಡಂ
ಬಡು, ಜೀವ, ನಿನ್ನ ಕಾಲಂ
ಪಿಡಿವೆಂ, ಧರ್ಮಮನೆ ಮಗುಟೆ ಬಲ್ವಿಡಿವಿಡಿಯಾ (ಅಜಿಪು ೨–೬೩)

(ಕೊನೆಯೇ ಇಲ್ಲದ ಈ ಸಂಸಾರದ ಕೋಟಲೆಯನ್ನು ಹೋಗಲಾಡಿಸಿಕೊಳ್ಳ ಬೇಕೆಂದಿದ್ದರೆ ನನ್ನ ಮಾತನ್ನು ಕೇಳು. ಎಲೆ ಜೀವವೆ, ನಿನ್ನ ಕಾಲನ್ನು ಹಿಡಿದು ಬೇಡುತ್ತೇನೆ: ಧರ್ಮವನ್ನು ಮತ್ತೆ ಬಿಗಿಯಾಗಿ ಹಿಡಿದುಕೋ.) ಇಲ್ಲಿ 'ನಿನ್ನ ಕಾಲನ್ನು ಹಿಡಿದು ಬೇಡಿಕೊಳ್ಳುತ್ತೇನೆ' ಎಂಬ ಮಾತು ಎಷ್ಟು ಸುಂದರವಾಗಿ ಬಂದಿದೆ!

ಅಂಗಜನ ಸುಖದ ಸಾಮ್ರಾ
ಜ್ಯಂಗಳ್ ಶಾರೀರ ಮಾನಸಾಗಂತುಕ ದುಃ

ಖಂಗಳನೆ ಮಾಳ್ಪವು, ಅದಱಿಂ
ಪಿಂಗುವೆನ್, ಇನ್ನೆನಗೆ ಜಿನನ ಚರಣಂ ಶರಣಂ (ಅಜಿಪು. ೨-೬೧)

(ಕಾಮ ಸುಖವು ಶರೀರ ಮನಸ್ಸುಗಳಿಗೆ ಅನಿರೀಕ್ಷಿತ ದುಃಖವನ್ನುಂಟು ಮಾಡುತ್ತದೆ. ಅದರಿಂದ ಇನ್ನು ದೂರಸರಿಯುತ್ತೇನೆ. ಇನ್ನು ಮೇಲೆ ಜಿನನ ಪಾದವೇ ನನಗೆ ಗತಿ.) ಈ ಪದ್ಯಗಳಲ್ಲಿ ಅದೆಷ್ಟು ಸರಳವಾಗಿಯೂ ಪರಿಣಾಮಕಾರಿಯಾಗಿಯೂ ಉಪದೇಶವು ಬಂದಿದೆ! ಕೊನೆಯಲ್ಲಿ ನನಗಿನ್ನು ಜಿನನ ಪಾದವೇ ಗತಿಯೆಂದು ವಿಮಲವಾಹನನು ನಿರ್ಧರಿಸುವುದು ಸಹಜವೇ ಎನಿಸುತ್ತದೆ.

ಉಲ್ಕಾಪಾತವನ್ನು ಕಂಡ ಅಜಿತನಾಥನಲ್ಲಿ ವೈರಾಗ್ಯವುಂಟಾಗಿ ಪರಿನಿಷ್ಕ್ರಮಣಕ್ಕೆ ಹೊರಟಾಗ ಅವನ ತಂದೆ-ತಾಯಿಯರೂ ಹಿಂದೆ ಹೊರಟರು; ಬಂಧು ಬಾಂಧವರೂ ಹಿಂಬಾಲಿಸಿದರು. ಆಗ ಅಯೋಧ್ಯಾ ನಗರವು ಬಿಕೋ ಎನ್ನುತ್ತಿದ್ದಿತು. ಕವಿ ಅದನ್ನು ಸರಳ ಉಪಮೆಯೊಂದಿಗೆ ಹೀಗೆ ವರ್ಣಿಸುತ್ತಾನೆ:

ಜಿನಪಿತೃಗಳ್ ಜಿನತನಯಂ
ಜಿನೇಂದ್ರ ತವರೆಲ್ಲಮೊಡನೆ ತಳರಲೊಡಂ ಬಿ
ಮ್ಮನೆಯಾಗಿ ಮದುವೆಗಳುಪಿದ
ಮನೆಯಂದನಿರ್ದುದಂದಯೋಧ್ಯಾನಗರಂ (ಅಜಿಪು. ೬-೯೦)

(ಎಲ್ಲರೂ ಅಜಿತನೊಡನೆ ಹೊರಟು ನಿಂತಾಗ ನಂಟರೆಲ್ಲರೂ ಹೊರಟು ಹೋದಾಗ ಮದುವೆಯ ಮನೆಯಿರುವಂತೆ ಅಯೋಧ್ಯೆಯು ಬಿಕೋ ಎನ್ನುತ್ತಿತ್ತು) ಆಗ ಅವನ ರಾಣಿಯರು ಪ್ರಲಾಪಿಸುವ ರೀತಿಯು ಸುಂದರವಾಗಿ ವರ್ಣಿತವಾಗಿದೆ. ಅವರೂ ಅವನನ್ನು ಹಿಂಬಾಲಿಸಲು ನಿರ್ಧರಿಸಿ ತಾವು ಬೆಳೆಸಿದ್ದ ಮರಗಳಿಂದ ಅವರು ಬೀಳ್ಕೊಳ್ಳುವಾಗ ಹೇಳುವ ಮಾತುಗಳಿವು:

ಲಲಿತ ಲತಾಲಯಂಗಳಿರ, ಸುಂದರ ಕಾನನ ಚಂದನದ್ರುಮಂ
ಗಳಿರ, ತಳಿರ್ತಶೋಕೆಗಳಿರಾ, ಸಹಕಾರ ತಮಾಲ ಭೂರುಹಂ
ಗಳಿರ, ವಿಯೋಗಮಾದುದೆಮಗಂ ನಿಮಗಂ ಬೆಸಕೆಯ್ವೆಮೆಂದು ವಿ
ಹ್ವಳೆಯರಗಲ್ಕೆಯೊಳ್ ನೆಗಪಿದರ್ ವಸಮಲ್ಲದ ಬಾಷ್ಪವಾರಿಯಂ (ಅಜಿಪು. ೬-೧೧೧)

(ಎಲೈ ಕೋಮಲ ಎಳ್ಳಿಮಾಡಗಳೆ, ಗಂಧದ ಮರಗಳೇ ಚಿಗುರಿದ ಅಶೋಕ ವೃಕ್ಷಗಳೇ, ಮಾವು-ಹೊಂಗೆಗಳಿರೇ, ನಾವಿನ್ನು ನಿಮ್ಮನ್ನು ಬಿಟ್ಟು ಹೋಗಬೇಕು ಎಂದು ಹೇಳುವಾಗ ಕಣ್ಣೀರನ್ನು ತಡೆಯಲಾರದಾದರು) ಅಜಿತನ ದೃಢ ವೈರಾಗ್ಯದ ಹಿನ್ನೆಲೆಯಲ್ಲಿ ಬಂದಿರುವ ಈ ಶೋಕವು ಒಂದೆಡೆ ಹೆಚ್ಚು ಪರಿಣಾಮಕಾರಿಯಾಗಿದ್ದರೆ, ಮತ್ತೊಂದೆಡೆ ಅಜಿತನ ವೈರಾಗ್ಯವು ಇವರೊಡನೆ ಹೋಲಿಸಿದಾಗ ಆಶ್ಚರ್ಯಕರವಾಗುವಷ್ಟು ಹಿರಿದೆಂಬುದು ತಿಳಿಯುತ್ತದೆ.

ಅಜಿತಪುರಾಣದ ಮತ್ತೊಂದು ಸುಂದರ ನಿರೂಪಣೆಯೆಂದರೆ ಸಗರ ಚಕ್ರವರ್ತಿಯ ಕಥೆ. ಇವನು ತ್ರಿಷಷ್ಟಿಶಲಾಕಾಪುರುಷರಲ್ಲಿ ಎರಡನೆಯ ಚಕ್ರವರ್ತಿ, ಇಲ್ಲಿ ಅವನ ಹಿಂದಿನ ಮೂರು ಜನ್ಮಗಳ ಕತೆಯೂ ಇದೆ. ಚಕ್ರವರ್ತಿಯು ತುಂಬ ದೊಡ್ಡ

ಸಂಸಾರಿ, ಅವನಿಗೆ ತೊಂಬತ್ತಾರುಸಾವಿರ ಮಂದಿ ಹೆಂಡಂದಿರು. ಅರವತ್ತು ಸಾವಿರ ಜನ ಮಕ್ಕಳು. ಅವರೊಂದಿಗೆ ತುಂಬ ವೈಭವದಿಂದ ಸಗರನು ಕಾಲ ಕಳೆಯುತ್ತಿದ್ದ. ಪ್ರಾಪ್ತ ವಯಸ್ಕರಾದ ಮಕ್ಕಳು ಅವನಲ್ಲಿಗೆ ಬಂದು ತಮಗೆ ಕಾಲ ಕಳೆಯುವುದು ಕಷ್ಟವೆಂದೂ ಏನಾದರೂ ಕೆಲಸವನ್ನು ಹೇಳಬೇಕೆಂದೂ ಪ್ರಾರ್ಥಿಸುತ್ತಾರೆ. ನಿಮಗೆಂತಹ ಕೆಲಸ, ಅರಮನೆಯಲ್ಲಿ ಹಾಯಾಗಿರಿ ಎಂದರೂ ಮಕ್ಕಳು ಒಪ್ಪುವುದಿಲ್ಲ. ಕೊನೆಗೆ ಕೈಲಾಸಪರ್ವತದಲ್ಲಿ ಭರತ ಚಕ್ರವರ್ತಿಯು ನಿರ್ಮಿಸಿರುವ ಜಿನ ಪ್ರತಿಮೆಗಳು ಭೂಮಿಗೆ ಗೋಚರವಾಗದಂತೆ ರಕ್ಷಣೆಯನ್ನು ನಿರ್ಮಿಸಿರಿ ಎಂದು ಸಲಹೆಯೀಯು ತ್ತಾನೆ. ಅವರೆಲ್ಲರೂ ಹಾಗೆಯೇ ಬರುತ್ತಾರೆ. ಹಿಂದಿನ ಜನ್ಮಗಳಲ್ಲಿ ಸಗರನಿಗೆ ವೈರಾಗ್ಯವನ್ನು ಬೋಧಿಸಲು ಪ್ರಯತ್ನ ಪಟ್ಟು ವಿಫಲನಾಗಿದ್ದ ಮಣಿಕೇತುವೆಂಬ ಅವನ ಸ್ನೇಹಿತನು ಮತ್ತೆ ತನ್ನ ಪ್ರಯತ್ನವನ್ನು ಮುಂದುವರಿಸಲು ಇದೇ ತಕ್ಕ ಸಮಯವೆಂದು ಆಲೋಚಿಸುತ್ತಾನೆ. ಹಾಗೆಯೇ ಅವನು ವಿಷದೃಷ್ಟಿ ಸರ್ಪವಾಗಿ ಬಂದು ಸಗರನ ಮಕ್ಕಳನ್ನೆಲ್ಲ ಸುಟ್ಟು ಬೂದಿ ಮಾಡುತ್ತಾನೆ. ಈ ಸುದ್ದಿಯನ್ನು ತಿಳಿಸಲು ಅನುಕೂಲ ವಾಗುವಂತೆ ಭಗೀರಥನನ್ನು ಮಾತ್ರ ಅವರಲ್ಲಿ ಉಳಿಸಿರುತ್ತಾನೆ. ತಕ್ಷಣ ಅವನು ಮುದಿ ಬ್ರಾಹ್ಮಣನ ವೇಷದಿಂದ ಸಗರನಲ್ಲಿಗೆ ಓಡಿಬಂದು ಈ ರೀತಿ ಬೇಡಿಕೊಳ್ಳುತ್ತಾನೆ: ಬಹು ದಿನಗಳ ಮೇಲೆ ಪಡೆದ ತನ್ನೊಬ್ಬ ಮಗನು ವಿವಾಹ ಕಾಲದಲ್ಲಿ ಸತ್ತನೆಂದೂ

ಶರಣಾಗಾ ದ್ವಿಜನೆನ್ನಂ
ಕರುಣಿಸು ನೀನೆನ್ನ ಮಗತನಂತಕ ಪುರದಿಂ
ತರವೇಟ್ಟುದು, ಎನಗೆ ಮರಣಂ
ಶರಣಂ, ಮೇಣನಿತೆ ನಿನ್ನ ಚರಣಂ ಶರಣಂ **(ಅಜಿಪು. ೧೦–೧೫)**

(ನಾನು ನಿನಗೆ ಶರಣಾಗಿದ್ದೇನೆ, ನನ್ನ ಮಗನನ್ನು ಯಮಪುರದಿಂದ ಮರಳಿ ಕೊಡಿಸು. ನನಗೆ ನಿನ್ನ ಪಾದವೇ ಗತಿ, ಇಲ್ಲದಿದ್ದರೆ ಸಾವೇ ಗತಿ) ಎಂದು ಪ್ರಾರ್ಥಿಸುತ್ತಾನೆ. ಈ ಬಡಪಾಯಿಯ ಸ್ಥಿತಿಗೆ ನಗಬೇಕೋ ಅಳಬೇಕೋ ಸಗರನಿಗೆ ತಿಳಿಯುವುದಿಲ್ಲ. ಸತ್ತವರು ಎಲ್ಲಿಯಾದರೂ ಮರಳಿ ಬರುತ್ತಾರೆಯೇ, ಎಂಥ ದಡ್ಡ ಇವನು ಎಂದುಕೊಂಡ. ಆದರೆ ತನ್ನ ಪ್ರಜೆಯೊಬ್ಬನ ದುಃಖವನ್ನು ಹೋಗಲಾಡಿಸಲಾರದ್ದಕ್ಕಾಗಿ ತನಗೆ ಕೆಟ್ಟ ಹೆಸರು ಬರುತ್ತದಲ್ಲ ಎಂದು ಚಿಂತಿಸಿದ. ಇವನ ಚಿಂತೆಯನ್ನರಿತ ಸಗರನ ಪುರೋಹಿತನಾದ ಬುದ್ಧಿಸಾಗರನೆಂಬುವನು ಒಂದು ಉಪಾಯವನ್ನು ಅಲೋಚಿಸಿ, ಯಾರೂ ಸಾಯದ ಮನೆಯಲ್ಲಿ ಹುಲ್ಲನ್ನೂ ಬೆಂಕಿಯನ್ನೂ ತಂದರೆ ಅವನ ಮಗನನ್ನು ಬದುಕಿಸಿ ಕೊಡುವುದಾಗಿ ಬ್ರಾಹ್ಮಣನಿಗೆ ಹೇಳಿದ. (ಇದು ಕಿಸಾ ಗೋತಮಿಯ ಕತೆಯನ್ನು ನೆನಪಿಗೆ ತರುತ್ತದೆಯಲ್ಲವೇ?) ಏನೂ ತಿಳಿಯದವನಂತೆ ಹೋಗಿ ಬಂದ ಆ ಬ್ರಾಹ್ಮಣನು 'ಅಂತಹ ಮನೆಯೇ ಇಲ್ಲ' ಎಂದು ಹೇಳಿದ ಪುರೋಹಿತನು ಸಾವಿನ ಅನಿವಾರ್ಯತೆಯ ಬಗ್ಗೆ ಒಂದು ದೊಡ್ಡ ಭಾಷಣವನ್ನೇ ಮಾಡಿದ.

ಏಂ ನಿಷ್ಕರುಣೆಯೊ, ಪಸುಮಗ
ನೆನ್ನದೆ ಮುತ್ತಾಣ್ಮನೆನ್ನದಱಿವುಳ್ಳಂ ಬಾ

ಟ್ಗಿನ್ನದೆ ಮರುಳಕ್ಕಟ ಮಾ
ಣೆನ್ನದೆ ಮುಂಬಿಟ್ಟು ಕೊಂದಪಂ ಯಮರಾಜಂ (ಅಜಿಪು. ೧೦-೨೫)

(ಯಮರಾಜನು ಅದೆಷ್ಟು ನಿಷ್ಕರುಣಿ! ಹಸುಮಗು ಎನ್ನದೆ, ಮುದುಕ ಎನ್ನದೆ, ಇವನು ಜ್ಞಾನಿ ಬದುಕಿಕೊಳ್ಳಲಿ ಎಂದು ಬಿಡದೆ, ಪಾಪ ಇವನು ಹುಚ್ಚ, ಬಿಟ್ಟು ಬಿಡೋಣ ಎನ್ನದೆ ಎಲ್ಲರನ್ನೂ ಕೊಂದುಹಾಕುತ್ತಾನೆ.) ಅಂತಹ ಯಮರಾಜನ ರಾಜ್ಯ ಚಿಹ್ನೆಗಳಾವುವು ಗೊತ್ತೆ?

ಮೃತಪಟಹಂ ಜಯಪಟಹಂ.
ಚಿತಾಗ್ನಿ ಧೂಮಂ ಜಯಧ್ವಜಂ, ಜನಕರುಣಾ
ರುತಿ ಜಯ ಮಂಗಳರುತಿ, ಎನೆ
ಕೃತಾಂತರಾಜಂಗೆ ರಾಜ್ಯ ಚಿಹ್ನವಿದಲ್ತೆ! (ಅಜಿಪು. ೧೦-೨೯)

(ಯಮರಾಜನ ವಿಚಿತ್ರ ರಾಜ್ಯ ಚಿಹ್ನೆಗಳಿವು: ಹೆಣದ ಹಿಂದೆ ಬಡಿದುಕೊಂಡು ಹೋಗುವ ತಮಟೆಯೇ ಇವನ ವಿಜಯ ನಗಾರಿ! ಹೆಣವನ್ನು ಸುಡುವಾಗ ಮೇಲೇಳುವ ಹೊಗೆಯೇ ಇವನ ಜಯಧ್ವಜ! ಜನರ ಕರುಣಾಜನಕವಾದ ಗೋಳಿನ ಧ್ವನಿಯೇ ಇವನ ಜಯ ಮಂಗಳ ಗೀತಗಳು!) ಎಷ್ಟೊಂದು ಸಮರ್ಥವಾಗಿ ಆದರೂ ಸರಳವಾಗಿ ಕವಿ ಇಲ್ಲಿ ಈ ವರ್ಣನೆಯನ್ನು ಮಾಡಿದ್ದಾನೆ!

ಈ ಭಾಷಣವನ್ನು ಕೇಳಿದ ಮಣಿಕೇತವು ಇವರನ್ನು ಇವರ ಮಾತಿನಲ್ಲಿಯೇ ಕಟ್ಟಹಾಕುವೆನೆಂದು ಯೋಚಿಸಿ, 'ಈ ಧರ್ಮಬೋಧೆಯು ನಿಮಗೂ ಅನ್ವಯಿಸುತ್ತದೆಯೋ ನನಗೆ ಮಾತ್ರವೋ' ಎಂದು ಕೇಳಿದ. ಸಗರನು ನಗುತ್ತ 'ಅದು ನಿನಗಿಂತಲೂ ನಮಗೇ ಮೊದಲು ಅನ್ವಯಿಸುವುದು' ಎಂದು ಹೇಳಿದ. (ತನ್ನ ಮಕ್ಕಳೆಲ್ಲರೂ-ಒಬ್ಬನ ಹೊರತು-ಸತ್ತಿದ್ದಾರೆಂಬುದನ್ನು ತಿಳಿಯದೆಯೇ ಆಡುತ್ತಿರುವ ಈ ಮಾತು ಎಷ್ಟು ವ್ಯಂಗ್ಯಪೂರ್ಣವಾಗಿದೆ!) ಆಗ ಸಗರನ ಮಕ್ಕಳ ಸಾವಿನ ವಿಷಯವನ್ನು ಮಣಿಕೇತು ತಿಳಿಸಿದ. ಅದನ್ನು ಅಷ್ಟಾಗಿ ಗಮನಿಸದೆ ರಾಜನ ಬ್ರಾಹ್ಮಣನಿಗೆ ಮತ್ತಷ್ಟು ಉಪದೇಶ ಮಾಡಲು ಆರಂಭಿಸುವವನಿದ್ದ. ಆದರೆ ಅಷ್ಟರಲ್ಲಿಯೇ ಕಣ್ಣೀರು ಸುರಿಸುತ್ತ ಭಗೀರಥನು ಓಡಿಬಂದು ಎಲ್ಲ ರಾಜಪುತ್ರರ ಸಾವಿನ ವಿಷಯವನ್ನು ತಿಳಿಸಿದಾಗ ಎಲ್ಲರೂ ಸ್ತಂಭೀಭೂತರಾದರು. ಈ ವಿಷಯವು ಅಂತಃಪುರವನ್ನೂ ಮುಟ್ಟಿತು. ಎಲ್ಲ ರಾಣಿಯರೂ ಒಟ್ಟಾಗಿ ರಾಜನಲ್ಲಿಗೆ ಓಡಿಬಂದರು

ಬಿರ್ದು ನಿನಗೆ ಚತುರ್ದಶರತ್ನಂ
ಜನೇಶ ಬೆಸಕೆಯ್ದುಂ ಅಮರರೆಲ್ಲಂ ಬೆಸನೇ
ನೆನುತಿರ್ಪರ್ ಬೆಸದಪ್ಪಿದ
ತನೂಜರಂ ಜವನೊಳಿಜಿದು ಬರಿಸಲ್ವೇಟ್ಕುಂ (ಅಜಿಪು. ೧೦-೩೫)

(ನಿನಗೆ ಹದಿನಾಲ್ಕು ರತ್ನಗಳೂ ವಶವಾಗಿವೆ. ದೇವತೆಗಳೆಲ್ಲರೂ ನಿನ್ನ ಅಪ್ಪಣೆಯನ್ನು ಪಾಲಿಸುವ ಸೇವಕರಾಗಿದ್ದಾರೆ, ಯುಮನೊಡನೆ ಯುದ್ಧಮಾಡಿ ಅವನು ಕರೆದೊಯ್ದಿರುವ ನಮ್ಮ ಮಕ್ಕಳನ್ನು ಕರೆದುಕೊಂಡು ಬಾ.)

ಉರಿದಱಿದಪ್ಪುದು ಎಮ್ಮಯ
ಶರೀರಮೋವೆಮ್ಮ ಪುತ್ರಶೋಕಾನಲವನಿಂ,
ನರಪಾಲಾ ಮತ್ತಮನಲಾಂ
ತರಮೇವುದೊ ದಗ್ಧವಾರಿಯೆಂಬುದುಮುಂಟೆ (ಅಜಿಪು. ೧೦-೩೯)

(ಪುತ್ರ ಶೋಕವೆಂಬುವ ಉರಿಯಿಂದ ನಮ್ಮ ಹೊಟ್ಟೆಯು ಉರಿದು ಹೋಗುತ್ತಿದೆ. ಇದಕ್ಕಿಂತ ಬೇರೆಯ ಉರಿಯಿದೆಯೇ?)

ಕುಡುವುದು ಕಿಚ್ಚಂ ದೇವರ್
ತಡೆಯದೆ ಕತ್ತಿಯನೆಮಗೆ ಬೆಸಸುವುದು, ಇನ್ನೇಂ
ಪಡೆಮಾತೊ, ತನಯರಿಲ್ಲದೆ
ತಡೆದಿರ್ಪುದು ತಕ್ಕುದಲ್ತು ಭುವನಾಧಿಪತೀ (ಅಜಿಪು. ೧೦-೪೦)

(ಮಕ್ಕಳಿಲ್ಲದೆ ನಾವು ಜೀವದಿಂದಿರಲು ಸಾಧ್ಯವಿಲ್ಲ. ನಮಗೆ ಬೆಂಕಿಯನ್ನೋ ಕತ್ತಿಯನ್ನೋ ದಯೆಪಾಲಿಸು, ನಾವೂ ಅದರಿಂದ ಪ್ರಾಣ ಬಿಡುತ್ತೇವೆ.) ಎಂದು ಆ ರಾಣಿಯರೆಲ್ಲ ಕಲ್ಲು ಕರಗುವಂತೆ ಗೋಳಾಡಿದರು. ತನ್ನ ಹೆಂಡತಿಯರು-ಸೊಸೆಯ ರನ್ನು ಕಂಡು ಸಗರನು ಅಧೀರನಾದ, ಆದರೆ ಅವನು ಸುಸಂಸ್ಕೃತ ಚೇತಸನಾದ್ದರಿಂದ ಧೈರ್ಯತಾಳಿದ ಜನರೆಲ್ಲ ಅವನನ್ನು ಕಲ್ಲು ಹೃದಯದವನೆಂದು ನಿಂದಿಸಿದರು. ಇದನ್ನು ಕೇಳಿ ಬುದ್ಧಿಸಾಗರನಿಗೆ ಸಹಿಸಲಾಗಲಿಲ್ಲ. ಬಿಳಿಯ ಸಾಸಿವೆಯನ್ನು ಒಂದು ಹಿಡಿತುಂಬ ತಂದು ರಾಜನ ಮೇಲೆ ಹಾಕಿದ, ಕಾದ ಬಾಣಲೆಯಲ್ಲಿ ಬಿದ್ದಂತೆ ಅವು ಛಿಳಿಛಿಟಿಲ್ ಎಂದು ಅರಳಾಗಿ ದಿಕ್ಕು ದಿಕ್ಕಾಗಿ ಹಾರಿದುವಂತೆ! (ಸಗರನ ದುಃಖವೆಷ್ಟೆಂಬುದನ್ನು ವರ್ಣಿಸಲು ಕವಿಯು ಎಂತಹ ಸುಂದರವಾದ ನಿರೂಪಣೆಯನ್ನು ಮಾಡಿದ್ದಾನೆ!) ಜನರಿಗೆ ಸಗರನ ಪುತ್ರಶೋಕ ಅರ್ಥವಾಯಿತು. ಬುದ್ಧಿ ಸಾಗರನ ಜಾಣ್ಮೆಯು ಎಷ್ಟೆಂಬುದೂ ತಿಳಿಯಿತು. ಸಗರನು ಈ ಸಂಸಾರವು ಸಾಕು ಎಂದು ನಿರ್ಧರಿಸಿದ.

ಶ್ರೀಮಹಿತ ಮಹೀರಾಜ್ಯ
ವ್ಯಾಮೋಹಂ ಮಾಣ್ಗೆ. ಶರಣಕ್ಕೆಮಗಜಿತ
ಸ್ವಾಮಿ ಭವಭಯಹರಂ ಸಕ
ಳಾಮರಜನವಿನುತ ಚರಿತನ್ ಅಪಗತದುರಿತಂ (ಅಜಿಪು. ೧೧-೧)

(ಸಂಪದ್ಯುಕ್ತವಾದ ಈ ರಾಜ್ಯವ್ಯಾಮೋಹವು ಇನ್ನು ಸಾಕು ಇನ್ನು ಸಂಸಾರ ಭಯ ವನ್ನು ನಿವಾರಿಸುವವನೂ ಸಕಲದೇವತೆಗಳಿಂದ ಪೂಜಿತನಾದವನೂ ಪಾಪವಿನಾಶಕೂ ಆದ ಅಜಿತಸ್ವಾಮಿಗೆ ಶರಣಾಗುತ್ತೇನೆ.) ಹೀಗೆ ಸಗರ ಚಕ್ರವರ್ತಿಯ ಕತೆಯು 'ಅಜಿತಪುರಾಣ' ದಲ್ಲಿನ ಸರಳ-ಸುಂದರ ಪ್ರಸಂಗ.

ಗದಾಯುದ್ಧ

ರನ್ನನ ಕೀರ್ತಿಯು ಶಾಶ್ವತವಾಗಿರುವುದು 'ಗದಾಯುದ್ಧ' ಅಥವಾ 'ಸಾಹಸ ಭೀಮ ವಿಜಯ'ದಿಂದ. ಪಂಪನ ಭಾರತದ ಹದಿಮೂರನೆಯ ಆಶ್ವಾಸದ ಗದಾಯುದ್ಧ ಪ್ರಸಂಗವನ್ನು ಇಟ್ಟುಕೊಂಡು ರನ್ನನು ಒಂದು ಅತ್ಯುತ್ತಮ ಕಾವ್ಯವನ್ನು

ರಚಿಸಿದ್ದಾನೆ. ಅಲ್ಲದೆ ಪಂಪನಂತೆಯೇ ಇವನೂ ತನ್ನ ಆಶ್ರಯದಾತನನ್ನು ಕಥಾನಾಯಕನೊಡನೆ ಈ ಕಾವ್ಯದಲ್ಲಿ ಮೇಳೈಸಿ ಹೊಗಳಿದ್ದಾನೆ. ಇರಿವಬೆಡಂಗ, ಆಕಳಂಕಚರಿತ, ಸಾಹಸಭೀಮ ಇತ್ಯಾದಿ ಬಿರುದನ್ನು ಪಡೆದಿದ್ದ ಸತ್ಯಾಶ್ರಯನನ್ನು ತನ್ನ ಕಾವ್ಯದ ನಾಯಕನಾದ ಭೀಮನೊಡನೆ ಹೋಲಿಸಿದ್ದಾನೆ. ಆದ್ದರಿಂದ ಇಲ್ಲಿ ಯುದ್ಧ ವಾದ ಮೇಲೆ ಪಟ್ಟವಾಗುವುದು ಭೀಮನಿಗೆ. ಇವನ ಕಾವ್ಯದಲ್ಲಿ ಸಂಸ್ಕೃತ ನಾಟಕ ಗಳಾದ ಭಾಸನ 'ಊರುಭಂಗ' ಹಾಗೂ ಭಟ್ಟನಾರಾಯಣನ 'ವೇಣೀ ಸಂಹಾರ'ಗಳ ಪ್ರಭಾವವನ್ನು ಸಾಕಷ್ಟು ಕಾಣಬಹುದು. ಈ ಕಾವ್ಯದ ವೈಶಿಷ್ಟ್ಯವೆಂದರೆ ಇಲ್ಲಿನ ರಮಣೀಯ ನಾಟಕೀಯತೆ. ಬಿ.ಎಂ. ಶ್ರೀಕಂಠಯ್ಯನವರು ಅತ್ಯಲ್ಪ ವ್ಯತ್ಯಾಸಗಳನ್ನು ಮಾಡಿ 'ಗದಾಯುದ್ಧ ನಾಟಕ'ವನ್ನು ಪುನಾರಚಿಸಿರುವುದು ಈ ಕಾವ್ಯದ ನಾಟಕೀಯತೆಗೆ ಸಾಕ್ಷಿಯಾಗಿದೆ. ಇಲ್ಲಿ ಗದಾಯುದ್ಧ ಪ್ರಸಂಗವನ್ನು ಕಾವ್ಯವಸ್ತುವನ್ನಾಗಿ ಮಾಡಿಕೊಂಡಿದ್ದರೂ ಹಿಂದಿನ ಭಾರತಕತೆಯನ್ನೆಲ್ಲ ಸಂಗ್ರಹವಾಗಿ 'ಸಿಂಹಾವಲೋಕನ ಕ್ರಮ'ದಿಂದ ಹೇಳಿರುವುದಾಗಿ ರನ್ನನೇ ತಿಳಿಸುತ್ತಾನೆ. 'ಸಿಂಹಾವಲೋಕನ ಕ್ರಮ'ವೆಂದರೆ ಸಿಂಹವು ಬೇಟೆಯಾಡಿ ತೃಪ್ತಿಗೊಂಡ ಮೇಲೆ ಕಾಡಿನ ದಿಬ್ಬವನ್ನೇರಿ ಆ ಪ್ರದೇಶವನ್ನೆಲ್ಲ ಸುತ್ತಲೂ ನೋಡುವ ರೀತಿಯ ನಿರೂಪಣೆಯೆಂದರ್ಥ. ರನ್ನನನ್ನು ಶಕ್ತಿಕವಿ ಎಂದು ಕುವೆಂಪು ಅವರು ಕರೆಯುವುದು ಸಮಂಜಸವಾದುದು. ಅವನ ಶೈಲಿಯಲ್ಲಿ ಅಂತಹ ಶಕ್ತಿಯಿದೆ. ನಿಸ್ಸಾರನಾದ ವ್ಯಕ್ತಿಯಲ್ಲಿಯೂ ಪೌರುಷವನ್ನು ತುಂಬುವ ಸಾಮರ್ಥ್ಯ ಅವನ ಬರವಣಿಗೆಯಲ್ಲಿದೆ.

ಕೃತಿ ನೆಗಟ್ದ ಗದಾಯುದ್ಧಂ
ಕೃತಿಗೀಶ್ವರ ಚಕ್ರವರ್ತಿ ಸಾಹಸಭೀಮಂ
ಕೃತಿಯಂ ವಿರಚಿಸಿದನಲಂ
ಕೃತಿಯಂ ಕವಿರತ್ನವೆಂದೊಡೇವಣ್ಣಿಪುದೋ (ಗದಾ. ೧.೩೨)

(ಈ ಕೃತಿ ಪ್ರಸಿದ್ಧವಾದ ಗದಾಯುದ್ಧ. ಇದಕ್ಕೆ ಚಕ್ರವರ್ತಿಯಾದ ಸಾಹಸ ಭೀಮನೇ ನಾಯಕ; ಸಾಹಿತ್ಯಕ್ಕೆ ಅಲಂಕಾರದಂತಿರುವ ಈ ಕೃತಿಯನ್ನು ರಚಿಸಿದವನು ಕವಿರತ್ನ ಎಂದರೆ ಅದನ್ನು ವರ್ಣಿಸಲು ಸಾಧ್ಯವೇ?) ಎಂದು ತನ್ನನ್ನು ಹೊಗಳಿಕೊಂಡಿರು ವುದರಲ್ಲಿ ಅತಿಶಯೋಕ್ತಿಯಿಲ್ಲವೆನಿಸುತ್ತದೆ.

ಪಂಪನನ್ನು ರನ್ನನು ಪಾತ್ರಚಿತ್ರಣದಲ್ಲಿಯೂ ಅನುಸರಿಸಿದ್ದಾನೆ. ಹೇಗೆ ಪಂಪನ ಕಾವ್ಯಕ್ಕೆ ಅರ್ಜುನನು ನಾಯಕನಾದರೂ ಕರ್ಣನ ಪಾತ್ರವು ಕವಿಯನ್ನು ಆಕರ್ಷಿಸಿತೋ ಹಾಗೆಯೇ ರನ್ನನ ನಾಯಕರು ಭೀಮನಾದರೂ ದುರ್ಯೋಧನನನ್ನು ರನ್ನನು 'ಮಹಾನುಭಾವ'ನೆಂದು ಕರೆದಿರುವುದು. ಕೇವಲ ಖಳನಾಯಕನೆಂಬಂತೆ ಈ ಪಾತ್ರವನ್ನು ಚಿತ್ರಿಸದೆ ಅನೇಕ ಉದಾತ್ತ ಗುಣಗಳಿಂದ ತುಂಬಿದಂತೆ ಪ್ರತಿನಾಯಕನನ್ನು ಇಲ್ಲಿ ಕಡೆದಿದ್ದಾನೆ. ಅವನ ಬಗ್ಗೆ ಓದುಗನಲ್ಲಿ ಅನುಕಂಪೆಯುಂಟಾಗುವಂತೆ ಕವಿಯು ಪ್ರಭಾವ ಬೀರುತ್ತಾನೆ. ಈ ಪಾತ್ರದ ಪರಿಚಯವನ್ನು ಕವಿಯು ಶಕ್ತಿಯುತ ಮಾತುಗಳ ಮೂಲಕವಾಗಿಯೇ ಮಾಡಿಕೊಳ್ಳೋಣ.

ಹದಿನೇಳು ದಿನಗಳ ಮಹಾಭಾರತ ಯುದ್ಧದಲ್ಲಿ ದುರ್ಯೋಧನನು ಸರ್ವರನ್ನೂ ಸರ್ವಸ್ವವನ್ನೂ ಕಳೆದುಕೊಂಡಿದ್ದಾನೆ. ಮುಂದೇನು ಮಾಡಬೇಕೆಂಬುದರ ಬಗ್ಗೆ ಸಲಹೆಯನ್ನು ಪಡೆಯಲು ಅವನು ಸಂಜಯನ ಹೆಗಲನ್ನು ಊರಿಕೊಂಡು ಕುರುಕ್ಷೇತ್ರದ ರಣರಂಗದಲ್ಲಿ ನಡೆಯುತ್ತ ಬರುತ್ತಾನೆ. ಅಲ್ಲಿ ಮುರಿದು ಬಿದ್ದಿದ್ದ ಅನೇಕ ಆಯುಧಗಳು ಅವನ ಕಾಲಿಗೆ ಚುಚ್ಚಿ ರಕ್ತವೊಸರುತ್ತದೆ. ದೊಡ್ಡ ಸಾಮ್ರಾಜ್ಯವೊಂದರ ಅಧಿಪತಿಯಾಗಿದ್ದವನಿಗೆ ಒದಗಿದ ಈ ದುರವಸ್ಥೆಯನ್ನು ಕಂಡು ಸಂಜಯ ಶೋಕಿಸುತ್ತಾನೆ. ಅದನ್ನು ಕಂಡ ದುರ್ಯೋಧನನು ಹೇಳುವ ಮಾತನ್ನು ಕೇಳಿ:

ತನುಜಾನುಜರ ವಿಯೋಗದ
ಮನಃಕ್ಷತಂ ನೋಯಿಸಲ್ಕೆ ನೆಱೆಯುವು, ಸಮರಾ
ವನಿಯೊಳುಡಿದಿರ್ದ ಕಯ್ದುಗಳ್
ಇನಿಸುಂ ನೋಯಿಕುಮೆ ವಜ್ರಮನನಪ್ಪೆನ್ನನಂ (ಗಾದ. ೪–೧೯)

(ಮಕ್ಕಳನ್ನೂ ತಮ್ಮಂದಿರನ್ನೂ ಕಳೆದುಕೊಂಡ ದುಃಖವೇ ವಜ್ರದಂತೆ ಕಠಿಣವಾದ ನನ್ನ ಮನಸ್ಸನ್ನು ನೋಯಿಸಲಿಲ್ಲ ಎಂದಮೇಲೆ ಈ ರಣರಂಗದ ಆಯುಧದ ಚೂರುಗಳು ನೋಯಿಸುತ್ತವೆಯೇ?) ಈ ಮಾತಿನಿಂದಲೇ ಅವನ ದುಃಖದ ಆಳದ ಅರಿವು ನಮಗಾಗುತ್ತದೆ. ಹಾಗೆ ಬಂದಾಗ ಅವನ ಮನಸ್ಸನ್ನು ಚುಚ್ಚುವ ಮತ್ತೊಂದು ಘಟನೆಯು ನಡೆಯುತ್ತದೆ. ಒಂದು ಪಿಶಾಚವು ಅವನನ್ನು ಕಂಡು

ಗರುವಿನ ನೆತ್ತರಂ ಕುಡಿವೆನಪ್ಪೊಡೆ ಅವಂ ದ್ವಿಜವಂಶಜಂ, ನಿಜಾ
ವರಜನ ನೆತ್ತರಂ ಕುಡಿವೆನಪ್ಪೊಡೆ ಭೀಮನೆ ಪೀರ್ದನ್, ಎಯ್ದೆ ಭೀ
ಷ್ಮರ ಬಿಸುನೆತ್ತರಂ ಕುಡಿವೊಡೆ ಇನ್ನುಂ ಒಳಂ, ಕುರುರಾಜ, ನಿನ್ನನೆ
ತ್ತರ ಸವಿನೋೞ್ಪಿನಂ ಬಯಸಿ ಬಾತಾಪೆನೆಂದುದೊಂದು ಪುಲ್ಮರುಳ್ (ಗದಾ. ೪–೪೩)

(ದ್ರೋಣರ ರಕ್ತವನ್ನು ಹೀರಬೇಕೆಂಬ ಆಸೆ ನನಗಿತ್ತು, ಆದರೆ ಅವನು ಬ್ರಾಹ್ಮಣ; ನಿನ್ನ ತಮ್ಮ ದುಶ್ಯಾಸನನ ರಕ್ತವನ್ನು ಹೀರಬೇಕೆಂದಿದ್ದರೆ ಭೀಮನೇ ಅದನ್ನು ಕುಡಿದು ಬಿಟ್ಟಿದ್ದಾನೆ; ಭೀಷ್ಮನ ಬಿಸಿರಕ್ತವನ್ನು ಕುಡಿಯಲು ಅವನಿನ್ನೂ ಜೀವಂತವಾಗಿದ್ದಾನೆ. ಆದ್ದರಿಂದ ದುರ್ಯೋಧನನೇ, ನಿನ್ನ ರಕ್ತದ ರುಚಿ ನೋಡುವುದಕ್ಕಾಗಿ ಕಾತರದಿಂದ ಎದುರು ನೋಡುತ್ತಿದ್ದೇನೆ) ಎಂದು ಕಿರುಚಿತಂತೆ. 'ಮರುಳಮಾತಿನೊಳ್ ಪುರುಳೇನ್' ಎಂದು ಅದರ ಕಡೆಗೆ ಲಕ್ಷ್ಯವನ್ನೀಯದೆ ದುರ್ಯೋಧನನು ಬಂದಾಗ ಅದು, 'ಅರಗಿನ ಮನೆ ವಿಷದ ಲಡ್ಡು ಇವುಗಳಿಂದ ಭೀಮನನ್ನು ಕೊಲ್ಲಬಯಸಿದ ನೀನು ಮುರುಳನೋ ಭೂತಕೋಟಿಗಳೊಂದಿಗೆ ನನ್ನ ಪಾಡಿಗೆ ಇರುವ ನಾನು ಮರುಳನೋ' ಎಂದು ಛೇಡಿಸುತ್ತದೆ. ಆದರೆ ಅದನ್ನೆಲ್ಲ ಹೇಗೋ ನಿರ್ಲಕ್ಷಿಸಿ ಮುಂದುವರಿಯುತ್ತಾನೆ.

ಹಾಗೆ ಆ ಮರುಳಗಳನ್ನು ನಿವಾರಿಸಿಕೊಂಡು ದುರ್ಯೋಧನನು ಮುಂದೆ ಬರುತ್ತಾನೆ. ಒಂದೆಡೆ ದ್ರೋಣನ ಶವವು ಕಾಣಿಸುತ್ತದೆ. ದುರ್ಯೋಧನನು ದುಃಖದಿಂದ ಭಾರವಾದ ಮನಸ್ಸನ್ನು ಹೊತ್ತುಕೊಂಡು ಬಂದ ರೀತಿಯನ್ನೂ ದ್ರೋಣನು ಸತ್ತು ಬಿದ್ದಿದ್ದ ರೀತಿಯನ್ನೂ ಈ ಕೆಳಗಣ ಪದ್ಯವು ಅಭಿನಯಿಸುತ್ತದೆ:

ಇಭಶೈಲಂಗಳನೇಱಿಯೇಱಿ, ರುಧಿರಸ್ರೋತಂಗಳಂ ದಾಂಟಿ ದಾಂ
ಟಿ, ಇಭದೋರ್ನಿರ್ಗಲಲತಾಪ್ರತಾನ ವಿಪಿನ ವ್ರಾತಂಗಳೊಳ್ ಸಿಲ್ಕಿ ಸಿ
ಲ್ಕಿ, ಭರಂಗೆಯ್ದುಱದೆಯ್ದಿ ಸಂಜಯ ಶಿರಃಸ್ಕಂಧಾವಲಂಬಂ ಕುರು
ಪ್ರಭು ಕಂಡಂ ಶರಜಾಲಜರ್ಜರಿತಗಾತ್ರ ತ್ರಾಣನಂ ದ್ರೋಣನಂ (ಗದಾ. ೪-೪೮)

(ಸತ್ತು ಬಿದ್ದಿದ್ದ ಆನೆಗಳೆಂಬ ಬೆಟ್ಟಗಳನ್ನೇರುತ್ತ, ರಕ್ತದ ಪ್ರವಾಹವನ್ನು ದಾಟುತ್ತ, ಆನೆಗಳಸೊಂಡಿಲುಗಳೆಂಬ ಕಪ್ಪುಬಳ್ಳಿಗಳ ಸಮೂಹದಲ್ಲಿ ಕಾಲ್‌ತೊಡರಿಸಿಕೊಳ್ಳುತ್ತ ಸಂಜಯನ ಹೆಗಲಿನ ಮೇಲೆ ಕೈಯೂರಿ ಬರುತ್ತಿದ್ದ ದುರ್ಯೋಧನನು ಬಾಣಗಳ ಸಮೂಹದ ಹೊಡೆತದಿಂದ ಛಿದ್ರವಾಗಿದ್ದ ದ್ರೋಣನ ದೇಹವನ್ನು ಕಂಡನು.) ಈ ಪದ್ಯವು ನಿಧಾನವಾಗಿ ಸಾಗುವ ರೀತಿಯೂ ಸಂಸ್ಕೃತ ಸಮಾಸ ಪದಗಳಿಂದ ಹೆಣೆಯಲ್ಪಟ್ಟ ರೀತಿಯೂ ದುರ್ಯೋಧನನ ನಿಧಾನವಾದ ನಡೆಗೆಯನ್ನೂ ಅವನು ಎದುರಿಸಿದ ತೊಡರುಗಳನ್ನೂ ಸೂಚಿಸಲು ಸಹಾಯಕವಾಗಿದೆ. ಈ ರೀತಿ ಬಿದ್ದಿದ್ದ ದ್ರೋಣನನ್ನು ಕಂಡು ಕುರುಪತಿಯ ಮನಸ್ಸಿನಲ್ಲಿ ದುಃಖದ ಪ್ರವಾಹವು ಕೋಡಿವರಿಯುತ್ತದೆ. ಅವರ ಸಾವಿಗೂ ತಾನೇ ಕಾರಣನೆಂಬ ಭಾವನೆ ಮೂಡುತ್ತದೆ. ಸರಿಯಾಗಿ ಯುದ್ಧ ಮಾಡುತ್ತಿಲ್ಲವೆಂದು ಅವರನ್ನು ಝಂಕಿಸಿದ್ದ ಅವನಿಗೆ ಸೋಲು ತನ್ನ ಕರ್ಮದ ಫಲವೆನ್ನಿಸುತ್ತದೆ:

ಅಱಿಯೆಮೆ ಬಿಲ್ಲ ಬಿನ್ನಣಕೆ ಗಾಂಡಿವಿಯಲ್ತು ಪಿನಾಕಪಾಣಿಯುಂ
ನೆಱಿಯನಿದಿರ್ಚಿ ನಿಮ್ಮೊಡನೆ ಕಾದಿ ಗೆಲಲ್ಕೆ, ಅದು ನಿಮ್ಮುಪೇಕ್ಷೆಯಿಂ
ದಱಿಯೆನ್, ಇದೆನ್ನ ಕರ್ಮವಶಮೆಂದಱಿಯೆನ್, ನಿಮಗೆಂತು ಸಾವುಮೀ
ತೆಱದಿನಕಾರಣಂ ನೆಱಿಯೆ ಸಂಭವಿಸಿದುದೋ ಕುಂಭಸಂಭವಾ (ಗದಾ. ೪-೫೦)

(ನಿಮ್ಮ ಬಿಲ್ವಿದ್ಯೆಯ ಮುಂದೆ ಅರ್ಜುನ ಮಾತ್ರವಲ್ಲ ಶಿವನೇ ನಿಂತು ಕಾದಿ ಗೆಲ್ಲಲು ಸಮರ್ಥನಲ್ಲ ಎಂಬುದು ನನಗೆ ತಿಳಿಯದೆ? ನನಗೆ ಸೋಲಾದದ್ದು ನೀವು ಸರಿಯಾಗಿ ಯುದ್ಧಮಾಡದಿದ್ದುದರಿಂದಲೋ ನನ್ನ ಕರ್ಮವಶದಿಂದಲೋ ಎಂಬುದು ನನಗೆ ತಿಳಿಯದು. ನಿಮ್ಮಂತಹವರಿಗೂ ಈ ರೀತಿಯ ಅಕಾರಣವಾಗಿ ಉಂಟಾಯಿತು.)

ಅಲ್ಲಿಂದ ಮುಂದೆ ನಡೆದಾಗ ಕಾಣಿಸಿದ್ದು ಅಭಿಮನ್ಯುವಿನ ಶವ. ಅವನು ತನ್ನ ಶತ್ರು ಬಣಕ್ಕೆ ಸೇರಿದವನಾಗಿದ್ದರೂ ಮಹಾರಥರನ್ನು ಎದುರಿಸಿ ಹೋರಾಡಿದ ರೀತಿಯು ದುರ್ಯೋಧನನನ್ನು ಬಹುವಾಗಿ ಆಕರ್ಷಿಸಿತ್ತು. ಎಷ್ಟಾದರೂ ಅವನು ತನ್ನ ಮಗನಂತೆಯೇ ಅಲ್ಲವೇ? ಕಿರಿಯನಾಗಿದ್ದರೂ ಅವನ ಶೌರ್ಯವು ತನ್ನಂತಹವರಿಗೂ ಬರಲಿ ಎಂದು ಹಾರೈಸುತ್ತಾನೆ ಕುರುಪ್ರಭು:

ಅಸಮಬಲ ಭವದ್ವಿಕ್ರಮ
ಮಸಂಭವಂ ಪೆಱರ್ಗೆ, ನಿನ್ನನಾನಿತಂ ಪ್ರಾ
ರ್ಥಿಸುವೆನಭಿಮನ್ಯು, ನಿಜಸಾ
ಹಸೈಕದೇಶಾನುಮರಣಮೆಮಗಕ್ಕೆ ಗಡಾ (ಗದಾ. ೪-೫೭)

(ನಿನ್ನ ಅನುಪಮವಾದ ಬಲವು ಬೇರೆಯವರಿಗೆ ಅಸಾಧ್ಯ, ನಿನ್ನನ್ನು ನಾನು

ಪ್ರಾರ್ಥಿಸುವುದಿಷ್ಟೆ: ನೀನು ತೋರಿಸಿದ ಶೌರ್ಯವನ್ನು ತೋರಿಸಿ ನಿನ್ನಂತೆ ಸಾಯುವ ಹಾಗೆ ನನಗೂ ಆಗಲಿ.) ಅನಂತರ ತನ್ನ ಮಗ ಲಕ್ಷಣಕುಮಾರನ ಶವದರ್ಶನ. ಪುತ್ರ ಶೋಕದಿಂದ ಅವನು ವಿಹ್ವಲನಾಗಿ ಮಗನನ್ನು ನೋಡಿ ಈ ರೀತಿ ಪ್ರಲಾಪಿಸುತ್ತಾನೆ:

ಜನಕಂಗೆ ಜಲಾಂಜಲಿಯಂ
ತನೂಭವಂ ಕಂಡುವುದುಚಿತಮ್, ಅದುಗೆಟ್ಟೀಗಳ್
ನಿನಗಾಂ ಕುಡುವಂತಾದುದೆ
ತನೂಜ ನೀಂ ಕ್ರಮವಿಪರ್ಯಯಂ ಮಾಡುವುದೇ (ಗದಾ. ೪–೬೨)

(ಮಗನು ತಂದೆಗೆ ತರ್ಪಣವನ್ನು ಕೊಡುವುದು ಲೋಕರೂಢಿ, ಅದು ಬಿಟ್ಟು ಮಗನಿಗೆ ತಂದೆ ಕೊಡುವಂತಾಗಿದೆ, ಈ ರೀತಿ ಕ್ರಮವನ್ನು ವ್ಯತ್ಯಾಸ ಮಾಡುವರೇ?)

ದುಶ್ಶಾಸನನು ದುರ್ಯೋಧನನಿಗೆ ಎಲ್ಲ ಕಾಲಗಳಲ್ಲೂ ಬಲಗೈಯಂತಿದ್ದವನು. ತಮ್ಮನ ಶವವನ್ನು ಕಂಡಾಗ ದುರ್ಯೋಧನನಿಗೆ ಮೊದಲು ಕ್ರೋಧವೇ ಉಂಟಾಗುತ್ತದೆ, ತನ್ನ ಮೇಲೆಯೇ;

ನಿನ್ನಂ ಕೊಂದಂ ಗಡಮೊಳ
ನಿನ್ನುಂ, ಕೊಂದವವನಿಕ್ಕಿಕೊಲ್ಲದೆ ಮಾಣ್ದಾ
ನಿನ್ನುಮೊಳೆಂ, ಗಡ ಸಾಲದೆ
ನಿನ್ನಯ ಕೂರ್ಮಗಮದೆನ್ನ ಸೌಧರ್ಮಿಕೆಗಂ (ಗದಾ. ೫–೬)

(ನಿನ್ನನ್ನು ಕೊಂದ ಭೀಮನಿನ್ನೂ ಬದುಕಿದ್ದಾನೆ, ಆ ಕೊಂದವವನನ್ನು ಇಕ್ಕಿ ಕೊಲ್ಲದೆಯೇ ನಾನಿನ್ನೂ ಬದುಕಿದ್ದೇನೆ. ನೀನು ಇಟ್ಟಿದ್ದ ಪ್ರೀತಿಗೂ ನನ್ನ ಕರ್ತವ್ಯನಿಷ್ಠೆಗೂ ಎಂತಹ ಹೊಂದಾಣಿಕೆ!) ಭೀಮನನ್ನು ತಾನು ಕೊಲ್ಲಬೇಕಿತ್ತು ಅಥವಾ ತಾನೇ ಅವನಿದ ಸಾಯಬೇಕಾಗಿತ್ತು. ತಮ್ಮನಿಗಾಗಿ ಹಾಗೆ ಮಾಡದೆ ತಾನು ಕರ್ತವ್ಯಭ್ರಷ್ಟನಾದನೆಂದು ದುರ್ಯೋಧನನು ತನ್ನನ್ನು ತಾನು ನಿಂದಿಸಿಕೊಳ್ಳುತ್ತಾನೆ. ಅನಂತರ ಅವನ ಮೇಲಿನ ಪ್ರೀತಿ ಪ್ರವಾಹ ತಾನಾಗಿ ಹರಿಯುತ್ತದೆ.

ಜನನೀಸ್ತನ್ಯಮನುಂಡೆನಾಂ ಬಟಿಕೆ ನೀಂ, ಸೋಮಾಮೃತಂ ದಿವ್ಯಭೋ
ಜನಮೆಂಬಿಂತಿವನುಂಡೆನಾಂ, ಬಟಿಕೆ ನೀಂ, ಬಾಲತ್ವದಿಂದೆಲ್ಲಿಯುಂ
ವಿನಯೋಲ್ಲಂಘನಮಾದುದಿಲ್ಲ, ಮರಣಕ್ಕೆನ್ನಿಂದೆ ನೀಂ ಮುಂಚಿದಯ್,
ಮೊನೆಯೊಳ್ ಸೂಟ್ ತಡಮಾಯ್ತಿದೊಂದೆಡೆಯೊಳಂ ಹಾ ವತ್ಸ ದುಶ್ಶಾಸನಾ!
(ಗದಾ. ೫–೭)

(ನಾನು ಅಣ್ಣನಾದ್ದರಿಂದ ತಾಯ ಹಾಲನ್ನು ಮೊದಲು ಕುಡಿದೆ. ಬಳಿಕ ನೀನು. ಸೋಮರಸ ಮೃಷ್ಟಾನ್ನ ಭೋಜನಗಳನ್ನು ನಾನು ಮೊದಲು ಸೇವಿಸದೆ, ನೀನು ಅನಂತರ. ಹೀಗೆ ಬಾಲ್ಯದಿಂದಲೂ ನೀನು ನನ್ನನ್ನೇ ಅನುಸರಿಸುತ್ತಿದ್ದೀಯೆ. ನೀನು ವಿನಯದಿಂದ ನಡೆದೆ, ಆದರೆ ಯುದ್ಧಮಾಡುವುದರಲ್ಲಿಯೂ ಸಾಯುವುದರಲ್ಲಿಯೂ ನೀನೇ ಮುಂದಾಗಿ ವಿನಯಭಂಗವನ್ನು ಮಾಡಿಬಿಟ್ಟೆ!) ಸಾಯುವುದರಲ್ಲಿಯೂ ತಾನೇ ಮೊದಲಾಗಬೇಕಾಗಿತ್ತೆಂಬ ಮಾತಿನಲ್ಲಿ ಅವನ ಭಾವನೆಯು ಎಷ್ಟು ಸುಂದರವಾಗಿ

ಹರಿದಿದೆ! ಈ ಶೋಕವು ಆ ಛಲಂದಂಕಮಲ್ಲನಲ್ಲಿ ಮತ್ತಷ್ಟು ಛಲ-ಕ್ರೋಧಗಳನ್ನುಂಟು ಮಾಡಿತು:

ಅನುಜನ ನೆತ್ತರನೀಂಟಿದ
ನ ನೆತ್ತರಂ ಜೀವಸಹಿತಮಿಂಟದೆ ದುರ್ಯೋ
ಧನನೆಂಬ ಪೆಸರ್ಗೆ ಮುಯ್ಯಾಂ
ಪೆನೆ ದುಶ್ಯಾಸನನ ಬನ್ನಮಂ ನೀಗುವೆನೇ (ಗದಾ. ೫-೮)

(ತಮ್ಮನ ರಕ್ತವನ್ನು ಹೀರಿದವನ ರಕ್ತವನ್ನು ಜೀವಸಹಿತವಾಗಿ ಹೀರದೆ ದುರ್ಯೋಧನನೆಂಬ ಹೆಸರಿಗೆ ಸಾರ್ಥಕನಾಗುತ್ತೇನೆಯೇ? ದುಶ್ಯಾಸನನಿಗೆ ಆದ ಅವಮಾನವನ್ನು ಹೋಗಲಾಡಿಸುವೆನೇ?)

ಮುಂದೆ ಕಾಣುವುದು ತನ್ನ ಆಪ್ತಸ್ನೇಹಿತನಾದ ಕರ್ಣನ ಶವ. ಆಗಂತೂ ದುರ್ಯೋಧನನ ದುಃಖ ಸಮುದ್ರದಂತೆ ಅಪಾರವಾಗುತ್ತದೆ. ನಾನಾ ಬಗೆಯಾಗಿ ಅವನ ತನ್ನ ಗೆಳೆತನವನ್ನು ನೆನೆಪಿಸಿಕೊಂಡು ದುರ್ಯೋಧನನು ಹಲುಬತ್ತಾನೆ.

ಅನುಂ ದುಶ್ಯಾಸನನುಂ
ನೀನುಂ ಮೂವರೆ ದಲ್, ಆತನುಂ ಕಟಿದ ಬಟಿ
ಕ್ಕಾನುಂ ನೀನೆ ದಲ್, ಈಗಲ್
ನೀನುಮಗಲ್ದೆತ್ತವೋದೆಯಂಗಾಧಿಪತೀ (ಗದಾ. ೫-೧೧)

(ನಾನು ದುಶ್ಯಾಸನ ನೀನು-ದಿಟವಾಗಿ ನಾವು ಮೂರೇ ಮಂದಿ ಇದ್ದವರು. ದುಶ್ಯಾಸನನು ಸತ್ತಮೇಲೆ ಉಳಿದವರು ನಾವಿಬ್ಬರೇ. ಈಗ ನನ್ನನ್ನು ಬಿಟ್ಟು ನೀನು ಎಲ್ಲಿ ಹೋದೆ, ಎಲೈ ಅಂಗಾಧಿಪತಿಯೇ.) ತನ್ನ-ಕರ್ಣನ ಆಪ್ತತೆ ಎಷ್ಟೆಂದರೆ ಕರ್ಣನಿಲ್ಲದೆ ತನಗೆ ಯಾವುದೂ ರುಚಿಸುವುದಿಲ್ಲ. ಯಾವುದಿದ್ದರೂ ಇದ್ದಂತಿರುವುದಿಲ್ಲವೆಂದು ಅವನು ಪ್ರಲಾಪಿಸುತ್ತಾನೆ.

ನೀನುಳ್ಳೊಡುಂಟು ರಾಜ್ಯಂ
ನೀನುಳ್ಳೊಡೆ ಪಟ್ಟಮುಂಟು ಬೆಳ್ಗೊಡೆಯುಂಟಯ್
ನೀನುಳ್ಳೊಡುಂಟು ಪೀಟಿಗೆ
ನೀನಿಲ್ಲದಿವೆಲ್ಲಮೊಳವೆ ಅಂಗಾಧಿಪತೀ (ಗದಾ. ೫-೨೦)

(ನೀನಿದ್ದರೆ ನನಗೆ ರಾಜ್ಯವುಂಟು, ಪಟ್ಟವುಂಟು, ಬೆಳ್ಗೊಡೆಯುಂಟು ಸಿಂಹಾಸನ ವುಂಟು: ನೀನು ಹೋದಮೇಲೆ ಇವು ಇದ್ದರೂ ಇಲ್ಲದಂತೆಯೇ ಸರಿ.) ಅಂತಹ ಕರ್ಣನು ಸತ್ತಿದ್ದರೂ ತನ್ನ ಹೃದಯದಲ್ಲಿ ಅವನ ರೂಪವು ಶಾಶ್ವತವಾಗಿದೆ ಯೆಂಬುದನ್ನು ಹೇಳುವ ಪದ್ಯವಂತೂ ಕರ್ಣನ ಸ್ನೇಹವು ದುರ್ಯೋಧನನ ಮೇಲೆ ಮಾಡಿದ ಪರಿಣಾಮವೆಷ್ಟೆಂಬುದನ್ನು ಸೂಚಿಸುತ್ತದೆ:

ನಯನದೊಳಮೆರ್ದೆಯೊಳಂ ನಿ
ನ್ನಯ ರೂಪಿರ್ದಪುದು, ನಿನ್ನಯ ಮಾತಿರ್ದಪುದೆ
ನ್ನಯ ಕಿವಿಯೊಳಂ, ಇನನಂದನ,
ವಿಯೋಗಮೆಂತಾದುದಱಿಯೆನಂಗಾಧಿಪತೀ (ಗದಾ. ೫-೨೪)

(ನನ್ನ ಹೃದಯದಲ್ಲಿ ನಿನ್ನ ಆಕೃತಿಯು ಅಚ್ಚೊತ್ತಿದಂತಿದೆ, ನನ್ನ ಕಿವಿಯೊಳಗೆ ನಿನ್ನ ಮಾತುಗಳು ಗುಂಯ್‌ಗುಟ್ಟುತ್ತಿವೆ. ಆದ್ದರಿಂದ ಕರ್ಣನೇ, ನನಗೂ ನಿನಗೂ ವಿಯೋಗವು ಯಾವ ರೀತಿಯಾಯಿತೆಂಬುದೇ ನನಗೆ ತಿಳಿಯುತ್ತಿಲ್ಲ.) ಕರ್ಣನಿಲ್ಲದೆ ತಾನು ಇನ್ನಾರೊಡನೆ ಮಾತನಾಡಲಿ, ಯಾರ ಜೊತೆಯಲ್ಲಿ ಓಲಗದಲ್ಲಿರಲಿ, ಯಾರೊಡನೆ ಊಟಮಾಡಲಿ, ಆನೆ-ಕುದುರೆಗಳ ಮೇಲೆ ಪ್ರೀತಿ ಪಾತ್ರರನ್ನು ಕಳೆದುಕೊಂಡ ತಾನು ಹೇಗೆ ಹತ್ತಲಿ-ತಾನಿನ್ನು ಒಂಟಿಯಾಗಿಬಿಟ್ಟೆ ಎಂದು ಸುಯೋಧನನು ಒಂದೇ ಸಮನೆ ಗೋಳಾಡುತ್ತಾನೆ. ತನ್ನ ಪ್ರಿಯ ಸ್ನೇಹಿತನಿಗೆ ಯಾವ ರೀತಿಯಲ್ಲೂ ತಾನು ಒಳ್ಳೆಯದನ್ನು ಮಾಡಲಿಲ್ಲವೆಂದು ದುಃಖಿಸುತ್ತಾನೆ.

ಕಿಳೆಯಂಗಾಯ್ತುಸುಮೋಕ್ಷಂ ಅಗದೆನಗಂ ಬಾಷ್ಪಾಂಬುಮೋಕ್ಷಂ, ಧರಾ
ತಳಮಂ ಕೊಟ್ಟನಿವಂ ಜಳಾಂಜಳಿಯುಮಂ ನಾಂ ಕೊಟ್ಟೆನಿಲ್ಲ, ಅನ್ಯಮಂ
ಡಳಮಂ ಸುಟ್ಟನಿವಂ ಪ್ರತಾಪಶಿಖಿಯಿಂದ ಅನೀತನಂ ಸತ್ಕ್ರಿಯಾ
ನಳನಿಂ ಸುಟ್ಟೆನುಮಿಲ್ಲ, ಮತ್ಪ್ರಿಯತಮಂ ಕರ್ಣಂಗಿದೇಂ ಕೂರ್ತೆನೋ (ಗದಾ. ೫-೩೧)

(ನನ್ನ ಸ್ನೇಹಿತನು ಪ್ರಾಣವನ್ನೇ ಬಿಟ್ಟಿದ್ದಾನೆ, ಆದರೆ ನನಗೆ ಕಣ್ಣೀರು ಸಹ ಬರುತ್ತಿಲ್ಲ; ಪಾಂಡವರ ಹಿರಿಯನಾಗಿದ್ದ ಅವನಿಗೆ ಭೂಮಂಡಲವು ಸಿಕ್ಕಬೇಕಾಗಿತ್ತು; ಆದರೆ ಅದನ್ನು ನನಗೇ ಕೊಟ್ಟ, ನಾನಾದರೋ ತರ್ಪಣವನ್ನು ಕೂಡ ಕೊಡಲಿಲ್ಲ: ತನ್ನ ಪ್ರತಾಪವೆಂಬ ಬೆಂಕಿಯಿಂದ ಬೇರೆ ರಾಜ್ಯಗಳನ್ನು ಸುಟ್ಟ, ಆದರೆ ನಾನು ಈತನ ಶವವನ್ನು ವಿಧಿಪೂರ್ವಕವಾಗಿ ಸುಡಲೂ ಇಲ್ಲ. ಕರ್ಣನು ನನಗೆ ಪ್ರಿಯತಮನೆಂದು ಕರೆಯುತ್ತಾರೆ. ಆದರೆ ಅಂಥವನಿಗೆ ನಾನು ತೋರಿಸಿರುವ ಪ್ರೀತಿಯೆಂತಹುದು!) ಆದ್ದರಿಂದ ಕರ್ಣನನ್ನು ಕೊಂದ ಅರ್ಜುನನನ್ನು ಕೊಂದು ಸ್ನೇಹಋಣವನ್ನು ತೀರಿಸಬೇಕೆಂದುಕೊಳ್ಳುತ್ತಾನೆ, ಹೀಗಾಗಿ ಅವನ ಶೋಕ ಕೋಪವಾಗುತ್ತದೆ;

ತರಣಿತನಯಾನನೇಂದು
ಸ್ಮರಣದೆ ಕಯ್‌ಗಣ್ಮಿವೆನ್ನ ಶೋಕಮಹಾಸಾ
ಗರಮಂ ತವೆ ಪೀರ್ದುದು ಭೀ
ಕರ ಮತ್ಕೋಪಾಗ್ನಿ ಬಾಡಬಾಗ್ನಿಯ ತೆಱದಿಂ (ಗದಾ. ೫-೩೭)

(ಕರ್ಣನ ಸುಂದರಮುಖವನ್ನು ನೆನೆಸಿಕೊಂಡದ್ದರಿಂದ ಉಂಟಾದ ನನ್ನ ಶೋಕ ಸಮುದ್ರವನ್ನು ಅರ್ಜುನನ ಮೇಲಿನ ಕೋಪವೆಂಬ ಬಾಡಬಾಗ್ನಿಯು ಸಂಪೂರ್ಣವಾಗಿ ಹೀರಿಬಿಟ್ಟಿದೆ.) ಈ ಭಾಗದಲ್ಲಿ ದುರ್ಯೋಧನನ ಪ್ರೀತಿ ವಾತ್ಸಲ್ಯ-ವಿನಯ ಸಜ್ಜನಿಕೆಗಳೆಲ್ಲ ಗೋಚರವಾಗುತ್ತದೆ. ಅವನು ಹಿಂದೆ ಎಷ್ಟೆಲ್ಲ ವೈಭವಗಳಿಂದ ಕೂಡಿದ್ದವನು! ಅಂಥವನು ಅನಾಥನಂತೆ ಒಂಟಿತನದಿಂದ ಬೇಯುತ್ತ ಗೋಳಾಡುವ ಈ ರೀತಿಯು ನಮಗೆ ಅವನಲ್ಲಿ ಸಹಾನುಭೂತಿ ಯುಂಟಾಗುವಂತೆ ಮಾಡುತ್ತದೆ. ದುರ್ಯೋಧನನು ಎಂತಹ ಮೃದು ಹೃದಯಿಯೆಂಬುದೂ ಇದರಿಂದ ಅರಿವಾಗುತ್ತದೆ. ದುರ್ಯೋಧನ ವಿಲಾಪದ ಈ ಭಾಗವು ಕನ್ನಡ ಸಾಹಿತ್ಯದಲ್ಲಿಯೇ ಅತ್ಯಂತ ಸುಂದರವಾದ ಶೋಕ ಗೀತೆಯಾಗಿ ಪರಿಣಮಿಸಿದೆ.

ಗದಾಯುದ್ಧ ಪ್ರಸಂಗದಲ್ಲಿಯೂ ದುರ್ಯೋಧನನ ಹಿರಿಮೆ-ಗರಿಮೆಗಳನ್ನು ರನ್ನನು ಸೂಕ್ಷ್ಮವಾಗಿ ಚಿತ್ರಿಸುತ್ತಾನೆ. ಈ ಹೊತ್ತಿಗಾಗಲೇ ಅವನ ಬಗ್ಗೆ ನಮಗೆ ಗೌರವವುಂಟಾಗುವಂತೆ ಮಾಡಿರುವುದು ಕವಿಯ ಹೆಗ್ಗಳಿಕೆಯಾಗಿದೆ. ಗದಾಯುದ್ಧ ಪ್ರಸಂಗದಲ್ಲಿ ಭೀಮನ ರಾಜಸಗುಣವೂ ಸುಂದರವಾಗಿ ಚಿತ್ರಿತವಾಗಿದೆ. ವೈಶಂಪಾಯನ ಸರೋವರದಲ್ಲಿ ಅಡಗಿದ್ದ ದುರ್ಯೋಧನನು ಕಾಲವಂಚನೆ ಮಾಡುತ್ತಿರುತ್ತಾನೆ. ಅವನೆಲ್ಲಿರುವನೆಂದು ತಿಳಿಯದ ಭೀಮನು ಅವನಿಗಾಗಿ ಹುಡುಕುತ್ತ ಬರುತ್ತಾನೆ; ಅವನನ್ನು ತನ್ನ ಕೋಪಾಗ್ನಿಗೆ ಆಹುತಿ ಮಾಡುವೆನೆಂದು ಪಂಚಭೂತಗಳ ಸಾಕ್ಷಿಯಾಗಿ ಪ್ರತಿಜ್ಞೆ ಮಾಡುತ್ತಾನೆ. ತನ್ನ ಅಣ್ಣನಾದ ಧರ್ಮರಾಯನು ಇದಕ್ಕೆ ಅಡ್ಡಿ ಬರಬಹುದೆಂದು ಅವನಿಗೆ ನಮಸ್ಕಾರ ಮಾಡಿ ಹೇಳುವ ಮಾತುಗಳನ್ನು ಕೇಳಿ:

ಎನಿತುಂ ದ್ರೌಪದಿ ಮುಕ್ತಕೇಶಿ ನಮೆವಳ್, ತದ್ದುಃಖಮಂ ಕಂಡುಕಂ
ಡೆನಿತಂ ಸೈರಿಪೆನ್ ಅನುಮೆನ್ನನುಜರುಂ? ಪಾಂಚಾಲಿಯಂ ನೋಡಿ ನೀಂ
ಮನದೊಳ್ ನೋವುದುಮಿಲ್ಲ, ನಿಷ್ಕರುಣೆಯ್, ನೀನಿಂತಿರಾನನ್ನೆಗಂ
ಮುನಿಸಂ ತೀರ್ಚೆ ನರೆಂದ್ರವೈರಿತರುವಂ ನಿರ್ಮೂಲನಂ ಮಾಡುವೆಂ (ಗದಾ. ೬-೨೫)

(ಬಿಚ್ಚಿದ ತಲೆಗೂದಲಿನ ದ್ರೌಪದಿಯು ಎಷ್ಟೊಂದು ನೊಂದಿದ್ದಾಳೆ. ಅವಳ ದುಃಖವನ್ನು ನೋಡಿ ನಾನೂ ನನ್ನ ತಮ್ಮಂದಿರೂ ಎಷ್ಟು ಎಂದು ಸೈರಿಸಲು ಸಾಧ್ಯ? ಅವಳನ್ನು ಕಂಡು ನಿನ್ನ ಕಠಿಣಹೃದಯವಂತೂ ನೋಯುವುದಿಲ್ಲ. ನೀನು ಹೀಗೇ ಇದ್ದರೆ ನಾನಾಗಿ ನಾನೇ ವೈರಿಯೆಂಬ ಮರವನ್ನು ಬುಡ ಸಮೇತ ಕಿತ್ತು ಹಾಕುತ್ತೇನೆ.)

ಅನುಂ ವಿಧೇಯನಲ್ಲಂ
ನೀನು ಗುರುವಲ್ಲಂ. ಇಂದಿನೊಂದೆವಸದೊಳು, ಉ
ರ್ವೀನಾಥ ಪರಿಯ ಬಿಡ, ಕುರು
ಸೂನುವನಿರದಿಕ್ಕಿ ಮೆಟ್ಟಿ ಡೊಕ್ಕರಿಸಿದಪೆಂ (ಗದಾ. ೬-೨೬)

(ಈ ಒಂದು ದಿವಸ ನೀನು ಹಿರಿಯನೂ ಅಲ್ಲ, ನಾನು ನಿನಗೆ ವಿಧೇಯನೂ ಅಲ್ಲ. ನನ್ನನ್ನು ಒಂದು ದಿವಸ ಮಾತ್ರ ಹರಿಯಬಿಡು, ನನಗೆ ಅನುಮತಿ ಕೊಡು. ಕುರುಪುತ್ರನನ್ನು ಮೆಟ್ಟಿ ಗುದ್ದಿ ಬಿಡುತ್ತೇನೆ.) ಎಂದು ಹೇಳುತ್ತ ತನ್ನ ವೈರಿಗಾಗಿ ಭೀಮನು ಹುಡುಕಿಕೊಂಡು ಬರುತ್ತಾನೆ. ಆದರೆ ಅವನೆಲ್ಲೂ ಕಾಣುವುದಿಲ್ಲ, ಸರಿ. ಅವನ ಮನೆಗೇ ಬಂದ. ಅಲ್ಲೂ ಇಲ್ಲ, ಧೃತರಾಷ್ಟ್ರ ಗಾಂಧಾರಿಯರಿಗೆ ತಾನು ತನ್ನ ಕೋಪದಿಂದ ದುರ್ಯೋಧನನನ್ನು ನುಂಗಲು ಬಂದಿರುವ ವಿಷಯವನ್ನು ಹೇಳುತ್ತಾನೆ. ಈಗಾಗಲೇ ನೂರು ಮಕ್ಕಳನ್ನು ಕಳೆದುಕೊಂಡ ಮುದಿ ತಾಯ್ತಂದೆಯರ ಮುಂದೆಯೇ ಈ ಮಾತು! ಅದನ್ನು ಕೇಳಿ ಗಾಂಧಾರಿಯಾಡುವ ಮಾತನ್ನು ಕೇಳಿದರೆ ಎಂಥವರಿಗೂ ಕರುಳು ಚುರ್ರೆನ್ನುತ್ತದೆ.

ಅನಿಬರ್ ತನಯರ ದುಃಖಮ
ನನುಭವಿಸಿಯುಮಣಮೆ ಪೋಗವೆಮ್ಮಸುಗಳ್, ನೀ
ನಿನಿತೆಮಗೊಳ್ಳಿಕಯ್ ಭೀಮ,
ನುಂಗು ಮುನ್ನೆಮ್ಮನ್, ಎಮ್ಮ ಸುತನಂ ಬಳಿಯಂ (ಗದಾ. ೬-೩೭)

(ಅಷ್ಟೊಂದು ಮಂದಿ ಮಕ್ಕಳ ಸಾವಿನ ದುಃಖವನ್ನನುಭವಿಸಿಯೂ ನಾವಿನ್ನೂ ಸತ್ತಿಲ್ಲ. ಭೀಮನೇ, ನಮಗೊಂದು ಉಪಕಾರವನ್ನು ಮಾಡು: ಮೊದಲು ನಮ್ಮನ್ನು ಕೊಂದು ಅನಂತರ ದುರ್ಯೋಧನನ್ನು ಕೊಲ್ಲು) ಎಂದು ಕೈ ಮುಗಿದು ಕೇಳಿಕೊಳ್ಳುತ್ತಾಳೆ. ಅವಳ ಹೃದಯದ ಅಳಲನ್ನು ರನ್ನನು ತುಂಬ ಸಮರ್ಪಕವಾಗಿ ಈ ಮಾತುಗಳಲ್ಲೇ ಹೇಳಿಸಿಬಿಟ್ಟಿದ್ದಾನೆ. ಆ ಹೊತ್ತಿಗೆ ಕುರುಪತಿಯು ವೈಶಂಪಾಯನ ಸರೋವರದೆಡೆಗೆ ಹೋಗಿದ್ದ ವಿಷಯ ತಿಳಿಯುತ್ತದೆ. ಪಾಂಡವರು ಅಲ್ಲಿಗೇ ಹೋಗುತ್ತಾರೆ. ಹಿಂದೆ ಹಿಂದೆ ಹೆಜ್ಜೆಯಿಟ್ಟು ಹೋಗಿ ದುರ್ಯೋಧನನು ಸರೋವರದಲ್ಲಿ ಅಡಗಿಕೊಂಡಿರಬಹುದೆಂದು ಸಂಶಯ ಅವರಿಗೆ ಬರುತ್ತದೆ. ಯಾವುದೋ ಮೀಂಗುಲಿಗ ಹಕ್ಕಿಯೊಂದು ಮೀನು ಹಿಡಿಯುವ ದೃಶ್ಯವನ್ನು ಕವಿಯು ಇಲ್ಲಿ ಸಮಯೋಚಿತವಾಗಿಯೂ ಅರ್ಥಪೂರ್ಣವಾಗಿಯೂ ಚಿತ್ರಿಸುತ್ತಾನೆ:

> **ಮೀಂಗುಲಿಗವಕ್ಕಿ ಕೊಳನೊಳ್**
> **ಮೀಂಗೆರಗುವ ತೆಱದಿನೆಱಗಿ ನೋಡಿಲ್ಲಿರ್ದಂ**
> **ಪಿಂಗಾಕ್ಷನೆಂದು ಪವನಸು**
> **ತಂಗೆ ಇರ್ಪೆಡೆದೋರ್ಪ ತೆಱದಿನೇಂ ಸೊಗಯಿಸಿತೋ** (ಗದಾ. ೬–೪೫)

(ಮೀನನ್ನು ಕೊಲ್ಲುವ ಮಿಂಚುಳ್ಳಿ ಹಕ್ಕಿಯು ಮೀನಿಗಾಗಿ ಕೊಳದ ಮಧ್ಯಕ್ಕೆ ಹಾರುವ ರೀತಿಯಿಂದ ದುರ್ಯೋಧನನು ಇಲ್ಲಯೇ ಅಡಗಿದ್ದಾನೆ ಎಂಬುದನ್ನು ಭೀಮನಿಗೆ ಸೂಚಿಸುವಂತೆ ಕಾಣಿಸಿತು.) ಸರಿ, ಅಲ್ಲಿಯೇ ದುರ್ಯೋಧನನಿರ ಬಹುದೆಂದೆನಿಸಿ ನಕುಲ–ಸಹದೇವರು ಅವನ್ನು ಹೀಯಾಳಿಸಿ ಮೇಲಕ್ಕೆ ಬರಲು ಅಹ್ವಾನಿಸಿದರು. ಊಹ್ಞೂ, ಅರ್ಜುನನು ಬಂದು 'ಮಾನಧನನೆನಿಸಿದ ನೀನು ಮೀನು–ಕಪ್ಪೆಗಳಂತೆ ನೀರಲ್ಲಿ ಅಡಗಿರುತ್ತಾರೆಯೇ? ಮೇಲೆ ಬಂದು ತನ್ನ ಬಾಣದ ರುಚಿನೋಡು' ಎಂದು ಮೂದಲಿಸಿ ಕರೆಯುತ್ತಾನೆ. ಇನ್ನೂ ಉತ್ತರವಿಲ್ಲ. ಈ ಸಂದರ್ಭದಲ್ಲಿಯೂ ಯುಧಿಷ್ಠರನು ಅವನನ್ನು ಕುರಿತು ಹೇಳುವ ಮಾತು ಅವನ ಸ್ವಭಾವಕ್ಕನುಗುಣ ವಾಗಿಯೇ ಇದೆ;

> **ಭರತಾನ್ವಯದೊಳಂದಿನೆಡೆಯೊಳ್ ಸಾಪತ್ನ್ಯದೊಳ್ ಬದ್ಧಮ**
> **ತ್ಸರಮಿಲ್ಲ ಎಮ್ಮನಕಾರಣಂ ಕದಡಿದಯ್, ಸಾವೆಯ್ದಿದಯ್, ನಷ್ಟಸೋ**
> **ದರಮಾಯಿತ್ತು, ಎನಗಂ ಸ್ವಗೋತ್ರವಧೆಯಪ್ಪಾ ಪಾತಕಂ, ಕೌರವೇ**
> **ಶ್ವರ, ನೀಂ ಸಂಧಿಗೊಡಂಬಡು, ಇಂತು ಕೊಳನಂ ಪೊಕ್ಕಿರ್ಪುದೇಂ ತಕ್ಕುದೇ** (ಗದಾ. ೭–೯)

(ಭರತವಂಶದಲ್ಲಿ ಮೊದಲಿನಿಂದ ಇಂದಿನವರೆಗೆ ದಾಯಾದಿಗಳಲ್ಲಿ ಬದ್ಧ ವೈರವಿರ ಲಿಲ್ಲ. ನೀನು ನಿಷ್ಕಾರಣವಾಗಿ ನಮ್ಮನ್ನು ಕಲಕಿದೆ, ನೀನು ಸಾವನ್ನು ಸಮೀಪಿಸಿದೆ. ನಿನಗೆ ತಮ್ಮಂದಿರು ಇಲ್ಲವಾದರು, ನಮಗೆ ಸ್ವಗೋತ್ರ ವಧೆಯ ಪಾತಕವುಂಟಾಯಿತು. ಆದದ್ದಾಗಲಿ ಈಗಲೂ ಸಂಧಿಗೆ ಒಪ್ಪಿಕೊ. ಹೀಗೆ ಕೊಳದಲ್ಲಿ ಅಡಗಿರುವುದು ನಿನಗೆ ತಕ್ಕದ್ದಲ್ಲ.) ಅವನ ಶಾಂತಿ ಮಾತುಗಳನ್ನು ಕೇಳಿ ಭೀಮನಿಗೆ ಕಳವಳವಾಯ್ತು, ದುರ್ಯೋಧನನು ಎಲ್ಲಿ ಸಂಧಿಗೆ ಒಪ್ಪಿಯೇಬಿಡುತ್ತಾನೋ ಎಂದು! ಆದ್ದರಿಂದ ತಕ್ಷಣ ಕೆರಳಿ ನುಡಿಯುತ್ತಾನೆ, ತನ್ನ ವೈರಿಯನ್ನು ಕುರಿತು:

ಭವದನುಜನರುಣಜಲಮಂ
ಸವಿನೋಡಿದೆನಾನೆ, ನಿನ್ನ ಬಲಜಲನಿಧಿಯಂ
ಸವಿನೋಡಿದೆನ್, ಈ ಕೊಳನಂ
ತವೆ ಪೀರ್ದು ಬಟಿಕ್ಕೆ ನಿನ್ನ ಸವಿಯಂ ನೋೞ್ಪೆಂ (ಗದಾ. ೭–೧೧)

(ನಿನ್ನ ತಮ್ಮನ ರಕ್ತದ ರುಚಿನೋಡಿದೆ, ನಿನ್ನ ಸೈನ್ಯ ಸಮುದ್ರದ ರುಚಿನೋಡಿದೆ. ಈಗ ನೀನು ಕೊಳದಿಂದ ಹೊರಗೆ ಬಾರದಿದ್ದರೆ ಮೊದಲು ನೀರನ್ನೆಲ್ಲ ಕುಡಿದು ಅನಂತರ ನಿನ್ನನ್ನು ಮುಗಿಸುತ್ತೇನೆ.) ಇಲ್ಲ. ಇವನ ಕೋಪದ ಬಿಸಿ ದುರ್ಯೋಧನನನ್ನಿನ್ನೂ ತಾಕಿಲ್ಲ. ಆದ್ದರಿಂದ ಹೇಳುತ್ತಾನೆ:

ಜಳದೊಳ್‌ಮೀನಿರ್ಪವೊಲ್ ನೀಂ ಕೊಳದೊಳೆ ಮುೞುಗಿರ್ದಕ್ಕಟಾ ಕೊಡಸೇಡಿಂ
ಗೊಳಗಾದಯ್, ನಿನ್ನ ದುರ್ಯೋಧನವೆಸರ್ಗಿದು ಲಜ್ಜಾಕರಂ, ತೋಱಿದಯ್ ನಿ
ನ್ನಳವಂ, ಚಿಃ ಸತ್ತರೇಂ ಪುಟ್ಟರೆ, ಪೊಱಮಡು ನೀಂ, ಕಯ್ದುಗೊಳ್ ಕೌರವೇಂದ್ರಾ
ಚಳವಜ್ರಂ ಬಂದನೀತಂ ಕುರಕುಲಮಥನೋದ್ಭೀಕರಂ ಭೀಮಸೇನಂ

(ಗದಾ. ೭–೧೩)

(ಮೀನಿನ ಹಾಗೆ ನೀರಿನಲ್ಲಿ ಮುಳುಗಿಕೊಂಡಿದ್ದು ಚಳಿಯ ಸೆಳೆತಕ್ಕೆ ಒಳಗಾದೆ, ಯಾರೊಡನೆ ಯುದ್ಧಮಾಡುವುದು ಕಷ್ಟವೋ ಅವನು ದುರ್ಯೋಧನ. ಇಂತಹ ಹೆಸರನ್ನು ಪಡೆದವನು ಹೀಗೆ ಅಡಗಿಕೊಂಡಿದ್ದು ನಿನ್ನ ಹೆಸರಿಗೆ ಅವಮಾನ ಮಾಡುತ್ತಿದ್ದೀಯೇ, ಚಿಃ ಸತ್ತವರೇನು ಮತ್ತೆ ಹುಟ್ಟುವುದಿಲ್ಲವೆ? ಹೊರಬಂದು ಯುದ್ಧಕ್ಕೆ ಸಿದ್ಧನಾಗು: ಕೌರವನೆಂಬ ಪರ್ವತಕ್ಕೆ ವಜ್ರಾಯುಧದಂತಿರುವವನಾದ ಕುರುವಂಶವನ್ನು ನಾಶಮಾಡಿ ಭೀಕರನಾಗಿರುವ ಭೀಮನು ಬಂದಿದ್ದಾನೆ.) ಸ್ವಲ್ಪ ಸ್ವಲ್ಪ ಅವನ ಕೋಪ ಬಿಸಿ ಕೊಳದ ತಳಕ್ಕೂ ತಲುಪುತ್ತಿರಬೇಕು. ತನ್ನ ಮೂದಲಿಕೆಯನ್ನು ಭೀಮನು ಮುಂದುವರಿಸುತ್ತಾನೆ.

ಹರಿಸಂಧಾನಕ್ಕೆ ವಂದಂದವಗಡಿಸಿದಹಂಕಾರಮಲ್ಲಿತ್ತೊ, ಕೃಷ್ಣಾಂ
ಬರಕೇಶಾಕೃಷ್ಟಿಯಂ ಮಾಡಿಸಿದ ಮದಮೆಲ್ಲಿತ್ತೋ ಕೌಂತೇಯರಂ ಮ
ಚ್ಚರದಿಂ ಕಾಂತಾರದೊಳ್‌ತಿಱ್ರನೆ ತಿರಿಪಿದ ಸೊರ್ಕೆಗಳೇನಾದುದೊ, ಎಂದಾ
ಕುರುವಂಶಾಧೀಶನಂ ಮೂದಲಿಸಿದನದಟಂ ಭೀಮನುದ್ದಾಮ ಭೀಮಂ

(ಗದಾ. ೭–೧೪)

(ಕೃಷ್ಣನು ಸಂಧಾನಕ್ಕೆ ಬಂದಾಗ ನೀನು ತೋರಿಸಿದ ಅಹಂಕಾರ ಎಲ್ಲಿ ಹೋಯಿತು? ದ್ರೌಪದಿಯ ಮುಡಿಯನ್ನು ಹಿಡಿದೆಳಸಿದಂದು ಇದ್ದ ಕೊಬ್ಬು ಎಲ್ಲಿ ಹೋಯಿತು? ಪಾಂಡವರನ್ನು ಅರಣ್ಯವಾಸಕ್ಕೆ ಕಳಿಸಿದಾಗಿನ ಸೊಕ್ಕು ಎಲ್ಲಿ ಹೋಯಿತು? ಎಲ್ಲವನ್ನೂ ಬಿಟ್ಟು ಅಡಗಿದ್ದೀಯಲ್ಲ–ಎಂದು ಭೀಮನು ಮೂದಲಿಸಿದನು.) ಹೀಗೆ ತುದಿಗೇರಿದ ಭೀಮನ ಕೋಪದಿಂದ ಆದ ಮೊದಲ ಪರಿಣಾಮವೇನು? ರನ್ನನ ಶಕ್ತಿಯುತ ಶೈಲಿಯಲ್ಲಿಯೇ ಅದನ್ನು ಕೇಳಿ:

ಅಳುರ್ದು ಕೊಳೆ ಭೀಮಕೋಪಾ
ನಳನೆಸರ್ಗಾಯ್ದಿಟ್ಟ ತೆಱಿದೆ ಮಱುಗಿದುದಾಗಳ್

ಕೊಳದ ಜಲಮ್, ಎಯ್ದೆ ಕಾಯ್ದೆಸ
ರೊಳೆ ಕೂಟ್ ಕುದಿವಂತೆ ಕುದಿದುವು ಅನಿಮಿಶತತಿಗಳ್ (ಗದಾ. ೭-೨೧)

(ಭೀಮನ ಕೋಪವೆಂಬ ಬೆಂಕಿಯು ಉರಿಯುತ್ತ ಹಬ್ಬಲು ಆ ಕೊಳದ ನೀರೆಲ್ಲವೂ ಕುದಿಯಿತು: ಕುದಿಯುವ ನೀರಿಲ್ಲಿ ಹಾಕಿದ ಅಕ್ಕಿಯೂ ಕುದಿಯುವಂತೆ ಕೊಳದಲ್ಲಿನ ಮೀನುಗಳು ಮಿಸುಕಾಡಿದವು!) ಎಂತಹ ಭಯಂಕರ ಕೋಪವಿರಬೇಕು ಭೀಮನದು! ಇಂತಹ ಮಾತನ್ನು ಕೇಳಿಯೂ ದುರ್ಯೋಧನನು ಅಡಗಿರಲು ಸಾಧ್ಯವೇ? ತನ್ನ ಪರಮ ಶತ್ರುವಿನ ಮಾತುಗಳಿಂದ ಆದ ದುರ್ಯೋಧನನ ಪರಿಣಾಮವನ್ನು ಕೇಳಿ:

ಆ ರವಮಂ ನಿರ್ಜಿತಕಂ
ಠೀರವರವಮಂ ನಿರಸ್ತಘನರವಮಂ ಕೋ
ಪಾರುಣನೇತ್ರಂ ಕೇಳ್ದಾ
ನೀರೊಳಗಿರ್ದುಂ ಬೆಮರ್ತನುರಗಪತಾಕಂ (ಗದಾ. ೭-೨೨)

(ಸಿಂಹ ಗರ್ಜನೆಯಂತಹ ಗುಡುಗಿನ ಮೊಳಗಿನಂತಹ ಭೀಮನ ಆ ಶಬ್ದವನ್ನು ಕೇಳಿ ಕೋಪದಿಂದ ಕೆಂಪಾದ ಕಣ್ಣುಗಳನ್ನುಳ್ಳ ಸರ್ಪಧ್ವಜನಾದ ದುರ್ಯೋಧನನು ನೀರಿನಲ್ಲಿದ್ದರೂ ಬೆವರಿದ.) ನೀರಿನಲ್ಲಿದ್ದರೂ ಬೆವರಿದ ಎಂಬ ಒಂದೇ ಮಾತಿನಲ್ಲಿಯೇ ಕೌರವನ ಕೋಪದ ತೀವ್ರತೆಯನ್ನು ಕವಿಯು ಸೂಚಿಸುತ್ತಾನೆ. ದುರ್ಯೋಧನನು ಸರ್ಪದಂತೆ ಛಲಗಾರನೆಂಬುದನ್ನೂ ಅವನು ಕೆರಳಿದ ರೀತಿ ಸರ್ಪವು ಕೆರಳಿ ಹೆಡೆ ಯೆತ್ತುವಂತೆ ಇತ್ತೆಂಬುದನ್ನೂ ಸೂಚಿಸುತ್ತಾನೆ. ಇದೇ ಶ್ರೇಷ್ಠಕವಿಯ ರಚನಾಕೌಶಲ.

ಭೀಮನ ಈ ಮಾತುಗಳನ್ನು ಕೇಳುತ್ತಾ ಕೂರುವುದು ಇನ್ನು ದುರ್ಯೋಧನನಿಗೆ ಸಾಧ್ಯವಾಗಲಿಲ್ಲ. ಕೊಳದ ತಳದಿಂದ ಚಿಮ್ಮಿ ಮೇಲೆ ಬಂದ. ಅವನು ಬಂದ ರೀತಿಯು ರನ್ನನ ಮಾತುಗಳಲ್ಲಿ ಹೇಗೆ ಕಣ್ಣೆದುರಿಗೆ ನಿಲ್ಲುತ್ತದೆ ನೋಡಿ:

ರಸೆಯಿಂ ಕಾಲಾಗ್ನಿ ರುದ್ರಂ ಪೊಱಮಡುವೊಲಂತಾ ಸರೋಮಧ್ಯದಿಂ ಸಾ
ಹಸಗರ್ವಾಲಂಕೃತಂ ತೊಟ್ಟನೆ ಕೊಳೆ ಪೊಱಮಟ್ಟು 'ಎಲ್ಲಿದಂ ಭೀಮನ್' ಎಂದೆ
ಣ್ದೆಸೆಯಂ ನೋಡುತ್ತೆ ಮತ್ತದ್ಭುತ ನಟನಿಟಲಾಲೋಲ ಕೀಲಾಕ್ಷಿವೊಲ್ ದ
ಳ್ಪಿಸೆ ಕೋಪರಕ್ತನೇತ್ರಂ ನಿಜಭುಜಗದೆಯಂ ತೂಗಿದಂ ಧಾರ್ತರಾಷ್ಟ್ರಂ

(ಗದಾ. ೭-೩೦)

(ಪ್ರಳಯ ಕಾಲದಲ್ಲಿ ಭೂಮಿಯನ್ನು ಸೀಳಿಕೊಂಡು ಮೇಲಕ್ಕೆ ಚಿಮ್ಮಿ ಬರುವ ಕಾಲರುದ್ರನಂತೆ ಥಟಕ್ಕನೆ ಮೇಲೆದ್ದು ಬಂದು 'ಭೀಮನೆಲ್ಲಿ' ಎಂದು ಸುತ್ತಲೂ ನೋಡುತ್ತ ತಾಂಡವವಾಡುವ ನಟರಾಜನ ಉರಿಯುವ ಹಣೆಗಣ್ಣಿನಂತೆ ಕೆಂಪಾದ ಕಣ್ಣಿನಿಂದ ಕೂಡಿದ ದುರ್ಯೋಧನನು ತನ್ನ ತೋಳುಗಳೆಂಬ ಗದೆಯನ್ನೇ ತೂಗಿದ.) ಅದ್ಭುತವಾದ ವರ್ಣನೆಯಿದು. ದುರ್ಯೋಧನನನ್ನು ಪ್ರಳಯಾಗ್ನಿಗೆ ಹೋಲಿಸುವುದಲ್ಲದೆ, ಅವನ ಸಹಜವಾದ ಕೆಂಗಣ್ಣುಗಳನ್ನು ಉರಿಗಣ್ಣಿಗೆ ಹೋಲಿಸಿ ಅವನ ಕೋಪದ ತೀವ್ರತೆಯನ್ನು ಕವಿಯು ನಮ್ಮ ಅನುಭವಕ್ಕೆ ಬರುವಂತೆ ಮಾಡುತ್ತಾನೆ. ಇಲ್ಲಿ ಮಾತುಗಾರಿಕೆಯೂ ಇದಕ್ಕೆ ಸಹಾಯಕವಾಗಿದೆ. ಇನ್ನು ಶುರುವಾಯಿತು

ಗದಾಯುದ್ಧ, ಭೀಮ ದುರ್ಯೋಧನರಿಬ್ಬರೂ ಪರಸ್ಪರರನ್ನು ಮೂದಲಿಸುತ್ತಾರೆ. ತಮ್ಮ ತಮ್ಮ ಗದೆಗಳನ್ನೆತ್ತಿಕೊಂಡು ಹೋರಾಡುತ್ತಾರೆ. ಎರಡು ಕುಲಪರ್ವತಗಳೇ ಹೋರಾಡುತ್ತಿರುವಂತಿತ್ತು ಈ ದೃಶ್ಯ. ಉಲ್ಕಾಪಾತದಂತೆ ಅವರ ಗದೆಯಿಂದ ಕಿಡಿಗಳು ಹೊಮ್ಮುತ್ತಿದ್ದವು. ಒಮ್ಮೆ ಭೀಮನು ಮೂರ್ಛೆಹೋದಾಗ ಅವನನ್ನು ಹೊಡೆಯದೆ ತನ್ನ ಗದೆಯಿಂದಲೇ ಗಾಳಿ ಹಾಕಿ ದುರ್ಯೋಧನನು ಎಚ್ಚರಿಸುತ್ತಾನೆ; ಅದೇ ಭೀಮನು ದುರ್ಯೋಧನನ ತೊಡೆಯನ್ನು ಮುರಿದು ಅವನನ್ನು ಕೆಳಕ್ಕುರುಳಿಸಿದಾಗ ಅವನ ತಲೆಯನ್ನು ಕಾಲಿನಿಂದ ಒದೆಯುತ್ತಾನೆ. ಇಂಥ ಸಂದರ್ಭಗಳಲ್ಲಿ ನಮಗೆ ಪ್ರತಿನಾಯಕನ ಬಗ್ಗೆ ಗೌರವವೂ, ನಾಯಕನ ಬಗ್ಗೆ ಹೇಸಿಕೆಯೂ ಉಂಟಾಗುತ್ತದೆ.

ಈ ರೀತಿ ಕುರುಕುಲ ಚಕ್ರವರ್ತಿಯಾದ ದುರ್ಯೋಧನನು ಅನಾಥನಾಗಿ ಧೂಳಿನಲ್ಲಿ ಹೊರಳುತ್ತ ಬಿದ್ದಿರುವಾಗ ಅಶ್ವತ್ಥಾಮನು ಅವನನ್ನು ಕಂಡು 'ನಾನು ಪ್ರತೀಕಾರವನ್ನು ಕೈಗೊಳ್ಳುತ್ತೇನೆ. ಆಜ್ಞೆಯನ್ನು ಕೊಡು' ಎಂದು ಬೇಡಿ ಕೊಂಡಾಗ ತನ್ನ ದಾಯಾದರ ತಲೆಗಳನ್ನು ಕಂಡು ಹಾಯಾಗಿ ಸಾಯುತ್ತೇನೆ, ಹಾಗೆ ಮಾಡು ಎಂದು ದುರ್ಯೋಧನನು ಹೇಳುತ್ತಾನೆ. ಅಶ್ವತ್ಥಾಮನು ಸರಸರ ಹೊರಟು ಮುಗ್ಧರಾದ ಉಪಪಾಂಡವರ ತಲೆಗಳನ್ನು ಕತ್ತರಿಸಿ ತನ್ನ ಸ್ವಾಮಿಯ ಮುಂದೆ ಒಡ್ಡುತ್ತಾನೆ. ಅದನ್ನು ನಿಟ್ಟಿಸಿ ನೋಡಿದ ದುರ್ಯೋಧನನು ಭೀಮನ ಮುಖದ ಹೋಲಿಕೆಯಿದ್ದ ಮುಖ ವನ್ನು ಕಂಡು

ಪವನಜನಾಸ್ಯಮಲ್ತಿದು ಅವನಾನನಮಪ್ಪೊಡೆ ಮಟ್ಟಮಿರ್ದು ನೋ
ಡುವುದೆ ಮದೀಯವಕ್ತ್ರಮನೆ ಕೆಮ್ಮನೆ? ಪೋಯ್ತಱಿವಿಲ್ಲದಾಯ್ತು, ಪಾಂ
ಡವರ ಶಿರಂಗಳಲ್ಲವಿವು ಪಾಂಡುಸೂನುಗಳಪ್ಪ ಪಂಚಪಾಂ
ಡವರ ಶಿರಂಗಳಂ ನೆಱೆ ವಿಚಾರಿಸದಕ್ಕಟ ಕೊಂಡು ಬರ್ಪುದೆ? (ಗದಾ. ೯–೩೩)

(ಇದು ಭೀಮನ ಮುಖವಲ್ಲ, ಅವನದಾಗಿದ್ದರೆ ನನ್ನನ್ನು ನೋಡುತ್ತಾ ಸುಮ್ಮನಿರು ತ್ತಿತ್ತೇ? ತಿಳಿಯದೇ ನಿನ್ನಿಂದ ತಪ್ಪಾಗಿಹೋಯಿತು ಇವು ಪಾಂಡವರ ಮಕ್ಕಳಾದ ಉಪಪಾಂಡವರ ತಲೆಗಳು. ವಿಚಾರ ಮಾಡದೆ ಹೀಗೆ ತರುತ್ತಾರೆಯೇ?) ಭೀಮನ ಮುಖದ ಹೋಲಿಕೆಯಿದ್ದದ್ದು ಭೀಮನ ಮುಖವಲ್ಲ ಎಂದು ದುರ್ಯೋಧನನು ಭಾವಿಸಲು ಕೊಡುವ ಕಾರಣ ಅತ್ಯಂತ ಸುಂದರವಾದದ್ದು; ಕತ್ತರಿಸಿದ ತಲೆಯಾದರೂ ಅದು ತನ್ನನ್ನು ಕಂಡಿದ್ದರೆ ಸುಮ್ಮನಿರದೆ ಅವಡುಗಚ್ಚಿ ಕ್ರೋಧವನ್ನು ತೋರಿಸುತ್ತಿತ್ತು. ಅವರಿಬ್ಬರಿಗೂ ಅಷ್ಟು ದ್ವೇಷ, ಪಾತ್ರಗಳ ಭಾವನೆಯನ್ನು ಇದಕ್ಕಿಂತಲೂ ಸುಂದರ ವಾಗಿಯೂ ಸಮರ್ಪಕವಾಗಿಯೂ ಮಾತುಗಳಲ್ಲಿ ಹೇಳುವುದು ಸಾಧ್ಯವೇ? ಕೊನೆಗೂ ದುರ್ಯೋಧನನು ಬಾಲವಧೆಯ ಯಾತನೆಯನ್ನು ಪಡೆದು ಸಾಯುವಂತಾಯ್ತು. ಅವನ ಸಾವನ್ನು ಸೂರ್ಯಾಸ್ತದೊಡನೆ ಹೋಲಿಸಿ ಕವಿ ಅತ್ಯಂತ ಹೆಚ್ಚಿನ ಗೌರವವನ್ನು ತೋರಿಸುತ್ತಾನೆ.

ಪಂಕಜಮುಂ ಸುಹೃದ್ವದನಪಂಕಜಮುಂ ಮುಗಿವನ್ನಂ, ಉಗ್ರತೇ
ಜಂ ಕಿಡುತಿರ್ಪಿನಂ, ನಿಜಕರಂಗಳನಂದುಡುಗುತ್ತುಮಿರ್ಪ ಚ

ಕ್ರಾಂಕಮಗಲ್ವಿನಂ ಕ್ರಮದಿನಂಬರಮಂ ಬಿಸುಟುರ್ವಿಗಂಧಕಾ
ರಂ ಕವಿತರ್ಪಿನಂ ಕುರುಕುಲಾರ್ಕನುಮರ್ಕನುಮಸ್ತಮೆಯ್ದಿದರ್ (ಗದಾ. ೯-೩೯)

(ಕಮಲಗಳು ಮುಚ್ಚಿಕೊಳ್ಳುತ್ತಿರಲು, ಬಿಸಿಲು ಕಡಿಮೆಯಾಗುತ್ತಿರಲು, ತನ್ನ ಕಿರಣಗಳನ್ನು ಮುದುರಿಕೊಳ್ಳುತ್ತಿರಲು, ಚಕ್ರವಾಕ ಪಕ್ಷಿಗಳು ಅಗಲುತ್ತಿರಲು, ಭೂಮಿಗೆ ಕತ್ತಲೆಯು ಆವರಿಸುತ್ತಿರಲು ಸೂರ್ಯನು ಮುಳುಗಿದ. ಹಾಗೆಯೇ ಮಿತ್ರರ ಮುಖಗಳು ಬಾಡುವಂತೆ ತನ್ನ ತೇಜಸ್ಸು ಕಡಿಮೆಯಾಗಲು ತನ್ನ ಕೈಗಳನ್ನು ಮುದುರಿಕೊಳ್ಳುತ್ತಲೂ ಚಕ್ರವರ್ತಿಯೆಂಬ ಹೆಸರು ತನ್ನಿಂದ ದೂರ ಸರಿಯುತ್ತಿರಲು ದೇಶಕ್ಕೆಲ್ಲ ದುಃಖವನ್ನುಂಟುಮಾಡಿ ಕುರುಕುಲಕ್ಕೆ ಸೂರ್ಯನಾಗಿದ್ದ ದುರ್ಯೋಧನನು ಅವಸಾನ ಹೊಂದಿದ.) ಕವಿಗೆ ದುರ್ಯೋಧನನ ಬಗ್ಗೆ ಎಷ್ಟು ಗೌರವವಿದೆಯೋ ಅಷ್ಟೇ ಗೌರವವು ನಮಗೂ ಉಂಟಾಗುತ್ತದೆ ರನ್ನನನ್ನು ಓದಿದಾಗ. ನಮ್ಮ ಮನಸ್ಸನ್ನು ತನ್ನೆಡೆಗೆ ಸಂಪೂರ್ಣವಾಗಿ ಸೆಳೆದುಕೊಳ್ಳುವ ಶಕ್ತಿಯು ರನ್ನನ ಬರವಣಿಗೆಗೆ ಇದೆ. ಪಂಪನು ಕರ್ಣನ ಬಗ್ಗೆ ನಮ್ಮಲ್ಲುಂಟುಮಾಡುವ ಭಾವನೆಯನ್ನೇ ರನ್ನನು ದುರ್ಯೋಧನನ ಬಗ್ಗೆ ಉಂಟುಮಾಡುತ್ತಾನೆ, ಇನ್ನೂ ಉತ್ತಮವಾಗಿ ಮಾಡುತ್ತಾನೆ ಎಂದರೆ ಅತಿಶಯೋಕ್ತಿಯಾಗುವುದಿಲ್ಲ. "ಪಂಪನು ಈ ಗದಾಯುದ್ಧದ ನಿಜವಾದ ನಾಯಕನನ್ನು, 'ಮಹಾನುಭಾವ'ನನ್ನು ನೋಡಿದ್ದರೆ-ಶಿಷ್ಯಾದಿಚ್ಛೇತ್ ಪರಾಜಯಂ' ಎಂದು ಹೇಳಿ ಆನಂದಪಡುತ್ತಿದ್ದನು?"[2] ಎಂಬ ಬಿ.ಎಂ.ಶ್ರೀ. ಅವರ ಮಾತು ಸತ್ಯ.

ಒಟ್ಟಿನಲ್ಲಿ ಹೇಳಬೇಕೆಂದರೆ ರನ್ನನು ನಿಜವಾಗಿಯೂ ಕವಿರತ್ನ. ಅವನು ತನ್ನನ್ನು ಹೊಗಳಿಕೊಳ್ಳುವ ಮಾತುಗಳಲ್ಲಿ ಉತ್ಪ್ರೇಕ್ಷೆಯಿತಬಹುದಾದರೂ ಅವನ ಹೆಮ್ಮೆ ಒಣ ಹೆಮ್ಮೆಯಲ್ಲ. ಅವನು ದುರ್ಯೋಧನನ ಪಾತ್ರವನ್ನು ಚಿತ್ರಿಸಿರುವ ರೀತಿ, ಅವನ ಪದ್ಯಗಳ ಮಾತುಗಾರಿಕೆಯಲ್ಲಿ ಹರಿಯುವ ವೀರಭಾವ ಸಂದರ್ಭಾನುಗುಣವಾಗಿ ಅವನು ಪಾತ್ರಗಳ ವಿಷಯದಲ್ಲಿ ಬಳಸುವ ವಿಶೇಷಣಗಳು, ಸನ್ನಿವೇಶ ನಿರ್ಮಾಣದಲ್ಲಿ ತೋರುವ ಕೌಶಲ-ಇವುಗಳನ್ನು ರನ್ನನನ್ನು ಶ್ರೇಷ್ಠವಾದ ಕವಿಯನ್ನಾಗಿ ಮಾಡಲು ಕಾರಣವಾಗಿವೆ. ಅವನನ್ನು 'ಶಕ್ತಿ ಕವಿ'ಯೆಂದು ಕುವೆಂಪು ಅವರು ವರ್ಣಿಸಿರುವುದು ಸಮಂಜಸವಾಗಿದೆ.

ಎರಡನೆಯ ನಾಗವರ್ಮ

ಇಬ್ಬರು ನಾಗವರ್ಮರುಗಳಿದ್ದಾರೆ ಎಂದು ತೀರ್ಮಾನ ಮಾಡಿರುವ ವಿದ್ವಾಂಸರು ಎರಡನೆಯ ನಾಗವರ್ಮನು 'ಕಾವ್ಯಾವಲೋಕನ'ವೆಂಬ ಅಲಂಕಾರಶಾಸ್ತ್ರ ಮತ್ತು ವ್ಯಾಕರಣ ವಿಷಯಗ್ರಂಥವನ್ನೂ, 'ಕರ್ನಾಟಕ ಭಾಷಾಭೂಷಣ'ವೆಂಬ ಸಂಸ್ಕೃತ ಭಾಷೆಯಲ್ಲಿ ಕನ್ನಡದ ವ್ಯಾಕರಣವನ್ನೂ 'ಅಭಿದಾನ ವಸ್ತುಕೋಶ'ವೆಂಬ ಸಂಸ್ಕೃತ-ಕನ್ನಡ ನಿಘಂಟನ್ನೂ, 'ಅಭಿಧಾನ ರತ್ನಮಾಲಾ ಟೀಕೆ'ಯೆಂಬ ಹಲಾಯುಧನ 'ಅಭಿಧಾನರತ್ನಮಾಲೆ'ಯೆಂಬ ಸಂಸ್ಕೃತ ಶಬ್ದಕೋಶದೊಳಗಿನ ಸಂಸ್ಕೃತ ಶಬ್ದಗಳಿಗೆ ಕನ್ನಡ ಸಮಾನಾರ್ಥ ಶಬ್ದಗಳನ್ನೀಯುವ ಕೃತಿಯನ್ನೂ ರಚಿಸಿರುವನೆಂದು

ಅಭಿಪ್ರಾಯಪಡುತ್ತಾರೆ. ಇತ್ತೀಚೆಗೆ ದೊರೆತಿರುವ 'ವರ್ಧಮಾನಪುರಾಣ'ವೆಂಬ ಚಂಪೂ ಕೃತಿಯ ಕರ್ತೃವೂ ಈತನೇ ಎಂದು ಈಗ ತಿಳಿದು ಬಂದಿದೆ. ಕ್ರಿ.ಶ. ೧೦೪೨ರಲ್ಲಿದ್ದಿರ ಬೇಕೆಂಬುದು ವಿದ್ವಾಂಸರು ಸದ್ಯಕ್ಕೆ ಒಪ್ಪಿರುವ ಅಭಿಪ್ರಾಯ. ಇವನು ನಾಗವರ್ಮನು 'ಛಂದೋವಿಚಿತಿ' ಯೆಂಬ ಛಂದಶಾಸ್ತ್ರ ಗ್ರಂಥವನ್ನೂ 'ವತ್ಸರಾಜ ಚರಿತೆ'ಯೆಂಬ ಕಾವ್ಯವನ್ನೂ ಬರೆದಿರುವುದಾಗಿಯೂ ಅವು ದೊರಕಿಲ್ಲವೆಂದೂ ಅಭಿಪ್ರಾಯವಿದೆ.

ಎರಡನೆಯ ನಾಗವರ್ಮನಿಗೆ 'ಕವಿತಾಗುಣೋದಯ', 'ಕವಿಕರ್ಣ ಪೂರ' ಎಂಬ ಬಿರುದುಗಳಿದ್ದಂತೆ ತೋರುತ್ತದೆ. ಇವನ ತಂದೆ ದಾಮೋದರನೆಂಬ 'ವಿಪ್ರಕುಳಪ್ರದೀಪ', ತಾಯಿಯು 'ವಿನಯಾಳಂಕೃತೆ'ಯಾದ ವೀರಕಬ್ಬೆ ಎಂಬ ವಿಷಯವು 'ವರ್ಧಮಾನಪುರಾಣ'ದಿಂದ ತಿಳಿಯುತ್ತದೆ. ತಾನು ಅಸಗ ಗಜಗ ಗುಣನಂದಿ ಪೊನ್ನರೆಂಬ ಕನ್ನಡ ಕವಿಗಳಿಗೂ ಮಯೂರ ಬಾಣ ಕಾಳಿದಾಸರೆಂಬ ಸಂಸ್ಕೃತ ಕವಿಗಳಿಗೂ ಸಮನಾದವನೆಂದೂ ಈ ಕಾವ್ಯದಲ್ಲಿ ಹೇಳಿಕೊಳ್ಳುತ್ತಾನೆ. ಅವನ ವೈಯಕ್ತಿಕ ಜೀವನಕ್ಕೆ ಸಂಬಂಧಿಸಿರುವ ಹೆಚ್ಚು ವಿಷಯಗಳು ನಮಗೆ ತಿಳಿಯ ದಿರುವುದು ದುರದೃಷ್ಟಕರ.

ವರ್ಧಮಾನಪುರಾಣ

ಇದು ಇಪ್ಪತ್ತನಾಲ್ಕನೆಯ ತೀರ್ಥಂಕರನಾದ ಮಹಾವೀರನನ್ನು ಕುರಿತ ಪುರಾಣ ಕಾವ್ಯ. ತನ್ನ ಈ ಪುರಾಣಕೃತಿಗೆ ಇಂದ್ರಭೂತಿಯ 'ಮಹಾಪುರಾಣ'ದ ಕತೆಯೇ ಆಧಾರ ವೆಂದು ಕವಿಯು ಹೇಳಿಕೊಂಡಿದ್ದಾನೆ. ಈ ಕಾವ್ಯವು ಹದಿನಾರು ಆಶ್ವಾಸಗಳಿಂದಲೂ, ಒಟ್ಟು ೧೧೩೪ ಪದ್ಯಗಳಿಂದಲೂ ಕೂಡಿರುವ ಚಂಪೂ ಕೃತಿಯಾಗಿದೆ.

ಜಂಬೂದ್ವೀಪದ ನಡುವಣ ಮಗಧರಾಜ್ಯಕ್ಕೆ ರಾಜಗೃಹವೆಂಬುದು ರಾಜಧಾನಿ. ಅಲ್ಲಿ ವಿಶ್ವಭೂತಿಯೆಂಬ ರಾಜನು ಜೈನೆಯೆಂಬ ತನ್ನ ರಾಣಿಯೊಂದಿಗೆ ರಾಜ್ಯ ವಾಳುತ್ತಿದ್ದನು. ಇವನ ತಮ್ಮ ವಿಶಾಖಭೂತಿಯು ಯುವರಾಜನಾಗಿದ್ದನು. ವಿಶ್ವಭೂತಿಗೆ ವಿಶ್ವನಂದಿ ಎಂಬುವವನು ಮಗನಾದರೆ, ವಿಶಾಖಭೂತಿಗೆ ಸೌಂದರಿ ಎಂಬುವವಳಲ್ಲಿ ಹುಟ್ಟಿದ ವಿಶಾಖ ನಂದಿಯು ಮಗ. ಈ ಇಬ್ಬರು ಮಕ್ಕಳಿಗೂ ಯೌವನ ಪ್ರಾಪ್ತವಾದ ಮೇಲೆ ಒಂದು ದಿನ ವಿಶ್ವಭೂತಿಯು ತನ್ನ ತಮ್ಮನಿಗೆ ರಾಜ್ಯವನ್ನೊಪ್ಪಿಸಿ ತಪಸ್ಸಿಗಾಗಿ ಹೊರಟು ಹೋದನು. ವಿಶ್ವನಂದಿಯು ರಾಜ್ಯಾಡಳಿತದಲ್ಲಿ ಚಿಕ್ಕಪ್ಪನಿಗೆ ಸಹಾಯ ಮಾಡುತ್ತಿದ್ದನು. ಹೀಗೆಯೇ ಇರಲು ವಿಶಾಖನಂದಿಯು ಜಿನದೀಕ್ಷೆಯನ್ನು ಕೈಗೊಳ್ಳಲು ನಿರ್ಧರಿಸಿದಾಗ ವಿಶ್ವನಂದಿಯೂ ಅವನೊಡನೆ ತಪಸ್ಸಿಗೆ ಹೊರಟು ತಮ್ಮ ತಪಶ್ಚರ್ಯೆ ಯಿಂದ ಮುಂದೆ ಶತಾರಕಲ್ಪದಲ್ಲಿ ಸಾಮಾನಿಕದೇವರಾಗಿ ಹುಟ್ಟಿದರು.

ಇವರು ಮುಂದೆ ಸುರಮ್ಯರಾಜನಾದ ಪ್ರಜಾಪತಿಯ ಮಕ್ಕಳಾಗಿ ಹುಟ್ಟಿದರು. ವಿಶಾಖಭೂತಿಯು ಜಯಾವತಿಯೆಂಬ ರಾಣಿಗೂ, ವಿಶ್ವ ನಂದಿಯು ಮೃಗಭೂಪತಿ ಯೆಂಬ ರಾಣಿಗೂ ವಿಜಯ, ತ್ರಿಪಿಷ್ಟ ಎಂಬ ಹೆಸರಿನಿಂದ ಜನಿಸಿದರು. ಒಮ್ಮೆ ನೈಮಿತ್ತಿಕನೊಬ್ಬನು ಬಂದು ತ್ರಿಪಿಷ್ಟನು ಚಕ್ರವರ್ತಿಯಾಗುವುದಾಗಿ ಹೇಳಿಹೋದನು.

ರಥನೂಪುರದ ಜ್ವಲನಜಟಿಯೆಂಬ ರಾಜನೂ ಆತನ ರಾಣಿ ವಾಯುವೇಗೆಯೂ ತಮ್ಮ ಮಗಳಾದ ಸ್ವಯಂಪ್ರಭೆಯನ್ನು ತ್ರಿಪಿಷ್ಟನಿಗಿತ್ತು ಲಗ್ನಮಾಡಬೇಕೆಂದು ನಿಶ್ಚಯಿಸಿ, ಅದರಂತೆಯೇ ನರವೇರಿಸಿದರು. ನವದಂಪತಿಗಳಿಬ್ಬರೂ ಅನ್ಯೋನ್ಯವಾಗಿ ಬಾಳುತ್ತಿದ್ದರು. ಸ್ವಯಂಪ್ರಭೆಯನ್ನು ಮದುವೆಯಾಗಲು ಬಯಸಿದ್ದ ಅಶ್ವಗ್ರೀವನೆಂಬುವನು ಒಮ್ಮೆ ತ್ರಿಪಿಷ್ಟನ ಮೇಲೆ ಯುದ್ಧಕ್ಕೆ ಬಂದು ಹತನಾದನು. ಮುಂದೆ ಸ್ವಲ್ಪ ಕಾಲದ ನಂತರ ಜ್ವಲನಜಟಿ ಹಾಗೂ ಪ್ರಜಾಪತಿಯಿಬ್ಬರೂ ದೀಕ್ಷೆಯನ್ನು ವಹಿಸಿದರು.

ಒಮ್ಮೆ ತ್ರಿಪಿಷ್ಟನು ಹೆಂಡತಿಯೊಡನೆ ಮಲಗಿದ್ದನು; ಸ್ವಯಂಪ್ರಭೆಯು ಎದ್ದು ಗಂಡನನ್ನು ಎಚ್ಚರಿಸಲು ಪ್ರಯತ್ನಿಸಿದಾಗ ಅವನು ಸತ್ತಿರುವುದು ತಿಳಿಯಿತು. ಅವಳು ಶೋಕದಿಂದ ಹಲುಬಿದಳು. ಮುಂದೆ ವಿಜಯನು ರಾಜನಾದನು. ವಿಶ್ವನಂದಿಯು ಪರಿಗ್ರಹಾಕುಳ ವ್ಯಗ್ರತೆಯಿಂದ ಏಳನೆಯ ನರಕದಲ್ಲಿ ದುಃಖವನ್ನನುಭವಿಸಿ ಮುಂದೆ ಎರಡು ಜನ್ಮಗಳಲ್ಲಿ ಸಿಂಹವಾಗಿ ಹುಟ್ಟಿದನು. ಒಮ್ಮೆ ಅಜಿತಂಜಯ-ಅಮಿತಕೀರ್ತಿಗಳೆಂಬ ಚಾರಣ ಋಷಿಗಳು ಇವನ ಹಿಂದಿನ ಅನೇಕ ಜನ್ಮಗಳ ಕತೆಯನ್ನು ಹೇಳಿದರು. ಸಿಂಹವು ಸತ್ತು ಕಚ್ಛದೇಶದ ಕನಕಾಭ-ಕನಕಮಾಲೆಯೆಂಬ ರಾಜದಂಪತಿಗಳಿಗೆ ಕನಕಧ್ವಜನೆಂಬ ಮಗನಾಗಿ ಹುಟ್ಟಿದನು. ಅವನಿಗೆ ಕನಕಪ್ರಭೆಯೆಂಬುವಳು ಹೆಂಡತಿಯಾಗಿದ್ದಳು. ಅವನು ಮುಂದಿನ ಜನ್ಮಗಳಲ್ಲಿ ಕ್ರಮವಾಗಿ ಉಜ್ಜಯಿನಿಯ ವಜ್ರಸೇನ-ಸುಶೀಲೆಯರಿಗೆ ಹರಿಷೇಣನೆಂಬ ಮಗನಾಗಿ, ಪುಂಡರೀಕಿಣಿ ನಗರದ ಸುಮಿತ್ರರಾಜ-ಸುವ್ರತೆಯರಿಗೆ ಪ್ರಿಯಮಿತ್ರನೆಂಬ ಮಗನಾಗಿ, ಸಿತಚ್ಛತ್ರದ ನಂದಿವರ್ಧನ-ವೀರವತಿಯರಿಗೆ ಸುಕೃತನಂದನನೆಂಬ ಮಗನಾಗಿ ಹುಟ್ಟಿದನು.

ಭರತಕ್ಷೇತ್ರದ ವಿದೇಹವನ್ನಾಳುವ ಸಿದ್ಧಾರ್ಥನು ಪತ್ನಿ ಪ್ರಿಯಕಾರಿಣಿಯೊಡನೆ ಸುಖದಿಂದಿದ್ದನು. ಸೌಧರ್ಮೇಂದ್ರನು ಈ ರಾಣಿಯ ಗರ್ಭದಲ್ಲಿ ತೀರ್ಥಂಕರನು ಹುಟ್ಟುವುದನ್ನು ಆತ್ಮಬೋಧೆಯಿಂದ ತಿಳಿದನು. ಆಕೆಯ ಗರ್ಭಶೋಧನೆಯನ್ನು ದೇವತೆಗಳೆಲ್ಲ ಸೇರಿ ಮಾಡಿದ ಮೇಲೆ ಜಿನನು ಆಕೆಯ ಗರ್ಭವನ್ನು ಸೇರಿ ಚೈತ್ರ ಶುಕ್ಲ ತ್ರಯೋದಶಿಯಂದು ಲೋಕಕ್ಕೆ ಅವತರಿಸಿದನು. ಆ ಮಗುವಿಗೆ ಶ್ರೀವೀರನೆಂಬ ನಾಮಕರಣವಾಯಿತು.

ಈ ಮಗುವು ಆಟಪಾಟಗಳಿಂದ ಪ್ರವರ್ಧಮಾನಕ್ಕೆ ಬರುತ್ತಿದ್ದುದನ್ನು ಕಂಡು ತಂದೆಯು ವರ್ಧಮಾನನೆಂಬ ಎರಡನೆಯ ಹೆಸರನ್ನಿಟ್ಟನು. ಅವನಿಗೆ ಸನ್ಮತಿಯೆಂಬ ಮೂರನೆಯ ಹೆಸರೂ ಆಯಿತು. ಈ ಹುಡುಗನ ವೀರತನವನ್ನು ಪರೀಕ್ಷಿಸಲು ಒಮ್ಮೆ ಸಂಗಮಕನೆಂಬ ಸಾಮಾನಿಕದೇವನು ಬಂದನು. ಶ್ರೀವೀರನು ತನ್ನ ಓರಗೆಯ ಹುಡುಗರೊಡನೆ ಉದ್ಯಾನವನದಲ್ಲಿ ಆಟವಾಡುತ್ತಿರುವಾಗ ಸಂಗಮಕನು ಸಹಸ್ರ ಹೆಡೆಯ ಮೇಲೆಯೇ ಕಾಲಿಟ್ಟು ಹತ್ತಿದ್ದ. ವೀರಸ್ವಾಮಿಯು ಆ ಸರ್ಪದ ಹೆಡೆಯ ಮೇಲೆಯೇ ಕಾಲಿಟ್ಟು ಮರದಿಂದ ಇಳಿದನು. ಇದರಿಂದ ಚಕಿತನಾದ ಆ ಸಾಮಾನಿಕ ದೇವನು ಆ ಹುಡುಗನಿಗೆ 'ಮಹಾವೀರ' ನೆಂಬ ಅನ್ವರ್ಥವಾದ ಹೆಸರನ್ನಿಟ್ಟು ಹೋದನು.

ಹೀಗೆ ಬೆಳೆದ ವೀರಸ್ವಾಮಿಯು ಯೌವನದಿಂದ ಕೂಡಿದವನಾದನು. ಮೂವತ್ತು ವರ್ಷಗಳ ಕಾಲ ಕುಮಾರನಾಗಿ ಬೆಳೆದ ವೀರಸ್ವಾಮಿಯು ಒಮ್ಮೆ ಸಂಸಾರದ ಬಗ್ಗೆ ವೈರಾಗ್ಯವನ್ನು ತಳೆದನು. ಜಿನನು ವರ್ಧಮಾನನನ್ನು ತಾಯ್ತಂದೆಯರಿಂದ ಬೇರೆ ಮಾಡಿ ನಾಥಷಂಡವೆಂಬ ಉದ್ಯಾನದಲ್ಲಿ ಇರಿಸಿ ಹೋದನು. ಅಲ್ಲಿ ವರ್ಧಮಾನನು ಜಿನದೀಕ್ಷೆಯನ್ನು ಕೈಗೊಂಡನು. ದೀಕ್ಷೆಯ ನಂತರದ ಉಪವಾಸದ ಮೇಲೆ ವೀರಸ್ವಾಮಿಯು ಅಲ್ಲಿಂದ ಹೊರಟು ಕೂಳಪುರವೆಂಬ ನಗರಕ್ಕೆ ಬಂದು ರಾಜನ ಪೂಜೆಯನ್ನು ಸ್ವೀಕರಿಸಿ ಮುಂದೆ ನಡೆದು ವಾರಣಾಸಿಯ ಪ್ರೇತವನಕ್ಕೆ ಬಂದಾಗ ಸೂರ್ಯಾಸ್ತವಾಯಿತು. ಅಲ್ಲಿಯೇ ಆತನು ಪ್ರತಿಮಾಯೋಗದಲ್ಲಿ ನಿಂತನು.

ಅಲ್ಲಿಂದ ಸಂಚಾರ ಹೊರಟ ವರ್ಧಮಾನಸ್ವಾಮಿಯ ವೈತಾಳಿ ನಗರಕ್ಕೆ ಬಂದನು. ಅಲ್ಲಿನ ರಾಜದಂಪತಿಗಳಾದ ಚೇಟಕ–ಸುಭದ್ರೆಯರ ಕೊನೆಯ ಪುತ್ರಿ ಚಂದನೆಯೆಂಬುವವಳನ್ನು ವಿದ್ಯಾಧರನೊಬ್ಬನು ಮೋಹಿಸಿ ಎತ್ತಿಕೊಂಡು ಹೋಗಿ ಅವಳು ತನಗೆ ಒಲಿಯದ್ದರಿಂದ ಕೋಪಗೊಂಡು ಅಡವಿಯಲ್ಲಿ ಬಿಟ್ಟುಹೋದನು. ಹೇಗೋ ಅವಳು ವೃಷಭದತ್ತನೆಂಬ ಬ್ರಾಹ್ಮಣನ ಮನೆಯನ್ನು ಸೇರಿದಳು. ಇಂತಹ ಚೆಲುವೆಯನ್ನು ತನ್ನ ಗಂಡನು ಮೋಹಿಸಬಹುದೆಂದು ಆ ಬ್ರಾಹ್ಮಣನ ಹೆಂಡತಿಯು ಚಂದನೆಯನ್ನು ಬಂಧನದಲ್ಲಿರಿಸಿದಳು. ಅಲ್ಲಿಗೆ ವೀರಸ್ವಾಮಿಯು ಬಂದಾಗ ಅವಳ ಸಂಕಲೆಯು ಹರಿಯಿತು. ವೃಷಭದತ್ತನು ಕನ್ಯೆಯ ವಿಚಾರವನ್ನು ತಿಳಿದು ಅವಳನ್ನು ಚೇಟಕನೆಡೆಗೆ ಕರೆದೊಯ್ದು ಬಿಟ್ಟನು.

ಇತ್ತ ಮಹಾವೀರ ಸ್ವಾಮಿಯು ಜಂಭಕ ಗ್ರಾಮದಲ್ಲಿ ರುಜುಕುಳಾ ನದೀ ತೀರದ ಶಾಲಿ ವೃಕ್ಷದಡಿ ಪ್ರತಿಮಾಯೋಗದಲ್ಲಿ ತಪಸ್ಸಿಗೆ ನಿಂತನು. ದೇವತೆಗಳೆಲ್ಲರೂ ಬಂದು ಜಿನೇಂದ್ರನನ್ನು ಸ್ತುತಿಸಿದರು. ಅನಂತರ ವರ್ಧಮಾನ ತೀರ್ಥಂಕರನು ವಿಹಾರಿಸುತ್ತ ಅನೇಕ ದೇಶಗಳನ್ನು ಸಂದರ್ಶಿಸಿ ಪಾವಾಪುರಕ್ಕೆ ಬಂದನು. ಅಲ್ಲಿ ಸಮವಸವಸರಣನ್ನು ವಿಸರ್ಜಿಸಿ ಒಂದು ಕಲ್ಲು ಬಂಡೆಯ ಮೇಲೆ ಪ್ರತಿಮಾ ಯೋಗದಲ್ಲಿ ನಿಂತು, ಕೊನೆಗೆ ಕಾರ್ತಿಕ ಬಹುಳ ಚತುರ್ದಶಿಯಂದು ಬೆಳಗಿನ ಜಾವದಲ್ಲಿ ನಿರ್ವಾಣಹೊಂದಿದನು, ಇಂದ್ರನು ಅಮರರ ಸಮೇತ ಬಂದು ಜಿನನ ಪರಿನಿರ್ವಾಣ ಕಲ್ಯಾಣವನ್ನು ನೆರವೇರಿಸಿದನು.

ನಾಗವರ್ಮನ ಈ ಕಥಾಸರಣಿಯ ಮೇಲೆ ಇಂದ್ರಭೂತಿಯ 'ಮಹಾಪುರಾಣ' ವಲ್ಲದೆ ಗುಣಭದ್ರಾಚಾರ್ಯನ 'ಉತ್ತರ ಪುರಾಣ' ಹಾಗೂ ಅಸಗನ 'ವರ್ಧಮಾನ ಪುರಾಣ'ಗಳು ಪ್ರಭಾವವನ್ನು ಬೀರಿವೆ. ಕವಿಯು ಪುರಾಣವನ್ನು ಸಂಪ್ರದಾಯಕ್ಕನು ಗುಣವಾಗಿ ರಚಿಸಿರುವುದರಿಂದಾಗಿ ಅವನಲ್ಲಿ ಸ್ವಾತಂತ್ರ್ಯವನ್ನು ನಾವು ಕಾಣಲಾರೆವು. ಎಲ್ಲ ಪುರಾಣಕಾರರಂತೆ ನಾಗ ವರ್ಮನೂ ಈ ಕಾವ್ಯರಚನೆಯಲ್ಲಿ ಹೆಚ್ಚು ಸ್ವಾತಂತ್ರ್ಯವನ್ನು ವಹಿಸಿಲ್ಲ. ಆದರೆ ಅಲ್ಲಲ್ಲಿ ಈ ಕವಿಯ ಉತ್ತಮ ಕಾವ್ಯರಚನೆಯನ್ನು ನಾವು ಕಾಣಬಹುದಾಗಿದೆ.

ವಿಶಾಖನಂದಿಯ ಮನಸ್ಸು ಶ್ರೇಷ್ಠವಾದುದರಿಂದ ದೂರವಾಗಿ ಕೀಳು

ವಸ್ತುಗಳಿಂದ ಆಕರ್ಷಿತವಾದದ್ದನ್ನು ಕವಿಯು ವರ್ಣಿಸಿರುವ ರೀತಿಯು ಸಹಜವಾಗಿದೆ:

> **ಗುರುವಚನಾಮೃತಂ ತನಗೆ ನಂಜಿನ ಲೆಕ್ಕಮದಾದುದು, ಇಚ್ಚೆಕಾ**
> **ಱರ ವಿಷ ನಿರ್ವಿಶೇಷವಚನಂ ಸರಸಾಮೃತರೂಪಮಾದುದು, ಅ**
> **ನ್ಯರೆ ತನಗಾಪ್ತರ್ ಆಪ್ತರೆ ಬಹಿಷ್ಕೃತರಾದರೆನಿಪ್ಪಿನಂ ನಿಜಾ**
> **ಚರಿತಮದೆಕ್ಕಸಕ್ಕಮ ಯಥಾಯಿತಮಾಯ್ತು ವಿಶಾಖನಂದಿಯಾ** (ವರ್ಧ.ಪು. ೨-೨೬)

(ಹಿರಿಯರ ಮಾತುಗಳು ಅವನಿಗೆ ವಿಷಸಮಾನವಾಯಿತು, ಅಸೆಬುರಕರ ವಿಷಪೂರಿತವಾದ ವಚನಗಳು ಅವನಿಗೆ ಮಧುರವಾದವು, ಬೇರೆಯವರೇ ತನ್ನ ಆಪ್ತರು, ಆಪ್ತರು ತನಗೆ ದೂರದವರು ಎನಿಸುವಷ್ಟರ ಮಟ್ಟಿಗೆ ವಿಶಾಖ ನಂದಿಯ ನಡವಳಿಕೆಯು ಇತರರ ಕರುಬಿನ ಮಾತುಗಳಿಂದ ಹೊಲಸಾಯಿತು.)

ಸಾವಿನ ಅನಿವಾರ್ಯತೆಯನ್ನು ಹೇಳುವ ಸನ್ನಿವೇಶದಲ್ಲಿ ಕವಿಯು ಅತ್ಯಂತ ಸಹಜವಾಗಿ ಮಾತನಾಡುತ್ತಾನೆ:

> **ಜವನೆಂಬ ಕರಿಗೆ ಕಟ್ಟಿದ**
> **ಕವಳಂ, ಜವನೆಂಬ ತುಂಬಿಗೆ ಅಂಬುಜದ ರಜಂ,**
> **ಜವನೆಂಬ ಪುಲಿಗೆ ವನ್ಯಮೃಗ**
> **ನಿವಹಂ, ವಿವಿಧಾಜವಂಜದ ಪ್ರಾಣಿಗ(ಳಾ)** (ವರ್ಧ.ಪು. ೫-೧೭)
>
> **ಪುಟ್ಟಲೊಡಂ ಸಾಯಲ್ಕಡಿ**
> **ಯಿಟ್ಟಪ್ಪುದು ಸಾಯಲೊಡನೆ ಪುಟ್ಟಲ್ ನೆಱೆಗುಂ:**
> **ಪುಟ್ಟುಂ ಸಾವುಂ ಇವಿಂತೆಡೆ**
> **ಗೊಟ್ಟೊಡವುಟ್ಟಿದವು ದೇಹೀಗೀ ಸಂಸೃತಿಯೊಳ್** (ವರ್ಧ.ಪು. ೫-೧೮)

(ಪ್ರಾಣಿಗಳ ನಾನಾ ಜನ್ಮಗಳು ಯಮನೆಂಬ ಆನೆಗೆ ಹಾಕಿದ ಆಹಾರ, ಯಮನೆಂಬ ದುಂಬಿಗೆ ಆಹುತಿಯಾಗುವ ತಾವರೆಯ ಪರಾಗಗಳು, ಯಮನೆಂಬ ಹುಲಿಗೆ ಬಲಿಯಾಗುವ ವನ್ಯಮೃಗಗಳು. ಮನುಷ್ಯನಿಗೆ ಸಂಸಾರದಲ್ಲಿ ಹುಟ್ಟು ಸಾವುಗಳು ಒಂದಾದ ಮೇಲೊಂದು ಬರುತ್ತವೆ: ಹುಟ್ಟಿದ ಕ್ಷಣವೇ ಸಾವಿನೆಡೆ ಸಾಗುತ್ತದೆ ಈ ಜೀವ, ಸತ್ತನಂತರ ಮತ್ತೆ ಹುಟ್ಟಲು ಸಿದ್ಧವಾಗುತ್ತದೆ.)

ಆದರೆ ಈ ಬಗೆಯ ಸಹಜ ಸುಂದರ ವರ್ಣನೆಗಳು ಬಹಳವಿಲ್ಲವೆನ್ನುವುದೆ ನಮ್ಮ ಕೊರಗು. ಅಲ್ಲದೆ ಎರಡನೆಯ ಆಶ್ವಾಸದಲ್ಲಿ ಬರುವ ಸೂಳೆಗೇರಿಯ ವರ್ಣನೆಯು ಇಂತಹ ತೀರ್ಥಂಕರ ಪುರಾಣದಲ್ಲಿ ಅನವಶ್ಯಕವಾದುದು. ಇದಕ್ಕೆ ಕಾರಣ ಕವಿಯು ಒಂದೆಡೆ ಪುರಾಣ ಸಂಪ್ರದಾಯಕ್ಕೂ ಮತ್ತೊಂದೆಡೆ ಸಾಂಪ್ರದಾಯಿಕ ಕಾವ್ಯಲಕ್ಷಣಗಳಿಗೂ ಬಲಿಬಿದ್ದಿರುವುದು. ಈ ಕವಿಯು ಒಳ್ಳೆಯ ಜೈನಪುರಾಣವೊಂದನ್ನು ರಚಿಸಿದ್ದಾನೆ; ಅದರಲ್ಲಿಯೂ ಕನ್ನಡದಲ್ಲಿನ ಮೊದಲನೆಯ ವರ್ಧಮಾನ ಪುರಾಣವಾದದ್ದರಿಂದ ಇದಕ್ಕೆ ಬೆಲೆಯಿದೆ. ಆದರೆ ಕೇವಲ ಸಂಪ್ರದಾಯಬದ್ಧನಾದರೆ ಶ್ರೇಷ್ಠ ಕಾವ್ಯನ್ನು ರಚಿಸಲು ಸಾಧ್ಯವಿಲ್ಲ. ಕವಿಯ ಭಾಷೆಯು ಕೆಲವೆಡೆಗಳಲ್ಲಿ (ಮೇಲೆ ಉದಹರಿಸಿರುವ ಸಾವಿನ ಅನಿವಾರ್ಯತೆಯ ವರ್ಣನೆಯಂತಹವು

ಸಹಜ ಸುಲಭವಾಗಿದೆ; ಆದರೆ ಹಲವೆಡೆಗಳಲ್ಲಿ ಪ್ರೌಢವಾಗಿದೆ. ಛಂದಶ್ಶಾಸ್ತ್ರ ಗ್ರಂಥವನ್ನು ರಚಿಸಿರುವ ನಾಗವರ್ಮನು ತನ್ನ ಆ ಶಾಸ್ತ್ರಪಾಂಡಿತ್ಯಕ್ಕೆ ತಕ್ಕಂತೆ ಕೆಲವು ಅಪರೂಪದ ವೃತ್ತಗಳನ್ನು ಬಳಸಿದ್ದಾನೆ. (ಈ ಕವಿಯು ಇಲ್ಲಿ ಒಟ್ಟು ೩೩ ಬಗೆಯ ವಿವಿಧ ವೃತ್ತಗಳನ್ನು ಉಪಯೋಗಿಸುತ್ತಾನೆ.) ಒಟ್ಟಿನಲ್ಲಿ ಇದೊಂದು ಸಾಮಾನ್ಯ ಕಾವ್ಯ, ಸಾಂಪ್ರದಾಯಿಕ ಜೈನಪುರಾಣ. ಇದರ ಮಹತ್ವವಿರುವುದು ಅದರ ಐತಿಹಾಸಿಕತೆಯಲ್ಲಿ.

ಶಾಂತಿನಾಥ

ಬನವಸೆ ಪ್ರಾಂತ್ಯವನ್ನು ಕ್ರಿ.ಶ. ೧೦೬೫ರಿಂದ ೧೦೬೮ರವರೆಗೆ ಮಹಾ ಮಂಡಲೇಶ್ವರನಾಗಿ ಆಳಿದ ಲಕ್ಷ್ಮಣರಾಜನ ಆಶ್ರಯದಲ್ಲಿ ಶಾಂತಿನಾಥನೆಂಬ ಜೈನಕವಿಯೊಬ್ಬನಿದ್ದ. ಈ ಲಕ್ಷ್ಮಣರಾಜನು ಚಾಳುಕ್ಯ ಚಕ್ರವರ್ತಿಗಳಾದ ತ್ರೈಲೋಕ್ಯಮಲ್ಲ ಸೋಮೇಶ್ವರ ಹಾಗೂ ಭುವನೈಕಮಲ್ಲ ಸೋಮೇಶ್ವರರ ವಿಶ್ವಾಸಕ್ಕೆ ಹೆಚ್ಚು ಪಾತ್ರವಾಗಿದ್ದನು. ಪ್ರಾಯಶಃ ಶಾಂತಿನಾಥನು 'ಸುಕುಮಾರ ಚರಿತೆ' ವೆಂಬ ಕಾವ್ಯವನ್ನು ಬರೆದ ಮೇಲೆ ಅವನು ಲಕ್ಷ್ಮಣ ರಾಜನ ಆಶ್ರಯಕ್ಕೆ ಬಂದನು. ಈ ಕವಿಯ ತಂದೆ ಗೋವಿಂದರಾಜ; ವರ್ಧಮಾನ ಯತಿಗಳೆಂಬುವರು ಇವನ ಗುರುಗಳು. ಇವನಿಗೆ ರೇವಣನೆಂಬ ತಮ್ಮನೂ ಕರ್ಣಪಾರ್ಯನೆಂಬ ಅಣ್ಣನೂ ಇದ್ದರೂ. ಶಾಂತಿನಾಥನಿಗೆ ರಾಜಹಂಸ, ಚತುರಕವಿ, ಸರಸ್ವತೀಮುಖಮುಕುರ ಇತ್ಯಾದಿ ಬಿರುದುಗಳಿದ್ದವು. ಇವನು ದೊಡ್ಡ ಸಂಸ್ಕೃತ ಪಂಡಿತನೂ ಆಗಿದ್ದನೆಂಬುದು ಇವನ ಪ್ರೌಢವಾದ ಶೈಲಿಯಿಂದಲೇ ಗೊತ್ತಾಗುತ್ತದೆ. ಅವನ ಕೃತಿ 'ಸುಕುಮಾರ ಚರಿತೆ' ಎಂಬುದೊಂದೇ. ಇದಕ್ಕೆ ಬಹುಶಃ ಹರಿಷೇಣನೆಂಬ ರವಿಯ 'ಬೃಹತ್ಕಥಾಕೋಶ'ವೆಂಬ ಸಂಸ್ಕೃತ ಗ್ರಂಥದಲ್ಲಿ ಬರುವ ಸುಕುಮಾರನ ಕಥೆಯೂ ವಡ್ಡಾರಾಧನೆಯೆಂಬ ಕನ್ನಡ ಗದ್ಯಕಥಾಸಂಕಲನದ 'ಸುಕುಮಾರಸ್ವಾಮಿಯ ಕಥೆ' ಎಂಬ ಕತೆಯೂ ಈ ಕಾವ್ಯಕ್ಕೆ ಮೂಲ. ಸಂಸ್ಕೃತದಲ್ಲಿ ೨೬೦ ಶ್ಲೋಕಗಳಲ್ಲಿ ಹಾಗೂ ಕನ್ನಡದಲ್ಲಿ ಮೂವತ್ತು ಪುಟಗಳಲ್ಲಿ ಇರುವ ವಸ್ತುವನ್ನು ಶಾಂತಿನಾಥನು ಒಂದು ಸಾವಿರ ಪದ್ಯಗಳಲ್ಲಿ ಹಿಗ್ಗಲಿಸಿದ್ದಾನೆ. ಇದು ತಕ್ಕಮಟ್ಟಿಗೆ ಚೆನ್ನಾಗಿಯೇ ನಡೆದಿದೆ.

ಸುಕುಮಾರಸ್ವಾಮಿಯ ಕತೆಯು ತುಂಬ ಸುಂದರವಾದುದೂ ಜೈನ ಸಾಹಿತ್ಯದಲ್ಲಿ ತುಂಬ ಪ್ರಸಿದ್ಧವಾದುದೂ ಆಗಿದೆ. ಕೌಶಂಬೀನಗರದ ದೊರೆ ಅತಿಬಳ. ಅವನ ಮಂತ್ರಿ ಸೋಮಶರ್ಮ, ಅವನಿಗೆ ಅಗ್ನಿಭೂತಿ–ವಾಯುಭೂತಿಯರೆಂಬ ಇಬ್ಬರು ಮಕ್ಕಳು ಇವರು ಉಂಡಾಡಿಗಳು. ಸಪ್ತವ್ಯಸನಗಳಲ್ಲಿ ತೊಡಗಿ ಹಾಳಾದವರು. ಇವರು ಕಾಲಕಳೆದುದನ್ನು ಕವಿ ತಿಳಿಸುವ ರೀತಿಯು ಸಹಜವಾಗಿದೆ.

ನಗರಭ್ಯಂತರ ದೇವತಾಭವನದೊಳ್ ಚೌವಟ್ಟದೊಳ್ ಬೀದಿವೀ
ದಿಗಳೊಳ್ ಜೂಜಿನದಿಂಡೆಯೊಳ್ ತಗರಕೇಳೀವಿದ್ಯೆಯೊಳ್ ದುರ್ಜನೋ
ಪಗತೋದ್ದೇಶದೊಳಂ ಪಣ್ಯವರ್ಮವೀಥಿವ್ರಾತದೊಳಮಾವಗಂ
ತಗುಣಾತ್ಮರ್ ವಿನಯ ಪ್ರಹೀಣರವಿನೀತರ್ ನೀತಿಗೆಟ್ಟಾಡುವರ್ (ಸು.ಚ. ೨.೭)

(ಊರ ಹೊರಗಿನ ಒಳಗಿನ ಗುಡಿಗಳಲ್ಲಿ ಬೀದಿಗಳು ಸೇರುವ ಕೇಂದ್ರಗಳಲ್ಲಿ ಬೀದಿ

ಬೀದಿಗಳಲ್ಲಿ ಅಲೆದು ಜೂಜು ತಗರು ಕಾಳಗಗಳಲ್ಲಿ ಆಸಕ್ತಿ ವಹಿಸಿ ದುರ್ಜನರ ಸಹವಾಸದಲ್ಲಿದ್ದು ಸೂಳೆಯರ ಲೋಹಕರ್ಮಿಗಳ ಬೀದಿಗಳಲ್ಲಿ ಕಾಲಕಳೆಯುತ್ತಿದ್ದರು.)

ತಂದೆ ಕಡಂಗಿ ಕಲ್ಪಿಸುವ ವಿದ್ಯೆಯನೊಲ್ಲದೆ. ತಾಯ್ಮಗುಬ್ಬು ನಿ
ರ್ವಂದದಿನೆಯ್ದೆ ಬಗ್ಗಿಸುವ ಬಗ್ಗಣೆಗಳ್ಕದೆ, ಮಿತ್ರವರ್ಗಮೇ
ನೆಂದೊಡಮೆಂದುದಂ ನೆಗಟದೆ, ಉದ್ಧತಿಯಿಂದಮವಂದಿರುರ್ಕಿದ
ಕ್ಕುಂದಲೆವಾಯ್ವರಂತುಟೆ ಬಹುವ್ಯಸನಾರ್ತರನಾರೋ ಬಾರಿಪರ್ (ಸು.ಚ. ೨.೭)

(ತಂದೆ ಕಾತರತೆಯಿಂದ ಕಲಿಸುವ ವಿದ್ಯೆಯನ್ನು ಕಲಿಯದೆ, ತಾಯಿಯು ಬಲವಂತವಾಗಿ ಆದರೆ ಪ್ರಿಯವಾಗಿ ಹೇಳುವ ಮಾತುಗಳಿಗೆ ಹೆದರದೆ, ಸ್ನೇಹಿತರು ಏನು ಹೇಳಿದರೂ ಹಾಗೆ ಮಾಡದೆ ದುರಹಂಕಾರದಿಂದ ಶೂಲದ ಕತ್ತಿಗೆ ತಲೆ ಚಚ್ಚಿಕೊಳ್ಳುವಷ್ಟು ಅನಿಷ್ಟ ಚಟಗಳಿಂದ ಕೂಡಿದ್ದರು. ಅವರನ್ನು ಸರಿಪಡಿಸುವವರಾರು?) ಆದ್ದರಿಂದ ತಂದೆ ಸತ್ತಮೇಲೆ ಇವರಿಗೆ ಮಂತ್ರಿ ಪದವಿಯು ದೊರೆಯಲಿಲ್ಲ ಆಗ ಇವರಿಗೆ ಬುದ್ಧಿ ಬಂದಿತು. ತಾಯ ಸಲಹೆಯಂತೆ ದೂರ ದೇಶದಲ್ಲಿದ್ದ ಸೋದರ ಮಾವನಲ್ಲಿಗೆ ಓದು ಕಲಿಯಲು ಹೋಗುತ್ತಾರೆ.

ಸೂರ್ಯಮಿತ್ರನು ತಾನು ಇವರ ಸೋದರಮಾವನೆಂದು ಹೇಳಿ ಕೊಳ್ಳದೆ ಓದನ್ನು ಕಲಿಸಿ ಕೊನೆಗೆ ಈ ವಿಷಯವನ್ನು ತಿಳಿಸಿದ: ಸೋದರ ಮಾವನೆಂದು ತಿಳಿದಿದ್ದರೆ ಮೈ ಬಗ್ಗಿಸಿ ಅವರು ಓದದಿರಬಹುದೆಂಬ ಕಾರಣದಿಂದ ಹಾಗೆ ಮಾಡಿದುದಾಗಿ ತಿಳಿಸಿದ. ಇದರಿಂದ ಅಗ್ನಿಭೂತಿಗೆ ಸಂತೋಷವೇ ಆಯಿತಾದರೂ ವಾಯುಭೂತಿಗೆ ಅಸಮಧಾನ. ಎಷ್ಟೋ ಹಣ ಖರ್ಚು ಮಾಡುವ ಈ ಮಾವನು ತಮ್ಮಿಂದ ಭಿಕ್ಷೆಯೆತ್ತಿಸಿ ಕಷ್ಟಕ್ಕೀಡು ಮಾಡಿದನಲ್ಲ ಎಂಬುದು ಅವನ ಕೋಪಕ್ಕೆ ಕಾರಣ.

ತನಗಿಕ್ಕುವೆಱೆವ ಕರುಣಂ
ಮನದೊಳಮಿನಿತಿಲ್ಲ ಪಾಪಕರ್ಮನವಂ ಮಾ
ವನೆ? ನಮ್ಮ ಕರಕೆಯೊಳ್ಕ
ಲ್ಲನಿಕ್ಕುವಂ ನಿಕ್ಕುವಂ ಪ್ರಭಾಕರಮಿತ್ರಂ (ಸು.ಚ. ೨.೭೦)

(ತನಗೆ ಊಟಕ್ಕೆ ಹಾಕುವ, ತಲೆಗೆ ಎಣ್ಣೆಯೆರೆಯುವ ಕರುಣೆಯು ಅವನ ಮನಸ್ಸಿನಲ್ಲಿ ಸ್ವಲ್ಪವಾದರೂ ಇಲ್ಲ. ಅಂತಹ ಪಾಪಿಯು ಮಾವನೆ? ನಮ್ಮ ಭಿಕ್ಷಾಪಾತ್ರೆಯಲ್ಲಿ ಕಲ್ಲನ್ನು ಹಾಕುವವನು) ಎಂದು ಹೀಯಾಳಿಸುತ್ತಾನೆ. ಮುಂದೆ ಅವರು ತಮ್ಮ ಪಾಂಡಿತ್ಯದಿಂದಾಗಿ ಮಂತ್ರಿ ಪದವಿಯನ್ನು ಪಡೆಯುತ್ತಾರೆ. ಹೀಗಿರಲು ಒಂದು ದಿನ ಕಾರಣಾಂತರದಿಂದ ಸನ್ಯಾಸಿಯಾಗಿದ್ದ ಸೂರ್ಯಮಿತ್ರನು ಇವರ ಊರಿಗೆ ಬರುತ್ತಾನೆ. ಅಗ್ನಿಭೂತಿಯು ಅವನನ್ನು ಗುರುತಿಸಿ ಗೌರವಿಸುತ್ತಾನೆ. ತಮ್ಮನನ್ನೂ ಆಶೀರ್ವದಿಸಬೇಕೆಂದು ವಾಯು ಭೂತಿಯಲ್ಲಿಗೆ ಕರೆತಂದಾಗ ಅವನು ಹಿಂದಿನ ಕೋಪದಿಂದ ಅವನನ್ನು ಅವಮಾನ ಮಾಡುತ್ತಾನೆ. ಇದರಿಂದ ನೊಂದ ಅಗ್ನಿಭೂತಿಯು ಕರ್ಮಕ್ಷಯಕ್ಕಾಗಿ ಏಳು ಜನ್ಮಗಳನ್ನು ತಳೆಯಬೇಕಾಗುತ್ತದೆ. ಕತ್ತೆ, ಹೋತ, ಹಂದಿ, ನಾಯಿ, ಮಾದಿಗ ಕುರುಡು ಹುಡುಗಿ, ಬ್ರಾಹ್ಮಣನ ಮಗಳು,

ಸುಕುಮಾರ ಸ್ವಾಮಿ ಈ ಜನ್ಮಗಳನ್ನು ಅವನು ಪಡೆಯುತ್ತಾನೆ ಮಾದಿಗರ ಮನೆಯಲ್ಲಿ ಹುಟ್ಟು ಗುರುಡಿಯಾಗಿ ಹುಟ್ಟಿದಾಗ ಅವಳ ರೂಪವನ್ನು ಕವಿ ವರ್ಣಿಸಿರುವ ರೀತಿ:

ತಲೆರೋಮಮಂ ಜಡೆಗಟ್ಟೆ ಪೇನಿಟಿಱಿದು ಬಾಯೊಳ್ ತೀವೆ, ಮೆಯ್ ಬಾತ ಬಾ
ವಲನಾತಕ್ಕೆಣೆಯಾಗಿ ನಾಱೆ, ಪಲರುಂ ಚೀಯೆಂಬಿನಂ ಸೂಸಿದೆಂ
ಜಲವುಟ್ಟಗಳನಾವಗಂ ಬೆದಕಿನಿಂದಾ ಬಟ್ಟೆಯೊಳ್ ಬಟ್ಟನೇ
ಟಿಲ ಚೆಂಗಾರೆಯ ಮೆಲ್ದುಗುಳ್ದ ಸಹಕಾರೋಚ್ಚಿಷ್ಟ ಪಕ್ವಂಗಳಂ

(ಸು.ಚ. ೪.೫೭)

(ತಲೆಯ ಕೂದಲು ಜಡೆಗಟ್ಟಿ ಹೇನುಗಳು ಬಾಯಿಗೆ ಇಳಿದು ತುಂಬಿಕೊಂಡಿರಲು, ದೇಹವು ಬಾವಲಿಯ ದೇಹದಂತೆ ಕೆಟ್ಟವಾಸನೆಯಿಂದ ಕೂಡಿರಲು, ಹಲವರು ಛೀಯೆನ್ನುತ್ತಿರಲು ಚೆಲ್ಲಿದ ಎಂಜಲು ಅಗಳುಗಳನ್ನು ಬೆದಕಿ ತಿನ್ನುತ್ತಿಲೂ ನೇರಿಳೆ ಕಾರೆಗಳನ್ನೂ ತಿಂದು ಬಿಸಾಕಿದ ಸಿಹಿಮಾವಿನ ಹಣ್ಣುಗಳನ್ನೂ) ಆರಿಸಿ ತಿನ್ನುತ್ತಿದ್ದಳಂತೆ. ಅವಳನ್ನು ಕಂಡ ಅಗ್ನಿಭೂತಿಯ ಮನಸ್ಸಿನಲ್ಲುಂಟಾದ ಕರುಣೆಯ ಪ್ರವಾಹದ ರೀತಿಯಿದು;

ಇದೇಂ ಬಹುವಿಚಿತ್ರಮೋ ಭವವಿಕಲ್ಪ ವೈಚಿತ್ರ್ಯಮ್, ಇಂ
ತಿದೇನಘಟಮಾನವೊ ವಿಕೃತಘೋರಸಂಸಾರಮ್, ಇಂ
ತದೇಂ ವೃಜಿನಬಂಧಮೋ ಕುಸೃತಿಬಂಧಸಂಬಂಧಮೆಂ
ದದೇಂ ತೆಳೆದನೊ ಮುನಿಪ್ರವರನಾಗಳುದ್ವೇಗಮಂ (ಸು.ಚ. ೪.೬೧)

(ಸಂಸಾರದ ರೀತಿಯು ಇದೆಷ್ಟು ವಿಚಿತ್ರವಾದುದು, ಭಯಂಕವಾದ ಈ ಸಂಸಾರವು ಅಸಾಧ್ಯವಾದುದು, ಕೆಟ್ಟನಡತೆಯಿಂದ ಎಂತಹ ಪಾಪಬಂಧನವಾಗುತ್ತದೆ ಎಂದು ಆ ಮುನಿಯು ಉದ್ವೇಗವನ್ನು ತಾಳುತ್ತಾನೆ.)

ಕೊನೆಯ ಜನ್ಮವಾದ ಸುಕುಮಾರಸ್ವಾಮಿಯ ಜೀವನ ತುಂಬ ನಾಟಕೀಯ ವಾದುದಾಗಿದೆ. ಜೈನಯತಿಗಳನ್ನು ಕಂಡರೆ, ಅವರ ಮಾತು ಕೇಳಿದರೆ ಸನ್ಯಾಸಿಯಾಗು ತ್ತಾನೆಂದು ಜ್ಯೋತಿಷಿಗಳು ಹೇಳಿದ್ದರಿಂದ (ಇಲ್ಲಿ ಬುದ್ಧನ ಕತೆಯ ನೆನಪಾಗುತ್ತದೆ) ಅವನ ತಾಯಿಯು ಯಾವ ಯತಿಯೂ ಯಾವ ರೀತಿಯೂ ಅವನ ಕಣ್ಣಿಗೆ ಬೀಳದಂತೆ ಎಚ್ಚರ ವಹಿಸಿದಳು. ಆದರೆ ಒಮ್ಮೆ ಚಾತುರ್ಮಾಸಕ್ಕೆ ಬಂದ ಯಶೋಭದ್ರ ಸ್ವಾಮಿಗಳು ಊರಿನ ಹೊರ ವಲಯದಲ್ಲಿ ಬಿಡಾರ ಮಾಡಿ ಚಾತುರ್ಮಾಸವನ್ನು ಮುಗಿಸಿ ಒಂದು ಬೆಳಗಿನ ಜಾವ ಧರ್ಮೋನ್ನತಿಯ ಬಗ್ಗೆ ಹಾಡಿದಾಗ ಸುಕುಮಾರ ಸ್ವಾಮಿಯ ಜೀವನವು ಹೊಸ ಹಾದಿಯನ್ನು ತುಳಿಯುತ್ತದೆ. ಅಪಾರ ಐಶ್ವರ್ಯವನ್ನು ಪಡೆದಿದ್ದು ಅತ್ಯಂತ ಕೋಮಲನಾಗಿ ಬೆಳೆದ ಅವನಿಗೆ ಈ ಹಾಡನ್ನು ಕೇಳಿ ಹಿಂದಿನ ಜನ್ಮಗಳ ನೆನಪು ಬಂದು ಯಾರಿಗೂ ಕಾಣದೆ ಮನೆಯಿಂದ ಹೊರಬೀಳುತ್ತಾನೆ. ಆ ಯತಿಗಳಲ್ಲಿ ದೀಕ್ಷೆಯನ್ನು ಪಡೆದು ಸನ್ಯಸನವಿಧಿಯಿಂದ ಮೋಕ್ಷವನ್ನು ಪಡೆಯುತ್ತಾನೆ. ಸುಕುಮಾರನು ಒಂದು ಕ್ಷಣದಲ್ಲಿ ತನ್ನ ಐಶ್ವರ್ಯ–ವೈಭವಗಳನ್ನು ತ್ಯಜಿಸಿದುದನ್ನು ಶಾಂತಿನಾಥ ಕವಿಯು ಈ ರೀತಿ ವರ್ಣಿಸುತ್ತಾನೆ:

ಅಪರಿಮಿತ ಶ್ರೀಯಂ ಕೊಳೆ
ದ ಪುಲ್ಲನೀಡಾಡುವಂತಿರೀಡಾಡಿ ಮಹಾ
ತಪಮಂ ಕೈಕೊಂಡು ಪುಣ್ಯ
ಪದವಿಯಂ ನೆರೆಯೆ ಸೂರೆಗೊಳ್ವಂತಾತಳ್ (ಸು.ಚ. ೧೨.೯)

(ಅತಿಶಯವಾದ ತನ್ನ ಐಶ್ವರ್ಯವನ್ನು ಕೊಳೆತ ಹುಲ್ಲನ್ನು ಕಿತ್ತು ಬಿಸಾಕುವಂತೆ ಬಿಟ್ಟುಬಿಟ್ಟು ಪುಣ್ಯಪದವಿಯನ್ನು ಸೂರೆಮಾಡುವವನಂತೆ ಮಹಾ ತಪಸ್ಸನ್ನು ಕೈಕೊಂಡನು.) ಹೀಗೆ ಬಿಟ್ಟು ಮಹಾಕಾಳವೆಂಬ ಪ್ರದೇಶದಲ್ಲಿ ತಪಸ್ಸು ಮಾಡಲು ಆ ಕೋಮಲನು ಬಂದ ರೀತಿಯಿದು:

ಕಡಕುಂ ಪರಲ್ಗಳುಂ ಮೆ
ಲ್ಲಡಿಗಳನೆಡೆಯುಡುಗದೊತ್ತಿದೆಡೆಯಿಂ ನೆತ್ತರ್
ಬಿಡದೆಚ್ಚು ಪಾಯೆ, ಸಂಯಮಿ
ನಡೆದು ಮಹಾಕಾಳದೊಳಗನಾಗಳ್ ಪೊಕ್ಕಂ (ಸು.ಚ. ೧೨.೧೮)

(ಚಿಕ್ಕ ಕಲ್ಲುಗಳೂ ಹರಳಯಗಳೂ ಮೃದುವಾದ ಅವನ ಕಾಲಿಗೆ ಒತ್ತಿದುದರಿಂದ ರಕ್ತವು ಸುರಿಯುತ್ತಿದ್ದರೂ ಸಂಯಮಿಯಾದ ಸುಕುಮಾರನು ಮಹಾಕಾಳವನ್ನು ಬಂದು ಸೇರಿದನು.)

ಶಾಂತಿನಾಥಕವಿಯು ತನಗೆ ಹಿಂದಿನ ಸುಕುಮಾರನ ಕತೆಯಲ್ಲಿನ ಅನೇಕ ಅಂಶಗಳನ್ನು ಮಾರ್ಪಾಟುಮಾಡಿಕೊಂಡಿದ್ದಾನೆ. 'ವಡ್ಡಾರಾಧನೆ' ಯ ಕತೆಯಲ್ಲಿ ಒಂದೆರಡು ವಾಕ್ಯಗಳಲ್ಲಿ ಸೂಚಿತವಾಗಿರುವ ವಿಷಯಗಳನ್ನು ಅನೇಕ ಕಡೆಗಳಲ್ಲಿ ಜಾಣ್ಮೆ ಯಿಂದ ವಿಸ್ತರಿಸಿದ್ದಾನೆ. ಈ ಕವಿಯ ಭಾಷಾ ಶೈಲಿಯು ಕೆಲವೆಡೆ ಸರಳವಾಗಿದ್ದರೆ ಮತ್ತೆ ಕೆಲವೆಡೆಗಳಲ್ಲಿ ಕೃತಕವೆನ್ನಿಸುತ್ತದೆ. ಶಾಸ್ತ್ರವಿಷಯಗಳನ್ನು ಹೇಳುವಾಗ ಅವನು ಕಠಿಣವಾದ ರೀತಿಯಲ್ಲಿ ಬರೆಯುತ್ತಾನೆ. ಆದರೆ ಇವನು ಅನೇಕ ಕಡೆ ತನ್ಮಯತೆ ಯಿಂದ ಕಾವ್ಯವನ್ನು ರಚಿಸಬಲ್ಲ ಶಕ್ತಿಯುಳ್ಳವ. ಸಂಪ್ರದಾಯದಂತೆ ಅಷ್ಟಾದಶ ವರ್ಣನೆಗಳನ್ನು ತಂದಿದ್ದರೂ ಅವುಗಳನ್ನು ಅತ್ಯಂತ ಸಂಕ್ಷಿಪ್ತವಾಗಿ ಹೇಳಿ ಮುಗಿಸಿ ದ್ದಾನೆ. ಇಲ್ಲಿ ಅವನ ಔಚಿತ್ಯ ಪ್ರಜ್ಞೆಯು ವ್ಯಕ್ತವಾಗುತ್ತದೆ. ಸರಳವಾಗಿ ಬರೆಯಬಲ್ಲ ಶಾಂತಿನಾಥನು ಒಂದು ಕಡೆ ಜಿನನನ್ನು ಪ್ರಾರ್ಥಿಸಿರುವ ರೀತಿಯು ಎಷ್ಟು ಹೃದಯಂಗಮವಾಗಿದೆ ನೋಡಿ:

ಕಿವಿಗಳ್ ನಿನ್ನ ಮೃದೂಕ್ತಿಯಂ ಬಯಸಿ ಕೇಳುತ್ತಿರ್ಕೆ, ಕಣ್ಗಳ್ ಮಹೋ
ತ್ಸವದಿಂ ನಿನ್ನೆ ನೋಡುತಿರ್ಕೆ, ಸಲೆ ಕೈಗಳ್ ನಿನ್ನ ಪಾದಾರವಿಂ
ದವನ್ ಓತು ಅರ್ಚಿಸುತಿರ್ಕೆ, ಸಂದ ಮನಮೆಂದುಂ ನಿನ್ನ ದಿವ್ಯಸ್ವರೂ
ಪವನಾರಾಧಿಸುತಿರ್ಕೆ ವಿಶ್ರುತವಿನೇಯಸ್ವಾರ್ಥ ಚಿಂತಾಮಣೀ (ಸು.ಚ. ೮-೬೨)

(ಪರಮ ಶ್ರೇಷ್ಠ ತೀರ್ಥಂಕರನೇ, ನನ್ನ ಕಿವಿಗಳು ಸದಾ ನಿನ್ನ ವಿಷಯದ ಮಾತು ಗಳನ್ನೇ ಕೇಳುವಂತಾಗಲಿ, ನನ್ನ ಕೈಗಳು ನಿನ್ನ ಪಾದಕಮಲಗಳನ್ನು ಪೂಜಿಸು ವಂತಾಗಲಿ, ನನ್ನ ಮನಸ್ಸು ಸದಾ ನಿನ್ನನ್ನೇ ಧ್ಯಾನ ಮಾಡುವಂತಾಗಲಿ.)

ಪಂಪ-ರನ್ನರಂತಹ ಶ್ರೇಷ್ಠ ಕವಿಗಳು ಮೈವೆತ್ತು ಬಂದ ಹತ್ತನೆಯ ಶತಮಾನದೊಡನೆ ಹೋಲಿಸಿದಾಗಲಾಗಲೀ, ಮುಂದಿನ ಶತಮಾನವಾದ ಹನ್ನೆರಡನೆಯ ಶತಮಾನದಲ್ಲಿ ಬಂದ ವಚನಗಳ ಜೊತೆಗೆ ಹೋಲಿಸಿದಾಗಲಾಗಲೀ ಹನ್ನೊಂದನೆಯ ಶತಮಾನದ ಸಾಹಿತ್ಯ ತುಂಬ ಸಾಮಾನ್ಯವಾದುದೆನಿಸುವುದು ಸಹಜ. ಆ ಕಾಲದಲ್ಲಿ ಶಾಸ್ತ್ರಗಳೇ ಹೆಚ್ಚಾಗಿ ಬಂದಿತ್ತು. ಭಾವಕ್ಕಿಂತ ಬುದ್ಧಿಗೇ ಪ್ರಾಯಶಃ ಅಲ್ಲಿ ಹೆಚ್ಚು ಗೌರವ. ಆದ್ದರಿಂದ ಈ ಶತಮಾನವನ್ನು ಸಾಹಿತ್ಯದ ದೃಷ್ಟಿಯಿಂದ ಬರಡುಗಾಲವೆಂದು ಕರೆಯುವುದು ವಾಡಿಕೆ. ಆದರೆ "ಶಾಂತಿನಾಥನ ಕೃತಿ ಆ ಕಾಲದ ಕಾವ್ಯಗಳಲ್ಲಿ ಉತ್ಕೃಷ್ಟವಾದುದು; ಅದು 'ಬರಡುಗಾಲ'ವೆಂಬ ಅಪವಾದವನ್ನು ಕೊಂಚಮಟ್ಟಿಗೆ ಹೋಗಲಾಡಿಸುವ ಸತ್ವವನ್ನುಳ್ಳದ್ದು."[೮]

ನಾಗಚಂದ್ರ

ನಾಗಚಂದ್ರನು ಹನ್ನೊಂದನೆಯ ಶತಮಾನದ ಕೊನೆ ಹಾಗೂ ಹನ್ನೆರಡನೆಯ ಶತಮಾನದ ಮೊದಲಭಾಗದಲ್ಲಿ ಜೀವಿಸಿದ್ದವನು. ಅವನು ವಿಜಯಪುರ (ಈಗಿನ ಬಿಜಾಪುರ)ದಲ್ಲಿ ಮಲ್ಲಿಜಿನೇಂದ್ರ ಬಸದಿಯನ್ನು ಕಟ್ಟಿಸಿದಂತೆ ಕವಿಯೇ ಹೇಳಿದ್ದಾನೆ. ಚಾಲುಕ್ಯ ಚಕ್ರವರ್ತಿಯಾದ ನಾಲ್ವಡಿ ಸೋಮೇಶ್ವರ(೧೧೦೦--೧೧೨೬)ನ ಆಶ್ರಯದಲ್ಲಿ ನಾಗವರ್ಮನು ಇದ್ದನೆಂದು ಕೆಲವು ವಿದ್ವಾಂಸರು ಊಹಿಸಿದರೂ ಅದು ಅಷ್ಟೊಂದು ಪ್ರಬಲ ಆಧಾರಗಳ ಮೇಲೆ ನಿಂತಿಲ್ಲ. ಈತನ ಗುರುಗಳು ಬಾಲಚಂದ್ರ ಮೇಘಚಂದ್ರ ಯತಿಗಳು ಇವನಿಗೆ ಭಾರತೀಕರ್ಣಪೂರ, ಕವಿತಾಮನೋಹರ, ಸಾಹಿತ್ಯ ವಿದ್ಯಾಧರ, ಚತುರಕವಿ, ಜನಸ್ಥಾನರತ್ನಪ್ರದೀಪ, ಸಾಹಿತ್ಯಸರ್ವಜ್ಞ, ಸೂಕ್ತಿಮುಕ್ತಾವತಂಸ ಇತ್ಯಾದಿ ಬಿರುದುಗಳಿದ್ದವು. ಇವನು ಪಂಪ-ಪೊನ್ನ-ರನ್ನರಂತೆ ಎರಡು ಮಹಾಕಾವ್ಯಗಳನ್ನು ರಚಿಸಿದ್ದಾನೆ. ಮಲ್ಲಿನಾಥ ಪುರಾಣ ಮತ್ತು ರಾಮಚಂದ್ರ ಚರಿತ ಪುರಾಣ ಅಥವಾ ಪಂಪರಾಮಾಯಣ. ಈ ಕವಿಯು ತನ್ನನ್ನು 'ಅಭಿನವ ಪಂಪ'ನೆಂದು ಕರೆದುಕೊಂಡು ಸಂತೋಷಪಟ್ಟಿದ್ದಾನೆ. ಇವನ ಕಾವ್ಯಗಳಲ್ಲಿ ಭಕ್ತಿವೈರಾಗ್ಯಗಳೇ ಹೆಚ್ಚಾಗಿ ಕಾಣಿಸುವುದು. ಪಂಪರಾಮಾಯಣವನ್ನೂ ಜೈನಪರಂಪರೆಗೆ ಅನುಸಾರವಾಗಿ ರಚಿಸಿರುವುದರಿಂದ ಪಂಪ-ರನ್ನರ ಭಾರತಗಳಂತೆ ಇದು ಲೌಕಿಕ ಕಾವ್ಯವಲ್ಲ. ಅವನ ಭಾಷೆ ಲಲಿತವೂ ಸರಳವೂ ಆದುದು. ತನ್ನ ಕವಿತಾರಚನೆಯ ಬಗ್ಗೆ ಅವನೇ ಹೇಳಿಕೊಂಡಿರುವ

> **ಪದರಚನೆ ಸಜ್ಜನಶ್ರವ**
> **ಣದೊಳಂಚೆಯ ತುಪ್ಪುಟಿಂಚೆಯಿಂ ತಿರಿಪಿದವೋಲ್**
> **ಮೃದುವೆನೆ ಪೊಸಬಗೆ ರಸಭಾ**
> **ವದೊಳೋಕುಳಿಯಾಡೆ ಪೇಳ್ದನಭಿನವ ಪಂಪಂ** (ಮಲ್ಲಿ.ಪು. ೧.೪೨)

(ಪದರಚನೆ ಸಜ್ಜನರ ಕಿವಿಗೆ ಹಂಸದ ತಪ್ಪುಳದಂತೆ ಕೇಳುವ ಹಾಗೆಯೂ ರಸಭಾವಗಳಲ್ಲಿ ಓಕುಳಿಯಾಡುವಂತೆಯೂ ಅಭಿನವಪಂಪನು ಹೇಳಿದನು.) ಎಂಬ ಮಾತುಗಳಲ್ಲಿ ಸತ್ಯಾಂಶವಿದೆ.

ಮಲ್ಲಿನಾಥಪುರಾಣ

ಇದು ನಾಗಚಂದ್ರನು ಬರೆದ ಮೊದಲನೆಯ ಕಾವ್ಯ. ಇದು ಹತ್ತೊಂಬತ್ತನೆಯ ತೀರ್ಥಂಕರನಾದ ಮಲ್ಲಿನಾಥನ ಚರಿತೆಯನ್ನು ಹೇಳುವ ಪುರಾಣಕಾವ್ಯ. ಹದಿನಾಲ್ಕು ಆಶ್ವಾಸಗಳ ಈ ಕಾವ್ಯದಲ್ಲಿ ಸಂಪ್ರದಾಯಕ್ಕನು ಗುಣವಾದ ಹದಿನೆಂಟು ವರ್ಣನೆಗಳಿವೆ. ಇದರಲ್ಲಿ ಭವಾವಳಿಯ ಗೊಂದಲವಿಲ್ಲದಿರುವುದರಿಂದ ಹೆಚ್ಚು ಜನ ಓದುಗರಿಗೆ ಪ್ರಿಯವಾಗುತ್ತದೆ. ಮೊದಲ ಎಂಟು ಅಶ್ವಾಸಗಳಲ್ಲಿ ಭೋಗದ ವೈಭವದ ಚಿತ್ರಗಳೇ ತುಂಬಿಕೊಂಡಿವೆ; ಕೊನೆಯ ಆರು ಆಶ್ವಾಸಗಳಲ್ಲಿ ಇದಕ್ಕೆ ವಿರುದ್ಧವಾಗಿ ತ್ಯಾಗ–ವೈರಾಗ್ಯಗಳ ಚಿತ್ರಣವಿದೆ. ಕಥೆಯು ತೀರ ಸರಳ: ಕಚ್ಛಾವತಿಯೆಂಬ ರಾಜ್ಯಕ್ಕೆ ವೀತಶೋಕ ಪುರವೆಂಬುದು ರಾಜಧಾನಿ. ಅಲ್ಲಿ ವೈಶ್ರವಣನೆಂಬ ರಾಜನು ವೈಭವದಿಂದ ರಾಜ್ಯಭಾರವನ್ನು ಮಾಡುತ್ತಿರುತ್ತಾನೆ. ಒಮ್ಮೆ ಅವನು ಆಲದಮರವೊಂದು ಸಿಡಿಲಿನ ಕಾರಣದಿಂದ ಉರುಳಿ ಬೀಳುವುದನ್ನು ಕಾಣುತ್ತಾನೆ. ಇದರಿಂದ ಅವನಿಗೆ ಜೀವನದ ನಶ್ವರತೆಯ ಅರಿವುಂಟಾಗಿ ಅವನು ವೈರಾಗ್ಯಪರನಾಗುತ್ತಾನೆ. ತನ್ನ ಮಗನಿಗೆ ರಾಜ್ಯವನ್ನಿತ್ತು ತಾನು ನಾಗಯತಿಯೆಂಬ ಗುರುಗಳಲ್ಲಿ ದೀಕ್ಷೆಯನ್ನು ತೆಗೆದುಕೊಳ್ಳುತ್ತಾನೆ. ಅನಂತರ ಅಪರಾಜಿತ ವಿಮಾನದಲ್ಲಿ ಅಹಮಿಂದ್ರನಾಗಿ ಮುಂದಿನ ಜನ್ಮದಲ್ಲಿ ಮಿಥಿಲಾಪುರದ ರಾಜಕುಮಾರನಾಗಿ ಮಲ್ಲಿನಾಥನೆಂಬ ಹೆಸರಿನಿಂದ ಹುಟ್ಟಿ ವೈರಾಗ್ಯದಿಂದ ಪರಿನಿಷ್ಕ್ರಮಣವನ್ನು ಪಡೆದು ಕೇವಲ ಜ್ಞಾನವನ್ನು ಹೊಂದುತ್ತಾನೆ.

ವೈಶ್ರವಣನು ಕಂಡ ಆಲದಮರವು ಬೀಳುವ ದೃಶ್ಯವನ್ನು ಕವಿಯು ಎಷ್ಟು ಸಮಂಜಸವಾಗಿ ವರ್ಣಿಸುತ್ತಾನೆ ನೋಡಿ:

> **ಸಿಡಿಲೆಂಬ ಜವನ ಕೊಡಲಿಯ**
> **ಕಡುವೊಯ್ಲಿಂ ನೆಗೆದ ಬೇರ್ಗಳೊಡನೆ ನೆಲಂ ಬಾ**
> **ಯ್ವಿಡೆ ಬೆಟ್ಟು ಕೆಡೆವ ತೆರದಿಂ**
> **ಕೆಡೆದಾಲಮನಿದಿರೊಳವನಿಪಾಲಂ ಕಂಡಂ** (ಮಲ್ಲಿ.ಪು. ೯.೫೫)

(ಸಿಡಿಲೆಂಬ ಯಮನ ಕೊಡಲಿಯ ಭಾರಿ ಏಟಿನಿಂದ ಬೇರುಗಳ ಸಮೇತ ಆಲದ ಮರವು ಉರುಳಿದುದರಿಂದ ನೆಲದಲ್ಲಿ ಗುಂಡಿಯಾಯಿತು : ಹೀಗೆ ನೆಲವೇ ಬಾಯ್ಬಿಡುವಾಗ ಬೆಟ್ಟವೇ ಬೀಳುವಂತೆ ಬಿದ್ದ ಮರವನ್ನು ರಾಜನು ಕಂಡನು.) ಇದನ್ನು ಕಂಡ ರಾಜನು ಮಾರನೆಯ ದಿನ ಬೆಳಗಾದುದನ್ನು ಕಂಡಾಗ ಅದು ಅವನಿಗೆ ವಿಶಿಷ್ಟವಾಗಿ ಕಾಣಿಸಿತು. ಅವನ ಮನಸ್ಸಿನಲ್ಲಿ ಆ ಹೊತ್ತಿಗೆ ಆಗಿದ್ದ ಪರಿವರ್ತನೆಯನ್ನು ನಾಗಚಂದ್ರನು ಸಾಂಕೇತಿಕವಾಗಿ ವರ್ಣಿಸುವ ರೀತಿಯು ಅನವ ಉಜ್ವಲ ಪ್ರತಿಭೆಗೆ ನಿದರ್ಶನವಾಗಿದೆ:

> **ಮೂಡಣ ಸಂಜೆ ಕೆಂದಳಿರ ಕಾವಣದಂತಿರೆ, ಚಂದ್ರಮಂಡಳಂ**
> **ಬಾಡಿದ ಮಾಧವೀಮಧುರ ಮಂಜರಿಯಂತಿರೆ, ತಾರಕಾಳಿ ನೀ**
> **ರೋಡಿ ಕಳಲ್ದು ಬೀಳ್ವ ಕಳಿವೂಗೆಸೆಯಾಗಿದೆ. ತಣ್ಣನಪ್ಪೆಲರ್**
> **ತೀಡೆ ತಪೋವನಂಬೊಲತಿ ಪಾವನವಾಯ್ತು ನಭಂ ಪ್ರಭಾತದೊಳ್** (ಮಲ್ಲಿ.ಪು. ೧೦–೧೫)

(ಪೂರ್ವದಲ್ಲಿ ಬೆಳಗಿನ ಕೆಂಪು ಕೆಂಪಾದ ಚಿಗುರಿನ ಚಪ್ಪರದಂತಿದ್ದಿತು: ತನ್ನ ಕಾಂತಿಯನ್ನು ಕಳೆದುಕೊಂಡ ಚಂದ್ರಮಂಡಳವು ಬಾಡಿದ ಮಾಧವೀ ಹೂಗಳ ಗೊಂಚಲಿನಂತಿತ್ತು: ನಕ್ಷತ್ರವು ನೀರು ಕಳೆದುಕೊಂಡು ತೊಟ್ಟು ಕಳಚಿ ಬೀಳುವಂತಿರುವ ಹೂಗಳಂತೆ ಇದ್ದುವು: ಹೀಗಿರುವಾಗ ತಂಪಾದ ಗಾಳಿಯು ಬೀಸುತ್ತಿರಲು ಆಕಾಶವು ತಪೋವನದಂತೆ ಅತ್ಯಂತ ಪವಿತ್ರವಾಯಿತು.) ರಾಜನಿಗೆ ವೈರಾಗ್ಯವುಂಟಾಗುವುದನ್ನೂ ಕವಿ ಮನಮುಟ್ಟುವಂತೆ ವರ್ಣಿಸುತ್ತಾನೆ. ದೇಹದ ನಶ್ವರತೆಯನ್ನು ಕುರಿತ ಈ ಪದ್ಯವನ್ನು ನೋಡಿ:

ತೂಗುವಿನಂ ತಲೆ, ಸೆರೆಗಳ್
ಬೀಗಿ ಕೊರಲ್ ಕುಸಿವಿನಂ. ಕಟಿಲ್ವಿನೆಗಂ ಪಲ್,
ಬಾಗುವಿನಂ ಬೆನ್, ಮನುಜರ
ಮೂಗಿನ ಮೇಲಾಡುವಂ ಜವಂ ಪೆಕ್ಕಣಮಂ (ಮಲ್ಲಿ. ಪು. ೯-೬೫)

(ತಲೆಯು ಬಾಗುತ್ತಿರಲು, ಕಂಠದ ನರಗಳು ದುರ್ಬಲವಾಗಿ ಕೊರಳು ಕುಸಿಯುತ್ತಿರಲು, ಹಲ್ಲು ಬೀಳುವಂತೆ ಬೆನ್ನು ಬಾಗುವಂತೆ ಮಾಡುತ್ತಿರಲು ಯಮನು ಮನುಷ್ಯರ ಮೂಗಿನ ಮೇಲೆಯೇ ಕುಣಿಯುತ್ತಿರುತ್ತಾನೆ.)

ನಾಗಚಂದ್ರನು ಮಾಡುವ ಜಿನಸ್ತುತಿಯು ಅತ್ಯಂತ ಅರ್ಥಪೂರ್ಣವಾಗಿದೆ.

ನಿನಗೆ ರಸಮೊಂದೆ ಶಾಂತಮೆ
ಜಿನೇಂದ್ರ ಮನಮಾ ರಸಾಂಬುಧಿಯೊಳಗಾ
ಹನುಮಿರ್ದು ಮಿಕ್ಕ ರಸಮಂ
ಕನಸಿನೊಳಂ ನೆನೆಯದಂತು ಮಾಡೆನಗರ್ಹಾ (ಮಲ್ಲಿ.ಪು. ೧೦.೧೧೨)

(ಜಿನೇಂದ್ರನೇ, ನಿನಗೆ ಶಾಂತರಸವೊಂದೇ ಇಷ್ಟವಾದದ್ದು. ಆದುದರಿಂದ ಆ ರಸದಲ್ಲಿಯೇ ಸದಾ ಮುಳುಗಿದ್ದು ಮಿಕ್ಕ ರಸಗಳನ್ನು ಕನಸಿನಲ್ಲಿಯೂ ನೆನೆಯದ ಹಾಗೆ ನನ್ನನ್ನು ಅನುಗ್ರಹಿಸು.)

ಸಿಂಗದ ಮಾರ್ದನಿ ಮದಮಾ
ತಂಗಮನಳಜಿಸುವವೋಲ್ ನಿಜಪ್ರತಿಬಿಂಬಂ
ಪಿಂಗದೆ ಮನದೊಳ್ ನಿಂದಿರೆ
ಪಿಂಗಿಸುವುದು ಜನನಮರಣದುಃಖಮನರ್ಹಾ (ಮಲ್ಲಿ.ಪು. ೧೦.೧೨೪)

(ಸಿಂಹದ ಗರ್ಜನೆಯು ಮದ್ದಾನೆಯನ್ನು ಓಡಿಸುವ ಹಾಗೆ ನಿನ್ನ ಪ್ರತಿಬಿಂಬವು ಮನಸ್ಸಿನಲ್ಲಿ ನೆಲೆಯಾಗಿದ್ದರೆ ಜನನಮರಮಣಗಳ ದುಃಖವನ್ನೋಡಿಸುತ್ತದೆ.)

ನಾಗಚಂದ್ರನು ವೈರಾಗ್ಯಪರವಾದ ಇಂತಹ ಭಾವನೆಗಳನ್ನು ಹೇಳುವಂತೆಯೇ ಸುಂದರವಾಗಿ ಕೋಮಲವೂ ಲಲಿತವೂ ಆದ ಭಾವನೆಗಳನ್ನೂ ಹೇಳಬಲ್ಲ. ವಸಂತ ಕಾಲದಲ್ಲಿ ಕಾಮನು ಮಾವಿಗೂ ಮಲ್ಲಿಗೆಗೂ ಮದುವೆಯನ್ನು ಮಾಡಿಸಿದ ದೃಶ್ಯವಿದು:

ಕಲಶಂ ಪದ್ಮಾಕರಂ, ಕನ್ನಡಿ ಹಿಮರುಚಿ, ಕಾಮಾಗ್ನಿ ಹೋಮಾಗ್ನಿ, ಪುಂಸ್ಕೋ
ಕಿಲನಾದಂ ವೇದಮಂತ್ರಂ, ಕುಡಿಗಡಿ ಮಧು ಮೌಹೂರ್ತಿಕಂ, ಪೂತವಲ್ಲೀ

ಕುಲಮೆಲ್ಲಂ ನಿಬ್ಬಣಂ ಬಂದಬಲೆಯರೆನೆ ಚೂತಂಗಮಾ ಮಲ್ಲಿಕಾಕೋ
ಮಲೆಗಂ ಕೊಂಡಾಡಿ ಕೈನೀರೆಜೆದಿನತನು ಲಾವಣ್ಯ ಪುಣ್ಯಾಂಬುವಿನಂ
(ಮಲ್ಲಿ.ಪು. ೧.೪೨)

(ಸರೋವರನೇ ಕಳಶ, ಹಿಮದ ಕಾಂತಿಯೇ ಕನ್ನಡಿ, ಕಾಮಾಗ್ನಿಯೇ ಹೋಮದ ಬೆಂಕಿ, ಗಂಡು ಕೋಗಿಲೆಯ ಕೂಗು ವೇದಮಂತ್ರಘೋಷ, ಚಿಗುರು ಧ್ವಜ, ವಸಂತನೇ ಜ್ಯೋತಿಷಿ, ಹೂಬಿಟ್ಟ ಬಳ್ಳಿಗಳ ಸಮೂಹವು ಮದುವೆಗೆ ಬಂದಿರುವ ದಿಬ್ಬಣದವರು–ಎನ್ನುವಂತಿರಲು ರಾಮನು ಮಾವಿಗೂ ಮಲ್ಲಿಕಾಲತೆಗೂ ಸೌಂದರ್ಯವೆಂಬ ನೀರಿನಿಂದಲೇ ಧಾರೆಯೆರೆದು ಮದುವೆ ಮಾಡಿದನು.) ಹಾಗೆಯೇ ಗಿಳಿಗಳ ಒಂದು ಚಿತ್ರವು ಎಷ್ಟು ಕೋಮಲವಾಗಿದೆ ನೋಡಿ:

ಬಳಸಿ ಸುಟಿದಾಡಿ ಕಾಲ್ವಿಡಿ
ದೆಳಸಿ ಕಳಾಳಾಪಮೊದವೆ ಜನನಿಯ ಮೊಲೆವಾ
ಲ್ಗಳನುಂಬ ಸಿಸುವಿನಂತಿರೆ
ಕಳಮೆಯ ಪಾಲ್ದೆನೆಯ ಪಾಲನುಂಡವು ಗಿಳಿಗಳ್ (ಮಲ್ಲಿ.ಪು. ೮.೧೦೭)

(ತಾಯಿಯ ಸುತ್ತ ಓಡಾಡಿ ಕಾಲುಗಳನ್ನು ಹಿಡಿದುಕೊಂಡು ಇಂಪಾದ ಧ್ವನಿಯಿಂದ ತೊದಲುತ್ತ ತಾಯಿಯ ಹಾಲನ್ನು ಕುಡಿಯಲು ತೊಡಗುವ ಮಕ್ಕಳ ಹಾಗೆ ಗಿಳಿಗಳು ಬತ್ತದ ಹಾಲುತೆನೆಯ ಹಾಲನ್ನು ಹೀರಿದವು.)

ಪಂಪರಾಮಾಯಣ

ನಾಗಚಂದ್ರನ ಕೀರ್ತಿಯು ನಿಂತಿರುವುದು 'ಪಂಪರಾಮಾಯಣ'ವೆಂದು ಜನಪ್ರಿಯವಾಗಿರುವ 'ರಾಮಚಂದ್ರ ಚರಿತಪುರಾಣ'ದ ಮೇಲೆ. ಇದರಲ್ಲಿ ಜೈನ ಪರಂಪರೆಗೆ ಅನುಗುಣವಾಗಿ 'ಉದಾತ್ತರಾಘವ'ನ ಕತೆಯು ವರ್ಣಿತವಾಗಿದೆ. ಇಲ್ಲಿನ ರಾಮನು ಜೈನರ ತ್ರಿಷಷ್ಟಿಶಲಾಕಾಪುರಷರಲ್ಲಿ ಒಬ್ಬನಾದ ಬಲದೇವ; ಲಕ್ಷ್ಮಣನು ವಾಸುದೇವ; ರಾವಣನು ಪ್ರತಿ ವಾಸುದೇವ. ರಾವಣನನ್ನು ಕೊಲ್ಲುವವನು ಲಕ್ಷ್ಮಣನೇ ಹೊರತು ರಾಮನಲ್ಲ. ಸೀತೆಯು ಅಯೋನಿಜೆಯಲ್ಲ; ಪ್ರಭಾ ಮಂಡಲನ ತಂಗಿ, ಜನಕನ ಔರಸ ಪುತ್ರಿ. ಸುಗ್ರೀವ ಹನುಮಂತಾದಿಗಳು ಕಪಿಗಳೇ ಅಲ್ಲ, ಕಪಿಧ್ವಜರು; ಇವರು ಸಮುದ್ರವನ್ನು ಹಾರುವುದು ಆಕಾಶಗಾಮಿನೀ ವಿದ್ಯೆಯಿಂದ. ಈ ಕಪಿಧ್ವಜರು ರಾಕ್ಷಸರ ಬಂಧುಗಳು, ಹನುಮಂತನು ರಾವಣನ ತಂಗಿಯ ಅಳಿಯ, ರಾವಣನು ಖೇಚರರಾಜನೇ ವಿನಾ ರಾಕ್ಷಸನಲ್ಲ. ಇಲ್ಲಿ ಹನುಮಂತ ಸಂಸಾರಿ. ಇಲ್ಲಿ ಪುತ್ರಾಕಾಮೇಷ್ಟಿಯಾಗ, ಚಿನ್ನದ ಜಿಂಕೆಯ ಪ್ರಸಂಗ, ಮಂಥರೆಯ ಪ್ರಸಂಗ ಇತ್ಯಾದಿಗಳಾವುದೂ ಇಲ್ಲ. ಇಂತಹ ಅನೇಕ ಸೂಕ್ಷ್ಮ ವ್ಯತ್ಯಾಸಗಳಿಂದ ಕೂಡಿ ವಾಲ್ಮೀಕಿ ರಾಮಾಯಣಕ್ಕಿಂತ ಭಿನ್ನವಾದ ಜೈನ ಪರಂಪರೆಯ ಈ ರಾಮಾಯಣವನ್ನು ವಿಮಲಸೂರಿ, ರವಿಷೇಣ, ಹೇಮಚಂದ್ರ ಮುಂತಾದ ಸಂಸ್ಕೃತ–ಪ್ರಾಕೃತ ಕವಿಗಳು ಹಿಂದೆಯೇ ರಚಿಸಿದ್ದರು. ಅವರ ಮಾರ್ಗದಲ್ಲಿಯೇ ನಾಗಚಂದ್ರನೂ ನಡೆದಿದ್ದಾನೆ.

ನಾಗಚಂದ್ರನ ಈ ಕಾವ್ಯದಲ್ಲಿ ನಮ್ಮನ್ನು ಬಹುವಾಗಿ ಆಕರ್ಷಿಸುವುದೇನೆಂದರೆ ರಾವಣನ ಪಾತ್ರ. ರಾವಣನು ಇಲ್ಲಿ ಒಬ್ಬ ಮಹಾಪುರುಷ. 'ಪರಾಂಗನಾವಿರತಿ ವ್ರತ'ವನ್ನು ಕೈಹಿಡಿದವನು. ಬೇರೆಯ ಸ್ತ್ರೀಯನ್ನು ಬಯಸದ ವ್ರತವಿದು. ಅವನ ಈ ಸಂಯಮವನ್ನು ಚಿತ್ರಿಸಲು ನಾಗಚಂದ್ರನಿಂದ ಒಂದು ಪ್ರಸಂಗ: ರಾವಣ ತನ್ನ ಪೌರುಷವನ್ನು ಮೆರೆಯುವುದಕ್ಕಾಗಿ ದಿಗ್ವಿಜಯವನ್ನು ಕೈಗೊಂಡಿದ್ದಾಗ ನಳಕೂಬರ ನೆಂಬ ದಿಕ್ಪಾಲಕನ ನಗರವಾದ ದುರ್ಲಂಘ್ಯಪುರಕ್ಕೆ ಮುತ್ತಿಗೆ ಹಾಕುತ್ತಾನೆ. ಆದರೆ ಅದು ಅಭೇಧ್ಯವಾದದ್ದರಿಂದ ಅದನ್ನು ವಶಪಡಿಸಿಕೊಳ್ಳುವುದು ಹೇಗೆಂಬ ಆಲೋಚನೆ ಯಲ್ಲಿರುತ್ತಾನೆ. ನಳಕೂಬರನ ಹೆಂಡತಿಯಾದ ಉಪರಂಭೆಗೆ ಬೇರೆಯದೇ ಆಲೋಚನೆ. ರಾವಣನ ಕೀರ್ತಿಯನ್ನು ಕೇಳಿದ್ದ ಅವಳು ಅವನಿಗೆ ಮನಸೋತಿರು ತ್ತಾಳೆ. ಅವನೇ ಹತ್ತಿರ ಬಂದಿರುವಾಗ ತನ್ನ ಆಸೆಯು ನೆರವೇರಬಹುದೆಂಬ ಭರವಸೆ ಯಿಂದ ದೂತಿಯ ಮೂಲಕ ಹೇಳಿಕಳುಹಿಸುತ್ತಾಳೆ. ದೂತಿಯು ಬಂದು ರಾವಣನಿಗೆ ಹೀಗೆನ್ನುತ್ತಾಳೆ. ತನ್ನ ಅರಸಿಯಾದ ಉಪರಂಭೆಯು

ಪಲವು ದಿನನಿನ್ನೊಳ್ ತೊ
ಟ್ಟೊಲವಿಂದಾ ಚೆನ್ನೆ ನಿನ್ನನನವರತಂ ಪಂ
ಬಲಿಸುತ್ತುಂ ಚಿತ್ತೋದ್ಭವ
ನಲರಂಬುಗಳುರ್ಚೆ ನಾಡೆ ಪಾಡಳಿದಿರ್ದಳ್ (ಪಂ.ರಾ. ೧೦.೯೧)

(ಹಲವು ದಿನಗಳಿಂದಲೂ ನಿನ್ನನ್ನು ಪ್ರೀತಿಸುತ್ತಿರುವ ಸುಂದರಿಯಾದ ಅವಳು ನಿನಗಾಗಿ ಸದಾ ಹಂಬಲಿಸುತ್ತ ಮನ್ಮಥನ ಬಾಣಗಳ ಏಟಿನಿಂದ ಅಸುಖಿಯಾಗಿದ್ದಾಳೆ.)

ಏವೊಗಳ್ವೆನತನುವಿದ್ಯಾ
ದೇವತೆ ನಿರತಿಶಯಮೆನಿಪ ರೂಪಿಂ ವಿದ್ಯಾ
ದೇವತೆ ಸಾಮರ್ಥ್ಯದಿನೆನಿ
ಪಾ ವಧು ಬರೆ ದೇವ ನಿನಗೆ ತೀರದುದುಂಟೆ (ಪಂ.ರಾ. ೧೦.೯೨)

(ಏನೆಂದು ಹೇಳಲಿ? ರೂಪಿನಿಂದ ಮನ್ಮಥವಿದ್ಯಾದೇವತೆಯಂತಿರುವವಳು, ಸಾಮರ್ಥ್ಯ ದಿಂದ ವಿದ್ಯಾದೇವತೆಯಂತಿರುವವಳು ಉಪರಂಭೆ. ಅವಳು ಬಂದರೆ ನಿನಗೆ ದೊರೆಯದುದು ಯಾವುದಿದೆ?)

ರಾವಣನಿಗೆ ಉಪರಂಭೆಯ ಮೇಲೆ ಆಸಕ್ತಿಯಿಲ್ಲ. ವಿಭೀಷಣನೊಡನೆ ಆಲೋಚಿಸಿದಾಗ ಅವಳನ್ನು ಬರಮಾಡಿಕೊಂಡು ಉಪಾಯದಿಂದ ದುರ್ಲಂಘ್ಯ ಪುರ ವನ್ನು ವಶಮಾಡಿಕೊಳ್ಳುವ ರೀತಿಯನ್ನು ತಿಳಿಯಬೇಕೆಂದು ಅವನು ಸಲಹೆ ಕೊಡು ತ್ತಾನೆ. 'ನಿನ್ನ ನುಡಿಗೊಡಂಬಟ್ಟೆನ್, ಆಕೆಯಂ ತಾಯೆಂದು', ರಾವಣನು ದೂತಿಗೆ ಹೇಳಿಕಳುಹಿಸುತ್ತಾನೆ, ವಿಭೀಷಣನ ಸಲಹೆಯಂತೆ. ಇಲ್ಲಿ ನಾಗಚಂದ್ರನು ಚಮತ್ಕಾರ ಮಾಡಿದ್ದಾನೆ. 'ಆಕೆಯಂ ತಾಯೆಂದು' ಹೇಳಿದ ಎನ್ನುವಾಗ ಅವಳನ್ನು ಕರೆದು ತಾ ಎಂದು ಅರ್ಥವಾಗುವುದರ ಜೊತೆಗೆ ಆಕೆಯನ್ನು ತಾನು ತಾಯಿಯೆಂದು ಭಾವಿಸಿದ್ದ ಎಂಬ ಅರ್ಥವೂ ಉಂಟಾಗುತ್ತದೆ. ಅದೇ ರೀತಿ ಉಪರಂಭೆಯು ಬಂದಾಗ,

'ದುರ್ಲಂಘ್ಯಪುರದಲ್ಲಿ ನಾವಿಬ್ಬರೂ ಏಕಾಂತವಾಗಿ ಕೂಡುವುದಕ್ಕೆ ಏರ್ಪಾಟುಮಾಡು ಎಂದು' ಎಂದು ಉಪಾಯದಿಂದ ಹೇಳುತ್ತಾನೆ. ಸಾಲವಿದ್ಯಾಭೇದಿನಿಯೆಂಬ ವಿದ್ಯೆಯನ್ನು ಕಾಮಪೀಡಿತಳಾದ ಉಪರಂಭೆಯು ರಾವಣನಿಗೆ ಹೇಳಿಕೊಡುತ್ತಾಳೆ. ಅದರಿಂದ ರಾವಣನು ಮಾರನೆಯ ದಿನ ನಳಕೂಬರನನ್ನು ಗೆದ್ದು ಸೆರೆಹಿಡಿದು ದುರ್ಲಂಘ್ಯಪುರವನ್ನು ವಶಪಡಿಸಿಕೊಳ್ಳುತ್ತಾನೆ. ಅನಂತರ ಅವಳನ್ನು ಕರೆಸಿ ಗುಟ್ಟಾಗಿ ಹೇಳುವ ಮಾತುಗಳಿವು; "ನೀಂ ವಿಶುದ್ಧ ಕುಲದ ಕುಶಧ್ವಜಂಗಂ ಮಧುಕಾಂತೆಗಂ ಪುಟ್ಟಿದುದರಿಂ ನಿಜ ಕುಲಾಚಾರಮಂ ಬಗೆದು ಶೀಲಪರಿಪಾಲನಂ ಮಾಳ್ಪುದು ಅಂತಲ್ಲದೆಯುಂ ನೀನೆನಗೆ ವಿದ್ಯೋಪದೇಶಂಗೆಯ್ದುದರಿಂ ಗುರುವಾದೆ" ಎನ್ನುತ್ತಾನೆ. ಸತ್ಕುಲದಲ್ಲಿ ಹುಟ್ಟಿದ ಅವಳು ಶೀಲ ರಕ್ಷಣೆಯನ್ನು ಮಾಡಿಕೊಳ್ಳಬೇಕೆಂದು ಹೇಳಿದುದಲ್ಲದೆ. ವಿದ್ಯೆಯನ್ನು ಹೇಳಿಕೊಟ್ಟದ್ದರಿಂದ ಅವಳೇ ತನಗೆ ಗುರುವೆಂದು ಭಾವಿಸುತ್ತಾನೆ. ಅನಂತರ ನಳಕೂಬರನಿಗೆ ರಾಜ್ಯವನ್ನು ವಾಪಸುಕೊಡುತ್ತಾನೆ. ಅಂತಹ ಶೌಚಗುಣ ರಾವಣನದು.

ಆದರೆ ಅಂತಹ ರಾವಣನ ಮೇಲೆ ವಿಧಿಯು ತನ್ನ ಬಲೆಯನ್ನು ಹರಡುತ್ತದೆ. ಒಮ್ಮೆ ಸೂರ್ಯಹಾಸವೆಂಬ ಖಡ್ಗದ ಹರಿತವನ್ನು ನೋಡಲು ಲಕ್ಷ್ಮಣನು ಅದರಿಂದ ಬಿದಿರಮೆಳೆಯನ್ನು ಕತ್ತರಿಸುತ್ತಾನೆ. ಅದರಲ್ಲಿದ್ದ ರಾವಣನ ತಂಗಿಯಾದ ಚಂದ್ರನಖಿಯ ಮಗ ಶಂಭೂಕನೆಂಬುವನ ತಲೆಯೂ ಕತ್ತರಿಸಿ ಬೀಳುತ್ತದೆ. ತಂಗಿಯಿಂದ ಈ ಸುದ್ದಿಯನ್ನು ತಿಳಿದ ರಾವಣನು ತನ್ನ ತಂಗಿಯ ಮಗನನ್ನು ಕೊಂದವನನ್ನು ಸಂಹರಿಸಲು ರಾಮನಿದ್ದ ದಂಡಕಾರಣ್ಯಕ್ಕೆ ಬರುತ್ತಾನೆ. ಅವನಿಗೆ ಮೊದಲು ಕಾಣಿಸಿದುದು ಸೀತೆ. ರಾಮನ ಪಕ್ಕದಲ್ಲಿದ್ದ ಆಕೆಯು ರಾವಣನಿಗೆ

ಬಲೆ ದೃಷ್ಟಿಗೆ ವಜ್ರದ ಸಂ
ಕಲೆ ಹೃದಯಕ್ಕೆ ಎನಿಪ ರೂಪವತಿ ಜಾನಕಿ ಕಣ್
ಬೊಲದೊಳಿರೆ ಪದ್ಮಪತ್ರದ
ಜಲಬಿಂದುವಿನಂತೆ ಚಲಿತಮಾದುದು ಚಿತ್ತಂ (ಪಂ.ರಾ. ೯.೭೬)

(ನೋಟಕ್ಕೆ ಬಲೆಯಂತೆಯೂ ಹೃದಯಕ್ಕೆ ವಜ್ರದ ಸಂಕೋಲೆಯಂತೆಯೂ ಇದ್ದ ಸೀತೆಯು ಅವನ ದೃಷ್ಟಿಗೆ ಬಿದ್ದಾಗ ಅವನ ಮನಸ್ಸು ಕಮಲಪತ್ರದ ಮೇಲಿನ ನೀರಹನಿಯಂತೆ ಚಂಚಲವಾಯಿತು.)

ತಳತಳಿಸಿ ಪೊಳೆಯೆ ಸೀತೆಯ
ಚಳನಯನಂ ಖಚರ ಚಕ್ರವರ್ತಿಯ ಚಿತ್ತಂ
ಕೊಳದೊಳಗೆಳವಾಳೆ ತೆರಂ
ಬೊಳೆವಂತೆ ಕಲಂಕಿ ಕದಡಿದತ್ತಾಗಳ್ (ಪಂ.ರಾ. ೯.೮೦)

(ಸೀತೆಯ ಕಣ್ಣುಗಳು ತಳತಳ ಹೊಳೆದುದನ್ನು ಕಂಡ ರಾವಣನ ಮನಸ್ಸು ಕೊಳವನ್ನು ಎಳೆಯ ಬಾಳೆಮೀನು ಕದಡಿದಂತೆ ಕದಡಿತು.) ಇದಕ್ಕೆ ಕಾರಣ ಸೀತೆಯ ಅತಿಶಯವಾದ ಸೌಂದರ್ಯ.

ಹಾರಮರೀಚಿ ಮಂಜರಿ, ಸುಧಾರಸಧಾರೆ, ಸುಧಾಂಶುಲೇಖೆ, ಕ
ರ್ಪೂರ ಶಲಾಕೆ, ನೇತ್ರಸುಖದಾಯಕಮೀ ದೊರೆತಲ್ಲಮೀಕೆ ಶೃಂ
ಗಾರಸಮುದ್ರಮುಂ ಕಡೆಯೆ ಹೃದ್ಭವನುದ್ಭವೆಯಾದಳೆಂದು ಕ
ಣ್ಣಾರೆ ದಶಾಸ್ಯನೀಕ್ಷಿಸಿದನೀಕ್ಷಿಸಿ ಕಣ್ಣೆಱಿದಾರೆ ಮನ್ಮಥಂ (ಪಂ. ರಾ. ೯.೮೨)

(ಕಿರಣ ಸಮೂಹವಾಗಲೀ ಅಮೃತರಸದ ಪ್ರವಾಹವಾಗಲೀ ಚಂದ್ರಕಿರಣಗಳಾಗಲೀ ಕರ್ಪೂರದ ಶಲಾಕೆಯಾಗಲೀ ಇವಳಷ್ಟು ಕಣ್ಣು ತಂಪುಮಾಡಲಾರದು : ಇವಳು ಶೃಂಗಾರಸಮುದ್ರವನ್ನು ಕಡೆದಾಗ ಮೂಡಿಬಂದ ಕಾಮನೇ ಸೃಷ್ಟಿಸಿದವಳೆಂದು ರಾವಣನು ನೋಡುತ್ತಿರುವಾಗ ಅವನ ಮನಸ್ಸಿನ ಭಾವವನ್ನು ತಿಳಿದ ಕಾಮನು ತನ್ನ ಬಾಣಗಳನ್ನು ಅವನ ಮೇಲೆ ಪ್ರಯೋಗಿಸಿದ.) ಅಂತಹ ರೂಪನ್ನು ಕಂಡ 'ಪರಾಂಗನಾವಿರತಿವ್ರತ' ಪಾಲಕನಾದ ರಾವಣನೂ ಮೋಹಕ್ಕೆ ಒಳಗಾದ.

ವಿಹಿತಾಚಾರಮನ್ ಅನ್ವಯಾಗತಗುಣಪ್ರಖ್ಯಾತಿಯಂ ದುಷ್ಟನಿ
ಗ್ರಹಶಿಷ್ಟಪ್ರತಿಪಾಲನಕ್ಷಮತೆಯಂ ಕಯ್ಗಾಯದೆ ಅನ್ಯಾಂಗನಾ
ಸ್ಪೃಹೆಯಂ ತಾಳ್ದಿದನಲ್ತೆ ಕಾಲವಂಶದಿಂ ಲಂಕೇಶ್ವರಂ, ವಿಸ್ಮಯಾ
ವಹಂ, ಆಬ್ಧಿಯಮೊರ್ಮೆ ಕಾಲವಶದಿಂ ಮರ್ಯಾದೆಯಂ ದಾಂಟದೇ (ಪಂ.ರಾ. ೯.೮೬)

(ತನ್ನ ಶ್ರೇಷ್ಠ ನಡವಳಿಕೆಯನ್ನೂ ವಂಶದಲ್ಲಿ ಬಂದ ಗುಣಪ್ರಖ್ಯಾತಿಯನ್ನೂ ದುಷ್ಟರನ್ನು ಶಿಕ್ಷಿಸಿ ಶಿಷ್ಟರನ್ನು ಕಾಪಾಡುವ ಗುಣವನ್ನೂ ಕಾಪಾಡಿಕೊಳ್ಳದ ರಾವಣನು ಕಾಲವಶದಿಂದ ಪರಸ್ತ್ರೀಯಲ್ಲಿ ಮೋಹಿತನಾದ. ಕಾಲವಶದಿಂದ ಸಾಗರವೂ ತನ್ನ ಮರ್ಯಾದೆಯನ್ನು ಮೀರುತ್ತದೆಯಲ್ಲವೇ?) ರಾವಣನು ನಡತೆಗೆಟ್ಟದ್ದು ವಿಧಿವಶದಿಂದ ಎಂದು ಕವಿಯೇ ಹೇಳುತ್ತಾನೆ. ಅವನು ಸಮುದ್ರದಂತಹ ಗಂಭೀರವ್ಯಕ್ತಿತ್ವದವನಾದರೂ ವಿಧಿಯ ಕೈವಾಡಕ್ಕೆ ಒಳಗಾದ. ತಾನು ಬಂದ ಉದ್ದೇಶವನ್ನು ಮರೆತ ರಾವಣನು ಸೀತೆಯನ್ನು ಪಡೆಯುವ ಉದ್ದೇಶದಿಂದ 'ಅವಲೋಕಿನೀ' ಎಂಬ ವಿದ್ಯಾಧಿದೇವತೆಯನ್ನು ನೆನೆಯುತ್ತಾನೆ. ದೇವತೆಯು ಪ್ರತ್ಯಕ್ಷವಾದಾಗ ರಾಮನನ್ನು ಸೀತೆಯಿಂದ ದೂರ ಕಳಿಸುವುದು ಹೇಗೆ ಎಂದು ಪ್ರಶ್ನಿಸುತ್ತಾನೆ. ರಾಮ ಲಕ್ಷ್ಮಣರಂತಹವರ ವಿರೋಧವನ್ನು ಮಾಡಿಕೊಳ್ಳಬೇಡ, ನಿನ್ನ ನಡೆತಗೆಡಬೇಡ ಎಂದು ದೇವತೆ ಪರಿಪರಿಯಾಗಿ ಹೇಳುತ್ತದೆ:

ಕಾವ [illegible] ನಿನ್ನದು ಸಕ
ಲಾವನಿಯನಧರ್ಮನಿರಂತರಂ ನಿಯಮಿಸಿ ನೀ
ನೀ ವಿಷಯಕ್ಕೆಲಗುವುದುಂ
ಕಾವರೆ ಕಣೆಗೊಂಡರೆಂಬ ನುಡಿಗೆಡೆಯಕ್ಕುಂ (ಪಂ.ರಾ. ೯.೯೧)

(ರಕ್ಷಣೆ ಮಾಡಬೇಕಾದವನು ನೀನು ಅಧರ್ಮಿಗಳನ್ನು ಶಿಕ್ಷಿಸಬೇಕಾದವನು. ನೀನು ಅಂತಹುದರಲ್ಲಿ ನೀನೇ ಇಂದ್ರಿಯಗಳಿಗೆ ದಾಸನಾಗುವುದೆಂದರೆ ರಕ್ಷಿಸಬೇಕಾದವನೆ ಕೊಲ್ಲಲು ಸಿದ್ಧನಾಗುವಂತೆ.)

ಅನ್ಯಯದಿಂ ನಡೆವವರಂ
ನೀನ್ ನಿಯಮಿಸುವಯ್, ದಶಾಸ್ಯ ಪೆಱನಾವನ್ ನಿ

ನ್ನನ್ ನಿಯಮಿಸುವಂ, ಮುನ್ನೀರ್
ಬೆನ್ನೀರೆನೆ ಬೆರಸಲಣ್ಣ ತಣ್ಣೆರೊಳವೇ? (ಪಂ.ರಾ. ೯.೯೨)

(ಅನ್ಯಾಯದಲ್ಲಿ ನಡೆಯುವವನನ್ನು ನೀನು ಶಿಕ್ಷಿಸುತ್ತಿಯೇ ಎಂದಮೇಲೆ, ನೀನೆ ಅನ್ಯಾಯವನ್ನು ಮಾಡಿದರೆ ನಿನ್ನನ್ನು ಯಾರು ಶಿಕ್ಷಿಸಬಲ್ಲರು? ಸಮುದ್ರದ ನೀರೆಲ್ಲ ಬಿಸಿಯಾದರೆ ಅದನ್ನು ತಣ್ಣಗೆ ಮಾಡಲು ತಣ್ಣೀರನ್ನೆಲ್ಲಿಂದ ತರುವುದು?) ರಾವಣನಿಗೆ ಈ ಉಪದೇಶವೆಲ್ಲ ತಲೆಗೆ ಹತ್ತಲಿಲ್ಲ. ನಾನೊಂದನ್ನು ಕೇಳಿದರೆ ನೀನೊಂದನ್ನು ಹೇಳುವೆಯಲ್ಲ ಎಂದು ದೇವತೆಯ ಮೇಲೆಯೇ ಕೊಪಗೊಳ್ಳುತ್ತಾನೆ. ಆಗ ಅಸಮಾಧಾನದಿಂದಲೇ ಆ ವಿದ್ಯೆಯು ಲಕ್ಷ್ಮಣನು ಯುದ್ಧ ಮಾಡುತ್ತಿರುವುದಾಗಿಯೂ, ತನಗೆ ಕಷ್ಟವೊದಗಿದಾಗ ಸಿಂಹನಾದ ಮಾಡಲು ರಾಮನು ಸಹಾಯಕ್ಕೆ ಬರಬೇಕೆಂದು ಹೇಳಿರುವುದಾಗಿಯೂ ತಿಳಿಸುತ್ತದೆ. ಲಕ್ಷ್ಮಣನಿಗೆ ಕೇಳಿಸದಂತೆ ಸಿಂಹನಾದ ಮಾಡೆಂದು ವಿದ್ಯೆಗೆ ಆಜ್ಞಾಪಿಸುತ್ತಾನೆ. ವಿದ್ಯೆಯು ಹಾಗೆಯೇ ಮಾಡಿದಾಗ ರಾಮನು ಲಕ್ಷ್ಮಣನ ಸಹಾಯಕ್ಕೆ ಹೊರಡುತ್ತಾನೆ. ಸೀತೆ ಈಗ ಜಟಾಯುವಿನ ರಕ್ಷಣೆಯಲ್ಲಿದ್ದಾಳೆ.

ಸರಿ. ರಾವಣನ ಅವಸಾನ ಪ್ರಾರಂಭವಾಯಿತು; ಸೀತೆಯನ್ನೊಯ್ಯಲು ಖೇಚರಮಾರ್ಗದಿಂದ ಭೂಮಿಗೆ ಇಳಿಯುತ್ತಾನೆ. ಅವನು ಇಳಿದುದನ್ನು ಕವಿ ವರ್ಣಿಸುವ ಸೊಬಗನ್ನು ಸವಿಯಿರಿ:

ಅಱಿಪಿ ಪರವಧುಗೆ ಅಧೋಗತಿ
ಗಿೞಿವುದನಭಿಯಿಸುವಂತೆ ಸೀತೆಯ ಸಾರ
ಣ್ಗೆೞಿದಂ ನಭಂದಿಂ ಖಚರಂ,
ಪೞಿಗಂ ಪಾಪಕ್ಕಂ ಅಂಜದವರೇಗೆಯ್ಯರ್ (ಪಂ.ರಾ. ೯.೧೦೦)

(ಪರಸ್ತ್ರೀಯನ್ನು ಮೋಹಿಸಿ ಅಧೋಗತಿಗಿಳಿಯುವುದು ಹೀಗೆ ಎಂದು ಅಭಿನಯಿಸಿ ತೋರಿಸುತ್ತಿದ್ದಾನೆಯೋ ಎಂಬಂತೆ ಅಕಾಶಗಾಮಿಯಾದ ರಾವಣನು ಭೂಮಿಯ ಮೇಲೆ ಸೀತೆಯ ಸಮೀಪದಲ್ಲಿ ಬಂದಿಳಿದ.ನಿಂದೆಗೂ ಪಾಪಕ್ಕೂ ಹೆದರದವರು ಏನನ್ನು ತಾನೆ ಮಾಡಲಾರರು?) ಅಪರಾಧಿಯು ದಿವ್ಯವನ್ನು ಹಿಡಿಯುವಂತೆಯೂ ಕಾಳೋರಗವನ್ನು ಕೂಸು ಹಿಡಿಯುವಂತೆಯೂ ರಾವಣನು ಸೀತೆಯನ್ನು ಹಿಡಿದ. ಇದ್ದಕ್ಕಿದ್ದಂತೆ ಹದ್ದಿನಂತೆ ಬಂದೆರಗಿದ ರಾವಣನನ್ನು ಕಂಡು ಸೀತೆಯ ಭಯ-ಆತಂಕಗಳಿಗೆ ಒಳಗಾದಳು, ತನ್ನನ್ನು ಅವನು ಕದ್ದೊಯ್ಯುವುದನ್ನು ಕಂಡು ಅವಳು ದುಃಖದಿಂದ ತುಂಬಿ ಹೋದಳು. ಅವಳ ಸ್ಥಿತಿಯ ವರ್ಣನೆಯಿದು;

ಭೋಂಕನೆ ಕಂಡು ಸೀತೆ ದಶಕಂಧರನಂ ನೆಲೆವೆರ್ಚೆ ಶೋಕವಾ
ತಂಕಮೊಡರ್ಚೆ ಪುಷ್ಪಕವಿಮಾನದ ರತ್ನವಿಚಿತ್ರಪುತ್ರಿಕಾ
ಸಂಕುಲಮ್ ಅೞ್ತಡೆ ಅೞ್ತೊವು, ಬೆಮರ್ತೊಡೆ ಕೂಡೆ ಬೆಮರ್ತುವಾಗಳಾ
ಲಂಕೆಯ ಸೂಡನ್ ಉನ್ನತಿಯ ಕೇಡನ್ ಅವಂಗೆ ನಿವೇದಿಪಂತೆವೋಲ್
(ಪಂ.ರಾ. ೯.೧೦೪)

(ಇದ್ದಕ್ಕಿದ್ದಂತೆ ಬಂದ ರಾವಣನನ್ನು ಸೀತೆಯು ನೋಡಿ ಶೋಕ ಆತಂಕಗಳುಂಟಾ

ದಾಗ ಪುಷ್ಪಕವಿಮಾನದ ರತ್ನದ ಬೊಂಬೆಗಳು ಅವಳು ಅತ್ತರೆ ತಾವೂ ಅತ್ತುವು, ಬೆವರಿದರೆ ತಾವೂ ಬೆವರಿದವು. ಲಂಕೆಯು ಉರಿಯುವುದನ್ನು ಔನ್ನತ್ಯವೇ ಹಾಳಾಗುವುದನ್ನೂ ರಾವಣನಿಗೆ ಸೂಚಿಸುವಂತೆ ಇದು ಕಾಣುತ್ತಿತ್ತು.) ಜಟಾಯುವನ್ನು ಸಂಹರಿಸಿ ಕೊನೆಗೂ ರಾವಣನು ಸೀತೆಯನ್ನು ಲಂಕೆಗೆ ಕರೆತಂದ.

ಅಲ್ಲಿ ತನ್ನ ಹೆಂಡತಿಯಾದ ಮಂಡೋದರಿಯ ಮೂಲಕ ಸೀತೆಯು ತನಗೆ ಒಲಿಯಬೇಕೆಂದು ಹೇಳಿಸುತ್ತಾನೆ. ತಾನೂ ಬಂದು ಅನುನಯದಿಂದ ಬೇಡುತ್ತಾನೆ. ಬಗ್ಗದಿರಲು ಹೆದರಿಸುತ್ತಾನೆ. ತನ್ನ ವೈಭವವನ್ನು ವರ್ಣಿಸುತ್ತಾನೆ. ಆಕೆ ಬಗ್ಗುವುದೇ ಇಲ್ಲ. ಇತ್ತ ರಾಮಲಕ್ಷ್ಮಣರು ಸೀತೆಯನ್ನು ಕಾಣದೆ, ಅವಳಿಗಾಗಿ ಶೋಕಿಸುತ್ತಾರೆ. ರಾಮನಂತೂ ದುಃಖದಿಂದ ಅಧೀರನಾಗುತ್ತಾನೆ. ಅವನು ಸೀತೆಗಾಗಿ ಹಂಬಲಿಸುವ ಈ ಪದ್ಯ ನಮ್ಮ ಸಾಹಿತ್ಯದಲ್ಲಿ ತುಂಬ ಪ್ರಸಿದ್ಧ:

ಕಳಹಂಸಾಲಸಯಾನೆಯಂ, ಮೃಗಮದಾಮೋದಾಸ್ಯನಿಶ್ವಾಸೆಯಂ,
ತಳಿರೇ ತಾವರೆಯೇ ಮದಾಳಿಕುಲಮೇ ಕರ್ನೆಯ್ದಿಲೇ ಮತ್ತಕೋ
ಕಿಳಮೇ, ಕಂಡಿರೇ ಪಲ್ಲವಾಧರೆಯನ್ ಅಂಭೋಜಾಸ್ಯೆಯಂ ಭೃಂಗಕುಂ
ತಳೆಯಂ ಕೈರವನೇತ್ರೆಯಂ ಪಿಕರವ ಪ್ರಖ್ಯಾತೆಯಂ ಸೀತೆಯಂ (ಪಂ.ರಾ. ೯.೧೧೮)

(ಎಲೈ ಚಿಗುರೇ ತಾವರೇಯೇ ದುಂಬಿಗಳೇ ನೆಯ್ದಿಲೆಯೇ ಕೋಗಿಲೆಯೇ, ರಾಜಹಂಸದಂತೆ ಮಂದಗಾಮಿಯೂ ಕಸ್ತೂರಿಯ ಪರಿಮಳದಂತೆ ನಿಶ್ವಾಸವುಳ್ಳವಳೂ ಚಿಗುರಂತೆ ಕೋಮಲವಾದ ತುಟಿಗಳುಳ್ಳವಳೂ ಕಮಲಮುಖಿಯೂ ದುಂಬಿಯಂತೆ ಕಪ್ಪು ಕೂದಲುಳ್ಳವಳೂ ನೆಯ್ದಿಲಂತೆ ಕಣ್ಣುಳ್ಳವಳೂ ಕೋಗಿಲೆಯಂತೆ ಇಂಪಾದ ತನ್ನ ಕಂಠದಿಂದ ಪ್ರಖ್ಯಾತೆಯಾದವಳೂ ಆದ ಸೀತೆಯನ್ನು ನೀವೇನಾದರೂ ಕಂಡಿರಾ?) ರಾವಣ ಅವಳನ್ನು ಅಪಹರಿಸಿರುವ ವಿಷಯವು ಅವರಿಗೆ ತಿಳಿಯುತ್ತದೆ. ಹನುಮಂತನನ್ನು ರಾಯಭಾರಿಯಾಗಿ ಕಳಿಸುತ್ತಾರೆ. ಅವನ ದೌತ್ಯ ವಿಫಲವಾಗಲು ಲಂಕೆಯನ್ನು ಸುಟ್ಟು ಬರುತ್ತಾನೆ. ರಾಮಲಕ್ಷ್ಮಣರು ಲಂಕೆಯತ್ತ ತೆರಳುತ್ತಾರೆ.

ಈ ಕಡೆ ನಾನಾ ವಿಧವಾಗಿ ಸೀತೆಯನ್ನು ಒಲಿಸಲು ಪ್ರಯತ್ನಿಸಿ ವಿಫಲನಾದ ರಾವಣನು ಘನತೆಗಾಗಿ ಮಾತ್ರ ಅವಳನ್ನು ತನ್ನ ಬಳಿ ಇಟ್ಟು ಕೊಂಡಿರುತ್ತಾನೆ. ಯುದ್ಧ ಪ್ರಾರಂಭವಾದ ಮೇಲೆ ರಾವಣನು 'ಬಹುರೂಪಿಣೀ' ವಿದ್ಯೆಯನ್ನು ಕೈವಶ ಮಾಡಿಕೊಂಡು ಸೀತೆಯನ್ನು ಕಾಣಲು ಕಾತರನಾಗಿ ಬರುತ್ತಾನೆ. ಅವಳಲ್ಲಿಗೆ ಬಂದು ತನಗೆ ಬಹುರೂಪಿಣಿಯು ಕೈಗೂಡಿತೆಂದೂ ತನ್ನನ್ನೆದುರಿಸುವವರೇ ಇಲ್ಲವೆಂದೂ ರಾಮನ ಆಸೆಯನ್ನು ಬಿಡಬೇಕೆಂದೂ ಅವಳಿಗೆ ಹೇಳುತ್ತಾನೆ. ಅದರಿಂದ ವಿಹ್ವಲೆಯಾದ ಸೀತೆಯು, ರಾಮನು ಬದುಕಿರುವವರೆಗೂ ತನ್ನೆಡೆಗೆ ಬರಬೇಡವೆಂದು ಬೇಡಿಕೊಳ್ಳುತ್ತಾಳೆ. ಯುದ್ಧದಲ್ಲಿ ರಾಮನಿಗೆ ಜಯವು ಗಟ್ಟಿಯೆಂದು ಅವಳ ನಂಬಿಕೆ. ಸೀತೆಯು ರಾಮನ ಬಗ್ಗೆ ಇಟ್ಟ ಪರಮ ಪ್ರೀತಿಯು ರಾವಣನಲ್ಲಿ ಪೂಜ್ಯಭಾವನೆಯನ್ನೇ ಉಂಟುಮಾಡುತ್ತದೆ. ಕದಡಿ ಬಗ್ಗಡವಾದ ನೀರನ್ನು ಯಾರೂ ತಕ್ಷಣ ತಿಳಿಮಾಡಲು ಸಾಧ್ಯವಿಲ್ಲ, ಕಾಲಕ್ರಮದಲ್ಲಿ ಅದೇ ತಿಳಿಯಾಗುತ್ತದೆ. ಹಾಗೆಯೇ ತಿಳಿಯಾದ ರಾವಣನ

ಮನಸ್ಸು ಬಗ್ಗಡವಾದದ್ದು ಮತ್ತೆ ತಿಳಿಯಾಗುತ್ತದೆ.

> ರಾಮನಿನಗಲ್ಚಿ ತಂದಾ
> ನೀ ಮಾನಿನಿಗಿನಿತು ದುಃಖಮಂ ಪುಟ್ಟಿಸಿದೆಂ
> ಕಾಮವ್ಯಾಮೋಹದಿನಾ
> ಶಾಮುಖಮಂ ಪುದಿಯೆ ದುರ್ಯಶಃಪಟಹರವಂ (ಪಂ.ರಾ. ೧೩.೧೧೬)

(ಕಾಮವ್ಯಾಮೋಹದಿಂದ ನಾನು ಈ ಕಾಮಿನಿಯನ್ನು ರಾಮನಿಂದ ಬೇರ್ಪಡಿಸಿ ತಂದುಬಿಟ್ಟೆ, ನನ್ನ ಕೆಟ್ಟ ಹೆಸರು ಇದರಿಂದ ಎಲ್ಲ ದಿಕ್ಕುಗಳಲ್ಲಿಯೂ ಸೇರುವಂತಾಯಿತು.) ಆದರೂ ಈಗಲೇ ಸೀತೆಯನ್ನು ರಾಮ ನಿಗೊಪ್ಪಿಸುವುದಕ್ಕೆ ಅವನಿಗೆ ಇಷ್ಟವಿಲ್ಲ. ಇದು ಘನತೆಯ ಪ್ರಶ್ನೆ.

> ಇರದುಯ್ದೀಗಳೆ ಕೊಟ್ಟೊಡೆನ್ನ ಕಡುಪುಂ ಕಟ್ಟಾಯಮುಂ ಬೀರಮುಂ
> ಬಿರುದುಂ ಬೀಸರಮಕ್ಕುಮೋಸರಿಸಿದಂತಾಗಿರ್ಕುಂ ಅಂತಾಗದಂ
> ತಿರೆ ದೋರ್ಗರ್ವಮನಿರ್ವಲಂ ಪೊಗಟ್ವಿನಂ ಸೌಮಿತ್ರಿಯಂ ರಾಮನಂ
> ವಿರಥರ್ ಮಾಡಿ ರಣಾಗ್ರದೊಳ್ ಪಿಡಿದು ತಂದಾನ್ ಕೊಟ್ಟಪೆಂ ಸೀತೆಯಂ
> (ಪಂ.ರಾ. ೧೩–೧೧೯)

(ಈಗಲೇ ಸೀತೆಯನ್ನು ಒಪ್ಪಿಸಿಬಿಟ್ಟರೆ ತನ್ನ ಪರಾಕ್ರಮ ಶೌರ್ಯ ಬಿರುದು ಮುಂತಾದವುಗಳೆಲ್ಲ. ಪ್ರಕಟವಾಗುವುದಿಲ್ಲ. ಅದಕ್ಕೆ ಬದಲು ತನ್ನ ಬಾಹುಬಲವು ಎರಡೂ ಪಕ್ಷದವರಿಗೆ ಆಶ್ಚರ್ಯವನ್ನುಂಟುಮಾಡುವಂತೆ ರಾಮ ಲಕ್ಷ್ಮಣರನ್ನು ವಿರಥರನ್ನಾಗಿ ಮಾಡಿ ಅನಂತರ ರಣರಂಗದಲ್ಲಿಯೇ ಸೀತೆಯನ್ನೊಪ್ಪಿಸುತ್ತೇನೆ.) ಎಂದು ನಿರ್ಧರಿಸುತ್ತಾನೆ. ಎಂತಹ ಉದಾತ್ತತೆ! ತಿಳಿಯಾದ ನೀರು ಕಾರಣಾಂತರ ದಿಂದ ಬಗ್ಗಡವಾದದ್ದು ಮತ್ತೆ ತಿಳಿಯಾಯಿತೆಂಬ ಕವಿಯ ಮಾತು ಎಷ್ಟು ಸತ್ಯ! ಅವನ ದುರಂತವನ್ನು ತಂದದ್ದು ವಿಧಿವಶವೆಂದೇ ಕವಿಯ ನಂಬಿಕೆ. ಅದಕ್ಕೆ ರಾವಣ ನಂತಹ ಮಹಾತ್ಮನೂ ಒಳಗಾಗಬೇಕಾಯಿತು. ಮೋಹಕ್ಕೆ ಪರವಶನಾಗಿ ದುರಂತವ್ಯಕ್ತಿ ಯಾದ ಲಕ್ಷ್ಮಣನ ಆಯುಧಕ್ಕೆ ಆಹುತಿಯಾದ.

ಈ ರೀತಿ ನಾಗಚಂದ್ರನು ಅತ್ಯಂತ ಲಲಿತವಾಗಿ ಬರೆಯಬಲ್ಲ ಶಕ್ತಿಯುಳ್ಳ ಕವಿ. ಅವನ ಮಾತುಗಾರಿಕೆ ಮನುಷ್ಯರ ಸ್ವಭಾವ ಪರಿಚಯ, ಶ್ರೇಷ್ಠ ರೀತಿಯ ಪಾತ್ರ ಚಿತ್ರಣ–ಇವುಗಳು ಉನ್ನತ ಮಟ್ಟದವು. ನಾಗಚಂದ್ರನ ರಾವಣನು ತನ್ನ ಚಲದಿಂದಲೇ ದುರಂತವನ್ನು ತಂದುಕೊಂಡ ಮಹಾತ್ಮ, ಅದೂ ಯಾವುದೋ ವಿಧಿಗೆ ವಶನಾಗಿ. ರನ್ನನ ದುರ್ಯೋಧನನಂತೆ ಇವನೆಂದೂ ಪಾತಕಿಯೇ ಆಗಿರಲಿಲ್ಲ. ಆದರೂ ಒಮ್ಮೆ ದೊಡ್ಡ ಪ್ರತಾಪಕ್ಕೆ ಬಿದ್ದ; ಮುಂದೆ ಅದರ ಅರಿವಾದರೂ ಅಭಿಮಾನದ ಮಾಯೆಯಿಂದ ಕಾಟಗೊಂಡು ದುರಂತವನ್ನಪ್ಪಿದ. ಇದೊಂದು ಅಪೂರ್ವ ಪಾತ್ರ.

ನಯಸೇನ

ನಯಸೇನನು ಧಾರವಾಡ ಜಿಲ್ಲೆಯ ಮುಳುಗುಂದ ಎಂಬ ಗ್ರಾಮದವನು. ಅವನು 'ಧರ್ಮಾಮೃತ'ವೆಂಬ ಚಂಪೂಕೃತಿಯನ್ನು ಬರೆದಾಗ ಸನ್ಯಾಸಿಯಾಗಿದ್ದರ

ಬೇಕೆನ್ನಿಸುತ್ತದೆ. ತನ್ನ ಸ್ವಂತ ವಿಷಯದ ಬಗ್ಗೆ ಯಾವ ವಿಷಯಗಳನ್ನೂ ಇವನು ಕಾವ್ಯದಲ್ಲಿ ಹೇಳಿಕೊಂಡಿಲ್ಲ. ಈತನಿಗೆ 'ಸುಕವಿನಿಕರ ಪಿಕಮಾಕಂದ', 'ವಾತ್ಸಲ್ಯ ರತ್ನಾಕರ', 'ನೂತ್ನ ಕವಿತಾ ವಿಳಾಸ,' ಮುಂತಾದ ಬಿರುದುಗಳಿದ್ದವು 'ಧರ್ಮಾಮೃತ' ವೆಂಬ ಕಾವ್ಯವನ್ನು ಕ್ರಿ.ಶ. ೧೧೧೨ನೆಯ ಇಸವಿಯಲ್ಲಿ ಬರೆದು ಮುಗಿಸಿದಂತೆ ಹೇಳಿಕೊಂಡಿದ್ದಾನೆ. ಇದಲ್ಲದೆ ಅವನು ವ್ಯಾಕರಣವೊಂದನ್ನೂ ಬರೆದಿರಬಹುದೆಂದು ಕೆಲವು ವಿದ್ವಾಂಸರು ಊಹಿಸುವವರಾದರೂ ಅದರ ಬಗ್ಗೆ ನಿಖರವಾಗಿ ಏನನ್ನೂ ಹೇಳಲು ಸಾಧ್ಯವಿಲ್ಲ.

ನಯಸೇನನು ಚಂಪೂ ರೀತಿಯಲ್ಲಿ ಬರೆದರೂ ಆ ಪ್ರಕಾರವನ್ನು ಹೊಸ ತೆಂಬಂತೆ ಮಾರ್ಪಡಿಸಿದ. ಅಲ್ಲಿ ಹಿಂದಿದ್ದುದಕ್ಕಿಂತ ಹೆಚ್ಚು ಗದ್ಯವನ್ನು ರಚಿಸಿದ. ಅಲ್ಲದೆ ಹಿಂದಿನ ಚಂಪೂಕವಿಗಳಂತೆ ಇವನು ಜನಭಾಷೆಗೆ ಹತ್ತಿರವಾದ ಕನ್ನಡವನ್ನು ಉಪಯೋಗಿಸಿ ತನ್ನ ಕಾವ್ಯವನ್ನು ಹೆಚ್ಚು ಜನರು ಓದುವಂತೆ ಮಾಡಿದ. ಈ ಕಾವ್ಯವು ಧರ್ಮಪ್ರಸಾರದ ಉದ್ದೇಶದಿಂದ ರಚಿತವಾಗಿರುವ ಕಾರಣ ಸುಲಭಶೈಲಿಯ ಸರಳ ರಚನೆಯು ಎಷ್ಟು ಅವಶ್ಯಕವೆಂಬುದನ್ನು ನಯಸೇನನು ಮನಗಂಡಿದ್ದ. ಆದ್ದರಿಂದಲೇ ಸಂಸ್ಕೃತಮಯವಾದ ಶೈಲಿಯಲ್ಲಿ ಬರೆಯುವವರನ್ನು ಈ ಕವಿಯು ಹಾಸ್ಯ ಮಾಡುತ್ತಾನೆ:

> **ಪೊಸಕನ್ನಡದಿಂ ವ್ಯಾವ**
> **ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ**
> **ತಿಸಿ ಕೊಡಲಾಱದಕ್ಕಟ**
> **ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೆ?** (ಧರ್ಮಾ. ೧.೪೧)

(ಹೊಸ ಕನ್ನಡದಲ್ಲಿ ತನ್ನ ಸತ್ಕೃತಿಯನ್ನು ರಚಿಸುವೆನೆಂದು ಹೇಳಿಕೊಂಡರೂ ಹಾಗೆ ಮಾಡಲಾರದೆ ಸಂಸ್ಕೃತವನ್ನು ಬಳಸುವವನು ಕವಿಯೇ?) ಹಾಗೆಂದು ಇವನಿಗೆ ಸಂಸ್ಕೃತದ ಬಗ್ಗೆ ದ್ವೇಷವೂ ಇಲ್ಲ. ಅದನ್ನು ಬಳಸಲೇಬಾರದೆಂಬ ಹಟವೂ ಇಲ್ಲ. ಕನ್ನಡ ಸಂಸ್ಕೃತಗಳ ಪ್ರಮಾಣರಹಿತವಾದ ಮಿಶ್ರಣವು ಸರಿಯಲ್ಲವೆಂದು ಇವನ ಭಾವನೆ:

> **ಸಕ್ಕದಮಂ ಪೇೞ್ವೊಡೆ ನೆಱೆ**
> **ಸಕ್ಕದಮಂ ಪೇೞ್ಗೆ, ಸುದ್ದಗನ್ನಡದೊಳ್ ತಂ**
> **ದಿಕ್ಕುವುದೆ ಸಕ್ಕದಮಂ?**
> **ತಕ್ಕುದೆ ಬೆರಸಲ್ಕೆ ಘೃತಮುಮಂ ತೈಲಮುಮಂ?** (ಧರ್ಮಾ. ೧.೪೨)

(ಸಂಸ್ಕೃತದಲ್ಲಿ ಬರೆಯುವ ಹಾಗಿದ್ದರೆ ಹಾಗೆಯೇ ಮಾಡಲಿ. ಆದರೆ ಅಚ್ಚಗನ್ನಡದಲ್ಲಿ ಬರೆಯುವಾಗ ಸಂಸ್ಕೃತವನ್ನು ಸೇರಿಸಬಾರದು. ಎಣ್ಣೆಯನ್ನೂ ತುಪ್ಪವನ್ನೂ ಯಾರಾದರೂ ಬೆರೆಸುತ್ತಾರೆಯೇ?) ಸುಲಭವಾಗಿ ಅರ್ಥವಾಗುವ ಸಂಸ್ಕೃತ ಪದಗಳನ್ನು ಬಳಸಬಹುದೇ ಹೊರತು ತನ್ನ ಪಾಂಡಿತ್ಯವನ್ನು ತೋರಿಸುವುದಕ್ಕೆ ಸಂಸ್ಕೃತವನ್ನು ತುಂಬಬಾರದೆಂಬುದೇ ನಯಸೇನನ ನಿಲವು. ಅವನು ಇಂತಹ ರಚನೆಗೆ ನಿದರ್ಶನವೆಂಬಂತೆ 'ಧರ್ಮಾಮೃತ'ವನ್ನು ಬರೆದಿದ್ದಾನೆ.

ಧರ್ಮಾಮೃತ

ಸಾಮಾನ್ಯವಾಗಿ ಕನ್ನಡದ ಜೈನಕವಿಗಳು ಬರೆಯುವ ಕತೆಗಳಿಗೆ ಸಂಸ್ಕೃತ ಇಲ್ಲವೇ ಪ್ರಾಕೃತ ಭಾಷೆಗಳಲ್ಲಿ ರಚಿತವಾದ ಹಿಂದಿನ ಗ್ರಂಥಗಳೇ ಆಧಾರ. ಆದರೆ 'ಧರ್ಮಾಮೃತ'ಕ್ಕೆ ಯಾವುದೇ ಒಂದು ಗ್ರಂಥವು ಆಧಾರವಾಗಿರುವಂತೆ ತೋರುವು ದಿಲ್ಲ. ಅನೇಕ ಕಾವ್ಯಗಳಿಂದ ಸ್ವಲ್ಪ ಸ್ವಲ್ಪವನ್ನು ಆರಿಸಿ ಕೊಂಡಿರಬಹುದು. ಸಂಸ್ಕೃತದಲ್ಲಿ 'ಧರ್ಮಾಮೃತ'ವೆಂಬ ಹೆಸರಿನ ಗ್ರಂಥವೊಂದಿದ್ದರೂ ಅದು ನಯಸೇನನಾದ ಮೇಲೆ ರಚಿತವಾದದ್ದು, ಅಲ್ಲದೆ ಅದರ ವಸ್ತು ಬೇರೆ. ಈ ಕಾವ್ಯದಲ್ಲಿ ಹದಿನಾಲ್ಕು ಬೇರೆ ಬೇರೆಯ ಕತೆಗಳಿವೆ, ಒಂದೊಂದೂ ಜೈನಮತದ ಅನೇಕ ಅಂಶಗಳ ಶ್ರೇಷ್ಠತೆಯನ್ನು ವಿವರಿಸಲು ನಿದರ್ಶನಗಳಾಗಿ ಬಂದಿದೆ. ಇಲ್ಲಿನ ಕತೆಗಳು ಸಮ್ಯಕ್ ದರ್ಶನ, ನಿಶ್ಯಂಕೆ (ಜೈನ ದರ್ಶನದಲ್ಲಿ ಸಂದೇಹವಿಲ್ಲದಿರುವುದು), ನಿಷ್ಕಾಂಕ್ಷೆ (ಲೋಕದ ಸುಖಭೋಗಗಳ ಬಗ್ಗೆ ಆಸೆಯಿಲ್ಲದಿರುವುದು), ನಿರ್ವಿಚಿಕಿತ್ಸೆ (ದೇಹದ ಮೇಲೆ ಪ್ರೀತಿ ಅಥವಾ ದ್ವೇಷವಿಲ್ಲದಿರುವುದು) ಅಮೂಢದೃಷ್ಟಿತ್ವ (ಜೈನ ಮಾರ್ಗವನ್ನು ಬಿಟ್ಟು ಬೇರೆ ಮಾರ್ಗಗಳನ್ನು ಅನುಸರಿಸದಿರುವುದು). ಉಪಗೂಹನ (ಜೈನ ಮತದಲ್ಲಿ ಯಾರಿಗೆ ಸಂಪೂರ್ಣ ನಂಬಿಕೆಯಿಲ್ಲವೋ ಅಂತಹವರ ಸಂಶಯಗಳನ್ನು ಹೋಗಲಾಡಿಸುವುದು), ಸ್ಥಿತಿಕರಣ (ಆತ್ಮನು ಸರಿಯಾದ ನಂಬಿಕೆಯನ್ನು ಬಿಡದಂತೆ ನೋಡಿಕೊಳ್ಳುವುದು), ವಾತ್ಸಲ್ಯ (ಜೈನಗೃಹಸ್ಥರ ಬಗ್ಗೆ ಪ್ರೀತಿ-ಗೌರವಗಳನ್ನು ತೋರಿಸುವುದು), ಹಾಗೂ ಧರ್ಮಪ್ರಭಾವನೆ (ಜೈನ ಸಿದ್ಧಾಂತಗಳ ಮಹಿಮೆಯ ಪ್ರಚಾರ ಮಾಡುವುದು) ಎಂಬ ಅದರ ಎಂಟು ಅಂಗಗಳು; ಅಹಿಂಸೆ, ಸತ್ಯ, ಆಸ್ತೇಯ (ಕದಿಯದಿರುವುದು), ಬ್ರಹ್ಮಚರ್ಯ ಮತ್ತು ಅಪರಿಗ್ರಹ (ಕೂಡಿಡದಿರುವುದು) ಎಂಬ ಐದು ಅಣುವ್ರತಗಳು–ಹೀಗೆ ಒಟ್ಟು ಹದಿನಾಲ್ಕು ವಿಷಯಗಳ ಮಹಿಮೆಯನ್ನು ಸಾರುತ್ತವೆ.

ಈ ಹದಿನಾಲ್ಕು ಕತೆಗಳು ಇಲ್ಲಿ ಹದಿನಾಲ್ಕು ಆಶ್ವಾಸಗಳಾಗಿ ಬಂದಿವೆ. ವಿಪುಲಗಿರಿಯಲ್ಲಿ ಶ್ರೀ ವರ್ಧಮಾನ ಸ್ವಾಮಿಗಳ ಸಮಸರಣವು ಬಂದು ನೆಲಸಿದೆಯೆಂಬ ವಿಷಯವನ್ನು ತಿಳಿದ ಶ್ರೇಣಿಕಮಹಾರಾಜನು ಚೇಳಿನೀದೇವಿಯೊಡನೆ ಆ ಗಿರಿಗೆ ಬರುತ್ತಾನೆ. ಆ ಸ್ವಾಮಿಯನ್ನು ಅವರಿಬ್ಬರೂ ಭಕ್ತಿಯಿಂದ ಪೂಜಿಸುತ್ತಾರೆ. ಅನಂತರ ಪರಮಪೂಜ್ಯರಾದ ಗೌತಮಗಣಧರರಿಗೆ ನಮಸ್ಕಾರ ಮಾಡಿ ಹುಟ್ಟು-ಸಾವುಗಳ ಚಕ್ರದಿಂದ ಬಿಡುಗಡೆ ಮಾಡುವುದಾವುದೆಂದು ಕೇಳಿ ತಮಗೆ ಮುಕ್ತಿಯ ಮಾರ್ಗದರ್ಶನ ಮಾಡಬೇಕೆಂದು ಕೇಳುತ್ತಾರೆ. ಆಗ ಗೌತಮಗಣಧರರು ಮೇಲೆ ಹೇಳಿದ ಹದಿನಾಲ್ಕು ಮಹಾರತ್ನಗಳ ಬಗ್ಗೆ ಕತೆಗಳನ್ನು ಹೇಳುತ್ತಾರೆ. ಹಾಗೆ ಹೇಳಿದವೇ ಮುಂದಿನ ಕತೆಗಳು. ಅವುಗಳಲ್ಲಿ ಎರಡು ಉತ್ತಮ ಕತೆಗಳ ಪರಿಚಯವನ್ನಿಲ್ಲಿ ಮಾಡಿಕೊಳ್ಳೋಣ.

ಸಮ್ಯಕ್ ದರ್ಶನದ ಶ್ರೇಷ್ಠತೆಯನ್ನು ತೋರಿಸಲು ದಯಾಮಿತ್ರ ಶೆಟ್ಟಿಯ ಕತೆಯನ್ನು ಹೇಳಲಾಗಿದೆ. ಮೇರುಪರ್ವತದ ಮಧ್ಯೆ ಸೌರಾಷ್ಟ್ರವೆಂಬ ನಾಡು. ಅಲ್ಲಿ ಗಿರಿನಗರವೆಂಬ ಒಂದು ದೊಡ್ಡನಗರ, ಅನನ್ಯ ಜಿನಭಕ್ತನಾದ ದಯಾಮಿತ್ರ ಶೆಟ್ಟಿಯು

ಆ ಊರಿನ ದೊಡ್ಡ ವ್ಯಾಪಾರಿ. ಒಂದು ಬಾರಿ ಅವನು ವ್ಯಾಪಾರ ಮಾಡಲು ಬೇರೆ ದೇಶಗಳಿಗೆ ಹೊರಟನು. ಆ ಸಮಯಕ್ಕೆ ಸರಿಯಾಗಿ ಬ್ರಾಹ್ಮಣನೊಬ್ಬನು ಬಂದು ತಾನು ವಸುಭೂತಿಯೆಂಬುವನೆಂತಲೂ ಗಂಗಾಸ್ನಾನಕ್ಕಾಗಿ ಹೊರಟಿರುವುದಾಗಿಯೂ ದಯಾಮಿತ್ರನ ಜೊತೆಗೆ ಬರುವುದಾಗಿಯೂ ಹೇಳಿದಾಗ ಅದಕ್ಕೆ ತನ್ನ ಒಪ್ಪಿಗೆಯನ್ನಿತ್ತನು. ತಾನು ಬರುವವರೆಗೆ ಜಿನಪೂಜೆ. ದಾನ-ಧರ್ಮಗಳನ್ನು ಮಾಡುತ್ತಿರಬೇಕೆಂದು ಹೆಂಡತಿ-ಮಕ್ಕಳಿಗೆ ಹೇಳಿ ಸೆಟ್ಟಿಯು ಹಲವರು ಇತರರೊಡನೆ ಪ್ರಯಾಣ ಹೊರಟನು. ದಯಾಮಿತ್ರನಿಗೆ ಒಂದು ವ್ರತವಿತ್ತು; ಪ್ರತಿದಿನ ಮೂರುಗಳಿಗೆ ಧರ್ಮಶ್ರವಣವಿಲ್ಲದೆ ಊಟಮಾಡುವುದಿಲ್ಲವೆಂಬುದೇ ಆ ವ್ರತ. ಆ ವಿಷಯವನ್ನು ಕೇಳಿ ವಸುಭೂತಿಯು ಸ್ನಾನವನ್ನೇ ಮಾಡದೆ ಇತರರಿಗೆ ಹೇಸಿಕೆಯಾಗುವಂತೆ ಮೈಯಲ್ಲಿ ಕೊಳೆಯನ್ನು ತುಂಬಿಕೊಂಡು ಕಂಗೆಟ್ಟಿರುವ ಸನ್ಯಾಸಿಗಳನ್ನು ಕುಲದೈವವೆಂದು ಭಾವಿಸಿ ಕೊಂಡಾಡುವ ಇಂತಹ ಮೂರ್ಖನನ್ನು ಜಗತ್ತಿನಲ್ಲೇ ಕಾಣೆ ಎಂದು ಮನಸ್ಸಿನಲ್ಲಿಯೇ ಹಾಸ್ಯ ಮಾಡಿಕೊಂಡ. ಈ ಸೆಟ್ಟಿಗೆ ಸರಿಯಾದ ಧರ್ಮವನ್ನು ಹೇಳಬೇಕೆಂದು ಭಾವಿಸಿ, 'ಈ ಸವಣರು ಹೊಟ್ಟೆ ಪಾಡಿಗಾಗಿ ನಾಟಕವಾಡುತ್ತಾರೆ. ಅವರ ಕಾಯಕ್ಲೇಶವು ಎಳ್ಳಷ್ಟು ಸವಣರಿಗಿರುವುದಿಲ್ಲ' ಎಂದು ಹೇಳುತ್ತಾನೆ. ಇದನ್ನು ಕೇಳಿ ಸೆಟ್ಟಿಯು

ಬೆಳಗಿನೊಳಂ ಕಾಣದು ನಿಶಿ
ಯೊಳ್ ಕಾಣ್ಬುದು ಪೆಗ್ಗಣಕ್ಕೆ ನಿರ್ಗುಣರ್ಗಂತು
ಜ್ವಳ ಧರ್ಮಮನಱಿಯದೆಯು
ಮ್ಮಳಮಂ ಪೊರ್ದುವುದು ಜಡರ್ಗೆ ಸಹಜಮೆನಿಕ್ಕುಂ (ಧರ್ಮಾ. ೧-೧೧೬)

(ಹೆಗ್ಗಣಗಳಿಗೂ ಕಳ್ಳರಿಗೂ ಬೆಳಗಿಗಿಂತ ರಾತ್ರಿಯಲ್ಲಿಯೇ ಚೆನ್ನಾಗಿ ಕಾಣುವಂತೆ ಜಡರಿಗೆ ಧರ್ಮವನ್ನು ತಿಳಿಯದುದರಿಂದ ಉಮ್ಮಳವುಂಟಾಗುತ್ತದೆ) ಎಂದು ಭಾವಿಸಿ ಇವನಿಗೆ ತಕ್ಕ ಬುದ್ಧಿಯನ್ನು ಕಲಿಸಬೇಕೆಂದು ಅಲೋಚಿಸಿ ಒಂದು ಉಪಾಯವನ್ನು ಮಾಡುತ್ತಾನೆ.

ಮತ್ತೊಂದು ದಿವಸ ಪ್ರಯಾಣಮಧ್ಯದ ಬಿಡಾರದಲ್ಲಿ ವಸೂಭೂತಿಯನ್ನು ಬರಮಾಡಿಕೊಂಡು ಪೀಠವನ್ನಿತ್ತು ಕುಳ್ಳಿರಿಸಿ ಈ ರೀತಿ ಹೇಳಿದನು: 'ಸ್ವಾಮಿ, ನಮ್ಮಲ್ಲಿ ಹಿಂದಿನಿಂದಲೂ ಬಂದ ಕುಲವ್ರತವೊಂದಿದೆ. ಜಿನೇಶ್ವರ ಸಾಕ್ಷಿಯಾಗಿ ಮಹರ್ಷಿಗಳಿಂದ ವ್ರತವನ್ನು ಮಾಡುವ ಕಾಲವು ಸಮೀಪಿಸುತ್ತಿದೆ. ನಿಮ್ಮಂತಹ ಶ್ರೇಷ್ಠರು ಆ ವ್ರತವನ್ನು ಕೈಕೊಂಡು ಮುಗಿಸಿರಿ. ನೀವು ಕೇಳಿದಷ್ಟು ಹೊನ್ನು ಕೊಡುತ್ತೇನೆ' ಎಂದನು. ಇದನ್ನು ಕೇಳಿದ ಬ್ರಾಹ್ಮಣನ ಬಾಯಲ್ಲಿ ನೀರೂರಿತು.

ಬಿತ್ತರದಿಂ ಕುರುಡಂ ಕ
ಣ್ಬೆತ್ತಂತಿರೆ, ರಾಗಮೊದವೆ ಬೆಲೆವಣ್ ಪೆಣ್ಣಂ
ಪೆತ್ತಂತಿರೆ. ಪಾರ್ವಂ ಮ
ಣ್ಬೆತ್ತಂತಿರೆ ಪಿರಿದು ಸಂತಸಂ ಮನದೊಳು (ಧರ್ಮಾ. ೧-೨೭)

(ಕುರುಡನಿಗೆ ಕಣ್ಣು ಬಂದಂತೆ, ಸೂಳೆಗೆ ಹೆಣ್ಣುಮಗುವು ಹುಟ್ಟಿದಂತೆ ಬ್ರಾಹ್ಮಣನಿಗೆ

ಭೂಮಿಯು ದೊರಕಿದಂತೆ ಅವನಿಗೆ ತುಂಬ ಸಂತಸ) ವಾಯಿತು. ಈ ಸೆಟ್ಟಿಯ ಬಳಿ ಅಪಾರ ಹಣವಿದೆ, ಅದರಲ್ಲಿ ಬೇಕಾದಷ್ಟು ಬೇಡಿ ತಾನು ಮುಂದೆ ಸುಖವಾಗಿರ ಬಹುದೆಂಬ ಆಸೆಯಾಯಿತು. ಆ ವ್ರತದ ಕ್ರಮವಾವುದು ಎಂದು ಕೇಳಿದನು. ತುಪ್ಪವನ್ನೂ ಮೃಷ್ಟಾನ್ನವನ್ನೂ ಕೈಗೆ ಹಾಕಿಸಿಕೊಂಡು ವ್ರತಮುಗಿಯುವವರೆಗೆ ಪ್ರತಿದಿನವು ಊಟಮಾಡಬೇಕು; ಮಾರನೆಯ ದಿನದ ಆ ಹೊತ್ತಿನವರೆಗೂ ಅನ್ನ ನೀರು ತಾಂಬೂಲಾದಿಗಳನ್ನು ತೆಗೆದುಕೊಳ್ಳದೆ ಧ್ಯಾನದಲ್ಲಿರಬೇಕು, ಮನೆಯಿಂದ ಹೊರಗೆ ಹೋಗಬಾರದು, ಸ್ನಾನ ಮಾಡ ಬಾರದು, ಬರಿಯ ನೆಲದ ಮೇಲೆ ಮಲಗಬೇಕು, ತಲೆಯ ಕೂದಲನ್ನು ಕೀಳಿಸಿಕೊಳ್ಳಬೇಕು. ಇದೇ ಪ್ರಕಾರ ವ್ರತವು ಎರಡು ತಿಂಗಳ ಕಾಲ ನಡೆಯುತ್ತದೆ ಎಂದು ದಯಾಮಿತ್ರನು ಹೇಳಿದಾಗ ಹಣದ ಆಸೆಯಿಂದ ವಸುಭೂತಿಯು ಅದಕ್ಕೆ ಒಪ್ಪಿದನು.

ಸರಿ, ಪ್ರಮಾಣವನ್ನು ಅಲ್ಲಿಗೇ ನಿಲ್ಲಿಸಿ ಬಿಡಾರ ಮಾಡಿದರು. ಮಾರನೆಯ ದಿನ ವ್ರತ ಪ್ರಾರಂಭವಾಯಿತು. ವಸುಭೂತಿಯನ್ನು ಉತ್ತರಾಭಿ ಮುಖವಾಗಿ ಕುಳ್ಳಿರಿಸಿ ತಲೆಯ ಕೂದಲನ್ನು ಚಿಮ್ಮುಟದಿಂದ ಕೀಳಿಸಲಾಯಿತು ಅದರ ನೋವನ್ನು ಸಹಿಸಲಾರದೆ.

ನಡುಗೆ ಶರೀರಂ, ಪಲ್ಲಂ
ಗಿಡಿಗಿಜಿದಿರ್ದೆಗೂಡುವಾಯೆ, ಪಂದೆಯ ಮೇಲ್ಪಾ
ವಡರ್ದಂತಿರೆ, ದೇಹಂ ಮರ
ವಡೆ, ಕಣ್ಣೀರ್ ಸುರಿಯೆ, ತಳದಿನದನೊತ್ತುತ್ತುಂ (ಧರ್ಮಾ. ೧–೧೪೨)

(ಶರೀರವು ನಡುಗುತ್ತಿರಲು ಹಲ್ಲುಕಚ್ಚಿ ಎದೆಗೂಡೇ ಹಾರಿಹೋಗುತ್ತಿರಲು, ಹೇಡಿಯ ಮೇಲೆ ಹಾವು ಬಿದ್ದಂತೆ ಹೆದರಿಕೆಯಿಂದ ದೇಹವು ಮರಗಟ್ಟಲು, ಕಣ್ಣೀರು ಸುರಿಯುತ್ತಿರಲು, ನೆಲವನ್ನು ಒತ್ತಿಕೊಂಡು ಕುಳಿತು)

ಬಿಡದೌಡುಗರ್ಚಿ ನೋಏಂ
ದಡಿಗಡಿಗಹಹಾಯೆನುತ್ತುಂ, ಎಡಗಯ್ಯಿಂದಂ
ತಡವರಿಸುತ್ತಂ, ಸಾಸವೆ
ಗುಡಿದಂತಿರೆ ಕರಮೆ ಮಱುಗಿ ತಳವೆಳಗಾದಂ (ಧರ್ಮಾ. ೧–೧೪೩)

(ಔಡುಗಚ್ಚಿ, ಆಗಾಗ ನೋವಿನಿಂದ 'ಹಾ' ಎಂದು ಚೀರುತ್ತ, ಎಡಗೈಯಿಂದ ತಲೆಯನ್ನು ನೇವರಿಸಿಕೊಳ್ಳುತ್ತ ಸಾಸಿವೆಯನ್ನು ರುಬ್ಬಿ ಕುಡಿದಂತೆ ನೋವಿನಿಂದ ದಿಕ್ಕೆಟ್ಟನು.) ಅದನ್ನು ಹೇಗೋ ಅನುಭವಿಸಿದನು. ಅನಂತರ ಸೆಟ್ಟಿಯಿತ್ತ ನಾನಾ ಬಗೆಯ ಭಕ್ಷ್ಯಗಳನ್ನು ತಿಂದು ತುಪ್ಪವನ್ನು ಕುಡಿದನು. ಇದರಿಂದ ಅವನಿಗೆ ಬಾಯಾರಿಕೆಯು ವಿಪರೀತವಾಗಿ ಕೋತಿಯನ್ನು ಹುಲ್ಲಿನಲ್ಲಿ ಮುಚ್ಚಿಟ್ಟರೆ ಅದು ಸಿಡಿಮಿಡಿಗೊಳ್ಳುವಂತೆ ಚಡಪಡಿಸಿದನು. ಹೀಗೆ ಪರಿತಪಿಸುವ ವಸುಭೂತಿಯು

ನೀರಟ್ಟಿ ಪೆರ್ಚೆ ನಿಲಲುಂ
ಸೈರಿಸಲುಂ ಬಾರದೆ ಆಳ್ಕಿ ತನ್ನಿಂದಂ ತಾ

ನೋರಂತೆ ಕುದಿದು ಮಱುಗುವ
ಸಾರಂಗದ ಪೋರಿಯಂದಮಂ ನೆಱೆ ಪೋಲ್ತುಂ (ಧರ್ಮಾ. ೧-೧೫೫)

(ಬಾಯಾರಿಕೆಯು ಅಸಾಧ್ಯವಾದಾಗ ಅದನ್ನು ಸೈರಿಸಲಾರದೆ ವ್ಯಥೆಪಟ್ಟು ತನ್ನಲ್ಲಿ ತಾನೇ ಮರುಗುವ ಸಾರಂಗದ ಹೋರಿಯಂತಾದ.) ಹಾಗೆ ರಾತ್ರಿ ನಾಲ್ಕು ಜಾವ ಪೂರ್ತಿ ಹೆಬ್ಬಾವಿನಂತೆ ತಿರುಗುತ್ತಿದ್ದ. ಮಳೆಯನ್ನು ನಿರೀಕ್ಷಿಸುವ ರೈತನಂತೆ ಆಕಾಶವನ್ನು ನೋಡುತ್ತಿದ್ದ. ಕಪ್ಪೆಯಂತೆ ತಂಪಾದ ಜಾಗದಲ್ಲಿ ನಿಲ್ಲುತ್ತಿದ್ದ. ಚೊಚ್ಚಿಲನ್ನು ಹೆರುವವಳ ಹಾಗೆ ಹೊರಳಾಡುತ್ತಿದ್ದ, ಮಾರನೆಯ ದಿನವೂ ಇದೇ ಬಗೆಯಾಯಿತು. ಆ ಮಾರನೆಯ ದಿವಸ ಮುಂದೆ ಉಂಟಾಗುವ ತೊಂದರೆಯನ್ನು ನೆನೆದು ಭಕ್ಷ್ಯಭೋಜ್ಯಗಳನ್ನು ಒಲ್ಲೆನೆಂದ. ಅದನ್ನು ಕೇಳಿ ಸೆಟ್ಟಿಯು 'ನಮ್ಮ ಋಷಿಗಳು ನಾವು ಹಾಕಿದ್ದನ್ನೆಲ್ಲ ಮೌನವಾಗಿ ಊಟಮಾಡುತ್ತಾರೆ. ಭೂದೇವರಾದ ತಮಗೆ ಇದಾವ ಮಹಾ' ಎಂದು ಮೂದಲಿಸುತ್ತಾನೆ. ಅದರಿಂದ ವಸುಭೂತಿ ಬಗ್ಗಲೇಬೇಕಾಯಿತು. ಎಂಟು ದಿನಗಳು ಕಳೆದವು. ಬಾಯಾರಿಕೆ ಮೈಕಡಿತಗಳು ಜೋರಾದವು. ಕೆರೆಗೆ ಹೋಗಿ ಒಂದೆರಡು ಗುಟುಕು ನೀರನ್ನು ಕುಡಿದು ಸ್ನಾನಮಾಡಿ ಬರುವುದಾಗಿ ಸೆಟ್ಟಿಯನ್ನು ಅಂಗಲಾಚಿ ಬೇಡಿಕೊಂಡ. ಊಹ್ಞೂ. ಈ ವ್ರತದಿಂದಾದ ನೋವು ಎಂತಹುದೆಂಬುದನ್ನು ಬ್ರಾಹ್ಮಣ ಹೇಳಿದ:

ಪುಲಿಯ ಮಿಸೆಯನ್ ಅಂಜುದುಯ್ಯಲನಾಡಲಪ್ಪುದು, ನಂಜನೆಂ
ಜಲಿಸಲಪ್ಪುದು, ಸಿಂಹಮಂ ಪಿಡಿದೇಱಲಪ್ಪುದು, ಕಿಚ್ಚನೊ
ಳ್ತೊಲಗದೊರ್ಮೆಯೆ ಪಾಯಲಪ್ಪುಮ, ಸೊಕ್ಕಿದಾನೆಗೆ ಸಂದು ಮಾ
ರ್ಮಲೆಯಲಪ್ಪುದು, ನಿನ್ನ ನೋಂಪಿಗೆ ಗಂಡನಾವನೊ ಸೈರಿಪಂ? (ಧರ್ಮಾ. ೧-೧೬೯)

(ಹುಲಿಯ ಮೀಸೆಯನ್ನು ಹಿಡಿದು ಹೆದರದೆ ಉಯ್ಯಾಲೆಯಾಡಬಹುದು. ವಿಷವನ್ನು ನೆಕ್ಕಬಹುದು, ಸಿಂಹವನ್ನು ನಿಲ್ಲಿಸಿ ಅದರ ಬೆನ್ನನೇರಬಹುದು. ಬೆಂಕಿಯಲ್ಲಿ ಹಾಯಬಹುದು. ಮದ್ದಾನೆಯೊಡನೆ ಹೋರಾಡಬಹುದು. ಆದರೆ ನಿನ್ನ ವ್ರತವನ್ನು ಸೈರಿಸುವ ಶೂರರು ಯಾರಿದ್ದಾರೆ?) ಇದನ್ನು ಕೇಳಿ ದಯಾ ಮಿತ್ರನು 'ನೀವು ಒಂದೆರಡು ತೊಂದರೆಗಳನ್ನೇ ಅನುಭವಿಸಲಾರಿರಿ. ಸಾಯುವವರೆಗೆ ಈ ಪರೀಷಹಗಳನ್ನೆಲ್ಲ ಎದುರಿಸುವ ಧೈರ್ಯವು ಸಾಮಾನ್ಯವೇ?' ಎಂದು ಕೇಳಿದ. ಆಗ ವಸುಭೂತಿಗೆ ಜ್ಞಾನೋದಯವಾಯಿತು. ಈ ಜಗತ್ತಿನ ಭೋಗಗಳು ಕ್ಷಣಿಕವಾದವು. ಇದರಿಂದಾಗುವ ತೊಂದರೆಗಳನ್ನೆಲ್ಲ ಲೆಕ್ಕಿಸದ ಮುನಿಗಳು ಅಪ್ರತಿಮರು.

ಅರುಮಿದಕ್ಕೆ ನಿತ್ತರಿಸಲಾಱರೆನಿಪ್ಪ ಪರೀಷಹಂಗಳಂ
ಸೈರಣೆಯಿಂದ ಗೆಲ್ವ ಮುನಿಮುಖ್ಯರ ಸಾರ್ದು ಜಿನೇಂದ್ರಧರ್ಮಮಂ
ಸಾರಮೆನಿಪ್ಪುದಂ ತಿಳಿದು ನಂಬಿದರ್ ಅನ್ಯರನೇಕೆ ಪೊರ್ದುವರ್?
ಮೇರುವನೇಱಿ ನೋಡಿದವರ್ಗೀ ಧರೆ ತಾಂ ಕಿಱಿದಾಗಿ ತೋರದೇ?
(ಧರ್ಮಾ. ೧-೧೭೯)

(ಯಾರೂ ಅನುಭವಿಸಲಾರದ ತೊಂದರೆಗಳನ್ನು ತಾಳ್ಮೆಯಿಂದಲೇ ಗೆಲ್ಲುವ ಮಹರ್ಷಿಗಳನ್ನು ಮೊರೆಹೊಕ್ಕು ಜೈನಧರ್ಮವನ್ನು ಸತ್ವಯುತವಾದುದೆಂದು ನಂಬಿದವರು

ಬೇರೆಯವರನ್ನೇಕೆ ಮೊರೆಹೋಗುತ್ತಾರೆ? ಮೇರುಪರ್ವತದ ಮೇಲಿನಿಂದ ನೋಡಿದವರಿಗೆ ಭೂಮಿಯು ಚಿಕ್ಕದಾಗಿ ಕಾಣುವುದಲ್ಲವೇ?) ಎಂದು ಅಲೋಚಿಸಿದ ವಸುಭೂತಿಯು ತನ್ನ ತಪ್ಪನ್ನು ಕ್ಷಮಿಸಬೇಕೆಂದೂ ಜಿನ ಧರ್ಮವನ್ನು ಬೋಧಿಸಬೇಕೆಂದೂ ದಯಾಮಿತ್ರನನ್ನು ಬೇಡಿಕೊಂಡನು. ಮುಂದೆ ಅವನು ಸನ್ಯಾಸವನ್ನು ಸ್ವೀಕರಿಸಿ ಸತ್ತನಂತರ ಮಣಿಕುಂಡಲನೆಂಬ ದೇವನಾಗಿ ಹುಟ್ಟಿದನು.

ಅಸ್ತೇಯವ್ರತ(ಕಳ್ಳತನ ಮಾಡದಿರುವುದು)ದ ಬಗ್ಗೆ ನಯಸೇನನು ಬರೆದ ಕತೆ ಹೊಸದೊಂದು ತಂತ್ರವನ್ನು ಅನುಸರಿಸಿ ಸ್ವಾರಸ್ಯಪೂರ್ಣವಾಗಿದೆ. ಕತೆಯಲ್ಲಿ ಹಲವಾರು ಪುಟ್ಟ ಕತೆಗಳನ್ನು ಸೇರಿಸಿ ಕುತೂಹಲವನ್ನು ಕೆರಳಿಸಿ ಮುಖ್ಯಕತೆಯು ಮುಂದುವರೆಯುತ್ತದೆ. ಅದನ್ನೀಗ ನೋಡೋಣ: ಅವಂತಿ ನಾಡಿನ ರಾಜಧಾನಿ ಉಜ್ಜಯಿನಿ. ಆ ಊರಿನ ರಾಜಶ್ರೇಷ್ಠಿಯು ಜಿನದತ್ತನೆಂಬ ನಿಷ್ಠಾವಂತ ಜೈನ. ಅವನ ಹೆಂಡತಿ ಜಿನೇಂದ್ರದಾಸಿ. ಒಮ್ಮೆ ಆ ಊರಿಗೆ ಜಿನಪಾಲಿತರೆಂಬ ಸವಣರು ಬಂದರು. ಕತ್ತಲಾದದ್ದರಿಂದ ಮುಂದೆ ಹೋಗ ಬಾರದೆಂದು ನಿರ್ಧರಿಸಿ ಹತ್ತಿರವಿದ್ದ ಶ್ಮಶಾನದ ನಡುವಿನ ಒಂದು ಬಂಡೆಯ ಮೇಲೆ ಮಲಗಿದರು. ಅವರು ನಿದ್ರಿಸುತ್ತಿದ್ದಾರೆ. ಒಬ್ಬ ವಿಡಂಬನೆಯ ಸಾಧಕನು ನಿಧಿಯನ್ನು ಸಾಧಿಸಬೇಕೆಂಬ ಅಪೇಕ್ಷೆಯಿಂದ ಶುಚಿಯಾಗಿ ಆ ಶ್ಮಶಾನಕ್ಕೆ ಬಂದ. ಈ ಮುನಿಯು ಅಚಲನಾಗಿ ನಿದ್ರಿಸುತ್ತಿದ್ದುದನ್ನು ಕಂಡು ಅದೊಂದು ಹೆಣವೆಂದು ಭಾವಿಸಿ, ಇನ್ನೆರಡು ಹೆಣಗಳನ್ನು ಎಳತಂದು ಆ ಮೂರು ದೇಹಗಳ ತಲೆಗಳೂ ಒಲೆಯಾಗುವಂತೆ ಜೋಡಿಸಿ ಬೆಂಕಿ ಮಾಡಿ ಚರುವನ್ನು ಮಾಡಲು ತೊಡಗಿದ. ಆ ಬೆಂಕಿಯು ಧಗಧಗನೆ ಉರಿಯುತ್ತಿದ್ದರೂ ಜೈನ ವ್ರತಿಯಾದ ಜಿನೇಂದ್ರಪಾಲಿತನು

> **ಮನದೊಳ್ ಜಱಿಯದೆ ಬೆರ್ಚದೆ**
> **ಮುನಿಯದೆ ಸೆಡೆಯದೆ ನಿಳಂಪನಗನಿಭಧೈರ್ಯಂ**
> **ತನುವಿನ ಮೇಲಣ ಮೋಹಂ**
> **ತನಗಿಲ್ಲದೆ ತಳರದೆ ಇರ್ದನ್ ಉನ್ನತಚಿತ್ತಂ** (ಧರ್ಮಾ. ೧೨-೪೦)

(ಶ್ರೇಷ್ಠವಾದ ಮನುಸ್ಸುಳ್ಳವನೂ ಮಂದರಪರ್ವತದಂತೆ ದೃಢವಾದ ಧೈರ್ಯವುಳ್ಳವನೂ ಆದ ಆತನು ಮನಸ್ಸಿನಲ್ಲಿ ಯಾವುದೇ ಬಗೆಯ ಭಯ, ಕೋಪ ಅಧೈರ್ಯಗಳಿಗೆ ಅವಕಾಶವಿರದೆ ಅಲುಗಾಡದೆ ಮಲಗಿದ್ದನು.) ಆದರೆ ಆ ಬೆಂಕಿಯು ಅವನ ತೋಳನ್ನು ಮುಟ್ಟಿದಾಗ ಸಿಡಿದು ತೋಳು ತನಗೆ ತಾನೆ ನೆಗೆಯಿತು. ಇದನ್ನು ಕಂಡು ವಿಡಂಬನು ಪಿಶಾಚಿಯೆಂದು ಹೆದರಿ ಓಡಿಹೋದ. ಮಾರನೆಯ ದಿನ ಜಿನದತ್ತನು ಈ ಸನ್ಯಾಸಿಯನ್ನು ಕಂಡು ಮನೆಗೆ ಕರೆ ತಂದು ಶುಶ್ರೂಷೆಯನ್ನು ಮಾಡಿದ. ಕೆಲವು ದಿನಗಳು ಚೆನ್ನಾಗಿ ನೋಡಿಕೊಂಡ ಮೇಲೆ ಮುನಿಯ ಹುಣ್ಣುಗಳೆಲ್ಲ ವಾಸಿಯಾಯಿತು. ಆದ್ದರಿಂದ ಅವನು ತನ್ನ ಸಂಚಾರವನ್ನು ಮುಂದುವರಿಸಲು ಹೊರಟ. ಅವನನ್ನು ಕಳಿಸಿ ಬರಲು ಜಿನದತ್ತನೂ ಹೋದ. ಈ ಸಮಯವನ್ನು ಕಾದಿದ್ದ ಜಿನದತ್ತನ ಮಗ ಜಿನದಾಸನೆಂಬುವನು ಕಳ್ಳತನದಿಂದ ಮನೆಯಲ್ಲಿದ್ದ ಸ್ವಲ್ಪ ಬಂಗಾರವನ್ನು ಕದ್ದ, ವಾಪಸ್ಸು ಬಂದ ಶೆಟ್ಟಿಯು ಬಂಗಾರವು ಕಡಿಮೆಯಾಗಿರುವುದನ್ನು ಕಂಡು ಮುನಿಯೇ

ಕದ್ದಿರಬೇಕೆಂದು ಭಾವಿಸಿ ಉಪಾಯಮಾಡಿ ಅವನನ್ನು ಮತ್ತೆ ಮನೆತೆ ಕರೆತಂದು ಈ ರೀತಿ ಯೋಚಿಸಿದ:

> **ತನುವಂ ಬಿಟ್ಟು ಪರತ್ರೆಯಂ ಪಡೆವಿನೆಂಬಾಕಾಂಕ್ಷೆಯಂ ಜೈನಸೇ**
> **ವನೆಯಂ ಮಾಡುತುಮಿರ್ದು ನಿಷ್ಕಪಟದಿಂ ಪಾಪಾರಿಯಂ ಗೆಲ್ವು ನೆ**
> **ಟ್ಟನೆ ಕೈವಲ್ಯವಿಭೂತಿಯಂ ಪಡೆಯದೆ ಇಂತೀ ಸಾಧು ಬೇಳಾಗಿ ಕೆ**
> **ಮ್ಮನೆ ಮೋಹೋದಯದಿಂದಮೆನ್ನ ಧನಮಂ ತಾನೇಕೆ ಕಳ್ದೊಯ್ದನೋ!**

(ಧರ್ಮಾ. ೧೨-೬೮)

(ದೇಹದ ಮೇಲಿನ ಮಮತೆಯನ್ನು ಬಿಟ್ಟು ಜನ ಸೇವೆಯನ್ನು ಮಾಡುತ್ತಿರುವ ಈ ಸಾಧುವು ಕಪಟವನ್ನು ಬಿಟ್ಟು ಪುಣ್ಯ ಸಂಪಾದನೆಯನ್ನು ಮಾಡಿ ಮೋಕ್ಷವನ್ನು ಪಡೆಯದೆ ಹೀಗೇಕೆ ನನ್ನ ಒಡವೆಗಾಗಿ ಆಸೆಪಟ್ಟೆ!) ಆದರೆ ಅವನನ್ನು ನೀವು ಬಂಗಾರವನ್ನು ಕದ್ದಿರಾ ಎಂದು ಹೇಗೆ ಕೇಳುವುದು? ಆದ್ದರಿಂದ ಉಪಾಯವಾಗಿ ಈ ವಿಷಯವನ್ನು ಪ್ರಸ್ತಾಪಿಸಬೇಕೆಂದು ಆ ಮುನಿಗೆ ಒಂದು ಕತೆಯನ್ನು ಹೇಳಲು ತೊಡಗಿದ: ವ್ಯಾಘ್ರಖೇಡವೆಂಬ ಒಂದು ಊರು. ಅಲ್ಲಿ ದಿನಕರನೆಂಬ ಒಬ್ಬ ಒಳ್ಳೆಯ ವ್ಯಕ್ತಿ, ಅವನ ಅಣ್ಣ ಕರಾಳನೆಂಬ ಕೆಟ್ಟ ಚಟಗಳಿಗೆ ಬಿದ್ದ ವ್ಯಕ್ತಿ–ಇಬ್ಬರೂ ವಾಸಿಸುತ್ತಿದ್ದರು. ಕರಾಳನು ಒಮ್ಮೆ ಹಣವಿಲ್ಲದಾಗ ಆ ಊರಿನ ಅರಮನೆಗೆ ಕನ್ನಹಾಕಿ ಸಿಕ್ಕಿದಷ್ಟು ಹಣವನ್ನು ದೋಚಿಕೊಂಡು ಹೊರಬಂದ, ತಳವಾರರು ಅದನ್ನು ಕಂಡು ಅಯುಧ ಸಮೇತರಾಗಿ ಹಿಂಬಾಲಿಸಿದರು. ಕರಾಳನಿಗೆ ಭಯವಾಗಿ ಒಬ್ಬ ವ್ಯಾಪಾರಿಯ ಬಳಿ ಬಂದು ಈ ರೀತಿ ಕೇಳಿಕೊಂಡ:

> **ಸಾವಾದುದೆನಗೆ, ನೀನೀ**
> **ಸಾವಂ ಪೋಗಿಸುವುದು; ಒಲ್ಲನೆಂದೊಡವರುಂ**
> **ನಾನಾ ವಿಧದಿಂ ಕೊಂದಪರ್,**
> **ಅವಂಗಂ ಕಾಯಬಾರದಿಂದಿನ ಕೊಲೆಯಂ** (ಧರ್ಮಾ. ೧೨-೭೪)

(ನನಗೆ ಸಾವು ಸಮೀಪಿಸಿದೆ, ನೀನೇ ಕಾಪಾಡಬೇಕು, ನೀನು ಕೈಬಿಟ್ಟರೆ ಚಿತ್ರ ಹಿಂಸೆ ಮಾಡಿ ನನ್ನನ್ನಿವರು ಕೊಲ್ಲುತ್ತಾರೆ.) ಆ ವ್ಯಾಪಾರಿಯು 'ಕಳ್ಳನೊಳ್ಳಿದನಿಲ್ಲ ನಾಯ್ ಮೋನಿಯಲ್ಲ' ಎಂದು ಯೋಚಿಸದೆ ಅವನನ್ನು ಹತ್ತಿರ ಕುಳ್ಳಿರಿಸಿಕೊಂಡು ಬಟ್ಟೆಯೊಂದನ್ನು ಹೊದ್ದುಕೊಂಡ. ತಳವಾರರು ಈ ಮನೆಗೆ ಕಳ್ಳನು ಬಂದದ್ದನ್ನು ಕಂಡು ಬಂದು ಮನೆಯಲ್ಲೆಲ್ಲ ಹುಡುಕಾಡಿದರು, ಈ ಶೆಟ್ಟಿಯು ಡೊಳ್ಳು ಹೊಟ್ಟೆಯವನೆಂದು ಭಾವಿಸಿ ಹೊರಟುಹೋದರು. ಸದ್ಯ ಪ್ರಾಣವುಳಿಯಿತಲ್ಲ ಎಂದು ಕಳ್ಳನು ಸಮಾಧಾನ ಪಟ್ಟ. ಗಲಿಬಿಲಿಯೆಲ್ಲ ಶಾಂತವಾದ ಮೇಲೆ ಕರಾಳನ ಕಣ್ಣು ತನ್ನನ್ನು ಕಾಪಾಡಿದ ಶೆಟ್ಟಿಯ ಹಣದ ಚೀಲದ ಮೇಲೆ ಬಿತ್ತು. ತನಗೆ ಉಪಕಾರವನ್ನು ಮಾಡಿದುದನ್ನೂ ಮರೆತು ಅವನು ಶೆಟ್ಟಿಯನ್ನು ಕೊಂದು ಹಣದ ಚೀಲವನ್ನು ತೆಗೆದುಕೊಂಡು ಓಡಿಹೋದ. ಹೀಗೆ ಕೆಲವರು ಉಪಕಾರವನ್ನು ಸ್ಮರಿಸದೆ ಅಪಕಾರವನ್ನು ಮಾಡುತ್ತಾರೆ ಎಂದು ಜಿನದತ್ತನು ಕತೆಯನ್ನು ಮುಗಿಸಿದ.

ಇದರ ಅರ್ಥ ಜಿನಪಾಲಿತಮುನಿಗೆ ತಿಳಿಯಿತು. ತನ್ನ ಮನೆಯಲ್ಲಿ ಯಾವುದೋ ಒಡವೆ ಕಳುವಾಗಿರುವುದರಿಂದ ವಿವೇಚನೆಯಿಲ್ಲದೆ ತನ್ನ ಮೇಲೆ ಅನುಮಾನಿಸುತ್ತಿರುವನೆಂದು ಭಾವಿಸಿ ತಾನು ಕಳ್ಳನಲ್ಲವೆಂಬುದನ್ನು ತಿಳಿಸಲು ತಾನೂ ಒಂದು ಕತೆಯನ್ನು ಹೇಳಿದ: ಕೇಸರಿಪುರವೆಂಬ ಊರಿನಲ್ಲಿ ವಾಸವನೆಂಬವನು ರಾಜಶ್ರೇಷ್ಠಿ. ಅವನ ಚಿಕ್ಕ ಮಗು ವಿಮಳನೆಂಬುವನು ಆಭರಣಗಳನ್ನು ತೊಟ್ಟುಕೊಂಡು ಮನೆಯಂಗಳದಲ್ಲಿ ನಿತ್ಯವೂ ಆಟವಾಡುತ್ತಿತ್ತು. ಅದನ್ನು ನೋಡಿದ ನೆರೆಮನೆಯಾಕೆಗೆ ಆಭರಣಗಳ ಮೇಲೆ ಆಸೆಯಾಯಿತು. ಯಾರೂ ಕಾಣದಂತೆ ಆ ಮಗುವನ್ನೆತ್ತಿಕೊಂಡು ಅದರ ಗಂಟಲನ್ನು ಹಿಸುಕಿ ಕೊಂದು ಆಭರಣಗಳನ್ನೆಲ್ಲ ಕದ್ದಳು. ಮಗುವಿನ ಹೆಣವು ಅಲ್ಲಿದ್ದರೆ ತನ್ನ ಮೇಲೆ ಅನುಮಾನ ಬರುವುದೆಂದು ಭಾವಿಸಿ ಅದನ್ನು ಊರಿನ ಒಂದು ಸಾಧುವಾದ ಬಸವನ ಕೊಂಬುಗಳ ನಡುವೆ ಸಿಕ್ಕಿಸಿದಳು: ಈ ಬಸವನೇ ಮಗುವನ್ನು ಕೊಂದಿರಬೇಕೆಂದು ಜನರು ತಿಳಿಯುತ್ತಾರೆಂದು ಅವಳು ಬಗೆದಳು. ಇತ್ತ ವಾಸವನು

ಅಮರ್ದಿನೊಳ್ದೊರೆಯಪ್ಪ ಬಾಟೆಯ ಪಣ್ಣನೊಯ್ಯನೆ ಕೊಂಡು ಬಂ
ದಮಿತಸೌಖ್ಯನುದಾರನಾ ವಣಿಗೇಶ್ವರಂ ಮಗನೆಲ್ಲಿದಂ
ಕಮಲಲೋಚನನೆಂದು ಪುತ್ರಮೋಹದಿಂ ಬೆಸಗೊಳ್ವುದುಂ
ಭ್ರಮೆಯಿನೆಲ್ಲರುಂ ಅಲ್ಲಿಗಲ್ಲಿಗೆ ನೋಡಿ ಕಾಣದೆ ದುಃಖದಿಂ (ಧರ್ಮಾ. ೧೨-೧೧೮)

(ಮಗುವಿಗೆ ಕೊಡಬೇಕೆಂದು ಪ್ರೀತಿಯಿಂದ ರುಚಿಯಾದ ಬಾಳೆಯ ಹಣ್ಣುಗಳನ್ನು ತೆಗೆದುಕೊಂಡು ಬಂದ ಆ ರಾಜಶ್ರೇಷ್ಠಿಯು ಮಗನೆಲ್ಲಿ ಎಂದು ವಿಚಾರಿಸಿದಾಗ ಅಲ್ಲಿಲ್ಲದಿದ್ದದನ್ನು ತಿಳಿದು ದುಃಖದಿಂದ) ಎಲ್ಲ ಕಡೆಯೂ ಹುಡುಕಾಡಿದ. ಮಗುವಿನ ಹೆಣವು ಬಸವನ ಕೋಡಿನಲ್ಲಿದ್ದುದನ್ನು ಕಂಡು ಅದೇ ಮಗುವನ್ನು ಕೊಂದಿರ ಬೇಕೆಂದು ಭಾವಿಸಿ ಜನರು ಬಡಿದರು. ಆಗ ತಾನು ನಿರ್ಮಲ ಮನಸ್ಸಿನ ಪ್ರಾಣಿಯೆಂದು ತೋರಿಸುವಂತೆ ಆ ಬಸವನು ಕಮ್ಮಾರನ ಮನೆಗೆ ಬಂದು ಕಾದ ಕಬ್ಬಿಣವನ್ನು ಬಾಯಲ್ಲಿ ಕಚ್ಚಿಕೊಂಡು ಜನಕ್ಕೆದುರಾಗಿ ಬಂದಿತು. ಇದನ್ನು ಕಂಡು ಅಚ್ಚರಿಯಿಂದ ಜನರು ಬಸವನು ಮಗುವನ್ನು ಕೊಂದಿಲ್ಲವೆಂದು ಭಾವಿಸಿ ತಳವಾರ ನನ್ನು ನೇಮಿಸಿದಾಗ ಅವನು ಕೊಲೆಗಾತಿಯನ್ನು ಹುಡುಕಿದ. ಅಪರಾಧಿಯಲ್ಲದ ಬಸವನನ್ನು ಬಡಿದುದಕ್ಕಾಗಿ ಜನರಿಗೆ ಪಶ್ಚಾತ್ತಾಪವಾಯಿತು. ಹೀಗೆ ಮಹಾತ್ಮರ ಬಗ್ಗೆ ಅರೋಪವನ್ನು ಹೊರಿಸುವಾಗ ವಿವೇಕತನದಿಂದ ವರ್ತಿಸಬೇಕು ಎಂದು ಮುನಿಯು ಕತೆಯನ್ನು ಮುಗಿಸಿದ.

ಆದರೆ ಇಷ್ಟರಿಂದಲೇ ಮನಸ್ಸಿನ ಸಂಶಯವು ಹೋಗದೆ ಶೆಟ್ಟಿ ಕತೆಯನ್ನು ಹೇಳುವುದು, ಮುನಿಯು ಅದಕ್ಕೆ ಪ್ರತಿಯಾಗಿ ಕತೆ ಹೇಳುವುದು–ಹೀಗೇ ನಡೆಯಿತು. ಹೀಗೆ ಹನ್ನೆರಡು ಕತೆಗಳಾದವು. ಆದರೂ ಆ ಶೆಟ್ಟಿಯ ಸಂಶಯ ನಿವಾರಣೆ ಯಾಗಲಿಲ್ಲ. ಇವನ ಅನುಮಾನ ಪರಿಹಾರವು ಸಾಧ್ಯವಿಲ್ಲವೆಂದು ತಿಳಿದು ಮುನಿಯು ಮೌನ ವ್ರತವನ್ನು ಕೈಗೊಂಡ. ಇವನನ್ನು ಮಾತನಾಡಿಸಲು ಪ್ರಯತ್ನಿಸಿದ ಶೆಟ್ಟಿಯು ಕೋಪದಿಂದ

ಕುಡು ಕೊಂಡೊಡಮೆಯಂ, ಈಗಳೆ
ಕುಡಿದಿರ್ದೊಡೆ ಮುಳಿವೆನ್ ಇಕ್ಕುಟಿಗೊಳ್ ಕಯ್ಯಂ ಕೂ
ಗಿಡ ಕೊಯ್ದು ಕೊಯ್ದು ಸುಣ್ಣವನ್
ಇಡುವೆಂ, ಪಿಡಿದೊಯ್ದು ಮೆಟ್ಟುವೆಂ ಪೆರ್ಗೆಱೆಯೊಳ್ (ಧರ್ಮಾ. ೧೨-೧೪೪)

(ಕದ್ದ ಒಡವೆಯನ್ನು ಕೊಡು, ಇಲ್ಲದಿದ್ದರೆ ಕಯ್ಯನ್ನು ಕತ್ತರಿಸಿ ಸುಣ್ಣವನ್ನು ಹಚ್ಚುತ್ತೇನೆ, ಕೆರೆಯಲ್ಲಿ ಮುಳುಗಿಸುತ್ತೇನೆ) ಎಂದು ಗರ್ಜಿಸಿದ. ಇದನ್ನೆಲ್ಲ ಮರೆಯಲ್ಲಿ ಕೇಳುತ್ತಿದ್ದ ಜಿನದಾಸನಿಗೆ ತನ್ನಿಂದ ಮುನಿಗೆ ಹೀಗಾಯಿತಲ್ಲ ಎಂಬ ದುಃಖವೂ ಆಯಿತು, ತಂದೆಯ ಕೆಟ್ಟತನವನ್ನು ಕಂಡು ಜಿಗುಪ್ಸೆಯಾಯಿತು. ಇದರಿಂದ ಅವನಿಗೆ ವೈರಾಗ್ಯವುಂಟಾಗಿ ಅವನು ದೀಕ್ಷೆಯನ್ನು ಕೈಗೊಂಡ. ಇದನ್ನು ಕಂಡು ಜಿನದತ್ತನಿಗೂ ವೈರಾಗ್ಯ ಬಂದು ಅವನೂ ದೀಕ್ಷೆಯನ್ನು ಕೈಗೊಂಡ.

ಈ ಮೇಲಿನ ಉದಾಹರಣೆಗಳಿಂದ ಇವನ ಕಾಲಕ್ಕಾಗಲೇ ಕರ್ನಾಟಕದಲ್ಲಿ ಜೈನಧರ್ಮದ ಜನಪ್ರಿಯತೆಯು ಇಳಿಮುಖವಾಗತೊಡಗಿತ್ತು. ಆದ್ದರಿಂದ ಅದನ್ನು ಜನಸಾಮಾನ್ಯರಲ್ಲಿ ಪ್ರಸಾರಮಾಡುವ ಸಲುವಾಗಿ ಜನರಿಗೆ ಹಿಡಿಸುವ ರೀತಿಯಲ್ಲಿ ಆ ಧರ್ಮದ ಮಹತ್ವಗಳನ್ನು ಹೇಳುವುದು ಅವಶ್ಯಕವೆಂಬುದನ್ನು ಗುರುತಿಸಿದವರಲ್ಲಿ ನಯಸೇನನು ಅಗ್ರಗಣ್ಯ. ಆದ್ದರಿಂದಲೇ ಅವನು ಜನರಿಗೆ ಪ್ರಿಯವಾಗುವ ಕತೆಗಳ ಮೂಲಕ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳಲು ಧರ್ಮಾಮೃತದ ಮೂಲಕ ಪ್ರಯತ್ನಿಸಿದ್ದಾನೆ. ಅವನಿಗೆ ಜನರ ನಡೆ-ನುಡಿಗಳು ತುಂಬ ಪರಿಚಿತವಾಗಿದ್ದವು. ತನ್ನ ಕಾವ್ಯದಲ್ಲಿ ನೀಡುವ ಹೋಲಿಕೆಗಳು ದೃಷ್ಟಾಂತಗಳು ಇವುಗಳಲ್ಲಿ ಬಹುಪಾಲು ನಿತ್ಯದ ಜೀವನಕ್ಕೆ ಸಂಬಂಧಿಸಿದ ಸಂಗತಿಗಳಾಗಿವೆ. ಅವುಗಳಲ್ಲಿ ಅನೇಕ ಗಾದೆಗಳೂ ನಾಣ್ಣುಡಿಗಳೂ ಸೇರಿವೆ. 'ಸುಂಟಿ ತಿಂದ ಬಾಯೊಳ್ ಬಿಸಿನೀರಂ ಕುಡಿದಂತೆ', 'ಪೊನ್ನೆಡೆಯೊಳ್ ನಾಯನಪ್ಪೊಡಂ ನಂಬಲಾಗದು', 'ಕೋಡಗಮಂ ಪುಲ್ಲೊಳ್ ಮುಚ್ಚೆ ಸಿಡಿಮಿಡಿಗೊಂಬಂತೆ,' 'ಬೆಕ್ಕು ಪಾಲಂ ಕಾಣ್ಬುದಲ್ಲದೆ ಮೇಗೆ ಬಂದಡಸುವ ಬಡಿಗೆಯಂ ಕಾಣದಂತೆ', 'ಪಣ್ಣಿಂಗಿಟ್ಟೊಡೆ ಕಾಯ್ ಬಿರ್ದುದು', 'ಸೇದೆಗೆಟ್ಟು ಜವ್ವನೆಗಾಳ್ದಾನದ ಮುದುಪನಂತೆ', 'ಗೆಲ್ಲದ ಕಾಳೆಗದಿಂದೋಟಮೆ ಲೇಸು', 'ಸಿಂಹದ ದಾರಿಯೊಳಿರ್ದ ಗಾರಿಗೆಯಂತೆ', 'ಬೆಟ್ಟಮಂ ಗುಂಗುರು ಕಾಡಿತ್ತೆಂಬ ಮಾತಿನಂತೆ', 'ಅರಸುವ ಬಳ್ಳಿ ಕಾಲೊಳ್ ತೊಡರ್ದುದೆಂಬಂತೆ' ಇತ್ಯಾದಿ ನೂರಾರು ಮಾತುಗಳನ್ನು 'ಧರ್ಮಾಮೃತ'ದಲ್ಲಿ ಕಾಣಬಹುದು. ಈ ಕಾವ್ಯವು ಗಾದೆ-ನಾಣ್ನುಡಿಗಳ ದೊಡ್ಡ ಕಣಜ. ಅಲ್ಲದೆ ಸಾಮಾನ್ಯ ಜನಕ್ಕೆ ತಲುಪುವ ಉದ್ದೇಶದಿಂದ ಅವನ ಭಾಷೆಯೂ ಸರಳವಾಗಿ ಹರಿಯುತ್ತದೆ. ಅಲ್ಲಿಯವರೆಗೂ ಬೆಳೆದು ಬಂದ ಚಂಪೂಸಂಪ್ರದಾಯಕ್ಕೆ ಬದ್ಧನಾದ ನಯಸೇನನು ಆ ಪ್ರಕಾರದಲ್ಲಿಯೇ ತನ್ನ ಕಾವ್ಯವನ್ನು ಬರೆದನಾದರೂ ಅದಕ್ಕೆ ಹೊಸ ತಿರುವೊಂದನ್ನು ಕೊಟ್ಟ. ಪುರಾಣಕತೆಗಳನ್ನು ಕಾವ್ಯ ವಸ್ತುವಾಗಿ ಮಾಡಿಕೊಳ್ಳದೆ ಕತೆಗಳನ್ನು ರಂಜಕವಾಗಿ ಹೇಳಿದ. ಅದರಲ್ಲಿ ಸಾಮಾನ್ಯರ ಜೀವನಚಿತ್ರವನ್ನೇ ತುಂಬಿದ. ಜನರ ಭಾಷೆಯನ್ನೇ ಚಂಪೂವಿನ ಚೌಕಟ್ಟಿನಲ್ಲಿ ಇಡಿಕಿರಿಸಿದ, ಆದ್ದರಿಂದಲೇ "'ಧರ್ಮಾಮೃತ' ಬಾಹ್ಯರೂಪದಲ್ಲಿ ಚಂಪೂಕಾವ್ಯ,

ಅಂತಸ್ಸತ್ವದಲ್ಲಿ ಜಾನಪದಕಾವ್ಯ",[೯] ಎಂಬ ಮಾತು ಸತ್ಯವಾದುದು.

ಮಾಲೋಪಮೆಯು ನಯಸೇನನ ಮತ್ತೊಂದು ವೈಶಿಷ್ಟ್ಯ. ಒಂದು ಉಪಮೇಯಕ್ಕೆ ಹಲವಾರು ಉಪಮಾನಗಳನ್ನು ಬಳಸುವುದನ್ನು ಮಾಲೋಪಮೆ ಎನ್ನುತ್ತಾರೆ. ಇಂತಹುದು ನಯಸೇನನಲ್ಲಿ ಹೇರಳವಾಗಿವೆ. ಅವನ ಬಾಯಲ್ಲಿ ಮಾಲೋಪಮೆಗಳು ಸಹಜವಾಗಿ ಸುಂದರವಾಗಿ ಹೊಮ್ಮುತ್ತವೆ. ಹಿಂದೆ ನಿದರ್ಶನ ವಾಗಿ ಹೇಳಿದ ವಸುಭೂತಿಯ ಕತೆಯಲ್ಲಿ ಆ ಬ್ರಾಹ್ಮಣನು ಶೆಟ್ಟಿಯ ವ್ರತವನ್ನು ಹಿಡಿದು ಬಾಯಾರಿಕೆಯಿಂದ ಬಳಲಿದುದನ್ನು ವರ್ಣಿಸಲು ಕವಿ ಕೊಡುವ ಮಾಲೋಪಮೆಯಿದು: 'ಅಂತು ಗಾಳಿಗೊಡ್ಡಿದ ಸೊಡರಂತೆ ನಡುಗಿ, ಮಟದ ಬೆಕ್ಕಿನಂತೊಳಗಣ್ಗೋಡಿಯಾಡಿ, ಒಲ್ಲದ ಪೆಂಡತಿಯಂತೆ ಸುಯ್ದು, ಬೇಸಗೆಯ ಕೋಣನಂತೆ ನಾಲಗೆಯನುರ್ಚಿ, ಹಾಸುಗೊಂಡ ನಾಯಂತೆ ಸಿಡಿಮಿಡಿಗೊಂಡು, ಹುಣಿಸೆಯ ಕಾಯಂ ತಿಂದರಂತೆ ಚಳಿತು, ಬಡವೊಡಲಂತೆ ಜೋಲ್ದು, ಮಾಱುವಡೆಯದ ಪರದನಂತೆ ಕಂದಿ, ತಣ್ಪೇಱಿದ ಪರೆಯಂತೆ ದನಿ ಪೊರಮಡದೆ, ಬಯಲೊಳಿಕ್ಕಿಳಿದ ಮೀನಂತೆ ಮಿಡುಕಿ ಸಮ್ಯಕ್ತ್ವ ಚೂಡಾಮಣಿಗಿಂತೆಂದಂ.' ಬಾಯಾರಿಕೆಯಿಂದಾದ ದೇಹ ಬಾಧೆಯನ್ನು ಅನುಭವಿಸುತ್ತಿದ್ದವನು ಎಷ್ಟೆಲ್ಲ ಬಗೆಯಲ್ಲಿ ನರಳುತ್ತಿದ್ದನೆಂಬುದನ್ನು ಇಲ್ಲಿ ಕವಿ ಹಲವಾರು ಉಪಮೆಗಳಿಂದ ಚಿತ್ರಿಸಿದ್ದಾನೆ. ಇದು ನಯಸೇನನ ವಿಶಿಷ್ಟ ತಂತ್ರವೂ ಹೌದು, ಸಹಜವಾದ ಬರವಣಿಗೆಯ ರೀತಿಯೂ ಹೌದು. ಇಂತಹ ಕವಿ ಕನ್ನಡದಲ್ಲಿ ಮತ್ತೊಬ್ಬನಿಲ್ಲ.

ನಯಸೇನನ ಕಾವ್ಯದ ಉದ್ದೇಶ ಜೈನಧರ್ಮದ ಶ್ರೇಷ್ಠತೆಯನ್ನು ಸಾರುವುದು. ಆದ್ದರಿಂದ ಇತರ ಧರ್ಮಗಳನ್ನು ಜೈನಧರ್ಮದೊಡನೆ ಹೋಲಿಸಿ ತನ್ನ ಮತದ ಶ್ರೇಷ್ಠತೆಯನ್ನು ಹೇಳುವಾಗ ಮಿಕ್ಕವುಗಳನ್ನು ವಿಡಂಬನೆಗೀಡುಮಾಡುವುದು ಸಹಜವೇ ಆಗಿದೆ. ನಯಸೇನನೂ ಹಾಗೆಯೇ ಮಾಡಿದ್ದಾನೆ. ಆದರೆ ಈ ಕವಿಯು ಬೇರೆಯವ ರನ್ನು ಟೀಕಿಸುವಾಗ ಅತಿರೇಕಕ್ಕೆ ಹೋಗಿಲ್ಲ. ಉದಾಹರಣೆಗೆ ನೋಡಿ: ಇತರ ಧರ್ಮ ಗಳು ಹೊರಗೆ ಚೆನ್ನಾಗಿ ಕಾಣಬಹುದು, ಒಳಗಿನ ಸತ್ವದಲ್ಲಲ್ಲ: ಜನರಿಗೆ ಇತರ ಧರ್ಮ ಗಳು ಬೇಕಾದಂತೆ ನಡೆಯಲು ಅವಕಾಶವಿತ್ತರೆ ಜೈನಧರ್ಮವು ಶ್ರೇಷ್ಠ ನಡತೆಯುಳ್ಳವ ರನ್ನು ಮಾತ್ರ ಪುರಸ್ಕರಿಸುತ್ತದೆ; ಆದ್ದರಿಂದ ಇತರ ಮಾರ್ಗಗಳಲ್ಲಿ ಹೋಗುವವರಿಗೆ ಜೈನ ಧರ್ಮವು ಒಗ್ಗಲಾರದು ಎಂಬುದಕ್ಕೆ ಈ ಕವಿ ಹೇಳುವ ಮಾತಿದು:

ಕಡುಮೂರ್ಖರ್ ತಮ್ಮಿಚ್ಚೆಗೆ
ಹಿಡಿದುದೆ ಪಿರಿದೆಂಬರಣ್ಣ, ಜಿನಮಾರ್ಗದೊಳೇಂ
ನಡೆಯಲ್ ಬರ್ಕುಮೆ? ಬಾರದು
ಕಡಲೆಗಳಂ ತಿಂಬ ಮೊಗ್ಗು ಕಲ್ಗಳೊಳುಂಟೆ? (ಧರ್ಮಾ. ೧-೧೭೫)

(ಮೂರ್ಖರು ತಮಗೆ ಇಷ್ಟವಾದುದನ್ನೇ ಶ್ರೇಷ್ಠವಾದುದೆಂದು ಭಾವಿಸುತ್ತಾರೆ. ಅಂತಹವರಿಗೆ ಜಿನಮಾರ್ಗವು ಸರಿಹೋಗಲಾರದು. ಕಡಲೆಯನ್ನು ತಿನ್ನುವಾಗಿನ ರುಚಿಯು ಕಲ್ಲುಗಳಲ್ಲಿ ದೊರೆಯುತ್ತದೆಯೇ?)

ಹೀಗೆ ಒಟ್ಟಾರೆ ನಯಸೇನನಿಗೆ ಕನ್ನಡ ಸಾಹಿತ್ಯದಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ. ಚಂಪೂ ಸಂಪ್ರದಾಯದಲ್ಲಿ ವಸ್ತು, ಭಾಷೆಗಳ ದೃಷ್ಟಿಯಿಂದ ಹೊಸ ರೂಪ ವನ್ನು ಕೊಟ್ಟು ಅದು ಜನಸಾಮಾನ್ಯರ ಹತ್ತಿರ ಬರುವಂತೆ ಮಾಡಿದವನು ಅವನು. "ಕನ್ನಡ ಸಾಹಿತ್ಯದ ಪ್ರಥಮ ಶ್ರೇಣಿಯ ಕವಿಗಳಲ್ಲಿ ನಯಸೇನನೂ ಒಬ್ಬನೆಂದು ಹೇಳುವ ಧಾರ್ಷ್ಟ್ಯ ನಮಗಿಲ್ಲ. ಆದರೆ ಜನ ಸಾಮಾನ್ಯಕ್ಕೆ ಪ್ರಯೋಜನವಾಗುವ ಕಾವ್ಯ ಮಾರ್ಗವೊಂದನ್ನು ರೂಪುಗೊಳಿಸಿ ಕನ್ನಡ ಸಾಹಿತ್ಯವು ಜನಪ್ರಿಯವಾಗುವಂತೆ ಮಾಡಿದ ಕೆಲಸ ಇವನದು."[೧೦]

ಕರ್ಣಪಾರ್ಯ

ಕನ್ನಡ ಭಾಷೆಯಲ್ಲಿ 'ನೇಮಿನಾಥಪುರಾಣ'ವನ್ನು ಹಲವರು ಕವಿಗಳು ರಚಿಸಿದ್ದಾರೆ. ನಮಗೆ ಕನ್ನಡದಲ್ಲಿ ಸಿಕ್ಕಿರುವ ನೇಮಿನಾಥ ತೀರ್ಥಂಕರನ ಪುರಾಣಗಳು ಎಂಟು. ಅವುಗಳಲ್ಲಿ ಮೊದಲನೆಯದನ್ನು ರಚಿಸಿದ ಕವಿ ಕರ್ಣಪಾರ್ಯ. ಇವನು ಶಿಲಾಹಾರ ವಿಜಯಾದಿತ್ಯನ ಮಂತ್ರಿಯಾಗಿದ್ದ ಲಕ್ಷ್ಮೀಧರನೆಂಬುವವನ ಆಶ್ರಯದಲ್ಲಿದ್ದ ವನು. ಇವನ ಕಾಲ ಸು. ೧೧೪೦. ಈತನು ಈಗಿನ ಕೊಲ್ಲಾಪುರ ಪ್ರಾಂತದವ ನಿರಬೇಕೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಇವನಿಗೆ 'ಭವ್ಯಜನವನ ಮಾರ್ತಾಂಡ', 'ಪರಮಜಿನ ಕ್ಷೀರವಾರಾಶಿ ಚಂದ್ರ', 'ಸಮ್ಯಕ್ತ್ವರತ್ನಾಕರ' ಇತ್ಯಾದಿ ಬಿರುದುಗಳಿದ್ದವು.

ಈ ಕವಿಯ 'ನೇಮೀನಾಥಪುರಾಣ' ಅಥವಾ 'ಹರಿವಂಶಪುರಾಣ'ವೆಂಬ ಹೆಸರಿನ ಕೃತಿಯು ಹದಿನಾಲ್ಕು ಅಶ್ವಾಸಗಳಿಂದ ಕೂಡಿ ಚಂಪೂ ರೂಪದಲ್ಲಿ ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥನ ಚರಿತೆಯನ್ನೂ ಒಂಬತ್ತನೆಯ ಬಲದೇವ-ವಾಸುದೇವರಾದ ಕೃಷ್ಣ-ಬಲರಾಮರ ಹರಿವಂಶ ಚರಿತೆಯನ್ನೂ ವರ್ಣಿಸುತ್ತದೆ. ಹರಿವಂಶದ ಕತೆಯೊಡನೆ ಕುರುವಂಶದ ಕತೆಯೂ ಈ ಪುರಾಣದಲ್ಲಿ ಹೆಣೆದುಕೊಂಡಿರುತ್ತದೆ. ಆದರೆ ಈ ಕತೆಯು ಮಹಾಭಾರತ ಭಾಗವತಗಳ ಕತೆಗಳಿಗಿಂತ ಹಲವಾರು ಅಂಶಗಳಲ್ಲಿ ಭಿನ್ನವಾಗಿದೆ: (೧) ವಸುದೇವನು ಸಮುದ್ರ ವಿಜಯನೆಂಬುವವನ ಕಿರಿಯ ತಮ್ಮ: ಇವನು ಸ್ವಯಂವರಗಳಲ್ಲಿ ಅನೇಕ ಸುಂದರಿಯರನ್ನು ಗೆಲ್ಲುತ್ತಾನೆ. (೨) ಉಗ್ರಸೇನ-ಪದ್ಮಾವತಿಯರ ಮಗನಾದ ಕಂಸನು ತಾಯಿಯ ಬಸುರಿನಲ್ಲಿರುವಾಗಲೇ ತಂದೆಯ ಮಾಂಸವನ್ನು ತಿನ್ನಬೇಕೆಂಬ ಬಯಕೆಯನ್ನು ತಾಯಿಯಲ್ಲಿ ಉಂಟುಮಾಡಿದ್ದರಿಂದ, ಆ ಮಗುವನ್ನು ಹುಟ್ಟಿದೊಡನೆ ಪೆಟ್ಟಿಗೆಯೊಂದರಲ್ಲಿಟ್ಟು ನದಿಯಲ್ಲಿ ತೇಲಿಬಿಟ್ಟನಂತರ ಮದ್ಯ ಮಾರುವ ಹೆಂಗಸಿಗೆ ಆ ಪೆಟ್ಟಿಗೆಯು ಸಿಕ್ಕಿದಾಗ, ಅವಳು ಆ ಮಗುವಿಗೆ ಕಂಸನೆಂಬ ಹೆಸರನ್ನಿಟ್ಟು ಸಾಕುತ್ತಾಳೆ. (೩) ಕಂಸನು ಮುಂದೆ ಜರಾಸಂಧನ ಮಗಳಾದ ಜೀವಂಜಸೆಯನ್ನು ಮದುವೆಯಾಗಿ ಮಾವನ ಸಹಾಯದೊಡನೆ ತನ್ನ ತಂದೆಯಾದ ಉಗ್ರಸೇನನನ್ನು ಸೆರೆಯಲ್ಲಿಟ್ಟು ತಾನೇ ರಾಜ್ಯವನ್ನು ವಹಿಸಿಕೊಳ್ಳುತ್ತಾನೆ. ಚಿಕ್ಕಪ್ಪನ ಮಗಳಾದ ದೇವಕಿಯನ್ನು ವಸುದೇವನಿಗೆ ಕೊಟ್ಟು ಮದುವೆಯನ್ನು ಮಾಡಿಸುತ್ತಾನೆ. (೪) ದೇವಕಿಯ ಮಗುವಿನಿಂದಲೇ ತನ್ನ

ಸಾವುಂಟಾಗುತ್ತದೆಂಬುದನ್ನು ತಿಳಿದು ಅವಳ ಆರು ಮಕ್ಕಳನ್ನು ಹುಟ್ಟಿದೊಡನೆ ಕೊಲ್ಲಿಸುತ್ತಾನೆ: ವಸುದೇವನು ಏಳನೆಯ ಮಗುವಾದ ಶ್ರೀಕೃಷ್ಣನನ್ನು ನಂದಗೋಕುಲ ದಲ್ಲಿ ಬಚ್ಚಿಟ್ಟು ಬೆಳೆಯುವಂತೆ ಮಾಡುತ್ತಾನೆ. (೫) ನಂದನ ಮನೆಯಲ್ಲಿ ಬೆಳೆದ ಶ್ರೀಕೃಷ್ಣನನ್ನು ಪೂರ್ವ ಜನ್ಮಗಳ ವಿದ್ಯಾಬಲದಿಂದ ಕೊಲ್ಲಲು ಯತ್ನಿಸಿ ವಿಫಲವಾದ ಕಂಸನು ಕೊನೆಗೆ ಮಲ್ಲಯುದ್ಧದಲ್ಲಿ ತಾನೇ ಕೃಷ್ಣನಿಂದ ಸಾವಿಗೀಡಾಗುತ್ತಾನೆ. (೬) ಜರಾಸಂಧನ ಕಿರುಕುಳವನ್ನು ತಾಳಲಾರದ ಕೃಷ್ಣನು ನೇಮಿನಾಥನೊಡನೆ ದ್ವಾರವತಿಗೆ ಹೋಗಿ ನೆಲಸುತ್ತಾನೆ. (೭) ಕುರುಕ್ಷೇತ್ರದಲ್ಲಿ ಜರಾಸಂಧ ಕೃಷ್ಣರು ಯುದ್ಧ ಮಾಡುತ್ತಾರೆ. ಮೊದಲಿನಿಂದಲೂ ವೈರಿಗಳಾಗಿದ್ದ ಕೌರವರು ಪಾಂಡವರು ಯುದ್ಧ ಮಾಡುತ್ತಾರೆ. ಕೌರವರು ಜರಾಸಂಧನ ಪಕ್ಷಕ್ಕೂ ಪಾಂಡವರೂ ಕೃಷ್ಣ ನೊಡನೆಯೂ ಸೇರುತ್ತಾರೆ. ಯುದ್ಧದಲ್ಲಿ ಜರಾಸಂಧನೂ ಕೌರವರೂ ಸಾಯುತ್ತಾರೆ. ಪಾಂಡವರು ಕೃಷ್ಣನೊಡನೆ ಗೆದ್ದು ರಾಜ್ಯವನ್ನಾಳುತ್ತಾರೆ. (೮) ಶ್ರೀಕೃಷ್ಣನು ದುರ್ಮರಣದಿಂದ ಸತ್ತು ನರಕವನ್ನು ಸೇರಿದರೆ, ಪಾಂಡವರು ಜಿನದೀಕ್ಷೆಯನ್ನು ಪಡೆದು ಸ್ವರ್ಗವನ್ನು ಸೇರುತ್ತಾರೆ.

ಕರ್ಣಪಾರ್ಯನು ಕೃತಿಯ ಮೊದಲೆರಡು ಅಶ್ವಾಸಗಳಲ್ಲಿ ನೇಮಿ ನಾಥನ ಪೂರ್ವಜನ್ಮಗಳ ವೃತ್ತಾಂತವೂ ಹರಿವಂಶದ ಜರಾಸಂಧ ಹಾಗೂ ಸಮುದ್ರ ವಿಜಯಾದಿಗಳ ಜನ್ಮ ವೃತ್ತಾಂತವೂ ವರ್ಣಿತವಾಗಿದೆ. ಮೂರನೆಯ ಅಶ್ವಾಸದಲ್ಲಿ ಬರುವ ಕಥಾ ಭಾಗವೆಂದರೆ ಕೌರವ ಪಾಂಡವರ ಜನ್ಮವೃತ್ತಾಂತಗಳು, ವಸುದೇವನ ದೇಶಾಂತರ ವಿಚಾರ, ಅವನು ಕೈ ಹಿಡಿದ ಕನ್ನೆಯರು ಮುಂತಾದವುಗಳು, ನಾಲ್ಕನೆಯ ಅಶ್ವಾಸದಲ್ಲಿ ಗಂಧರ್ವದತ್ತೆಯ ಸ್ವಯಂವರ ಹಾಗೂ ಚಾರುದತ್ತನ ಉದಾತ್ತಗುಣಗಳ ನಿರೂಪಣೆಯಿದೆ. ಐದನೆಯ ಅಶ್ವಾಸದಲ್ಲಿ ಗಂಧರ್ವದತ್ತೆ-ವಸುದೇವರ ಮದುವೆ, ಸಮುದ್ರವಿಜಯ-ವಸುದೇವರ ಪುನಸ್ಸಮಾಗಮ, ಕಂಸನು ವಸುದೇವನಲ್ಲಿ ಧನುರ್ವಿದ್ಯೆಯನ್ನು ಕಲಿತದ್ದು, ಕಂಸ-ಜೀವಂಜಸೆಯರ ವಿವಾಹ, ಕಂಸನು ತಂದೆಯ ಮೇಲಿನ ವೈರದಿಂದ ಅವನನ್ನು ಬಂಧಿಸಿದ ವಿಚಾರ-ಇವುಗಳಿವೆ, ಆರನೆಯ ಆಶ್ವಾಸದಲ್ಲಿ ವಸುದೇವ-ದೇವಕಿಯರ ವಿವಾಹ, ಕೃಷ್ಣಜನನ ವೃತ್ತಾಂತ, ಕಂಸವಧೆ-ಈ ವಿಷಯಗಳ ನಿರೂಪಣೆಯಿದೆ.

ಜರಾಸಂಧನು ತನ್ನ ಅಳಿಯನನ್ನು ಕೊಂದ ಕೃಷ್ಣನ ಮೇಲೆ ಸಾಧಿಸಿದ ಹಗೆತನ, ಶ್ರೀಕೃಷ್ಣನು ಸಮುದ್ರ ಮಧ್ಯದಲ್ಲಿ ದ್ವಾರಕೆಯನ್ನು ನಿರ್ಮಿಸಿ ಅಲ್ಲಿ ನೆಲಸಿದುದು, ಕೃಷ್ಣ-ಸತ್ಯಭಾಮೆಯರ ಪರಿಣಯ, ರುಕ್ಮಿಣಿಯೊಡನೆ ವಿವಾಹವಾದದ್ದು, ಪ್ರದ್ಯುಮ್ನನ ಚರಿತ್ರೆ-ಇವುಗಳು ಏಳನೆಯ ಅಶ್ವಾಸದ ವಸ್ತು. ಎಂಟನೆಯ ಅಶ್ವಾಸದಲ್ಲಿ ಪ್ರದ್ಯುಮ್ನ-ಉದಧಿಯರ ಕಲ್ಯಾಣ, ಪ್ರದ್ಯುಮ್ನನು ರುಕ್ಮಿಣಿಯ ಅಣ್ಣನ ಮಗಳಾದ ವಿದರ್ಭೆಯನ್ನು ಅಪಹರಿಸಿದುದು-ಈ ವಿಷಯಗಳ ನಿರೂಪಣೆಯಿದೆ. ಇದೇ ಅಶ್ವಾಸದಲ್ಲಿ ನೇಮಿನಾಥನ ಗರ್ಭಾವತರಣ, ಜನನ, ನಾಮಕರಣ ವಿಷಯಗಳಿವೆ. ಒಂಬತ್ತನೆಯ ಅಶ್ವಾಸವು ನೇಮಿನಾಥನ ಬಾಲ್ಯವರ್ಣನೆ, ಕೌರವ ಪಾಂಡವ

ವೃತ್ತಾಂತ, ಅವರಿಬ್ಬರ ದ್ವೇಷ ಅರ್ಜುನ ದ್ರೌಪದೀ ವಿವಾಹ, ಇಂದ್ರಪ್ರಸ್ಥದಲ್ಲಿ ಪಾಂಡವರ ರಾಜ್ಯ ಭಾರ–ಈ ವಿಷಯಗಳನ್ನೊಳಗೊಂಡಿವೆ. ಹತ್ತನೆಯ ಅಶ್ವಾಸದಲ್ಲಿ ಸುಭದ್ರಾ ಕಲ್ಯಾಣ, ದ್ಯೂತ ಪ್ರಕರಣ, ಪಾಂಡವರ ವನವಾಸ–ಅಜ್ಞಾತವಾಸಗಳು, ಅವುಗಳ ನಂತರ ದ್ವಾರಾವತಿಗೆ ಬಂದದ್ದು, ಕುಂತಿ–ಕರ್ಣರ ಸಮಾಗಮ–ಇವುಗಳನ್ನು ವರ್ಣಿಸಲಾಗಿದೆ. ಹನ್ನೊಂದನೆಯ ಅಶ್ವಾಸದಲ್ಲಿ ಯಾದವರು ಇನ್ನೂ ಬದುಕಿರುವ ವಿಷಯವು ಜರಾಸಂಧನಿಗೆ ತಿಳಿದದ್ದು, ಕೃಷ್ಣದೌತ್ಯ, ಯುದ್ಧ ಸನ್ನಾಹ, ಯುದ್ಧಾರಂಭ–ಈ ವಿಷಯಗಳಿವೆ. ಹನ್ನೆರಡನೆಯ ಅಶ್ವಾಸದಲ್ಲಿ ಬರುವ ವಿಷಯಗಳೆಂದರೆ ಕುರುಕ್ಷೇತ್ರ ಯುದ್ಧ ವರ್ಣನೆ ಹಾಗೂ ಪಾಂಡವರ ವಿಜಯಗಳು. ಹದಿಮೂರನೆಯ ಅಶ್ವಾಸವೆಲ್ಲ ನೇಮಿನಾಥನ ಚರಿತ್ರ ನಿರೂಪಣೆಗೆ ಮೀಸಲಾಗಿದೆ: ಅವನ ವಿವಾಹಸಿದ್ಧತೆ, ಅದು ನಿಂತು ಅವನು ದೀಕ್ಷೆಪಡೆದು ತಪಸ್ಸುಮಾಡಿ ಕೈವಲ್ಯವನ್ನು ಪಡೆದದ್ದು–ಈ ವಿಷಯಗಳು ಇಲ್ಲಿವೆ. ಕೃಷ್ಣನ ಮರಣ, ಪಾಂಡವರ ಭವಾವಳಿ ಮತ್ತು ದೀಕ್ಷೆವಹಿಸಿದ ವಿಚಾರ, ಅವರಿಗೆ ಕೈವಲ್ಯಪ್ರಾಪ್ತಿಯಾದದ್ದು, ನೇಮಿನಾಥ ನಿರ್ವಾಣ ಇವುಗಳು ಹದಿನಾಲ್ಕನೆಯ ಅಶ್ವಾಸದಲ್ಲಿ ನಿರೂಪಿತವಾದ ವಿಷಯಗಳು.

ಈ ದೀರ್ಘಕಾವ್ಯವನ್ನು ಕರ್ಣಪಾರ್ಯನು ಜಿನಸೇನಾಚಾರ್ಯರ 'ಹರಿವಂಶ ಪುರಾಣ' ಹಾಗೂ ಗುಣಭದ್ರಾಚಾರ್ಯರ 'ಮಹಾಪುರಾಣ' ಇವೆರಡನ್ನೂ ಅನುಸರಿಸಿ ರಚಿಸಿದ್ದಾನೆ. ಕತೆಯು ದೀರ್ಘವಾಗಿದ್ದು ಕವಿಯು ಯಾವ ವಿವರಗಳನ್ನೂ ಬಿಡಲಾರದವನಾದ್ದರಿಂದ ಅವನು ದೀರ್ಘವರ್ಣನೆಗಳ ಗೋಜಿಗೂ ಹೋಗುವುದಿಲ್ಲ. ಅನವಶ್ಯಕ ಭಾಗಗಳನ್ನು ಕುಗ್ಗಿಸಲಾಗಲೀ ಬಿಡುವುದಾಗಲೀ ಅವನಿಂದ ಆಗಿಲ್ಲ. ಹೀಗಾಗಿ ಇಲ್ಲಿ ಕತೆಯು ಪ್ರಧಾನವಾಗಿ ಪುರಾಣಾಂಶಗಳು ತುಂಬಿ, ಕಾವ್ಯಾಂಶಗಳು ಕಡಿಮೆಯಾಗಿವೆ. ಆದರೆ ಅವನು ಕಥನಕಲೆಯನ್ನು ಮೈಗೂಡಿಸಿಕೊಂಡು ಸರಸವಾಗಿ ಕತೆಗಳನ್ನು ನಿರೂಪಿಸ ಬಲ್ಲ ಶಕ್ತಿಯುಳ್ಳವನು. ವಿಂಧ್ಯಕ–ವಾಗುರೆಯರ ಪ್ರಸಂಗ, ಪ್ರದ್ಯುಮ್ನ–ವಿದರ್ಭೆಯರ ವಿವಾಹಪ್ರಸಂಗ, ವಸುದೇವ–ರೋಹಿಣಿಯರ ವಿವಾಹ ಸನ್ನಿವೇಶ–ಇಂತಹವುಗಳಲ್ಲಿ ಸನ್ನಿವೇಶ ರಚನೆಯು ಮನೋಜ್ಞವಾಗಿದೆ.

ಕವಿಯು ಅಲ್ಲಲ್ಲಿ ಮಧುರವಾದ ಪದ್ಯಗಳನ್ನು ರಚಿಸಿದ್ದಾನೆ. ಇಂತಹ ಕಡೆಗಳಲ್ಲಿ ಅವನ ಕಾವ್ಯಶಕ್ತಿಯು ವಿದಿತವಾಗುತ್ತದೆ. ಸ್ನಾನ ಮಾಡಿ ಬಿಳಿಯ ರೇಷ್ಮೆ ವಸ್ತ್ರವನ್ನುಟ್ಟಿದ್ದ ದ್ರೌಪದಿಯ ವರ್ಣನೆ ಈ ಕೆಳಗಣ ಪದ್ಯದಲ್ಲಿದೆ:

ಎಸೆವ ದುಕೂಲಾಂಬರಮಂ
ಬಿಸರುಹಮುಖಿಗುಡಿಸೆ ಚಂದ್ರಲೇಖೆಯಿನಂದಾ
ಗಸದ ನದಿ ಘೂರ್ಣಿಸುತ್ತಿ
ರ್ದೆಸಕಮನಾಂತು ಸಮಂತು ಕನ್ಯಾರತ್ನಂ (ನೇಮಿ.ಪು. ೯–೮೦)

(ಸುಂದರವಾದ ರೇಷ್ಮೆಯ ಬಟ್ಟೆಯನ್ನು ಚಂದ್ರಮುಖಿಯಾದ ದ್ರೌಪದಿಗೆ ಉಡಿಸಲು ಚಂದ್ರಲೇಖೆಯನ್ನು ಧರಿಸಿರುವ ಆಕಾಶಗಂಗೆಯ ತೆರೆಗಳಂತೆ ಅದು ಶೋಭಿಸುತ್ತಿದ್ದಿತು.) ನೇಮಿನಾಥಕುಮಾರನ ಕಾಂತಿಯನ್ನು ಕವಿಯು ವರ್ಣಿಸಿರುವ ರೀತಿಯದು:

ಚರಮತನು ದೀಪ್ತಿಯುಂ ಭಾ
ಸುರ ಭೂಷಣಗಳ ಮರೀಚಿಚಯಮುಂ ಸೆಣಸಲ್
ಕರಮೆಸೆದಿರ್ದಂ ಭುವನೇ
ಶ್ವರನ್ ಅತುಳೋದಾರನಪ್ಪ ನೇಮಿಕುಮಾರಂ (ನೇಮಿ.ಪು. ೯–೭)

(ಇದೇ ಕೊನೆಯ ಜನ್ಮವಾಗಿ ಪಡೆದು ಮುಂದೆ ಕೈವಲ್ಯವನ್ನು ಸಂಪಾದಿಸುವ ನೇಮಿನಾಥನ ದೇಹಕಾಂತಿಯೂ ಅವನು ಧರಿಸಿದ್ದ ಅನೇಕ ಆಭರಣಗಳ ಹೊಳಪೂ ಪರಸ್ಪರ ಸ್ಪರ್ಧಿಸುತ್ತಿರಲು ಆತನು ಕಂಗೊಳಿಸುತ್ತಿದ್ದನು.) ಅಗಾಧವಾದ ಸಮುದ್ರವನ್ನು ಕರ್ಣಪಾರ್ಯನು ವರ್ಣಿಸಿರುವ ರೀತಿಯಿದು:

ಜಳಮತ್ತೇಭ ಪ್ರತಾನ ಪ್ರಬಳತರಕರಾಸ್ಫಾಲನೋದ್ಭೂತ ವೀಚೀ
ಕುಳದಿಂ, ಪ್ರಕ್ಷೋಭಿತೋದ್ಯನ್ಮಕರನಿಕರ ಹಸ್ತಪ್ರಹಾರಪ್ರಭೂತೋ
ಚ್ಚಳಿತಾಂಭೋಬಿಂದುಸಂದೋಹದಿಂ, ಅಮಿತತಿಮಿಸ್ತೋಮದಿಂ, ಭೀಮನಕ್ರಾ
ವಳಿಯಿಂದಾಕೀರ್ಣಮಾದಂ ಸೋಗಯಿಪ ಲವಣಾಂಭೋಧಿ ಪೆಂಪಿಂದಗಾಧಂ
(ನೇಮೀ. ಪು)

(ನೀರಾನೆಗಳು ಸೊಂಡಿಲುಗಳಿಂದ ಬಲವಾಗಿ ಹೊಡೆಯುತ್ತಿರುವುದರಿಂದ ಮೇಲೆದ್ದ ಅಲೆಗಳ ಸಮೂಹದಿಂದಲೂ, ಕೋಪದಿಂದ ಮೇಲೆದ್ದ ಮೊಸಳೆಗಳು ಕೈಗಳಿಂದ ನೀರನ್ನು ಬಡಿದ ಕಾರಣದಿಂದಾಗಿ ಮೇಲೆ ಹಾರಿದ ನೀರಿನ ಹನಿಗಳಿಂದಲೂ, ನಾನಾ ಬಗೆಯ ಮೀನುಗಳ ಸಂದೋಹದಿಂದಲೂ, ಭಯಂಕರವಾದ ಮೊಸಳೆಗಳಿಂದಲೂ ಕೂಡಿ ಲವಣಸಮುದ್ರವು ಶೋಭಿಸುತ್ತಿದ್ದಿತು.) ವಸುದೇವನು ವಿಜಯ–ವಿಜಯ ಸೇನರೆಂಬ ಇಬ್ಬರು ಕನ್ನೆಗಳನ್ನು ಒಟ್ಟಿಗೇ ಮದುವೆಯಾಗುತ್ತಾನೆ. ಅವರಿಬ್ಬರ ಸೌಂದರ್ಯವನ್ನು ಈ ಕವಿ ಚಮತ್ಕಾರವಾಗಿ ಈ ರೀತಿ ವರ್ಣಿಸುತ್ತಾನೆ:

ಸುರಕನ್ನೆಯರ್ ಈ ಕನ್ಯೆಯ
ರುರು ಸೌಂದರ್ಯಕ್ಕೆ ಸೋಲ್ತು ಬಿಟ್ಟರ್ ಧರೆಯಂ:
ವರ ನಾಗಕನ್ನೆಯರ್ ಭೀ
ಕರಿಯರ್ ಕಿಟ್ಟುಟ್ಟು ಪೋಗಿ ಪೊಕ್ಕರ್ ನೆಲನಂ (ನೇಮಿ.ಪು. ೩–೧೭೭)

(ಈ ಕನ್ಯೆಯರ ಅಗಾಧ ಸೌಂದರ್ಯಕ್ಕೆ ಸೋತು ನಾಚಿದ ದೇವಕನ್ಯೆಯರು ಭೂಮಿಯನ್ನು ಬಿಟ್ಟು ದೇವಲೋಕಕ್ಕೆ ಹೋದರು; ಇವರ ಲಲಿತ ಸೌಂದರ್ಯದ ಮುಂದೆ ಭಯಂಕರರಂತೆ ಕಾಣುತ್ತಿದ್ದ ನಾಗಕನ್ನಿಕೆಯರು ನೆಲದೊಳಗೆ ಹೋಗಿ ಅಡಗಿಕೊಂಡರು.)

ಒಟ್ಟಿನ ಮೇಲೆ ಕರ್ಣಪಾರ್ಯನು ಒಳ್ಳೆಯ ಕವಿಗಿಂತ ಹೆಚ್ಚಾಗಿ ಒಳ್ಳೆಯ ಪುರಾಣಕಾರನಾಗಿದ್ದಾನೆ. ಪುರಾಣ ರಚನೆಯನ್ನು ವರ್ಣನೆಗಳ ಕಾಡಿನಲ್ಲಿ ಕೈಬಿಟ್ಟು ಗೊಂದಲವನ್ನು ಮಾಡದೆ. ಕತೆಯನ್ನು ನೇರವಾಗಿ ನಿರೂಪಿಸಿ ಇವನು ಸುಲಭಗ್ರಾಹ್ಯನಾಗಿದ್ದಾನೆ. ಪುರಾಣ ರಚನೆಯಲ್ಲಿಯೇ ಕವಿಯ ಸ್ವಾತಂತ್ರ್ಯಕ್ಕೆ ಹೆಚ್ಚು ಅವಕಾಶವಿಲ್ಲ; ಅದರಲ್ಲಿಯೂ ಸ್ವಾತಂತ್ರ್ಯವನ್ನುವಹಿಸಲೂ ಇಷ್ಟಪಡದ ಕರ್ಣಪಾರ್ಯನ ಈ ಕಾವ್ಯದಲ್ಲಿ ಕಾವ್ಯಧರ್ಮವನ್ನು ನಾವು ಹೆಚ್ಚಾಗಿ ನಿರೀಕ್ಷಿಸಲು ಸಾಧ್ಯವಿಲ್ಲ. ಬಹು

ಜನಪ್ರಿಯವಾದ ನೇಮಿನಾಥನ ಕತೆಯನ್ನು ಹೇಳುವ ಕಾವ್ಯಗಳಲ್ಲಿ ನಮಗೆ ಸಿಕ್ಕಿರುವ ಗ್ರಂಥಗಳನ್ನು ದೃಷ್ಟಿಯಲ್ಲಿರಿಸಿಕೊಂಡು ಹೇಳಿದರೆ, ಕರ್ಣಪಾರ್ಯನ ಪುರಾಣವೇ ಮೊದಲನೆಯದು. ಈ ಐತಿಹಾಸಿಕ ಮಹತ್ವವಂತೂ ಇವನ ಕಾವ್ಯಕ್ಕೆ ಇದ್ದೇ ಇದೆ.

ಬ್ರಹ್ಮ ಶಿವ

ಹಲವಾರು ಕಾರಣಗಳಿಂದ ಬ್ರಹ್ಮಶಿವನಿಗೆ ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಒಂದು ವಿಶಿಷ್ಟವಾದ ಸ್ಥಾನವಿದೆ. ಇವನು ವತ್ಸಗೋತ್ರದ ಜೈನಕವಿ. ಇವನ ಕಾಲ ಹನ್ನೆರಡನೆಯ ಶತಮಾನದ ಎರಡನೆಯ ಅರ್ಧ. 'ಚಂದ್ರಪ್ರಭ ಪುರಾಣ'ವೆಂಬ ಕಾವ್ಯವನ್ನು ಬರೆದ ಅಗ್ಗಳನು ತನ್ನ ಸ್ನೇಹಿತನೆಂದು ಹೇಳಿಕೊಂಡಿದ್ದಾನೆ; ಅಗ್ಗಳನ ಕಾಲವು ಸು. ಕ್ರಿ.ಶ. ೧೧೮೯. ಆದ್ದರಿಂದ ಇವನೂ ಆ ಕಾಲದಲ್ಲಿಯೇ ಜೀವಿಸಿದ್ದಿರಬೇಕು. ಇವನ ಸ್ಥಳ ಪೊಟ್ಟಣಗೆರೆ: ತಂದೆಯು ಸಿಂಗಿರಾಜನೆಂಬುವವನು. ತಾನು ಮಾಹೇಶ್ವರ ಧರ್ಮಕ್ಕೆ (ಶೈವಧರ್ಮಕ್ಕೆ) ಮತಾಂತರಗೊಂಡು ಅಲ್ಲಿ ಸರಿಹೋಗದೆ ಮತ್ತೆ ಜೈನನಾದಂತೆ ಹೇಳಿಕೊಂಡಿದ್ದಾನೆ. ಇವನು ಎರಡು ಕಾವ್ಯಗಳನ್ನು ಬರೆದಿದ್ದಾನೆ. 'ತ್ರೈಲೋಕ್ಯಚೂಡಾಮಣಿ ಸ್ತೋತ್ರ' ವೆಂಬುದು ಮೂವತ್ತಾರು ಪದ್ಯಗಳ ಚಿಕ್ಕ ಕೃತಿ. ಇದನ್ನು ಈ ಕಾರಣಕ್ಕಾಗಿಯೇ 'ಛತ್ತೀಸರತ್ನಮಾಲೆ' ಎಂದೂ ಕರೆಯುತ್ತಿದ್ದರು. ಪ್ರತಿ ಪದ್ಯವೂ ತ್ರೈಲೋಕ್ಯಚೂಡಾಮಣಿ ಎಂದು ಮುಗಿಯುತ್ತದೆ. ಜಿನನ ಪ್ರಾರ್ಥನೆಯೇ ಇಲ್ಲಿನ ವಸ್ತು. ಆದರೆ ಮಧ್ಯೆ ಮಧ್ಯೆ ಬೇರೆಯ ಮತಗಳ ವಿಡಂಬನೆ, ಬೇರೆ ದೇವತೆಗಳ ನಿಂದೆ ಇವು ತುಂಬಿವೆ. ಇದೇ ವಿಡಂಬನೆಯು ದೊಡ್ಡ ಆಕಾರವನ್ನು ತಾಳಿ 'ಸಮಯ ಪರೀಕ್ಷೆ' ಎಂಬ ವಿಶಿಷ್ಟವಾದ ಕೃತಿಯಾಗಿದೆ.

'ಸಮಯ ಪರೀಕ್ಷೆ' ಯು ಕತೆಯನ್ನೇನೂ ಹೇಳುವುದಿಲ್ಲ. ಅಪ್ತಾಗಮ ಧರ್ಮ, ಅನಾಪ್ತಾಗಮಧರ್ಮ (ಬೇಕಾದದ್ದು ಬೇಡದ್ದು ಎಂಬ ಎರಡು ಗುಂಪಿನ ಮತಗಳು) ಇವುಗಳ ಬಗ್ಗೆ ಇಲ್ಲಿ ಹೇಳಿದ್ದಾನೆ. ಹದಿನೈದು ಅಧಿಕಾರ(ವಿಭಾಗ)ಗಳಿರುವ ಈ ವಿಸ್ತಾರವಾದ ಗ್ರಂಥದಲ್ಲಿ ಕಂದಗಳು ಕೆಲವು ಬಗೆಯ ವೃತ್ತಗಳು ಮಾತ್ರವೇ ಇದೆ; ಗದ್ಯವೇ ಇಲ್ಲ. ಹೀಗಾಗಿ ಇದನ್ನು ಚಂಪೂಕೃತಿಯೆಂದು ಕರೆಯುವುದು ಅಷ್ಟು ಸರಿಯಾಗಲಾರದಾದರೂ ಅದನ್ನಿಲ್ಲಿಯೇ ಪರಿಚಯ ಮಾಡಿಕೊಡುವುದಕ್ಕೆ ಕಾರಣ ಅದರ ಭಾಷೆ ಮತ್ತು ವಸ್ತು. ಪ್ರಾಯಶಃ ಈ ಕಾಲಕ್ಕಾಗಲೇ ಇತರ ಮತಗಳ ಜೊತೆಗೆ ಪೈಪೋಟಿ ನಡೆಸುತ್ತಿದ್ದ ಜೈನ ಧರ್ಮವು ತನ್ನ ಜನಪ್ರಿಯತೆಯ ಗಾದಿಯಿಂದ ಇಳಿಯತೊಡಗಿತ್ತು. ಅದಕ್ಕೆ ಆ ಧರ್ಮದ ಶ್ರೇಷ್ಠತೆಯನ್ನೂ ಇತರ ಧರ್ಮಗಳ ಕೀಳ್ಮೆಯನ್ನೂ ಹೇಳುವುದೇ ಬ್ರಹ್ಮಶಿವನ ಮುಖ್ಯ ಉದ್ದೇಶವಾಯಿತು. ನಯಸೇನನ 'ಧರ್ಮಾಮೃತ'ದಲ್ಲಿಯೂ ಅನ್ಯಮತ ವಿಡಂಬನೆಯಿದೆ. ಆದರೆ ಅಲ್ಲಿ ತನ್ನ ಧರ್ಮದ ಹಿರಿಮೆಯನ್ನು ಕವಿ ಕತೆಗಳ ಮೂಲಕವಾಗಿ ತೋರಿಸಲು ಪ್ರಯತ್ನಿಸಿದ್ದಾನೆ.; ಮಧ್ಯೆ ಮಧ್ಯೆ ಪ್ರಸಂಗ ಬಂದಾಗ ಇತರ ಧರ್ಮಗಳನ್ನು ಹಾಸ್ಯ ಮಾಡಿದ್ದಾನೆ. ಆ ಹಾಸ್ಯದಲ್ಲಿಯೂ ಕವಿ ಎಲ್ಲಿಯೂ ಮಿತಿ ಮೀರಿಲ್ಲ. ಆದರೆ 'ಸಮಯ ಪರೀಕ್ಷೆ'ಯ ಕವಿಗೆ ಇತರ ಮತಗಳನ್ನು

ಟೀಕಿಸುವುದೇ ಉದ್ದೇಶವಾಗಿರುವುದರಿಂದ ಅವನ ದೀರ್ಘ ಕೃತಿಯ ತುಂಬ ಬೇರೆ ಬೇರೆ ಮತಗಳ ಆಚಾರ ವಿಚಾರಗಳು, ಸಂಪ್ರದಾಯ ನಂಬಿಕೆಗಳು, ದೇವರು ದಿಂಡರುಗಳು ಇವುಗಳನ್ನು ಅವಹೇಳನ ಮಾಡುವುದು, ಅವುಗಳೊಡನೆ ಹೋಲಿಸಿದಾಗ ಜೈನಮತವು ಎಷ್ಟು ಶ್ರೇಷ್ಠವೆಂಬುದನ್ನು ಸಾರು ವುದು–ಇವೇ ತುಂಬಿಕೊಂಡಿವೆ. ಈ ಕೃತಿಯ ಹದಿನೈದು ವಿಭಾಗಗಳೆಂದರೆ (೧) ಪರಮಾತ್ಮ ಸ್ವರೂಪ (೨) ಅನಾದ್ಯನಿಧನಜಿನಧರ್ಮ ವರ್ಣನ (ಆದಿ ಅಂತ್ಯಗಳಿಲ್ಲದ ಜೈನಧರ್ಮದ ವರ್ಣನೆ) (೩) ಪರಮಾಗಮ ವರ್ಣನ (೪) ಸಮ್ಯಕ್ತ್ವ ನಿರೂಪಣ (೫) ಪರಮಾರ್ಹತವ್ರತವ್ಯಾವರ್ಣನ (ಶ್ರೇಷ್ಠವಾದ ಜಿನ ವ್ರತಗಳ ನಿರೂಪಣೆ) (೬) ಶೌಚವ್ರತ ವರ್ಣನ (೭) ತಪೋಧನ ಸ್ವರೂಪ ವರ್ಣನ (೮) ಆಪ್ತಸ್ವರೂಪ ವರ್ಣನ (೯) ದೇವತಾಮೂಢಸ್ವರೂಪ (೧೦) ಆಗಮಸ್ವರೂಪ ವರ್ಣನ (೧೧) ವೈದಿಕ ವಿಡಂಬನ (೧೨) ಲೋಕ ಮೂಢ ಸ್ವರೂಪ (೧೩) ಕುದೃಷ್ಟಿ ಲಕ್ಷಣ (೧೪) ಕುಲಿಂಗಿಕುಚಾರಿತ್ರ ನಿರೂಪಣ (೧೫) ಜೈನಧರ್ಮವ್ಯಾವರ್ಣನ, ಇಲ್ಲಿನ ವಿಡಂಬನೆಯ ರೀತಿಯು ತುಂಬ ಕಟುವಾದುದು, ಬೇರೆಯ ಮತಗಳ ಬಗ್ಗೆ ತೀವ್ರವಾದ ಅಸಹನೆಯು ಇಲ್ಲಿ ಎದ್ದು ಕಾಣುತ್ತದೆ. ಅಲ್ಲಲ್ಲಿ ಹಾಸ್ಯವೂ ಸೇರಿದೆ. ಪದ್ಯ ರಚನೆಯು ತುಂಬ ಸರಳವಾಗಿಯೂ ನೇರವಾಗಿಯೂ ಇದೆ. ಇಲ್ಲಿ ಹೇಳಿರುವ ಭಾವನೆಗಳು ನೇರವಾದ್ದರಿಂದಲೂ ಸಾಮಾನ್ಯರ ರೀತಿನೀತಿಗಳನ್ನು ವರ್ಣಿಸಿರುವುದ ರಿಂದಲೂ ಇಲ್ಲಿನ ಪದ್ಯಗಳು ತೊಡಕಾಗಲು ಸಾಧ್ಯವಿಲ್ಲ. ಈ ಕೃತಿಯಿಂದ ನಮಗೆ ಆಗುವ ದೊಡ್ಡ ಉಪಕಾರವೊಂದಿದೆ. ಇತರ ಕಾವ್ಯಗಳಲ್ಲಿ ನಮಗೆ ದೊರೆಯುವ ಆ ಕಾಲದ ಜನರ ಜೀವನ ಚಿತ್ರವು ಕೇವಲ ಸ್ವಲ್ಪ, ಅಲ್ಲದೆ ಅದು ಕಾವ್ಯದ ವಾತಾವರಣಕ್ಕೆ ಹೊಂದಿಕೊಳ್ಳುವ ಸಲುವಾಗಿ ವ್ಯತ್ಯಾಸಗೊಂಡಿರುತ್ತದೆ. ಆದರೆ 'ಸಮಯ ಪರೀಕ್ಷೆ'ಯಲ್ಲಿ ಆಗಿನ ಸಾಮಾನ್ಯ ಜನರ ನಡವಳಿಕೆಗಳು ನೇರವಾಗಿ ಚಿತ್ರಿತವಾಗಿವೆ. ಆ ಕಾಲದ ಜನರ ಮೂಢ ನಂಬಿಕೆಗಳು, ಪೂಜಿಸುತ್ತಿದ್ದ ದೇವರುಗಳು, ಪೂಜೆ ಮಾಡುತ್ತಿದ್ದ ರೀತಿ–ವಸ್ತುಗಳು, ಅವರು ಆಚರಿಸುತ್ತಿದ್ದ ವ್ರತ ಹಬ್ಬಗಳು, ನಾನಾ ಮತಪಂಥಗಳವರ ವೈಶಿಷ್ಟ್ಯಗಳು–ಇವೆಲ್ಲ ಇದ್ದಕ್ಕಿದ್ದಂತೆ ಯಾವ ವ್ಯತ್ಯಾಸವೂ ಇಲ್ಲದೆ ಇಲ್ಲಿ ಮೂಡಿ ಬಂದಿವೆ. ಹೀಗಾಗಿ ಆ ಕಾಲದ ಜನಜೀವನ ರೀತಿಯನ್ನು ಕುರಿತು ಅಧ್ಯಯನ ಮಾಡಬಯಸುವವರಿಗೆ ಇಲ್ಲಿ ವಿಷಯದ ಗಣಿಯೇ ಲಭಿಸುತ್ತದೆ. ಅಲ್ಲದೆ 'ಸಮಯ ಪರೀಕ್ಷೆ' ಕನ್ನಡದ ಮೊದಲನೆಯ ವಿಡಂಬನ ಗ್ರಂಥವಾದ್ದರಿಂದ ಅದಕ್ಕೆ ಬೆಲೆಯಿದೆ.

ಅಹಿಂಸೆಯೇ ಜೈನಧರ್ಮದ ಮೂಲಮಂತ್ರ. ಆದ್ದರಿಂದ ಜೈನನು ಎಲ್ಲ ಜೀವಿಗಳ ಬಗ್ಗೆ ದಯೆಯಿಂದಿರುವವನೆಂದು ಬ್ರಹ್ಮಶಿವನು ಹೇಳುವ ರೀತಿಯಿದು:

ಕಸವೆಡೆಗಳೊಳಂ, ಸಾ
ರಿಸುವೆಡೆಗಳೊಳಂ, ಅಕ್ಕಿಗುಟ್ಟುವೆಡೆಯೊಳ್ ಸಲೆ ಸೋ
ಧಿಸಿ ಜೀವನಿಕರಮಂ ರ
ಕ್ಷಿಸುವರೆನಲ್ ಜೈನರಿಂ ದಯಾಪರರೊಳರೇ (ಸಮ.ಪು. ೫–೮)

(ಕಸವಿರುವ ಜಾಗಗಳಲ್ಲಿ, ಸಾರಿಸುವೆಡೆಗಳಲ್ಲಿ. ಅಕ್ಕಿ ಕುಟ್ಟುವ ಸ್ಥಳಗಳಲ್ಲಿಯೂ ತಮ್ಮ ಕುಂಚಿಗೆಯಿಂದ ಗುಡಿಸಿ ಜೀವಗಳನ್ನು ರಕ್ಷಿಸುತ್ತಾರೆಂದ ಮೇಲೆ ಜೈನರಿಗಿಂತ ದಯಾವಂತರು ಬೇರೆ ಯಾರಿದ್ದಾರೆ?) ಸಾಮಾನ್ಯ ಜನರು ತಮ್ಮ ಮಕ್ಕಳು-ಮರಿಗಳಿಗೆ ಏನಾದರೂ ಆದರೆ ದೇವರನ್ನು ವಿಶೇಷವಾಗಿ ಪೂಜಿಸುತ್ತಾರೆ. ಆದರ ಹಾಗೆ ಪೂಜಿಸುವುದು ಕ್ಷುದ್ರ ದೈವಗಳನ್ನೇ ಹೊರತು ಜಿನಮೂರ್ತಿಯನ್ನು ಮನಃಪೂರ್ವಕ ವಾಗಿ ಪೂಜಿಸುವುದಿಲ್ಲವೆಂದು ಕವಿಯು ಟೀಕಿಸುತ್ತಾನೆ.

ಕೂಸಿಂಗೆ ಕುತ್ತವಾದೊಡೆ
ದೇಶದ ಬಳರಿಯರ್ಗೆ ಕುಡುವರ್ ಒಳ್ಳರ್ಚನೆಯಂ
ಶಾಸನದೇವತೆಗೆಂದೊಡೆ
ಏಸದ ಪುಷ್ಪಮುಮನೀಯರ್ ಅಱಗುಲಿ ಪೆಂಡಿರ್ (ಸಮ.ಪು. ೫-೧೦೦)

(ಪಾಪಿ ಹೆಂಗಸರು ಮಕ್ಕಳಿಗೆ ಕಾಯಿಲೆಯಾದಾಗ ನಾಡಾಡಿ ದೈವಗಳನ್ನು ಸಂಭ್ರಮ-ವೈಭವಗಳಿಂದ ಪೂಜಿಸುತ್ತಾರೆಯೇ ಹೊರತು ಶಾಸನದೇವತೆಯಾದ ಜನನಿಗೆ ಚಿಕ್ಕಾಸಿನ ಹೂವನ್ನೂ ಅರ್ಪಿಸುವುದಿಲ್ಲ.) ಬೇರೆಯ ಮತದವರು ಭಿಕ್ಷೆ ಬೇಡುತ್ತಾರೆ, ಆದರೆ ಜೈನರು ಎಂತಹ ಕಷ್ಟ ಬಂದರೂ ತಿರಿಪೆ ಎತ್ತುವುದಿಲ್ಲವೆಂದು ಕವಿಯ ಹೇಳಿಕೆ:

ಮನೆಮನೆದಪ್ಪದೆ ಪರಿಪರಿ
ದನವರತಂ ಬೇಳ್ಪರಲ್ಲಿ ಪರಲಿಂಗಿಗಳುಂ
ಜಿನಸಮಯದಲ್ಲಿ ಕಡೆಪ
ಟ್ಟನುಮೆನಿಸೆಡಱಡಸಿದಲ್ಲಿಯುಂ ತಿರಿದಪನೆ (ಸಮ.ಪು. ೫-೬೦)

(ಇತರ ಮತಗಳವರು ಮನೆಮನೆಗೂ ಹೋಗಿಬೇಡಿ ಜೀವಿಸುತ್ತಾರೆ, ಆದರೆ ಅತ್ಯಂತ ಕಡಿಮೆ ಹಂತದ ಜೈನನೂ ಎಷ್ಟೇ ಕಷ್ಟಗಳು ಬಂದರೂ ಭಿಕ್ಷೆ ಬೇಡುವುದಿಲ್ಲ.) ಇತರ ಮತಗಳವರ ದೇವಸ್ಥಾನಗಳು ಊರ ಹೊರಗಿರುತ್ತದೆ. ಆದರೆ ಜೈನ ಬಸದಿಗಳು ಊರೊಳಗೇ ಇರುತ್ತವೆ. ಇದರ ಬಗ್ಗೆ ಬ್ರಹ್ಮಶಿವನ ಚುಚ್ಚುಮಾತನ್ನು ಕೇಳಿ:

ದೇಗುಲದ ನೆಳಲು ಮನೆಗಳ ಮೇ
ಲಾಗದು ಪರಿಯೆಲೆಂದು ಪೊಱಗಿರಿಸುವರ್, ಇಂ
ಬಾಗಿದೆ ದೂಡಿಪರ್ ಒಳ್ಪಿಂ
ಗಾಗರಮೆನಿಸಿರ್ದ ಜೈನಗೇಹಮನೂರೊಳ್ (ಸಮಾ.ಪು. ೮-೩೯)

(ದೇವಸ್ಥಾನದ ನೆರಳು ಮನೆಗಳ ಮೇಲೆ ಬೀಳಬಾರದೆಂಬ ನಂಬಿಕೆಯಿಂದ ಅದನ್ನು ಊರಹೊರಗೇ ಕಟ್ಟಿಸುತ್ತಾರೆ-ಎಂದರೆ ಗುಡಿಗಳು ಕೆಟ್ಟವಿರಬೇಕು! ಆದರೆ ಒಳ್ಳೆಯದರ ತೌರುಮನೆಯೆನಿಸುವ ಬಸದಿಯು ಊರೊಳಗೇ ಇರುತ್ತದೆ.)

ಬ್ರಹ್ಮಶಿವನ ಕಾಲಕ್ಕೆ ಕರ್ನಾಟಕದಲ್ಲಿ ಶಕ್ತಿಯ ಪೂಜೆ ಮಾಡುತ್ತಿದ್ದ ಕೌಳ ಎಂಬ ಪಂಗಡವೊಂದಿತ್ತು. ಎಲ್ಲ ದೈವಗಳೂ ಶಕ್ತಿ ದೇವತೆಗೆ ಅಧೀನ ಎಂಬುದೇ ಅದರ ನಂಬಿಕೆ. ಅದರ ಬಗ್ಗೆ:

ಮುರಹರ ಸರಸೀಭವ ರು
ದ್ರನುಮೀಶ್ವರನುಂ ಸದಾಶಿವಂ ಬೆರಸಿಂತ
ಯ್ವರುಮ್ ಬಂದಿರ್ಪರ್ ಚಂಡಿಯ
ಚರಣಂಗಳ ಮೊದಲೊಳೆಂದು ಕೌಳರ್ ಪೇಳ್ವರ್ (ಸಮ.ಪು. ೮–೧೭)

(ವಿಷ್ಣು ಬ್ರಹ್ಮ ರುದ್ರ ಈಶ್ವರ ಸದಾಶಿವ – ಈ ಐವರೂ ಚಂಡಿಯ ಕಾಲುಗಳೆಡೆಯಲ್ಲಿ ನೆಲೆಸಿರುವರೆಂದು ಕೌಳರು ಹೇಳುತ್ತಾರೆ.) ಶೈವರ ಒಂದು ಆಚರಣೆಯ ಬಗೆಗಿನ ಟೀಕೆಯಿದು:

ದೇವನ ಮಂಡೆಯೊಳಿಕ್ಕಿದ
ಪೂವಂ ಮುಟ್ಟಿದೊಡೆ ಮೀವರೆಂದೊಡೆ ಪೊಲ್ಲಂ
ದಾವೇಕೆಂದಪೆಮ್, ಆಪ್ತಂ
ಪಾವನಮಲ್ಲೆಂದು ಸಾಱುತಿಪ್ಪರ್ ಶೈವರ್ (ಸಮ.ಪು. ೮–೧೬)

(ದೇವರ ತಲೆಯ ಮೇಲಿನ ನಿರ್ಮಾಲ್ಯವನ್ನು ಮುಟ್ಟಿದರೆ ಸ್ನಾನ ಮಾಡಬೇಕೆಂಬುದು ಶೈವರ ನಂಬಿಕೆ. ಅವರ ದೇವರು ಮೈಲಿಗೆ ಎಂದು ನಾವೇಕೆ ಹೇಳಬೇಕು, ಅವರೇ ಈ ಆಚರಣೆಯಿಂದ ಅದನ್ನು ಸಾರಿ ಹೇಳುತ್ತಿದ್ದಾರೆ.)

ಈ ಕವಿಯ ಕಾಲಕ್ಕೆ ಶ್ರೀ ವೈಷ್ಣವ ಮತವೂ ಕನ್ನಡ ನಾಡಿನಲ್ಲಿ ಕಾಲಿಟ್ಟಿತ್ತು. ಅದು ಸುಮಾರಾಗಿ ಜನಪ್ರಿಯವಾಗುತ್ತಲೂ ಇದ್ದಂತೆ ತೋರುತ್ತದೆ. ಬ್ರಹ್ಮಶಿವನ ಕಣ್ಣು ಅದರ ಮೇಲೆಯೂ ಬಿದ್ದಿದೆ. ವಿಷ್ಣುವಿಗೆ ಹನ್ನೆರಡು ಹೆಸರುಗಳಿವೆಯಂತೆ, ವರ್ಷಕ್ಕೆ ಹನ್ನೆರಡು ತಿಂಗಳು. ಸರಿ ತಿಂಗಳಿಗೊಂದು ಹೆಸರಾಯಿತು. ಹೀಗೆ ವಿಷ್ಣುವಿಗೆ ಏಕರೂಪವಿರಲಿ ಒಂದೇ ಹೆಸರೂ ಇಲ್ಲ.

ಬರಿಸದ ಮಾಂಸಗಳ್ಪ
ನ್ನೆರಡಱೊಳಂ ಕ್ರಮದೆ ವಿಷ್ಣುಗಕ್ಕುಂ ಗಡ ಪ
ನ್ನೆರಡು ಪೆಸರ್, ಏಕರೂಪಂ
ಹರಿನಾಮಕ್ಕಿಲ್ಲ ಬಗೆವೊಡಿಂತುಟೆ ನಿರುತಂ (ಸಮ.ಪು. ೮–೯೧)

(ವರ್ಷದ ಹನ್ನೆರಡು ತಿಂಗಳಿಗೆ ಕ್ರಮವಾಗಿ ವಿಷ್ಣುವಿಗೆ ಹನ್ನೆರಡು ಹೆಸರುಗಳಿವೆ. ಆದ್ದರಿಂದ ವಿಷ್ಣುವಿಗೆ ಶಾಶ್ವತವಾದ ಒಂದೇ ಹೆಸರಿಲ್ಲ.) ಬೇರೆ ಕ್ಷುದ್ರದೈವಗಳ ಪೂಜೆ ಮಾಡುವವನನ್ನು ಜೈನರು ದೂರವಿರಿಸಬೇಕು. ಏಕೆ?

ಪೆಣನಂ ಪೆಸರ್ಗೊಳೆ ದೋಷಂ,
ಪೆಣದೊಳು ಕುಳ್ಳಿರ್ದು ಮಾಂಸಮಂ ತಿಂಬಾ ಕ
ಳ್ಪುಣೆಯಂ ಭೈರವಿಯಂ ನಿ
ರ್ಗುಣೆಯಂ ಪೂಜಿಪನನಂಟಲಾಗದು ಜೈನಂ (ಸಮ.ಪ. ೮–೯೧)

(ಹೆಣದ ಹೆಸರು ಹೇಳುವುದೇ ಮೈಲಿಗೆ ಎಂದಮೇಲೆ ಹೆಣಗಳ ಮಧ್ಯೆ ವಾಸಿಸುತ್ತ ಹೆಂಡ ಕುಡಿದು ಮಾಂಸ ತಿನ್ನುವ ಭೈರವಿಯನ್ನು ಪೂಜಿಸುವ ವ್ಯಕ್ತಿಯನ್ನು ಜೈನನು ಮುಟ್ಟಲೂಬಾರದು.)

ಬ್ರಹ್ಮಶಿವನು ಜನರ ಮೂಢ ನಂಬಿಕೆಗಳನ್ನು ಅಲ್ಲಗಳೆಯುತ್ತಾನೆ. ಆದರೆ ಅವನದು ಪಕ್ಷಪಾತ ದೃಷ್ಟಿಯೆಂಬುದು ನಿಜ. ಬೆನಕನನ್ನು ಪೂಜಿಸುವ ಬಗ್ಗೆ:

ಬೆನಕಂ ಕೆಯಿಕೆಟ್ಟಡೆ ಕಾ
ವನೆ ಕೆಱೆಯೇರಿಯಲ್ಲಿ ಕೆಱೆಯೊಡೆದಡೆ ಕಾ
ವನೆ ಕಿಮ್ಮನಱಿತಮಿಲ್ಲದ
ಮನುಷ್ಯರಲ್ಲಲ್ಲಿಗೇಕೆ ನಿಱಿಪರೊ ಪೇೞಿಂ (ಸಮ.ಪು. ೯-೪೦)

(ಬೆಳೆಯು ಹೋದರೆ ಬೆನಕನು ಕಾಪಾಡುವನೇನು? ಕೆರೆಯೊಡೆದರೆ ಅವನು ಕಟ್ಟುತ್ತಾನೆಯೇ? ತಿಳಿಯದ ಜನರು ಸುಮ್ಮನೆ ಅವನ ವಿಗ್ರಹವನ್ನು ಅಲ್ಲಿ ಸ್ಥಾಪಿಸುತ್ತಾರೆ.) ಮರಗಳನ್ನೇ ದೇವರೆಂದು ಪೂಜೆಸುವವರನ್ನು ಕುರಿತು:

ಪುಲುಗಿಲಂ ಉತ್ತರಣೆಯುಮಂ
ತೆ ಲೊಕ್ಕಿಯುಂ ಮತ್ತೆ ಮುತ್ತಂ ಆ ಎಕ್ಕೆಯುಮಂ
ಕೊಲೆಯುಂ ಬನ್ನಿಯ ಮರನುಂ
ಕುಲದಯ್ವವಿದೆಂದುಕೊಂಡು ಕೊನವರ್ ಮೂಢರ್ (ಸಮ.ಪು. 9-58)

(ಹುಲಿಗಿಲು ಉತ್ತರಣಿ ಲೊಕ್ಕಿ ಮುತ್ತುಗ ಎಕ್ಕೆ ಬನ್ನಿ ಮುಂತಾದ ಮರ ಗಿಡಗಳನ್ನೇ ಮೂಢರು ಕುಲದೈವಗಳೆಂದು ಭಾವಿಸಿ ಪೂಜಿಸುತ್ತಾರೆ.) ಗೋವಿನ ಬಗ್ಗೆ ಭಕ್ತಿಯಿರುವ ಜನರನ್ನು ಈ ಕವಿ ಗೇಲಿ ಮಾಡುವ ರೀತಿಯಿದು:

ಒಮ್ಮಾನಂಗಱೆವಾವಿಂ
ಗೊಮ್ಮೆಯುಮೆಱಗುತ್ತುಮಿರದೆ ಕೊಡವಾಲ್ಗರವಾ
ಎಮ್ಮೆಗೆಱಗುವುದು ಪಶುವಿಂ
ನೂರ್ಮಡಿ ಫಲವೀಗುಂ, ಅದಱಿನೆಱಗುಗೆ ಭಕ್ತರ್ (ಸಮ.ಪು. ೯-೨೧)

(ಸ್ವಲ್ಪ ಹಾಲು ಕೊಡುವ ಹಸುವನ್ನು ಪೂಜಿಸುವುದರ ಬದಲು ಹೆಚ್ಚು ಹಾಲು ಕೊಡುವ ಎಮ್ಮೆಯನ್ನಾದರೂ ಪೂಜಿಸಿದರೆ ಹೆಚ್ಚು ಪುಣ್ಯ ಬಂದೀತು!) ಹಾಗೆಯೇ ಕೆಲವು ರೋಗಗಳು ವಾಸಿಯಾಗಲೆಂದು ಮಾಡುವ ನಾಗ ಪೂಜೆಯ ಬಗ್ಗೆ ಬ್ರಹ್ಮಶಿವನ ವಿಡಂಬನೆ:

ಕಿರಕುಂ ತುಱೆಯುಂ ತೊನ್ನುಂ
ಶರೀರದೊಳ್ ತೋರೆ ತಂತ್ರದಿಂ ಕಿಡಿಸದೆ ನಾ
ಗರ ಮಾಟಮೆಂದು ಕಿವಿಯೊಳು
ಮುರಿದಿಟ್ಟುಂ ಪಲರುಮರ್ಚಿಪರ್ ಪುತ್ತುಗಳಂ (ಸಮ.ಪು. ೯-೨೨)

(ನವೆ ತುರಿ ತೊನ್ನುಗಳು ಉಂಟಾದರೆ ಅವಕ್ಕೆ ಚಿಕಿತ್ಸೆ ಮಾಡಿಸದೆ, ಅವೆಲ್ಲ ನಾಗರ ಮಾಟವೆಂದು ಹುತ್ತುಗಳನ್ನು ಜನರು ಪೂಜಿಸುತ್ತಾರೆ.) ಗೊರವರನ್ನು ಕರೆತಂದು ಶುಶ್ರೂಷೆ ಮಾಡುವರ ಬಗ್ಗೆ:

ಪರಿದು ಪಿಡಿತಂದು ಪುಲ್ಲೆಯ
ಗೊರವಂಗುಣಲಿಕ್ಕಿ ಮೀಸಿ ಸೊಳೆಯೊಳಂವನಂ
ನೆರಪಿದೊಡವಂಗೆ ಸಗ್ಗಂ
ದೊರೆಕೊಳ್ಗುಂ ನಿರುತಮೆಂದು ನೆಗಳ್ವರ್ ಮೂಢರ್ (ಸಮ.ಪು. ೧೪-೨೩)

(ಶೈವ ಸಾಧುವೆನಿಸಿದ ಗೊರವನನ್ನು ಕರೆದು ತಂದು ಜಿಂಕೆಯ ಮಾಂಸದ ಅಡುಗೆಯನ್ನು ಉಣಲಿಕ್ಕಿ ಸ್ನಾನ ಮಾಡಿಸಿ ಸೂಳೆಯೊಂದಿಗೆ ಅವನು ಮಲಗಲು ಅವಕಾಶವಿತ್ತರೆ ತಮಗೆ ಸ್ವರ್ಗವು ಸಿಗುತ್ತದೆಂದು ಮೂಢರು ನಂಬಿ ಆ ರೀತಿ ಮಾಡುತ್ತಾರೆ.) ತನ್ನ ಕಾಲದಲ್ಲಿ ವಾಸಿಸುತ್ತಿದ್ದ ಈ ನಾಡಿನ ಸಾಮಾನ್ಯ ಜನರ ನಂಬಿಕೆಯಲ್ಲಿರುವ ವಿರೋಧಗಳನ್ನು ಬ್ರಹ್ಮಶಿವನು ಗಮನಿಸಿ ಈ ರೀತಿ ನುಡಿಯುತ್ತಾನೆ:

ನಾರಾಯಣನವತಾರಂ
ವಾರಾಹಂ ಮತ್ಸ್ಯಕೂರ್ಮಮೆಂಬಿವೆ ದಿಟಮೆಂ
ದೋರಂತೆ ಪೇೞ್ವರ್, ಅವನೆ ವಿ
ದಾರಿಸಿಯುಂ ತಿನಲುಮಕ್ಕುಮೆಂಬರ್ ಅತರ್ಕ್ಕರ್ (ಸಮ.ಪು. ೧೪–೧೪೫)

(ಹಂದಿ ಮೀನು ಆಮೆಗಳನ್ನು ವಿಷ್ಣುವಿನ ಅವತಾರಗಳೆಂದು ಜನರು ಒಂದು ಕಡೆ ಹೇಳಿದರೆ ಮತ್ತೊಂದು ಕಡೆ ಅವುಗಳನ್ನೇ ತಿನ್ನುತ್ತಾರೆ. ಈ ಜನರ ತರ್ಕವೇ ಅರ್ಥವಾಗದು.)

ಬೇರೆ ಮತಗಳಲ್ಲಿ ಈ ರೀತಿ ಕ್ಷುದ್ರ ವಿಷಯಗಳೇ ತುಂಬಿರುವುದರಿಂದ ಜೈನ ಧರ್ಮವು ಮಾತ್ರವೇ ಮನುಷ್ಯರನ್ನು ಉದ್ಧರಿಸುವ ಶಕ್ತಿಯೆಂದು ಬ್ರಹ್ಮ ಶಿವನ ಅಭಿಪ್ರಾಯ, ಆದರೆ ಸಾಮಾನ್ಯರು ಕ್ಷುಲಕವಾದುದನ್ನು ಆರಿಸಿಕೊಳ್ಳುವರೇ ಹೊರತು ಶ್ರೇಷ್ಠವಾದದ್ದನಲ್ಲ ಎಂಬುದೇ ಅವನ ಕೊರಗು.

ಬಳರಿಗೆ ಕೊಂಡುಪೋಗಿ ಕುಱಿಯಂ ತಱಿದು ಅಲ್ಲಿಯೆ ತಿಂದು ಪೀರ್ದು ಕ
ಳ್ಗಳನಡಗಿಂಡೆಯಾಡುವರೆ ಮೆಚ್ಚುವರ್, ಅರ್ಚನೆಯಂ ತ್ರಿಲೋಕ ಮಂ
ಗಳನಿಳಯಂಗೆ ಜೈನ ನಿಳಯಕ್ಕತಿಭಕ್ತಿಯಿನೊಯ್ಯೆ ಕಾಣುತುಂ
ಮುನಿದು ಕನಲ್ವರ್, ಅಂತವರ್ಗೆ ದುಸ್ಸಹನಾರಕ ದುಃಖಭಾಜನಂ

(ಸಮ.ಪು. ೧೩–೪೬)

(ಕ್ಷುದ್ರದೇವತೆಗೆ ಕುರಿಯನ್ನು ಬಲಿಯಿತ್ತು ಮಾಂಸವನ್ನು ತಿಂದು ಚೆಲ್ಲಾಡಿದರೇ ಜನರಿಗೆ ತೃಪ್ತಿ: ಅಂತಹವರು ಮೂರು ಲೋಕಗಳಿಗೂ ಒಳಿತನ್ನು ಮಾಡುವ ಜಿನನನ್ನು ಪೂಜಿಸಿದರೆ ಸಿಟ್ಟು ಮಾಡುತ್ತಾರೆ. ಇವರಿಗೆ ನರಕದ ದುಃಖ ಕಟ್ಟಿಟ್ಟ ಬುತ್ತಿ.) ಹೀಗೆ ಬ್ರಹ್ಮಶಿವನ ಕೃತಿಯ ತುಂಬ ಪರಮತ ಟೀಕೆ, ಜೈನಧರ್ಮ ಶ್ರೇಷ್ಠತೆಗಳು ಸೇರಿವೆ. ಆ ಕಾಲದ ಜನರ ಜೀವನವನ್ನು ತಿಳಿಯಲು ಈ ಕೃತಿಯಿಂದ ಅಪಾರ ಸಹಾಯವಾಗುವುದರಿಂದ ಈ ಗ್ರಂಥಕ್ಕೆ ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ವಿಶಿಷ್ಟ ಸ್ಥಾನವಿದೆ.

ನೇಮಿಚಂದ್ರ

ವಚನಕಾರರಾದನಂತರ ಬಂದರೂ ನೇಮಿಚಂದ್ರನು ಜೈನಕವಿಯಾದುದರಿಂದ ಹಳೆಯ ಚಂಪೂ ಪರಂಪರೆಯನ್ನು ಬಿಡದೆ ಆ ದಾರಿಯಲ್ಲಿಯೇ ನಡೆದಿದ್ದಾನೆ. ಇವನು ಹನ್ನೆರಡನೆಯ ಶತಮಾನದ ಕೊನೆಯ ಭಾಗದಲ್ಲಿಯೂ ಹದಿಮೂರನೆಯ

ಶತಮಾನದ ಮೊದಲಲ್ಲಿಯೂ ಜೀವಿಸಿದ್ದ ದೊಡ್ಡ ಪಂಡಿತ ಕವಿ. ಪಂಪ-ರನ್ನರ ಮಾದರಿಯಂತೆಯೇ ಇವನು ಒಂದು ಲೌಕಿಕಕಾವ್ಯವನ್ನೂ ಒಂದು ಧಾರ್ಮಿಕ ಕಾವ್ಯವನ್ನೂ ಬರೆದಿದ್ದಾನೆ. ರಟ್ಟರಾಜನಾದ ಲಕ್ಷ್ಮಣ ರಾಜನ ಆಶ್ರಯದಲ್ಲಿದ್ದುಕೊಂಡು ಸು. ಕ್ರಿ.ಶ. ೧೧೯೦ರ ಹೊತ್ತಿಗೆ ತನ್ನ ಮೊದಲ ಕಾವ್ಯವಾದ 'ಲೀಲಾವತಿ'ಯನ್ನು ಬರೆದನು: ಹೊಯ್ಸಳ ವೀರ ಬಲ್ಲಾಳನ ಮಹಾಪ್ರಧಾನನಾದ ಪದ್ಮನಾಭನ ಪ್ರೇರಣೆಯ ಮೇರೆ 'ನೇಮಿನಾಥ ಪುರಾಣ'ವನ್ನು ರಚಿಸಿದನು. ಅವನು ಕವಿಗಳ ಪ್ರತಿಭಾಶಕ್ತಿಯನ್ನು ಕಾವ್ಯಗಳಲ್ಲಿ ಹೊಗಳಿದ್ದಾನೆ. ಕವಿಯಾದವನು ಎಷ್ಟು ಮಹಿಮಾವಂತನೆಂಬುದನ್ನು ಅವನು ವರ್ಣಿಸಿರುವ ರೀತಿಯಿದು:

ಕಟ್ಟುಗೆ ಕಟ್ಟದಿರ್ಕೆ ಕಡಲಂ ಕಪಿಸಂತತಿ, ವಾಮನಕ್ರಮಂ
ಮುಟ್ಟುಗೆ ಮುಟ್ಟದಿರ್ಕೆ ಮುಗಿಲಂ, ಹರನಂ ನರನೊತ್ತಿ ಗಂಟಲಂ
ಮೆಟ್ಟುಗೆ ಮೆಟ್ಟದಿರ್ಕೆ, ಕವಿಗಳ್ ಕೃತಿಬಂಧದೊಳಲ್ತೆ ಕಟ್ಟಿದರ್
ಮುಟ್ಟಿದರ್ ಒತ್ತಿ ಮೆಟ್ಟಿದರ್, ಅದೇನಳವಗ್ಗಳಮೊ ಕವೀಂದ್ರರಾ

(ಲೀಲಾ. ೧-೧೧)

(ಕಪಿಸಮೂಹವು ಸಮುದ್ರಕ್ಕೆ ಸೇತುವೆಯನ್ನು ಕಟ್ಟಿದರೋ ಬಿಟ್ಟರೋ ಕಾವ್ಯದಲ್ಲಂತೂ ಹಾಗೆ ಮಾಡಿದರು, ವಾಮನನು ಆಕಾಶದಲ್ಲಿ ತನ್ನ ಮೂರನೆಯ ಪಾದವನ್ನು ಇಟ್ಟನೋ ಇಲ್ಲವೋ ಕವಿಯು ಹಾಗೆ ಮಾಡಿಸಿದ, ಅರ್ಜುನನು ಶಿವನ ಗಂಡಲನ್ನು ಒತ್ತಿ ಮೆಟ್ಟಿದನೋ ಇಲ್ಲವೋ ಆದರೆ ಭಾರತದಲ್ಲಿ ಹಾಗೆ ಒತ್ತಿದ. ಹೀಗೆಲ್ಲ ಅದ್ಭುತ ಕಾರ್ಯಗಳನ್ನು ಮಾಡಿಸುವ ಕವಿಗಳ ಮಹತ್ವವು ಅದೆಷ್ಟು!) ಹಾಗೆಯೇ ಶ್ರೇಷ್ಠವಾದ ಕಾವ್ಯವು ಆ ದೇಶದ ಜನರ ಪುಣ್ಯ ಬಲದಿಂದ ರಚಿತವಾಗುತ್ತದೆಂದು ಹೇಳುವ ಅವನ ಪದ್ಯವು ತುಂಬ ಪ್ರಸಿದ್ಧವಾದುದು:

ಬೆಲೆಯಿಂದಕ್ಕುಮೆ ಕೃತಿ, ಗಾ
ವಿಲ, ಭುವನದ ಭಾಗ್ಯದಿಂದಮಕ್ಕುಂ; ನೋಟ್ಪಂ
ಬೆಲೆಗೊಟ್ಟು ತಾರ ಮಧುವಂ
ಮಲಯಾನಿಲನಂ ಮನೋಜನಂ ಕೌಮುದಿಯಂ!

(ನೇಮಿ.ಪು. ೧-೪೫)

(ಶ್ರೇಷ್ಠ ಕಾವ್ಯವು ದುಡ್ಡುಕೊಟ್ಟರೆ ಬರುತ್ತದೆಯೆಂದು ಭಾವಿಸಬೇಡವೊ ಮೂರ್ಖ, ಅದು ಜಗತ್ತಿನ ಪುಣ್ಯದಿಂದ ಉಂಟಾಗುವಂಥದು. ವಸಂತನನ್ನು ಮಲಯ ಪರ್ವತದ ತಂಗಾಳಿಯನ್ನು, ಕಾಮವನ್ನು, ಬೆಳುದಿಂಗಳನ್ನು ದುಡ್ಡು ಕೊಟ್ಟು ಕೊಂಡುಕೊಂಡು ಬಾ ನೋಡೋಣ!)

ಲೀಲಾವತಿ

ಈ ಕಾವ್ಯವು ಹದಿನಾಲ್ಕು ಆಶ್ವಾಸಗಳಲ್ಲಿ ಹರಿದಿರುವ ಚಂಪೂ ಕೃತಿ. ಇದು ದೀರ್ಘವಾದಪ್ರಣಯ ಕತೆಯೊಂದನ್ನು ಚಿತ್ರಿಸುತ್ತಿದೆ. ಇದಕ್ಕೆ ಸುಬಂಧುವೆಂಬ

ಸಂಸ್ಕೃತಕವಿಯ 'ವಾಸವದತ್ತಾ' ಎಂಬ ಗದ್ಯಕಾವ್ಯವು ಪ್ರೇರಣೆಯನ್ನೊದಗಿಸಿದೆಯೆಂದು ಕಾಣುತ್ತದೆ. 'ಸ್ತ್ರೀರೂಪಮೆ ರೂಪಂ, ಶೃಂಗಾರ ರಸಮೆರಸಂ' ಎಂಬ ಕವಿಯ ಆದರ್ಶವು ಪ್ರಣಯ ಕಥೆಯಾಗಿ ಇಲ್ಲಿ ಬಂದಿದೆ. ಹದಿನೆಂಟು ವರ್ಣನೆಗಳಿಂದಲೂ ಕಷ್ಟಕರವಾದ ಶೈಲಿಯಿಂದಲೂ ರಚಿತವಾದ ಈ ಕಾವ್ಯವು ಶ್ರೇಷ್ಠವಾದ ಕಾವ್ಯವೇನಲ್ಲ. ಆದರೆ ಇದು ಅದ್ಭುತ ಪ್ರೇಮಕತೆ ಯಾದುದರಿಂದ ಜನಪ್ರಿಯವಾಗಿದೆ.

ಜಯಂತಿಪುರದ ಚೂಡಾಮಣಿ–ಪದ್ಮಾವತಿಯರೆಂಬ ರಾಜ ರಾಣಿಯರ ಮಗ ಕಂದರ್ಪದೇವ. ಅವನಿಗೆ ಒಂದು ದಿನ ವಿಚಿತ್ರ ಕನಸೊಂದು ಬಿತ್ತು: ಅತ್ಯಂತ ಸೌಂದರ್ಯವತಿಯಾದ ಯುವತಿಯು ಕಾಣಿಸಿಕೊಂಡು ಒಂದು ಕ್ಷಣದಲ್ಲಿಯೇ ಮಾಯವಾದಳು. ಎಚ್ಚರಗೊಂಡ ಯುವ ರಾಜನಿಗೆ ವಿರಹವೇದನೆ. ಹೀಗಿರಲು ಒಮ್ಮೆ ಐಂದ್ರಜಾಲಿಕನು ಬಂದಾಗ 'ಮೂರು ಲೋಕದಲ್ಲಿಯೂ ಸುಂದರಿಯೆನಿಸುವ ಯುವತಿಯನ್ನು ತೋರಿಸು' ಎಂದು ಕಂದರ್ಪನು ಕೇಳಲು ಆ ಯಕ್ಷಿಣಿಗಾರನು ಹಾಗೆಯೇ ಮಾಡುವನು. ಅವನು ಕಾಣಿಸಿದ ಸುಂದರಿಯೂ ತನ್ನ ಕನಸಿನ ಸುಂದರಿಯೇ ಆಗಿದ್ದಳು. ಸರಿ, ಅವಳನ್ನು ಹುಡುಕಿಕೊಂಡು ಕೆಳೆಯ ಮಕರಂದ ನೊಡನೆ ಹೊರಡುತ್ತಾನೆ. ಅಡವಿಯಲ್ಲಿ ಒಮ್ಮೆ ವಿಶ್ರಮಿಸುತ್ತಿರುವಾಗ ಮರದ ಮೇಲೆ ಒಂದು ಗಂಡು ಗಿಳಿಯು ತನ್ನ ಪ್ರೇಯಸಿಗೆ ಒಂದು ಕತೆಯನ್ನು ಹೇಳಿತು: ಕುಸುಮಪುರದ ರಾಜಕುಮಾರಿ ಲೀಲಾವತಿ. ಅವಳೊಮ್ಮೆ ಕನಸಿನಲ್ಲಿ ಸುರಸುಂದರನಾದ ಯುವಕನನ್ನು ಕಂಡು ವಿರಹದಲ್ಲಿದ್ದಾಳೆ. ಅವಳ ಸಖಿಯ ಸಲಹೆಯಂತೆ ಲೀಲಾವತಿಯು ತಾನು ಕನಸಿನಲ್ಲಿ ಕಂಡ ಸುಂದರನನ್ನು ಚಿತ್ರದಲ್ಲಿ ಬರೆದಿದ್ದಾಳೆ–ಎಂದು ಹೇಳಿ ತಾನು ಆ ಚಿತ್ರವು ಸಿದ್ಧವಾಗುತ್ತಿದ್ದಾಗ ಅಲ್ಲಿಯೇ ಇದ್ದೆ ಎಂದು ಗಿಳಿಯು ಹೇಳಿತು. ಅದನ್ನು ಕೇಳಿದ ಕಂದರ್ಪನು ಕುಸುಮ ಪುರಕ್ಕೆ ಹೊರಟ.

ಒಮ್ಮೆ ಕುಸುಮಪುರದಲ್ಲಿ ವಿರಹವ್ಯಥೆಯಿಂದ ಕಂದರ್ಪದೇವನು ಮೂರ್ಛೆ ಹೋದಾಗ ಮಕರಂದನು ನೀರು ತರಲು ಹೋಗುತ್ತಾನೆ. ಲೀಲಾವತಿಯ ಸಖಿಯರು ಪರ್ಣಲಘುವೆಂಬ ವಿದ್ಯೆಯಿಂದ ಅವನನ್ನು ಲೀಲಾವತಿಯ ಬಳಿ ಬಿಡುತ್ತಾರೆ. ಮೂರ್ಛೆಯಿಂದ ಎಚ್ಚೆತ್ತ ಕಂದರ್ಪನು. ರಾಜಕುಮಾರಿಗೆ ಮಾರುಹೋಗುತ್ತಾನೆ. ಇಬ್ಬರೂ ಗಾಂಧರ್ವರೀತಿಯಿಂದ ಮದುವೆಯಾಗುತ್ತಾರೆ. ಅನಂತರ ಒಂದು ದಿನ ಮಕರಂದನು ತಂದುಕೊಟ್ಟ ಲೀಲಾವತಿಯ ಚಿತ್ರವನ್ನು ಕಂದರ್ಪನು ಇಟ್ಟುಕೊಂಡಿರು ವಾಗ ಅಲ್ಲಿಗೆ ಬಂದ ಲೀಲಾವತಿಯು ಅದು ಬೇರೆಯ ಹೆಣ್ಣಿನ ಚಿತ್ರವೆಂದು ಭಾವಿಸಿ ಚಿತ್ರವನ್ನು ಸರಿಯಾಗಿ ನೋಡದೆಯೇ ಹರಿದು ಬಾವಿಯಲ್ಲಿ ಹಾಕಿ ಬಳ್ಳಿಯಾಗಿ ಬಿಡುತ್ತಾಳೆ. ಕಂದರ್ಪದೇವನು ವಿರಹದಿಂದ ಬಳಲುತ್ತ ಅವಳಂತೆಯೇ ಇದ್ದ ಬಳ್ಳಿಯೊಂದನ್ನು ಅಪ್ಪಿಕೊಂಡಾಗ ಮತ್ತೆ ಲೀಲಾವತಿಯು ಮನುಷ್ಯ ಜನ್ಮವನ್ನು ಪಡೆಯುತ್ತಾಳೆ. ಇಬ್ಬರೂ ಜಯಂತಿಪುರಕ್ಕೆ ಬಂದು ಸುಖವಾಗಿರುತ್ತಾರೆ.

ಈ ಕಾವ್ಯರಚನೆಯಲ್ಲಿ ಮೂಲ ಅಕರವಲ್ಲದೆ, ಅನೇಕ ಸಂಸ್ಕೃತಕಾವ್ಯಗಳು ಪ್ರಭಾವವನ್ನು ಬೀರಿವೆ. ಈ ಕಾವ್ಯದಲ್ಲಿ ಕೆಲವೆಡೆ ಸುಂದರ ರಚನೆಯನ್ನು ಕಾಣಬಹುದು. ಲೀಲಾವತಿಯ ವಿರಹದ ವರ್ಣನೆಯಿದು:

ಇಷುಪ್ರಾಯಂ ಗೇಯಂ, ಮುಷಿತಕಿರಣಂ ಶೀತಕಿರಣಂ,
ವಿಷಾಹಾರಂ ಹಾರಂ, ಹೃದಯದಹನಂ ಗಂಧವಹನಂ,
ದ್ವಿಷಜ್ಜಾತಂ ಚೂತಂ, ಪರಿಭವನಮಾಯ್ತಂಬುಜವನಂ,
ವಿಷಾದಾಯಂ ಕಾಯಂ, ವನಿತೆಗವನಿಂ ಚಿತ್ತಭವನಿಂ. (ಲೀಲಾ. ೭-೮೩)

(ಅವಳಿಗೆ ಮನ್ಮಥನಿಂದಾಗಿ ಸಂಗೀತವು ಬಾಣದಂತೆ ಚುಚ್ಚಿತು. ಚಂದ್ರನು ತನ್ನ ತಂಪು ಕಿರಣಗಳನ್ನು ಕಳೆದುಕೊಂಡಂತಾಯಿತು. ಹಾರವು ವಿಷಸಮಾನವಾಯಿತು, ಗಾಳಿಯು ಹೃದಯವನ್ನು ಸುಡುವಂತೆ ತೋರುತ್ತಿತ್ತು., ಮಾವಿನ ಮರವು ಶತ್ರುಬಣದಂತೆ ಕಾಣಿಸಿತು, ಕಮಲವನವು ದುಃಖವನ್ನುಂಟು ಮಾಡುವಂತಾಯ್ತು, ದೇಹವು ವಿಷಪೂರಿತವಾಯಿತು.) ಇಲ್ಲಿ ಪದ್ಯದ ಓಟ, ಒಳ ಪ್ರಾಸಗಳು, ಚಿಕ್ಕ-ಚಿಕ್ಕ ವಾಕ್ಯಗಳು-ಇವೆಲ್ಲವೂ ಇಂಪಾಗಿವೆ,

ಬಳ್ಳಿಯಾಗಿದ್ದ ಲೀಲಾವತಿಯನ್ನು ಹುಡುಕುತ್ತ ಬಳ್ಳಿಯೊಂದನ್ನು ಕಂದರ್ಪದೇವನು ಆಲಂಗಿಸುತ್ತಾನೆ. ಆಗ ಆ ಬಳ್ಳಿಯಿಂದಲೇ ಯುವತಿಯು ಮೂಡಿ ಬಂದುದನ್ನು ನೇಮಿಚಂದ್ರನು ವರ್ಣಿಸುವ ರೀತಿಯಿದು:

ಸಿತಪುಷ್ಪಂ ಸ್ಮಿತನೇತ್ರಮಾಯ್ತು, ಎಳದಳಿರ್ ಬಾಯಾಯ್ತು, ಬಿಣ್ಗೊಂಚಲು
ನ್ನತ ವಕ್ಷೋರುಹಮಾಯ್ತು, ತುಂಬಿ ಕುರುಳಾಯ್ತು, ಒಳ್ಗೊಂಬು ತೋಳಾಯ್ತು, ತ
ಲ್ಲತೆ ಲೀಲಾವತಿಯಾಯ್ತು, ಇದೇನಮೃತಮೋ ಘರ್ಮಾಂಬುವು, ಆಲಿಂಗನಂ
ಮೃತಸಂಜೀವನಮೊ, ರಸಂ ಹರಣಮೋ, ಶ್ರೀ ರೂಪ ಕಂದರ್ಪನಾ

(ಲೀಲಾ. ೭-೮೩)

(ಬಿಳಿ ಹೂಗಳು ಕಣ್ಣುಗಳಾದವು, ಎಳೆಯ ಚಿಗುರು ಬಾಯಿಯಾಯ್ತು, ದೊಡ್ಡ ಗೊಂಚಲುಗಳು ಎದೆಗಳಾದವು, ದುಂಬಿಗಳು ಕಪ್ಪು ಕೂದಲಾಯಿತು, ಮಾಟವಾದ ಕೊಂಬೆಗಳು ತೋಳುಗಳಾಯ್ತು-ಹೀಗೆ ಆ ಬಳ್ಳಿಯೇ ಲೀಲಾವತಿಯಾಯಿತು. ಇದೇನು ಬೆವರೇ ಅಮೃತವೊ. ಅಪ್ಪುಗೆಯೇ ಸಂಜೀವಿನಿಯೋ, ಪ್ರೇಮರಸವೇ ಪ್ರಾಣವೋ ಎಂಬಂತೆ ಅವಳು ಸುಂದರವಾದ ಆಕೃತಿಯನ್ನು ತಾಳಿದ್ದಳು.)

ಆದರೆ ಇಲ್ಲಿ "ಕೃತಕವೂ ಅನೇಕ ಕಡೆ ನೀರಸವೂ ಆದ ವರ್ಣನೆಗಳಿಂದ ಕಥಾಸೂತ್ರವೇ ಮರೆಯಾಗಿ ಹೋಗುತ್ತದೆ. ಕಥಾಸಂವಿಧಾನದಲ್ಲಿಯೂ ಅದ್ಭುತವಾದ ಸನ್ನಿವೇಶಗಳ ಚಿತ್ರಣವಿಲ್ಲ. ವ್ಯಕ್ತಿಗಳಂತೂ ಬಹು ಸಪ್ಪೆ, ನಾಯಕ ನಾಯಿಕೆಯರು ತಮ್ಮ ಸ್ವಂತ ಭಾವನಾತರಂಗಗಳಿಂದಲೂ ಕ್ರಿಯೆಗಳಿಂದಲೂ ವಾಚಕರನ್ನು ಆಕರ್ಷಿಸು ವಂತಿಲ್ಲ."[೧೧] ಇಷ್ಟಾದರೂ, ಕನ್ನಡ ಸಾಹಿತ್ಯದಲ್ಲಿರುವ ಕೆಲವೇ ಶೃಂಗಾರ ಕಾವ್ಯಗಳಲ್ಲಿ ಇದೂ ಒಂದಾಗಿರುವುದರಿಂದಾಗಿ 'ಲೀಲಾವತಿ' ಕಾವ್ಯಕ್ಕೆ ಸ್ವಲ್ಪ ಬೆಲೆಯಿದೆ.

ನೇಮಿನಾಥ ಪುರಾಣ

'ಲೀಲಾವತಿ'ಗಿಂತ ಉತ್ತಮ ಕಾವ್ಯವಾದ 'ನೇಮಿನಾಥ ಪುರಾಣ'ದಿಂದ ನೇಮಿಚಂದ್ರನಿಗೆ ಕೀರ್ತಿ ಬಂದಿರುವುದು. ಇದು ಪೂರ್ತಿಯಾಗಿರದೆ ಅರ್ಧದಲ್ಲಿಯೇ ನಿಂತುಹೋಗಿರುವುದರಿಂದ ಈ ಕಾವ್ಯಕ್ಕೆ 'ಅರ್ಧನೇಮಿ ಪುರಾಣ'ವೆಂದೂ ಕರೆಯುತ್ತಾರೆ. ಇದು ಹರಿವಂಶದಲ್ಲಿ ಹುಟ್ಟಿದ ಇಪ್ಪತ್ತೆರಡನೆಯ ತೀರ್ಥಂಕರನಾದ ನೇಮಿನಾಥನ ಕತೆಯಾಗಿರುವುದರಿಂದ ಇದಕ್ಕೆ 'ಹರಿವಂಶ ಪುರಾಣ'ವೆಂಬ ಹೆಸರೂ ಇದೆ.

ಎಲ್ಲ ನೇಮಿನಾಥ ಪುರಾಣಗಳಂತೆಯೇ ಇಲ್ಲಿಯೂ ಹರಿವಂಶ-ಕುರುವಂಶಗಳ ಕತೆಗಳು ಹೆಣೆದುಕೊಂಡಿವೆ: ಇಲ್ಲಿ ಕೃಷ್ಣನ ಕತೆಗೆ ಪ್ರಾಧಾನ್ಯವು ದೊರೆತಿದೆ. ಸುಗಂಧಿಲ ದೇಶದ ರಾಜದಂಪತಿಗಳಾದ ಅರ್ಹದ್ದಾಸ-ಜಿನದತ್ತ ಇವರಿಗೆ ಅಪರೂಪದ ಮಗ ಅಪರಾಜಿತ. ಇವನಿಗೆ ಪ್ರೀತಿಮತಿಯೆಂಬುವವಳೊಡನೆ ಮದುವೆಯಾದನಂತರ ಅರ್ಹದ್ದಾಸನು ದೀಕ್ಷೆ ವಹಿಸುತ್ತಾನೆ. ಒಂದು ದಿನ ಅಪರಾಜಿತನು ಬಸದಿಯಲ್ಲಿ ಪೂಜಿಸುತ್ತಿರುವಾಗ ಅವನಿಗೆ ಚಾರಣ ಮುನಿಗಳಿಬ್ಬರು ಕಾಣುತ್ತಾರೆ. ತನಗೆ ಅವರ ಪರಿಚಯವಿದ್ದಂತಿದೆಯೆಂದು ಇವನು ಹೇಳಿದಾಗ ಅವರಲ್ಲಿ ಹಿರಿಯರು ಪೂರ್ವಜನ್ಮದ ಕತೆಯನ್ನು ಹೇಳುತ್ತಾರೆ: ಗಂಧಿಲದೇಶದ ಸೂರ್ಯಪ್ರಭರಾಜನಿಗೆ ಚಿಂತಾಗತಿ, ಮನೋಗತಿ, ಚಪಲಗತಿಗಳೆಂಬ ಮೂವರು ಮಕ್ಕಳು ಇವರು ಅರಿಂದಮಪುರಿಯ ರಾಜಕುಮಾರಿ ಪ್ರೀತಿಮತಿಯ ಸ್ವಯಂವರಕ್ಕಾಗಿ ಏರ್ಪಾಟಾದ ಗಗನಗಮನ ಸ್ಪರ್ಧೆಗೆ ಹೋದರು. ಮನೋಗತಿಯೂ ಚಪಲಗತಿಯೂ ಆ ಸ್ಪರ್ಧೆಯಲ್ಲಿ ಸೋತರು. ಚಿಂತಾಗತಿಯು ಅವರಲ್ಲಿ ಗೆದ್ದು ತನ್ನ ತಮ್ಮಂದಿರಿಬ್ಬರಲ್ಲಿ ಒಬ್ಬನನ್ನು ಮದುವೆಯಾಗುವಂತೆ ಪ್ರೀತಿಮತಿಗೆ ಹೇಳಿದನು. ಸ್ಪರ್ಧೆಯಲ್ಲಿ ಗೆದ್ದವನನ್ನಲ್ಲದೆ ಇತರರನ್ನು ಮದುವೆಯಾಗೆನೆಂದು ಆಕೆ ದೀಕ್ಷೆವಹಿಸಿದಳು. ಈ ಜನ್ಮದಲ್ಲಿ ಚಿಂತಾಗತಿಯೇ ಅಪರಾಜಿತ, ತಾವಿಬ್ಬರು ಅವನ ತಮ್ಮಂದಿರು ಎಂದು ಹೇಳಿದರು. ಅವನಿಗಿನ್ನು ಒಂದು ತಿಂಗಳು ಆಯಸ್ಸು ಇರುವುದೆಂದು ತಿಳಿಸಿದರು. ಅಪರಾಜಿತನು ಮಗನಿಗೆ ರಾಜ್ಯವನ್ನಿತ್ತು ದೀಕ್ಷೆಯನ್ನು ಕೈಗೊಂಡ, ಮುಂದೆ ಹಸ್ತಿನಾಪುರದ ಚಂದ್ರ-ಶ್ರೀಮತಿಯರಿಗೆ ಪ್ರತಿಷ್ಠನೆಂಬ ಮಗನಾಗಿ ಹುಟ್ಟಿ, ಒಮ್ಮೆ ಉಲ್ಕಾಪಾತವನ್ನು ಕಂಡು ವಿರಕ್ತನಾದ. ಸನ್ಯಾಸ ವಹಿಸಿ ಸತ್ತು ಜಯಂತ ವಿಮಾನದಲ್ಲಿ ಅಹಮಿಂದ್ರನಾದ. ಮುಂದೆ ಇವನೇ ಹರಿವಂಶದ ಸಮುದ್ರ ವಿಜಯನಿಗೆ ಮಗನಾಗಿ ನೇಮಿನಾಥನಾಗಿ ಹುಟ್ಟಿದ. ಈ ಸಮುದ್ರ ವಿಜಯನ ಸೋದರಿಯರೇ ಕುಂತಿ ಮಾದ್ರಿಯರು. ಇವರ ಚಿಕ್ಕಪ್ಪನ ಮಗಳೇ ಗಾಂಧಾರಿ. ಹೀಗೆ ಹರಿವಂಶದೊಡನೆ ಭಾರತದ ಕತೆಯೂ ಹೆಣೆದುಕೊಂಡಿದೆ.

ಕತೆಯ ಮತ್ತೊಂದು ಮುಖವಾಗಿ ಭಾಗವತದ ಕತೆಯು ಬರುತ್ತದೆ. ಆದರೆ ಸ್ವಲ್ಪ ವ್ಯತ್ಯಾಸಗಳೊಡನೆ ಆ ಕತೆಯು ಇಲ್ಲಿ ಬರುತ್ತದೆ. ವಸುದೇವ ದೇವಕಿಯರ

ಮಗನಾದ ಕೃಷ್ಣನು ತನ್ನ ಸಾವಿಗೆ ಕಾರಣನಾಗುವನೆಂದು ತಿಳಿದಿದ್ದ ಕಂಸನು ಅವನನ್ನು ಕೊಲ್ಲಲು ನಾನಾವಿಧವಾಗಿ ಪ್ರಯತ್ನಿಸಿದನು. ಕೊನೆಗೆ ತನ್ನ ಚತುರಂಗ ಸೈನ್ಯ ಸಮೇತ ಕೃಷ್ಣನ ಮೇಲೆ ಬಿದ್ದ ಕಂಸನು ಕೃಷ್ಣನಿಂದ ಹತನಾದನು. ಇಲ್ಲಿಗೆ ನೇಮಿನಾಥಪುರಾಣವು ನಿಂತಿದೆ.

ಇದು ಪುರಾಣಕಾವ್ಯವಾದುದರಿಂದ ಕವಿಗೆ ಸ್ವಾತಂತ್ರ್ಯ ಕಡಿಮೆ. ಭವಾವಳಿಯೊಡನೆ ಹೆಣೆದುಕೊಂಡಿರುವ ಉಪಕತೆಗಳು ಹಿಂದಿನ ಸಂಸ್ಕೃತ ಪ್ರಾಕೃತ ಕಾವ್ಯಗಳಲ್ಲಿ ಹಲವಾರಿದ್ದರೂ ಅವನ್ನೆಲ್ಲ ಇಲ್ಲಿ ತರದೆ ನೇಮಿಚಂದ್ರನು ಮೊಟುಕುಮಾಡಿದ್ದಾನೆ. ಇದು ಲೀಲಾವತಿಗಿಂತಲೂ ಉತ್ತಮವಾದ ಕಾವ್ಯವೆಂಬುದರಲ್ಲಿ ಸಂಶಯವಿಲ್ಲ. ಅನೇಕ ಪ್ರಸಂಗಗಳೂ ವರ್ಣನೆಗಳೂ ಈ ಕಾವ್ಯದಲ್ಲಿ ಸುಂದರವಾಗಿ ಮೂಡಿಬಂದಿವೆ. ಸಮುದ್ರವಿಜಯನು ತನ್ನ ತಮ್ಮನಾದ ವಸುದೇವನನ್ನು ಬರಮಾಡಿಕೊಂಡು ಹೊರಗೆ ಓಡಾಡಿ ಅಯಾಸಮಾಡಿಕೊಳ್ಳದೆ ಅರಮನೆಯೊಳಗೇ ಇರಬಾರದೇ ಎಂದು ಕೇಳುವ ರೀತಿಯಿದು:

ಇದೇಕೆ ಮುಖಚಂದ್ರನೀ ಪಗಲ ಚಂದ್ರನೊಂದಂದಮಾ
ಯ್ತು? ಇದೇಕಧರಪಲ್ಲವಂ ವಿಧುರಪಲ್ಲವಚ್ಛಾಯಮಾ
ಯ್ತು? ಇದೇಕನುಜ, ನಿನ್ನ ಮೆಯ್ ಪೊಸೆದ ಪೂವಿನಂತಾದುದು? ಆ
ನಿದಂ ಬಗೆದೆನಾಡುವೊ ಬಿಸಿಲೊಳೀಗಳಜ್ಜೇಕ್ಷಣಾ? (ನೇಮಿ.ಪು. ೫–೩)

(ಇದೇಕೆ ಚಂದ್ರನಂತಿರುವ ನಿನ್ನ ಮುಖವು ಹಗಲು ಹೊತ್ತಿನ ಚಂದ್ರನಂತಾಯಿತು? ನಿನ್ನ ಚಿಗುರಿನಂತಹ ತುಟಿಗಳು ಗಿಡದಿಂದ ಉದುರಿದ ಚಿಗುರಿನಂತಿವೆ? ನಿನ್ನ ದೇಹವೇಕೆ ಹೊಸೆದು ಹಾಕಿದ ಹೂವಿನಂತಾಗಿದೆ? ಬಿಸಿಲಲ್ಲಿ ನೀನು ಓಡಿಯಾಡುತ್ತೀಯೇನು?).

ಇಂತು ತೊಟಲ್ಲಲ್ಲದೆ ನಿನ
ಗೆಂತಿರದೇ ನಮ್ಮ ನೀರೊಳಂ ನೆರಲೊಳಂ ಒ
ಲ್ದಂತೆವೊಲ್ ಉಟ್ಟುಂ ತೊಟ್ಟುಂ
ಸಂತಸದಿಂ ಪೂವಿನಂತೆ ಸುಖಮಿರಲಾಗಾ? (ನೇಮಿ.ಪು. ೫–೪)

(ಹೀಗೆ ಓಡಾಡದೆ ನಮ್ಮ ಆಶ್ರಯದಲ್ಲಿ ನಿನಗಿಷ್ಟ ಬಂದ ಹಾಗೆ ಉಟ್ಟು ತೊಟ್ಟು ಹೂವಿನಂತೆ ಸುಖವಾಗಿರಬಾರದೇ?)

ವಾಮನನು ಬಲಿಯಿಂದ ಮೂರು ಪಾದ ಭೂಮಿಯನ್ನು ಬೇಡಿ ತ್ರಿವಿಕ್ರಮಾವತಾರವನ್ನು ತಾಳುವುದನ್ನು ಕವಿಯು ಸುಂದರವಾಗಿ ವರ್ಣಿಸಿದ್ದಾನೆ. ನೋಡಿ:

ವಟು ಮರದುದ್ದವಾದನ್, ಅಲ್ಲದೊಡಿತ್ತಲೆಯುದ್ಧವಾದನ್, ಅ
ಕ್ಕಟ ಮದಿಲುದ್ಧವಾದನ್, ಇವನಾವನೊ ಪೆರ್ಮರುದುದ್ದವಾದನ್, ಇಂ
ತುಟು ಗಿರಿಯದ್ಧವಾದನ್, ಇದು ವಿಸ್ಮಯಮಾ ಮುಗಿಲುದ್ಧವಾದನೋಪೋ
ಆಟಮಟಗಂ ದಿಟಕ್ಕೆನೆ ಕರಂ ಬಳೆದಂ ಮನದಂತೆ ವಾಮನಂ (ನೇಮಿ.ಪು. ೬–೨೪)

(ವಟುವು ಮರದುದ್ದವಾದ, ಅದರ ಎರಡರಷ್ಟು ಉದ್ದ ಬೆಳೆದ, ಪೌಳಿಗೋಡೆಯಷ್ಟು ಉದ್ದವಾದ, ದೊಡ್ಡ ಮರದೆತ್ತರ ಬೆಳೆದ, ಬೆಟ್ಟದಷ್ಟು ಎತ್ತರವಾದ, ಆಶ್ಚರ್ಯಕರವಾಗಿ ಆಕಾಶದವರೆಗೂ ಬೆಳೆದ–ಈ ಮೋಸಗಾರನು ಮನಸ್ಸಿನಂತೆ ಬೆಳೆದುಬಿಟ್ಟ!) 'ಬಳೆದಂ ಮನದಂತೆ ವಾಮನಂ' ಎಂಬುದು ಅವನು ಎಷ್ಟು ಬೇಗ ಬೆಳೆದನೆಂಬುದನ್ನೂ ಅದರ ಕೊನೆಯಿಲ್ಲದ ಅಗಾಧತೆಯನ್ನೂ ತುಂಬ ಸುಂದರವಾಗಿ ಹೇಳುತ್ತದೆ. ಹಾಗೆ ಬೆಳೆದ ವಾಮನನು

ಮರನಂ ಮುಟ್ಟದನಿಲ್ಲ, ಮೇಘ ಘಟೆಯೊಳ್ ಕಾಲ್ಗೋದನಿಲ್ಲಿಲ್ಲ. ಭೂ
ಧರಮಂ ದಾಂಟದನಿಲ್ಲ, ಬಾಂದೊಜೆಯೊಳಿಟ್ಟಂ ಕಾಲನಿಲ್ಲಿಲ್ಲ, ಭಾ
ಸ್ಕರನಂ ಮಾಯದ ಮಾಣಿ ಸೆಂಡೊಡೆದನಾ ಇಲ್ಲ ಎಂಬಿನಂ ನೀಡಿದಂ
ತರದಿಂ ಪಾದಮನುರ್ವಿ ಕೊರ್ವಿ ಬಲಿಯಂ ಗೆಲ್ವಾ ಮನಂ ವಾಮನಂ

(ನೇಮಿ.ಪು. ೬–೨೫)

(ಬಲಿಯನ್ನು ಗೆಲ್ಲುವ ಮನಸ್ಸಿನಿಂದ ಬಂದಿರುವ ವಾಮನನು ಹಾಗೆ ಬೆಳೆದು ಮರವನ್ನು ಮುಟ್ಟದೆ, ಮೊಡಗಳಲ್ಲಿ ಕಾಲನ್ನೂರದೆ, ಪರ್ವತವನ್ನು ದಾಟದೆ, ಆಕಾಶದಲ್ಲಿ ಕಾಲಿಡದೆ, ಸೂರ್ಯನನ್ನು ಚೆಂಡಿನಂತೆ ಒದೆಯದೆ ಆದರೂ ತಾನೇ ತಾನಾಗಿ ಬೆಳೆದ.)

ಕಂಸಮರ್ದನಕ್ಕಾಗಿ ಬರುವ ಶ್ರೀಕೃಷ್ಣನ ಮೇಲೆ ಒಂದು ಮದಿಸಿದ ಆನೆಯು ಒಂದು ಎರಗಿತು. ಆ ಆನೆಯ ವರ್ಣನೆಯಿದು:

ಮುಗಿಲಂ ಮುಟ್ಟಿದ ಕಾಳಕಾಯಬಲದಿಂದರ್ಕಂಗೆ ಕೋಡಿಟ್ಟ ಕೋ
ಡುಗಳಿಂ, ಬೆಟ್ಟದ ಬೀಟಲಂತಲೆವ ಕೆಯ್ಯಿಂ, ಪೃಥ್ವಿಪಾತಾಳಮಂ
ಪುಗೆ ಗಾತ್ರಾಪರಮಿಟ್ಟು ಮೆಟ್ಟುವಳವಿಂ, ಸಪ್ತಾರ್ಚಿಯಂ ಸೂಸುವ
ರ್ಚಿಗಳಿಂದೇಂ ಕೆದಱುತ್ತೆ ಬಂದುದೊ ಮದಸ್ತಂಬೇರಮಂ ಬೀರಮಂ (ನೇಮಿ.ಪು. ೮–೮೧)

(ತನ್ನ ಕಪ್ಪುದೇಹವು ಆಕಾಶದೆತ್ತರಕ್ಕೆ ಇರಲು, ದಂತಗಳು ಸೂರ್ಯನಿಗೆ ಕೊಂಬು ಗಳನ್ನಿಟ್ಟಂತೆ ಕಾಣುತ್ತಿರಲು, ಕೈಗಳು ಬಿಟ್ಟಕ್ಕೆ ಬಿಳಲುಗಳಿವೆಯೋ ಎಂಬಂತೆ ತೋರುತ್ತಿರಲು, ಅದರ ಭಾರಕ್ಕೆ ಭೂಮಿಯೇ ಪಾತಾಳಕ್ಕಿಳಿಯುವುದೆನೋ ಎನ್ನುವ ಭ್ರಮೆಯನ್ನುಂಟುಮಾಡುತ್ತ ಕೋಪದ ಬೆಂಕಿಯನ್ನು ಕಣ್ಣುಗಳಿಂದಲೇ ಸೂಸುತ್ತ ಮದ್ದಾನೆಯು ಬಂದಿತು.)

ಒಟ್ಟಾರೆ ನೇಮಿಚಂದ್ರನು ತನ್ನೆರಡು ಕಾವ್ಯಗಳಲ್ಲಿ ಎರಡು ವಿಭಿನ್ನ ವಸ್ತುಗಳನ್ನು ಪ್ರೌಢವಾಗಿ ನಿರೂಪಿಸಿದ್ದಾನೆ. 'ಲೀಲಾವತಿ'ಯಲ್ಲಿ ಅತಿರೇಕದ ಶೃಂಗಾರವಿದ್ದರೆ. 'ನೇಮಿನಾಥ ಪುರಾಣ'ದಲ್ಲಿ ಅವನು ಸಂಯಮದಿಂದ ರಚನೆ ಮಾಡಿದ್ದಾನೆ. 'ಲೀಲಾವತಿ'ಯಲ್ಲಿ ಕೃತಕತೆ ಹೆಚ್ಚಾಗಿದೆ. 'ನೇಮಿನಾಥ ಪುರಾಣ'ದಲ್ಲಿ ಸಾಂಪ್ರದಾಯಿಕತೆ ಜಾಸ್ತಿಯಿದೆ, ಅಲ್ಲಿ ಕವಿಗೆ ಸ್ವಾತಂತ್ರ್ಯ ಕಡಿಮೆ, ಪ್ರತಿಭಾವಂತ ಕವಿಯಾದರೆ ಎಂತಹ ವಸ್ತುವಿನಲ್ಲಿಯೂ ತನ್ನ ಶ್ರೇಷ್ಠತೆಯನ್ನೂ ತೋರಿಸಿ ಕೊಳ್ಳುತ್ತಾನೆ. ಆದರೆ ನೇಮಿಚಂದ್ರನು ಎರಡನೆಯ ದರ್ಜೆಯ ಕವಿಯಾದುದರಿಂದ ಅವನ ಕಾವ್ಯದಲ್ಲಿ

ಅಲ್ಲಲ್ಲಿ ಪ್ರತಿಭೆಯ ಮಿಂಚು ಕಾಣಿಸುವುದೇ ಹೊರತು ಸದಾ ಹೊಳೆಯುವ ಸೂರ್ಯ ಪ್ರಕಾಶವಲ್ಲ.

ಜನ್ನ

ಜನ್ನನು ಕನ್ನಡ ಚಂಪೂ ಕವಿಗಳಲ್ಲಿ ಮುಖ್ಯರಾದವರಲ್ಲಿ ಒಬ್ಬನು. ಇವನು 'ಯಶೋಧರ ಚರಿತೆ' ಎಂಬ ಕವ್ಯವನ್ನು ಕ್ರಿ.ಶ. ೧೨೦೯ರಲ್ಲಿಯೂ 'ಅನಂತನಾಥ ಪುರಾಣ'ವನ್ನು ಕ್ರಿ.ಶ. ೧೨೩೦ರಲ್ಲಿಯೂ ಬರೆದನು. ಇವನು ಹುಟ್ಟಿದ ಹಾಗೂ ಸತ್ತ ತೇದಿಯು ನಮಗೆ ತಿಳಿದಿಲ್ಲವಾದರೂ ಈ ಗ್ರಂಥಗಳನ್ನು ಬರೆದ ಇಸವಿಗಳಿಂದ ಇವನ ಕಾಲವು ಹನ್ನೆರಡನೆಯ ಶತಮಾನದ ಕೊನೆಯ ಭಾಗ ಮತ್ತು ಹದಿಮೂರನೆಯ ಶತಮಾನದ ಮೊದಲ ಭಾಗವೆಂದು ಹೇಳಬಹುದು. ಇವನು ಪಂಡಿತರ-ಕವಿಗಳ ವಂಶದಲ್ಲಿ ಹುಟ್ಟಿದವನು. ಸುಮನೋಬಾಣನೆಂಬ ಬಿರುದಿನ ಶಂಕರ ಇವನ ತಂದೆ, ತಾಯಿ ಗಂಗಾದೇವಿ. ಶಂಕರನು ಹೊಯ್ಸಳ ನಾರಸಿಂಹ(ಕ್ರಿ.ಶ. ೧೧೪೧-೭೩)ನಲ್ಲಿ ಕಟಕೋಪಾಧ್ಯಾಯ (ರಾಜಗುರು) ನಾಗಿದ್ದವನು. ಜನ್ನನ ಹೆಂಡತಿ ಲಕುಮಾ ದೇವಿಯೆಂಬುವಳು. 'ಸೂಕ್ತಿಸುಧಾರ್ಣವ'ವೆಂಬ ಸಂಕಲನ ಗ್ರಂಥವನ್ನು ರಚಿಸಿದ ಮಲ್ಲಿಕಾರ್ಜುನನು ಜನ್ನನ ಭಾವ, ಕೇಶಿರಾಜ ಈ ಮಲ್ಲಿಕಾರ್ಜುನನ ಮಗ. ಹೀಗೆ ಇವರ ವಂಶ ವಿದ್ವಾಂಸರ-ಕವಿಗಳ ನೆಲೆಯಾಗಿತ್ತು. ಅಲ್ಲದೆ ಇವನ ತಂದೆಯೂ ಸೇರಿ ಹಲವರು ರಾಜಾಶ್ರಯದಲ್ಲಿದ್ದುದರಿಂದ ಜನ್ನನಿಗೆ ರಾಜನ ಕೃಪೆ ಬೇಗೆ ದೊರೆಯಿತು. ಆದ್ದರಿಂದ ಹೊಯ್ಸಳ ವೀರಬಲ್ಲಾಳನಲ್ಲಿ ಜನ್ನನು ಆಸ್ಥಾನಕವಿಯಾದನು: ಆ ರಾಜನ ಮಗ ವೀರನರಸಿಂಹನಲ್ಲಿ ಆಸ್ಥಾನಕವಿಯಾಗುವುದರ ಜೊತೆಗೆ ಮಂತ್ರಿಯೂ ದಂಡಾಧೀಶನೂ ಆಗಿದ್ದನು. ಜನ್ನನೇ ಒಂದೆಡೆ:

ನರಸಿಂಹನ ಚೋಳಕುಳೋ
ದ್ಧರಣನ ಸರ್ವಜ್ಞಭೂಪನೋಲಗದೊಳ್ ನಿಂ
ದಿರೆ ದಂಡಾಧೀಶಂ ಕು
ಳ್ಳಿರೆ ಮಂತ್ರಿ ತೊಡಂಕೆ ಕವಿ ಜನಾರ್ದನದೇವಂ (ಅನಂ.ಪು. ೧-೫೭)

(ಸರ್ವಜ್ಞನಾಗಿದ್ದ ನರಸಿಂಹನ ಓಲಗದಲ್ಲಿ ಜನ್ನನು ನಿಂತಾಗ ದಂಡಾಧೀಶ, ಕುಳಿತರೆ ಮಂತ್ರಿ, ಬರೆಯಲು ತೊಡಗಿದರೆ ಕವಿಯಾಗಿದ್ದನು) ಎಂದು ಹೇಳಿಕೊಂಡಿದ್ದಾನೆ. ವೀರಬಲ್ಲಾಳನು ಜನ್ನನಿಗೆ 'ಕವಿಚಕ್ರವರ್ತಿ'ಯೆಂಬ ಬಿರುದನ್ನು ಕೊಟ್ಟ, ಅಲ್ಲದೆ. ತನ್ನನ್ನು ತಾನೇ ಜನ್ನನು ಸಾಹಿತ್ಯ ರತ್ನಾಕರ, ಕವಿಕಲ್ಪಲತಾ ಮಂದಾರ, ರಾಜವಿದ್ವತ್ ಸಭಾಕಳಹಂಸ, ಕವಿಭಾಳ ಲೋಚನ ಇತ್ಯಾದಿ ಹೆಸರುಗಳಿಂದ ಕರೆದುಕೊಂಡಿದ್ದಾನೆ.

ಜನ್ನನು ವೀರಬಲ್ಲಾಳನ ಕಾಲದಲ್ಲಿ ಕೆಲವು ಶಾಸನಗಳಿಗಾಗಿ ಕವಿತೆಯನ್ನು ರಚಿಸಿದ್ದನು. ಇವನಿಗೆ ದೈವಭಕ್ತಿಯು ಅಧಿಕವಾಗಿದ್ದುದರಿಂದ 'ಅನಂತನಾಥ ಪುರಾಣ'ವನ್ನು ಬರೆದು ಕಾವ್ಯಕಾಣಿಕೆಯನ್ನು ಸಮರ್ಪಿಸಿದ್ದಲ್ಲದೆ, ಕಿಲಕಿಲ ದುರ್ಗದಲ್ಲಿ ಅನಂತನಾಥ ಬಸದಿಯೊಂದನ್ನು ಕಟ್ಟಿಸಿ ಹಳೇಬೀಡಿನಲ್ಲಿ ವಿಜಯ ಪಾರ್ಶ್ವಜಿನೇಶ್ವರ ಬಸದಿಯ ದ್ವಾರವನ್ನು ಮಾಡಿಸಿ ತನ್ನ ಭಕ್ತಿಯನ್ನು ತೋರ್ಪಡಿಸಿದ್ದಾನೆ. 'ಜಗದೊಳ್

ತಾನಿತ್ತ ಕಯ್ಯಲ್ಲದೆ ಒಡ್ಡಿದ ಕಯ್ಯಲ್ಲದ ಪೆಂಪು' ಎಂದು ತನ್ನ ಬಗ್ಗೆ ಹೇಳಿಕೊಂಡಿರುವುದರಿಂದ ಜನ್ನನು ಉದಾರವಾಗಿ ದಾನ ಧರ್ಮಾದಿಗಳನ್ನು ಮಾಡಿದಂತೆ ತೋರುತ್ತದೆ.

ಯಶೋಧರ ಚರಿತೆ

ಈ ಕಾವ್ಯವು ಅನೇಕ ಅಂಶಗಳಿಂದ ವಿಶಿಷ್ಟವಾಗಿರುವುಂಥದು. ಇದು ನಿಷ್ಕೃಷ್ಟವಾದ ಅರ್ಥದಲ್ಲಿ ಚಂಪೂ ಕಾವ್ಯವೇ ಅಲ್ಲ; ಏಕೆಂದರೆ ಇದರಲ್ಲಿ ಗದ್ಯವೇ ಇಲ್ಲ, ಅಲ್ಲದೆ ಹತ್ತೇ ಹತ್ತು ವೃತ್ತಗಳನ್ನು ಬಿಟ್ಟರೆ ಸಂಪೂರ್ಣವಾಗಿ ಕಂದಗಳಲ್ಲಿ ರಚಿತವಾಗಿರುವ ಕಾವ್ಯವಿದು. ಒಟ್ಟು ೩೧೧ ಪದ್ಯಗಳು ಮಾತ್ರ ಇದರಲ್ಲಿವೆ, ಇದು ನಾಲ್ಕು ಅವತಾರಗಳಲ್ಲಿ ವಿಭಾಗಗೊಂಡಿದೆ. ಈ ಕಾವ್ಯವು ಸಂಸ್ಕೃತದಲ್ಲಿ ವಾದಿರಾಜನು ಬರೆದ 'ಯಶೋಧರ ಚರಿತ'ದ ಸುಮಾರು ಅನುವಾದವಾಗಿದೆ. ವಾದಿರಾಜನು ೩೦೦ ಪದ್ಯಗಳಲ್ಲಿ ಹೇಳಿರುವುದನ್ನು ಜನ್ನನು ೨೫೦ ಪದ್ಯಗಳಲ್ಲಿ ಹೇಳಿದ್ದಾನೆ. ತುಂಬ ಸರಳವಾಗಿಯೂ ಮನೋಹರವಾಗಿಯೂ ರಚಿತವಾಗಿರುವ ಈ ಕಾವ್ಯವು ಅತ್ಯಂತ ಸಹಜವಾಗಿದೆ. ಅನುವಾದವೆಂದು ಕರೆಯುವಂತೆಯೇ ಇಲ್ಲ. ಜನ್ನನು ಅಲ್ಲಲ್ಲಿ ತನ್ನ ಸ್ವಂತಿಕೆಯನ್ನೂ ತೋರ್ಪಡಿಸಿಕೊಂಡಿದ್ದಾನೆ. ಜೀವದಯಾಷ್ಟಮಿಯೆಂಬ ಅಹಿಂಸಾವ್ರತ ವನ್ನು ಆಚರಿಸಿದ ಜೈನರು ಪಾರಣೆಯ ದಿನದಂದು ಕೇಳುವುದಕ್ಕಾಗಿ ಈ ಕಾವ್ಯವನ್ನು ಬರೆದಂತೆ ಕವಿಯು ಹೇಳಿಕೊಂಡಿದ್ದಾನೆ. ಆ ವ್ರತಕ್ಕನುಗುಣವಾಗಿ 'ಯಶೋಧರ ಚರಿತೆ'ಯು ಅಹಿಂಸೆಯ ಶ್ರೇಷ್ಠತೆಯನ್ನು ಸಾರುವ ಉದ್ದೇಶವನ್ನು ಪಡೆದಿದೆ.

ಅಯೋಧ್ಯಾದೇಶಕ್ಕೆ ರಾಜಪುರವೆಂಬುದು ರಾಜಧಾನಿ, ಅದನ್ನಾಳುವ ರಾಜ ಮಾರಿದತ್ತ. ಆ ಊರಿನ ದೇವತೆ ಚಂಡಮಾರಿ, ಅವಳಿಗೆ ಪ್ರತಿ ಚೈತ್ರ ಮತ್ತು ಆಶ್ವಯು ಜಮಾಸಗಳಲ್ಲಿ ಜಾತ್ರೆ ನಡೆಯುವುದು ವಾಡಿಕೆ. ಆಗ ನರಬಲಿ, ಪಶುಬಲಿಗಳನ್ನು ಯಥೇಚ್ಛವಾಗಿ ಕೊಡಬೇಕು, ಇಲ್ಲದಿದ್ದರೆ ದೇವತೆಯು ಮುನಿಯುವಳೆಂದು ಅಲ್ಲಿನ ಜನರ ನಂಬಿಕೆ, ಅಂತಹ ಒಂದು ಚೈತ್ರಮಾಸದ ಜಾತ್ರೆಯ ಸಮಯ, ಅಲ್ಲಿ ನಡೆಯುವ ಬಲಿಗೆ ಅನುಗುಣವಾಗಿ ವಸಂತವೂ ಕಾಣಿಸುತ್ತಿತ್ತು. ಶಿಶಿರವನ್ನೇ ಹಿಡಿದು ವಸಂತನು ಸಣ್ಣಸಣ್ಣ ಚೂರುಗಳಾಗಿ ಕತ್ತರಿಸಿದಂತೆ ಮುತ್ತುಗದ ಹೂಗಳು ಉದುರಿದ್ದುವಂತೆ; ತಂಗಾಳಿಯು ದಂಡ ನಮಸ್ಕಾರ ಮಾಡುತ್ತಾ ಕಮಲವನವೆಂಬ ಕೆಂಡದ ಕೊಂಡದಲ್ಲಿ ಬರುತ್ತಿದೆಯೆಂಬುದನ್ನು ಸಾರಿ ಹೇಳುವಂತೆ ದುಂಬಿಯ ಝೇಂಕಾರವಿದ್ದಿತಂತೆ. ಸಂಪ್ರದಾಯದಂತೆ ನರಬಲಿಯೀಯಲು ಶುಭಲಕ್ಷಣಗಳುಳ್ಳ ಚಿಕ್ಕ ವಯಸ್ಸಿನ ಸತ್ಕುಲದಲ್ಲಿ ಹುಟ್ಟಿದ ಇಬ್ಬರನ್ನು ಕರೆತರಲು ಮಾರಿದತ್ತ ರಾಜನು ಚಂಡಕರ್ಮನೆಂಬ ತಳವಾರನನ್ನು ಕಳುಹಿಸುತ್ತಾನೆ. ಇತ್ತ ಸುದತ್ತಾಚಾರ್ಯರೆಂಬ ಜೈನ ಮುನಿಗಳು ಚರಿಗೆಗೆಂದು ಶಿಷ್ಯರಾದ ಅಭಯರುಚಿ–ಅಭಯಮತಿಯರೆಂಬ ಚಿಕ್ಕವಯಸ್ಸಿನ ಅಣ್ಣತಂಗಿಯರನ್ನು ಕಳುಹಿಸಿರುತ್ತಾರೆ. ಅವರನ್ನು ಚಂಡ ಕರ್ಮನು ಹಿಡಿದು ಮಾರಿಯ ಗುಡಿಯೆಡೆಗೆ ಕರೆತರುತ್ತಾನೆ. ಅಲ್ಲಿಯ ಭಯಂಕರವಾದ ವಾತಾವರಣವೆಂತಹುದು ನೋಡಿ:

ತಳಮನುಡಿದಿಡುವ, ಕಣ್ಣಂ
ಕಳೆದೇಱಿಪ, ಕರುಳತೋರಣಂಗಟ್ಟುವ, ಕಾ
ಲ್ಗಳನುರಿಪಿ ನೆತ್ತರಾ ಕೂ
ಟ್ಗಳನಡುತಿಹ ವೀರರೆತ್ತ ನೋೞ್ಪೊಡಮದರೊಳ್ (ಯ.ಚ. ೧-೨೭)

(ಕೈ ಕಾಲುಗಳನ್ನು ಕತ್ತರಿಸಿ, ಕಣ್ಣುಗಳನ್ನು ಕಿತ್ತು ನೇತುಹಾಕಿ, ಕರುಳಗಳಿಂದಲೇ ತೋರಣವನ್ನು ಕಟ್ಟಿ, ಕಾಲುಗಳನ್ನೇ ಉರಿಸಿ ರಕ್ತದಿಂದ ಅಡಿಗೆ ಮಾಡುವ ವೀರರು ಅಲ್ಲಿ ತುಂಬಿದ್ದರು.) ಅಲ್ಲಿ ಮಾರಿದತ್ತನು ನಿಂತಿದ್ದುದು ಆ ಮಕ್ಕಳಿಗೆ ಕಾಣಿಸಿದ ರೀತಿಯಿದು:

ಭೈರವನ ಜವನ ಮಾರಿಯ
ಮೂರಿಯವೊಲ್ ನಿಂದ ಮಾರಿದತ್ತಂ ಲಲಿತಾ
ಕಾರರ ಧೀರರ ಬಂದ ಕು
ಮಾರರ ರೂಪಿಂಗೆ ಕಕ್ಕುಗೊಂಡಂತಿರ್ದಂ (ಯ.ಚ. ೧-೨೭)

(ಭೈರವ ಯಮ ಮಾರಿ ಇವರಿಗೆ ಕೋಣದಂತಿದ್ದ ಮಾರಿದತ್ತನು ಧೈರ್ಯದಿಂದ ಕೂಡಿದ ಈ ಮಕ್ಕಳ ರೂಪವನ್ನು ಕಂಡು ಆಶ್ಚರ್ಯಪಟ್ಟ.) ಬಲಿ ಕೊಡುವ ಮುಂಚೆ ರಾಜನನ್ನು ಹರಸಿ ಎಂದು ಜನರು ಈ ಮಕ್ಕಳನ್ನು ಕೇಳಿದಾಗ ಅವರು 'ನೃಪವರ ನಿರ್ಮಲ ಧರ್ಮದಿಂದೆ ಪಾಲಿಸು ಧರೆಯಂ' ಎಂದು ಹರಸುತ್ತಾರೆ. ಇದನ್ನು ಕೇಳಿ ಎಲ್ಲರಿಗೂ ಆಶ್ಚರ್ಯ. ಈ ಮಕ್ಕಳ ವಯಸ್ಸು ಕಿರಿದು, ಆದರೆ ಅವರ ಧೈರ್ಯವೋ ಬೆಟ್ಟದಷ್ಟು, ಅಲ್ಲದೆ ಎಂತಹ ಶುದ್ಧ ಹೃದಯದಿಂದ ಹರಸಿದರು. ರಾಜನಿಗಂತೂ ಹೇಳಲು ಬಾರದ ಒಂದು ಬಗೆಯ ಆತ್ಮೀಯತೆ ಅವರ ಮೇಲೆ, ಜೊತೆಗೆ ಕುತೂಹಲ. 'ನೀವಾರು? ಈ ಚಿಕ್ಕವಯಸ್ಸಿಗೇ ನೀವೇಕೆ ದೀಕ್ಷೆ ವಹಿಸಿದ್ದೀರಿ?' ಎಂದು ಕೇಳಿದರೆ ಅಭಯ ರುಚಿಯು ಕೊಡುವ ಉತ್ತರವೇನು ಕೇಳಿ:

ಗುಣಿಗಳ ಗುಣರತ್ನ ವಿಭೂ
ಷಣಮೆಸೆವುದೆ ವಿಕಳಹೃದಯರಾದವರ್ಗೆ, ನೃಪಾ
ಗ್ರಣಿ? ಪೇೞ್ ತುಪ್ಪೇಱಿದ ದ
ರ್ಪಣದೊಳ್ ಪಜ್ಜಳಿಸಲಾರ್ಪುದೆ ಪ್ರತಿಬಿಂಬಂ (ಯ.ಚ. ೧-೩೯)

(ಕೊಳೆತುಂಬಿದ ಹೃದಯವಿರುವವರಿಗೆ ಒಳ್ಳೆಯವರ ಗುಣಗಳು ಸರಿಬರುವುದಿಲ್ಲ. ಜಿಡ್ಡು ತುಂಬಿದ ಕನ್ನಡಿಯಲ್ಲಿ ಪ್ರತಿಬಿಂಬವು ಸರಿಯಾಗಿ ಕಾಣಿಸುತ್ತದೆಯೇ?) ತನ್ನನ್ನವರು ವಿಕಳಹೃದಯನೆಂದು ಕರೆದರೂ ಮಾರಿದತ್ತನಿಗೆ ಆ ಮಕ್ಕಳ ಬಗ್ಗೆ ವಾತ್ಸಲ್ಯ, ಭಕ್ತಿ. ಕೈಮುಗಿದು ಬೇಡಿಕೊಳ್ಳುತ್ತಾನೆ. ನಿಮ್ಮ ವಿಷಯವನ್ನು ಹೇಳಿ ಎಂದು. ಈಗ ದಯೆಯಲ್ಲಿ ನೆಲಸಿದ ರಾಜನ ಮನಸ್ಸಿಗೆ ತಮ್ಮ ಚರಿತ್ರೆಯು ತಾಕಬಹುದೆಂದು ಬಗೆದು ಅಭಯರುಚಿಯು ತಮ್ಮ ಕತೆಯನ್ನು ಹೇಳಲು ತೊಡಗುತ್ತಾನೆ.

ಉಜ್ಜಯಿನಿ ದೇಶದ ಅರಸು ಯಶೌಘ, ಅವನ ರಾಣಿ ಚಂದ್ರಮತಿ. ಅವರಿಗೆ ಯಶೋಧರನೆಂಬ ಒಬ್ಬನೇ ಮಗ. ಅವನಿಗೆ ಅಮೃತಮತಿಯೆಂಬ ರಾಜಕುಮಾರಿ

ಯೊಡನೆ ಮದುವೆಯಾಯಿತು. ಅವರಿಬ್ಬರದೂ ಅನ್ಯೋನ್ಯ ದಾಂಪತ್ಯ. ಅಮೃತಮತಿಯನ್ನೇ ದೀವವಾಗಿ ಮಾಡಿ ಮನ್ಮಥನೆಂಬ ಬೇಡನು ಯಶೋಧರನನ್ನು ಬೇಟೆಯಾಡುತ್ತಿದ್ದನಂತೆ. ಹೀಗಿರಲು ಯಶೌಘನು ಮಗನಿಗೆ ಜವಾಬ್ದಾರಿಯನ್ನು ವಹಿಸಿ ಸನ್ಯಾಸದೀಕ್ಷೆಯನ್ನು ವಹಿಸುತ್ತಾನೆ. ಯಶೋಧರನ ಹೆಗಲ ಮೇಲೆ ಭಾರ ಬಿದ್ದರೂ ದೊರೆತ ವೇಳೆಯನ್ನೆಲ್ಲ ಪ್ರಿಯೆಯೊಡನೆಯೇ ಕಳೆಯುತ್ತಿದ್ದ.

ಒಂದು ರಾತ್ರಿ ಈ ಇಬ್ಬರು ಅರಮನೆಯ ಮಹಡಿಯ ಮೇಲೆ ಮಲಗಿದ್ದಾರೆ. ನಡುರಾತ್ರಿಯ ಸಮಯ. ಇಬ್ಬರಿಗೂ ನಿದ್ರೆ ಹತ್ತಿದೆ. ಎಲ್ಲೆಲ್ಲೂ ನಿಶ್ಶಬ್ದ. ಆಗ ಪಟ್ಟದಾನೆಯ ಮಾವಟಿಗನು

ಬಿನದಕೆ ಪಾಡುತ್ತಿರೆ ನುಣ್
ದನಿ ನಿದ್ರೆಗೆ ಕತಕಬೀಜಮಾಯ್ತೆನೆ ಮೃಗಲೋ
ಚನೆ ತಿಳಿದಾಲಿಸಿ ಮುಟ್ಟಿದ
ಮನಮಂ ತೊಟ್ಟನೆ ಪಸಾಯದಾನಂಗೊಟ್ಟಳ್ (ಯ.ಚ. ೨–೧೩)

(ತನ್ನ ಸಂತೋಷಕ್ಕೆ ಹಾಡಿಕೊಳ್ಳುತ್ತಿದ್ದ. ಆ ಇಂಪಾದ ದನಿಯು ಅವಳ ನಿದ್ರೆಯನ್ನು ತಿಳಿಮಾಡಿತು, ಆ ಮೋಹಕ ಧ್ವನಿಯು ಅವಳ ಮನಸ್ಸನ್ನು ತಾಕಿತು. ಆ ಮನಸ್ಸನ್ನು ಹಾಡುಗಾರನಿಗೆ ತೆತ್ತುಬಿಟ್ಟಳು.) ಯಶೋಧರನಂತಹ ರೂಪು ಯೌವನ ಬಲ ಅಧಿಕಾರ ಮೃದಹೃದಯಗಳಿಂದ ಕೂಡಿದ ವ್ಯಕ್ತಿಯ ಹೆಂಡತಿಯಾದ ಅಮೃತಮತಿಗೆ ಈ ಹಾಡುಗಾರನನ್ನು ನೋಡುವ ಕೂಡುವ ಬಯಕೆಯುಂಟಾಯಿತಂತೆ. ಮಾರನೆಯ ದಿನ ತನ್ನ ದಾಸಿಯೊಬ್ಬಳಿಗೆ ಲಂಚವಿತ್ತು ಹಿಂದಿನ ರಾತ್ರಿ ಹಾಡುತ್ತಿದ್ದವನಾರು ಎಂದು ತಿಳಿದು ಬರಲು ಕಳಿಸಿದಳು ಆ ದೂತಿಗೆ ಅಯ್ಯೋ ಎನಿಸಿತು. ಈ ಸುಕುಮಾರಿ ಸುಂದರಿಯಾದ ರಾಣಿ ಒಲಿದದ್ದು ಎಂತಹವನನ್ನು!

ಪಱಿದಲೆ ಕುಱಿನೊಸಲ್ ಅಱಿಗಣ್
ಒಱಿವಾಯ್ ಹಪ್ಪಳಿಕೆಮೂಗು ಮುರುಟಿದ ಕಿವಿ ಬಿ
ಬ್ಬಿಱಿವಲ್ ಕುಸಿಗೊರಲ್ ಇಱಿದೆರ್ದೆ
ಪೊಱಂಟಬೆನ್ ಬಾತಬಸಿಱ್ ಅಡಂಗಿದ ಜಘನಂ (ಯ.ಚ. ೨–೨೦)

(ಹರಕು ತಲೆ, ತಗ್ಗು ಹಣೆ, ವಿಕಾರವಾದ ಕಣ್ಣು, ಜೊಲ್ಲು ಸೋರುವ ಬಾಯಿ, ಜಜ್ಜು ಮೂಗು, ಮುದುರಿದ ಕಿವಿ, ಉಬ್ಬು ಹಲ್ಲು, ಕುಸಿದ ಕೊರಳು, ಕುಗ್ಗಿದ ಎದೆ, ಹಿಂದೆ ಉಬ್ಬಿದ ಗೂನು, ಡುಬ್ಬು ಹೊಟ್ಟೆ, ಚಿಕ್ಕ ಪಿರ್ರೆಗಳು) ಹೀಗಿದ್ದ. ಅಲ್ಲದೆ ಕಪ್ಪು ಬಣ್ಣ, ಮೆಯ್ ವಾಸನೆಯಿಂದ ಕೂಡಿದೆ ಕಾಲೋ ಸೊಂಟ ಮುರಿದ ಕತ್ತೆಯ ಕಾಲು–ಒಟ್ಟಾರೆ ಇವನು ಅಷ್ಟವಂಕ! ಆದರೇನು? 'ಪೊಲ್ಲಮೆಯೆ ಲೇಸು ನಲ್ಲರ ವೊಯ್ಯೊಳ್' (ಪ್ರಿಯರ ಹೊಲಸೂ ಪ್ರಿಯಕರ ವಾದದ್ದು) ಎಂದು ಅಮೃತಮತಿ ಅವನ ಸ್ನೇಹ ಬೆಳಸಿದಳು. ಪ್ರತಿನಿತ್ಯ ರಾತ್ರಿ ಗಂಡನಿಗೆ ತಿಳಿಯದಂತೆ ಅವನ ಜೊತೆ ಸೇರುತ್ತಿದ್ದಳು.

ಅಷ್ಟವಂಕನ ಸಹವಾಸ ಪ್ರಾರಂಭವಾದ ಮೇಲೆ ಅಮೃತಮತಿಯ ನಡವಳಿಕೆಯಲ್ಲಿ ಸೂಕ್ಷ್ಮ ವ್ಯತ್ಯಾಸಗಳಾದವು. ಹೊರಗೆ ಹಿಂದಿನಂತೆಯೇ ಅವಳು ನಡೆದುಕೊಳ್ಳು

ತ್ತಿದ್ದರೂ ಸೂಕ್ಷ್ಮ ನಿರೀಕ್ಷಣೆಯುಳ್ಳ ಯಶೋಧರನಿಗೆ ವ್ಯತ್ಯಾಸವು ಗೋಚರವಾಯಿತು. ಏನು ಕಾರಣವಿರಬಹುದೆಂಬುದನ್ನು ಪರೀಕ್ಷಿಸಲು ಅವನು ಒಮ್ಮೆ ನಿರ್ಧರಿಸಿದ. ಒಂದು ರಾತ್ರಿ ಹೆಂಡತಿಯೊಡನೆ ಮಲಗಿದಂತೆ ನಟಿಸಿದಾಗ ಅಮೃತಮತಿಯು ಅವನ ತೋಳ್ಸೆರೆಯಿಂದ ಜಾರಿ ಹೊರಟಳು. ದೋಷದ ಹಿಂದೆಯೇ ಸಾಗುವ ಶಿಕ್ಷೆಯಂತೆ ರಾಜನು ಅವಳನ್ನು ಹಿಂಬಾಲಿಸಿದ. ಅವಳು ಆ ರಾತ್ರಿ ತಡವಾಗಿ ಬಂದಳೆಂದು ಪ್ರೀತಿಯಿಂದ ತಂದಿದ್ದ ಹೂಹಣ್ಣು ತಾಂಬೂಲಗಳನ್ನೆಲ್ಲ ಈಡಾಡಿದ ಅಷ್ಟವಂಕನು

ತೋರ ಮುಡಿವಿಡಿದು ಕುಡಿಯಂ
ನಾರಂ ತದೆವಂತೆ ತದೆದು ಬೀಟೆಯ ಕಾಲಿಂ
ಬಾರೇಳೆ ಬದೆಗನೊದೆದೊಡೆ
ಕೀರೆ ಪೊರಳ್ವಂತೆ ಕಾಲಮೇಲೆ ಪೊರಳ್ದಳ್ (ಯ.ಚ. ೨-೩೨)

(ಅವಳ ತುರುಬನ್ನು ಹಿಡಿದು ರೈತನು ನಾರನ್ನು ಬಡಿಯುವ ಹಾಗೆ ಅವಳನ್ನು ಬಡಿದ. ಬಿರಿದ ಕಾಲಿನಿಂದ ಒದೆದಾಗ ಅವಳು ಕೇರೆಯ ಹಾವಿನಂತೆ ಮಿಡುಕಾಡಿದಳು.) ಎಂತಹ ಸ್ಥಿತಿಗೆ ಬಂದಿದ್ದಾಳೆ, ಮಹಾರಾಣಿ! ಅಷ್ಟವಂಕನು ಇಷ್ಟು ಮಾಡಿದರೂ ಸಹಿಸಿದ್ದಲ್ಲದೆ ತಾನೂ ತಡವಾಗಿ ಬಂದುದಕ್ಕೆ ಅವಳು ಕೊಡುವ ಕಾರಣವೆಂಥದು: ಅರಸನೆಂಬ ಪಾಪಿಯು ಬೇಗ ನಿದ್ರಿಸದೆ ಹೋದದ್ದರಿಂದ ತಡವಾಯಿತು. ತನ್ನ ಪ್ರೀತಿಯಲ್ಲಿ ಕೊರೆಯಿಲ್ಲ. ಮಿಕ್ಕ ಗಂಡಸರು ತನಗೆ ಸೋದರ ಸಮಾನರು! ಇದನ್ನೆಲ್ಲ ನೋಡುತ್ತ ಅಡಗಿ ಕೊಂಡಿದ್ದ ಯಶೋಧರನ ಸ್ಥಿತಿಯೇನಾಗಬೇಡ:

ಅಗಳ್ ಬಾಳ್ ನಿಮಿರ್ದುದು, ತೋಳ್
ತೂಗಿದುದು, ಮನಂ ಕನಲ್ದುದು ಇರ್ವರುಮನೆರಟ್
ಭಾಗಂ ಮಾಡಲ್, ಧೃತಿ ಬಂ
ದಾಗಳ್ ಮಾಣೆಂಬ ತೆಱದೆ ಪೇಸಿದನರಸಂ (ಯ.ಚ. ೨-೩೩)

(ಕತ್ತಿಯನ್ನು ಹಿಡಿದ ಅವನ ಕೈಗಳು ತೂಗಿ ಇವರನ್ನು ತರಿದುಬಿಡಲೇ ಎಂಬಷ್ಟು ಕೋಪವುಂಟಾಯಿತು. ಆದರೆ ಇವರನ್ನು ಕೊಲ್ಲುವುದೆ ಎಂದು ಹೇಸಿ ರಾಜನು ಸಮಾಧಾನ ತಂದುಕೊಂಡ.) ಸುಳಿವು ಕೊಡದೆ ರಾಜನು ಹಿಂದಿರುಗಿ ಮಲಗಿದ. ಅಮೃತಮತಿಯೂ ಹಿಂದಿನಂತಯೇ ತನ್ನ ಕೆಲಸ ಮುಗಿದ ನಂತರ ಬಂದು ಮಲಗಿದಳು. ಯಶೋಧರನಿಗೆ ಕೋಪಕ್ಕಿಂತ ಜಿಗುಪ್ಸೆ ಹೆಚ್ಚಾಯಿತು ತನ್ನ ಬಗ್ಗೆ ಪ್ರೀತಿಯನ್ನು ಬಿಟ್ಟ ರಾಣಿಯ ಮನಸ್ಸನ್ನು ಏನು ಮಾಡುವುದರಿಂದಲೂ ತಿರುಗಿಸಲು ಸಾಧ್ಯವಿಲ್ಲ ಎಂದು ತಿಳಿದು ಸುಮ್ಮನಾದ.

ಮಾರನೆಯ ದಿನ ಏನೋ ಮಾತಿಗೆ ಮಾತು ಬಂದು ಹಾಸ್ಯದಿಂದ ಯಶೋಧರನು ಅಮೃತಮತಿಯನ್ನು ನೈದಿಲ ಹೂವಿನಿಂದ ಹೊಡೆದಾಗ ಅವಳು ಮೂರ್ಚೆ ಹೋಗುತ್ತಾಳೆ! ರಾಜನು ಅಣಕದಿಂದ 'ಅಂದಿನ ಸಾವು ಅದೃಷ್ಟವಶಾತ್ ತಪ್ಪಿತು, ಇಂದು ನೈದಿಲೆ ಸಾವನ್ನು ತರುವಂತಾಯ್ತು' ಎಂದು ಚುಚ್ಚಿ ನುಡಿಯುತ್ತಾನೆ. ತನ್ನ ಗುಟ್ಟು ರಾಜನಿಗೆ ತಿಳಿದುಬಿಟ್ಟಿದೆಯೆಂದು ಅಮೃಮತಿಗೆ ಗೊತ್ತಾದರೂ ಉತ್ತರವನ್ನು ನೀಡದೆ ಸುಮ್ಮನಾಗುತ್ತಾಳೆ.

ಇತ್ತ ಮನಸ್ಸು ಕದಡಿ ಯಶೋಧರನು ತಾಯಿಯನ್ನು ಕಾಣುತ್ತಾನೆ. ಕಾಂತಿಹೀನವಾದ ಮಗನ ಮುಖವನ್ನು ಕಂಡ ಚಂದ್ರಮತಿಯು ಅವನ ದುಃಖಕ್ಕೆ ಕಾರಣವೇನೆಂದು ಕೇಳುತ್ತಾನೆ. ಒಂದು ಕೆಟ್ಟ ಕನಸನ್ನು ತಾನು ಕಂಡೆನೆಂಬ ನೆವದಿಂದ ತನ್ನ ಹೆಂಡತಿಯ ವರ್ತನೆಯನ್ನು ಮರೆಸಿಹೇಳುತ್ತಾನೆ: ಅವನು ತಾಯಿಗೆ ಕೊಡುವ ಉತ್ತರವಿದು:

ದೇವಿಯರ ಪರಕೆಯಿಂದೆನ
ಗಾವುದಱಕೊಳ್ ಕೊಱತೆಯಿಲ್ಲ, ಪೋದಿರುಳೊಳ್ ಪೊಂ
ದಾವರೆಗೊಳದಂಚೆ ಕಱ
ಲ್ದಾವರೆಗೊಳದೊಳಗೆ ನಲಿವ ಕನಸಂ ಕಂಡೆಂ (ಯ.ಚ. ೩–೭)

(ನಿಮ್ಮ ಆಶೀರ್ವಾದದಿಂದ ನನಗೆ ಯಾವ ಕೊರತೆಯೂ ಇಲ್ಲ. ನಿನ್ನೆ ರಾತ್ರಿ ನನಗೊಂದು ಕೆಟ್ಟ ಕನಸು ಬಿತ್ತು: ಹೊಂದಾವರೆಯ ಕೊಳದೊಳಗೆ ಆಡುತ್ತಿದ್ದ ಹಂಸವು ಹೀನ ಕೊಳದಲ್ಲಿ ಆಡುತ್ತಿತ್ತು.) ತನ್ನ ಹೆಂಡತಿಯ ಕೆಟ್ಟ ನಡತೆಯನ್ನು ಈ ರೀತಿ ಮರೆಸುತ್ತಿರುವೆನೆಂದು ಯಶೋಧರ ತಿಳಿದರೆ, ಇನ್ನೊಂದು ತೊಂದರೆ ಅದರಿಂದುಂಟಾಯಿತು. ಈ ಕೆಟ್ಟ ಕನಸಿನ ದೋಷ ನಿವಾರಣೆಗೆ ಬಲಿಯೊಂದನ್ನು ದೇವತೆಗೆ ಕೊಡಬೇಕೆಂದು ತಾಯಿ ಸೂಚಿಸಿದಳು. ಅಹಿಂಸಾ ಧರ್ಮವನ್ನು ಹಿಡಿದ ಯಶೋಧರನು ಇದನ್ನು ಕೇಳಿ ಕಿವಿ ಮುಚ್ಚಿಕೊಂಡ.

ಜೀವದಯೆ ಜೈನಧರ್ಮಂ
ಜೀವಹಿತಂ ನಂಬುವರ್ಗೆ ಹಿಂಸೆಯಮೋಘಂ
ಭಾವಿತಮೆ? ತಪ್ಪಿನುಡಿದಿರ್
ಕಾವರೆ ಕಣೆಗೊಳ್ವೊಡೆ ಅಬ್ಬೆ ಬಾರಿಪರೊಳರೇ? (ಯ.ಚ. ೩–೧೭)

(ಜೀವದಯೆಯೇ ಜೈನಧರ್ಮದ ಸಾರ. ಅಂತಹ ಜೀವಹಿತವನ್ನು ಬಯಸುವವರು ಹಿಂಸೆಮಾಡಲು ಆಲೋಚಿಸುವರೇ? ನೀವು ತಪ್ಪು ಮಾತಾಡಿದಿರಿ. ರಕ್ಷಿಸಬೇಕಾದವರೆ ಆಯುಧವನ್ನು ಹಿಡಿದರೆ ಕಾಪಾಡುವವರಾರು?) ಎಂದು ಹೇಳಿದ. ಆದರೆ ತಾಯಿಯದು ಒಂದೇ ಹಟ, ಕೊನೆಯ ಪಕ್ಷ ಹಿಟ್ಟಿನ ಕೋಳಿಯನ್ನಾದರೂ ಬಲಿ ಕೊಡದಿದ್ದರೆ ತಾನೇ ದೇವಿಗೆ ಬಲಿಯಾಗುವುದಾಗಿ ತಾಯಿ ಹೇಳಿದಾಗ ಯಶೋಧರನು ಅದಕ್ಕೆ ವಿಧಿಯಿಲ್ಲದೆ ಒಪ್ಪಬೇಕಾಯ್ತು.

ಅದರಂತೆಯೇ ಮಹಾನವಮಿಯ ಹಿಂದಿನ ಭೌಮಾಷ್ಟಮಿಯಲ್ಲಿ ಬಲಿಯೀಯಲು ಒಂದು ಹಿಟ್ಟಿನ ಕೋಳಿಯು ಸಿದ್ಧವಾಯಿತು. ಅದರ ಸೌಂದರ್ಯವನ್ನು ಕಂಡು ಬೆಂತರನೊಂದು ಅದನ್ನು ಹೋಗಿ ಹೊಕ್ಕಿತು. ತಾಯಿಯು ಅದನ್ನು ಬಲಿಯಾಗಿ ಕೊಡಲು ಹೇಳಲು ಯಶೋಧರನು ಅದನ್ನು ಕತ್ತರಿಸಿದ. ಅದರೆ ಕತ್ತಿಯ ಅಲಗು ಕೊರಳಮೇಲೆ ಬಿದ್ದ ತಕ್ಷಣ ಆದ ಆಶ್ಚರ್ಯವನ್ನು ಕೇಳಿ:

ತಲೆಯಿಂ ಕುಕ್ಕುಕೊ ಎಂ
ಬುಲಿ ನೆಗೆದುದು ಕೂಗಿ ಕರೆವ ದುರಿತಂಗಳ ಬ
ಲ್ಲುಲಿಯೆನೆ ಪಿಟ್ಟಿನ ಕೋಟಿಯ
ತಲೆಯಿಂ ಪಿಡಿವಂತಿರಟ್ಟೆ ಪಾಱಿದುದಿನಿಸಂ (ಯ.ಚ. ೩–೨೩)

(ಕೂಗಿ ಕರೆಯುವ ಪಾಪದ ಕೂಗಿನ ಹಾಗೆ ಆ ಕೋಳಿಯು ಕುಕ್ಕುಕೂ ಎಂದು ಕೂಗಿತು. ಹಾಗೆ ಕೂಗಿ ತಲೆಯು ಕೆಳಗುರುಳಿತು.) ತುಂಬ ಸಂಕೇತ ಪೂರ್ಣವಾದ ಪದ್ಯವಿದು. ತಾನು ತಪ್ಪುಮಾಡುತ್ತಿರುವೆನೆಂದು ತಿಳಿದೂ ಬಲಿ ಕೊಡುವ ಯಶೋಧರನಿಗೆ ಆದ ಅನುಭವ ಎಷ್ಟು ಸುಂದರವಾಗಿ ಮೂಡಿ ಬಂದಿದೆ! ರಾಜನಿಗೆ ಕೋಳಿಯ ಕೂಗು ಕೇಳಿ ದಿಗಿಲಾಗುತ್ತದೆ. ವಿಧಿಯ ವಿಲಾಸವು ಯಾವ ರೀತಿಯೆಂಬುದನ್ನು ತಿಳಿಯದೆ ಅವನು ಮನೆಗೆ ಬರುತ್ತಾನೆ. ತಾನೇಕೆ ತಾಯಿಗೆ ಸುಳ್ಳು ಹೇಳಿದೆ ಎಂದು ಪೇಚಾಡುತ್ತಾನೆ. ತಾನು ಹೇಗೆ ವಿಧಿಗೆ ಬೇಟೆಯಾದೆ ಎಂದು ಪರಿತಪಿಸುತ್ತಾನೆ:

ಅಮೃತಮತಿಯೆಂಬ ಪಾತಿಕಿ
ಯ ಮಾಯೆ ಬನವಾಯ್ತು, ಚಂದ್ರಮತಿ ಮಾತೆಯ ಮಾ
ತೆಮಗೆ ಬಲೆಯಾಯ್ತು, ಹಿಂಸನಂ
ಅಮೋಘ ಶರಮಾಯ್ತು, ಕೆಡೆದುದಾತ್ಮಕುರಂಗಂ **(ಯ.ಚ. ೩–೨೬)**

(ಹೆಂಡತಿಯೆಂಬ ಮಾಯೆಯೇ ಕಾಡು, ತಾಯಿಯ ಮಾತು ಬಲೆ, ಹಿಂಸೆಯೇ ಬಾಣ–ಈ ರೀತಿ ತನ್ನ ಆತ್ಮವೆಂಬ ಜಿಂಕೆಯು ಕೆಳಗುರುಳಿತು.) ಈ ವಿದ್ಯಮಾನಗಳಿಂದ ಅವನಿಗೆ ಜೀವನದಲ್ಲಿ ಜಿಗುಪ್ಸೆಯುಂಟಾಯಿತು. ಮಗ ಯಶೋಮತಿಗೆ ರಾಜ್ಯವನ್ನಿತ್ತು ತಪಸ್ಸಿಗೆ ಹೊರಡಲು ನಿಶ್ಚಯಿಸುತ್ತಾನೆ. ಇದನ್ನರಿತ ಅಮೃತಮತಿ ಕಪಟದಿಂದ ಬಂದು ಈ ರೀತಿ ಕೇಳಿಕೊಳ್ಳುತ್ತಾಳೆ:

ದೇವರ ಬಟಿಯೊಳ್ ಬರ್ಪೆಂ
ಪೂವಿನ ಸೌರಭದ ಮಾಟ್ಕೆಯಿಂ, ಗಮನ ಪ್ರ
ಸ್ತಾವನೆಯೊಳಿಂದು ನೀಮುಂ
ದೇವಿಯರುಂ ಅರೋಗಿಸಲಕ್ಕೆ ಎನ್ನರಮನೆಯೊಳ್ **(ಯ.ಚ. ೩–೨೯)**

(ಹೂವಿನ ಹಿಂದೆ ಪರಿಮಳವು ಹೋಗುವ ಹಾಗೆ ನಿಮ್ಮೊಡನೆ ನಾನೂ ತಪಸ್ಸಿಗೆ ಬರುತ್ತೇನೆ. ಹಾಗೆ ಹೋಗುವ ಮೊದಲು ನೀವೂ ನಿಮ್ಮ ತಾಯಿಯೂ ನಮ್ಮ ಮನೆಯಲ್ಲಿ ಔತಣಕ್ಕಾಗಿ ದಯಮಾಡಿಸಬೇಕು.) ಮನಸ್ಸಿಲ್ಲದ ಮನಸ್ಸಿನಿಂದ ರಾಜನು ಒಪ್ಪುತ್ತಾನೆ. ಯಶೋಧರ–ಚಂದ್ರಮತಿಯರು ಅದರಂತೆ ಊಟಕ್ಕೆ ಹೋದಾಗ ಮೃತಮತಿಯು ಅವರಿಗೆ ವಿಷದ ಲಡ್ಡುಗೆಗಳನ್ನು ಹಾಕಿ ಕೊಲ್ಲುತ್ತಾಳೆ. ಅರಸನು ಮಾಡಿದ್ದ ಮೂದಲಿಕೆಗೆ ಈ ರೀತಿ ಸೇಡು ತೀರಿಸಿಕೊಳ್ಳುತ್ತಾಳೆ.

ಹೀಗೆ ದುರ್ಮರಣದಿಂದ ಸತ್ತ ತಾಯಿ ಮತ್ತು ಮಗ ತಮ್ಮ ಮಾನಸಿಕ ಹಿಂಸೆಯ ಕಾರಣಕ್ಕಾಗಿ ಏಳು ಜನ್ಮಗಳನ್ನು ತಳೆಯುತ್ತಾರೆ. (೧) ಮಗ ವಿಂಧ್ಯೆಯಲ್ಲಿ ನವಿಲಾಗುತ್ತಾನೆ, ತಾಯಿ ಕರಹಟದಲ್ಲಿ ನಾಯಾಗುತ್ತಾಳೆ: (೨) ಮಗ ವಿಂಧ್ಯೆಯಲ್ಲಿ ಮುಳ್ಳು ಹಂದಿಯಾಗಿಯೂ ತಾಯಿ ಅಲ್ಲೇ ಹಾವಾಗಿಯೂ ಹುಟ್ಟುತ್ತಾರೆ: (೩) ಮಗ ಉಜ್ಜಯುನಿಯಲ್ಲಿ ಸಿಪ್ರಾನದಿಯಲ್ಲಿ ಮೀನಾದರೆ ತಾಯಿ ಅಲ್ಲಿಯೇ ಮೊಸಳೆ ಯಾಗುತ್ತಾಳೆ: (೪) ಉಜ್ಜಯಿನಿಯ ಹೊಲೆಗೇರಿಯಲ್ಲಿ ತಾಯಿ ಆಡಾಗಿ ಹುಟ್ಟಿದರೆ,

ಮಗ ಆಡಿನಲ್ಲಿ ಹೋತವಾಗಿ ಹುಟ್ಟುತ್ತಾನೆ: (೫) ತಾಯಿ ಕಳಿಂಗದಲ್ಲಿ ಕೋಣನಾಗಿ ಹುಟ್ಟುತ್ತಾಳೆ, ಮಗ ಆ ಜನ್ಮದಲ್ಲಿಯೂ ಹೋತವಾಗಿರುತ್ತಾನೆ: (೭) ತಾಯಿ-ಮಗ ಇಬ್ಬರೂ ಉಜ್ಜಯಿನಿಯ ಹೊಲೆಗೇರಿಯಲ್ಲಿ ಕೋಳಿಗಳಾಗುತ್ತಾರೆ. ಅವೆರಡೂ ಒಮ್ಮೆ ಆಕಂಪನ ಮುನಿಯ ತತ್ತ್ವೋಪದೇಶವನ್ನು ಕೇಳಿ ತಮ್ಮ ಹಿಂದಿನ ಕತೆ ನೆನಪಾಗಿ ಅಲ್ಲಿಯೇ ಸತ್ತು ಮುಂದೆ ಯಶೋಮತಿ-ಕುಸುಮಾವಳಿಯರಲ್ಲಿ ಅಭಯ ರುಚಿ-ಅಭಯಮತಿಯರಾಗಿ ಹುಟ್ಟುತ್ತಾರೆ. ಅವರು ಎಳೆಯ ವಯಸ್ಸಿನಲ್ಲಿಯೇ ದೀಕ್ಷೆಪಡೆದು ಸುದತ್ತಾಚರ್ಯರ ಶಿಷ್ಯರಾಗುತ್ತಾರೆ.

ಹೀಗೆ ಮಾನಸಿಕ ಪಾಪದಿಂದ ಹಲವಾರು ಜನ್ಮಗಳೆತ್ತಿದವರು ತಾವೆ ಎಂದು ಅಭಯರುಚಿಯು ಕತೆಯನ್ನು ಮುಗಿಸಿದಾಗ ಮಾರಿದತ್ತನು ವಿಸ್ಮಯದಿಂದ ಮೂಕನಾಗುತ್ತಾನೆ. ಈ ಕತೆ ಕೇಳಿದ ಚಂಡಮಾರಿಯು ಪ್ರತ್ಯಕ್ಷಳಾಗಿ ಭಕ್ತ ಸಮೂಹಕ್ಕೆ ಈ ರೀತಿ ಸಂದೇಶವನ್ನೀಯುತ್ತಾಳೆ:

ಪ್ರಜೆಯೆಲ್ಲಂ ಜಲ ಗಂಧ
ಸ್ರಜ ತಂಡಲು ಧೂಪ ದೀಪ ಚರು ತಾಂಬೂಲ
ವ್ರಜದಿಂ ಪೂಜಿಸುವುದು ಜೀ
ವಜಾತದಿಂದೆನಗೆ ಬಲಿಯನಿತ್ತೊಡೆ ಮುನಿವೆಂ (ಯ.ಚ. ೪-೬೪)

(ಎಲ್ಲರೂ ತನಗೆ ಇನ್ನು ಮುಂದೆ ನೀರು ಗಂಧ ಹೂವು ಅಕ್ಕಿ ಧೂಪ-ದೀಪ ಹಿಟ್ಟು ತಾಂಬೂಲಗಳನ್ನು ಮಾತ್ರವೇ ಕಾಣಿಕೆಯಾಗಿ ಸಲ್ಲಿಸತಕ್ಕದ್ದು. ಬಲಿಯನ್ನೇನಾದರೂ ಕೊಟ್ಟರೆ ತಾನು ಕೋಪಗೊಳ್ಳುವೆ.) ಈ ರೀತಿ ಉಗ್ರದೇವತೆಯೇ ಸೌಮ್ಯಳಾದಾಗ ತಾನು ಮಾಡಿದ ಹಿಂಸೆಯ ಪ್ರಮಾಣವನ್ನು ನೆನೆದ ಮಾರಿದತ್ತನು ಪಶ್ಚಾತ್ತಾಪದಿಂದ ತಪಸ್ಸಿಗೆ ಹೊರಡುತ್ತಾನೆ, ಮಾರಿದತ್ತನದು ತಿಳಿಯದೆ ಮಾಡಿದ ಪಾಪ. ಯಶೋಧರನದು ತಿಳಿದು ಮಾಡಿದ ಪಾಪ. ಅದ್ದರಿಂದ ಮಾರಿದತ್ತನಿಗಿಂತ ಯಶೋಧರನು ಹೆಚ್ಚು ಪ್ರಾಯಶ್ಚಿತ್ತವನ್ನು ತೆರಬೇಕಾಗುತ್ತದೆ. ಆಭಯರುಚಿ-ಅಭಯಮತಿಯರಿ ಬ್ಬರೂ ತಪಸ್ಸಿನ ನಂತರ ಈಶಾನಕಲ್ಪದಲ್ಲಿ ದೇವರಾಗಿ ಹುಟ್ಟುತ್ತಾರೆ. ದೇಹವೆಲ್ಲ ಕೆಟ್ಟರೋಗಗಳಿಂದ ಕೂಡಿ ಹುಳಿತುಹೋಗುವವರೆಗೂ ಅಷ್ಟಾವಂಕನೊಡನೆ ಇದ್ದ ಅಮೃತ ಮತಿಯು ಸತ್ತು ಧೂಮಪ್ರಭೆ ಎಂಬ ನರಕದಲ್ಲಿ ತೊಳಲುತ್ತಾಳೆ.

ಹೀಗೆ 'ಯಶೋಧರ ಚರಿತೆ' ತುಂಬ ಸರಳವೂ ಸ್ವಾರಸ್ಯಕರವೂ ಆದ ಕಾವ್ಯ. ಜನರ ಮನಸ್ಸನ್ನು ನೇರವಾಗಿ ಹೊಗುವ ರೀತಿಯಲ್ಲಿ ಜನ್ನನು ಅದನ್ನು ರಚಿಸಿದ್ದಾನೆ. ಮನಸ್ಸಿನಲ್ಲಿ ಹಿಂಸೆಯನ್ನು ಒಪ್ಪಿಕೊಂಡುದಕ್ಕಾಗಿ ಯಶೋಧರ-ಚಂದ್ರಮತಿಯರು ಹಲವಾರು ಜನ್ಮಗಳಲ್ಲಿ ತೊಳಲಿದ್ದನ್ನು ಕೇಳಿ ಮುಗ್ಧ ಮನಸ್ಸಿನನ ಮೇಲೆ ಅಪಾರ ಪರಿಣಾಮವುಂಟಾಗುವುದು ಖಂಡಿತ-ಇದೇ ಜನ್ನನು ಆಶಿಸಿದ್ದ ಪರಿಣಾಮ. ಆದರೆ ಅಮೃತಮತಿಯ ಪಾತ್ರವೂ ನಮ್ಮ ಮನಸ್ಸನ್ನು ಆಕರ್ಷಿಸುತ್ತದೆ. ಯಶೋಧರನಂತಹವನನ್ನು ಬಿಟ್ಟು ಅಷ್ಟಾವಂಕನಲ್ಲಿ ಪ್ರೀತಿಯನ್ನು ಹೊಂದಿದ ಅವಳ ಬಗ್ಗೆ ನಮಗೆ ತಾತ್ಸಾರವುಂಟಾಗುತ್ತದೆ, ನಿಜ, ಆದರೆ ಅವನಿಗೆ ರೋಗದಿಂದ ಮೈಯೆಲ್ಲ

ಕೊಳೆತಾಗಲೂ, ಅವನಿಂದ ತನಗೆ ಅದೇ ರೀತಿಯಾದಾಗಲೂ ಅವನ ಬಗ್ಗೆ ಪ್ರೀತಿಯನ್ನಿಟ್ಟುಕೊಂಡಿದ್ದನ್ನು ಕಂಡಾಗ ನಮಗೆ ಆಶ್ಚರ್ಯವುಂಟಾಗುತ್ತದೆ; ಅದು ಕ್ಷಣಿಕವಾದ ಮೋಹವಲ್ಲವೆಂದು ನಾವು ಹೇಳಿಕೊಳ್ಳುವಂತಾಗುತ್ತದೆ. ಅವಳು ಅಷ್ಟಾವಂಕನಿಗೆ ತನ್ನ ಮನಸ್ಸನ್ನು ತೆತ್ತ ಸಂದರ್ಭದಲ್ಲಿ ಕವಿಯು 'ಮನಸಿಜನಮಾಯೆ ವಿಧಿವಿಳಸನದ ನೆರಂಬಡೆಯೆ ಕೊಂದು ಕೂಗದೆ ನರರಂ' (ಕಾಮವೆಂಬ ಮಾಯೆಯು ತನಗೆ ವಿಧಿಯ ನೆರವು ದೊರಕಿಬಿಟ್ಟರೆ ಜನರನ್ನು ಕೊಂದು ಕೂಗದೆ ಇರುತ್ತದೆಯೇ?) ಎಂದು ಉದ್ಗಾರವೆತ್ತುತ್ತಾನೆ. ಆದರೆ ಅಮೃತಮತಿಯದು ಕೇವಲ ಕಾಮವೆಂದು ಹೇಳಲು ನಮಗೆ ಇಷ್ಟವಾಗುವುದಿಲ್ಲವಾದರೂ ಅವಳ ಮನಸ್ಸಿನ ವೈಚಿತ್ರ್ಯ ನಮ್ಮನ್ನು ಯೋಚನೆಗೀಡುಮಾಡುತ್ತದೆ. ಅವಳು ಅಷ್ಟಾವಂಕನಿಗಾಗಿ ಕಳ್ಳು-ಬಾಡುಗಳನ್ನು ಸೇವಿಸಲು ತೊಡಗುತ್ತಾಳೆ, ಅವನು ಹಿಂಸೆ ಮಾಡಿದರೆ ಸಹಿಸುತ್ತಾಳೆ, ತನ್ನ ವೈಭವಗಳನ್ನು ಬಿಟ್ಟು ಜನರ ನಿಂದೆಗೆ ಪಾತ್ರಳಾಗುತ್ತಾಳೆ, ರೋಗಿಷ್ಟಳಾಗುತ್ತಾಳೆ. ಇವೆಲ್ಲ ತಾನು ಒಲಿದ ವ್ಯಕ್ತಿಗಾಗಿ. ಅವಳು ಆರಿಸಿದ ವ್ಯಕ್ತಿ ಅಪಾತ್ರ ಸರಿ, ಆದರೆ ಇವಳ ಮನಸ್ಸು! ಒಟ್ಟಾರೆ 'ಯಶೋಧರ ಚರಿತೆ'ಯು ಒಂದು ಅಪರೂಪದ ಕಾವ್ಯ. ಮೊದಲ ನೋಟದಲ್ಲಿಯೇ ನಮ್ಮ ಮನಸ್ಸನ್ನು ಅಪಹರಿಸುವ ಶಕ್ತಿ ಅದಕ್ಕಿದೆ.

ಅನಂತನಾಥಪುರಾಣ

ಇದು ಹದಿನಾಲ್ಕನೆಯ ಜಿನನಾದ ಅನಂತನಾಥನ ಕತೆಯಿಂದ ಕೂಡಿದೆ; ಅದರೊಡನೆ ಸುಪ್ರಭ ಪುರುಷೋತ್ತಮರೆಂಬ ಬಲದೇವ ವಾಸು ದೇವರ ಚರಿತ್ರೆಯೂ ಪ್ರತಿವಾಸುದೇವನಾದ ಮಧುಕೈಟಭನ ಚರಿತ್ರೆಯೂ ಬಂದಿದೆ. ಅರಿಷ್ಟಪುರದ ಪದ್ಮರಥ-ಲಕ್ಷ್ಮೀಮತಿಯರೆಂಬ ರಾಜದಂಪತಿಗಳಿಗೆ ಮಗ ಮೇಘರಥ ರಾಜನು ಒಮ್ಮೆ ಉಲ್ಕಾಪಾತವನ್ನು ಕಂಡು ವೈರಾಗ್ಯ ಹೊಂದಿ ದೀಕ್ಷೆಯನ್ನು ಪಡೆದು ದೀರ್ಘ ತಪಸ್ಸಿನನಂತರದ ದೇಹತ್ಯಾಗ ಮಾಡಿ ಅಚ್ಯುತ ಕಲ್ಪದಲ್ಲಿ ದೇವನಾಗಿ ಹುಟ್ಟುತ್ತಾನೆ. ಅವನೇ ಸಿಂಹಸೇನ-ಜಯಶ್ಯಾಮಾದೇವಿಯೆಂಬ ಕೋಸಲ ದೇಶದ ರಾಜದಂಪತಿ ಗಳಲ್ಲಿ ಅನಂತನಾಥನೆಂಬ ಕತೆಯನ್ನು ಜನ್ನನು ನೇರವಾಗಿ ನಿರೂಪಿಸಿದ್ದಾನೆ.

ಕಾವ್ಯ ದೃಷ್ಟಿಯಿಂದ ಈ ಕತೆಗೆ ಹೊಂದಿಕೊಂಡು ಬರುವ ಸುಪ್ರಭೆ ಪುರುಷೋತ್ತಮರ ಹಿಂದಿನ ಜನ್ಮದ ಕತೆಯು ತುಂಬ ಸುಂದರವಾಗಿ ಮೂಡಿಬಂದಿದೆ. ಸುರಮ್ಯ ಮಂಡಲದ ಪೌದನಪುರದ ಅರಸು ವಸುಷೇಣ. ಅವನ ಪಟ್ಟದ ರಾಣಿ ಸುನಂದಾದೇವಿ. ಒಮ್ಮೆ ಇವನ ಮಿತ್ರನಾದ ಚಂಡಶಾಸನನು ಪೌದನಪುಕ್ಕೆ ಬರುತ್ತಾನೆ. ವಸುಷೇಣನು ಗೆಳೆಯನನ್ನು ತುಂಬ ಪ್ರೀತಿ ವಿಶ್ವಾಸಗಳಿಂದ ಸತ್ಕರಿಸುತ್ತಾನೆ. ಗೆಳೆಯರಿಬ್ಬರೂ ಒಟ್ಟಿಗೇ ಊಟ ಮಾಡುವಾಗ ಬಡಿಸುವವಳು ಸುನಂದೆ, ಅವಳ ಸೌಂದರ್ಯವು ಚಂಡಶಾಸನನನ್ನು ಆಕರ್ಷಿಸಿತು:

> **ನಗೆಗಣ್ ನಲ್ಲಳ ಕೂಟಮಂ ಪಡೆದುವು, ಇಂಪಂ ಶ್ರೋತ್ರಮೀಂಟಿತ್ತು ಮಾ**
> **ತುಗಳಿಂ, ನಾಸಿಕೆಗಾಯ್ತವಳ್ ಸುಟಿದ ಸೂಳೂಳ್ ಸೌರಭಂ ಸ್ವಾದು, ನಾ**
> **ಲಗೆಗಾಯ್ತಾಕೆಯ ಹಸ್ತಪಲ್ಲವರಸಾನ್ನಾದ್ಯಂಗಳಿಂ, ಸೋಂಕವಾ**
> **ಸೆಗೆ ಪಕ್ಕಾಗದೆ ನಿಂದ ಪಲ್ಲವಕನಂಗಕ್ಕಾಯ್ತು ಅನಂಗಜ್ವರಂ** (ಅನಂ.ಪು. ೧೧-೨೯)

(ಚಂಡಶಾಸನನ ಕಣ್ಣುಗಳು ಅವಳನ್ನು ದೃಷ್ಟಿಯಲ್ಲೇ ಸೇರಿದವು, ಅವಳ ಮಾತುಗಳ ಇಂಪನ್ನು ಕಿವಿಯು ಅನುಭವಿಸಿತು. ಅವಳು ಸುಳಿದೆಡೆ ಸುಳಿಯುವ ಕಂಪು ಅವನ ಮೂಗನ್ನು ಅಹ್ಲಾದಗೊಳಿಸಿತು. ಅವಳು ಬಡಿಸಿದ ಮೃಷ್ಟಾನ್ನವು ನಾಲಗೆಗೆ ರುಚಿಯನ್ನಿತ್ತಿತ್ತು. ಅದರೆ ಅವಳನ್ನು ಸೋಕುವ ಆಸೆಯು ಫಲಿಸದೆ ಅವನ ದೇಹಕ್ಕೆ ಮೋಹಜ್ವರವುಂಟಾಯಿತು.) ಚಂಡ ಶಾಸನನ ಆಪ್ತನಾದ ಸುದರ್ಶನ ನೆಂಬುವನು ತನ್ನ ಯಜಮಾನನ ಧರ್ಮ ವಿರುದ್ಧವಾದ ಮೋಹಕ್ಕೆ ತಣ್ಣೀರೆರಚದೆ ಸುನಂದೆಗೆ ಗಂಡನ ಮೇಲೆ ಪ್ರೇಮವಿಲ್ಲವೆಂತಲೂ ಚಂಡಶಾಸನನ ಪೌರುಷ ಸೌಂದರ್ಯಗಳಿಗೆ ಸೋಲದ ಹೆಣ್ಣಾರು ಎಂದೂ ವಿರಹವನ್ನು ಹೆಚ್ಚಿಸುವನು.

ಈ ಮಧ್ಯೆ, ಒಮ್ಮೆ ವಸುಷೇಣನು ಗೆಳೆಯನನ್ನು ಬೇಟೆಗಾಗಿ ಕರೆ ದೊಯ್ಯುತ್ತಾನೆ. ವನವಿಹಾರಕ್ಕಾಗಿ ಆಹಾರಪಾನೀಯಗಳೊಂದಿಗೆ ವನಕ್ಕೆ ಬಂದಿರಬೇಕೆಂದು ವಸುಷೇಣನು ಸುನಂದೆಗೆ ಹೇಳಿ ಕಳಿಸುವನು. ಈ ವಿಚಾರವನ್ನು ತಿಳಿದ ಚಂಡಶಾಸನು ಅವಳನ್ನು ದಾರಿಯಲ್ಲೇ ಅಡ್ಡಗಟ್ಟಿ, ಅವಳ ರಕ್ಷಕದಳವನ್ನು ನಾಶಮಾಡಿ ಅವಳನ್ನೆತ್ತಿಕೊಂಡು ತನ್ನ ದುರ್ಗಕ್ಕೆ ಹಾರಿ ಹೋಗುತ್ತಾನೆ. ಈ ವಿಷಯವನ್ನು ಸುನಂದೆಯ ಸಖಿಯರಿಂದ ತಿಳಿದ ವಸುಷೇಣನು ದುಃಖದಿಂದ ಪ್ರಲಾಪಿಸಿ:

> **ಪ್ರಾಣ ಪ್ರಿಯೆಯಿಲ್ಲದೆ ನಿಃ**
> **ಪ್ರಾಣಮದೆಂತುಣ್ಬುದೀಗಳೀಯೊಡಲ್, ಅಹಿತ**
> **ಪ್ರಾಣಾನಿಲನಿದೆನ್ನ ಕೃ**
> **ಪಾಣಾಹಯನೂಡಿ ಬಟಿಕಮಾನುಂಡಪ್ಪೆಂ** (ಅನಂ.ಪು. ೧೧-೭೧)

(ಪ್ರಾಣಪ್ರಿಯೆಯಿಲ್ಲದೆ ಜೀವರಹಿತವಾದ ನನ್ನ ದೇಹವು ಹೇಗೆ ಊಟ ಮಾಡಬಲ್ಲುದು? ತನ್ನ ಕತ್ತಿಯೆಂಬ ಸರ್ಪಕ್ಕೆ ಶತ್ರುವಿನ ಪ್ರಾಣವೆಂಬ ಗಾಳಿಯನ್ನು ಊಡಿ ಅನಂತರ ನಾನು ಊಟ ಮಾಡುತ್ತೇನೆ) ಎಂದು ಪ್ರತಿಜ್ಞೆಮಾಡಿ ಚಂಡ ಶಾಸನನ ದುರ್ಗದೆಡೆಗೆ ಹೊರಡುತ್ತಾನೆ. ಅಲ್ಲಿ ಎರಡೂ ಕಡೆಯ ಸೈನ್ಯಗಳಿಗೆ ಭಯಂಕರ ಕಾಳಗವು ನಡೆಯುತ್ತದೆ.

ಅಂದಿನ ಸಂಜೆ ಯುದ್ಧವು ಮುಗಿದಮೇಲೆ ಚಂಡಶಾಸನನು ಅಲಂಕಾರ ಮಾಡಿಕೊಂಡು ಸುನಂದೆಯನ್ನೊಲಿಸಿಕೊಳ್ಳಲು ಅವಳನ್ನಿರಿಸಿದ್ದ ಭವನಕ್ಕೆ ಬರುತ್ತಾನೆ. ಅಲ್ಲಿ ಅವಳಿದ್ದ ರೀತಿಯಿದು:

> **ಬದಿಯೆಂಬ ಮದಗಜಂ ನೃಪ**
> **ಸದನಸರೋವರದೊಳೆಟಿದು ಸೆಳೆತಂದು ವನಾಂ**
> **ತದೊಳಿಕ್ಕಿದ ಬಾಳಮೃಣಾ**
> **ಳದವೊಲ್ ಸತಿ ಕೊರಗಿ ಕಣ್ಗೆ ಕರಮೆಸೆದಿರ್ದಳ್** (ಅನಂ.ಪು. ೧೧-೮೭)

(ವಿಧಿಯೆಂಬ ಮದ್ದಾನೆಯು ಅರಮನೆಯೆಂಬ ಸರೋವರದಿಂದ ಕಿತ್ತು ತಂದು ಕಾಡಿನಲ್ಲಿ ಈಡಾಡಿದ ಎಳೆಯ ಕಮಲದ ದಂಟಿನಂತೆ ಸುನಂದೆ ಕೊರಗಿ ಕೃಶವಾಗಿದ್ದಳು.) ಅವಳೆಡೆಗೆ ಬಂದ ಚಂಡಶಾಸನನು ತನ್ನ ತಪ್ಪನ್ನು ಮನ್ನಿಸಬೇಕೆಂದೂ 'ಅಂ

ಗಂಡುದೊಳ್ತು' ಎಂದೂ ಹೇಳಿ ತನ್ನನ್ನು ಕೃಪೆಯಿಟ್ಟು ಒಲಿಯಬೇಕೆಂದು ಕೇಳಿಕೊಳ್ಳುವನು. ಅದನ್ನು ಕೇಳಿ ಕನಲಿದ ಸುನಂದೆಯು ವಸುಷೇಣನೇ ತನ್ನ ಒಡೆಯನೆಂದು ನಿರ್ಧಾರದಿಂದ ಹೇಳಿದಾಗ ಅವನು

ಬಿಡೆ ನಾಂ, ನೀಂ ಸಯೆ ಸಾವೆನಲ್ಲದೆ ಉೞಿಯೆಂ, ನೀನೊಲ್ದಡೇನ್ ಒಲ್ಲದಿ
ರ್ದೊಡಮೇಂ ನಾನೆರಡಿಲ್ಲದೊಲ್ದೆಂ, ಅದಱಿಂ ಬೇಱಾರ ಬೇಟಕ್ಕೆ ಬಾಯ್
ಬಿಡಲಾಱೆಂ, ಸೆಱೆಯಿಂದಮೆನ್ನ ಮನೆಯೊಳ್ ನೀನಿರ್ದೆ ಎಂಬಾಸೆಯು
ಳ್ಳೊಡೆ ಸಾಲ್ಗುಂ, ಬೞಿಕಪ್ಪುದಕ್ಕೆ ರಿಣದಿಂದಂಭೋಜಪತ್ರೇಕ್ಷಣೇ

(ಅನಂ.ಪು. ೧೧-೯೫)

(ನಾನು ನಿನ್ನನ್ನು ಬಿಡಲಾರೆ ನೀನು ಸತ್ತರೆ ನಾನು ಸಾಯುವೆನೇ ವಿನಾ ಬದುಕಿರಲಾರೆ, ಎರಡಿಲ್ಲದೆ ನಾನು ನಿನ್ನನ್ನು ಪ್ರೀತಿಸಿದ್ದೇನೆ. ಬೇರೆಯವರ ಪ್ರೀತಿಗೆ ನಾನು ಇಷ್ಟಪಡೆನು. ನನ್ನ ಮನೆಯಲ್ಲಿ ನೀನು ಸೆರೆಯಾಗಿದ್ದೀಯೆ, ನನಗೆ ಅದೇ ಸಾಕು. ಮುಂದೆ ಬಂದದ್ದು ಬರಲಿ) ಎಂದು ತನ್ನ ದೃಢವಾದ ಪ್ರೀತಿಯನ್ನು ತೋರಿಸುವನು.

ಹೇಗಾದರೂ ಸುನಂದೆಯನ್ನು ಒಲಿಸಿಕೊಳ್ಳಬೇಕೆಂದು ಚಂಡಶಾಸನನು ಮಾರನೆಯ ದಿನ ಒಂದು ಕ್ರೂರ ಉಪಾಯವನ್ನು ಮಾಡುತ್ತಾನೆ. ಗಂಡನು ಬದುಕಿರುವವರೆಗೂ ಸುನಂದೆಯು ತನ್ನನ್ನು ಮೆಚ್ಚಲಾರಳೆಂದು ಭಾವಿಸಿ ಒಬ್ಬ ಐಂದ್ರಜಾಲಕನ ಸಹಾಯದಿಂದ ವಸುಷೇಣನ ತಲೆಯೊಂದನ್ನು ಮಾಡಿಸಿ ಅದನ್ನು ತಂದು ಅವಳ ಮುಂದೊಡ್ಡಿ 'ವಸುಷೇಣನೆ ಗಂಡನೆಂದು ಹೇಳುತ್ತಿರುವೆಯಲ್ಲ, ಈ ತಲೆಗೆ ನಿನ್ನ ಪ್ರೀತಿಯನ್ನು ತೋರು' ಎಂದು ಮಾಯಾ ತಲೆಯನ್ನು ಎಸೆಯುತ್ತಾನೆ, ಅದನ್ನು ಕಂಡ ಅವಳ ಪ್ರಾಣವು ಹಾರಿ ಹೋಗುತ್ತದೆ. ಹೀಗೆ ತಾನೊಂದು ಬಗೆದರೆ ದೈವವೊಂದು ಬಗೆಯಿತು. ಅವನು ಅವಳ ಸಾವನ್ನು ಕಂಡು ಮೂರ್ಛೆಹೋದ. ಅನಂತರ ಎಚ್ಚೆತ್ತ ಮೇಲೆ

ನೋಡಿ ಕನಲ್ದು ಬಾಯ್ದುನಿದು ಮೋನದಿನೇಕೆಲೆ ದೇವಿ ನೀಮ್ಮನಂ
ನೋಡುವೆ? ಸಾವಿನಂ ಸರಸವಾಡುವರೆ? ಮಱುಮೆಯ್ಯೊಳಾದೊಡಂ
ಕೂಡದೆ ಮಾಣೆನ್, ಅಬ್ಜದಳಲೋಚನೆ ನಿನ್ನೊಡನೆಂದು ಮೆಯ್ಗಮೆ
ಯ್ಯೊಗ್ಗಡುವೆ ಧೂಮಸೌಧಗೃಹದೊಳ್ ಶಿಖಿಪಲ್ಲವರಾಗತಳ್ಪದೊಳ್

(ಅನಂ.ಪು. ೧೨-೯)

(ನನ್ನ ಮೇಲೆ ಕೋಪಗೊಂಡು ಏಕೆ ಮಾತಾಡಿದಿರುವೆ? ಹೀಗೆ ಸಾಯುವಂತೆ ಸರಸವಾಡುತ್ತಾರೆಯೇ? ಮುಂದಿನ ಜನ್ಮದಲ್ಲಾದರೂ ನಿನ್ನೊಡನೆ ಕೂಡುತ್ತೇನೆ ಎಂಬಂತೆ ಈಗ ಹೊಗೆಯ ಸೌಧದಲ್ಲಿ ಬೆಂಕಿಯೆಂಬ ಚಿಗುರ ಹಾಸಿಗೆಯಲ್ಲಿ ನಿನ್ನೊಡನೆ ಮಲಗುತ್ತೇನೆ) ಎಂಬುದಾಗಿ ಅವಳೊಡನೆ ಸಹಗಮನಕ್ಕೆ ಸಿದ್ಧನಾಗುತ್ತಾನೆ. ಹೆಣ್ಣು ಗಂಡನು ಸತ್ತಾಗ ಸಹಗಮನ ಮಾಡುತ್ತಿದ್ದುದು ಸಾಮಾನ್ಯ. ಆದರೆ ಇಲ್ಲಿ ಗಂಡೇ ತಾನು ಪ್ರೀತಿಸಿದ ಹೆಣ್ಣಿನೊಡನೆ ಸಹಗಮನ ಮಾಡುವ ಸನ್ನಿವೇಶ!

'ಯಶೋಧರ ಚರಿತೆ'ಯಲ್ಲಿ ಹೆಣ್ಣಿನ ಧರ್ಮವಿರುದ್ಧ ಪ್ರೇಮದ ಚಿತ್ರವನ್ನು ನೀಡಿದ ಜನ್ನನು ಇಲ್ಲಿ ಅಂತಹ ಗಂಡಿನ ಚಿತ್ರವನ್ನು ನೀಡಿದ್ದಾನೆ. ಚಂಡಶಾಸನನ್ನು

ಸ್ನೇಹಿತನ ಹೆಂಡತಿಯನ್ನು ಮೋಹಿಸಿದ್ದು ಸರಿಯಲ್ಲವಾದರೂ ಅವಳಿಗಾಗಿ ಪ್ರಾಣವನ್ನೇ ತೆರುವಷ್ಟು ಅಧಿಕವಾದ ಪ್ರೀತಿ ಅವನದ್ದು ಎಂದು ತಿಳಿದಾಗ ನಮಗೆ ಆಶ್ಚರ್ಯ-ಕನಿಕರಗಳುಂಟಾಗುತ್ತವೆ. ಚಂಡಶಾಸನನ ವರ್ತನೆಯೂ ಕೇವಲ ಮೋಹದಿಂದ ಪ್ರೇರಿತವಾದ್ದದ್ದೆಂದು ಹೇಳಲು ನಮಗೆ ಇಷ್ಟವಾಗದು. ಮನುಷ್ಯ ಜೀವನದಲ್ಲಿ ಅತ್ಯಂತ ಮೂಲ ಭೂತವಾದ ಕಾಮ ಮತ್ತದರ ಭಾವನಾರೂಪವಾದ ಪ್ರೇಮ-ಇವುಗಳ ವೈಚಿತ್ರ್ಯ ಜನ್ನನನ್ನು ಚಕಿತಗೊಳಿಸಿ ಅದರ ಬಗ್ಗೆ ಅಲೋಚಿಸುವಂತೆ ಮಾಡಿರಬೇಕು. ಅದರಿಂದಲೇ ಅಮೃತಮತಿ ಮತ್ತು ಚಂಡಶಾಸನರ ಪಾತ್ರಗಳಲ್ಲಿ ಕಾಮ-ಮೋಹಗಳ ಎರಡು ಚಿತ್ರಗಳನ್ನು ತನ್ಮಯನಾಗಿ ಅವನು ರೂಪಿಸಿದ್ದಾನೆ. ತುಂಬ ಗಂಭೀರವಾಗಿ ಈ ವಿಚಾರವನ್ನು ಕಾವ್ಯದಲ್ಲಿ ತಂದಿರುವ ಜನ್ನನು ಈ ವಿಷಯದಲ್ಲಿ ಯಶ್ವಸಿಯಾಗಿದ್ದಾನೆ. ಈ ವಿಚಾರವನ್ನು ಇಷ್ಟು ವಿಶಿಷ್ಟ ರೀತಿಯಲ್ಲಿ ಕಾವ್ಯದಲ್ಲಿ ನಿರೂಪಿಸಿರುವುದು ನಮ್ಮ ಹಳೆಯ ಸಾಹಿತ್ಯದಲ್ಲಿಯೇ ಬೇರೊಂದೆಡೆಯಿಲ್ಲ. ಈ ರೀತಿ ಜನ್ನನು 'ಯಶೋಧರ ಚರಿತೆ'ಯಲ್ಲಿ ಕೇವಲ ಪದ್ಯಗಳಿಂದ ಕೂಡಿರುವ, ಅತ್ಯಂತ ಸರಳವೂ ನೇರವೂ ಹೃದಯವನ್ನು ಮುಟ್ಟುವಂಥದೂ ಆದ ಶೈಲಿಯಲ್ಲಿ ಕಾವ್ಯರಚನೆ ಮಾಡಿದ್ದರೆ, 'ಅನಂತನಾಥಪುರಾಣ'ದಲ್ಲಿ ಸಾಂಪ್ರದಾಯಿಕವಾದ ಕಥಾವಸ್ತುವಿದ್ದರೂ ಅಲ್ಲಿಯೇ ಮಾನವ ಜೀವನದ ಮೂಲಭೂತ ಸಮಸ್ಯೆಯ ಬಗ್ಗೆ ಅಲೋಚನೆ ಮಾಡಿ ನಮ್ಮ ಹೃದಯವನ್ನು ಗೆಲ್ಲುತ್ತಾನೆ. ಆದ್ದರಿಂದಲೇ ಜನ್ನನಿಗೆ ಕನ್ನಡ ಸಾಹಿತ್ಯದಲ್ಲಿ ವಿಶಿಷ್ಟಸ್ಥಾನವಿದೆಯೆಂದು ನಾವು ಹೇಳಿದುದು.

ಅಂಡಯ್ಯ

ಕನ್ನಡ ಭಾಷೆಯನ್ನು ಕಾವ್ಯದಲ್ಲಿ ಬಳಸುವ ಬಗ್ಗೆ ತನ್ನದೇ ಆದ ಧೋರಣೆಯನ್ನು ತಳೆದು, ತನ್ನ ಕಾವ್ಯದಲ್ಲಿ ಅದಕ್ಕೆ ರೂಪು ಕೊಟ್ಟ ಮಹತ್ವವನ್ನು ಗಳಿಸಿದ್ದಾನೆ ಅಂಡಯ್ಯ. ಹದಿಮೂರನೆಯ ಶತಮಾನದ ಮೊದಲ ಭಾಗದಲ್ಲಿ (ಎಂದರೆ ಸು. ಕ್ರಿಶ. ೧೨೧೭) ಜೀವಿಸಿದ್ದ ಈ ಜೈನಕವಿಯು ಕನ್ನಡನಾಡಿನ ಸೌಂದರ್ಯದ ಬಗ್ಗೆ ತುಂಬ ಹೆಮ್ಮೆಯನ್ನಿಟ್ಟುಕೊಂಡಿದ್ದವನು. ಇವನು ಪ್ರಾಯಶಃ ಕದಂಬರಾಜನಾದ ಕಾಮದೇವನ (ಕ್ರಿ.ಶ. ೧೧೮೦-೧೨೧೭ರವರೆಗೆ ಆಳಿಕೆ) ಆಶ್ರಯದಲ್ಲಿದ್ದವನು. ಅವನ ವೀರಪರಾಕ್ರಮಗಳನ್ನೂ ಪರ್ಯಾಯವಾಗಿ ಇವನು 'ಕಬ್ಬಿಗರ ಕಾವಂ' ಎಂದು ಪ್ರಖ್ಯಾತವಾದ ತನ್ನ ಕಾವ್ಯದಲ್ಲಿ ವರ್ಣಿಸಿದ್ದಾನೆ. ಈ ಕಾವ್ಯಕ್ಕೆ ಕವಿಯಿಟ್ಟಿದ್ದ ಮೂಲ ಹೆಸರು 'ಕಾಮನ ಗೆಲ್ಲ' ಎಂದೂ ಅದು ಸಂಸ್ಕೃತೀಕರಣಗೊಂಡ 'ಮದನ ವಿಜಯ'ವೆಂಬ ಹೆಸರನ್ನು ಪಡೆಯಿತೆಂದೂ ಇದಕ್ಕೆ ಹೇಗೆಯೋ 'ಸೊಬಗಿನ ಸುಗ್ಗಿ' ಎಂಬ ಹೆಸರೂ ಉಂಟಾಗಿ, ಪ್ರಾಯಶಃ ಪ್ರತಿಕಾರರ ಪ್ರಮಾದದಿಂದ ಈ ಕಾವ್ಯಕ್ಕೆ 'ಕಬ್ಬಿಗರಕಾವ'ವೆಂಬ ಹೆಸರು ಬಂದಿದೆಯೆಂದೂ ಅನೇಕ ವಿದ್ವಾಂಸರ ಅಭಿಪ್ರಾಯ. ಶಿವನು ಕಾಮನನ್ನು ಸುಟ್ಟದ್ದು ಪ್ರಸಿದ್ಧ ಪೌರಾಣಿಕ ಕತೆ, ಆದರೆ ಆ ಶಿವ ಮುಂದೆ ಕಾಮಕ್ಕೊಳಗಾಗಿ ಗಿರಿಜೆಯನ್ನು ಮದುವೆಯಾದ. ಇದಿರಿಂದ ಪ್ರೇರಣೆಗೊಂಡ ಅಂಡಯ್ಯನು ಶಿವನು ಮದನನಿಂದ ಸೋತಂತೆ ತನ್ನ ಕಾವ್ಯದಲ್ಲಿ ವರ್ಣಿಸಿ, ಆ

ಮನ್ಮಥನನ್ನು ನಿಜವಾಗಿ ಗೆದ್ದವನು ಜಿನನೆಂದು ಹೇಳಿ ತನ್ನ ಧರ್ಮಪ್ರೇಮವನ್ನು ತೋರ್ಪಡಿಸಿಕೊಳ್ಳುತ್ತಾನೆ.

ಅಂಡಯ್ಯನು ಕನ್ನಡ ಭಾಷೆಯ ಬಗ್ಗೆ ಹೊಂದಿದ್ದ ಧೋರಣೆ ವಿಶಿಷ್ಟವಾದದ್ದು. ಇವನು ತನ್ನ ಕಾವ್ಯವನ್ನು ಸಂಸ್ಕೃತ ಪದಗಳನ್ನು ಬಳಸದೆ ಕೇವಲ ಕನ್ನಡ ಶಬ್ದಗಳಿಂದಲೇ ರಚಿಸಿದ್ದಾನೆ: ಆದರೆ ತದ್ಭವ ಶಬ್ದಗಳನ್ನು ಕವಿ ಹೇರಳವಾಗಿ ಬಳಸಿದ್ದಾನೆ. ಸಂಸ್ಕೃತವನ್ನು ಬಳಸದೆಯೇ ಕನ್ನಡದಲ್ಲಿ ಕಾವ್ಯ ರಚನೆ ಮಾಡುವುದು ಸಾಧ್ಯವಲ್ಲವೆಂಬ ಹಿಂದಿನ ಕವಿಗಳ ಅರೋಪವನ್ನು ಹೋಗಲಾಡಿಸುವ ಸಾಹಸವನ್ನು ಮಾಡಿದ ಅಂಡಯ್ಯ ಕೆಲವೊಮ್ಮೆ ಭಾಷೆಯ ಬಳಕೆಯ ತೀರ ಮಡಿವಂತಿಕೆಯಿಂದಾಗಿ ಗೊಂದಲದಲ್ಲಿಯೂ ಕೆಡವುತ್ತಾನೆ.

ಕಬ್ಬಿಗರ ಕಾವ

ಪೂವಿನ ಪೊಳಲಿನ (ಹೂವಿನ ನಗರ) ರಾಜ ನನೆಯಂಬ. ಅವನಿಗೆ ವಸಂತ ಋತುವಿನ ಒಂದು ದಿನ ಕನಸೊಂದು ಬಿತ್ತು:

ತಳತಳಿಸಿ ಬೆಳಪ ತಿಂಗಳ
ಬೆಳಗಂ ಕರ್ವರ್ಂತೆ ಮೆಱೆವ ಮೆಯ್ವೆಳಗಿನಿಂ ಕ
ಣ್ಗೊಳಿಪೊರ್ವಳನಾನಿಂದಿನ
ಬೆಳಗಪ್ಪೊಂದೆರಡು ಗಟಿಗೆಯಾಗಲ್ ಕಂಡೆಂ (ಕಬ್ಬಿ ಕಾ. ೧–೫೯)

(ಬೆಳುದಿಂಗಳ ಕಾಂತಿಯನ್ನೇ ಸೂರೆಗೊಂಡಂತಹ ದೇಹಶೋಭೆಯಿಂದ ಕೂಡಿದ ಸುಂದರಿಯೊಬ್ಬಳನ್ನು ಬೆಳಗಿನ ಜಾವ ಕನಸಿನಲ್ಲಿ ಕಂಡೆ.) ಈ ಕನಸನ್ನು ರಾಜನು ತನ್ನ ಮೇಳದ ಕೆಳೆಯನಾದ ನಗೆಗಾರನಿಗೆ ಹೇಳುತ್ತಾನೆ. ಈ ಕನಸು ನನಸಾಗುತ್ತದೆಂದೂ ಸುಂದರಿಯೊಬ್ಬಳು ಬೇಗನೆ ಕೈವಶವಾಗುವಳೆಂದು ನಗೆಗಾರ ದೊರೆಗೆ ಹೇಳುತ್ತಾನೆ.

ವಸಂತಕಾಲದಿಂದ ಸುಂದರವಾಗಿ ಕಂಗೊಳಿಸುವ ಉಪವನವನ್ನು ನೋಡಲು ಪರಿವಾದೊಂದಿಗೆ ದೊರೆ ಹೋಗುತ್ತಾನೆ. ಆ ವನವು ಮನ್ಮಥನ ಪುರದಂತಿತ್ತು. ಅಂತಹ ಸುಂದರವಾದ ವನವನ್ನು ನೋಡುತ್ತ ಬರುತ್ತಿರುವಾಗ:

ಮೊರೆಯದ ತುಂಬಿಯಂ ಕುರುಳ ಸಂದಣಿ ಸೋಲಿಸೆ, ಜಕ್ಕವಕ್ಕಿಯಂ
ಪರಿವಡೆದಿರ್ದ ತೋರ ಮೊಲೆ, ಬಗ್ಗಿಸೆ ನೈದಿಲನೆಯ್ದೆ ಕಣ್ಣಲರ್,
ಕೊರಗಿಸೆ ನಾಡೆ ಕೆಂದಳಿರನೋವದೆ ಕೆಂದಳಮಿಕ್ಕೆ ಮೆಟ್ಟೆ ಮಾ
ಮರದಡಿಯಲ್ಲಿ ನಿಂದ ಬಸವಣ್ಣೆನಿಪಂದದಿನೋರ್ವಳೊಪ್ಪಿದಳ್ (ಕಬ್ಬಿ ಕಾ. ೧–೬೦)

(ದುಂಬಿಯನ್ನೂ ನಾಚಿಸುವ ತಲೆಗೂದಲ ಕಾಂತಿಯಿಂದಲೂ, ಚಕ್ರವಾಕ ಪಕ್ಷಿಗಳಿಗೂ ಮಿಗಿಲಾದ ತೋರ ಮೊಲೆಗಳಿಂದಲೂ, ನೆಯ್ದಿಲೆಗಿಂತಲೂ ಸುಂದರವಾದ ಕಣ್ಣುಗಳಿಂದಲೂ, ಕೆಂಪಾದ ಚಿಗುರಿಗಿಂತಲೂ ಕೆಂಪಗಿರುವ ಪಾದಗಳಿಂದಲೂ ಕೂಡಿದ ಸುಂದರಿಯೊಬ್ಬಳು ಒಂದು ಮರದಡಿಯಲ್ಲಿ ವನದೇವತೆಯೋ ಎಂಬಂತೆ ನಿಂತಿದ್ದಳು.) ಅವಳ ಸೌಂದರ್ಯವನ್ನು ಕಂಡ ನನೆಯಂಬನಿಗೆ ಅವಳು

ಭೂಮಿಯವಳಾಗಿರದೆ ಸ್ವರ್ಗದವಳಾಗಿರಬೇಕು ಎನ್ನಿಸುತ್ತದೆ. ಅವಳನ್ನು ಕಂಡು ರಾಜನು ಅವಳ ವಿಚಾರವೆಲ್ಲವನ್ನೂ ತಿಳಿಸಬೇಕೆಂದು ಕೇಳಿದಾಗ ಆ ಸುಂದರಿಯು ತನ್ನ ಪೂರ್ವಕಥೆಯನ್ನು ಈ ರೀತಿ ಹೇಳಲು ತೊಡಗುತ್ತಾಳೆ.

ಕಂಪಿನ ಪೊಳಲು ಎಂಬುದೊಂದು ಬೀಡು, ಅದರ ರಾಜ ಕರ್ವುರವಿಲ್ಲ, ಇಚ್ಚೆಗಾರ್ತಿ ಅವನ ಹೆಂಡತಿ. ಅವಳಾದರೋ ಸುರಸುಂದರಿ.

ಅವಳ ಮೊಗದಂತೆ ಮೆಯ್ಸಿರಿ
ಸವನಿಸದೆನಗೆಂದು ಕಂದನೆರ್ದೆಯೊಳ್ ತಾಳ್ದಂ
ಹಿವಗದಿರನೆಂದೊಡೆ ಇನ್ನುಳಿ
ದವರೇನಂ ಪೊಗಟಲಾರ್ಪರಾಕೆಯ ಮೊಗಮಂ (ಕಬ್ಬಿ ಕಾ. ೯೭)

(ಅವಳಂತಹ ಮುಖಕಾಂತಿಯು ತನಗೂ ಉಂಟಾಗದೆಂದು ಚಂದ್ರನೇ ತನ್ನಲ್ಲಿ ಕಪ್ಪುಕಲೆಯನ್ನಿಟ್ಟುಕೊಂಡನೆಂದ ಮೇಲೆ ಉಳಿದವರು ಅವಳ ಮುಖವನ್ನು ವರ್ಣಿಸಲು ಸಾಧ್ಯವೇ?) ಅವರಿಬ್ಬರೂ ಅತ್ಯಂತ ಅನ್ಯೋನ್ಯತೆಯಿಂದ ಬಾಳುತ್ತಿರುತ್ತಾರೆ. ಒಂದು ದಿನ ಅಸ್ಥಾನಕ್ಕೆ ತಂಬೆಲರು ಜೊನ್ನಮನುಣ್ಬ ಪಕ್ಕಿ (ಬೆಳದಿಂಗಳನ್ನು ಕುಡಿಯುವ ಹಕ್ಕಿ)ಯೆಂಬ ದೂತಿಯೊಬ್ಬಳನ್ನು ಕರೆತರುತ್ತಾನೆ. ಅವಳು ರಾಜನಿಗೆ ಕಾಣಿಕೆಗಳನ್ನಿತ್ತು ಈ ರೀತಿ ಬಿನ್ನವಿಸುತ್ತಾಳೆ:

ನಿನಗೆಂದುಂ ತಲೆವಾಗದ
ನಿನಗಳ್ಕದ ನಿನ್ನ ವೇಳೆಗಾಯದ ಪಿರಿದುಂ
ನಿನಗೆ ಬೆಸಕುಯ್ದು ಬಾಟದ
ನಿನಿಗೋಡದ ಪಗೆವರೆಂಬರಿಲ್ಲಿಂದುವರಂ (ಕಬ್ಬಿ ಕಾ. ೧೧೪)

(ನಿನಗೆ ಬಾಗದ ಹೆದರದ ಸೇವಕರಾಗದ ನಿನ್ನ ಅಪ್ಪಣೆಯನ್ನು ಪಾಲಿಸದ ನಿನ್ನನ್ನು ಕಂಡರೆ ಹೆದರದ ಶತ್ರುಗಳೇ ಇದುವರೆಗೆ ನಿನಗಿರಲಿಲ್ಲ.) ಆದರೆ ಈಗ ಶಿವನೆಂಬ ಗೊರವನು ಮಂಜುಬೆಟ್ಟವನ್ನೇ ಅವಾಸವನ್ನಾಗಿ ಮಾಡಿಕೊಂಡು ಸನ್ಯಾಸಿಗಳನ್ನೂ ಪ್ರೇತಗಳನ್ನೂ ಪರಿವಾರವನ್ನಾಗಿ ಮಡಿಕೊಂಡು ನಿಮ್ಮನ್ನು ಲಕ್ಷಿಸದೆ ಮೆರೆದಾಡುತ್ತಿದ್ದಾನೆ: ಅವನು ಕಳೆದ ರಾತ್ರಿ ಯುದ್ಧಮಾಡಿ 'ಪೆರೆಯಂ ಬೀರದಿನಾ ಗೊರವನೆಯ್ದೆ ಬಾಟ್ಟಿಲೆವಿಡಿದಂ' (ಚಂದ್ರನನ್ನು ಸಜೀವವಾಗಿ ಸೆರೆಹಿಡಿದಿದ್ದಾನೆ.) ಅದಕ್ಕೆ ತಕ್ಕದ್ದನ್ನು ನೀವೇ ಬಲ್ಲಿರಿ ಎಂದು ಹೇಳುತ್ತಾಳೆ.

ಇದನ್ನು ಕೇಳಿದ ರಾಜನಿಗೆ ಕೋಪ ಮೇರೆ ಮೀರುತ್ತದೆ. ಕೋಪಾಟೋಪದಿಂದ ಗರ್ಜಿಸಿ ಕೊನೆಗೆ–

ಎನಗಂ ಮಾರಿಗಮಿದಿರಾಂ
ಪನದಾವಂ? ನಡೆದು ಪೋಗಿ ಬೇಗದೆ ಮುಕ್ಕ
ಣ್ಣನನಿಕ್ಕಿ ಮೆಟ್ಟಿ ಬಿಡೆ ತೋ
ಟ್ಟನೆ ಜಡೆಯಂ ಕಿಟ್ತು ಬಟಿಯ ಪೆಜಿಯಂ ತರ್ಪೆಂ (ಕಬ್ಬಿ ಕಾ. ೧೨೧)

(ನನ್ನನ್ನೂ ಮಾರಿಯನ್ನೂ ಎದುರಿಸುವವರಾರಿದ್ದಾರೆ? ಈಗಲೇ ಹೋಗಿ ಮುಕ್ಕಣ್ಣ

ನನ್ನು ಇಕ್ಕಿಮೆಟ್ಟಿ ಅವನ ಜಡೆಯನ್ನು ಕಿತ್ತು ಚಂದ್ರನನ್ನು ಕರೆ ತರುತ್ತೇನೆ) ಎಂದು ಹೊರಡಲನುವಾಗುತ್ತಾನೆ. ಆದರೆ ವಸಂತನು ಬಂದು ಮೊದಲು ಶಿವನೆಡೆಗೆ ಸಂಧಾನಕ್ಕಾಗಿ ದೂತನೊಬ್ಬನನ್ನು ಕಳಿಸಬೇಕೆಂದೂ ಅದು ವಿಫಲವಾದರೆ ಯುದ್ಧಕ್ಕೆ ಹೊರಡಬಹುದೆಂದೂ ಸಲಹೆಯಿತ್ತಾಗ ದೊರೆಯು ಒಪ್ಪಿ ತಂಗಾಳಿಯನ್ನು ಆ ಕಾರ್ಯಕ್ಕಾಗಿ ನೇಮಿಸುತ್ತಾನೆ. ಅದರಂತೆಯೇ ಅವನು ಶಿವನೆಡೆಗೆ ಬಂದು ನನೆವಿಲ್ಲನ ವೈಭವಾಡಂಬರಗಳನ್ನೂ ಶೌರ್ಯಪರಾಕ್ರಮಗಳನ್ನೂ ವರ್ಣಿಸಿ–

ಪೊಡವಿಯೊಳ್ ಇಂತಾತನವೊಲ್
ಕಡುಬಲ್ಲಿದರಿಲ್ಲ, ನಿಮ್ಮೊಳಾತಂ ಕೆಳೆಗೊಂ
ಡೊಡೆ ತೀರದುದಿನಿತಿಲ್ಲೀ
ಗಡೆ ಬಿಡುವುದು ಪೆಱಿಯ ಸೆಱಿಯನಿದು ಲೇಸಲ್ತೇ (ಕಬ್ಬಿ ಕಾ. ೧೩೯)

(ಈ ಜಗತ್ತಿನಲ್ಲಿ ಆತನ ಹಾಗೆ ವೀರರಾದವರು ಇಲ್ಲ. ನಿಮ್ಮೊಡನೆ ಆತನು ಗೆಳೆತನ ವನ್ನು ಬಯಸುವುದು ನಿಮ್ಮ ಪುಣ್ಯ. ಆದ್ದರಿಂದ ಚಂದ್ರನನ್ನು ಸೆರೆಯಿಂದ ಬಿಡಿಸಿ) ಎಂದು ಹೇಳುತ್ತಾನೆ. ಅದನ್ನು ಕೇಳಿ ಕೋಪವುಂಟಾದರೂ ಅದನ್ನು ತೋರಗೊಡದೆ ಶಿವನು 'ರೂಪಿಲ್ಲದ, ಕಬ್ಬು–ಹೂಗಳ ಬಿಲ್ಲು–ಬಾಣಗಳನ್ನುಳ್ಳ ನಿಮ್ಮ ಯಜಮಾನನು ಯಾವ ಮಹಾಶೂರ' ಎಂದು ಹೇಳಿ

ಪಿರಿದುಂ ಮಾತಿನೊಳೇನೈ
ಸರಲಿಂಗೆ ಪೊಡರ್ಪಿನೇೞ್ಗೆಯುಂಟಾದೊಡೆ ಚ
ಚ್ಚರದಿಂದೆತ್ತಿಸಿ ತಂದು ಇ
ರ್ವರ ಬಲ್ಪಂ ಬೞಿಕ್ಕೆ ನೋಡು ಕಾಳೆಗದೊಳ್ (ಕಬ್ಬಿ ಕಾ. ೧೪೫)

(ಹೆಚ್ಚಿಗೆ ಮಾತಿನಿಂದೇನು? ನಿಮ್ಮವನ ಬಾಣಕ್ಕೆ ಪ್ರತಾಪವಿರುವುದಾದರೆ ಅವನನ್ನು ಯುದ್ಧಕ್ಕೆ ಕರೆತಂದು ಯಾರು ಹೆಚ್ಚು ಬಲಿಷ್ಠರೋ ನೀನೇ ನೋಡು) ಎಂದು ಕೊನೆಯ ತೀರ್ಮಾನವನ್ನು ಹೇಳುತ್ತಾನೆ. ಈ ವಿಷಯವನ್ನು ತಂಗಾಳಿಯಿಂದ ತಿಳಿದ ನನೆವಿಲ್ಲನು–

ಅದಟನಳುರ್ಕೆಯಂ ಕಿಡಿಸಿ ಬಿಂಗಮನೞ್ಗಿಸಿ ಎನ್ನ ಕೋಲ್ಗಳಿಂ
ಸದೆದು ಅರೆವೆಣ್ಣನಂ ಬಿಡದೆ ಮಾಡಿ ಕಡಂಗಿ ನೆಲಂಗಳೊಳ್ ಸಮಂ
ತೊದವಿಸಿ ಪೆರ್ಮೆಯಂ ಸೆಳೆದು ಬಲ್ಲೆಯನಿಟ್ಟುಳಿಗೊಂಡು ಬೇಗದಿಂ
ಕದಕದಪಂ ತೊಡರ್ಚಿಯೆಳೆದೇರನನೋಡಿಪೆನೆಂದು ಪೂಸರಂ (ಕಬ್ಬಿ ಕಾ. ೧೫೩)

(ಅವನ ಪರಾಕ್ರಮವನ್ನು ತಗ್ಗಿಸಿ ಬಿಂಕವನ್ನು ನಾಶಮಾಡಿ ನನ್ನ ಬಾಣಗಳ ಹೊಡೆತದಿಂದ ಅವನ್ನು ಅರೆವೆಣ್ಣನನ್ನಾಗಿ ಮಾಡುತ್ತೇನೆ, ಅವನ ಹೆಮ್ಮೆಯನ್ನು ಕಸಿದುಕೊಂಡು ಶಿವನನ್ನು ಕೋಟಲೆಗೊಳಿಸುತ್ತೇನೆ) ಎಂದ ಆರ್ಭಟಿಸಿ ಯುದ್ಧಕ್ಕೆ ಸಿದ್ದನಾಗುತ್ತಾನೆ.

ನನೆವಿಲ್ಲನು ಯುದ್ಧಕ್ಕೆ ಸಿದ್ಧನಾದ. ಅವನೊಡನೆ ಹೊರಡಲು ವಸಂತನು ಒಂದು ಪಡೆಯನ್ನು ತಯಾರುಮಾಡಿದ :

ಅರಗಿಳಿವಿಂಡು ವಾರುವದ ಮೋಹರ, ಆಱಡಿವಿಂಡು ಬಿಲ್ಲ ಬೀ
ರರ ಪಡೆ, ಕೊಂಚೆವಿಂಡು ಪಲವಡ್ಡಣದೊಡ್ಡು, ಒಳ್ವಕ್ಕಿವಿಂಡು ಮೆ
ಯ್ವೆರಸುವ ಕೊಂತಗಾಱರ್ ಅಣಿಯಾಗಿರೆ ಬಂದು ಬಸಂತನೊಲ್ದು ಸಂ
ವರಣೆಯನೆಯ್ದೆ ತೋಱಿ ತಲೆದೂಗಿಸಿದಂ ನೆನೆವಿಲ್ಲ ಬೀರನಾ (ಕಬ್ಬಿ ಕಾ. ೧೫೭)

(ರಾಜಗಿಳಿಗಳೇ ಕುದರೆಯ ಪಡೆ, ದುಂಬಿಗಳೇ ಬಿಲ್ವೀರರು, ಕ್ರೌಂಚಪಕ್ಷಿಗಳು ಗುರಾಣಿಯೋಧರು, ಹಕ್ಕಿಗಳ ಸಮೂಹವು ಭರ್ಜಿಯನ್ನು ಹಿಡಿದ ಭಟರು ಹೀಗೆ ಪಡೆಯನ್ನು ಸಿದ್ಧಪಡಿಸಿದ ವಸಂತನು ನನೆವಿಲ್ಲನ ಮೆಚ್ಚಿಕೆಗೆ ಪಾತ್ರವಾದನು.) ಅವರ ಜೊತೆ ನನೆವಿಲ್ಲನು ಯುದ್ಧಕ್ಕಾಗಿ ಹೊರಡುತ್ತಾನೆ. ದಾರಿಯಲ್ಲಿ ಒಂದೆಡೆ ತಾನು ಬಂದರೂ ವಿಚಲಿತರಾಗದೆ ನಿಂತ ಸವಣರನ್ನು ಕಂಡು ಕೋಪಗೊಂಡ ನನೆವಿಲ್ಲನನ್ನು ಕಂಡ ವಸಂತನು ಅವನನ್ನು ತಡೆದು ಅರಿಷಡ್ವರ್ಗಗಳನ್ನು ಗೆದ್ದು ಸ್ಥಿರಮನಸ್ಸಿನಿಂದ ಕೂಡಿರುವ ಸವಣರ (ಜೈನ ಸನ್ಯಾಸಿ) ಮೇಲೆ ಕೈ ಮಾಡುವುದರ ಬದಲು ಶಿವನ ಮೇಲೆ ನಿನ್ನ ಪರಾಕ್ರಮವನ್ನು ತೋರಿಸು ಎಂದು ಹೇಳುತ್ತಾನೆ. ಇದನ್ನು ಕೇಳಿ ಹೆದರಿದ ರಾಜನು–

ಉಱದಱಲಿಂದಮಾ ತವಸಿಯಂ ಮುಳಿದೆಚ್ಚೊಡೆ ಕರ್ವುವಿಲ್ಲು ತಾಂ
ಮುಱಿಯದೆ, ಪೂವಿನಂಬು ಕರಿಕೇಟದೆ, ತುಂಬಿಯ ನಾರಿ ಬೇಗದಿಂ
ಪಱಿಯದೆ, ತನ್ನ ನಚ್ಚಿನೆಲರೊಯ್ಯನೆ ಜಾಱದೆ, ಬಂದ ಮಾವು ಬೀ
ತೊಱಗದೆ, ಗಂಡುಗೋಗಿಲೆಯ ಸೋರ್ಕಳಸೋಱದೆ ಸೈತೆ ಪೋಕಮೆ (ಕಬ್ಬಿ ಕಾ ೧೮೧)

(ನನ್ನೆದೆಯ ಕಿಚ್ಚಿನಿಂದಾಗಿ ಈ ತಾಪಸಿಗಳ ಮೇಲೆ ಕೈ ಮಾಡಿದರೆ ತನ್ನ ಕಬ್ಬಿನ ಬಿಲ್ಲು ಮುರಿಯುದಿರುತ್ತದೆಯೇ, ಹೂವಿನ ಬಾಣವು ಸುಡದಿರುತ್ತದೆಯೇ, ದುಂಬಿಗಳಿಂದ ಮಾಡಿದ ಬಿಲ್ಲಿನ ದಾರ ಹರಿಯದಿರುತ್ತದೆಯೇ, ತನ್ನ ನಚ್ಚಿನ ತಂಗಾಳಿ ಜಾರದಿರುತ್ತದೆಯೇ, ಮಾವು ಒಣಗದೇ, ಕೋಗಿಲೆಯ ದನಿ ಇಂಗಿ ಹೋಗದೇ) ಎಂದು ಅವರಿಗೆ ವಂದಿಸಿ ಮುಂದೆ ಹೋಗುತ್ತಾನೆ. ಬೆಳ್ಳಿ ಬೆಟ್ಟಕ್ಕೆ ಸಮಾನವೆನ್ನಿಸುವಂತಿದ್ದ ರನ್ನಗಲ್ಲೆಂಬ ಬೆಟ್ಟದಲ್ಲಿ ನನಗಣೆಯನ ಸೈನ್ಯವು ಬೀಡುಬಿಡುತ್ತದೆ.

ಪೂಗಣೆಯನ ಈ ಯುದ್ಧಯಾತ್ರೆಯ ವಿಷಯವನ್ನು ಕೇಳಿ ಶಿವನು ಕೆಂಡಗೋಪಗೊಳ್ಳುತ್ತಾನೆ. ಶಿವನು ಹುಸಿಪಡೆಯೊಂದನ್ನು ಸೃಷ್ಟಿಸಿ ವೀರ ಭದ್ರನ ನೇತೃತ್ವದಲ್ಲಿ ಕಾಮನೊಡನೆ ಯುದ್ಧಮಾಡಲು ಕಳುಹಿಸುತ್ತಾನೆ. ಅ ಪಡೆಯಲ್ಲಿನ ಸೈನಿಕರು ಎಂತಹವರು!

ಕೆಲಬರ್ ಬಟ್ಟೆಯ ಬೆಟ್ಟನಾರ್ದೊಡೆದು ಸೆಂಡಾಡುತ್ತುಂ ಎಕ್ಕಕ್ಕೆಯಿಂ,
ಕೆಲಬರ್ ಸಿಂಗಮನೊತ್ತಿ ಪಲ್ಲಣಿಸಿ ಬಲ್ಪಿಂದೇಱುತುಂ ಬೇಗದಿಂ,
ಕೆಲಬರ್ ಪೆರ್ಚಿದ ನೇಸಱಿಂ ನೊಣೆಯುತುಂ, ಕೈನೀಡಿ ಮುನ್ನೀರ್ಗಳಂ
ಕೆಲಬರ್ ಪೀರ್ದರೆ ಮಾಡುತುಂ ನಡೆದರೆತ್ತಂ ಬೀರರಾ ಪಾಡಿಯೊಳ್ (ಕಬ್ಬಿ ಕಾ. ೧೯೫)

(ಆ ಸೈನ್ಯದಲ್ಲಿ ಕೆಲವರು ದಾರಿಯಲ್ಲಿನ ಬೆಟ್ಟವನ್ನೇ ಒಡೆದು ಚೆಂಡಾಡುತ್ತಿದ್ದರು, ಕೆಲವರು ಸಿಂಹಕ್ಕೆ ಹಲ್ಲಣವನ್ನು ಹಾಕಿ ಸವಾರಿಮಾಡುತ್ತಿದ್ದರು. ಮತ್ತೆ ಕೆಲವರು

ಸೂರ್ಯನನ್ನೇ ನುಂಗುತ್ತಿದ್ದರು, ಇನ್ನೂ ಕೆಲವರು ಸಮುದ್ರದ ನೀರನ್ನು ಹೀರಿ ಅದನ್ನು ಅರ್ಧಮಾಡುತ್ತಿದ್ದರು.) ಹೀಗೆ ಅಕಾಶವು ಈದಂತೆಯೂ ಭೂಮಿಯು ಬೆಸಲಾದಂತೆಯೂ ಸಮುದ್ರವು ಮೇರೆವರಿದಂತೆಯೂ ಸೈನ್ಯವು ಮುನ್ನುಗ್ಗಿತು. ಕಾಮನ ಮತ್ತು ಶಿವನ ಸೈನ್ಯಗಳು ತಾಗಿದ ರೀತಿಯಿದು:

ತಡಿಮೀಱೆ ಬಂದು ತೆಂಕಣ
ಬಡಗಣ ಕಡಲೊಂದನೊಂದು ತಾಗುವ ತೆಱದಿಂ
ಬಿಡೆ ಗಜಱೆ ಮಿಕ್ಕುಂ ತಕ್ಕಿಂ
ಪಡೆಯೆರಡು ದೆಸೆಗೆ ಮಸಗಿ ತಾಗಿದುದೆತ್ತಂ (ಕಬ್ಬಿ ಕಾ. ೨೦೫)

(ಉತ್ತರ-ದಕ್ಷಿಣದ ಸಮುದ್ರಗಳು ಮೇರೆವರಿದು ಒಂದಕ್ಕೊಂದು ತಾಗಿದಂತೆ ಎರಡೂ ಕಡೆಯ ಸೈನ್ಯಗಳು ಘರ್ಷಿಸುತ್ತವೆ.) ಎರಡೂ ಪಡೆಗಳ ನಡುವೆ ಘೋರಯುದ್ಧವು ನಡೆಯುತ್ತದೆ. ಕೊನೆಗೆ

ಕಟ್ಟಿದಿರೊಳಾಂತರಂ ನೆಱೆ
ನಿಟ್ಟಿಸಿ ನನೆವಿಲ್ಲ ಬಲ್ಲಹಂ ಮಾಱಣಿಯಂ
ನೆಟ್ಟನೆ ತೋಳ್ವಲದಿಂದೆ
ಟ್ಟಿದನ್, ಅವನಿದಿರೊಳಾವನುಂ ನಿಂದಪನೇ (ಕಬ್ಬಿ ಕಾ. ೨೨೪)

(ನನೆವಿಲ್ಲನು ಕಟ್ಟಿದಿರಾದ ಶತ್ರುಸೈನ್ಯವನ್ನು ತನ್ನ ತೋಳ್ಬಲದಿಂದ ಹಿಮ್ಮೆಟ್ಟಿಸಿದನು. ಅವನ ಎದುರಿನಲ್ಲಿ ಯಾರಾದರೂ ನಿಲ್ಲುವರೇ?) ಹೀಗೆ ವೀರಭದ್ರನನ್ನು ಸೋಲಿಸಿದ ಕಾಮನು ಮಂಜುಬೆಟ್ಟವನ್ನು ಮುಟ್ಟುತ್ತಾನೆ.

ಈಗ ಪ್ರಾರಂಭವಾಗುವುದು ಅಪರೂಪದ ಯುದ್ಧ, ಶಿವ-ಕಾಮರ ನಡುವೆ. ಆ ಯುದ್ಧವನ್ನು ನೋಡುವ ಸಲುವಾಗಿ ಸಗ್ಗಿಗರೆಲ್ಲರೂ ಆಕಾಶದಲ್ಲಿ ಸೇರುತ್ತಾರೆ. ಶಿವನ ಕಡೆಯ ಸೈನ್ಯವೆಲ್ಲ ನುಚ್ಚುನೂರಾಗುತ್ತದೆ. ಆದರೆ ಅದನ್ನು ಲೆಕ್ಕಿಸದ ಈಶನು ಬೆಳ್ಳಿಯ ಬೆಟ್ಟದಂತೆ ಹೆದರದೆ ಏಕಾಂಗಿಯಾಗಿ ಕಾಮನನ್ನೆದುರಿಸುತ್ತಾನೆ. ಅವನನ್ನು ಕಂಡು ಕಾಮನು ಗರ್ಜಿಸಿ

ಕಡುಪಿಂ ಪೂವಿನ ಕೋಲ್ಗಳ್
ಗಡಣಿಸಿ ಕವಿತಂದು ನಾಂಟುವಾಗಳ್ ನಿನ್ನೀ
ಜಡೆಯುಂ ತೊವಲುಂ ಪಾವಿನ
ತೊಡವುಂ ಲಾಗುಳಮುಂ ಅಡ್ಡಮೇಂ ಬಂದಪುವೇ? (ಕಬ್ಬಿ ಕಾ. ೨೩೧)

(ನನ್ನ ಪ್ರಬಲವಾದ ಹೂಬಾಣಗಳು ನಿನ್ನನ್ನು ಕವಿದು ನಾಟುವಾಗ ನಿನ್ನ ಜಡೆಯಾಗಲೀ ಚರ್ಮಾಂಬರವಾಗಲೀ ಹಾವಿನ ಆಭರಣವಾಗಲೀ ದಂಡವಾಗಲೀ ಅಡ್ಡ ಬಂದು ಕಾಪಾಡುತ್ತವೆಯೇ?) ಎಂದು ಹೇಳಿ ಈಗಲಾದರೂ ಚಂದ್ರನನ್ನು ಸೆರೆಯಿಂದ ಬಿಡು ಎಂದು ಎಚ್ಚರಿಸಿ ಹೂಬಾಣಗಳನ್ನು ಪ್ರಯೋಗಿಸುತ್ತಾನೆ. ಆ ಬಾಣಗಳು ಎಲ್ಲೆಡೆಯನ್ನೂ ಆವರಿಸಿ ತೊರೆಗಳು ಬೆಟ್ಟಗಳು ಹೊಲಗಳು ಆಕಾಶ ದಿಕ್ಕುಗಳು-ಎಲ್ಲವೂ ಹೂವಿನಿಂದ ಮಾಡಿದಂತೆ ಆದುವು. ಈ ಬಾಣಗಳು ಹಿಂದೆ

ಎಂತೆಂತಹ ಜಿತೇಂದ್ರಿಯರನ್ನೂ ದಿಕ್ಕುಗೆಡಿಸಿದ್ದವು! ಈಗಲೂ ಇವುಗಳು ನಾಟಿಕೊಂಡು ಧೀರರು ಗೋಳಿಡುತ್ತಾರೆ, ಬಲ್ಲಿದರು ಕೋಟಲೆಗೊಳ್ಳುತ್ತಾರೆ, ವೀರರು ಹೆದರಿ ಓಡುತ್ತಾರೆ. ಇಂತಹ ಹೂಬಾಣಗಳ ಹೊಡೆತವುಂಟಾದಾಗ

ಕಟ್ಟಾಳ್ಗಳೆನಿಪ ರಕ್ಕಸರ್
ಒಟ್ಟಜೆಗೆಟ್ಟಟಲೆ, ಸಗ್ಗಿಗರ್ ನೆಲನನೊಡಂ
ಬಟ್ಟರೆ, ಕಾಳೆಗದೆಡೆಯೊಳ್
ತೊಟ್ಟನೆ ಮಾದೇವಿಯರಸಂ ಅರೆವೆಣ್ಣಾದಂ (ಕಬ್ಬಿ ಕಾ. ೨೪೨)

(ಕಡು ಧೀರರೆನಿಸಿದ ರಾಕ್ಷಸರು ಧೈರ್ಯಗೆಟ್ಟರು, ಸಗ್ಗಿಗರು ನೆಲವನ್ನು ಸೇರಿದರು: ಆಗ ಎಲ್ಲೆಡೆಯೂ ಕಾಮಬಾಣಗಳು ನಾಟಿ ಶಿವನು ಅರೆವೆಣ್ಣಾದ.) ಇದರಿಂದ ಕೋಪ ಗೊಂಡ ಶಿವನು 'ದೊಡ್ಡವನೆಂಬ ಗೌರವವನ್ನೂ ತೋರಿಸದೆ ನನ್ನೊಡನೆ ಕಾದಿದೆ. ಆದ್ದರಿಂದ ನೀನು ನಿನ್ನ ಮನಃಪ್ರಿಯೆಯನ್ನು ಸೇರದೆ ಇತರರಿಗೆ ತಿಳಿಯದಂತೆ ಎಲ್ಲಿಯಾದರೂ ಮರೆಯಾಗಿರು' ಎಂದು ಶಾಪವನ್ನೀಯುತ್ತಾನೆ.

ಈ ಶಾಪದ ವಿಷಯವು ಬಸಂತನಿಂದ ಕಿವಿಗೆ ಬದ್ದ ತಕ್ಷಣವೇ ಇಚ್ಚೆಗಾರ್ತಿ ಮೂರ್ಛೆಹೋಗುತ್ತಾಳೆ. ವಿರಹಾಗ್ನಿಯಿಂದ ಕಣ್ಣೀರು ಬತ್ತುತ್ತದೆ. ಏಕಾವಳಿಯ ಮುತ್ತುಗಳೆಲ್ಲ ಹುರಿದ ಹಾಗಾಗುತ್ತವೆ. ಶ್ರೀಗಂಧದ ತಿಲಕವು ಕರಿಕಾಗುತ್ತದೆ. ಅನಂತರ ಮೂರ್ಛೆಯಿಂದೆಚ್ಚೆತ್ತು ತನ್ನ ದೇಹದ ಬೆಂಕಿಯನ್ನು ಹೋಗಲಾಡಿಸಿಕೊಳ್ಳಲು ಕೊಳದ ತಣ್ಣೀರು, ಮರಳದಿಣ್ಣೆ, ಚಿಗುರ ಹಾಸಿಗೆ, ಬಳ್ಳಿಯಮಂಟಪ–ಇವುಗಳನ್ನು ಪ್ರಯತ್ನಿಸಿ ವಿಫಲಳಾಗುತ್ತಾಳೆ, ಅನಂತರ ಎಲ್ಲೆಡೆಯೂ ಸುತ್ತಾಡಿ ಪ್ರಿಯನನ್ನು ಕಾಣದೆ

ತನಿವಣ್ಣಂ ಲಂಚಮೀವೆಂ ಪುರುಳಿ ನಿನಗೆ, ಪೂಗೊಂಚಲಂ ಬೇಗದಿಂದಂ
ನಿನಗೀವೆಂ ತುಂಬಿ, ಕೆಂದಾವರೆಯ ಮಿಸುಪ ಮೆಲ್ಮೊಗ್ಗೆಯಂ ಮಾಣದೆಂದುಂ
ನಿನಗೀವೆನ್ ಅಂಚೆ, ಕಂಪಂ ನಿನಗೆ ಸಲಿಸುವೆಂ ಕೂಡೆ ತಣ್ಗಾಳಿ, ಎನ್ನೋ
ಪನನ್ ಇಂದಾರಯ್ದುತಂದೆನ್ನೊಡನಿರಿಸಿದೊಡೆ ಎಂದಾಕೆ ಮಾತಾಡುತಿರ್ಪಳ್

(ಕಬ್ಬಿ ಕಾ. ೨೪೯)

(ನನ್ನ ಪ್ರಿಯನನ್ನು ನನಗೆ ಮರಳಿಸುವುದಾದರೆ ಗಿಳಿಯೇ ನಿನಗೆ ಸಿಹಿಯಾದ ಹಣ್ಣನ್ನು ಕೊಡುತ್ತೇನೆ: ದುಂಬಿಯೇ ಹೂಗೊಂಚಲನ್ನು ನಿನಗೆ ನೀಡುತ್ತೇನೆ: ಎಲೆ ಹಂಸವೇ ನಿನಗೆ ಕೆಂದಾವರೆಯ ಮೊಗ್ಗನ್ನು ತಂದೀಯುತ್ತೇನೆ: ತಂಗಾಳಿ ನಿನಗೆ ಕಂಪನ್ನು ಕೊಡಿಸುತ್ತೇನೆ) ಎಂದು ಪ್ರಲಾಪಿಸುತ್ತಾಳೆ. ಹೀಗೆ ಕತೆಯನ್ನು ಹೇಳಿದ ಆ ಅಪ್ಸರಸ್ತ್ರೀಯು, ತಲೆಮರೆಸಿಕೊಂಡಿದ್ದ ಕಾಮನೇ ನನೆಯಂಬನೆಂದು ಹೇಳಿ ತನ್ನ ಮಾತನ್ನು ಕೇಳಿ ಅವನ ಶಾಪವು ಹರಿಯಿತೆಂದು ಹಿಂದಿನ ಜೀವನವು ಅವನಿಗೆ ಮತ್ತೆ ದೊರೆಯುವುದೆಂದೂ ಹೇಳಿ ಮಾಯವಾಗುತ್ತಾಳೆ.

ಈ ಅಪ್ಸರೆಯು ಹೇಳಿದ ಕತೆಯನ್ನು ಕೇಳುತ್ತಿದ್ದ ಗಿಳಿಯೊಂದು ಈ ವಿಷಯವನ್ನು ವಸಂತನಿಗೆ ತಿಳಿಸುತ್ತದೆ, ಅವನ ಮೂಲಕ ಇಚ್ಚೆಗಾರ್ತಿಯು ಇದನ್ನು ತಿಳಿದು ಬಿಸಿಲಿನಲ್ಲಿ ಬೆಂದವನು ತಂಪು ಕೊಳವನ್ನು ಹೊಕ್ಕಂತೆ, ಬಡವನಿಗೆ ನಿಧಿಯು

ದೊರೆತಂತೆ ಹರ್ಷಗೊಂಡ ಪುಳಕಗೊಳ್ಳುತ್ತಾಳೆ, ಊರಿನವರೆಲ್ಲರೂ ಸೇರಿ

ಪಡೆಯೆಲ್ಲಂ ನಡೆ ನೋಡಿ ಮೆಚ್ಚೆ ಬಿದಿಯಂ ನಾಣೋಡೆ ಬೆಂಕೊಂಡವಾ
ಕಡಲೊಳ್ ಪಟ್ಟನನಿಕ್ಕಿ ಮೆಟ್ಟಿದದಟಂ, ಮುಕ್ಕಣ್ಣನಂ ಗೆಲ್ದನೆ
ಮ್ಮೊಡೆಯಂ ಬಂದಪನೀಗಳಿಂತೆ ನಲವಿಂದಂ ಬಳ್ಳಿ ಮಾಂಡಗಳೊಳ್
ಗುಡಿಯಂ ಬೇಗನೆ ಕಟ್ಟಿಮೆಂದು ಪಡೆವಳ್ಳರ್ ಸುತ್ತಲುಂ ಸಾಱಿದರ್

(ಕಬ್ಬಿ ಕಾ. ೨೫೧)

(ಸೈನ್ಯವು ಮೆಚ್ಚುವಂತೆ ಬ್ರಹ್ಮನನ್ನು ಬೆನ್ನಟ್ಟಿದ, ವಿಷ್ಣುವನ್ನು ಮೆಟ್ಟಿ ಇಕ್ಕಿದ, ಶಿವನನ್ನು ಗೆದ್ದ ರಾಜನು ಬರುವನೆಂಬ ಸಂತೋಷದಿಂದ ಅವನನ್ನು ಸ್ವಾಗತಿಸಲು ಸಿಂಗರಿಸ ಬೇಕೆಂದು ಊರಲ್ಲೆಲ್ಲ ಸಾರಿಸುತ್ತಾರೆ. ಇಚ್ಚೆಗಾರ್ತಿಯು ಪರಿವಾರದೊಡನೆ ಸ್ವಾಗತಿಸು ತ್ತಾಳೆ. ಜನರೆಲ್ಲರೂ ಸಂತಸಪಡುತ್ತಾರೆ.

'ಕಬ್ಬಿಗರ ಕಾವ'ವು ಈ ರೀತಿ ಸುಮಾರು ೨೭೦ ಪದ್ಯಗಳಲ್ಲಿ ತುಂಬ ಸರಳ ವಾದ ಕತೆಯೊಂದನ್ನು ನೇರವಾಗಿ ಹೇಳುವ ಒಂದು ಖಂಡಕಾವ್ಯವಾಗಿದೆ. ಇದರಲ್ಲಿ ಮಹಾ ಕಾವ್ಯಕ್ಕಿರಬೇಕಾದ ಘನವಾದ ವಸ್ತುವಾಗಲೀ ವಿಸ್ತಾರವಾಗಲೀ ಗತ್ತಾಗಲೀ ಇಲ್ಲ. ಇಲ್ಲಿ ಹೊರನೋಟಕ್ಕೆ ವೀರರಸವಿರುವಂತೆ ಕಂಡರೂ ಅದು ಕಾಮದ ಬಲ್ಮೆಯನ್ನು ಸೂಚಿಸುತ್ತದೆಯೇ ಹೊರತು ದೇಹ ಬಲವನ್ನಲ್ಲ. ಹೀಗಾಗಿ ಇದೊಂದು ಲಲಿತಕಾವ್ಯ. ಅಂಡಯ್ಯನು ಇದನ್ನು ಅಚ್ಚಗನ್ನಡದಲ್ಲಿ ವಿಶೇಷ ವರ್ಣನೆಗಳನ್ನು ತುರುಕದೆ, ನೇರವಾಗಿ ಹೇಳಿದ್ದಾನೆ.

ಹಿಂದಿನ ಪುರಾಣಗಳಲ್ಲಿ ಬರುವ ಅರ್ಧನಾರೀಶ್ವರ ಕಲ್ಪನೆಯಲ್ಲಿ ಹುದುಗಿರುವ ಗಂಡು-ಹೆಣ್ಣಿನ ಅನ್ಯೋನ್ಯತೆಯನ್ನು ಗುರುತಿಸಿದ ಆಂಡಯ್ಯನು ಕಾಮವು ಆದಮ್ಯ ಶಕ್ತಿಯೆಂಬುದನ್ನು ಕಂಡುಕೊಂಡಿದ್ದಾನೆ. ಆದ್ದರಿಂದಲೇ ಶಿವನನ್ನು ಕಾಮನು ಗೆಲ್ಲುತ್ತಾನೆಂದು ಹೇಳಿ ಜೀವನದ ಒಂದು ಪ್ರಬಲ ಶಕ್ತಿಯ ಚಿತ್ರಣವನ್ನು ಈ ಕಾವ್ಯದಲ್ಲಿ ನೀಡುತ್ತಾನೆ. ಜೈನಪುರಾಣಗಳಲ್ಲಿ ಕಾಮನಿಗೆ ಶ್ರೇಷ್ಠಸ್ಥಾನವಿರುವುದರಿಂದ ಅವನ ಶ್ರೇಷ್ಠತೆಯನ್ನು ಸೂಚಿಸುವುದೂ, ಅವನನ್ನು ಗೆದ್ದ ಜಿನನ ಪಾರಮ್ಯವನ್ನು ಹೇಳು ವುದೂ ಈ ಕವಿಯ ಒಂದು ಉದ್ದೇಶವೆಂಬುದರಲ್ಲಿ ಸಂದೇಹವಿಲ್ಲ. ಆದರೆ ಮಾನವ ಜೀವನದಲ್ಲಿನ ಕಾಮಗ ಮಹತ್ವವನ್ನು ತಿಳಿಸುವುದು ಕವಿಯ ಮತ್ತೊಂದು ಉದ್ದೇಶ; ವಿರಕ್ತಿಯ ಸಂಕೇತವಾದ ಶಿವನನ್ನು ಕಾಮನು ಗೆದ್ದನೆಂಬ ಕಲ್ಪನೆಯಲ್ಲಿಯೇ ಇದು ಅಡಗಿದೆ. ಅದಕ್ಕೆ ಹೊಂದಿಕೊಳ್ಳುವಂತೆ ಇಲ್ಲಿನ ಪಾತ್ರಗಳೆಲ್ಲ (ನನೆಯಂಬ, ಇಚ್ಚೆ ಗಾರ್ತಿ, ನಗೆಗಾರ, ವಸಂತ, ಜೊನ್ನವಕ್ಕಿ ಇತ್ಯಾದಿ) ಮನೋಭಾವ ಸೂಚಕವಾಗಿದೆ. ಆದರೆ ಈ ಸುಂದರವಾದ ವಸ್ತುವು ನೇರವಾಗಿ ಹರಿದಿರುವುದರಿಂದಾಗಿ ಕಾವ್ಯದಲ್ಲಿ ಧ್ವನಿಶಕ್ತಿಯೇ ಉಳಿದಿಲ್ಲ.

ಆಂಡಯ್ಯನ ಶೈಲಿ ತುಂಬ ಸರಳವೂ ಲಲಿತವೂ ಆದುದು. ಅಚ್ಚಗನ್ನಡದ ವ್ರತವನ್ನು ತೊಟ್ಟು, ಈ ಕಾವ್ಯದಲ್ಲಿ ತನ್ನ ಆಶ್ರಯದಾತನ ಕತೆಯನ್ನೂ ಹೆಣೆದು, ಸ್ವತಂತ್ರವಾದ ಕತೆಯನ್ನು ಪೌರಾಣಿಕ ಹಿನ್ನೆಲೆಯಲ್ಲಿ ಸೃಷ್ಟಿಸಿಕೊಂಡ ಆಂಡಯ್ಯ

ಕೊಂಚಮಟ್ಟಿಗೆ ಸ್ವಂತಿಕೆಯಿಂದ ಕೂಡಿದ ಕವಿ. ಕನ್ನಡ ಭಾಷೆಯ ಜೊತೆಗೆ ಕನ್ನಡನಾಡಿನ ಬಗ್ಗೆಯೂ ಅವನದು ವೀರಾಭಿಮಾನ:

ಪಲವುಂ ನಾಲಗೆಯುಳ್ಳವಂ ಬಗೆವೊಡೆಂದುಂ ಬಣ್ಣಿಸಲ್ಕಾಱನಾ
ನೆಲನಂ ಮತ್ತಿನ ಮಾನಿಸರ್ ಪೊಗಟಲೇನಂ ಬಲ್ಲರ್ ಎಂಬೊಂದು ಬ
ಲ್ಲುಲಿಯಂ ನೆಟ್ಟನೆ ತಾಳ್ದು ಕನ್ನಡಮೆನಿಪ್ಪಾ ನಾಡು ಚೆಲ್ವಾಯ್ತು ಮೆ
ಲ್ಲೆಲರಿಂ ಪೂತ ಕೊಳಂಗಳಿಂ ಕೆಱೆಗಳಿಂ ಕಾಲೂರ್ಗಳಿಂ ಕೆಯ್ಗಳಿಂ

(ಕಬ್ಬಿ ಕಾ. ೧೮)

(ಹಲವು ನಾಲಗೆಗಳಿಂದ ಕೂಡಿದ ಆದಿಶೇಷನೂ ಹೊಗಳಲಾರನೆಂದ ಮೇಲೆ ಮಿಕ್ಕ ಮಾನವರು ಏನು ವರ್ಣಿಸಿಯಾರು ಎಂಬ ಘನತೆಯನ್ನು ಪಡೆದ ಕನ್ನಡನಾಡು ತಂಗಾಳಿಯಿಂದಲೂ ಹೂವಿನಿಂದ ತುಂಬಿದ ಕೊಳಗಳಿಂದಲೂ ಕೆರೆ ಕಾಲುವೆಗಳಿಂದಲೂ ಹೊಲಗಳಿಂದಲೂ ಕೂಡಿ ಸುಂದರವಾಗಿದೆ.) ಜೊತೆಗೆ ಅನೇಕ ತದ್ಭವ ಶಬ್ದಗಳನ್ನು ಸೃಷ್ಟಿಸಿ ಅಂಡಯ್ಯನು ಕನ್ನಡ ಭಾಷಾಭಂಡಾರಕ್ಕೆ ತನ್ನ ಕಾಣಿಕೆಯನ್ನು ಸಲ್ಲಿಸಿದ್ದಾನೆ. ತನ್ನ ಕಾಲದಲ್ಲಿ ಅನ್ಯಮತ ವಿಡಂಬನೆಯೇ ವಾತಾವರಣದಲ್ಲಿದ್ದರೂ ಈ ಕವಿಯು ಅಂಧಾಭಿಮಾನಿಯಾಗಿ ಬೇರೆಯ ಮತಗಳನ್ನು ಅವಾಚ್ಯವಾಗಿ ಬೈಯಲು ತೊಡಗದೆ ಸಂಯಮವನ್ನು ತೋರಿಸಿದ್ದಾನೆ. ಈ ಎಲ್ಲ ಕಾರಣಗಳಿಂದಾಗಿ ಅಂಡಯ್ಯನು ನಮ್ಮ ಸಾಹಿತ್ಯ ಚರಿತ್ರೆಯಲ್ಲಿ ತನ್ನದೇ ಆದ ಸ್ಥಾನವನ್ನು ಪಡೆಯುತ್ತಾನೆ. ಅವನ ಕೃತಿಯಾದ 'ಕಬ್ಬಿಗರ ಕಾವ'ವು "ಅತ್ಯುಜ್ವಲವಾದ ಕೃತಿಯೆನಿಸಿಕೊಳ್ಳದಿದ್ದರೂ ಚೊಕ್ಕವಾದ ಕಾವ್ಯವೆಂಬ ಬಿರುದಿಗೆ ಪಾತ್ರವಾಗಬಲ್ಲದು."[೧೨]

ಅಂಡಯ್ಯನ ವಿಶಿಷ್ಟತೆಯಾದ ಅಚ್ಚಗನ್ನಡ ಬಳಕೆಯ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕು. ಅವನ ಕಟ್ಟಾ ಕನ್ನಡದ ಅಭಿಮಾನವು ಆ ಕಾಲದ ಅತಿರೇಕವಾದ ಸಂಸ್ಕೃತ ವ್ಯಾಮೋಹಕ್ಕೆ ಪ್ರತಿಭಟನೆಯಾಗಿ ಬಂದು ವಾಸ್ತವತೆಯೆಡೆಗೆ ಜನರ ಗಮನವನ್ನು ಸೆಳೆಯಲು ಸಹಾಯಮಾಡಿರಬಹುದು; ಜೊತೆಗೆ ಮುಂದಿನ ಕವಿಗಳ ಭಾಷಾಧೋರಣೆಯ ಮೇಲೆ ಪ್ರಭಾವವನ್ನೂ ಬೀರಿರಬಹುದು. ಆದರೆ ಅವನು ಕನ್ನಡದಲ್ಲಿ ಬಳಕೆಯಲ್ಲಿದ್ದ ಅತ್ಯಂತ ಸಾಮಾನ್ಯ ಸಂಸ್ಕೃತ ಶಬ್ದಗಳಿಗೂ ತದ್ಭವಗಳನ್ನು ಬಳಸಿದುದು ಎಷ್ಟೋ ವೇಳೆ ವಿಚಿತ್ರವಾಗಿ ಕಾಣುತ್ತದೆ, ಕೆಲವು ವೇಳೆ ಓದುಗನನ್ನು ಗೊಂದಲದಲ್ಲಿಯೂ ಕೆಡವಬಹುದು.

ಟಿಪ್ಪಣಿಗಳು

೧. ತೀ.ನಂ. ಶ್ರೀಕಂಠಯ್ಯ : ಪಂಪ (೧೯೪೩) ಪು. ೧೪

೨. ಅದೇ. ಪು. ೩೧

೩. ತೀ.ನಂ. ಶ್ರೀಕಂಠಯ್ಯ: ಪಂಪ (೧೯೪೩) ಪು. ೩೬-೭

೪. ಬಿ.ಎಂ. ಶ್ರೀಕಂಠಯ್ಯ: ಕನ್ನಡ ಕೈಪಿಡಿ, ಸಂಪುಟ ೨(೧೯೭೦) ಪು. ೭೮

೫. ಡಿ.ಎಲ್. ನರಸಿಂಹಚಾರ್ : ಪೊನ್ನನೂ ಕಾಳಿದಾಸನೂ (ಪೀಠಿಕೆಗಳು, ಲೇಖನಗಳು, ೧೯೭೧) ಪು. ೨೯೭

೬. ಎಂ.ಮರಿಯಪ್ಪ ಭಟ್ಟ: ಸಂಕ್ಷಿಪ್ತ ಕನ್ನಡ ಸಾಹಿತ್ಯ ಚರಿತ್ರೆ (೧೯೭೨) ಪು. ೪೯-೫೦

೭. ಬಿ. ಎಂ. ಶ್ರೀಕಂಠಯ್ಯ: ಕನ್ನಡ ಕೈಪಿಡಿ, ಸಂ, ೨ (೧೯೭೦) ಪು. ೧೪೯-೫೦

೮. ಸುಕುಮಾರ ಚರಿತಂ [ಸಂ. ಡಿ. ಎಲ್. ನರಸಿಂಹಚಾರ್, ಟಿ. ಎಸ್. ಶಾಮ ರಾವ್ (೧೯೫೪) ಪೀಠಿಕೆ]

೯. ಎಂ. ಚಿದಾನಂದಮೂರ್ತಿ: ನಯಸೇನ, ಕನ್ನಡದ ಒಬ್ಬ ಜಾನಪದ ಚಂಪೂ ಕವಿ (ಸಂಶೋಧನ ತರಂಗ ೨, ೧೯೭೦) ಪು. ೯೨

೧೦. ಜಿ. ವೆಂಕಟಸುಬ್ಬಯ್ಯ : ನಯಸೇನ (೧೯೫೬) ಪು. ೫೯

೧೧. ಎನ್. ಅನಂತರಂಗಾಚಾರ್ : ನೇಮಿಚಂದ್ರ (೧೯೫೯) ಪು. ೪೦

೧೨. ದೇ. ಜವರೇಗೌಡ (ಸಂ) : ಕಬ್ಬಿಗರ ಕಾವಂ (೧೯೬೯) ಮುನ್ನುಡಿ, ಪು. ೭೩

ಬ್ರಾಹ್ಮಣ ಚಂಪೂ ಕವಿಗಳು

■

ಮೊದಲನೆಯ ನಾಗವರ್ಮ

ನಾಗವರ್ಮ ಎಂಬ ಹೆಸರಿನ ಕನ್ನಡ ಕವಿಗಳು ಇಬ್ಬರೇ ಮೂವರೇ ಎಂಬ ಬಗ್ಗೆ ವಿದ್ವಾಂಸರಲ್ಲಿ ಇನ್ನೂ ಜಿಜ್ಞಾಸೆಯಿದೆ. ಆದರೆ ಮೊದಲನೆಯ ನಾಗವರ್ಮ ನೆಂಬುವವನು 'ಛಂದೋಂಬುಧಿ' ಮತ್ತು 'ಕರ್ನಾಟಕ ಕಾದಂಬರಿ'ಗಳನ್ನು ಬರೆದವ ನೆಂದು ಸಾಮಾನ್ಯವಾದ ಅಭಿಪ್ರಾಯವಾಗಿದೆ. ಇವನು ಯಾವ ಕಾಲದಲ್ಲಿ ಜೀವಿಸಿದ್ದ ನೆಂಬುದರ ಬಗ್ಗೆಯೂ ಒಂದೇ ಅಭಿಪ್ರಾಯವಿಲ್ಲ: ಆದರೆ ಈ ಕವಿಯು ಹತ್ತನೇ ಶತಮಾನದ ಕೊನೆಯಲ್ಲಿಯೂ ಹನ್ನೊಂದನೇ ಶತಮಾನದ ಮೊದಲ ಭಾಗ ದಲ್ಲಿಯೂ ಜೀವಿಸಿದ್ದನೆಂದು ಹೇಳಬಹುದು. 'ಕರ್ನಾಟಕ ಕಾದಂಬರಿ'ಯ ಒಂದು ಪದ್ಯದಲ್ಲಿ ಚಂದ್ರನೆಂಬ ರಾಜನನ್ನು ತನ್ನ 'ಕೃತಿಪತಿ' (ಕಾವ್ಯದ ಒಡೆಯ) ಎಂದಿದ್ದಾನೆ. ಇವನು ನಾಗವರ್ಮನ ಪೋಷಕನಾಗಿದ್ದಿರಬೇಕು. ಕಾವ್ಯದ ನಾಯಕನಾದ ಚಂದ್ರಾಪೀಡನೆಂಬ ರಾಜಕುಮಾರನು ಚಂದ್ರವಂಶದವನಾದುದರಿಂದ ಕವಿಯು ತನ್ನ ಪೋಷಕನನ್ನು ಕಾವ್ಯನಾಯಕನೊಡನೆ ಸಮೀಕರಿಸಿ ಹೊಗಳಿರುವಂತೆ ಕಾಣುತ್ತದೆ. ಆದರೆ ಈ ಚಂದ್ರನೆಂಬ ರಾಜನು ತನ್ನ ಕೃತಿಯನ್ನು ಮೆಚ್ಚಿ ಕಾಳಿಂಗ, ಕಾಂಭೋಜ, ಬಾಹ್ಲೀಕ ಜಾತಿಯ ಕುದುರೆಗಳನ್ನು ಬಹುಮಾನವಾಗಿ ಕೊಟ್ಟನೆಂದು ಕವಿ ಹೇಳಿಕೊಳ್ಳು ತ್ತಾನೆ. (ಜಾತಿ ಕುದುರೆಗಳನ್ನು ಬಹುಮಾನವಾಗಿ ನೀಡಬೇಕಾದರೆ ಇವನು ಯೋಧನೂ ಆಗಿದ್ದರಬೇಕು.) 'ಕಾದಂಬರಿ' ಕಾವ್ಯದಲ್ಲಿ 'ತ್ರಿಭುವನ' 'ತ್ರೈಲೋಕ್ಯ', 'ಜಕದೇಕ', 'ವಿಕ್ರಮಾಂಕ' ಎಂಬ ಶಬ್ದಗಳು ಹೆಚ್ಚಾಗಿ ಬಳಕೆಗೊಂಡಿರುವುದರಿಂದ ಚಾಳುಕ್ಯ ಚಕ್ರವರ್ತಿಗಳ ಸಾಮಂತನಾಗಿದ್ದ ಕೊಲ್ಲಾಪುರ-ಕರ್ಹಾಡ ಪ್ರಾಂತ್ಯದಲ್ಲಿ ಆಳುತ್ತಿದ್ದ ಚಂದ್ರನೆಂಬುವನು ನಾಗವರ್ಮನ ಆಶ್ರಯದಾತನಾಗಿದ್ದನೆಂದು ಹೇಳ ಬಹುದು. ಆ ಕಾಲದಲ್ಲಿಯೇ ಧಾರಾಪುರದಲ್ಲಿ ಆಳುತ್ತಿದ್ದ ಭೋಜನೆಂಬುವವನೂ ಈ ಕವಿಯನ್ನು ಸನ್ಮಾನಿಸಿದನು.

ನಾಗವರ್ಮನು ತನ್ನನ್ನು 'ಬುಧಾಬ್ಜವನ ಕಳಹಂಸ'ನೆಂದು ಕರೆದುಕೊಂಡಿ ದ್ದಾನೆ. ಪ್ರಾಯಶಃ ಇದು ಅವನ ಬಿರುದು, ಅಲ್ಲದೆ 'ಕವಿರಾಜಹಂಸ' ಎಂಬ ಬಿರುದೂ ಇವನಗಿತ್ತು. ಇವನು ವೆಂಗಿಮಂಡಲದಲ್ಲಿನ ವೆಂಗಿಪಟು ಎಂಬ ಊರಿನವನು. ಅಲ್ಲಿ ಕೌಂಡಿನ್ಯ ಗೋತ್ರದ ವೆಣ್ಣಮಯ್ಯ ಮತ್ತು ಕೌಂಡಿಕಬ್ಬೆ ಎಂಬ ದಂಪತಿಗಳು ವಾಸಿಸುತ್ತಿದ್ದರು. ಇವರ ಮಗ ದಾಮಮಯ್ಯ, ಅವನ ಹೆಂಡತಿ ಕುಂದಕಬ್ಬೆ. ಇವರ

ಹಿರಿಯ ಮಗ ವೆಣ್ಣಮಯ್ಯ. ಇವನಿಗೆ ಪೋಳಕಬ್ಬೆಯಲ್ಲಿ ಹುಟ್ಟಿದವನೇ ನಾಗವರ್ಮನೆಂಬ ನಮ್ಮ ಪ್ರಸ್ತುತ ಕವಿ, ಈ ವಿಷಯಗಳು 'ಛಂದೋಂಬುಧಿ'ಯೆಂಬ ಇವನ ಛಂದಶ್ಶಾಸ್ತ್ರಗ್ರಂಥದಿಂದ ತಿಳಿಯುತ್ತದೆ. ಇವನು ಯಾವ ಮತಕ್ಕೆ ಸೇರಿದವನೆಂಬ ಬಗ್ಗೆಯೂ ವಿವಾದವಿದೆ. ಆದರೆ 'ಕಾದಂಬರಿ'ಯನ್ನು ಸೂಕ್ಷ್ಮವಾಗಿ ನೋಡಿದರೆ ನಾಗವರ್ಮನು ಶಿವೋಪಾಸಕನಾದ ಬ್ರಾಹ್ಮಣನೆಂದು ತೋರುತ್ತದೆ.

ಜೈನಕವಿಗಳಂತೆ ಮತಪ್ರಸಾರಕ್ಕಾಗಿ ಕನ್ನಡದಲ್ಲಿ ಕಾವ್ಯ ರಚನೆಯನ್ನು ಮಾಡಬೇಕಾದ ಪ್ರಮೇಯವು ನಾಗವರ್ಮನಿಗೆ ಬರಲಿಲ್ಲ. ಶತಶತಮಾನಗಳಿಂದ ಕರ್ನಾಟಕದಲ್ಲಿ ವೈದಿಕಧರ್ಮವು ಇಲ್ಲಿ ಬೇರು ಬಿಟ್ಟಿದುದೇ ಇದಕ್ಕೆ ಕಾರಣ. ಆದ್ದರಿಂದ ನಾಗವರ್ಮನು ಪ್ರಣಯಕತೆಯೊಂದನ್ನು ಕನ್ನಡಕ್ಕೆ ಅನುವಾದಿಸಿಯೂ, ಸ್ವತಂತ್ರವಾಗಿ ಛಂದಶ್ಶಾಸ್ತ್ರದ ಗ್ರಂಥವನ್ನು ಬರೆದೂ ತೃಪ್ತನಾಗಿದ್ದಾನೆ. 'ಛಂದೋಂಬುಧಿ'ಯು ಒಂದು ಅಪೂರ್ವವಾದ ಗ್ರಂಥ, ಶಿವನು ಪಾರ್ವತಿಗೆ ಛಂದಶ್ಶಾಸ್ತ್ರವನ್ನು ಹೇಳಿದಂತೆ ರಚಿತವಾಗಿರುವ ಈ ಗ್ರಂಥದಲ್ಲಿ ಸಮವೃತ್ತ, ಅರ್ಧಸಮವೃತ್ತ, ವಿಷಮವೃತ್ತಗಳು, ಮಾತ್ರಾಛಂದಸ್ಸು, ಕರ್ನಾಟಕ ವಿಷಯಜಾತಿಯೆಂಬ ಅಂಶಛಂದಸ್ಸು ಹಾಗೂ ಷಟ್ಪ್ರತ್ಯಯಗಳ ಬಗ್ಗೆ ಕ್ರಮವಾದ ವಿವರಣೆಯಿದೆ. ಇಷ್ಟು ವಿವರವಾಗಿಯೂ ವಿಪುಲ ಸಾಮಗ್ರಿಯಿಂದಲೂ ಕೂಡಿದ ಛಂದೋಗ್ರಂಥವು ನಮ್ಮ ಹಳೆಯ ಸಾಹಿತ್ಯದಲ್ಲಿ ಮತ್ತೊಂದಿಲ್ಲ. 'ಕರ್ನಾಟಕ ಕಾದಂಬರಿ'ಯು ಆರನೆಯ ಶತಮಾನದಲ್ಲಿ ಹರ್ಷನ ಅಸ್ಥಾನಕವಿಯಾಗಿದ್ದ ಬಾಣಭಟ್ಟನ ಸಂಸ್ಕೃತ ಕಾದಂಬರಿಯ ಅನುವಾದ. ಪೈಶಾಚಿ ಭಾಷೆಯಲ್ಲಿ ಗುಣಾಢ್ಯನೆಂಬ ಕವಿಯಿಂದ ರಚಿತವಾಗಿದ್ದ ಒಂದು ಕತೆಯೇ ಆಧಾರ. ಆದರೆ ಅದಕ್ಕೆ ಬಾಣನು ವರ್ಣನೆಗಳಿಂದಲೂ ತನ್ನ ಅತ್ಯಂತ ಸುಂದರವಾದ ಗದ್ಯದಿಂದಲೂ ಕಲ್ಪಿತ ಸನ್ನಿವೇಶಗಳಿಂದಲೂ ಸೊಬಗನ್ನು ತುಂಬಿ ಅದನ್ನು ಸಂಸ್ಕೃತದ ಅತ್ಯಂತ ಶ್ರೇಷ್ಠ ಗದ್ಯ ಕಾವ್ಯಗಳ ಪಂಕ್ತಿಯಲ್ಲಿ ಸೇರುವಂತೆ ಮಾಡಿದ್ದಾನೆ. ಕಾದಂಬರಿಯು ಎರಡು ಭಾಗಗಳಲ್ಲಿವೆ. ಪೂರ್ವಾರ್ಧವನ್ನು ಮಾತ್ರ ಬಾಣನು ಬರೆದದ್ದು; ಅವನು ಅಷ್ಟು ಬರೆದು ಸತ್ತದ್ದರಿಂದ ಅವನ ಮಗವಾದ ಭೂಷಣಭಟ್ಟನು ಮುಂದಿನ ಭಾಗವನ್ನು ಬರೆದು ಕಾವ್ಯವನ್ನು ಪೂರ್ಣಗೊಳಿಸಿದ. ನಾಗವರ್ಮನು ಈ ಎರಡೂ ಭಾಗಗಳನ್ನು ಸೇರಿಸಿ ಚಂಪೂರೂಪವಾಗಿ ಕನ್ನಡದಲ್ಲಿ ರಚಿಸಿದ್ದಾನೆ. ಇದು ಕನ್ನಡದ ಮೊಟ್ಟಮೊದಲ ಅನುವಾದಿತ ಪ್ರಣಯ ಕಾವ್ಯ. ಅನುವಾದಕ್ಕೆ ಮಾದರಿಯಾಗುವಂತೆ ನಾಗವರ್ಮನು ಈ ಕಾವ್ಯವನ್ನು ರಚಿಸಿ ಕೀರ್ತಿಯನ್ನು ಗಳಿಸಿದ್ದಾನೆ.

ಕರ್ನಾಟಕ ಕಾದಂಬರಿ

ಕಾದಂಬರಿ ಕತೆಯೊಳಗೆ ಕತೆಗಳನ್ನು ಒಳಗೊಂಡ ಕಾವ್ಯ. ಇಲ್ಲಿನ ಮುಖ್ಯವಸ್ತುವು ಕಾದಂಬರಿ ಚಂದ್ರಾಪೀಡರ ಪ್ರಣಯ ಪ್ರಸಂಗವಾದರೂ ಇಲ್ಲಿನ ಮಹಾಶ್ವೇತೆಯ ಪಾತ್ರವು ಓದುಗರನ್ನು ಸೆಳೆಯುತ್ತದೆ. ಕಾದಂಬರಿಯ ಕತೆಯು ಗಿಳಿ,

ಜಾಬಾಲಿ ಮಹರ್ಷಿ, ಮಹಾಶ್ವೇತೆ ಮುಂತಾದ ಪಾತ್ರಗಳಿಂದ ವಿವಿಧ ಹಂತಗಳಲ್ಲಿ ನಿರೂಪಿಸಲ್ಪಟ್ಟು ತುಂಬ ರಂಜಕವಾಗಿದೆ.

ಮಾಳವದೇಶದ ರಾಜನಾದ ಶೂದ್ರಕನು ಒಮ್ಮೆ ಆಸ್ಥಾನದಲ್ಲಿದ್ದಾಗ ಒಬ್ಬ ಚಂಡಾಲಕನ್ಯೆಯು ಗಿಳಿಯೊಂದಿಗೆ ಬರುತ್ತಾಳೆ. ಎಲ್ಲರಿಗೂ ಆಶ್ಚರ್ಯವುಂಟಾಗುವಂತೆ ಆ ಗಿಳಿಯು ಮನುಷ್ಯನಂತೆ ಸಂಸ್ಕೃತಪದ್ಯದ ಮೂಲಕ ರಾಜನನ್ನು ಆಶೀರ್ವದಿಸುತ್ತದೆ. ಕುತೂಹಲಗೊಂಡ ರಾಜನು ವಿಚಾರಿಸಿದಾಗ ಅದು ತನ್ನ ಕತೆಯನ್ನು ಈ ರೀತಿ ಹೇಳುತ್ತದೆ: ತಾನು ಪಂಪಾಸರೋವರದ ಬಳಿಯ ಒಂದು ಬೂರುಗದ ಮರದಲ್ಲಿ ತಾಯಿಯಿಲ್ಲದೆ ತಂದೆಯೊಡನೆ ವಾಸಿಸುತ್ತಿದ್ದಾಗ ಒಬ್ಬ ಮುದಿಬೇಡನು ತಂದೆಯನ್ನು ಬೇಟೆಯಾಡಿಕೊಂಡು ಹೋದ. ತಾನು ಹೇಗೋ ಬದುಕಿಕೊಂಡು ಜಾಬಾಲಿ ಮುನಿಗಳ ಆಶ್ರಮಕ್ಕೆ ಬಂದಾಗ ಋಷಿಗಳು ತನ್ನನ್ನು ನೋಡಿ ಇವನು ಪೂರ್ವಜನ್ಮದ ಅವಿನಯಕ್ಕೆ ಪ್ರಾಯಶ್ಚಿತ್ತವನ್ನು ಅನುಭವಿಸುತ್ತಿದ್ದಾನೆ, ಎಂದರು. ಕುತೂಹಲದಿಂದ ಶಿಷ್ಯರೆಲ್ಲ ಬೇಡಿಕೊಂಡಾಗ ಅವರು ಗಿಳಿಯ ಪೂರ್ವಜನ್ಮದ ಕತೆಯನ್ನು ಹೇಳಲು ತೊಡಗಿದರು.

ಆವಂತಿ ದೇಶದ ರಾಜದಂಪತಿಗಳಾದ ತಾರಾಪೀಡ–ವಿಲಾಸವತಿಯರ ಮಗ ಚಂದ್ರಾಪೀಡ. ಅವನ ಆಪ್ತಸ್ನೇಹಿತ ಮಂತ್ರಿ ಶುಕನಾಸನ ಮಗ ವೈಶಂಪಾಯನ. ಇಬ್ಬರೂ ಒಟ್ಟಿಗೇ ಕಲಿತವರು, ಬೆಳೆದವರು. ಚಂದ್ರಾಪೀಡನ ವಿದ್ಯಾಭ್ಯಾಸವು ಮುಗಿದ ಮೇಲೆ ತಂದೆಯ ಅವನಿಗೆ ಯುವರಾಜ ಪಟ್ಟವನ್ನು ಕಟ್ಟಿ ಇಂದ್ರಾಯುಧವೆಂಬ ಕುದುರೆಯೊಂದನ್ನು ಉಡುಗೊರೆಯಾಗಿ ಕೊಟ್ಟನು. ತಾಯಿಯು ಪತ್ರಲೇಖೆಯೆಂಬ ಸೇವಕಿಯನ್ನಿತ್ತಳು. ಯುವರಾಜನು ವಿಜಯ ಯಾತ್ರೆಗೆ ಹೊರಟು ಒಂದು ದಿನ ಕೈಲಾಸಪರ್ವತದ ತಪ್ಪಲಲ್ಲಿ ಬಿಡಾರ ಮಾಡಿದ್ದಾಗ ಚಂದ್ರಾಪೀಡನು ಸುತ್ತಲಿನ ಪ್ರದೇಶವನ್ನು ನೋಡಲು ಏಕಾಂಗಿಯಾಗಿ ಹೊರಟಾಗ ಕಿನ್ನರದಂಪತಿಗಳು ಅವನಿಗೆ ಕಾಣಿಸಿದರು. ಕುತೂಹಲದಿಂದ ಹಿಂಬಾಲಿಸಿದ ಅವನು ಬಹುದೂರ ಬಂದುಬಿಟ್ಟ. ಕಿನ್ನರರು ಮಾತ್ರ ಸಿಕ್ಕದಾದರು. ಆಯಾಸಗೊಂಡ ಅವನು ವಿಶ್ರಾಂತಿ ಪಡೆಯುತ್ತಿದ್ದಾಗ ಇಂಪಾದ ವೀಣೆಯ ಧ್ವನಿ ಕೇಳಿಸಿತು. ಆ ಧ್ವನಿಯನ್ನೇ ಹಿಂಬಾಲಿಸಿ ಹೋಗಿ ನೋಡಿದಾಗ ವಿರಾಗಿಣಿಯಂತಿದ್ದ ಯುವತಿಯೊಬ್ಬಳು ಕಾಣಿಸಿದಳು. ಅವಳ ಆತಿಥ್ಯವನ್ನು ಸ್ವೀಕರಿಸಿ ತನ್ನ ವಿಷಯವನ್ನೆಲ್ಲ ಹೇಳಿಯಾದ ಮೇಲೆ ಆಕೆಯು ಆ ವಯಸ್ಸಿನಲ್ಲಿ ವಿರಕ್ತಿಗೊಳ್ಳಲು ಕಾರಣವೇನೆಂದು ವಿನಯದಿಂದ ಕೇಳಿದಾಗ ಆಕೆ ತನ್ನ ವಿಷಯವನ್ನು ಈ ರೀತಿ ಹೇಳಿದಳು:

ತಾನು ಗಂಧರ್ವರಾಜನಾದ ಹಂಸ ಮತ್ತು ಅಪ್ಸರೆ ಗೌರಿದೇವಿಯರ ಮಗಳು. ತಾನು ಯೌವನಪಡೆದ ಮೇಲೆ ಒಂದು ದಿನ ಸರೋವರ ಸ್ನಾನಕ್ಕಾಗಿ ತಾಯಿಯೊಡನೆ ಹೋಗುತ್ತಿದ್ದಾಗ ಒಬ್ಬ ಸುಂದರ ಮುನಿಕುಮಾರನನ್ನು ನೋಡಿ ಮೋಹಗೊಂಡಳು. ಅವನಿಗೂ ಹಾಗೆಯೇ ಆಯಿತು. ಆ ದಿನ ಸಾಯಂಕಾಲ ಆ ಮುನಿಕುಮಾರನ ಸ್ನೇಹಿತನಾದ ಕಪಿಂಜಲನು ಬಂದು ಮಹಾಶ್ವೇತೆಯಲ್ಲಿ ಮೋಹಗೊಂಡವನು

ಪುಂಡರೀಕನೆಂದೂ ಈಗ ವಿರಹದಿಂದ ಕೊರಗುತ್ತಿರುವೆನೆಂದೂ ಅವನನ್ನು ಬದುಕಿಸ ಬೇಕೆಂದೂ ಬೇಡಿಕೊಳ್ಳುತ್ತಾನೆ. ತಕ್ಷಣ ತಾನು ತರಳಿಕೆಯೆಂಬ ಸೇವಕಿಯೊಡನೆ ಹೊರ ಟಾಗ ದಾರಿಯಲ್ಲಿ ಅನೇಕ ಅಪಶಕುನಗಳಾದವು. ಆಶ್ರಮದ ಹತ್ತಿರಕ್ಕೆ ಹೋದಾಗ ಕಪಿಂಜಲನ ಅಳುವೂ 'ಎಲವೋ ಚಂದ್ರ, ನೀನೂ ಪ್ರಿಯ ಸಮಾಗಮ ಕಾಲದಲ್ಲಿ ಸಾಯಿ' ಎಂಬ ಧ್ವನಿಯೂ ಕೇಳಿಸಿತು. ಹೋಗಿ ನೋಡಿದಾಗ ಪುಂಡರೀಕನು ಸತ್ತು ಬಿದ್ದಿದ್ದಾನೆ! ತಾನೂ ಸಾಯಲು ಚಿತೆಯನ್ನು ಸಿದ್ಧಪಡಿಸುತ್ತಿದ್ದಾಗ ಈ ರೀತಿ ಅಶರೀರವಾಣಿಯೊಂದು ನುಡಿಯುತ್ತದೆ: 'ಸಾಯುವ ಯೋಚನೆ ಮಾಡಬೇಡ, ಪುನಃ ಇವನನ್ನು ಸೇರುತ್ತೀಯೆ.' ಅನಂತರ ದಿವ್ಯ ದೇಹವೊಂದು ಅಕಾಶದಿಂದ ಬಂದು ಪುಂಡರೀಕನ ದೇಹವನ್ನು ಎತ್ತಿಕೊಂಡು ಹೋಯಿತು. ಅದನ್ನು ತಡೆಯಬೇಕೆಂದು ಕಪಿಂಜಲನೂ ಹಾರಿಹೋದ. ತಾನು ತನ್ನ ಪ್ರಿಯಕರನನ್ನು ಸೇರುವ ಆಸೆಯಿಂದ ಹೀಗೆ ಕಾಲಕಳೆಯುತ್ತಿದ್ದೇನೆ ಎಂದು ಮಹಾಶ್ವೇತೆಯು ತನ್ನ ಕತೆಯನ್ನು ಮುಗಿಸಿದಳು. 'ತರಳಿಕೆ ಎಲ್ಲಿ?' ಎಂದು ಚಂದ್ರಾಪೀಡನು ಪ್ರಶ್ನಿಸಿದಾಗ ತನಗೆ ಕಾದಂಬರಿಯೆಂಬ ಗೆಳತಿಯಿದ್ದಾಳೆ. ಅವಳು ಚಿತ್ರರಥ–ಮದಿರಾದೇವಿಯರ ಮಗಳು, ನನ್ನ ದುರವಸ್ಥೆ ಯನ್ನು ನೋಡಿ ನಾನು ಪ್ರಿಯಕರನನ್ನು ಸೇರುವವರೆಗೆ ತಾನೂ ಮದುವೆ ಯಾಗುವುದಿಲ್ಲವೆಂದು ಹೇಳುತ್ತಿದ್ದಾಳೆ, ಅವಳಿಗೆ ತಂದೆ ತಾಯಿಯರ ಮಾತಿನಂತೆ ಮದುವೆಯಾಗು ಎಂದು ತರಳಿಕೆಯೊಡನೆ ಹೇಳಿಕಳುಹಿಸಿದ್ದೇನೆ ಎಂದು ಮಹಾಶ್ವೇತೆಯ ಉತ್ತರಿಸಿದಳು.

ಮುಂದಿನ ಕತೆಯನ್ನು ಜಾಬಾಲಿ ಋಷಿ ಹೇಳುತ್ತಾನೆ. ಮಾರನೆಯ ದಿನ ತರಳಿಕೆ ವಾಪಸ್ಸು ಬಂದು ಕಾದಂಬರಿಯ ನಿರ್ಧಾರ ಬದಲಾಗಲಿಲ್ಲವೆಂದು ಹೇಳಿದಾಗ ತಾನೇ ಅಲ್ಲಿಗೆ ಹೋಗಲು ಮಹಾಶ್ವೇತೆಯು ನಿರ್ಧರಿಸುತ್ತಾಳೆ. ಜೊತೆಯಲ್ಲಿ ಬರಬೇಕೆಂದು ಪ್ರಾರ್ಥಿಸಿ ಚಂದ್ರಾಪೀಡನನ್ನೂ ಕರೆದೊಯ್ದಳು. ಅಲ್ಲಿ ಕಾದಂಬರಿ ಚಂದ್ರಾಪೀಡರ ಪ್ರಣಯವು ಮೂಡಿತು. ಕೆಲಕಾಲವಿದ್ದು ಚಂದ್ರಾಪೀಡನು ಹೇಮಕೂಟಕ್ಕೆ ಬಂದಾಗ ಅವನ ಸೈನ್ಯವು ಅಲ್ಲಿಗೆ ಬಂದಿತ್ತು. ಕೇಯೂರಕನೆಂಬ ದೂತನ ಮೂಲಕ ಕಾದಂಬರಿಯ ವಿರಹದುಃಖವನ್ನು ಕೇಳಿ ಅಲ್ಲಿ ಹೋಗಿ ಕೆಲಕಾಲವಿದ್ದು ಅನಂತರ ಉಜ್ಜಯಿನಿಗೆ ವಾಪಸಾದನು. ಕೆಲವು ದಿನಗಳಾದ ಬಳಿಕ ಪತ್ರಲೇಖೆಯು ಕಾದಂಬರಿಯ ವಿರಹವೇದನೆಯ ವಿಚಾರವನ್ನು ತಿಳಿದಾಗ ಚಂದ್ರಾಪೀಡನು ಚಿಂತೆಗೊಳಗಾದ. ಇಲ್ಲಿಗೆ ಬಾಣನು ಬರೆದ ಭಾಗ ಕೊನೆಯಾಗುತ್ತದೆ. ಇದೇ ಪೂರ್ವಭಾಗ.

ತಾನು ಕಾದಂಬರಿಯನ್ನು ನೋಡಲು ಹೋಗುವುದಾಗಿ ನಿರ್ಧರಿಸಿದರೂ ಮಿತ್ರ ವೈಶಂಪಾಯನನ ಸ್ಥಿತಿಯು ವಿಚಿತ್ರವಾಗಿದೆಯೆಂಬುದನ್ನು ತಿಳಿದು ಅವನನ್ನು ಕರೆದು ತರಲು ಚಂದ್ರಾಪೀಡನು ಹೊರಟನು. ಅವನು ಮಹಾಶ್ವೇತೆಯ ಆಶ್ರಮಕ್ಕೆ ಬಂದಾಗ ಅವಳು ಅಳುತ್ತಿದ್ದಾಗ ಅಳುವಿನ ಕಾರಣವೇನೆಂದು ಕೇಳಲು ಅವಳು ಈ ರೀತಿ ಉತ್ತರಿಸಿದಳು. ತನ್ನ ಮೇಲೆ ಬ್ರಾಹ್ಮಣ ಯುವಕನೊಬ್ಬನು ಮೋಹಗೊಂಡಾಗ

'ಗಿಳಿಯಂತೆ ಹರಟುವ ನೀನು ಗಿಳಿಯಾಗು' ಎಂದು ಶಾಪವಿತ್ತೆ. ಆಗ ನಿನ್ನ ಸ್ನೇಹಿತನಾದ ಅವನು ಸತ್ತು ಕೆಳಗುರುಳಿದನು ಎಂದು ಹೇಳಿದಳು. ಅದನ್ನು ಕೇಳಿ ಚಂದ್ರಾಪೀಡನು ನೆಲಕ್ಕುರುಳಿದನು; ಮಹಾಶ್ವೇತೆಯೂ ಮೂರ್ಛೆಬಿದ್ದಳು; ಚಂದ್ರಾಪೀಡ ನನ್ನು ಹುಡುಕಿಕೊಂಡು ಬಂದ ಕಾದಂಬರಿ-ಪತ್ರಲೇಖೆಯರೂ ಮೂರ್ಛಿತರಾದರು. ಕಾದಂಬರಿಯು ಎಚ್ಚೆತ್ತು ಸಹಗಮನವನ್ನು ಮಾಡಬೇಕೆಂದು ಸಿದ್ಧತೆಯನ್ನು ನಡೆಸುತ್ತಿದ್ದಾಗ ಅವಳು ತನ್ನ ಪ್ರಿಯನನ್ನು ಸೇರುವಳೆಂದೂ ಚಂದ್ರಾಪೀಡನ ದೇಹವನ್ನು ಕಾಪಾಡಬೇಕೆಂದೂ ಅಶರೀರವಾಣಿ ಕೇಳಿಸಿತು. ಪತ್ರಲೇಖೆಯೆದ್ದು ಇಂದ್ರಾಯುಧವೆಂಬ ಕುದುರೆಯೊಡನೆ ಅಚ್ಛೋದ ಸರೋವರದಲ್ಲಿ ಹಾರಿದಾಗ ಅಲ್ಲಿಂದ ಕಪಿಂಜಲನು ಎದ್ದು ಬಂದು ಮಹಾಶ್ವೇತೆಗೆ ಈ ರೀತಿ ಹೇಳಿದನು: ಪುಂಡರೀಕನು ವಿರಹದಿಂದ ನರಳುತ್ತಿದ್ದಾಗ ಚಂದ್ರನು ಕಂಡು ನಗಲು, ಅವನು 'ನೀನು ಎರಡು ಬಾರಿ ಮನುಷ್ಯನಾಗಿ ಹುಟ್ಟು' ಎಂದು ಶಪಿಸಿದನು. ಚಂದ್ರನು 'ನೀನೂ ಆ ದುಃಖದಲ್ಲಿ ಪಾಲುಗೊಳ್ಳು' ಎಂದು ಮರುಶಾಪವನ್ನು ನೀಡಿದನು. ಅನಂತರ ಅವನೇ ಪುಂಡರೀಕನ ಶರೀರವನ್ನು ಚಂದ್ರಲೋಕದಲ್ಲಿ ಜೋಪಾನ ಮಾಡುತ್ತಿದ್ದಾನೆ. ಅಲ್ಲದೆ ಅವನು ಬದುಕಲು ಅಯುಷ್ಕಾಮ ದಾನವ್ರತಗಳನ್ನು ಆಚರಿಸುವಂತೆ ಪುಂಡರೀಕನ ತಂದೆ ಶ್ವೇತಕೇತುವಿಗೆ ಹೇಳಲು ನನಗೆ ಹೇಳಿದ. ನಾನು ಅದೇ ರೀತಿ ಆತುರದಿಂದ ಬರುವಾಗ ಕಾಣದೆ ಒಬ್ಬ ವೈಮಾನಿಕ ದೇವನನ್ನು ಎಡವಿದೆ, ಕೋಪಗೊಂಡ ಅವನು ಕುದುರೆಯಾಗೆಂದು ಶಾಪವಿತ್ತ. ಅನಂತರ ಅವನ ಕೃಪೆಯಿಂದಲೇ ಇಂದ್ರಾಯುಧವೆಂಬ ಕುದುರೆಯಾಗಿದ್ದೆ. ಆ ಜನ್ಮ ಈಗ ಕಳೆದಿದೆ- ಎಂದು ಹೇಳಿ ಶ್ವೇತಕೇತುವಿನ ಬಳಿಗೆ ಹೋದನು. ಹೀಗೆ ಪುಂಡರೀಕನು ಕಾಮ ಪರವಶತೆಯಿಂದ ದೈವತ್ವವನ್ನು ಕಳೆದುಕೊಂಡು ವೈಶಂಪಾಯನನಾಗಿ ಮತ್ತೆ ಗಿಳಿಯಾಗಿಹುಟ್ಟಿದ್ದಾನೆ ಎಂದು ಜಾಬಾಲಿಯು ತಿಳಿಸಿದನು.

ಮುಂದೆ ಗಿಳಿಯೇ ತನ್ನ ಕತೆಯನ್ನು ಹೇಳಿತು: ಜಾಬಾಲಿಯು ಹೇಳಿದುದನ್ನು ಕೇಳಿ ನನಗೆ ಜ್ಞಾನೋದಯವಾದುದಲ್ಲದೆ ಮಹಾಶ್ವೇತೆಯ ಬಗ್ಗೆ ಮೋಹ ಹೆಚ್ಚಿತು. ಅವಳೂ ಚಂದ್ರಾಪೀಡನೂ ಎಲ್ಲಿದ್ದಾರೆಂದು ಋಷಿಗಳನ್ನೇ ಕೇಳಿದೆ. ಸ್ವಲ್ಪಕಾಲ ಸುಮ್ಮನಿರಲು ತಿಳಿಸಿ ಅವರು ಹೊರಟು ಹೋದರು. ಚಂದ್ರಾಪೀಡನನ್ನು ಕಾಣುವಾತುರದಿಂದ ಹಾರಲು ಹೋಗಿ ಆಯಾಸದಿಂದ ಮಲಗಿದ್ದಾಗ ಒಬ್ಬ ಚಂಡಾಲನ ಬಲೆಗೆ ಬಿದ್ದೆ. ಅವನು ನನ್ನನ್ನು ಇವಳಿಗೆ ಕೊಟ್ಟ. ಇವಳು ನನ್ನನ್ನು ಪಂಜರದಲ್ಲಿಟ್ಟು ಇಲ್ಲಿಗೆ ಕರೆ ತಂದಿದ್ದಾಳೆ ಎಂದು ಹೇಳಿತು.

ಚಂಡಾಲಕನ್ಯೆಯು ಬಂದು ಈ ರೀತಿ ಹೇಳಿದಳು: ಶೂದ್ರಕನೇ ಚಂದ್ರಾಪೀಡ ನೆಂದೂ ಗಿಳಿಯು ವೈಶಂಪಾಯನನಾಗಿದ್ದ ಪುಂಡರೀಕನೆಂದೂ ತಾನು ಪುಂಡರೀಕನ ತಾಯಿ ಲಕ್ಷ್ಮಿಯೆಂದೂ ಹೇಳಿ ಅಕಾಶಕ್ಕೆ ಹಾರಿದಳು. ಇದನ್ನು ಕೇಳಿ ರಾಜನು ಸತ್ತಾಗ ಕಾದಂಬರಿ-ಮಹಾಶ್ವೇತೆಯರ ಬಳಿಯಿದ್ದ ಚಂದ್ರಾಪೀಡನ ದೇಹದಲ್ಲಿ ಪ್ರಾಣವುಂಟಾ ಯಿತು. ವೈಶಂಪಾಯನನೂ ಆ ಹೊತ್ತಿಗೆ ಜನ್ಮವನ್ನು ಬಿಟ್ಟು ಪುಂಡರೀಕನಾಗಿ ಬಂದನು. ಈ ರೀತಿ ಪ್ರಿಯರ ಸಮಾಗಮವಾಯಿತು.

ಹೀಗೆ ಕಾದಂಬರಿಯ ಕತೆಯು ಅದ್ಭುತವಾದದ್ದು, ಅಷ್ಟೇ ತೊಡಕಿನದು. ಕಾದಂಬರಿ–ಚಂದ್ರಾಪೀಡರ ಕತೆಯಲ್ಲಿ ಮಹಾಶ್ವೇತೆ–ಪುಂಡರೀಕರ ಕತೆಯೂ ಸೇರಿಕೊಂಡಿದೆ. ಕತೆಯು ನಾನಾ ಜನ್ಮಗಳಲ್ಲಿ ನಡೆಯುತ್ತದೆ, ನಾನಾ ಲೋಕಗಳಲ್ಲಿ ಕತೆಯ ಘಟನೆಗಳು ನಡೆಯುತ್ತವೆ. ಗಿಳಿ–ಜಾಬಾಲಿ–ಮಹಾಶ್ವೇತೆ–ಜಾಬಾಲಿ–ಗಿಳಿ ಈ ರೀತಿಯಲ್ಲಿ ಕತೆಯನ್ನು ಇವರು ಹೇಳುತ್ತಾರೆ. ಕತೆಯು ಸುರುಳಿಸುರುಳಿಯಾಗಿ ಬಿಚ್ಚಿಕೊಳ್ಳುತ್ತ ರಮ್ಯವಾಗಿ ಸಾಗುತ್ತದೆ. ಕತೆಯಂತೆಯೇ ವರ್ಣನೆಗಳೂ ಇಲ್ಲಿ ರಮ್ಯವಾಗಿದೆ. ಸಂಸ್ಕೃತದ ಗದ್ಯವಂತೂ ದಟ್ಟವಾದ ಕಾಡಿನ ಮರಗಿಡಬಳ್ಳಿಗಳಂತೆ ಹೆಣೆದುಕೊಂಡು ಗಂಭೀರವೂ ಮನೋಹರವೂ ಆಗಿದೆಯಂತೆ. ಕನ್ನಡಕ್ಕೆ ಇದನ್ನು ತಂದ ನಾಗವರ್ಮನು ತನ್ನ ಕಾರ್ಯವನ್ನು ಯಶಸ್ವಿಯಾಗಿಯೇ ಮಾಡಿದ್ದಾನೆ. ಕೆಲವು ನಿದರ್ಶನಗಳಿಂದ ಇದನ್ನು ಮನಗಾಣಬಹುದು.

ಪಂಪಾಸರೋವರದ (ಗಿಳಿಯು ವಾಸಿಸುತ್ತಿದ್ದ ಮರದ ಹತ್ತಿರವಿದ್ದದ್ದು) ವರ್ಣನೆ;

ಕಡಲಂ ಪೀರ್ದನಗಸ್ತ್ಯನೆಂಬ ಪುರುಡಿಂ ಮತ್ತೊಂದನಬ್ಜೋದ್ಭವಂ
ಪಡೆದಂ ಪೆರ್ಗಡಲಂ, ಮಹಾಪ್ರಳಯದೊಳ್ ದಿಕ್ಸಂಧಿಗಳ್ ಬಂಧಮಂ
ಬಿಡೆ ಬೀಳ್ದತ್ತಿಳೆಗಾಗಸಂ, ಧರಣಿಯಂ ಪೆರ್ಬಂದಿಯಂ ಕಿಳ್ತಿತ್ತಿದೊಂ
ದೆಡೆ ನೀರ್ ತೀವಿತು ಎನಲ್ಕೆ ಪೆಂಪುವಡೆಗುಂ ಗುಣ್ಪಿಂದೆ ಪಂಪಾಸರಂ (ಕ.ಕಾ. ೧–೯೭)

(ಪಂಪಾಸರೋವರದ ಆಳವು ಎಷ್ಟಿತ್ತೆಂದರೆ, ಆಗಸ್ತ್ಯಋಷಿಯು ಸಮುದ್ರವನ್ನೆಲ್ಲ ಒಕ್ಕುಡಿತೆಯಾಗಿ ಕುಡಿದುಬಿಟ್ಟನಲ್ಲ ಎಂಬ ಪೈಪೋಟಿಯಿಂದ ಬ್ರಹ್ಮನು ಮತ್ತೊಂದು ದೊಡ್ಡ ಸಮುದ್ರವನ್ನು ಸೃಷ್ಟಿಸಿದಂತಿತ್ತು; ಪ್ರಳಯಕಾಲದಲ್ಲಿ ದಿಕ್ಕುಗಳಲ್ಲಿ ಬಿರುಕುಬಿಟ್ಟು ಆಕಾಶವೇ ನೆಲಕ್ಕುರುಳಿತೋ ಎನ್ನುವಂತಿತ್ತು; ವರಾಹ (ಹಂದಿ) ಅವತಾರದಲ್ಲಿ ವಿಷ್ಣುವು ಭೂಮಿಯನ್ನು ಎತ್ತಿದಾಗ ಆ ಜಾಗದಲ್ಲಿ ನೀರು ತುಂಬಿಕೊಂಡಿತೋ ಎನ್ನುವಂತಿತ್ತು!) ಸರೋವರದ ಅಗಾಧತೆಯನ್ನು ಇಲ್ಲಿ ಕವಿ ತುಂಬ ಚಮತ್ಕಾರದಿಂದ ವರ್ಣಿಸಿದ್ದಾನೆ.

ಹಾಗೆಯೇ ಅಚ್ಛೋದ ಸರೋವರದ ವರ್ಣನೆಯನ್ನೊಳಗೊಂಡ ಈ ಪದ್ಯವಂತೂ ಅತ್ಯಂತ ಸುಂದರವೂ ಅದ್ಭುತವೂ ಆದ ಕಲ್ಪನೆಯಿಂದ ಕೂಡಿದೆ:

ಎಲೆ! ತಾರಾಗಂ ಹರಂ ಕಣ್ದೆಡೆ ಕರಗಿದುದು! ಅಂತಲ್ತು ರುದ್ರಾಟ್ಟಹಾಸಂ
ಜಲಮಾದತ್ತು! ಅಲ್ತು; ಚಂದ್ರಾತಪಮಮೃತ ರಸಾಕಾರಮಾಯ್ತು! ಅಲ್ತು; ಹೈಮಾ
ಚಲಮಂಭೋರೂಪದಿಂದಂ ಪರಿಣಮಿಸಿದುದು! ಅಂತಲ್ತು; ನೈರ್ಮಲ್ಯಶೋಭಾ
ಕಲಿತಂ ತ್ರೈಲೋಕ್ಯ ಲಕ್ಷ್ಮೀಮಣಿಮುಕುರಮೆನಲ್ ಚೆಲ್ವದಾಯ್ತಬ್ಜಷಂಡಂ (ಕ.ಕಾ. ೩.೧೬)

(ಎಲೆಲೆ! ಹರನು ಮೂರನೆಯ ಕಣ್ಣನ್ನು ತೆರೆದಾಗ ಹಿಮಾಲಯವೇ ಕರಗಿ ನೀರಾಗಿರಬೇಕು. ಅಲ್ಲಲ್ಲ, ರುದ್ರನು ಮಾಡುವ ಅಟ್ಟಹಾಸವೇ ನೀರಾಗಿರಬೇಕು; ಊಹ್ಞೂ, ಬೆಳದಿಂಗಳೇ ಹೀಗೆ ಮಡುಗಟ್ಟಿ ನಿಂತರಬೇಕು; ಛೆ, ಇಲ್ಲ, ಹಿಮಾಲಯವು

ಕರಗಿಬಿಟ್ಟದೆ; ಅಲ್ಲವೇ ಅಲ್ಲ, ತ್ರಿಲೋಕ ಲಕ್ಷ್ಮಿಯು ತನ್ನ ರೂಪವನ್ನು ನೋಡಿಕೊಳ್ಳಲು ನಿರ್ಮಿಸಿದ ರನ್ನಗನ್ನಡಿಯಿದು ಎನ್ನುವಂತೆ ಆ ಸರೋವರವು ಸುಂದರವಾಗಿತ್ತು.) 'ಎಂತಹ ಸುಂದರಪದ್ಯ! ರುದ್ರನ ಅಟ್ಟಹಾಸವೇ ನೀರಾಯಿತು' ಎನ್ನುವ ಕಲ್ಪನೆಯೆಂತೂ ಮಾತುಗಳಿಂದ ವಿವರಿಸಲಾರದ್ದು; ಪದ್ಯದಲ್ಲಿ ಚಂದ್ರಾಪೀಡನಿಗಾದ ಆಶ್ಚರ್ಯ-ಸಮಾಧಾನದ ಭಾವಗಳೆರಡೂ ಸುಂದರವಾಗಿ ಚಿತ್ರಿತವಾಗಿರುವುದು ಇಲ್ಲಿನ ಮತ್ತೊಂದು ವೈಶಿಷ್ಟ್ಯ.

ಗಿಳಿಯ ಮರಿಯು ವಾಸಿಸುತ್ತಿದ್ದ ಬೂರುಗದ ಮರದ ಬಳಿ ಬಂದ ಮುದಿ ಬೇಡನ ಚಿತ್ರವು ಕಣ್ಣಿಗೆ ಕಟ್ಟಿದಂತಿದೆ:

ಜರೆಯಿಂದಂ ಪುರ್ಬು ಜೋಲಲ್, ತೆರೆ ತರತರದಿಂದುಣ್ಮೆ ಪೊಣ್ಮಲ್ಕೆ, ಗಂಟಲ್
ಮುರಿದತ್ತೊಂದೊಂದಱಿಳ್ ತಳ್ತೊಗೆಯೆ ಸೆರೆಗಳೊತ್ತಂಬದಿಂ ಬರ್ಪ ಕೆಮ್ಮಿಂ
ಬಿರಿಯಲ್ ಬೆಟ್ಟಂಗಳ್, ಆ ಬಟ್ಟೆಯೊಳನಿತಡಗುಂ ತನ್ನ ಕೆಯ್ಸಾರದೆಂದಾ
ತುರಿಸುತ್ತಂ ಭ್ರಾಂತಿಯಿಂದೆನ್ನಯ ಮರದಡಿಯೊಲ್ ನಿಂದನೊರ್ವ ಪುಳಿಂದಂ

(ಕ.ಕಾ. ೧-೧೪೫)

(ಮುಪ್ಪಿನಿಂದಾಗಿ ಹುಬ್ಬು ಜೋತಾಡುತ್ತಿತ್ತು. ಚರ್ಮದ ಸುಕ್ಕು ಹೊಮ್ಮುತ್ತಿತ್ತು. ಬಾಗಿದ ಕತ್ತು ನರಗಳ ಒತ್ತಡದಿಂದ ಬರುವ ಕೆಮ್ಮಂತೂ ಬೆಟ್ಟಗಳೇ ಬಿರುಕು ಬಿಡುವಷ್ಟು ಜೋರಾಗಿತ್ತು! ತನಗೆ ಸ್ವಲ್ಪವಾದರೂ ಬೇಟೆಯು ದೊರೆಯುತ್ತದೋ ಇಲ್ಲವೋ ಎಂಬ ಕಳವಳದಿಂದ ನಾನಿದ್ದ ಮರದಡಿಯಲ್ಲಿ ಒಬ್ಬ ಬೇಡನು ನಿಂತಿದ್ದ.)

ಜಾಬಾಲಿ ಆಶ್ರಮವರ್ಣನೆಯು ಆ ಋಷಿಗಳ ವ್ಯಕ್ತಿತ್ವವನ್ನು ಹೇಗೆ ಚಿತ್ರಿಸುತ್ತದೆ ನೋಡಿ:

ತನುವೆರಸುಯ್ಯಲ್ ಮುನಿಗಳನ್
ಅನಲಂ ಸ್ವರ್ಗಕ್ಕೆ ಸೇತುಗಟ್ಟಿದನೆನೆ ಪಾ
ವನ ಹೋಮಧೂಮಮೊಗೆಯಲ್
ಮುನಿಪಾಶ್ರಮಮೆನಗೆ ಕಾಣಲಾದತ್ತಾಗಳ್ (ಕ.ಕಾ. ೧-೧೭೮)

(ಜಾಬಾಲಿ ಮಹರ್ಷಿಗಳನ್ನು ಈ ದೇಹಸಮೇತವಾಗಿ ಸ್ವರ್ಗಕ್ಕೆ ಕರೆದೊಯ್ಯಲು ಅಗ್ನಿಯು ಸೇತುವೆಯನ್ನು ಕಟ್ಟಿದ್ದಾನೆಯೋ ಎನ್ನುವಂತೆ ಪಾವನವಾದ ಯಜ್ಞದ ಹೊಗೆಯು ಆಕಾಶಕ್ಕೆ ಆಡರುತ್ತಿದ್ದುದು ಕಾಣುತ್ತಿತ್ತು.)

ಮಹಾಶ್ವೇತೆಯ ರೂಪವನ್ನು ವರ್ಣಿಸುವಾಗ ಕವಿ ಆಕೆಯ ವ್ಯಕ್ತಿತ್ವಕ್ಕೆ ಅನುಗುಣವಾದ ಮಾತುಗಳನ್ನಾಡುತ್ತಾನೆ. ಚಂದ್ರಾಪೀಡನು ಮೊದಲ ಬಾರಿಗೆ ಮಹಾಶ್ವೇತೆಯನ್ನು ಕಂಡಾಗ ಅವಳು ಕಾಣಿಸುತ್ತಿದ್ದ ರೀತಿಯದು:

ಪೊಳೆವೆಳೆನೇಸಱಿಂ ತೆಗೆದ ರಶ್ಮಿಗಳಂತೆ ಮಡಲ್ತು, ಕಾಂತಿಯಂ
ತಳೆದೆಳಮಿಂಚಿನ ಒಳ್ದಳಿರ್ಗಳಂತೆ ಕವಲ್ತು, ಮೃಗಾಂಕಮೌಳಿ ನಿ
ರ್ಮಳಪದಭಸ್ಮರೇಣುಗಳೆನಲ್ ನವಮಜ್ಜನ ವಾಃಕಣಂಗಳಂ
ತಳೆದು, ಪೆಗಲ್ವರಂ ಬಳೆದು ರಂಜಿಸುಗುಂ ಜಡೆಗಳ್ ಮೃಗಾಕ್ಷಿಯಾ (ಕ.ಕಾ. ೪-೪೬)

(ಹೊಳೆಯುವ ಉದಯ ಸೂರ್ಯನ ಕಿರಣಗಳಂತೆ ಹರಡಿಕೊಂಡು, ಮಿಂಚಿನ ಚಿಗುರು ಕವಲಾಗಿ ಒಡೆದಂತೆ ಕವಲುಗಳಾಗಿ, ಶಿವನ ಪಾದದ ವಿಭೂತಿಯ ಕಣಗಳಂತೆ ಕಾಣುತ್ತಿರುವ-ಆಗತಾನೇ ಸ್ನಾನಮಾಡಿದ್ದರಿಂದ ನಿಂತಿರುವ ನೀರಿನ ಕಣಗಳನ್ನು ಪಡೆದು, ಹೆಗಲಿನವರೆಗೂ ಬೆಳೆದಿದ್ದ ಆ ಸುಂದರಿಯ ಜಡೆಯು ಕಾಣಿಸಿತು.)

ತಂದೆಯನ್ನು ಕಳೆದುಕೊಂಡು, ಬೇಡನಿಂದ ಅದೃಷ್ಟವಶಾತ್ ಉಳಿದ ಗಿಳಿಯ ಮರಿಯು ಬಾಯಾರಿಕೆಯಿಂದಲೂ ಭಯದಿಂದಲೂ ತೆವಳುತ್ತ ಹೋದ ಚಿತ್ರ:

> **ಗಱಿ ಪಾರಲ್ಕಿಲ್ಲ, ಕಾಲುಂ ಬಲಿಯವು ನಡೆಯಲ್, ಬೆಟ್ಟಿತೆಂಬಂತೆ ಮೂಗಂ**
> **ಮುಱಿವನ್ನಂ ಮುಗ್ಗುತ್ತ ಎಡಬಲದೊಳಗಾಂ ಬೀೞುತುಂ ಪಕ್ಕಗೂಡಾ**
> **ಗೊಱಗುತ್ತುಂ ಪೋಗಿ ಮಧ್ಯಾಹ್ನದ ಬಿಸಿಲ್ ಅೞುರಲ್ ಕಣ್ಮಲರ್ ನಟ್ಟು ಸುಯ್ಗಳ್**
> **ಪೊಱಮಟ್ಟೊಂದೊನಟ್ಟುತ್ತಿರೆ ಪಿರಿದುಮೞಲ್ದೆನ್ನೊಳಿಂತೆಂದೆನಾಗಳ್** (ಕ.ಕಾ. ೧–೧೫೮)

(ಹಾರಲು ರೆಕ್ಕೆಯಿಲ್ಲ, ನಡೆಯಲು ಕಾಲು ಬಲಿತಿಲ್ಲ, ಆಗಾಗ ಬಿದ್ದು ಕೊಕ್ಕು ನೋವಾಗುವಂತೆ ಪಕ್ಕದಲ್ಲುರುಳಿ ನಡೆಯುತ್ತ, ಮಧ್ಯಾಹ್ನದ ಬಿರುಬಿಸಿಲಿನಿಂದ ಕಣ್ಣುಗಳು ಮುಚ್ಚಿ ನಿಟ್ಟುಸಿರು ಹೊಮ್ಮಿ ನೋವನ್ನನುಭವಿಸಿ ಈ ರೀತಿ ಹೇಳಿಕೊಂಡೆನು.)

ಒಟ್ಟಿನಲ್ಲಿ ನಾಗವರ್ಮನ 'ಕರ್ನಾಟಕ ಕಾದಂಬರಿ'ಯು ಸುಂದರವಾದ ಅನುವಾದ ಕಾವ್ಯ. ಕವಿಯು ಮುಕ್ಕೀಕಾಮಕ್ಕಿ ಬಾಣನ ಬರೆಹವನ್ನು ಕನ್ನಡಕ್ಕಿಳಿಸದೆ ಅದನ್ನೂ ಚಂಪೂರೂಪದಲ್ಲಿ ಅಳವಡಿಸಿರುವುದಲ್ಲದೆ, ಹಲವಾರು ಸಂದರ್ಭಗಳಲ್ಲಿ ತನ್ನ ವಿವೇಚನೆಯನ್ನು ಮೆರೆದಿದ್ದಾನೆ. ದೀರ್ಘವಾದ ವರ್ಣನೆಗಳಿದ್ದೆಡೆಯಲ್ಲಿ ಅನವಶ್ಯಕವೆಂದೂ ಅಷ್ಟೊಂದು ಸುಂದರವಲ್ಲವೆಂದೂ ತೋರಿದ ಭಾಗವನ್ನು ಕೈಬಿಟ್ಟಿದ್ದಾನೆ; ಮತ್ತೆ ಕೆಲವೆಡೆಗಳಲ್ಲಿ ತನ್ನ ಸ್ವಂತದ ಕೆಲವು ಕಲ್ಪನೆಗಳನ್ನೂ ಸೇರಿಸಿದ್ದಾನೆ. ಮೂಲದ ಹಲವು ಭಾಗಗಳನ್ನು ಅನುವಾದದಲ್ಲಿ ಬಿಡುವಾಗ ನಾಗವರ್ಮನು ತನ್ನ ವಿಮರ್ಶನ ಪ್ರಜ್ಞೆಯನ್ನು ಚೆನ್ನಾಗಿ ಬಳಸಿಕೊಂಡಿದ್ದಾನೆ. ಮೂಲಗದ್ಯದ ಭಾಗವನ್ನು ಪದ್ಯಗಳಲ್ಲಿ ಹೇಳುವಾಗ ಕವಿಯು ಬಹು ಎಡೆಗಳಲ್ಲಿ ಭಾವಕ್ಕೆ ಅನುಗುಣವಾದ ವೃತ್ತವನ್ನು ಆಯ್ದುಕೊಂಡಿದ್ದಾನೆ. ಅವನು ಬಳಸಿರುವ ಭಾಷೆಯೂ ಸಹ ಇಡೀ ಕಾವ್ಯದ ಪ್ರಣಯ ವಾತಾವರಣಕ್ಕೆ ಅನುಗುಣವಾಗಿರುವಂತಹುದು. ಹೀಗಾಗಿ 'ಕರ್ನಾಟಕ ಕಾದಂಬರಿ'ಯು ಅನುವಾದವಾಗಿದ್ದರೂ ಸ್ವತಂತ್ರ ಕಾವ್ಯವೆಂಬಂತೆ ತೋರುತ್ತದೆ. ಅದ್ದರಿಂದಲೇ ಇದು ಕನ್ನಡ ಸಾಹಿತ್ಯದಲ್ಲಿ ಗಣ್ಯವಾದ ಸ್ಥಾನವನ್ನು ಗಳಿಸಿರುವುದು.

ದುರ್ಗಸಿಂಹ

'ಪಂಚತಂತ್ರ'ವೆಂಬ ಕಾವ್ಯವನ್ನು ಬರೆದಿರುವ ದುರ್ಗಸಿಂಹನು ಚಾಲುಕ್ಯ ಜಗದೇಕಮಲ್ಲ ಜಯಸಿಂಹನ (ಕ್ರಿ.ಶ. ೧೦೧೨-೪೨) ಸಂಧಿವಿಗ್ರಹಿ (ಯುದ್ಧ ವಿಷಯದ ಮಂತ್ರಿ) ಯಾಗಿದ್ದವನು. ಆದ್ದರಿಂದ ಇವನ ಕಾಲ ಕ್ರಿ.ಶ. ೧೦೩೦. ಇವನು ಭಾಗವತ ಸಂಪ್ರದಾಯದ ಸ್ಮಾರ್ತ ಬ್ರಾಹ್ಮಣ. ಇವನ ವಂಶದ ವಿಷಯವನ್ನು ಇವನ ಕೃತಿಯಿಂದಲೇ ಹೀಗೆ ಸಂಗ್ರಹಿಸಿ ಹೇಳಬಹುದು: ಕರ್ನಾಟಕದ ಕಿಸುಕಾಡುನಾಡಿನಲ್ಲಿ ಸಯ್ಯಡಿಯೆಂಬ ಅಗ್ರಹಾರದಲ್ಲಿ ವೇದಗಳಲ್ಲಿ ಪರಿಣತನೂ

ಯಾಗಗಳನ್ನು ಮಾಡಿ ಪವಿತ್ರನಾದವನೂ ಅನೇಕ ಶಾಸ್ತ್ರಗಳಲ್ಲಿ ಪಂಡಿತನೂ ಆದ ದುರ್ಗಮಯ್ಯನಿದ್ದ. ಇವನ ಮಗ ದೇವ ದ್ವಿಜಗುರುಗಳ ಸೇವಕನಾದ ಈಶ್ವರಾರ್ಯ. ಈ ಈಶ್ವರಾರ್ಯನ ಹೆಂಡತಿ ರೇವಕಬ್ಬೆ. ಈ ದಂಪತಿಗಳ ಮಗನೇ ದುರ್ಗಸಿಂಹ, ಗೌತಮಗೋತ್ರದ ಕಮ್ಮೆ ಬ್ರಾಹ್ಮಣ. ಇವನ ಗುರು ಮಹಾಯೋಗಿ ಶಂಕರಭಟ್ಟ. ದುರ್ಗಸಿಂಹನು ಸಯ್ಯಡಿಯಲ್ಲಿ ತನ್ನ ಆಶ್ರಯದಾತನ ಆಜ್ಞೆಯಂತೆ ಹರಿಹರ ದೇವಾಲಯಗಳನ್ನು ಕಟ್ಟಿಸಿದನಂತೆ

ಇವನ ಕೃತಿ 'ಪಂಚತಂತ್ರ'ವೆಂಬ ಐದು ಪ್ರಕರಣಗಳುಳ್ಳ ಚಂಪೂಕಾವ್ಯ. ತಾನು ವಸುಭಾಗಭಟ್ಟನೆಂಬ ಕವಿಯು ಸಂಸ್ಕೃತದಲ್ಲಿ ರಚಿಸಿರುವ ಪಂಚತಂತ್ರವನ್ನು ಕನ್ನಡದಲ್ಲಿ ರಚಿಸಿದಂತೆ ಹೇಳಿಕೊಂಡಿದ್ದಾನೆ. ಸಂಸ್ಕೃತದಲ್ಲಿ ವಿಷ್ಣು ಶರ್ಮನಿಂದ ವಿರಚಿತವಾದ ಪಂಚತಂತ್ರವು ಪ್ರಸಿದ್ಧವಾಗಿದೆ. ವಸುಭಾಗಭಟ್ಟನೆಂಬುವನೂ ಸಂಸ್ಕೃತದಲ್ಲಿ 'ಪಂಚತಂತ್ರ'ವನ್ನು ಬರೆದಿದ್ದ ವಿಷಯವೂ, ಅದರ ಸ್ವರೂಪವೂ ದುರ್ಗಸಿಂಹನಿಂದಲೇ ನಮಗೆ ತಿಳಿಯುವುದು, ಹೀಗಾಗಿ ಕೃತಿಗೆ ತುಂಬ ಮಹತ್ವವಿದೆ. ದುರ್ಗಸಿಂಹನು ವಿಷ್ಣುಶರ್ಮನ ಹೆಸರನ್ನೇ ಹೇಳಿಲ್ಲ. ಅಪೂರ್ವವಾದ ಕತೆಯೊಂದನ್ನು ತನಗೆ ಹೇಳಬೇಕೆಂದು ಗಿರಿಜೆಯು ಶಿವನನ್ನು ಕೇಳಿದಾಗ ಅದರಂತೆ ಒಂದು ಸುಂದರವಾದ ಕತೆಯನ್ನು ಶಿವನು ಹೇಳುತ್ತಾನೆ; ಅದನ್ನು ಕೇಳಿಸಿಕೊಂಡಿದ್ದ ಪುಷ್ಪದಂತನೆಂಬ ಗಣಪ್ರಧಾನನು ಯಾವುದೋ ಕಾರಣದಿಂದ ಮಾನವನಾಗಿ ಹುಟ್ಟಿ ಗುಣಾಢ್ಯನೆಂಬ ಕವಿಯಾಗುತ್ತಾನೆ; ಅವನು ಶಾಲಿವಾಹನ ಚಕ್ರವರ್ತಿಯಲ್ಲಿ ಕವಿಯಾಗಿದ್ದು ಪೈಶಾಚಿಕ ಭಾಷೆಯಲ್ಲಿ ಶಿವನು ಗಿರಿಜೆಗೆ ಹೇಳಿದುದನ್ನೇ ಬೃಹತ್ಕಥೆಗಳನ್ನಾಗಿ ಹೇಳುತ್ತಾನೆ. ಅವುಗಳಲ್ಲಿ ಐದು ರತ್ನಗಳಂತಹ ಕತೆಗಳನ್ನಾಯ್ದುಕೊಂಡು ವಸು ಭಾಗಭಟ್ಟನು 'ಪಂಚತಂತ್ರ'ವೆಂಬ ಹೆಸರಿನಿಂದ ಜನರ ಹಿತಕ್ಕಾಗಿ ಬರೆದಿಟ್ಟನು. ಅದನ್ನು 'ಪೊಸತಾಗಿರೆ' ದುರ್ಗಸಿಂಹನು ಕನ್ನಡದಲ್ಲಿ ವಿರಚಿಸಿದನು.

'ಪಂಚತಂತ್ರ'ದಲ್ಲಿ ಒಂದೊಂದು ತಂತ್ರಕ್ಕೂ ಒಂದೊಂದು ಅಧಿಕರಣದಂತೆ ಒಟ್ಟು ಐದು ಅಧಿಕರಣಗಳಿವೆ; ಅವೆಂದರೆ: (೧) ಭೇದ ಪ್ರಕರಣ ವರ್ಣನಂ, (೨) ಪರೀಕ್ಷಾವ್ಯಾವರ್ಣನಂ, (೩) ವಿಶ್ವಾಸಪ್ರಕರಣವರ್ಣನಂ (೪) ವಂಚನಾಪ್ರಕರಣ ವರ್ಣನಂ ಮತ್ತು (೫) ಮಿತ್ರಕಾರ್ಯಪ್ರಕರಣಂ. ಒಟ್ಟಿನಲ್ಲಿ ಈ ಕಾವ್ಯದಲ್ಲಿ ೪೫೫ ಪದ್ಯಗಳೂ ೨೩೦ ಶ್ಲೋಕಗಳೂ ೪೮ ಉಪಕಥೆಗಳೂ ಇವೆ. ಇದು ಚಂಪೂಕಾವ್ಯವೆನಿಸಿದರೂ ಇಲ್ಲಿ ಗದ್ಯಭಾಗವೇ ಹೆಚ್ಚು. ಕತೆಯನ್ನು ಹೇಳಲು ಪದ್ಯಕ್ಕಿಂತ ಗದ್ಯವೇ ಸುಲಭವೂ ಅನುಕೂಲಕರವೂ ಆದುದೆಂಬ ಕಾರಣದಿಂದಲೇ ಈ ರೀತಿ ಹೆಚ್ಚು ಗದ್ಯವನ್ನು ದುರ್ಗಸಿಂಹನು ಬರೆದಂತೆ ಕಾಣುತ್ತದೆ. ಗದ್ಯದ ಶೈಲಿಯು ಸರಳವೂ ಸುಂದರವೂ ಆಗಿದೆಯಾದರೂ ಅಲ್ಲಲ್ಲಿ ಬರುವ ಪದ್ಯಗಳಲ್ಲಿ ಕೆಲವು ತೀರ ಸಂಸ್ಕೃತ ಮಯವಾಗಿದ್ದು ಕೃತಕವಾಗಿವೆ. ಇದನ್ನು ಮಹಾಕಾವ್ಯವೆಂದು ಕರೆಯಲಾಗದಿದ್ದರೂ ರಾಜ ನೀತಿಯನ್ನು ಬೋಧಿಸುವ ಕತೆಗಳನ್ನೊಳಗೊಂಡು ರಂಜಕವಾಗಿರುವ ಇದು ಕನ್ನಡದಲ್ಲಿ ಆ ಕಾಲಕ್ಕೆ ಹೊಸ ಬಗೆಯ ಕಾವ್ಯ. ಒಂದೆರಡು ಕತೆಗಳ ನೇರ

ಪರಿಚಯದಿಂದ ಈ ಕೃತಿಯ ಸ್ವರೂಪವನ್ನು ತಿಳಿಯಲು ಪ್ರಯತ್ನಿಸೋಣ.

ಮೊದಲಿಗೆ ಭೇದಪ್ರಕರಣದಲ್ಲಿ ಬರುವ 'ಮೊಲಂ ಸಿಂಹಮಂ ಕೊಂದ ಕಥೆ'ಯನ್ನು ನೋಡಬಹುದು. ಒಂದಾನೊಂದು ದಟ್ಟವಾದ ಅರಣ್ಯದಲ್ಲಿ

> **ದುರ್ಧರ ವಿಕ್ರಮನ್ ಉರುತರ**
> **ದೋರ್ದಂಡಸಹಾಯನ್ ಇರ್ಪುದು ಎಂದುಮಜೇಯಂ**
> **ನಿರ್ದಯನ್ ಅನುಪಮ ನಖಮುಖ**
> **ನಿರ್ದಾರಿತವನ್ಯನಾಗಸಂಘಂ ಸಿಂಗಂ** (ಪಂಚ.ಪದ್ಯ ೧೪೩)

(ಅಪ್ರತಿಮ ಬಲವುಳ್ಳದ್ದೂ ಬಾಹುಬಲಪರಾಕ್ರಮವುಳ್ಳದ್ದೂ ಗೆಲ್ಲಲಸಾಧ್ಯವಾದದ್ದೂ ತನ್ನ ಹರಿತವಾದ ಉಗುರುಗಳಿಂದ ಕಾಡಾನೆಗಳ ಸಮೂಹವನ್ನೇ ಸೀಳುವಂತಹದೂ ಆದ ಸಿಂಹವೊಂದು ವಾಸಿಸುತ್ತಿತ್ತು.) ಆ ಸಿಂಹವು ಆ ಕಾಡಿನಲ್ಲಿದ್ದ ಆನೆಗಳನ್ನೆಲ್ಲ ತಿಂದು ಅನಂತರ ಆಹಾರವೇ ಸಿಕ್ಕದೆ ಸಿಕ್ಕ ಪ್ರಾಣಿಗಳನ್ನೆಲ್ಲ ತಿನ್ನಲು ತೊಡಗಿತು. ಆಗ ಮೃಗಗಳೆಲ್ಲವೂ ಒಟ್ಟಾಗಿ ಸೇರಿ ಮೃಗ ರಾಜನಾದ ಸಿಂಹನಲ್ಲಿಗೆ ಬಂದು ಹೀಗೆ ಕೇಳಿದವು: 'ನೀವು ಇಷ್ಟು ಕಾಲ ನಮ್ಮನ್ನು ಇಷ್ಟು ಕಾಲ ಸಲಹಿದಿರಿ. ಈಗ ನಿಮಗೆ ತೊಂದರೆಯಾದ ಕಾಲದಲ್ಲಿ ನಿಮ್ಮ ಸಹಾಯಕ್ಕೆ ಬಾರದ ನಮ್ಮ ಜೀವನವೇತಕ್ಕೆ? ನಿಮಗೆ ಆನೆಗಳು ದೊರೆಯುವವರೆಗೂ ನಾವು ನಿತ್ಯವು ಒಂದೊಂದು ಮೃಗವನ್ನು ನಿಮಗೆ ಆಹಾರಕ್ಕಾಗಿ ಕಳಿಸುತ್ತೇವೆ. ಅದನ್ನು ಸ್ವೀಕರಿಸಿ ತೃಪ್ತಿಪಟ್ಟುಕೊಳ್ಳಬೇಕು' ಎಂದು ಕೇಳಿಕೊಂಡಾಗ ಸಿಂಹವು ಈ ವ್ಯವಸ್ಥೆಗೆ ಒಪ್ಪಿತು. ಅದರಂತೆಯೇ ಪ್ರತಿನಿತ್ಯವೂ ಒಂದೊಂದು ಪ್ರಾಣಿಯು ಸಿಂಹಕ್ಕೆ ಆಹುತಿಯಾಗುತ್ತಿತ್ತು.

ಹೀಗೆ ಇರುವಾಗ ಒಮ್ಮೆ ದೀರ್ಘಕರ್ಣನೆಂಬ ಮೊಲಕ್ಕೆ ಸಿಂಹಕ್ಕೆ ಆಹಾರ ವಾಗುವ ಸರದಿಯು ಬಂದಿತು. ಆ ಮೊಲವು ಉಪಾಯದಲ್ಲಿ ನಿಪುಣ. ಸಾವು ಸಮೀಪಿಸಿದ ಈ ಕಾಲದಲ್ಲಿ "ನಾಶಕ್ಯಂ ಬುದ್ಧಿವಂತಃ ಪುರುಷಸ್ಯ" (ಬುದ್ಧಿವಂತ ನಾದವನಿಗೆ ಅಸಾಧ್ಯವಾದದ್ದೇ ಇಲ್ಲ) ಎಂದು ಆಲೋಚನೆ ಮಾಡಿ ತಾನು ಉಳಿಯ ಬಹುದಾದ ಉಪಾಯವಾವುದೆಂಬುದನ್ನು ಚಿಂತಿಸಿ ಕೊನೆಗೆ ಒಂದು ನಿರ್ಧಾರಕ್ಕೆ ಬಂದಿತು. ಅದರ ಪ್ರಕಾರ ಸಾಯಂಕಾಲದವರೆಗೂ ಸಿಂಹದೆಡೆಗೆ ಹೋಗದೆ ಕೊನೆಗೆ ಹೊರಟಿತು. ಅನಂತರ ಎಲ್ಲಿಯೂ ನಿಲ್ಲದೆ "ಪೆಱಗಂ ನೋಡುತ್ತುಂ, ಭಯಾತುರನಂತೆ ಬಂದು ಮರಣಭ್ರಾಂತಿಯಂ ಚಿಂತಿಸಿ ಬರುತ್ತುಂ, ತೊಟ್ಟನೆ ಪುರಾಣ ಕೂಪಮಂ ಕಂಡು, ತೃಷೆಯಿಂ ನೀರ್ಗುಡಿಯವೇಟ್ಕೆಯಿಂದು ನೋಡಿ, ಏಱಿ ಇೞಿಯಲುಂ ಬಾರದ ಸ್ವಚ್ಛಜಲದೊಳ್ ತನ್ನ ಪ್ರತಿಬಿಂಬಮಂತು ಬಿಂಬಿಸುವುದಂ ಕಂಡು, ಈ ಸಿಂಹಮಮ ನಿಲ್ಲಿಯೆ ಕೊಲಲುಂ ಗೆಲಲುಂ ಸಾಲ್ಗುಂ ಎಂದು ಉತ್ಸಾಹದಿಂದ" ಆಲೋಚಿಸಿತು.

ಅನಂತರ ಹಾಗೆಯೇ ಸಾಗಿ ಬಂದು ಭಯಗೊಂಡವನಂತೆ ನಟಿಸುತ್ತ ಸಿಂಹದೆಡೆಗೆ ಓಡಿತು: ಇದಕ್ಕಾಗಿ ಕಾದಿದ್ದ ಸಿಂಹವೋ

> **ಭ್ರುಕುಟಿಪುಟರಕ್ತನೇತ್ರನಂ**
> **ಆಕಾಲ ಕಾಲೋಗ್ರನಂ ಭಯಂಕರ ದಂಷ್ಟ್ರಾ**

ಪ್ರಕರಾಳವದನನಂ ದೀ
ರ್ಘಕರ್ಣನ್ ಎಯ್ದಿದನ್ ಅರಣ್ಯಗವಲ್ಲಭನಂ (ಪಂಚ. ಪದ್ಯ. ೧೪೫)

(ಹುಬ್ಬು ಗಂಟಿಕ್ಕಿಕೊಂಡು ಕೆಂಪಾದ ಕಣ್ಣುಗಳನ್ನುಳ್ಳ, ಅಕಾಲಯಮನಂತೆ ಉಗ್ರವಾಗಿದ್ದ, ಭಯಂಕರವಾದ ದಾಡೆಗಳಿಂದಾಗಿ ಕರಾಳ ಮುಖದಿಂದ ಕೂಡಿದ್ದ ಸಿಂಹದೆಡೆಗೆ ಮೊಲವು ಬಂದಿತು.) ಅದನ್ನು ಕಂಡು 'ಜಠರಾನಳ ಶಿಖಾಕಳಾಪಂ ದಂದಹ್ಯಮಾನಮಾನಸಂ ಸಿಂಗಂ' (ಹಸಿವೆಂಬ ಬೆಂಕಿಯಿಂದ ಬೆಂದು ಹೋಗಿದ್ದ ಮನಸ್ಸಿನ ಸಿಂಹವು) "ನೀನು ಬರಲು ಏಕಿಷ್ಟು ತಡ? ಭಯದಿಂದ ನಡುಗಿತ್ತಿದ್ದೀಯೇ. ಯಾರು ನಿನ್ನನ್ನು ತಡೆದು ತಡಮಾಡಿದವರು? ನಿನ್ನ ರಕ್ಷಕನಾರಾದರೂ ಇದ್ದರೆ ಹೇಳು. ಮೊದಲು ಅವನನ್ನು ನುಂಗಿ ಅನಂತರ ನಿನ್ನನ್ನು ಕಬಳಿಸುತ್ತೇನೆ" ಎಂದು ಗರ್ಜಿಸಿತು. ಅದಕ್ಕೆ ಉತ್ತರವಾಗಿ ಮೊಲವು "ದೇವಾ, ನಿಮ್ಮ ಕೋಪ ನಮ್ಮಂತಹ ಬಡಪಾಯಿಗಳ ಮೇಲೆ. ನಾನು ನಿಮ್ಮೆಡೆಗೆ ಬರುತ್ತಿರುವಾಗ ಒಂದು ಸಿಂಹವು ನನ್ನನ್ನು ತಡೆದು ನಾನು ಏತಕ್ಕಾಗಿ ಹೋಗುತ್ತಿರುವೆನೆಂಬುದನ್ನು ಕೇಳಿ ತಿಳಿದು

ತುಂಗಗಜಂಗಳ್ಗಳ್ಕಿ ಮೃ
ಗಂಗಳಾನಾಯ್ದಱಸಿ ತಿಂಬುದಪ್ಪೊಡೆ ಪೆಱತೇಂ
ಸಿಂಗಮದಲ್ಲದು ಪೋಗು ಆ
ಸಿಂಗಂ ತಾಂ ಗಾವಸಿಂಗಮೆಂದುದು ನಿನ್ನಂ (ಪಂಚ. ಪದ್ಯ. ೧೪೬)

(ದೊಡ್ಡ ಆನೆಗಳಿಗೆ ಹೆದರಿಕೊಂಡು ಅವುಗಳನ್ನು ತಿನ್ನದೆ ಬೇರೆಯ ಪ್ರಾಣಿಗಳನ್ನು ಹಿಡಿದು ತಿನ್ನುವ ನಿಮ್ಮ ಸಿಂಹವು ಸಿಂಹವಲ್ಲ. ಗ್ರಾಮಸಿಂಹ–ನಾಯಿ–ಎಂದು ನಿಮ್ಮನ್ನು ಹೀಯಾಳಿಸಿತು.) "ಅಲ್ಲದೆ ನನ್ನನ್ನು ಅಡ್ಡಗಟ್ಟಿತು, ಹೇಗೋ ತಪ್ಪಿಸಿಕೊಂಡು ಬಂದೆ" ಎಂದು ಹೇಳಿತು. ಮೊದಲೇ ಹಸಿವು. ಮೇಲೆ ಈ ಹೀಯಾಳಿಸುವ ಮಾತುಗಳು ಸಿಂಹಕ್ಕೆ ರೇಗಿ ಹೋಯಿತು. ತನ್ನ ಬಗ್ಗೆ ಕೆಡುಕನ್ನಾಡಿದ ಸಿಂಹವನ್ನು ಸೀಳುವೆನೆಂದು ನಿಶ್ಚಯಿಸಿ ಅದು ಇರುವ ಸ್ಥಳವನ್ನು ತೋರಿಸೆಂದು ಮೊಲವನ್ನು ಕೇಳಿತು. ಅದಕ್ಕೆ ಜಾಣನಾದ ಮೊಲವು "ಸ್ವಾಮಿಬೇಡ ಬೇಡ. ಆ ಸಿಂಹವು ತುಂಬ ಬಲಿಷ್ಠ. ನೀವೇಕೆ ಅದರಿಂದ ಸಾಯಬೇಕು. ನನ್ನನ್ನು ತಿಂದು ಸುಖವಾಗಿರಿ" ಎಂದು ಹೇಳಿ ಸಿಂಹವನ್ನು ಮತ್ತಷ್ಟು ರೇಗಿಸಿತು. "ಸುಮ್ಮನೆ ಆ ಸಿಂಹವಿರುವ ಜಾಗವನ್ನು ತೋರಿಸು" ಎಂದು ಗರ್ಜಿಸಿ ಮೊಲವನ್ನು ಕರೆದೊಯ್ದಿತು ಸಿಂಹ!

ಮೊಲವು ತಾನು ಹಿಂದೆ ನಿಗದಿಗೊಳಿಸಿದ್ದ ಹಳೆಯ ಬಾವಿಯೆಡೆಗೆ ಸಿಂಹವನ್ನು ಕರೆತಂದು ಈ ಬಾವಿಯಲ್ಲಿಯೇ ಆ ಸಿಂಹವಿದೆ ಎಂದು ಹೇಳಿತು. ಸಿಂಹವು ಬಾವಿಯಲ್ಲಿ ಬಗ್ಗಿ ನೋಡಿ ಅಲ್ಲಿ ಸಿಂಹಾಕಾರವಿರುವುದನ್ನು ಕಂಡು

ಕೋಪಾನಳನಳುರೆ ಮಹಾ
ಕೂಪದೊಳಿಭವೈರಿ ಪಾಯ್ದು ಸತ್ತುದು; ಘನಶೌ
ರ್ಯೋಪೇತನಾದೊಡಂ ಸಲೆ
ಕೋಪಾತುರನಪ್ಪನಾವನುಂ ಬಟ್ಟಪನೇ (ಪಂಚ.ಪದ್ಯ. ೧೪೭)

(ಅದು ಬೇರೊಂದು ಸಿಂಹವೆಂಬ ಭ್ರಮೆಯಿಂದ ಈ ಸಿಂಹಕ್ಕೆ ಕೋಪವೆಂಬ ಕಿಚ್ಚು

ಭುಗಿಲೆಂದು ಅದು ಬಾವಿಯೊಳಕ್ಕೆ ಹಾರಿ ಸತ್ತು ಹೋಯಿತು. ಅಧಿಕ ಪರಾಕ್ರಮಿಯಾದರೇನು, ಕೋಪಾತುರನಾದವನು ಬದುಕುತ್ತಾನೆಯೇ?)

'ಶಿವಭೂತಿಯ ಕಥೆ'ಯೆಂಬುದು ಮತ್ತೊಂದು ಸುಂದರವಾದ ಕಥೆ. ಒಂದು ದೊಡ್ಡ ಅರಣ್ಯದಲ್ಲಿ ಕಂಬಳಕನೆಂಬ ಒಬ್ಬ ಬೇಡನು ಬೇಟೆಗಾಗಿ ಹೋಗಿದ್ದಾಗ ಒಂದು ಹುಲಿಯು ಅವನನ್ನು ಅಟ್ಟಿಸಿಕೊಂಡು ಬಂದಿತು. ಅವನು ಪ್ರಾಣಭಯದಿಂದ ಓಡಿಬರುತ್ತ ಒಂದು ಹಳೆಯ ಬಾವಿಯಲ್ಲಿ ಬಿದ್ದ. ಛಲಗಾರನಾದ ಆ ಹುಲಿಯೂ ಅದೇ ಬಾವಿಯಲ್ಲಿ ಧುಮುಕಿತು. ಅಷ್ಟರಲ್ಲಿ ಚಪಲಕನೆಂಬ ಒಂದು ಕೋತಿಯು ನೀರು ಕುಡಿಯುವುದಕ್ಕಾಗಿ ಆ ಬಾವಿಯ ಬಳಿ ಬಂದಿತು. ಬಾವಿಯಲ್ಲಿ ಇಳಿಯಲು ಎಲ್ಲೂ ಜಾಗವಿರಲಿಲ್ಲ. ಆಗ ಅಲ್ಲಿ ನೇತಾಡುತ್ತಿದ್ದ ಹಾವನ್ನು ಬಳ್ಳಿಯೆಂದು ಭಾವಿಸಿ ಅದರ ಬಾಲವನ್ನು ಹಿಡಿದು ಇಳಿಯಲು ತೊಡಗಿತು: ಹಾವಿನ ಜೊತೆಗೆ ಅದೂ ಬಾವಿಯಲ್ಲಿ ಬಿತ್ತು ಅಷ್ಟರಲ್ಲಿ

ಮಲರಹಿತಂ ಅನೂನದಯಾ
ನಿಲಯಂ ಅದೃಷ್ಟಾರ್ಥಿ ತೀರ್ಥಯಾತ್ರಾ ಕ್ರಮವಿ
ಹ್ವಲಮಾನಸಂ ಪಿಪಾಸಾ
ಕುಲಿತಂ ಶಿವಭೂತಿಯೆಂಬ ಪಾರ್ವಂ ಬರುತುಂ (ಪಂಚ.ಪದ್ಯ. ೧೭೯)

(ನಿರ್ಮಲನೂ ದಯಾಪರನೂ ಅದೃಷ್ಟವನ್ನು ಹುಡುಕಿಕೊಂಡು ತೀರ್ಥಯಾತ್ರೆಗಾಗಿ ಹೋಗುತ್ತಿದ್ದ ಶಿವಭೂತಿಯೆಂಬ ಬ್ರಾಹ್ಮಣನು ಅಯಾಸದಿಂದಲೂ ಬಾಯಾರಿಕೆ ಯಿಂದಲೂ ಆ ಬಾವಿಯ ಬಳಿ ಬಂದು) ತನ್ನ ಕೈಯ್ಯಲಿದ್ದ ಪಾತ್ರೆಯನ್ನು ಬಳ್ಳಿಗೆ ಕಟ್ಟಿ ನೀರಿಗಾಗಿ ಕೆಳಗೆ ಬಿಟ್ಟ. ಹುಲಿ ಅದನ್ನು ಹಿಡಿದು ಜೋತಾಡಿತು. ಇದೇನೋ ಭಾರವಾಗಿದೆಯಲ್ಲ ಎಂದು ಶಿವಭೂತಿ ಹಗ್ಗವನ್ನು ಮೇಲೆಳೆದ. ಹುಲಿ ಮೇಲೆ ಬಂದು ಬ್ರಾಹ್ಮಣನಿಗೆ ನಮಸ್ಕರಿಸಿತು. ಅವನು ಆಶ್ಚರ್ಯದಿಂದ 'ನೀನು ಇಲ್ಲಿ ಹೇಗೆ ಬಂದೆ?' ಎಂದು ಕೇಳಿದಾಗ ಹುಲಿಯು ತಾನು ಬೇಡನೂ ಕೋತಿಯೂ ಹಾವು ಬಿದ್ದ ಕಾರಣವನ್ನು ತಿಳಿಸಿ, ತನ್ನನ್ನು ಬದುಕಿಸಿದ್ದಕ್ಕೆ ಕೃತಜ್ಞತೆಯನ್ನು ಸೂಚಿಸಿತು; ಹತ್ತಿರದ ಬೆಟ್ಟದ ತಪ್ಪಲಿನಲ್ಲಿ ತನ್ನ ಗುಹೆಯಿದೆಯೆಂದೂ ಅಲ್ಲಿಗೆ ಬಂದರೆ ಅಮೂಲ್ಯವಸ್ತುಗಳನ್ನು ಕೊಡುವುದಾಗಿಯೂ ತಿಳಿಸಿತು. ಅಗ ಶಿವಭೂತಿಯು ಬಾವಿಯಲ್ಲಿ ಬಿದ್ದಿರುವ ಇತರ ಪ್ರಾಣಿಗಳನ್ನು ತೆಗೆದು ಅನಂತರ ತೀರ್ಥಯಾತ್ರೆಯನ್ನು ಮುಗಿಸಿಕೊಂಡು ವಾಪಸ್ಸು ಬರುವಾಗ ಹುಲಿಯ ಗುಹೆಗೆ ಬರುವುದಾಗಿ ಹೇಳಿದಾಗ ಹುಲಿಯು 'ಆ ಬೇಡನು ತುಂಬ ನೀಚ ಮನುಷ್ಯ, ಅವನನ್ನು ಮಾತ್ರ ಬದುಕಿಸಬೇಡಿ. ನೀಚನಿಗೆಷ್ಟು ಉಪಕಾರ ಮಾಡಿದರೂ ಹಾವಿಗೆ ಹಾಲೆರೆದ ಹಾಗೆ' ಎಂದು ಎಚ್ಚರಿಸಿ ಹೊರಟು ಹೋಯಿತು.

ಅನಂತರ ಶಿವಭೂತಿಯು ಹಾವನ್ನೂ ಕೋತಿಯನ್ನೂ ಬಾವಿಯಿಂದ ಮೇಲಕ್ಕೆತ್ತಿದ. ತಾನು ಬದರಿಕಾಶ್ರಮದ ಉಪವನದಲ್ಲಿರುವುದಾಗಿಯೂ ಅಲ್ಲಿಗೆ ಯಾವಾಗಲಾದರೂ ಬಂದಾಗ ತನಗೆ ಆದಷ್ಟು ಕೃತಜ್ಞತೆಯನ್ನು ತೋರಿಸುವು ದಾಗಿಯಾ ಕೋತಿ ಹೇಳಿತು. ಹಾವು ಸಹ ಬ್ರಾಹ್ಮಣನಿಗೆ ನಮಸ್ಕರಿಸಿ 'ನಿಮ್ಮಡಿ,

ನೀಮೆನಗೆ ಪ್ರಾಣೋಪಕಾರಂಗೆಯ್ದಿರ್, ನಿಮಗೇನಾನುಮಧ್ವಾನಮಾದಾಗಳ್ ಎನ್ನಂ ನೆನೆದೊಡೆ ಆಂ ಬಂದು ದೇವರ ಸೇವೆಯಂ ಮಾಡಿ ಪೋಪೆಂ' (ತಾವು ನನ್ನನ್ನು ಬದುಕಿಸಿ ಉಪಕಾರ ಮಾಡಿದ್ದೀರಿ, ನಿಮಗೆ ಏನಾದರೂ ಕಷ್ಟವುಂಟಾದರೆ ನನ್ನನ್ನು ಜ್ಞಾಪಿಸಿಕೊಳ್ಳಿರಿ. ನಾನು ಬಂದು ನಿಮ್ಮ ಸೇವೆಯನ್ನು ಮಾಡುತ್ತೇನೆ) ಎಂದು ವಿನಯವಾಗಿ ನುಡಿಯಿತು. ಅನಂತರ ಅವೆರಡೂ ಹೊರಟುಹೋದವು. ಈಗ ಉಳಿದಿದ್ದವನು ಆ ಬೇಡ. ಶಿವಭೂತಿಗೆ ಮನಸ್ಸಿನಲ್ಲಿ ದಂದ್ವವುಂಟಾಯಿತು.

ಪೊಲ್ಲ ಗಡ ತೆಗೆಯಲಪ್ಪೊಡೆ
ಬಿಲ್ಲನನ್ ಎಂದೆನಗೆ ಪುಂಡರೀಕಂ ಪೇಳ್ದಿತ್ತು,
ಇಲ್ಲುಭಯ ಪಕ್ಷಪಾತಮೆ
ಪೊಲ್ಲದು, ಪೊಲ್ಲದೆ ಪರೋಪಕಾರವ್ಯಸನಂ (ಪಂಚ.ಪದ್ಯ. – ೧೪೦)

(ಬೇಡನ ಪ್ರಾಣವನ್ನುಳಿಸುವುದು ಸರಿಯಲ್ಲವೆಂದು ಹುಲಿಯು ಹೇಳಿತು; ಇಂತಹ ಸಮಯದಲ್ಲಿ ಪಕ್ಷಪಾತವನ್ನು ಮಾಡಬಾರದು. ಪರೋಪಕಾರವನ್ನು ಮಾಡುವುದು ಕೆಟ್ಟದ್ದೇ? ಅಲ್ಲ) ಎಂದು ಆಲೋಚಿಸಿ 'ಯತ್ಪರಾರ್ಥಂ ಶರೀರಂ' (ಈ ಶರೀರವು ಇತರರಿಗೆ ಉಪಕಾರಮಾಡುವುದಕ್ಕೇ ಇರುವುದು) ಎಂದುಕೊಂಡು ಆ ಬೇಡನ ಪ್ರಾಣವನ್ನೂ ಉಳಿಸಲು ಆಲೋಚಿಸಿದನು.

ಕರುಣಾಸಾರ್ದ್ರಹೃದಯಂ
ದುರಾತ್ಮನೆನ್ನದೆ ಕಿರಾತನಂ ತೆಗೆದಂ ಇಳಾ
ಮರಜನವಿನುತಂ; ಭಾವಿಸೆ
ಪರಹಿತನಿರಾತಾತ್ಮನಪ್ಪವಂಗೆ ಅರಿದುಂಟೆ?

(ಕರುಣರಸದಿಂದ ತುಂಬಿದ ಹೃದಯವುಳ್ಳ ಆ ಬ್ರಾಹ್ಮಣಶ್ರೇಷ್ಠನು ಬೇಡನ ಪ್ರಾಣವನ್ನೂ ಉಳಿಸಿದನು. ಇತರರ ಉಪಕಾರವನ್ನೇ ಮಾಡುವವರಿಗೆ ಅಸಾಧ್ಯವಾದದ್ದು ಯಾವುದು?) ಆಗ ಆ ಬೇಡನು ಬ್ರಾಹ್ಮಣನಿಗೆ ನಮಸ್ಕರಿಸಿ "ನೀವು ಯಾವಾಗಲಾದರೂ ನಾನಿರುವ ಪದ್ಮನಗರಕ್ಕೆ ಬಂದು ನನ್ನ ಸೇವೆಯನ್ನು ಸ್ವೀಕರಿಸಬೇಕು" ಎಂದು ಪ್ರಾರ್ಥಿಸಿ ಹೊರಟುಹೋದನು.

ಇತ್ತ ಶಿವಭೂತಿಯು ಕೆಲವು ಕಾಲ ತೀರ್ಥಯಾತ್ರೆಯನ್ನು ಮಾಡಿ ವಾಪಸ್ಸು ಬರುತ್ತಿರುವಾಗ ಬೆಟ್ಟದ ತಪ್ಪಲಿಗೆ ಬಂದ. ಇವನನ್ನು ಕಂಡ ಹುಲಿಯು ಆದರದಿಂದ ಅವನಲ್ಲಿಗೆ ಬಂದು ತನ್ನ ಗುಹೆಗೆ ಕರೆದೊಯ್ದಿತು. ಅಲ್ಲಿ ಅವನಿಗೆ ನಾನಾ ಬಗೆಯ ಬೆಲೆಬಾಳುವ ಆಭರಣಗಳನ್ನು ಕಾಣಿಕೆಯಾಗಿ ನೀಡಿತು. ಅದನ್ನು ಸ್ವೀಕರಿಸಿದ ಶಿವಭೂತಿಯು ಸಂತೋಷಪಟ್ಟು ಅಲ್ಲಿಂದ ಹೊರಟು ಬದರಿಕಾಶ್ರಮದ ಮಾವಿನ ಮರದಡಿಯಲ್ಲಿ ವಿಶ್ರಾಂತಿ ಪಡೆಯುತ್ತಿದ್ದನು. ಆ ವನದಲ್ಲಿಯೇ ಇದ್ದ ಬಲೀಮುಖ ನೆಂಬ ಕಪಿಯು ತುಂಬ ಪ್ರೀತಿಯಿಂದ ಅವನಲ್ಲಿಗೆ ಬಂದು ನಮಸ್ಕರಿಸಿ ಹಲಸು, ಮಾವು, ನೇರಳೆ, ತೆಂಗು, ನಿಂಬೆ, ಬೇಲ, ಬಾಳೆ, ಕಿತ್ತಳೆ, ಇತ್ಯಾದಿ ಹಣ್ಣುಗಳನ್ನಿತ್ತು ಗೌರವಿಸಿತು: ಅದನ್ನೆಲ್ಲ ಸ್ವೀಕರಿಸಿ ಕೊಂಚ ಸಮಯಾನಂತರ ಹೊರಟ.

ಕೆಲವು ದಿವಸ ಪ್ರಯಾಣಮಾಡಿದ ಶಿವಭೂತಿಯು ಪದ್ಮನಗರಕ್ಕೆ ಬಂದ. ಅವನನ್ನು ಕಂಡ ಬೇಡನು ನಮಸ್ಕಾರ ಮಾಡಿ ತನ್ನ ಮನೆಗೆ ಅವನನ್ನು ಕರೆದೊಯ್ದ. ಅದರೆ ಬ್ರಾಹ್ಮಣನಿಗೆ ಆತಿಥ್ಯ ನೀಡಲು ತನ್ನಲ್ಲಿ ಏನೂ ಇಲ್ಲದಿರುವುದರಿಂದ ಬೇಡನಿಗೆ ಮಾತೇ ಹೊರಡದಾಯಿತು. ಆಗ ಬ್ರಾಹ್ಮಣನು 'ಏಂ ಮಗನೆ ಚಿಂತಿಸುತ್ತಿರ್ದಪೆ' ಎಂದು ಕೇಳಿದನು. 'ನಿಮ್ಮಡಿಗಳುಂ ಬಿಜಯಂಗೆಯ್ದಿರ್, ಅನುಂ ನಿರುಪಾಯ ನಾಗಿರ್ದಪೆಂ' (ತಮ್ಮ ಪಾದವು ದಯಮಾಡಿಸಿದೆ. ಆದರೆ ಆತಿಥ್ಯವನ್ನು ನೀಡುವ ಮಾರ್ಗವೇ ನನಗಿಲ್ಲವಾಗಿದೆ) ಎಂದು ಬೇಡನು ಉತ್ತರಿಸಿದನು. ಬ್ರಾಹ್ಮಣ: 'ಇನ್ನುಮಿದರ್ಕೊಂದು ಚಿಂತೆಗೆಯ್ಯಲ್ವೇಡ. ಇನ್ನುಂ ನಿನಗೆ ಬಾಳ್ವುಪಾಯಮನ್ ಆನೇ ಮಾಳ್ಪೆನ್' (ಇದಕ್ಕಾಗಿ ಯೋಚನೆ ಮಾಡಬೇಡ. ನೀನು ಬದುಕುವ ಮಾರ್ಗವನ್ನು ನಾನು ತೋರುತ್ತೇನೆ) ಎಂದು ಗುಟ್ಟಾಗಿ ಕರೆದು ತನ್ನ ಬಳಿಯಿದ್ದ ಆಭರಣಗಳನ್ನು ಅವನಿಗೆ ತೋರಿಸಿದ. ಆಗ

ಎನಗೆ ಹಿತಂ ಬ್ರಾಹ್ಮಣನೀ
ತಂ ಎನ್ನದೆ ಅವಿವೇಕಿಯಾಗಿ ಶಿವಭೂತಿಗೆ ತೋ
ಟ್ವನೆ ಬಗೆದನಹಿತಮಂ ತ
ದ್ವನಚರಂ; ಎಂತುಂ ಕೃತಘ್ನರೇನಂ ಮಾಡರ್! (ಪಂಚ.ಪದ್ಯ – ೧೮೪)

(ಈ ಬ್ರಾಹ್ಮಣನು ನನಗೆ ಸಹಾಯವನ್ನು ಮಾಡಿದ್ದಾನೆ ಎಂಬುದನ್ನು ಮರೆತ ಅವಿವೇಕಿಯಾದ ಆ ಬೇಡನ ಮನಸ್ಸಿನಲ್ಲಿ ಕೆಟ್ಟ ಅಲೋಚನೆಯು ಉಂಟಾಯಿತು. ಕೃತಘ್ನರಾದವರು ಏನು ಮಾಡಲೂ ಹೇಸುವುದಿಲ್ಲ.)

ಹೀಗೆ ಕೆಟ್ಟ ಆಲೋಚನೆಯಿಂದ ಕೂಡಿದ ಬೇಡನು ಆ ಊರಿನ ಅರಸನ ಬಳಿ ಬಂದು 'ದೇವಾ ನಿಮ್ಮ ತುಡುವಾಭರಣಂಗಳಂ ಪಲವಮೂಲ್ಯ ವಸ್ತುಗಳಂ ತಂದೆನ್ನ ಮನೆಯೊಳೆರ್ವ ಪಾರ್ವನಿರ್ದಪಂ' (ಸ್ವಾಮಿ ನೀವು ಹಾಕಿಕೊಳ್ಳುವ ಆಭರಣಗಳನ್ನೂ ಕೆಲವು ಅಮೂಲ್ಯ ವಸ್ತುಗಳನ್ನೂ ಕದ್ದು ತಂದಿರುವ ಬ್ರಾಹ್ಮಣನೊಬ್ಬನು ನಮ್ಮ ಮನೆಯಲ್ಲಿದ್ದಾನೆ) ಎಂದು ದೂರುಕೊಟ್ಟನು. ಆ ರಾಜನು ತಳವಾರನನ್ನು ಕಳಿಸಿ ಶಿವಭೂತಿಯನ್ನು ಹಿಡಿಸಿ ಸೆರೆಯಲ್ಲಿಟ್ಟ. ಬ್ರಾಹ್ಮಣನಿಗೆ ಆಶ್ಚರ್ಯವಾಯಿತು. ಸ್ವಲ್ಪ ಹೊತ್ತು ಯೋಚಿಸಿ ಬಳಿಕ ಕಷ್ಟ ಬಂದಾಗ ನೆನೆಸಿಕೊಂಡರೆ ಬಂದು ಸಹಾಯಮಾಡುತ್ತೇನೆ ಎಂದು ಹೇಳಿದ್ದ ಹಾವಿನ ಮಾತುಗಳು ನೆನೆಪಿಗೆ ಬಂದವು. ಅದನ್ನು ನೆನಸಿಕೊಂಡು ಆ ಹಾವು ಅವನ ಸಹಾಯಕ್ಕೆ ಉಪಾಯವೊಂದನ್ನು ಸೂಚಿಸಿತು: 'ಅರಸನ ಪಿರಿಯ ಮಗನನೀಗಳೆ ಪೋಗಿ ಕೊಂದಪೆಂ, ನಿಮಗಲ್ಲದೆ ಪೆಱರಾರ್ಗಂ ಸಾಧ್ಯಮಾಗೆಂ, ನೀಮೊಂದುಪಾಯದಿಂ ಬಂದು ನೀರನಭಿಮಂತ್ರಿಸಿ ತಳಿಯಲೊಡಂ ನಿರ್ವಿಷಮಪ್ಪೆ, ಅಲ್ಲಿ ನಿಮ್ಮ ಸ್ವಾರ್ಥಮೆಲ್ಲಮಂ ತೀರ್ಚಿಕೊಳ್ಳಿಂ' (ರಾಜನ ಹಿರಿಯ ಮಗನನ್ನು ಕಚ್ಚಿ ಸಾಯಿಸುತ್ತೇನೆ, ನೀವಲ್ಲದೆ ಬೇರೆ ಯಾರಿಗೂ ವಿಷವು ಇಳಿಯುವುದಿಲ್ಲ. ನೀವು ಯಾವುದಾದರೂ ಮಾರ್ಗದಿಂದ ಬಂದು ಆ ಬಾಲಕನ ಮೇಲೆ ನೀರನ್ನು ಮಂತ್ರ ಹಾಕಿ ಚಿಮುಕಿಸಿದರೆ ವಿಷವೆಲ್ಲ ಇಳಿಯುವಂತೆ

ಮಾಡುತ್ತೇನೆ. ರಾಜನ ಬಳಿ ನಿಮಗೆ ಬೇಕಾದುದನ್ನು ಕೇಳಿಕೊಳ್ಳಿ.) ತಕ್ಷಣವೇ ಆ ಹಾವು ರಾಜಕುಮಾರನನ್ನು ಕಚ್ಚಿತು.

ರಾಜಕುಮಾರನನ್ನು ಹಾವು ಕಚ್ಚಿದ ಸುದ್ದಿಯು ಎಲ್ಲೆಡೆಗೆ ಹಬ್ಬಿತು. ನಗರದ ಗಾರುಡಿಗರೆಲ್ಲ ಬಂದು ವಿಷವನ್ನಿಳಿಸಲು ಪ್ರಯತ್ನಪಟ್ಟು ಸೋತರು. ಅದನ್ನು ಕಂಡು ರಾಜನು 'ಈ ಕುಮಾರನನೆತ್ತಿದಂಗೆ ಬೇಡಿತ್ತಂ ಕುಡುವೆಂ' ಎಂದು ಡಂಗುರ ಸಾರಿಸಿದ. ಅದನ್ನು ಕೇಳಿದ ಶಿವಭೂತಿಯು ತಾನು ಮಗುವನ್ನುಳಿಸುವುದಾಗಿ ಹೇಳಿ ಬಾಲಕನ ಬಳಿ ಬಂದು ನೀರನ್ನು ಮಂತ್ರಿಸಿ ಅವನ ಮೇಲೆ ಚಿಮುಕಿಸಿದ. ಕೆಟ್ಟ ಕನಸನ್ನು ಕಂಡವನಂತೆ ರಾಜಕುಮಾರನು ಎದ್ದು ಕುಳಿತ. ರಾಜನಿಗೆ ಸಂತೋಷವಾಯಿತು. 'ಶಿವಭೂತಿಗೆ ಪಿರಿದುಂ ವಿಭೂತಿಯಂ ಮಾಡಿ ಅತಂಗೆ ಕಿರಾತಕನಿಂದಾದವಸ್ಥೆಯಂ ಕೇಳ್ದು ಆ ಕಿರಾತನಂ ಯಮಪುರಿಗೆ ಕಳುಪಿದಂ', (ಶಿವಭೂತಿಗೆ ಅನೇಕ ವಿಧವಾಗಿ ಗೌರವಿಸಿದ. ಅವನಿಗೆ ಬೇಡನಿಂದಾದ ತೊಂದರೆಯನ್ನು ಕೇಳಿ ಬೇಡನನ್ನು ಯಮಪುರಕ್ಕೆ ಕಳುಹಿಸಿದ.)

ಹೀಗೆ ಪಂಚತಂತ್ರದ ಕತೆಗಳಲ್ಲಿ ಬರುವ ಬಹುಪಾಲು ಪಾತ್ರಗಳು ಪ್ರಾಣಿಪಕ್ಷಿಗಳು. ಅವು ಮನುಷ್ಯರಂತೆ ಮಾತನಾಡುತ್ತವೆ, ಮನುಷ್ಯರಂತೆಯೆ ಜೀವಿಸುತ್ತವೆ. ಈಸೋಪನ ಕತೆಗಳಲ್ಲಿಯೂ ಪ್ರಾಣಿಪಕ್ಷಿಗಳು ಬರುವುದಾದರೂ ಅವು ನಡೆದುಕೊಳ್ಳುವುದು ತಮಗೆ ಸಹಜವಾಗಿಯೇ, ಆದರೆ ಪಂಚತಂತ್ರದಲ್ಲಿ ಬರುವ ಪ್ರಾಣಿಗಳೂ ಪಕ್ಷಿಗಳೂ ಮನುಷ್ಯರ ಪ್ರತೀಕಗಳಾಗಿ ಬರುತ್ತವೆ. ರಾಜ ನೀತಿಯನ್ನು ಬೋಧಿಸುವ ದೃಷ್ಟಿಯಿಂದ, ಅದರಲ್ಲೂ ಕಿರಿಯರಿಗೆ ತಿಳಿಯ ಪಡಿಸುವ ಉದ್ದೇಶದಿಂದ ರಚಿತವಾಗಿರುವುದರಿಂದ ಅವರಿಗೆ ರುಚಿಸುವ ಹಾಗೆ ಮಾನವರ ನಡವಳಿಕೆಗಳನ್ನು ಪ್ರಾಣಿಗಳ ಮೂಲಕ ಚಿತ್ರಿಸುವ ಪ್ರಯತ್ನವನ್ನಿಲ್ಲಿ ಕಾಣಬಹುದು. ಈ ಆಶಯಕ್ಕೆ ತಕ್ಕಂತೆ ದುರ್ಗಸಿಂಹನು ಸರಳವಾದ, ಹೆಚ್ಚು ಗದ್ಯದಿಂದ ಕೂಡಿದ, ಅಲಂಕಾರಗಳಿಲ್ಲದೆ ನಿರಾಡಂಬರವಾದ ರೀತಿಯಲ್ಲಿ ಈ ಕಾವ್ಯವನ್ನು ರಚನೆಮಾಡಿದ್ದಾನೆ. ಒಂದೊಂದು ಭಾವನೆ ಅಥವಾ ಉಪಾಯವನ್ನು ತಿಳಿಸಲು ಒಂದೊಂದು ಕತೆಯನ್ನೋ ಉಪಕತೆಯನ್ನೋ ಇಲ್ಲಿ ಕಾಣಬಹುದು. ಕತೆಯಲ್ಲಿ ಕತೆಯು ಹೆಣೆದುಕೊಂಡು ಬಂದು ಇಲ್ಲಿ ಕತೆಯ ಪ್ರವಾಹವು ತಾನೇ ತಾನಾಗಿ ಹರಿಯುತ್ತದೆ. ಧಾರ್ಮಿಕ ಪ್ರಚಾರದ ಉದ್ದೇಶದಿಂದ ಕೂಡಿದ ಬರವಣಿಗೆಯೋ ರಾಜನನ್ನು ತೃಪ್ತಿಗೊಳಿಸಲು ಬರೆದ ಸಾಹಿತ್ಯವೋ ಇದ್ದ ಕಾಲದಲ್ಲಿ ಚಿಕ್ಕ ಚಿಕ್ಕ ಕತೆಗಳಿಂದ ಕೂಡಿ ಸುಲಲಿತವಾಗಿ ರಚಿತವಾದ ದುರ್ಗಸಿಂಹನ ಪಂಚತಂತ್ರವು ಶುದ್ಧ ಲೌಕಿಕ ಉದ್ದೇಶದಿಂದ ಕೂಡಿದ ಪ್ರಯತ್ನ–ಆ ಕಾಲಕ್ಕೆ ಕನ್ನಡದಲ್ಲಿ ಕಥಾಸಾಹಿತ್ಯವು ಬೆಳೆಯಲು ವಡ್ಡಾರಾಧನೆಯನಂತರ ಬಹು ಭದ್ರವಾದ ಬುನಾದಿಯನ್ನು ಹಾಕಿತು ಈ ಕಾವ್ಯ. ಅಲ್ಲದೆ ವಸುಭಾಗ ಭಟ್ಟನ ಸಂಪ್ರದಾಯಕ್ಕೆ ಸೇರಿದ ಇದು ಆ ಸಂಪ್ರದಾಯದ ಪಂಚತಂತ್ರವನ್ನು ಅಧ್ಯಯನ ಮಾಡಲು ತುಂಬ ಮಹತ್ವವಾದ ಸಾಮಗ್ರಿಯನ್ನು ನೀಡುತ್ತದೆ. ಈ ರೀತಿ ದುರ್ಗಸಿಂಹನ ಪಂಚತಂತ್ರಕ್ಕೆ ನಮ್ಮ ಸಾಹಿತ್ಯದಲ್ಲಿ ಅನೇಕ ಕಾರಣಗಳಿಂದಾಗಿ ವಿಶಿಷ್ಟ ಸ್ಥಾನವಿದೆ.

ರುದ್ರಭಟ್ಟ

ರುದ್ರಭಟ್ಟ, ರುದ್ರ ಎಂಬ ಹೆಸರುಗಳಿದ್ದ ಈ ಕವಿಯು 'ಜಗನ್ನಾಥ ವಿಜಯ' ವೆಂಬ ಕಾವ್ಯದ ಕರ್ತೃ. ಇವನು 'ರಸಕಲಿಕೆ' ಎಂಬ ಲಕ್ಷಣಗ್ರಂಥವೊಂದನ್ನೂ ಬರೆದಿದ್ದಾನೆ. ರುದ್ರಭಟ್ಟನು ತಾನು 'ಜಗನ್ನಾಥ ವಿಜಯ'ವನ್ನು ಬರೆಯಲು ಕಾರಣ ಚಂದ್ರಮೌಳಿ ಮತ್ತಿತರ ಪಂಡಿತರ ಪ್ರೇರಣೆ ಎಂದು ಹೇಳಿಕೊಳ್ಳುತ್ತಾನೆ. ಚಂದ್ರಮೌಳಿ ಯೆಂಬ ಹೆಸರಿನ ವಿದ್ವಾಂಸನು ವೀರಬಲ್ಲಾಳ(ಕ್ರಿ.ಶ. ೧೧೭೩-೧೨೨೦)ನ ಮಂತ್ರಿ ಯಾಗಿದ್ದಂತೆ ತಿಳಿಯುತ್ತದೆ: ಹೀಗಾಗಿ ರುದ್ರಭಟ್ಟನು ಈ ಕಾಲದಲ್ಲಿ ಎಂದರೆ ಕ್ರಿ.ಶ. ೧೧೮೦ರಲ್ಲಿ ಜೀವಿಸಿದ್ದಿರಬೇಕು. ಇವನು ವಿಷ್ಣುಭಕ್ತನಾದ ಸ್ಮಾರ್ತ ಬ್ರಾಹ್ಮಣಕವಿ. ಆದರೂ ಪಂಪ-ಪೊನ್ನ ಮುಂತಾದ ಇತರ ಮತದ ಕವಿಗಳನ್ನು ಸ್ಮರಿಸಿದ್ದಾನೆ. ಇವನಿಗೆ 'ಕೃತಿಶಾರದಾಭ್ರಚಂದ್ರಾತಪ', 'ಕವಿರಾಜ' ಎಂಬ ಬಿರುದುಗಳಿದ್ದಂತೆ ತೋರುತ್ತದೆ.

ಈ ಕವಿಯ ವಿಷಯವಾಗಿ ದಂತಕತೆಯೊಂದು ಪ್ರಚಾರದಲ್ಲಿದೆ; ಇವನು 'ರಾಜಶೇಖರ ವಿಲಾಸ' ಮುಂತಾದ ಕಾವ್ಯಗಳನ್ನು ಬರೆದ ಷಡಕ್ಷರ ದೇವನ ಕಾವ್ಯದ ಯಶಸ್ಸನ್ನು ಕಂಡು ಅಸೂಯೆಪಡುತ್ತಾನೆ: ಅವನಿಗಿಂತಲೂ ತಾನು ಹೆಚ್ಚು ಯಶಸ್ಸನ್ನು ಪಡೆಯಬೇಕೆಂಬ ಕಾರಣದಿಂದ ಕ್ರಿ.ಶ. ೧೬೮೯ರಲ್ಲಿ 'ಜಗನ್ನಾಥವಿಜಯ'ವನ್ನು ಬರೆಯುತ್ತಾನೆ. ಪಂಡಿತರು ಇದನ್ನು ಷಡಕ್ಷರನ ಕಾವ್ಯಗಳೊಂದಿಗೆ ಹೋಲಿಸಿ ನೋಡಿ 'ರಾಜಶೇಖರ ವಿಲಾಸ'ವೇ ಉತ್ತಮವಾದ ಕಾವ್ಯವೆಂದು ತೀರ್ಮಾನಿಸುತ್ತಾರೆ.; ಅನಂತರ ಷಡಕ್ಷರನು ತಾನಾಗಿಯೇ ರುದ್ರಭಟ್ಟನಿಂದ ಕಿತ್ತುಕೊಂಡಿದ್ದ ಬಿರುದುಗಳನ್ನೆಲ್ಲ ಅವನಿಗೆ ವಾಪಸ್ಸು ನೀಡುತ್ತಾನೆ; ಈ ಸಂಗತಿಯನ್ನು ಕೇಳಿದ ರುದ್ರಭಟ್ಟನ ಸ್ನೇಹಿತ ನಾದ ಲಕ್ಷ್ಮೀಶನು ಬ್ರಾಹ್ಮಣರಿಗೆ ಇದರಿಂದಾದ ಅಪಮಾನವನ್ನು ಹೋಗಲಾಡಿಸ ಬೇಕೆಂಬ ಕಾರಣದಿಂದ 'ಜೈಮಿನಿಭಾರತ'ವನ್ನು ರಚಿಸುತ್ತಾನೆ; ಕ್ರಿ.ಶ. ೧೬೯೧ರಲ್ಲಿ ರಚಿತವಾದ ಈ ಗ್ರಂಥವನ್ನು ಮೆಚ್ಚಿದ ವಿದ್ವಾಂಸರು ಲಕ್ಷ್ಮೀಶನಿಗೆ 'ಕವಿಚೂತವನಚೈತ್ರ' ಎಂಬ ಬಿರುದನ್ನು ನೀಡುತ್ತಾರೆ; ಹೀಗೆ ಅವನು ಬ್ರಾಹ್ಮಣರಿಗಾದ ಅಪಮಾನವನ್ನು ಹೋಗಲಾಡಿಸಿದನು. ಇದು ಕತೆ ಅಷ್ಟೆ. ಅದರಲ್ಲಿ ಹೆಚ್ಚು ಸತ್ಯಾಂಶವಿಲ್ಲ. ವಿವಿಧ ಮತೀಯರು ತಮ್ಮ ಮತದ ಕವಿಯೇ ಶ್ರೇಷ್ಠನೆಂದು ಹೇಳಿಕೊಳ್ಳುವುದಕ್ಕಾಗಿ ರಚಿಸಿದ ಈ ಕತೆ ಆಗಿನ ಮತೀಯ ಘರ್ಷಣೆಯನ್ನು ಸ್ವಲ್ಪಮಟ್ಟಿಗೆ ತೋರಿಸುತ್ತದೆ ಮಾತ್ರ.

ಜಗನ್ನಾಥ ವಿಜಯ

ಇದು ಹದಿನೆಂಟು ಆಶ್ವಾಸಗಳಿಂದ ಕೂಡಿದ ದೀರ್ಘವಾದ ಚಂಪೂ ಕಾವ್ಯ. ಇದರಲ್ಲಿ ವಿಷ್ಣು ಪುರಾಣದಿಂದ ಆಯ್ದ ಕೃಷ್ಣನ ಕತೆಯ ವಿಸ್ತಾರವಾದ ನಿರೂಪಣೆ ಯಿದೆ. ಕೃಷ್ಣನ ಹುಟ್ಟಿನಿಂದ ಹಿಡಿದು ಬಾಣಾಸುರ ಯುದ್ಧದವರೆಗಿನ ಕತೆಯು ಇದರಲ್ಲಿ ಹರಡಿಕೊಂಡಿದೆ. ಕಾವ್ಯದ ಪ್ರಾರಂಭದಲ್ಲಿ ಬ್ರಹ್ಮರುದ್ರ ಸೂರ್ಯರನ್ನು ಸುತ್ತಿಸುವ ಪದ್ಯಗಳಲ್ಲಿ ತನ್ನ ಆಶ್ರಯದಾತನಾದ ಚಂದ್ರಮೌಳಿಯನ್ನು ಶ್ಲೇಷೆಯ

ಮೂಲಕ ಹೊಗಳಿರುವಂತೆ ತೋರುವುದೆಂದು ವಿದ್ವಾಂಸರು ಅಭಿಪ್ರಾಯಪಡುತ್ತಾರೆ. ಈ ಕಾವ್ಯವು ಪ್ರೌಢವಾಗಿ ಹಿಂದಿನ ಜೈನಕವಿಗಳ ಮಾದರಿಯಲ್ಲಿ ರಚಿತವಾಗಿದೆ. ಸಾಮಾನ್ಯವಾಗಿ ಇವನು ಹೆಚ್ಚು ಸಂಸ್ಕೃತ ಶಬ್ದಗಳಿಂದ ಕೂಡಿದ ರಚನೆಯನ್ನು ಮಾಡುತ್ತಾನೆ. ಹೀಗಾಗಿ ಕಾವ್ಯವು ಸ್ವಲ್ಪ ಕ್ಲಿಷ್ಟವೇ. ಅಲ್ಲಲ್ಲಿ ಪಾಂಡಿತ್ಯದಿಂದ ರಚನೆಯು ಕೃತಕವಾಗಿಯೂ ತೋರುತ್ತದೆ. ಸಾಂಪ್ರದಾಯಿಕವಾದ ಹದಿನೆಂಟು ವರ್ಣನೆಗಳ ಭಾರವು ಬೇರೆ ಕಾವ್ಯವನ್ನು ಅಲ್ಲಲ್ಲಿ ಜಗ್ಗುತ್ತದೆ. ಆದರೆ ಕೃಷ್ಣನ ಬಾಲಲೀಲೆಗಳ ಪ್ರಸಂಗ, ಅವನನ್ನು ಮೈಮರೆತು ಸ್ತುತಿಸುವ ಸನ್ನಿವೇಶ–ಇಂತಹ ಕಡೆಗಳಲ್ಲಿ ರುದ್ರ ಭಟ್ಟನು ಕಾವ್ಯವನ್ನು ಸ್ವಾರಸ್ಯಕರವನ್ನಾಗಿ ಮಾಡುತ್ತಾನೆ. ಈ ಕಾವ್ಯದ ಕೆಲವು ಉತ್ತಮ ಭಾಗಗಳನ್ನು ಕವಿಯ ಮಾತುಗಳ ಮೂಲಕವಾಗಿಯೇ ಪರಿಚಯಿಸಿಕೊಳ್ಳೋಣ.

ದೇವಕಿಯು ತನಗಾಗುವ ಮಕ್ಕಳೆಲ್ಲವನ್ನೂ ಕಂಸನಿಗೆ ಕೊಡಲು ಒಪ್ಪಿದ್ದಾಳೆ. ತಾನು ತಾಯಿಯಾದರೂ ಮಗುವನ್ನು ಲಾಲನೆ–ಪಾಲನೆ ಮಾಡುವ ಸೌಭಾಗ್ಯವು ದೊರೆಯದಲ್ಲ ಎಂದು ಅವಳು ಚಿಂತಿಸುತ್ತಾಳೆ. ಸಖಿಯು ಅವಳನ್ನು ಸಮಾಧಾನ ಮಾಡಲು ಬಂದು ದುಃಖದ ವಿಚಾರವನ್ನು ಕೇಳಿದಾಗ ಅವಳ ದುಃಖವು ಹೆಚ್ಚಾಯಿತೇ ವಿನಾ ಅವಳಿಂದ ಪ್ರತ್ಯುತ್ತರವು ಬರಲಿಲ್ಲ ಎಂಬುದನ್ನು ಕವಿ ಈ ಪದ್ಯದಲ್ಲಿ ಸುಂದರವಾಗಿ ಚಿತ್ರಿಸುತ್ತಾನೆ:

ಮುತ್ತಂ ಕೊಯ್ದೆಟಲಿಕ್ಕಿದ
ಬಿತ್ತರದಿಂ ಸುರಿಪ ತೋರ ಕಣ್ಬನಿಯಿಂ ತ
ನ್ನುತ್ತುಂಗ ಕುಚಕೆ ಹಾರಮ
ನಿತ್ತಳ್, ಸತಿಯಿತ್ತುದಿಲ್ಲ ಸಖಿಗುತ್ತರಮಂ (ಜಗ ಎ. ೨–೬೪)

(ಮುತ್ತುಗಳು ನೇತಾಡುತ್ತಿರುವಂತೆ ಸುರಿಯುತ್ತಿರುವ ಕಣ್ಣೀರಿನಿಂದ ಅವಳು ತನ್ನ ಎದೆಗೆ ಹಾರವನ್ನಿತ್ತಳೇ ಹೊರತು ಸಖಿಯ ಮಾತಿಗೆ ಉತ್ತರವನ್ನೀಯಲಿಲ್ಲ.) ದೇವಕಿಯು ಕಂದನನ್ನು ಪಡೆಯುವವರ ಸೌಭಾಗ್ಯಕ್ಕೆಣೆಯುಂಟೆ ಎಂದು ಹಂಬಲಿಸುತ್ತಾಳೆ. ಅವಳ ಹಂಬಲದ ಮೂಲಕ ಕವಿಯು ಎಲ್ಲ ತಾಯಂದಿರ ಹಂಬಲವನ್ನೂ ಚಿತ್ರಿಸುತ್ತಾನೆ:

ಮೊಗಮಂ ನೋಡುವ ಲಲ್ಲೆಗೆಯ್ವ, ಮೊಲೆಯುಂಬ, ಅಬ್ಬಬ್ಬಜೂಬೆಂಬ
ಮ್ಮಗೆ ಕಾಲ್ವತ್ತುವ, ದೂರದಿಂದೆ ಪರಿತಂದಪ್ಪಪ್ಪೆನುತ್ತಪ್ಪುವ, ಒ
ಯ್ಯಗೆ ಚೆಯ್ಯಾಡುವ, ಮೇಲುದಂ ಮುಸುಕಿಡುತ್ತೋಯೆಂಬ ದಾಯೆಂಬ ಮು
ದ್ದುಗಳಂ ಬೀಱುವ ಕಂದನೊಳ್ ನಲಿವ ಪೆಣ್ಣೇಂ ನೋಂಪಿಯಂ ನೋಂತಳೋ

(ಜಗ ಎ. ೨–೬೭)

(ತಾಯಿಯ ಮುಖವನ್ನು ನೋಡಿ ಮುದ್ದುಗರೆಯುತ್ತ ಮೊಲೆಯುಣ್ಣುವ ಬಬ್ಬಬ್ಬ ಎಂದು ತೊದಲುತ್ತ ಬಂದು ಕಾಲಿಗೆ ಅಡರುವ, ದೂರದಿಂದ ಓಡಿ ಬಂದು ಅಪ್ಪುವ, ತಮಾಷೆಮಾಡಿ ಆಟವಾಡುವ, ಸೆರಗನ್ನು ಮುಸುಕಿಟ್ಟು ಓದಾ ಎಂದು ಕಿರಿಚಿ ಮುದ್ದು ಬೀರುವ ಮಗುವನ್ನು ಪಡೆಯುವ ತಾಯಿಯು ಎಷ್ಟು ಪುಣ್ಯವನ್ನು ಮಾಡಿದ್ದಾಳೇಯೋ.)

ಬಾಲಕೃಷ್ಣನು ಗೋಪಿಯರಿಗೆ ಕಾಣಿಸದ ಹಾಗೆ ಬಂದು ಬೆಣ್ಣೆಯನ್ನು ಕದಿಯುವುದನ್ನು ಕವಿ ವಾತ್ಸಲ್ಯವನ್ನುಂಟುಮಾಡುವ ಹಾಗೆ ಚಿತ್ರಿಸುತ್ತಾನೆ:

> ಘನುಕುಚೆ ಗೋಪಿ ಪಾಲ್ಗಡೆಯುತಂ ಮನೆವಾಟ್ತಿಗೆ ಪೋಗೆ ಗೆಜ್ಜೆಯಿಂ
> ದನಿ ನಸುಪೊಣ್ಮದಂತು ಪರಿತಂದೆಡಗೆಯ್ಯೊಳೆ ತೋಡಿ ಬೆಣ್ಣೆಯಂ
> ತಿನುತಿರೆ ಗೋಪಿ ಕಂಡು 'ಎಲೆಲೆ ಕಳ್ಳತನಂಗಳನಣ್ಣ ಕಂಡೆವಾವು'
> ಎನೆ ಕಡೆವಾಯ ಬೆಣ್ಣೆವೆರಸೊಯ್ಯನೆ ಪಿಂಗುವ ಕೃಷ್ಣನೊಪ್ಪಿದಂ

(ಜಗ ವಿ. ೩–೫೧)

(ಸುಂದರಿಯಾದ ಗೋಪಿಯು ಮೊಸರು ಕಡೆದು ಬೇರೆಯ ಮನೆಗೆಲಸಕ್ಕೆ ಹೊರಡುತ್ತಾಳೆ. ಇತ್ತ ಕೃಷ್ಣನು ಗೆಜ್ಜೆಯಿಂದ ಸದ್ದೇ ಹೊರಡದಂತೆ ನಿಧಾನವಾಗಿ ಬಂದು ಎಡಗೆಯ್ಯಿನಿಂದ ಪಾತ್ರೆಯನ್ನು ತೋಡಿ ಬೆಣ್ಣೆಯನ್ನು ತಿನ್ನುತ್ತಿರುವಾಗ ಗೋಪಿಯು ಕಂಡು 'ಎಲೆಲೆ ಕಳ್ಳತನ ಮಾಡುತ್ತಿದ್ದೇಯಾ?' ಎಂದು ಕೂಗಿದರೆ ಕೃಷ್ಣನು ಬಾಯ ತುದಿಗೆ ಬೆಣ್ಣೆಯು ಮೆತ್ತಿಕೊಂಡಿರುವಂತೆಯೇ ನಿಧಾನವಾಗಿ ಹಿಂದೆ ಸರಿಯುತ್ತಾನೆ.) ಇದರ ಮುಂದಿನ ಪದ್ಯದಲ್ಲಿ ಕೃಷ್ಣನಿಗೆ ಹಾಲನ್ನು ಕುಡಿಸಲು ಯಶೋಧೆಯು ಮಾಡುತ್ತಿದ್ದ ಉಪಾಯವನ್ನು ಮಗುವಿನ ಜಾಣತನವನ್ನು ಕವಿ ಚಿತ್ರಿಸುತ್ತಾನೆ.

> ಶಕಟವಿಮರ್ದನಾ ಮುಸಲಿ ಬಾರದ ಮುನ್ನಮೆ ನಮ್ಮ ಹೇಮಘಂ
> ಟಿಕೆ ಘಣಿಲೆಂಬ ನಂದಿನಿಯ ಪಾಲಿದೆ, ನೀಂ ಕುಡಿಯಲ್ಕೆ ನಿನ್ನ ಚೆಂ
> ಡಿಕೆ ಬಳೆದಪ್ಪುದು ಎಂದಬಲೆ ನಂಬಿಸೆ ಪಾಲ್ಗುಡಿದು, 'ಈಗಳಬ್ಬೆ ಚೆಂ
> ಡಿಕೆ ಎನಿತುದ್ದವಾದುದು?' ಎನುತಂ ಬೆಸಗೊಳ್ವ ಮುಕುಂದನೊಪ್ಪುಗುಂ

(ಜಗ ವಿ. ೩–೫೨)

(ಕೃಷ್ಣಾ, ಬಂಗಾರದ ಗಂಟೆಗಳನ್ನು ಕಟ್ಟಿರುವ ನಂದಿನಿ ಹಸುವಿನ ಹಾಲು ತಂದಿದ್ದೇನೆ: ಬಲರಾಮ ಬರುವ ಮುಂಚೆಯೇ ಕುಡಿದು ಬಿಡು: ಆಗ ನಿನ್ನ ಚೆಂಡಿಕೆಯು ಉದ್ಧವಾಗುತ್ತದೆ–ಎಂದು ತಾಯಿ ಹೇಳಿದಾಗ ಕೃಷ್ಣನು ಹಾಲನ್ನು ಕುಡಿದು 'ಅಮ್ಮ ಈಗ ಚೆಂಡಿಕೆಯು ಎಷ್ಟುದ್ದವಾಗಿದೆ?' ಎಂದು ಕೇಳುತ್ತಾನೆ.) ಮತ್ತೊಮ್ಮೆ, ಹಟಹಿಡಿದ ಕೃಷ್ಣನಿಗೆ ಯಶೋದೆಯು ಕತೆಯೊಂದನ್ನು ಹೇಳಲು ತೊಡಗಿದಳು. ಕತೆ ರಾಮನದು, ಸೀತೆಯನ್ನು ರಾವಣನು ಕದ್ದೊಯ್ದದ್ದು. ಅದನ್ನು ಕೇಳುತ್ತ ಕೇಳುತ್ತ ಕೃಷ್ಣನು ತನ್ನದೇ ಹಿಂದಿನ ಜನ್ಮದ ಪ್ರಸಂಗವನ್ನು ನೆನೆದು ಸೀತೆಯನ್ನು ರಾವಣನು ಅಪಹರಿಸುವಾಗ, ಕತೆ ಕೇಳಿ ಹೂಂಗುಟ್ಟುತ್ತಿದ್ದವನು, ಹೂಂಕರಿಸಿದನೆಂಬುದನ್ನು ರುದ್ರಭಟ್ಟನು ತುಂಬ ಸುಂದರವಾಗಿ ಚಿತ್ರಿಸುತ್ತಾನೆ. ಸಂಭಾಷಣಾ ಶೈಲಿಯಲ್ಲಿ ರಚಿತವಾದ ಈ ಪದ್ಯವು ಕವಿಯ ರಚನಾಕೌಶಲಕ್ಕೆ ನಿದರ್ಶನವೂ ಆಗಿದೆ:

> 'ಕತೆಯಂ ಕೇಳೆಲೆ ಕಂದ' 'ಹುಂ' 'ರಘುಜನೆಂಬಂ' 'ಹುಂ': 'ಸಕಾಂತಂ ವನ
> ಸ್ಥಿತನಾದಂ ಗುರುಪೇಟಿಳ್', 'ಹುಂ': 'ದಶಶಿರಂ ಕೊಂಡುಯ್ದನಾ ರಾಮನಾ
> ಸತಿಯಂ ತಾನ್', ಎನೆ ಪೂರ್ವಮಂ ನೆನೆಯುತುಂ ಹುಂಕೊಳ್ಳದೆ ಉತ್ಕೋಪಹುಂ
> ಕೃತಿಯಂ ಮಾಡುತಂ ಔಂಡುಗರ್ಚಿ ಕಿಸುಗಣ್ ಬಿಟ್ಟಚ್ಯುತಂ ರಂಜಿಕುಂ

(ಜಗ ವಿ. ೩–೬೧)

(ರಾಮನು ತಂದೆಯ ಮಾತಿನಂತೆ ಅರಣ್ಯವಾಸಕ್ಕೆ ಬಂದ ಪ್ರಸಂಗದವರೆಗೂ ಕತೆಯನ್ನು ಕೇಳುತ್ತಿದ್ದ ಶ್ರೀ ಕೃಷ್ಣನು ರಾವಣನು ಸೀತೆಯನ್ನು ಒಯ್ದ ವಿಷಯವನ್ನು ಕೇಳಿದಾಗ ಪೂರ್ವದ ನೆನಪು ಬಂದು ಹೂಂಗುಟ್ಟದೆ ಔಡು ಕಚ್ಚಿ ಕೆಂಗಣ್ಣಿನಿಂದ ಹೂಂಕರಿಸುತ್ತಾನೆ.)

ಕಂಸನು ಕೃಷ್ಣನನ್ನು ಉಪಾಯದಿಂದ ಬರಮಾಡಿಕೊಂಡು ಕೊಲ್ಲುವ ಆಲೋಚನೆ ಮಾಡುತ್ತಾನೆ. ಅದಕ್ಕಾಗಿ ಅಕ್ರೂರನೆಂಬ ತನ್ನ ಪ್ರಧಾನನನ್ನು ಕಳುಹಿಸಿ ಧನುರ್ಮಹೋತ್ಸವಕ್ಕೆ ಕೃಷ್ಣನನ್ನು ಕರೆತರುವಂತೆ ಆಜ್ಞೆ ಮಾಡುತ್ತಾನೆ. ಕೃಷ್ಣಭಕ್ತನಾದ ಅವನು ಕರ್ತವ್ಯ ಪ್ರಜ್ಞೆಯಿಂದ ಬಲರಾಮ ಕೃಷ್ಣರನ್ನು ಕರೆದೊಯ್ಯುತ್ತಾನೆ. ಆಗ ಗೋಪಿಯರು ಕೃಷ್ಣನ ವಿರಹವನ್ನು ಅನುಭವಿಸಿದ ಬಗೆಯು ರುದ್ರಭಟ್ಟನ ಲೇಖನಿಯಿಂದ ಸುಂದರವಾಗಿ ವರ್ಣಿತವಾಗಿದೆ:

ಪೊಡೆಯಲರಾತಂ ಅಕ್ಷಿಗಮಗೋಚರಮಾಗಿರೆ ನಿಬ್ಬಿ ನೋಡಿ, ಧೀಂ
ಕಿಡುವ ರಥಧ್ವಜಾಗ್ರಗಮನದುಂ ಮಸುಳುತ್ತುಮಿರೆ ತೇರ ಧೂಳಿಯಂ
ಬಿಡೆ ನೋಡಿ, ಧೂಳಿಯುಮಡಂಗಿರೆ ಕೃಷ್ಣನ ಧೂಳಿಯ
ಪ್ಪೊಡಮಿರದಾಯ್ತು ಎನುತ್ತಬಳೆ ಧೂಳಿವಿಡುತ್ತಿರೆ ಬಾಯ್ಬಲುಂಬಿದಳ್

(ಜಗ ವಿ. ೫-೧೦೦)

(ಕೃಷ್ಣನು ರಥದಲ್ಲಿ ಕುಳಿತು ಹೊರಟಾಗ ಸ್ವಲ್ಪ ಕಾಲಾನಂತರ ಕಣ್ಣಿಗೆ ಕಾಣಿಸಲಿಲ್ಲ. ಆಗ ಗೋಪಿಯ ಕಾಲ್ಬೆರಳುಗಳ ಮೇಲೆ ನಿಂತು ಕೃಷ್ಣನು ಕಾಣುವ ನೇನೋ ಎಂದು ನಿರುಕಿಸಿದಳು: ರಥವು ವೇಗವಾಗಿ ಹೋಗಿ ಮಸುಕಾಗಲು ರಥದ ಧೂಳನ್ನೇ ನೋಡುತ್ತ ನಿಂತಳು: ಆ ಧೂಳೂ ಅಡಗಿದಾಗ ಕೊನೆಗೆ ಕೃಷ್ಣನ ರಥದ ಧೂಳೂ ಇರದಾಯಿತೆ ಎಂದು ಹಲುಬಿದಳು.) ಅನಂತರ

ನಯನಕ್ಕೆ ಗಮ್ಯನಲ್ಲಂ
ಪ್ರಿಯಂ ಮನೋಗಮ್ಯಂ, ಈಕ್ಷಿಪೆಂ ಮನದೊಳೆ ಶೌ
ರಿಯನೆಂದು ನಿಮೀಲಿತನಯ
ನೆಯುಮೊರ್ಬಳ್ ಗೋಪಿ ಯೋಗರೂಢೆವೊಲಿರ್ದಳ್ (ಜಗ ವಿ. ೫-೧೦೧)

(ಪ್ರಿಯನಾದ ಕೃಷ್ಣನು ಕಣ್ಣಿಗೆ ಕಾಣಿಸುವವನಲ್ಲ, ಮನಸ್ಸಿನಲ್ಲಿ ತೋರುವವನು, ಆದ್ದರಿಂದ ಮನಸ್ಸಿನಲ್ಲಿಯೇ ಅವನನ್ನು ಕಾಣುತ್ತೇನೆಂದು ಕಣ್ಣು ಮುಚ್ಚಿಕೊಂಡ ಗೋಪಿಯು ಯೋಗದಲ್ಲಿ ನಿರತಳಾದವಳಂತೆ ಕಾಣಿಸಿದಳು.)

ಬೇಟೆಯ ವರ್ಣನೆಯನ್ನು ಮಾಡುವಾಗ ರುದ್ರಭಟ್ಟನು ಒಂದು ಚಿತ್ರವನ್ನು ಕೊಟ್ಟು ಸಂಸಾರ ವ್ಯಾಮೋಹವೆಷ್ಟು ಆಳವೆಂಬ ಬಗ್ಗೆ ವಿಸ್ಮಯವನ್ನು ಸೂಚಿಸುತ್ತಾನೆ.

ತೊರೆದ ಕುಂಚಗಳಿಂದೆ ಕೊಣಸಂ ನಸೆಯಿಂ ಮೃಗಮಂ ಕುರಂಗಿ ಸಾ
ರ್ತರಲ್ ಎಡೆಗೊಂಡು ಭಲ್ಲದಿನೆರಟ್ಕಡಿಯಾಗೆ ಕಿರಾತನೆಚ್ಚೊಡಂ
ತರಿಸದೆ ಪುಲ್ಲೆಸಾರ್ಚಿ ಮಱಿಯಂ ಮೊಲೆಯಂ ನೆರೆದೇಣನಂ ಬಱಿ
ಕ್ಕೆರಡುಡಿಯಾಯ್ತು, ಕೇವಲಮೆ ದೇಹಿಗೆ ಸಂಸ್ಕೃತಿಮೋಹಬಂಧನಂ

(ಜನ ವಿ. ೧೫-೨೨)

(ಹೆಣ್ಣುಜಿಂಕೆಯ ಮೊಲೆಯೂಡಲು ಮರಿಯೂ, ಆದರೊಡನೆ, ಕೂಡಲು ಗಂಡು ಜಿಂಕೆಯೂ ಹಾತೊರೆಯುತ್ತಿವೆ. ಆಗ ಕಿರಾತಕನು ಭಲ್ಲೆಯಿಂದ ಇಬ್ಭಾಗವಾಗುವಂತೆ ಆ ಜಿಂಕೆಗೆ ಹೊಡೆದಿದ್ದಾನೆ. ಆ ಹೆಣ್ಣು ಜಿಂಕೆಯು ಆಗಲೂ ಮರಿಗೆ ಮೊಲೆಯೂಡಿ, ಗಂಡಿನೊಡನೆ ನೆರೆದು ಎರಡು ತುಂಡಾಗಿ ಸತ್ತಿತು. ಜೀವಿಗಳಿಗೆ ಸಂಸಾರಮೋಹ ಬಂಧನವೆಷ್ಟು ಅತೀವ!)

ಧರ್ಮರಾಯನು ರಾಜಸೂಯಯಾಗವನ್ನು ಮಾಡುವಾಗ ಅಗ್ರ ಪೂಜೆಯು ಯಾರಿಗೆ ಸಲ್ಲಬೇಕೆಂಬ ವಿವಾದವೆದ್ದಿತು. ಶ್ರೀಕೃಷ್ಣನೇ ಎಲ್ಲ ದೃಷ್ಟಿಯಿಂದಲೂ ಶ್ರೇಷ್ಠನೆಂದು ಎಲ್ಲರೂ ಹೇಳಿದಾಗ ಶಿಶುಪಾಲನು ಸಿಡಿದೆದ್ದನು.

ಅಬುಧಂ ಅಕುಲೀನಂ ಎನ್ನದೆ
ಕುಬುದ್ಧೀನೀಂ ಯಮಜ ಗೋಪನಂ ಪೂಜಿಸಲ್ ಆ
ವಿಬುಧಪಿತೃಸಮಿತಿ ತಣೆದಪು
ದೆ? ಬೂದಿಯೊಳ್ ಬೇಳ್ದ ಹವಿವೊಲಕ್ಕುಂ ಯಜ್ಞಂ

(ಜಗ ವಿ. ೧೭–೨೪)

(ಜ್ಞಾನಿಯಲ್ಲದವನು–ಕೆಟ್ಟವಂಶದವನು ಎಂದು ತಿಳಿಯದ ಮಂದಮತಿಯಾದ ಧರ್ಮರಾಯನೇ, ನೀನು ಈ ದನಕಾಯುವವನಿಗೆ ಮರ್ಯಾದೆ ಮಾಡಿದರೆ ಜ್ಞಾನಿಗಳಾದ ಹಿರಿಯರಿಗೆ ತೃಪ್ತಿಯುಂಟಾಗುವುದೇ? ನಿನ್ನ ಯಜ್ಞವು ಬೂದಿಯಲ್ಲಿ ಹಾಕಿದ ಹವಿಸ್ಸಿನಂತೆ ವ್ಯರ್ಥವಾಗುತ್ತದೆ.) ಆಗ ಯುಧಿಷ್ಠಿರನು

ಆವನ ಪದಮಂ ಧ್ಯಾನಿಸಿ
ದೇವದ್ವಿಜರಾಜ ಮುನಿಗಳಭಿನುತರಾದರ್
ಭಾವಿಸು ನೀಂ ದೈತೇಯಾ
ಶ್ರೀವರನಿಂದನ್ಯನರರದೇಂ ವಿಶ್ರುತರೇ (ಜಗ ವಿ. ೧೭–೨೬)

(ಯಾರ ಪಾದಧ್ಯಾನದಿಂದ ದೇವತೆಗಳೂ ಬ್ರಾಹ್ಮಣರೂ ರಾಜರೂ ಮುನಿಗಳೂ ಸ್ತುತರಾಗಿದ್ದಾರೆಯೋ ಅಂತಹ ಶ್ರೀವರನಿಗಿಂತ ಬೇರೆಯ ಮನುಷ್ಯರು ಶ್ರೇಷ್ಠರಾಗಲು ಸಾಧ್ಯವೇ?) ಎಂದು ಶ್ರೀ ಕೃಷ್ಣನ ಪಕ್ಷವನ್ನೇ ಸಮರ್ಥಿಸುತ್ತಾನೆ. ಜೊತೆಗೆ

ಅಮಲ ಯದುವಂಶನಿರೆ ದು
ಷ್ಷಮನ ಮಹಾವಂಶನೆಂಬೆ ನೀನೇತಜಿಸಿ
ಗ್ಗಮೆ? ಕಲ್ಪವೃಕ್ಷಮಿರೆ ಕ
ಳ್ಳಿ ಮಹಾವೃಕ್ಷಂ ಗಡನಿತರಿಂದದು ಪರಿದೇ (ಜಗ ವಿ. ೧೭–೨೮)

(ಪರಿಶುದ್ಧವಾದ ಯದುವಂಶದ ಕೃಷ್ಣನಿರಲು ನೀನೇ ಮಹಾವಂಶದವೆಂದು ಹೇಳಿ ಕೊಳ್ಳುವೆಯಲ್ಲ: ಕಲ್ಪವೃಕ್ಷವಿರುವಾಗ ಕಳ್ಳಿಯು ಮಹಾವೃಕ್ಷವಾಗುತ್ತದೆಯೇ?) ಎಂದು ಶಿಶುಪಾಲನನ್ನು ಹಳಿಯುತ್ತಾನೆ. ಆಗ ಅವನು ಕೃಷ್ಣನ ಬಗ್ಗೆ ಕಟು ಮಾತುಗಳ ಮಳೆಯನ್ನೇ ಸುರಿಯುತ್ತಾನೆ:

ಭುವನಾಪಹಾಸ್ಯಮೆನಲ
ರ್ಣವದೊಳ್ ನೀಂ ಮತ್ಸ್ಯನಾಗಲ್ ಆನಂದು ಸಮು

ದ್ಭವಿಸಿದೆನಪ್ಪೊಡದಂ ಗಾ
ಣವಿಕ್ಕಿ ಪಿಡಿದೆನ್ನ ಬಾಣಸಕ್ಕೊಪ್ಪಿಸೆನೇ (ಜಗ ವಿ. ೧೭–೩೪)

(ಸಮುದ್ರದಲ್ಲಿ ನೀನು ನಾಚಿಕಗೇಡಾಗಿ ಮೀನಾಗಿ ಹುಟ್ಟಿದಾಗ ನಾನು ಇದ್ದಿದ್ದರೆ ಆ ಮೀನನ್ನು ಗಾಳದಿಂದ ಹಿಡಿದು ಅಡಿಗೆ ಮಾಡುತ್ತಿದ್ದೆ.)

ನೀನಾದಿಕೂರ್ಮನಾದಂ
ದಾನಱಿದೊಡೆ ಪಿಡಿದು ತಂದು ಅದಂ ಮತ್ತೀಡೋ
ಧ್ಯಾನಸರೋವರಸಲಿಲ
ಸ್ಥಾನದೊಳಿರಿಸುವೆ ವಿನೋದದೊಳ್ ತೊಡರ್ದಿರೆನೇ (ಜಗ ವಿ. ೧೭–೩೫)

(ನೀನು ಆಮೆಯ ಜನ್ಮತಾಳಿದ್ದನ್ನು ನಾನು ತಿಳಿದಿದ್ದರೆ ಅದನ್ನು ಹಿಡಿದು ತಂದು ನನ್ನ ಉದ್ಯಾನದಲ್ಲಿನ ಸರೋವರದಲ್ಲಿ ವಿನೋದಕ್ಕಾಗಿ ಇರಿಸುತ್ತಿದ್ದೆ.) ಹಾಗೆಯೇ ಕೃಷ್ಣನು ಹಂದಿಯ ಅವತಾರವನ್ನು ತಾಳಿದ್ದನ್ನು ತಾನು ತಿಳಿದಿದ್ದರೆ ಅದನ್ನು ಬೇಟೆಯಾಡಿ ಕಂಪಾದ ಸಾಂಬಾರದೊಡನೆ ಬೇಯಿಸುತ್ತಿದ್ದೆನೆಂದೂ; ನೀನು ಸಿಂಹದ ಮುಖವನ್ನು ಧರಿಸಿ ರಾಕ್ಷಸನನ್ನು ಕೊಂದು ನಗೆಪಾಟಲಾದೆ, ನಾಟಕದವರಲ್ಲದೆ ಬೇರೆಯವರು ಹೀಗೆ ವೇಷ ಹಾಕುತ್ತಾರೆಯೇ ಎಂದೂ; ಇತರ ಅವತಾರಗಳನ್ನು ಹೇಳಿ ನಾನಾ ವಿಧವಾಗಿ ಹಳಿಯುತ್ತಾನೆ. ಅಲ್ಲದೆ ಕೃಷ್ಣನು ಮಾಡಿದ ಸಾಹಸಗಳನ್ನು ಹೀಗೆಳೆಯುತ್ತಾನೆ. ಆಗ ಕೋಪದಿಂದ ಕೂಡಿದ ನಗೆಯೊಡನೆ ಶ್ರೀಕೃಷ್ಣನು ಶಿಶುಪಾಲನ ತಾಯಿಯು ಕೇಳಿಕೊಂಡಿದ್ದಂತೆ ಅವನ ನೂರು ತಪ್ಪುಗಳನ್ನು ಕ್ಷಮಿಸಬೇಕೆಂದೂ, ಈಗ

ತೀವಿದುದು ಶಪನಶತಂ ಇಂ
ತೀವಿದುದು ಅದಱೊಡನೆ ಚೈದ್ಯ ನಿನ್ನಾಯುಷ್ಯಂ:
ತೀವುಗುಮಾಗಳ್ ನಿನ್ನವ
ಧೂವರ್ಗದ ರೋದನಸ್ವನಂ ದಿಕ್ತಟದೊಳ್ (ಜಗ ವಿ. ೧೭–೫೦)

(ನಿನ್ನ ನೂರು ಬೈಗುಳವೂ ಆದುವು. ಅದರೊಡನೆ ನಿನ್ನ ಆಯುಸ್ಸೂ ಮುಗಿಯಿತು; ಈಗ ನಿನ್ನ ಹೆಂಡಿರ ಅಳುವು ದಿಕ್ಕುಗಳಲ್ಲಿ ತುಂಬುತ್ತದೆ.) ಹೀಗೆ ಹೇಳಿ

ನೀಂ ಬಯಸಿದಗ್ರಪೂಜೆಯ
ಪೊಂಬರಿಯಣಮಿದೆ ನಿಶಾಟ ಕೊಳ್ ಎಂದು ಸರೋ
ಜಾಂಬಕನಿಡೆ ಶಿಶುಪಾಲಶಿ
ರಂಬೆರಸು ಅಂಬರತಳಕ್ಕೆ ನೆಗೆದುದಮತ್ರಂ (ಜಗ ವಿ. ೧೭–೫೩)

(ನೀನು ಆಶಿಸಿದ ಅಗ್ರ ಪೂಜೆಯ ಚಿನ್ನದ ಹರಿವಾಣ ಇದೇ, ತೆಗೆದುಕೋ ಎಂದು ಕೃಷ್ಣನು ಶಿಶುಪಾಲನೆಡೆಗೆ ತಟ್ಟೆಯನ್ನು ಎಸೆದನು.) ಆಗ

ಶಿರವಾಕಾಶತಳಕ್ಕೆ ಪಾಱಿ ಗಳರಂಧ್ರೋದ್ದೇಶದಿಂ ಪಾಯ್ವನಿ
ರ್ಭರರಕ್ತೋನ್ಮುಖಧಾರೆ ವಾರಿಜಭವಾಂಡಕ್ಕೆಯ್ದಿ ತದ್ಬ್ರಹ್ಮವಿ
ಷ್ಟರಪದ್ಮಾರುಣನಾಳದಂಡಮೆನಿಸಿತ್ತು ಇತ್ತ ಅಟ್ಟೆ ಘೋಳಿಟ್ಟುಮು
ರ್ವರೆಯೊಳ್ತೊಟ್ಟನೆ ಬೆಟ್ಟುಬೀಬ್ವ ತೆಱದಿಂ ಬಿಟ್ಟತ್ತು ಚೇದೀಶನಾ (ಜಗ ವಿ. ೧೭–೫೫)

(ತಲೆಯು ಆಕಾಶಕ್ಕೆ ಹಾರಲು, ಕಂಠದಲ್ಲಾದ ತೂತಿನಿಂದ ಹೊಮ್ಮುವ ರಕ್ತವು ಆಕಾಶಕೆ ಚಿಮ್ಮಿ ಬ್ರಹ್ಮನ ಪೀಠವಾದ ಕಮಲನಾಳದ ಹಾಗೆ ತೋರುತ್ತಿತ್ತು. ಇತ್ತ ಅವನ ತಲೆಯು ನೆಲದ ಮೇಲೆ ದೊಪ್ಪನೆ ಬಿದ್ದಿತು.) ಈ ಸನ್ನಿವೇಶದೊಡನೆ ಪಂಪನು ರಚಿಸಿರುವ ಶಿಶುಪಾಲವಧೆಯ ಪ್ರಸಂಗವನ್ನು ಹೋಲಿಸಬಹುದು.

ಈ ನಿದರ್ಶನಗಳನ್ನು ನೋಡಿದರೆ ರುದ್ರಭಟ್ಟನ ಕಾವ್ಯರಚನಾ ಶಕ್ತಿಯ ಪರಿಚಯವಾಗುತ್ತದೆ. ಆದರೆ ಈ ಕವಿಯು ಎಲ್ಲೆಡೆಯಲ್ಲಿಯೂ ಇದೇ ಮಟ್ಟದ ಕಾವ್ಯ ರಚನೆಯನ್ನು ಮಾಡಿಲ್ಲ. ಅವನ ರಚನೆಯಲ್ಲಿ ಸಂಪ್ರದಾಯ-ಪಾಂಡಿತ್ಯಗಳಿಗೇ ಮೊದಲಮಣೆ. ಹೀಗಾಗಿ ಈ ಕಾವ್ಯವು ಪಂಡಿತರಿಗೆ ಪ್ರಿಯವಾಗುವುದೇ ವಿನಾ ಸಾಮಾನ್ಯನಿಗಲ್ಲ. ಒಟ್ಟಾರೆ ರುದ್ರಭಟ್ಟನನ್ನು ಮೊದಲನೆಯ ದರ್ಜೆಯ ಕವಿ ಯೆಂದಂತೂ ಹೇಳಲಾಗುವುದಿಲ್ಲ. ಅಲ್ಲಲ್ಲಿ ಒಳ್ಳೆಯ ಕಾವ್ಯವನ್ನು ನೀಡಿರುವ, ಆದರೆ ಹೆಚ್ಚು ಭಾಗವನ್ನು ಚಮತ್ಕಾರ ಪ್ರೌಢಿಮೆಗಳಿಂದ ತುಂಬಿರುವ ಪಂಡಿತ ಕವಿಯೆಂದು ಹೇಳಬಹುದು.

ಚಿಕ್ಕುಪಾಧ್ಯಾಯ

ಚಿಕ್ಕುಪಾಧ್ಯಾಯನು ಪ್ರಾಯಶಃ ಹಿಂದಿನ ಕನ್ನಡ ಕವಿಗಳಲ್ಲಿ ಅತ್ಯಂತ ಹೆಚ್ಚು ಸಂಖ್ಯೆಯ ಕೃತಿಗಳನ್ನು ರಚಿಸಿದವನು. ಇವುಗಳಲ್ಲಿ 'ರುಕ್ಮಾಂಗದ ಚರಿತೆ', 'ವಿಷ್ಣುಪುರಾಣ', 'ದಿವ್ಯಸೂರಿ ಚರಿತೆ', 'ಕಮಲಾಚಲ ಮಹಾತ್ಮ', 'ಅರ್ಥಪಂಚಕ', 'ತತ್ವತ್ರಯ', 'ಸಾತ್ವಿಕ ಬ್ರಹ್ಮವಿದ್ಯಾವಿಲಾಸ', 'ಹಸ್ತಿಗಿರಿ ಮಹಾತ್ಮ್ಯೆ' ಎಂಬ ಚಂಪೂಕೃತಿ ಗಳನ್ನು ರಚಿಸಿದ್ದಾನೆ. ಅಲ್ಲದೆ ಅನೇಕ ಗದ್ಯ ಗ್ರಂಥಗಳನ್ನೂ, ಸಾಂಗತ್ಯ ಕೃತಿಗಳನ್ನೂ ಟೀಕಾಗ್ರಂಥಗಳನ್ನೂ ರಚಿಸಿದ್ದಾನೆ. ಇವನ ನಿಜವಾದ ಹೆಸರು ಲಕ್ಷ್ಮೀಪತಿ. ರಂಗಪಂಡಿತನ ಮಗನಾದ ಈತನು ಚಿಕ್ಕುಪಾಧ್ಯಾಯನೆಂಬ ಹೆಸರಿನಿಂದ ಚಿಕ್ಕದೇವರಾಯನ ಆಸ್ಥಾನ ಕವಿಯಾಗಿದ್ದನು. ಇವನ ವಿಷ್ಣು ಪುರಾಣವು ರಚಿತವಾದ ಕಾಲವೆಂದರೆ ಕ್ರಿ.ಶ. ೧೬೯೧. ಇವನು ತನ್ನ ಚಂಪೂಕಾವ್ಯಗಳ ಭಾಷೆಯು ಸಂಸ್ಕೃತ ಭೂಯಿಷ್ಠವಾಗಿ ಕ್ಲಿಷ್ಟವಾಗಿದೆ. ಚಂಪೂಪ್ರಕಾರವು ಕಣ್ಮರೆಯಾಗುತ್ತಿದ್ದ ಹೊತ್ತಿನಲ್ಲಿ ಅದನ್ನು ಮತ್ತೆ ಮೆರೆಸುವುದಕ್ಕೆ ಪ್ರಯತ್ನಿಸಿದವನು ಚಿಕ್ಕುಪಾಧ್ಯಾಯ. ಇವನ ಗದ್ಯವು ಹಳಗನ್ನಡದಿಂದ ಹೊಸಗನ್ನಡಕ್ಕೆ ತಿರುಗುತ್ತಿದ್ದ ಸಂಧಿಕಾಲದ ಗದ್ಯ. ಆದ್ದರಿಂದ ಇವನ ಗದ್ಯಗ್ರಂಥಗಳಿಗಿರುವಷ್ಟು ಮಹತ್ವವು ಇವನ ಕಾವ್ಯಗಳಿಗಿಲ್ಲ.

ವಿಷ್ಣುಪುರಾಣ

ಚಿಕ್ಕುಪಾಧ್ಯಾಯನ ಚಂಪೂಕಾವ್ಯಗಳಲ್ಲಿ 'ವಿಷ್ಣು ಪುರಾಣ'ವು ಹೆಚ್ಚು ಪ್ರಸಿದ್ಧವಾದುದು. ಅದ್ದರಿಂದ ಆ ಕಾವ್ಯದ ಕಿರುಪರಿಚಯವನ್ನು ಇಲ್ಲಿ ಮಾಡಿಕೊಡಲು ಯತ್ನಿಸುತ್ತೇವೆ.

'ವಿಷ್ಣು ಪುರಾಣ'ವು ಆರು ಭಾಗಗಳಿಂದ ಕೂಡಿದ ದೀರ್ಘವಾದ ಕಾವ್ಯ: ಪ್ರತಿಯೊಂದು ಭಾಗವನ್ನೂ 'ಅಂಶ' ಎಂದು ಕರೆಯಲಾಗಿದೆ. ಇದರಲ್ಲಿ ಒಟ್ಟು ೩೩

ಆಶ್ವಾಸಗಳೂ, ೭೫೫೫ ಪದ್ಯಗಳೂ ಇವೆ. ಚಿಕ್ಕುಪಾಧ್ಯಾಯನು ಹೊಸಗನ್ನಡ ಗದ್ಯ ರಚನೆಯಲ್ಲಿ ಆದ್ಯಪ್ರವರ್ತಕನಾದರೂ ಈ ಕಾವ್ಯದಲ್ಲಿ ಮಾತ್ರ ಆಶ್ಚರ್ಯಕರವೆನಿಸು ವಷ್ಟು ಕಡಿಮೆಪ್ರಮಾಣದಲ್ಲಿ ಗದ್ಯವನ್ನು ಬಳಸಿದ್ದಾನೆ. ಆದರೆ ವಿಷ್ಣು ಪುರಾಣವನ್ನು ಈತನೇ ಗದ್ಯದಲ್ಲಿ ರಚಿಸಿರುವುದು ಇನ್ನೊಂದು ವೈಶಿಷ್ಟ್ಯ.

ಶ್ರೀ ಪರಾಶರ ಮಹರ್ಷಿಯ ಪರಾಶರಕಲ್ಪದ ವೃತ್ತಾಂತಗಳನ್ನೆಲ್ಲ ಅಳವಡಿಸಿ ಅಖಿಲ ಧರ್ಮಗಳನ್ನೂ ಪ್ರತಿಪಾದಿಸಿರುವುದನ್ನೇ 'ವೈಷ್ಣವ' ಎಂದು ಕರೆಯುವುದು. ಆ ವೈಷ್ಣವತತ್ವವನ್ನು ಪ್ರತಿಪಾದಿಸುವ ಪುರಾಣವೇ ಈ ವಿಷ್ಣು ಪುರಾಣ. ಇದನ್ನು ಪರಾಶರ ಮಹರ್ಷಿಯು ಲೋಕಹಿತಕ್ಕಾಗಿ ತನ್ನ ಶಿಷ್ಯನಾದ ಮೈತ್ರೇಯಿಗೆ ಹೇಳಿದನು. ಇದು ವೇದಗಳು ಷಡಂಗಗಳಿಂದ ಕೂಡಿರುವಂತೆ ಆರು ಅಂಶಗಳಿಂದ ಕೂಡಿರುವ ಹಾಗೆ ಹೇಳಿದನು. ತನ್ನ ಕನ್ನಡ ವಿಷ್ಣು ಪುರಾಣವನ್ನು ಚಿಕ್ಕುಪಾಧ್ಯಾಯನು 'ಶ್ರೀ ವಿಷ್ಣುಪುರಾಣ ನಾಮ ಪ್ರಬಂಧ'ವೆಂದು ಕರೆದಿದ್ದಾನೆ.

ವಿಷ್ಣುಪುರಾಣದ ಪ್ರಥಮಾಂಶವು ಸೃಷ್ಟಿಯ ವಿವರಗಳನ್ನು ಕುರಿತು ವಿವರಣೆಯನ್ನು ನೀಡುತ್ತದೆ. ದ್ವಿತೀಯಾಂಶದಲ್ಲಿ ಮೊದಲ ಮನ್ವಂತರದಲ್ಲಿನ ರಾಜರ ವಂಶಾವಳಿಯ ವಿವರಗಳೂ, ಗ್ರಹಗಳು ನಕ್ಷತ್ರಗಳು ಇತ್ಯಾದಿ ಗೋಳಗಳ ವಿವರಗಳೂ ಸೇರಿವೆ. ತೃತೀಯಾಂಶದಲ್ಲಿ ವೇದಗಳ ವಿಷಯಗಳೂ ವೈದಿಕ ಧರ್ಮದ ಹಲವಾರು ವಿಧಿ-ನಿಯಮಗಳ ವಿವರಣೆಯೂ ನಿರೂಪಿಸಲ್ಪಟ್ಟಿವೆ. ಚತುರ್ಥಾಂಶವು ಪ್ರಾಚೀನ ರಾಜರುಗಳ ವಿಷಯವನ್ನೂ ರಾಜವಂಶಗಳ ಚರಿತ್ರೆಯನ್ನೂ ತಿಳಿಸುವ ಭಾಗವಾಗಿದೆ. ಪಂಚಮಾಂಶದಲ್ಲಿ ಶ್ರೀಕೃಷ್ಣಾವತಾರದ ಕಥಾನಿರೂಪಣೆಯಿರುವುದರಿಂದ ಈ ಭಾಗವು ಈ ಪುರಾಣದ ಅತ್ಯಂತ ಜನಪ್ರಿಯ ಭಾಗವಾಗಿದೆ. ಕೊನೆಯ ಭಾಗವಾದ ಷಷ್ಠಾಂಶದಲ್ಲಿ ಪ್ರಳಯದ ವರ್ಣನೆ ಸೃಷ್ಟಿವಿನಾಶದ ವಿವರಗಳನ್ನು ನಿರೂಪಿಸಲಾಗಿದೆ.

"ಚಿಕ್ಕುಪಾಧ್ಯಾಯನ ಕವಿತೆ ಅಷ್ಟು ಉತ್ತಮ ಶ್ರೇಣಿಗೆ ಸೇರಿದುದೆಂಬಂತಿಲ್ಲ. ಪ್ರತಿಭಾಪೂರ್ವಕವಾದ ನವೀನತೆಯಿರುವುದಿಲ್ಲ. ಸಂಪ್ರದಾಯ ಶರಣತೆಯೇ ಅಧಿಕವೆನ್ನಬಹುದು. ಕೆಲವೆಡೆ ಕಿರಿದಾದ ವಿಷಯಗಳನ್ನು ಔಚಿತ್ಯವಿಲ್ಲದೆ ಹಿರಿದಾಗಿ ಬೆಳಸಿದಂತೆ ತೋರುವುದು." (ಎಂ.ಮರಿಯಪ್ಪ ಭಟ್ಟ (ಸಂ): ಶ್ರೀ ವಿಷ್ಣುಪುರಾಣಂ, ೧೯೫೭: ಮುನ್ನುಡಿ: ೧೩-೧೪). ಐದನೆಯದನ್ನುಳಿದು ಮಿಕ್ಕ ಅಂಶಗಳು ಕೇವಲ ವಿಷಯ ವಿವರಣೆಯನ್ನು ಮಾಡುವ ಭಾಗಗಾಳಾದದ್ದರಿಂದ ಅಲ್ಲಿ ಯಾವುದೇ ಕಾವ್ಯತ್ವಕ್ಕೆ ಅವಕಾಶವಿಲ್ಲ. ಆದರೆ ಐದನೆಯ ಭಾಗವು ಶ್ರೀಕೃಷ್ಣನ ಅವತಾರದ ಕಥೆಯನ್ನು ಹೇಳುವುದರಿಂದ ಅದರಲ್ಲಿ ಸ್ವಂತಿಕೆಯನ್ನು ತೋರಿಸಲು ಹೆಚ್ಚು ಅವಕಾಶವಿದೆ; ಅದಕ್ಕೆ ಈ ಭಾಗವು ಮಿಕ್ಕ ಭಾಗಗಳಿಗಿಂತ ಜನಪ್ರಿಯವಾಗಿರುವುದು. ಆದರೂ ಈ ಭಾಗದಲ್ಲಿಯೂ ಚಿಕ್ಕುಪಾಧ್ಯಾಯನು ಶ್ರೇಷ್ಠ ಕವಿಯೆನಿಸಿಕೊಳ್ಳುವ ಯಾವ ಭಾಗವನ್ನೂ ರಚಿಸಿಲ್ಲ. ಇದ್ದುದರಲ್ಲಿ ಭಕ್ತಿ ಪರವಾದ ಭಾಗಗಳು ರಮಣೀಯವಾದುವೆಂದು ಹೇಳಬಹುದು. ಕೆಲವು ನಿದರ್ಶನಗಳನ್ನು ನೋಡಬಹುದು.

ಬಾಲಕೃಷ್ಣನು ಕೊಳಲನ್ನೂದುವ ಭಂಗಿಯ ಸುಂದರವಾದ ಚಿತ್ರಣವಿದೆ ಈ ಕೆಳಗಣ ಪದ್ಯದಲ್ಲಿ:

ನೆಲದೊಳ್ ಕೊಂಕಿಸಿಯೂರಿ ದಕ್ಷಿಣ ಪದಾಂಗುಷ್ಠಾಗ್ರಮಂ, ಚಾರುಕುಂ
ಡಲಮಲ್ಲಾಡೆ, ದೃಗಂಶು ತೀವೇ ವನಮಂ, ಬಿಂಬಾಧರೋಷ್ಠಾಂತದೊಳ್
ನಲವಿಂ ವೇಣುವನಿಟ್ಟು ಪತ್ತಿಸಿ ಕಳಾಸಂಸ್ಥಾನಮಂ ಗಾನಮಂ
ಜುಳನಾದಾಮೃತಮುಣ್ಮೆ ಬಾಜಿಸಿದನಾ ಗೋಪಾಲಕೋತ್ತಂಸಕಂ

(ವಿಷ್ಣುಪು. ಪಂಚಮಾಂಶ ೨-೬೪)

(ಬಲದ ಕಾಲಿನ ಹೆಬ್ಬೆರಳನ್ನು ನೆಲದಲ್ಲಿ ಒತ್ತಿ, ಸುಂದರವಾದ ಕಿವಿಯಲ್ಲಿ ತೊಟ್ಟ ಆಭರಣವು ಅಲ್ಲಾಡುತ್ತಿರಲು, ನೋಟದ ಕಾಂತಿಯು ವನವನ್ನೆಲ್ಲ ವ್ಯಾಪಿಸುತ್ತಿರಲು, ತನ್ನ ಸುಂದರವಾದ ತುಟಿಗಳೆಡೆಯಲ್ಲಿ ಕೊಳಲನ್ನಿಟ್ಟುಕೊಂಡು ಸಂಗೀತದ ಅಮೃತವು ಹೊರಹೊಮ್ಮುವಂತೆ ಗೋಪಾಲಕ ಶ್ರೇಷ್ಠನಾದ ಕೃಷ್ಣನು ಕೊಳಲನ್ನು ನುಡಿಸಿದನು.)

ರುಕ್ಮಿಣಿಯ ತಲೆಕೂದಲು ಹಾಗೂ ಹಣೆಗಳನ್ನು ವರ್ಣಿಸುವ ಪದ್ಯವಿದು:

ಕರುಳೆಂಬುದು ತಿಮಿರಂ
ತೀವಿರೆ ನೊಸಲೆಂಬುದಿತ ಬಾಲಶಶಿಕಿರಣಂ ಮೇ
ಲ್ವರಿದ ಪಥಧಾರೆಯೆನೆ ವಿ
ಸ್ಫುರಿಕುಂ ಸೀಮಂತರೇಖೆ ಬಿಂಬಾಧರೆಯಾ

(ವಿಷ್ಣು ಪು. ಪಂಚಮಾಂಶ ೮.೩೩)

(ತಲೆಗೂದಲೆಂಬ ದಟ್ಟವಾದ ಕತ್ತಲೆಯ ಮಧ್ಯೆ ಹಣೆಯೆಂಬ ಬಾಲಚಂದ್ರನು ಮೇಲೆ ಮೇಲೆ ಏರಿ ಹೋದ ಹಾದಿಯ ಗುರುತಿನಂತೆ ಆ ಸುಂದರಿಯ ಬೈತಲೆಯು ವಿರಾಜಿಸಿತು.) ರುಕ್ಮಿಣಿಯು ಕೃಷ್ಣನನ್ನು ಕಂಡಾಗಿನ ಸನ್ನಿವೇಶದ ವರ್ಣನೆ:

ಹರಿದೇಹಚ್ಛವಿಯೊಳ್ ವಾ
ರಿರುಹಾಂಬಕಿಯೋಷ್ಠಕಾಂತಿ ಕೇಕರರುಚಿಯೊಂ
ದಿರೆ ಯಮುನೆಯೊಳೊಡನೆರೆದಾ
ಸರಸತಿಯ ಸುಪರ್ವಧುನಿಯ ಪೊನಲಂತೆಸೆಗುಂ

(ವಿಷ್ಣು ಪು. ಪಂಚಮಾಂಶ ೮-೯೮)

(ಶ್ರೀಕೃಷ್ಣನ ದೇಹಕಾಂತಿಯೊಡನೆ ರುಕ್ಮಿಣಿಯ ತುಟಿಗಳ ಕಾಂತಿ ಹಾಗೂ ಕುಡಿನೋಟದ ಬೆಳಕು ಸೇರಿದುದು ಯಮುನೆಯೊಡನೆ ಸರಸ್ವತಿ ಮತ್ತು ಗಂಗಾ ನದಿಗಳು ಸೇರಿದಂತೆ ಕಂಗೊಳಿಸಿತು.)

ಅಕ್ರೂರನ ಬಾಯಿಂದ ಹೊಮ್ಮಿಸಿರುವ ಕೃಷ್ಣನ ಸ್ತುತಿರೂಪದ ಪದ್ಯಗಳು ಚೆನ್ನಾಗಿವೆ. ಅಂತಹುದರಲ್ಲಿ ಒಂದು:

ರವಿಕರರೂಪಂಗಳಿನೀ
ಭುವನಾಳಿಯನೊಲ್ದು ಸೃಜಿಸುತಿರ್ಪೆ ನೀಂ ತೋ

ಱುವ ಗುಣಮಯಮೆನಿಸುವ ವಿ
ಶ್ವವಿತಾನಮಿದಬ್ಜನಾಭ ನಿನಗೆ ಶರೀರಂ

(ವಿಷ್ಣು ಪು. ಪಂಚಮಾಂಶ ೪-೧೪೦)

(ಬಿಸಿಲಿನ ರೂಪದಿಂದ ಸರ್ವ ಪ್ರಪಂಚಗಳನ್ನೂ ನೀನು ಸೃಷ್ಟಿಸುತ್ತೀಯೆ: ಗುಣಗಳಿಂದ ಕೂಡಿರುವ ಈ ಲೋಕ ಸಮೂಹವೇ ನಿನ್ನ ಶರೀರವಾಗಿದೆ.) ಇಲ್ಲಿ ವಿಶಿಷ್ಟಾದ್ವೈತ ತತ್ವಕ್ಕನುಗುಣವಾಗಿ ಲೋಕವನ್ನು ದೇವರ ಶರೀರವೆಂದು ಕರೆಯಲಾಗಿದೆ.

ಹೀಗೆ ವಿಷ್ಣುಪುರಾಣವು ಕಾವ್ಯಾಂಶಕ್ಕಿಂತ ತಾತ್ವಿಕತೆಗೆ, ಭಕ್ತಿಗೆ ಹೆಚ್ಚು ಪ್ರಾಮುಖ್ಯವನ್ನೀಯುವ ಕೃತಿ. ಇದೊಂದೇ ಅಲ್ಲದೆ ಚಿಕ್ಕುಪಾಧ್ಯಾಯನ ಎಲ್ಲ ಕೃತಿಗಳಲ್ಲಿಯೂ ಕಾಣುವ ಪ್ರಧಾನ ಅಂಶಗಳೆಂದರೆ ಇವೇ. ಒಡೆಯರ ಕಾಲದಲ್ಲಾದ ಕನ್ನಡ ಸಾಹಿತ್ಯದ ವಿಪುಲ ಸೃಷ್ಟಿಗೆ ಈತನು ಒಳ್ಳೆಯ ಉದಾಹರಣೆಯಾಗಿದ್ದಾನೆ. ಹಿಂದಿನ ಕನ್ನಡ ಕವಿಗಳೆಲ್ಲರಲ್ಲಿಯೂ ಅತ್ಯಂತ ಹೆಚ್ಚಿನ ಸಂಖ್ಯೆಯ ಕೃತಿಗಳನ್ನು ರಚಿಸಿದ ಕೀರ್ತಿ, ರಾಮಾನುಜ ತತ್ವವನ್ನು ಪ್ರತಿಪಾದಿಸುವಂತಹ ಕಾವ್ಯ ನಿರ್ಮಾಣ- ಇವುಗಳಿಂದ ಚಿಕ್ಕುಪಾಧ್ಯಾಯನಿಗೆ ಹೆಸರಿದೆಯೇ ಹೊರತು ಈತನು ಶ್ರೇಷ್ಠ ಕವಿಯೆನಿಸಿಕೊಳ್ಳಲಾರ.

• •

ವೀರಶೈವ ಚಂಪೂ ಕವಿಗಳು

ಹರಿಹರ

ಹರಿಹರನು ಕನ್ನಡ ಸಾಹಿತ್ಯದಲ್ಲಿ ವಚನಕಾರರ ನಂತರ ಬಂದ ಅತ್ಯಂತ ಮಹತ್ವದ ಕವಿ: ಸ್ವಂತಿಕೆಯನ್ನು ಮೆರೆದ ಕವಿ. ಪ್ರಾಯಶಃ ವಚನಕಾರರು ಹಾಕಿಕೊಟ್ಟ ಹೊಸ ಮೌಲ್ಯಗಳೆನ್ನೆಲ್ಲ ಅರಗಿಸಿಕೊಂಡು ಕಾವ್ಯಗಳಿಗೆ ಅವುಗಳನ್ನು ಎತ್ತಿಹಿಡಿದವನು, ಮುಂದೆ ಬಂದ ವೀರಶೈವ ಕವಿಗಳಿಗೆ ಹೊಸದಾದ ಮಾರ್ಗವನ್ನು ಹಾಕಿಕೊಟ್ಟವನು. ಹರಿಹರನನ್ನು 'ಕ್ರಾಂತಿ ಕವಿ' ಎಂದು ಕರೆಯುವುದು ವಾಡಿಕೆಯಾಗಿದೆ. ಈ ಕ್ರಾಂತಿಯು ಆದುದು ಸಾಹಿತ್ಯದ ನಾನಾ ವಲಯಗಳಲ್ಲಿ. ಅವನು ಭಾಷೆಯ ದೃಷ್ಟಿಯಿಂದಲೇ ತನ್ನ ಕ್ರಾಂತಿಯನ್ನು ಪ್ರಾರಂಭಿಸಿದ. ಕನ್ನಡದಲ್ಲಿ ಳ ಮತ್ತು ೞ ಎಂಬೆರಡು ಅಕ್ಷರಗಳು ಮೊದಲು ಬೇರೆಬೇರೆಯ ಧ್ವನಿಗಳನ್ನು ಸೂಚಿಸುತ್ತಿದ್ದವು. ಹರಿಹರನ ಕಾಲಕ್ಕಾಗಲೇ ಅವು ಒಂದೇ ರೀತಿಯಲ್ಲಿ (ಈಗಿನ ಳ) ಉಚ್ಚಾರಣೆಯಾಗುತ್ತಿದ್ದವು. ಸಂಸ್ಕೃತದಲ್ಲಿನ 'ಲ'ದಿಂದ ಕೂಡಿದ ಅನೇಕ ಪದಗಳು ಕನ್ನಡಕ್ಕೆ ಬರುವಾಗ 'ಲ'ದ ಬದಲು 'ಳ' ಎಂದಾಗುತ್ತಿತ್ತು. ಈ ಱೞ (ೞ), ಕುಳ (ಳ) ಕ್ಷಳ (ಸಂಸ್ಕೃತದ 'ಲ'ಕ್ಕೆ ಬದಲಾಗಿ ಬರುವ 'ಳ')ಗಳು ಪದ್ಯವನ್ನು ಬರೆಯುವಾಗ ಪ್ರಾಸ ಸ್ಥಾನದಲ್ಲಿ ಪರಸ್ಪರ ಬರಬಾರದು ಎಂಬ ನಿಯಮವು ಹಿಂದೆ ಇತ್ತು. ಹರಿಹರನು ಅವುಗಳಲ್ಲಿ ಉಚ್ಚಾರಣೆಯ ವ್ಯತ್ಯಾಸವಿಲ್ಲದ್ದರಿಂದ ತಾನು ಆ ನಿಯಮವನ್ನು ಕಾವ್ಯದಲ್ಲಿ ಅನುಸರಿಸುವುದಿಲ್ಲವೆಂದು ಸಾರಿ ಸ್ವಾತಂತ್ರ್ಯವನ್ನು ವಹಿಸಿದ. ಆವರೆವಿಗೂ 'ರಗಳೆ' ಎಂಬ (ಇದರಲ್ಲಿ ಲಲಿತ, ಮಂದಾನಿಲ, ಉತ್ಸಾಹ ಎಂಬ ಮೂರು ಬಗೆ) ಛಂದಸ್ಸು ಚಂಪೂ ಕಾವ್ಯಗಳಲ್ಲಿ ಅಲ್ಲಲ್ಲಿ ಮಾತ್ರ ಬರುತ್ತಿತ್ತು. ಅದನ್ನು ತಾನು ಉಪಯೋಗಿಸಿ ಆ ಛಂದೋಪ್ರಕಾರಕ್ಕೆ ಹೊಸ ಜೀವವನ್ನಿತ್ತ. ದೀರ್ಘವಾದ ಕಥೆಗಳ ಬದಲು ಶಿವಭಕ್ತರ ಕತೆಗಳನ್ನು ಚಿಕ್ಕದಾಗಿ ಬರೆದು ಕಾವ್ಯದ ಗಾತ್ರ ಮತ್ತು ವಸ್ತುಗಳಲ್ಲಿಯೂ ಆವರೆಗೆ ಇಲ್ಲದಿದ್ದ ಮಾರ್ಗವನ್ನನುಸರಿಸಿದ. ಆವರೆಗೆ ಪ್ರಚಲಿತವಾಗಿದ್ದ ಚಂಪೂ ಕೃತಿಗಳು ಸಾಮಾನ್ಯರಿಗೆ ಭಾರವೆನಿಸಿದ ಹಳಗನ್ನಡದಲ್ಲಿ ರಚಿತವಾಗಿರುತ್ತಿದ್ದವು: ಹರಿಹರನು ತನ್ನ 'ರಗಳೆ'ಗಳಲ್ಲಿ ಸಾಮಾನ್ಯರ ಮಾತಿಗೆ ಹತ್ತಿರವಾದ ಭಾಷೆಯನ್ನು (ಅದನ್ನೀಗ ನಡುಗನ್ನಡವೆಂದು ಕರೆಯುತ್ತೇವೆ) ಹರಿಹರನು ಬಳಸಿದ. ಈ ಶಿವಭಕ್ತರ ಕತೆಗಳ ಬಗ್ಗೆ ತಾನು ಬರೆದ ಕಾವ್ಯಗಳಲ್ಲಿ ಆವರೆಗೂ ಸಾಂಪ್ರದಾಯಿಕವಾಗಿದ್ದ ಹದಿನೆಂಟು ವರ್ಣನೆಗಳನ್ನು ತಾರದೆ ಎಷ್ಟು ಬೇಕೋ ಯಾವುದು ಬೇಕೋ ಅಂತಹ ವರ್ಣನೆಗಳನ್ನು ಮಾತ್ರ ಹರಿಹರ ತನ್ನ ಕಾವ್ಯಗಳಲ್ಲಿ ತಂದ. ಈ ರೀತಿ ಕಾವ್ಯರಚನೆಯ

ಬಹುಪಾಲು ಅಂಶಗಳಲ್ಲಿ ಜಡ್ಡುಗಟ್ಟಿದ ಮಾರ್ಗವನ್ನು ಅನುಸರಿಸದೆಯೇ ಸ್ವಾತಂತ್ರ್ಯ ವಹಿಸಿದ್ದರಿಂದ ಅವನನ್ನು 'ಕ್ರಾಂತಿಕವಿ' ಎಂದು ಕರೆಯುವುದು ಸಮಂಜಸವೆನಿಸುತ್ತದೆ.

ಆದರೆ ಸಂಪ್ರದಾಯಗಳೆಲ್ಲ ತುಂಬಿಕೊಂಡಿರುವ (ಆದರೂ ಉತ್ತಮ ಕಾವ್ಯ ವೆನಿಸಿದ) ಚಂಪೂಕೃತಿಯೊಂದನ್ನೂ ಹರಿಹರನು ರಚಿಸಿದ. ಅದೇ 'ಗಿರಿಜಾಕಲ್ಯಾಣ' ವೆಂಬ ಹತ್ತು ಆಶ್ವಾಸಗಳ ಕಾವ್ಯ. ಇದರಲ್ಲಿ ಹೆಚ್ಚು ಕಂದಪದ್ಯಗಳೇ ಇವೆ. ಈ ಕಾವ್ಯ ವನ್ನು ಹರಿಹರನು ಏಕೆ ಬರೆದನೆಂಬುದಕ್ಕೆ ಅವನ ನಂತರದ ವೀರಶೈವ ಪುರಾಣ ಗಳಲ್ಲಿ ಒಂದು ಕತೆಯಿದೆ: ರಗಳೆಯ ಛಂದಸ್ಸಿನಲ್ಲಿ ಅವನು ಕಾವ್ಯಗಳನ್ನು ಬರೆದಾಗ ಪಂಡಿತರೆಲ್ಲ ಹರಿಹರನನ್ನು 'ರಗಳೆಯ ಕವಿ' ಎಂದು ಲೇವಡಿ ಮಾಡಿದರಂತೆ. ತಾನು ರಗಳೆಯಲ್ಲಲ್ಲದೆ ಪಾಂಡಿತ್ಯ ಪೂರ್ಣವಾದ ಚಂಪೂ ರೀತಿಯಲ್ಲಿಯೂ ಕಾವ್ಯವನ್ನು ಬರೆಯಬಲ್ಲನೆಂದು ತೋರಿಸಲು 'ಗಿರಿಜಾ ಕಲ್ಯಾಣ'ವನ್ನು ಬರೆದನಂತೆ. ಆದರೆ ಇದು ಕೇವಲ ಕತೆ. ಹರಿಹರನ ಕಾವ್ಯಗಳ ರಚನಾರೀತಿಯನ್ನು ನೋಡಿದರೆ ಮೊದಲು 'ಗಿರಿಜಾ ಕಲ್ಯಾಣ'ವನ್ನು ಬರೆದು. ಅನಂತರ ರಗಳೆಗಳನ್ನು ರಚಿಸಿರುವನೆಂಬುದು ಗೊತ್ತಾಗುತ್ತದೆ. ಇವನ ರಗಳೆಯ ಕಾವ್ಯಗಳಲ್ಲಿ ಕೆಲವು ಸಾಕಷ್ಟು ದೊಡ್ಡವು: 'ಬಸವರಾಜದೇವರ ರಗಳೆ', 'ನಂಬಿಯಣ್ಣನ ರಗಳೆ', ಇಂತಹವು. 'ಮಹಾದೇವಿ ಯಕ್ಕನರಗಳೆ' 'ಪ್ರಭುದೇವರ ರಗಳೆ' 'ತಿರುನೀಲಕಂಠರ ರಗಳೆ', 'ಇಳೆಯಾಂಡಗುಡಿ ಮಾರರ ರಗಳೆ', ಇತ್ಯಾದಿ ಸಾಮಾನ್ಯ ಗಾತ್ರದ ರಗಳೆಗಳೂ ಇವೆ. ಇವೆಲ್ಲ ಹಿಂದಿನ ತಮಿಳುನಾಡಿನ ಶಿವಭಕ್ತರ (ಇವರನ್ನು 'ಪುರಾತನ'ರೆಂದು ಕರೆಯುತ್ತಾರೆ) ಬಗ್ಗೆ, ಕರ್ನಾಟಕದಲ್ಲಿ ಹರಿಹರನಿಗಿಂತ ಸ್ವಲ್ಪಕಾಲ ಮುಂಚೆ ಬಾಳಿಬದುಕಿದ ಶಿವಶರಣರ ಬಗ್ಗೆ ಬರೆದ ಕಥಾತ್ಮಕ ರಗಳೆಗಳು. ಇವಲ್ಲದೆ ಸಂಸಾರ ನಿರಸನ, ವಿಭೂತಿ, ರುದ್ರಾಕ್ಷಿಗಳ ಬಗ್ಗೆ, ಹೂಗಳ ಬಗ್ಗೆ ಇನ್ನೂ ಅನೇಕ ವಿಷಯಗಳ ಬಗ್ಗೆ ಬರೆದ ರಗಳೆಗಳೂ ಇವೆ. ಈ ರಗಳೆಗಳಲ್ಲದೆ, 'ಪಂಪಾಶತಕ', 'ರಕ್ಷಾಶತಕ' 'ಮುಡಿಗೆಯ ಅಷ್ಟಕ' ಎಂಬ ಸ್ತೋತ್ರ ಸಾಹಿತ್ಯವನ್ನು ಹರಿಹರನು ಸೃಷ್ಟಿಸಿದ್ದಾನೆ. ಹರಿಹರನ ಕೀರ್ತಿಯು ನಿಂತಿರುವುದು ಈ ರಗಳೆಗಳ ಮೇಲೆಯೇ.

ಇಂತಹ ಸ್ವಂತಂತ್ರ ಮನೋಭಾವದ ಕವಿಯು ಯಾರ ಹಂಗಿನಲ್ಲಿರಲೂ ಸಾಧ್ಯವಿಲ್ಲ. ಸಾಯುವ ಮನುಷ್ಯರ ಮೇಲೆ, ಅವರೆಷ್ಟೇ ಹಿರಿಯ ಪದವಿಯಲ್ಲಿದ್ದರೂ, ಕಾವ್ಯವನ್ನು ಬರೆಯದೆ ಶಾಶ್ವತನಾದ ಶಿವನ ಬಗ್ಗೆ ಕಾವ್ಯ ರಚನೆಮಾಡುವುದೇ ಅವನ ಉದ್ದೇಶವಾಗಿತ್ತು. ಅವನು ತನ್ನ ಸ್ವಂತ ಜೀವನದ ಬಗ್ಗೆ ಕಾವ್ಯಗಳಲ್ಲಿ ಹೆಚ್ಚಾಗಿ ಹೇಳಿಕೊಂಡಿಲ್ಲ. ಅವನು ಬ್ರಹ್ಮಚಾರಿಯಾಗಿದ್ದನೆಂದು ಕೆಲವರು ಹೇಳಿದರೂ, ಅವನ ಕೆಲವು ರಗಳೆಗಳನ್ನು ಪರಿಶೀಲಿಸಿದರೆ ಹರಿಹರನು ಮೊದಲು ಸಂಸಾರಿಯಾಗಿದ್ದು ಜೀವನದಲ್ಲಿ ಸಾಕಷ್ಟು ಕಷ್ಟಗಳನ್ನನುಭವಿಸಿ ಅನಂತರ ವಿರಕ್ತನಾಗಿ ಏಕಾಂತ ಜೀವನ ವನ್ನು ನಡೆಸಿದನೆಂದು ಹೇಳಬಹುದು. ಅವನ ಗುರುಪರಂಪರೆಯು ಅವನ ಕಾವ್ಯ ಗಳಿಂದಲೇ ತಿಳಿದು ಬರುತ್ತದೆ: ಹಂಪೆಯ ಶಂಕರದೇವ; ಅವನ ಶಿಷ್ಯ ಮಾದಿರಾಜ; ಅವನ ಶಿಷ್ಯ ಮಾಯಿದೇವ; ಇವನ ಶಿಷ್ಯನೇ ಹಂಪೆಯ ಹರಿಹರ.

ಈ ಕವಿಯು ಹಂಪೆಯನ್ನು ತನ್ನ ಶಾಶ್ವತ ನೆಲೆಯನ್ನಾಗಿ ಮಾಡಿಕೊಂಡು ತನ್ನ ಕಾವ್ಯದ ಮೂಲಕ ವಿರೂಪಾಕ್ಷನನ್ನು ಸ್ತುತಿಸುತ್ತಿದ್ದರೂ ಯಾವ ಕಾಲದಲ್ಲಿ ಇವನು ಹಂಪೆಯಲ್ಲಿ ವಾಸಿಸುತ್ತಿದ್ದನೆಂದು ಹೇಳಲು ನಮಗೆ ಸ್ಪಷ್ಟವಾದ ಅಧಾರಗಳಿಲ್ಲ. ಇವನು ಬೇಲೂರಿನಲ್ಲಿ ಆಳುತ್ತಿದ್ದ ಬಲ್ಲಾಳನೆಂಬ ರಾಜನ ಆಸ್ಥಾನದಲ್ಲಿ ಕರಣಿಕನಾಗಿದ್ದನಂತೆ. ಒಮ್ಮೆ ಅವನು ರಾಜನಿಗೆ ಲೆಕ್ಕವನ್ನೊಪ್ಪಿಸುವಾಗ ಇದ್ದಕ್ಕಿದ್ದಂತೆ ತನ್ನ ಕೆಲಸವನ್ನು ಬಿಟ್ಟು ಕಣ್ಮುಚ್ಚಿ ಎರಡೂ ಅಂಗೈಗಳನ್ನು ತೀಡಿಕೊಳ್ಳಲು ಪ್ರಾರಂಭಿಸಿದನಂತೆ. ಕೊಂಚ ಕಾಲದ ನಂತರ ಅವನು ಹಾಗೆ ಮಾಡಿದುದೇಕೆ ಎಂದು ರಾಜನು ಕೇಳಲು ಹಂಪೆಯ ವಿರೂಪಾಕ್ಷ ದೇವಾಲಯದಲ್ಲಿ ಆರತಿಯನ್ನು ಎತ್ತಿದಾಗ ಗುಡಿಯ ಮೇಲು ಕಟ್ಟಿನ ಬಟ್ಟೆಗೆ ಬೆಂಕಿಯ ತಗಲಿ ಅದು ಹತ್ತಿಕೊಂಡು ಉರಿಯುತ್ತಿದ್ದಿತೆಂತಲೂ ತಾನು ಅಂಗೈಗಳಿಂದ ಉಜ್ಜಿ ಅದನ್ನು ಆರಿಸಿದುದಾಗಿಯೂ ಹೇಳಿದನು. ರಾಜನು ದೂತರನ್ನು ಹಂಪೆಗೆ ಕಳಿಸಿ ವಿಚಾರ ಮಾಡಿದಾಗ ಹರಿಹರನು ಹೇಳಿದ್ದುದು ಸತ್ಯವಾಗಿತ್ತಂತೆ, ಇದು ಸಿದ್ಧನಂಜೇಶನೆಂಬ ಕವಿಯು ಬರೆದ 'ರಾಘವಾಂಕ ಚರಿತ್ರೆ'ವೆಂಬ ಗ್ರಂಥದಲ್ಲಿ ಹೇಳಿರುವ ಕತೆ. ಇದು ನಡೆದ ವರ್ಷ-ತಿಂಗಳು ದಿನ ವಾರಗಳನ್ನೂ ಅವನು ಕೊಟ್ಟಿದ್ದಾನೆ. ಇದನ್ನು ಲೆಕ್ಕಚಾರ ಹಾಕಿ ನೋಡಿದಾಗ ಈ ಪ್ರಸಂಗವು ಕ್ರಿ.ಶ. ೧೨೧೬ರಲ್ಲಿ ನಡೆದಿರಬೇಕೆಂದು ತಿಳಿಯುತ್ತದೆ. ಆದರೆ ಇದು ಪವಾಡದಿಂದ ಕೂಡಿರುವ ಒಂದು ಕತೆ, ಎಷ್ಟರಮಟ್ಟಿಗೆ ಇದನ್ನು ನಂಬಬೇಕೋ ಎಂಬುದು ತಿಳಿಯದು. ಹರಿಹರನು ಕರಣಿಕನಾಗಿದ್ದುದು ನಿಜವಾಗಿದ್ದರೆ ಅವನು ಕ್ರಿ.ಶ. ೧೨೨೦ರಿಂದ ೧೨೩೫ರ ವರೆಗೆ ಆಳಿದ ವೀರ ನರಸಿಂಹಬಲ್ಲಾಳನ ಆಸ್ಥಾನದಲ್ಲಿರಬೇಕು. ಒಟ್ಟಿನಲ್ಲಿ ಅವನು ಹದಿಮೂರನೆಯ ಶತಮಾನದ ಮೊದಲ ಭಾಗದಲ್ಲಿ ಜೀವಿಸಿದ್ದಿರಬೇಕೆಂಬುದು ನಿಶ್ಚಯ.

ಗಿರಿಜಾ ಕಲ್ಯಾಣ

ಹೆಸರೇ ಸೂಚಿಸುವಂತೆ ಈ ಕಾವ್ಯವು ಗಿರಿಜೆಯ ಹುಟ್ಟಿನಿಂದ ಆಕೆಯ ವಿವಾಹದವರೆಗಿನ ಕತೆಯನ್ನು ನಿರೂಪಿಸುತ್ತದೆ. ಈ ಕಾವ್ಯದ ಮೇಲೆ ಕಾಳಿದಾಸನ 'ಕುಮಾರಸಂಭವ'ದ ಪ್ರಭಾವವು ಬಿದ್ದಿದೆಯೆಂದು ವಿದ್ವಾಂಸರು ಹೇಳುತ್ತಾರೆ. ಆದರೆ ಹರಿಹರನು ಪ್ರಭಾವಕ್ಕೊಳಗಾಗಿಯೂ ಸ್ವಂತಿಕೆಯನ್ನು ತೋರಬಲ್ಲ ಪ್ರತಿಭಾವಂತ ಕವಿ. ಹರಿಹರನ ಪಾರ್ವತಿಯ ಪಾತ್ರವು ನಿರ್ಮಲವಾದ ಭಕ್ತಿ ಹಾಗೂ ಪಾವಿತ್ರ್ಯಗಳ ಪ್ರತೀಕವಾಗಿದೆ. ವಟುವಿನ ವೇಷವನ್ನು ಧರಿಸಿಬಂದ ಶಿವನು ಪಾರ್ವತಿಯ ಮುಂದೆ ಶಿವನನ್ನೇ ತೆಗಳಿದಾಗ ಅವಳು ಕೋಪದಿಂದ ಹೊಡೆಯುವುದು, ಆಗ ಶಿವ ಪ್ರತ್ಯಕ್ಷವಾಗುವುದು ಮತ್ತು ಕಾಮನನ್ನು ಶಿವನು ಸುಟ್ಟು ಹಾಕುವುದು ಮುಂತಾದ ಪ್ರಸಂಗಗಳ ನಿರ್ವಹಣೆಯಲ್ಲಿ ಹರಿಹರನ ಶ್ರೇಷ್ಠ ರಚನಾ ಕೌಶಲವನ್ನು ಕಾಣಬಹುದು ಈ ಕಾವ್ಯದಲ್ಲಿ ಅಷ್ಟಾದಶ ವರ್ಣನೆಗಳ ಸಂಪ್ರದಾಯಕ್ಕೆ ಕಟ್ಟುಬಿದ್ದು ಸೂಳೆಗೇರಿಯ ವರ್ಣನೆ ಮಾಡುವಾಗ ನಾರದನನ್ನು ಅಲ್ಲಿ ಕರೆತರುವಂತಹ ಅನೌಚಿತ್ಯವನ್ನೂ ಮಾಡಿದ್ದಾರೆ ನಿಜ. ಆದರೆ ಒಟ್ಟಾರೆ ಗಮನಿಸಿದಾಗ ಅವನ ವರ್ಣನೆಗಳು ಅತಿರೇಕಕ್ಕೇರದೆ ಹಿತ-ಮಿತವಾಗಿಯೇ ಇವೆ. ಇನ್ನು ಅವನ ತಡೆಯಿಲ್ಲದ ಭಾಷೆಯ ಬಳಕೆ. ಕತೆ

ಹೇಳುವ ಧಾಟಿಗಳು ಅವನಿಗೇ ವಿಶಿಷ್ಟವಾದವು. (ಇದನ್ನು ರಗಳೆಗಳಲ್ಲಿ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಕಾಣಬಹುದು.)

ಹೈಮಾಚಲದಲ್ಲಿ ಉತ್ತರಭಾಗದಲ್ಲಿನ ಓಷಧಿಪುರದಲ್ಲಿ ಗಿರಿರಾಜನು ಆಳುತ್ತಿದ್ದನು. ಅವನ ಹೆಂಡತಿ ಮೇನಾದೇವಿ, ಮಗ ಮೈನಾಕ. ಇವರು ಹಲವು ಕಾಲ ಸುಖವಾಗಿರುತ್ತಾರೆ. ಮೇನಾದೇವಿಯ ದಾಕ್ಷಾಯಿಣಿಯೇ ತನಗೆ ಮಗಳಾಗಿ ಜನಿಸಬೇಕೆಂದು ತಪಸ್ಸು ಮಾಡುತ್ತಿರುತ್ತಾಳೆ. ಇತ್ತ ಆ ಹೊತ್ತಿಗೆ ದಾಕ್ಷಾಯಿಣಿಯು ದಕ್ಷಯಾಗಕ್ಕೆ ಬಂದು ತನ್ನ ಸ್ವಾಮಿಯಾದ ಶಂಕರನ ನಿಂದೆಯನ್ನು ಕೇಳಲಾರದೆ ಆ ಯಜ್ಞಕುಂಡದಲ್ಲಿಯೇ ಬಿದ್ದು ದೇಹತ್ಯಾಗ ಮಾಡಿರುತ್ತಾಳೆ. ಅವಳು ಮೇನಾದೇವಿಯಲ್ಲಿ ಮಗಳಾಗಿ ಹುಟ್ಟುತ್ತಾಳೆ, ತಾಯ್ತಂದೆಯರಿಗೆ ಸಂತೋಷವನ್ನುಂಟುಮಾಡುತ್ತ ಬೆಳೆದು ಸುಂದರವಾದ ಯುವತಿಯಾಗಿ ಅರಳುತ್ತಾಳೆ. ಅವಳು ಶಿವನ ಹೆಂಡತಿಯೆಂಬುದನ್ನು ಮರೆತು ಗಿರಿರಾಜ–ಮೇನೆಯರು ಅವಳ ಮದುವೆಗೆ ಸನ್ನಾಹ ಮಾಡುತ್ತಿರುತ್ತಾರೆ. ಆ ಸಮಯಕ್ಕೆ ಸರಿಯಾಗಿ ನಾರದನು ದೇವಲೋಕದಿಂದ ಬರುತ್ತಾನೆ. ಆತನು ಗಿರಿಜೆಗೆ ನಮಸ್ಕರಿಸಿದುದರಿಂದ ಅಚ್ಚರಗೊಂಡ ಗಿರಿರಾಜ–ಮೇನೆಯರಿಗೆ ನಿಜಸ್ಥಿತಿಯನ್ನು ವಿವರಿಸುತ್ತಾನೆ. ದಕ್ಷನು ಶಿವನಿಂದೆಯನ್ನು ಮಾಡಿದಾಗ ಸಹಿಸಲಾರದ ದಾಕ್ಷಾಯಿಣಿಯು ಮೇನೆಯ ಹೊಟ್ಟೆಯಲ್ಲಿ ಜನಿಸಿದ್ದಾಳೆ. ಆದ್ದರಿಂದ ಇವಳಿಗೆ ಶಿವನೇ ಗಂಡನಾಗತಕ್ಕವನು ಎಂದು ಹೇಳಿದನು.

ಗಿರಿಸುತೆ ಬಳೆವನ್ನೆವರಂ
ಹರನಿರ್ದಪನೊಲ್ದು ಹೇಮಕೂಟಸ್ಥಳದೊಳ್
ಪರಿಪೂರ್ಣಪರಂಜ್ಯೋತಿ
ಸ್ವರೂಪನಿಜಯೋಗಭೋಗರಾಗೋನ್ನತಿಯಿಂ (ಗಿರಿ ಕ. ೪–೫೫)

(ಗಿರಿಜೆಯ ಪ್ರಾಪ್ತವಯಸ್ಕಳಾಗುವವರೆಗೂ ಹರನು ಹೇಮಕೂಟದಲ್ಲಿ ಯೋಗದಲ್ಲಿ ನಿರತನಾಗಿದ್ದು ಇವಳಿಗಾಗಿ ಕಾಯುತ್ತಾನೆ) ಎಂದೂ ಹೇಳುವನು. ಅದರಂತೆಯೇ ಗಿರಿಜೆಯ ತಂದೆತಾಯಿಯರು ಅವಳ ಮದುವೆಯ ಪ್ರಯತ್ನ ವನ್ನು ಕೈಬಿಡುತ್ತಾರೆ.

ಗಿರಿಜೆಯ ತಾಯ್ತಂದೆಯರು ಹೇಳಿದಂತೆ ಹೇಮಕೂಟದಲ್ಲಿ ನಿರ್ವಿಕಲ್ಪ ಸಮಾಧಿಯಲ್ಲಿದ್ದ ಈಶ್ವರನೆಡೆಗೆ ಪೂಜೆಗೆ ಬರುತ್ತಾಳೆ. ಶಿವನನ್ನು ಒಲಿಸಿ ಕೊಳ್ಳಲು ತಪಸ್ಸಿಗೆ ತೊಡಗುತ್ತಾಳೆ. ಅವಳು ಶಿವನಿಗೆ ಸಮರ್ಪಿಸಿದ ಹೂವುಗಳ ವೈಖರಿ ಯೆಂಥದು, ಕವಿಯ ಮಾತಿನಲ್ಲಿಯೇ ಕೇಳಿ:

ಇರುಳಂ ಪಗಲುಂ ಕಾಮಂ
ತರದಿಂ ತೆಗೆದೆಚ್ಚ ಕುಸುಮಬಾಣಮಿದೆಂದಾ
ಗಿರಿಶಂಗೆ ತೋರ್ಪ ತೆಱದಿಂ
ನೆರಪಿದಳಭವಾಂಘ್ರಿಗಳ್ಗೆ ಪುಷ್ಪಾಂಜಲಿಯಂ (ಗಿರಿ ಕ. ೫–೭೭)

(ಹಗಲು ರಾತ್ರಿಯೆನ್ನದೆ ಕಾಮನು ಶಿವನ ಮೇಲೆ ಕುಸುಮಬಾಣಗಳನ್ನು ಪ್ರಯೋಗಿಸು ತ್ತಿರುವನೋ ಎಂಬಂತೆ ಗಿರಿಜೆಯು ಹೂಗಳಿಂದ ಈಶ್ವರನ ಪಾದಗಳನ್ನು ಪೂಜಿಸು

ತ್ತಿದ್ದಳು.) ಅವಳು ಪೂಜಿಸುವಾಗ ಶಿವನನ್ನು ಕಾಣುವ ದೃಷ್ಟಿಯು ಪ್ರೇಮ-ಭಕ್ತಿಗಳಿಂದ ಕೂಡಿರಬಹುದು. ಅದರಲ್ಲಿ ಶಿವನನ್ನು ಗೆಲ್ಲುವ ಶಕ್ತಿಯೂ ಇದೆ, ಅವನಿಗೆ ಶರಣಾಗುವ ಭಾಗವೂ ಇದೆ. ಇದನ್ನು ಹರಿಹರನು ಅದ್ಭುತವಾಗಿ ವರ್ಣಿಸಿದ್ದಾನೆ:

ಪೊಸಜಡೆಯೊಳ್ ತೊಡಂಕಿ, ನೊಸಲೊಳ್ ನಡೆಪಾಡಿ, ಕಪೋಲಭಾಗದೊಳ್
ಪಸರಿಸಿ, ಲೋಚನಂಗಳೊಳಮರ್ಚಿ, ತದಾಸ್ಯದೊಳೊಂದಿ, ಕಂಠದೊಳ್
ಮಿಸುಗಿ, ಭುಜಾಗ್ರದೊಳ್ ತೊಳಗಿ, ವಕ್ಷದೊಳಾಟ್ಟು, ಕರಂಗಳೊಳ್ ವಿರಾ
ಜಿಸಿ ಪದದಲ್ಲಿ ಬಿರ್ದುವು ಭವಾನಿಯ ಮಾನಿಯ ದೈನ್ಯದೃಷ್ಟಿಗಳ್

(ಗಿರಿ.ಕ. ೫-೬೨)

(ಭವಾನಿಯ ದೈನ್ಯದೃಷ್ಟಿಗಳು ಶಿವನ ಕಂಜೆಡೆಯಲ್ಲಿ ಸೇರಿ, ಹಣೆಯಮೇಲೆ ಹರಿದಾಡಿ, ಕಪೋಲಗಳ ಮೇಲೆ ವಿಹರಿಸಿ, ಕಣ್ಣುಗಳಲ್ಲಿ ನಿಂತು, ಮುಖದಲ್ಲಿ ನಟ್ಟು, ಕಂಠ ದಲ್ಲಿಳಿದು, ಭುಜಗಳ ಮೇಲಿನಿಂದ ವಕ್ಷಗಳಲ್ಲಿ ಬಿದ್ದು ಕೈಗಳಲ್ಲಿ ತೊಳಗಿ ಕಾಲುಗಳಲ್ಲಿ ಬಿದ್ದವು.) ಗಿರಿಜೆಯ ನೋಟವು ಶಂಕರನ ಸರ್ವಾಂಗವನ್ನು ಅಪ್ಪಿಕೊಂಡಿತೋ ಎಂಬಂತೆ ಹರಡಿಕೊಂಡದ್ದನ್ನು ವರ್ಣಿಸಿದ ಕವಿಯು ಕೊನೆಗೆ ಪಾದಗಳಲ್ಲಿ ಬಿದ್ದಿತು ಎಂದು ಹೇಳುವುದರ ಮೂಲಕ ಸುಂದರ ಭಾವವನ್ನು ಮಿಂಚಿಸಿದ್ದಾನೆ.

ಇತ್ತ ತಾರಕಾಸುರನೆಂಬ ರಾಕ್ಷಸನು ಮನುಷ್ಯರಿಂದಾಗಲೀ ದೇವತೆ ಗಳಿಂದಾಗಲೀ ಸಂಹರಿಸಲಾಗದಂತಹ ವರವನ್ನು ಪಡೆದು ತಾನೇ ತಾನಾಗಿ ಎಲ್ಲರನ್ನೂ ಹಿಂಸಿಸುತ್ತಿದ್ದನು. ಅವನನ್ನು ಸಂಹರಿಸಲು ಮಹಾಯೋಗಿಯಾದ ಶಿವನ ಮಗನಿಗೆ ಮಾತ್ರ ಸಾಧ್ಯವಿತ್ತು. ಶಿವನು ಯೋಗಿಯಾದ್ದರಿಂದ ಅವನು ಮದುವೆಯಾಗಿ ಮಗನನ್ನು ಪಡೆಯುವುದು ಅಸಾಧ್ಯವೆಂದು ಭಾವಿಸಿ ಈ ಬಗೆಯ ವರವನ್ನು ಪಡೆದಿದ್ದನು. ಆದ್ದರಿಂದ ದೇವತೆಗಳೆಲ್ಲರೂ ಒಂದಾಗಿ ಶಿವನು ಸಂಸಾರಿಯಾಗುವಂತೆ ಮಾಡಲು ಹವಣಿಸಿದರು. ಅದಕ್ಕಾಗಿ ಕಾಮನನ್ನು ಹುರಿದುಂಬಿಸಿ ಶಿವನ ಯೋಗವನ್ನು ಬಹಿರ್ಮುಖಗೊಳಿಸುವಂತೆ ಅಣಿಮಾಡಿದರು ಮೊದಮೊದಲು ಹರನ ತಂಟೆಗೆ ಹೋಗಲು ಅವನು ನಿರಾಕರಿಸಿದ.

ಹರಿಯಲ್ಲಿಗೆ ತಮಮಂ, ಕೇ
ಸರಿಯಲ್ಲಿಗೆ ಕರಿಯನ್, ಅಭ್ರಶಿಖಿಯಲ್ಲಿಗೆ ಕೇಳ್
ಉರಗನನ್ ಅಟ್ಟುವ ತೆಱದಿಂ
ಹರನಲ್ಲಿಗೆ ತಂದೆ ಕಳಿಪುವರೆ ನೀವೆನ್ನಂ? (ಗಿರಿ.ಕ ೭-೩೧)

(ಸೂರ್ಯನ ಬಳಿಗೆ ಕತ್ತಲೆಯನ್ನೂ ಸಿಂಹದೆಡೆಗೆ ಆನೆಯನ್ನೂ ನವಿಲಿನೆಡೆಗೆ ಹಾವನ್ನೂ ಕಳುಹಿಸುವಂತೆ ಹರನಲ್ಲಿಗೆ ನನ್ನನ್ನು ಕಳಿಸುವಿರೇನು?) ಎಂದು ಹೇಳಿ ಶಿವನನ್ನು ಕೆಣಕಿದರೆ ತನ್ನ ಗತಿಯೇನಾಗುವುದೆಂಬುದನ್ನು ತಿಳಿಸಿದ. ಈ ಒಂದು ಕೆಲಸವನ್ನು ಮಾಡಿದರೆ ತಾರಕಾಸುರನ ಕಾಟವು ತಪ್ಪಿ ಲೋಕವು ನಿಶ್ಚಿಂತೆಯಿಂದಿರ ಬಹುದು ಎಂದು ಎಲ್ಲರೆಂದಾಗ:

ಎನೆ ಕಂದರ್ಪಂ ಸಕಳಭು
ವನಮೆನ್ನಿಂ ಪರಮಸುಖದೊಳಿರ್ಪುದು ಗಡಂ ಆ
ನೆನಿತಜವನ್ ಎನ್ನ ಹರಣಂ
ಘನವೇ, ತೆಗೆ ಇಂದೆ ನೂಱು ತೀವಿತ್ತೆಂದಂ (ಗಿರಿ.ಕ. ೭–೩೩)

(ತನ್ನ ಕೆಲಸದಿಂದ ಇಡೀ ಭೂಮಿಯೇ ಸುಖದಿಂದಿರುವುದಾದರೆ ನನ್ನ ಜೀವವೆಷ್ಟರದು, ತೆಗೆ ಈ ದಿನವೇ ನನಗೆ ನೂರುವರುಷ ತುಂಬಿ ನನ್ನ ಆಯುಸ್ಸು ಮುಗಿಯಿತೆಂದು ಭಾವಿಸುತ್ತೇನೆ) ಎಂದು ತೀರ್ಮಾನಿಸಿ ಹೊರಡುತ್ತಾನೆ.

ಈ ರೀತಿ ಮನ್ಮಥನು ಶಿವನ ತಪಸ್ಸು ಕೆಡಿಸಲು ಬಂದಾಗ ಶಿವಪೂಜೆಯಲ್ಲಿ ತೊಡಗಿದ್ದ ಸುಂದರಿಯೂ ಆದ ಪಾರ್ವತಿಯನ್ನು ಕಾಣುತ್ತಾನೆ. ಅವಳೂ ಶಿವನು ತನಗೊಲಿಯುವಂತೆ ಅವನ ತಪೋಭಂಗವನ್ನು ಮಾಡು ಎಂದು ಮನ್ಮಥನನ್ನು ಬೇಡುತ್ತಾಳೆ.

ನಾನಾವಿಧದಿಂ ರುದ್ರನ
ನೂನತಪೋಭರದ ಬೆಸುಗೆಯಂ ಬಿಡಿಸೊಲವಿಂ
ಶ್ರೀನಂದನ ನೀನಂಜದಿರ್
ಅನಿರ್ದಪೆನಾನೆ ರಕ್ಷೆಯಾನೆ ಸಹಾಯಂ (ಗಿರಿ.ಕ. ೮–೧೮)

(ಹಲವಾರು ಬಗೆಯಲ್ಲಿ ಪ್ರಯತ್ನಿಸಿ ಶಿವನ ತಪಸ್ಸನ್ನು ಸಡಿಲಗೊಳಿಸು. ಮನ್ಮಥ ನೀನೇನೂ ಹೆದರಬೇಡ. ನಾನು ನಿನ್ನ ರಕ್ಷೆಯಾಗಿ ನಿಲ್ಲುತ್ತೇನೆ.) ಇದರಿಂದ ಉತ್ತೇಜನಗೊಂಡ ಕಾಮನು ಮತಂಗ ಪರ್ವತವನ್ನೇರಿ ಮಹೇಶನ ಎಡಭಾಗದಲ್ಲಿ ನಿಂತು, ರತಿಯನ್ನೂ ಪಕ್ಕದಲ್ಲಿ ನಿಲ್ಲಲು ಹೇಳಿ, ಸುರರೆಲ್ಲರೂ ಹುರಿದುಂಬಿಸುತ್ತಿರಲು ಶಿವನೆಡೆಗೆ ಗುರಿಯಿಟ್ಟನು. ಆದರೆ ಅವನು ಹೊಡೆದ ಬಾಣವು ಶಿವನನ್ನು ತಾಕದೆ ವಾಪಾಸಾಯಿತು. ನಾನಾ ಬಗೆಯ ಅಸ್ತ್ರಗಳನ್ನು ಪ್ರಯೋಗಿಸಿದರೂ ಶಿವನು ನಿಶ್ಚಲನಾಗಿಯೇ ಇರುತ್ತಾನೆ. ಆ ಹೊತ್ತಿಗೆ ಉಮೆಯು ಹೂಗಳನ್ನು ತೆಗೆದುಕೊಂಡು ಶಿವಪೂಜೆಯನ್ನು ಒಲವಿನಿಂದ ಮಾಡಲು ತೊಡಗುತ್ತಾಳೆ. ಆಕೆಯ ನೋಟದಲ್ಲಿ ಕೋಟ್ಯಾನುಕೋಟಿ ಮನ್ಮಥರು ಹುಟ್ಟುತ್ತಿದ್ದರು. ಅವಳನ್ನು ಕಂಡ ಮನ್ಮಥನಿಗೆ ಸ್ವಲ್ಪ ಹುಮ್ಮಸ್ಸು ಬಂದಿತು. ಆಕೆಯ ಸಹಾಯದಿಂದ ತಾನು ಶಿವನನ್ನು ಗೆಲ್ಲಬಹುದೆನಿಸಿತು:

ಇನ್ನಂಜೆನಂಜೆನಾಹಾ
ಉನ್ನತ ಬಲವಾಯ್ತೆನುತ್ತೆ ವಿಭ್ರಮ ಬಳಸಂ
ಪನ್ನಂ ಕಾಮಂ ತೆಗೆದಂ
ತನ್ನಗ್ಗದುದಂಚ ಪಂಚಬಾಣಮನಾಗಳ್ (ಗಿರಿ.ಕ. 8–43)

(ಇನ್ನು ನಾನು ಹೆದರುವುದಿಲ್ಲ, ಈಕೆಯಿಂದ ನನ್ನ ಬಲವು ಹೆಚ್ಚಾಯಿತು ಎನ್ನುತ್ತ ಮನ್ಮಥನು ಉತ್ಸಾಹದಿಂದ ಅತ್ಯಂತ ಶ್ರೇಷ್ಠವಾದ ಬಾಣದಿಂದ ಶಿವನಿಗೆ ಹೊಡೆಯಲು ಸಿದ್ಧನಾದನು.) ಆ ಬಾಣವನ್ನು ಪ್ರಯೋಗಿಸಿದಾಗ:

ತೆಗೆದಾಕರ್ಣಂಬರಂ ಶಂಬರರಿಪು ನೆರೆಹೂಡಿರ್ದ ಪುಷ್ಪಾಸ್ತ್ರದೊಂದು
ಜ್ಜುಗಮ್ ಅಕಾಶಸ್ಥನಾಕೌಕರೊಳೊದವಿದ ನೂನಾರ್ತಿ ಕೂರ್ತೆಯ್ದೆ ನಿಂದಿ

ರ್ಗಗಜಾಚಿತ್ತಭಿಲಾಷಾವಿತತಿ ನೆರೆದು ಭೂತೇಶ ಚಿತ್ತಾಂತದೊಳ್ ಪೊ
ಕ್ಕು ಗಭೀರೋದ್ಯತ್ ತಪೋಬೀಜಮನತಿ ಭರದಿಂದೊತ್ತಿ ಮುತ್ತಿತ್ತು ಸುತ್ತಂ
(ಗಿರಿ.ಕ. ೮–೪೫)

(ಕಿವಿಯವರೆಗೂ ಬಾಣವನ್ನು ಸೆಳೆದು ಬಿಟ್ಟಾಗ ಆಕಾಶದಲ್ಲಿದ್ದ ದೇವತೆಗಳೆಲ್ಲರ ಬೆಂಬಲವಿದ್ದ ಗಿರಿಜೆಯ ಶಿವಪ್ರೇಮವು ಭೂತೇಶನ ಚಿತ್ತದಲ್ಲಿ ಸೇರಿ ಗಂಭೀರವಾದ ಅವನ ತಪಸ್ಸಿನ ಮೂಲವನ್ನೇ ಆವರಿಸಿತು.) ಅದು ಶಿವನ ಸಮಾಧಿಯನ್ನು ಕದಲಿಸಿತು. ಅವನು ಕಣ್ತೆರದು ಮುಂದೆ ನೋಡಿದಾಗ ನಮಸ್ಕರಿಸುತ್ತಿದ್ದ ಗಿರಿಜೆಯು ಕಾಣಿಸಿದಳು. 'ಅನೇಕೆ ಈ ಮಾನಿನಿಯೇಕೆ?' ಎಂದು ಶಿವನಿಗೆ ಅಚ್ಚರಿಯಾಯಿತು. ತನ್ನ ತಪೋಭಂಗಕ್ಕೆ ಕಾರಣರಾರು ಎಂದು ತನ್ನ ಎಡಭಾಗವನ್ನು ನೋಡಿದಾಗ ಅಲ್ಲಿ ಕಾಮನಿದ್ದ.

ನೋಡದ ಮುನ್ನಂ ಕೋಪಂ
ನಾಡೆಯುಮೊತ್ತರಿಸಿ ನೀಳ್ದು ನಿಟಲೇಕ್ಷಣದೊಳ್
ಕೂಡೆ ಬಳೆಬಳೆದು ಸುಳಿಸುಳಿ
ದೀಡಿಱಿದೊಳಗೊಳಗೆ ಘುಳಘುಳಿಸಿ ಕುದಿದಾಗಳ್ (ಗಿರಿ.ಕ. ೮–೪೬)

(ಕಾಣುವುದಕ್ಕೆ ಮುಂಚೆಯೇ ಕೋಪವು ಒತ್ತರಿಸಿ ಬಂದು ಹಣೆಗಣ್ಣಿನಲ್ಲಿ ಕೇಂದ್ರಗೊಂಡು ಕುದಿಯಿತು.) ಆ ಕೋಪಾಗ್ನಿಯು ಎಲ್ಲ ದಿಕ್ಕುಗಳನ್ನೂ ಆವರಿಸಿತು.

ಇಟ್ಟಣಿಸಿ, ಘುಡುಘುಡಿಸಿ ಕಿಡಿ
ಗುಟ್ಟೆ ಕನಲ್ದಡಸಿ ಸಿಡಿಲ ಬಳಗದ ಮುಳಿಸಂ
ತೊಟ್ಟುದು ಬಿಸುಗಣ್ಣುಂ ಪೊಱ
ಮುಟ್ಟುದು ಸುಟ್ಟುದು ರತೀಶನಂ ನಿಮಿಷಾರ್ಧಂ (ಗಿರಿ.ಕ. ೮–೪೮)

(ಭುಗಿಲ್ಲನೆ ಹಾರಿ ಕಿಡಿಗಳನ್ನು ಕರೆಯುತ್ತ ಸಿಡಿಲುಗಳ ಸಮೂಹವೇ ಇದ್ದಂತಿದ್ದ ಆ ಕೋಪಾಗ್ನಿಯು ಮೂರನೆಯ ಕಣ್ಣಿನಿಂದ ಹೊರಹೊಮ್ಮಿ ಕ್ಷಣಮಾತ್ರದಲ್ಲಿ ಮನ್ಮಥನನ್ನು ಸುಟ್ಟುಹಾಕಿತು.) ಅನಂತರ:

ಸಂದಣಿಸಿ ಪತ್ತಿದುರಿ ಘರಿ
ಲೆಂದುಪಿದ ಬೇಗದಿಂದ ಉರಿದಾಕ್ಷಣದೊಳ್
ಬೆಂದ ನುಲಿಯಂತೆ ಮದನಂ
ನಿಂದಿರೆ ಕಂಡಭವನೆಯ್ದಿ ಮುಳಿದಂ ತುಳಿದಂ (ಗಿರಿ.ಕ. ೮–೫೨)

(ಒತ್ತಾಗಿ ಬಂದ ಹಣೆಗಣ್ಣಿನ ಉರಿಯು ಕಾಮನನ್ನು ಸುಟ್ಟು ಹಾಕಿದಾಗ ಅವನ ಆಕಾರವು ಸುಟ್ಟ ಹಗ್ಗದಂತೆ ಬೂದಿಯಾಗಿದ್ದಿತು. ಅದನ್ನು ಶಿವನು ಕೋಪದಿಂದ ತುಳಿದನು.) ಮನ್ಮಥನು ಸುಟ್ಟುಹೋದಾಗ ಅವನ ಆಕಾರವು ಉಳಿಯಿತು–ಬೂದಿ ಯಾಗಿ; ಅದನ್ನೂ ಸಹಿಸದ ಶಿವನು ಕಾಮನು ಆಕಾರವನ್ನು ತುಳಿದು ಹುಡಿ ಮಾಡಿದ–ಎಂಬ ವರ್ಣನೆಯ ಕಾಮವನ್ನು ಕಿತ್ತೊಗೆಯುವ ಶಿವನ ಛಲವನ್ನು ಎಷ್ಟೊಂದು ಸುಂದರವಾಗಿ ಚಿತ್ರಿಸುತ್ತದೆ!

ತನ್ನ ಕಣ್ಣೆದುರಿಗೇ ತನ್ನ ಪ್ರಿಯನು ಸುಟ್ಟು ಬೂದಿಯಾದದ್ದನ್ನು ಕಂಡು ರತಿಗೆ ದಿಗ್ಭ್ರಮೆಯಾಯಿತು. ಹರನ ತಪಸ್ಸು ಹೇಗೆ ಹೇಗೆಯೋ ಸಂಬಂಧ ಪಡೆದು ಮನ್ಮಥನನ್ನು ಆಹುತಿ ತೆಗೆದುಕೊಂಡಿದೆ

ಎತ್ತಣ ಹರಂ ಎತ್ತಣ ತಪಂ
ಎತ್ತಣ ತಾರಕನ ಬಾಧೆ ಎತ್ತಣ ಬಿಸುಗಣ್
ಎತ್ತಣುರಿ ಎತ್ತಣೆರವಿದು
ಎತ್ತಣ ಕೋಟಲೆಯನೆನಗೆ ಮಾಡಿದೆ ಮದನಾ (ಗಿರಿ.ಕ. ೮–೫೬)

(ಎಲ್ಲಿಯ ಹರ, ಎಲ್ಲಿಯ ತಪಸ್ಸು, ಎಲ್ಲಿಯ ತಾರಕಾಸುರನ ಕೋಟಲೆ! ಈಗ ಈ ಉರಿ ಎಲ್ಲಿಯದು ನಿನ್ನ ಇರುವಿಕೆಯ ಸ್ಥಿತಿ ಎಂತಹದು! ನನಗೆ ಎಂತಹ ಕೋಟಲೆಯನ್ನು ತಂದೊಡ್ಡಿದೆ) ಎಂದು ರತಿಯು ಮತಿಗೆಟ್ಟು ಗೋಳಿಡುತ್ತಾಳೆ.

ಭಾವಿಸಿ ಭವನಂ ಕುಸುಮಾ
ಸ್ತ್ರಾವಳಿಯಿಂದೆಚ್ಚು ಗೆಲ್ವೆಯೆಂದಿರ್ದೆಂ ಇದಿಂ
ತೋವೋ ನಿಟಿಲಾಗ್ನಿಯಿಂದಂ
ಬೇವುದನಾನೆತ್ತ ಬಲ್ಲೆನಲರ್ವಿನಲ್ಲರಸಾ (ಗಿರಿ.ಕ. ೮–೬೧)

(ನೀನು ಹೂಬಾಣಗಳಿಂದ ಶಿವನನ್ನು ಗೆಲ್ಲುವೆಯೆಂದು ತಿಳಿದಿದ್ದೆ. ಹೀಗೆ ಹರನ ಹಣೆಗಣ್ಣುರಿಯಿಂದ ಬೇಯುವುದನ್ನು ನಾನು ಊಹಿಸಿರಲಿಲ್ಲ) ಎಂದು ಅಳಲುತ್ತಾಳೆ. ಕಾಮನಿಲ್ಲದೆ ತಾನು ಹೇಗೆ ಬದುಕಬಲ್ಲೆ ಎಂದು ಹಲುಬುತ್ತಾಳೆ.

ಲಾವಣ್ಯಂ ಲಯಮಾಯ್ತು, ವಿಭ್ರಮ ವಿಳಾಸಂ ಮಾಯವಾಯ್ತು, ಅಕ್ಕಟಾ
ಜೀವಂ ಬೆಂದುದು, ಚೆಲ್ವು ಸತ್ತುದು, ಸುಖಂ ಹಾಳಾಯ್ತು, ಕಂದರ್ಪಸದ್
ಭಾವಂ ಭಸ್ಮಮದಾಯ್ತು, ಮೆಯ್ಮೆ ಮಡಿಯಿತ್ತು, ಉತ್ಸಾಹವಿಂಗಿತ್ತು, ಅದಿ
ನ್ನೇವೇಳ್ವೆಂ ನಡೆದತ್ತ ಸಾರ್ವೆಂ ಇಳೆಗೆ ಇನ್ನೇನಪ್ಪೆಂತಿರ್ಪೆನೋ (ಗಿರಿ.ಕ. ೮–೬೨)

(ತನ್ನ ಚೆಲುವು ವಿಭ್ರಮೆಗಳು ನಾಶವಾದುವು, ಜೀವವೇ ಹೋದಂತಾಯಿತು. ಸುಖವೇ ಬತ್ತಿಹೋಯಿತು. ತನ್ನ ಸದ್ಭಾವ–ಮಹಿಮೆಗಳು, ಮನ್ಮಥನೇ, ನಿನ್ನ ಕೊಲೆಯಿಂದಾಗಿ ಕಣ್ಮರೆಯಾದವು. ಈಗೇನು ಮಾಡಲಿ, ಎಲ್ಲಿ ಹೋಗಲಿ?) ಎಂದು ರತಿಯು ದಿಕ್ಕುತೋಚದೆ ಪ್ರಲಾಪಿಸುತ್ತಾಳೆ, ಅಸಹಾಯಳಾಗಿ ಕೊರಗುತ್ತಾಳೆ.

ಪನ್ನಗಭೂಷಣ ವಿಷಸಂ
ಪನ್ನನ ನಿಷ್ಠುರಗುಣಂಗಳುರಿಪುವುದುಚಿತಂ
ನಿನ್ನಂ, ನಿನ್ನೀ ಸದ್ಗುಣ
ಮೆನ್ನಂ ನೆರೆದುರಿಪಲೇಕೆ ಮನ್ಮಥರಾಜಾ (ಗಿರಿ.ಕ. ೮–೭೩)

(ಈಶ್ವರನ ನಿಷ್ಠುರತೆಯು ನಿನ್ನನ್ನು ಉರಿಸಿ ಬೂದಿಮಾಡಿದುದು ಸರಿಯೇ, ಆದರೆ ನಿನ್ನ ಪ್ರೀತಿಯೇ ನನ್ನನ್ನು ಉರಿಸುತ್ತಿದೆ. ಎಲೈ ಮನ್ಮಥನೇ, ಇದು ಸರಿಯೇ?) ಎಂದು ಮತಿವಿಕಳೆಯಾಗಿ ಮೊರೆಯಿಡುತಾಳೆ.

ಮನೆದೇವತೆಯರಿರಾ, ನಂ
ದನದೇವತೆಯರಿರ, ದೆಸೆಯ ದೇವತೆಯರಿರಾ,

ಘನಪಾಪಂ ಪುದಿದಿರ್ದಿ
ವನಿತೆಯನೊಳಕೊಳ್ಳಿರೇ ಅನಾಥೆಯನೆನ್ನಂ (ಗಿರಿ.ಕ. 8–77)

(ಮನೆ ವನಗಳ ದೇವತೆಯರೇ, ದಿಕ್ಕುಗಳ ಒಡೆಯರೇ, ದೊಡ್ಡ ಪಾಪಿಯೂ ಅನಾಥೆಯೂ ಆದ ನನ್ನನ್ನು ನುಂಗಿಬಿಡಿ) ಎಂದು ಅಸಹಾಯಕತೆಯಿಂದ ದೈನ್ಯದಿಂದ ಬೇಡಿಕೊಳ್ಳುತ್ತಾಳೆ. ಹೀಗೆ ರತಿಯ ಶೋಕವು ಈ ಪದ್ಯಗಳಲ್ಲಿ ಮಡುಗಟ್ಟಿದೆ.

ರತಿಯ ಈ ಹೃದಯವಿದ್ರಾವಕ ವಿಲಾಪವನ್ನು ಕಂಡ ದಯಾಮೂರ್ತಿಯಾದ ಗಿರಿಜೆಯು ಹತ್ತಿರಬಂದು ಅವಳ ತಲೆ ಸವರಿ ಸಮಾಧಾನ ಮಾಡುತ್ತಾಳೆ. ಇದರಿಂದ ರತಿಯ ಶೋಕವು ಕೋಡಿವರೆದು ಗಿರಿಜೆಯ ಪಾದಗಳಲ್ಲಿ ಬಿದ್ದು ತನ್ನ ಮೇಲೆ ಕರುಣೆಯಿಟ್ಟು ಕಾಪಾಡಬೇಕೆಂದು ಬೇಡಿಕೊಳ್ಳುತ್ತಾಳೆ. ತಾನು ಅವಳ ಪರವಾಗಿ ಈಶ್ವರನಲ್ಲಿ ಬೇಡಿ ರತಿಯ ದುಃಖವನ್ನು ಹೋಗಲಾಡಿಸುವುದಾಗಿ ಪಾರ್ವತಿಯು ಆಶ್ವಾಸನೆಯೀಯುತ್ತಾಳೆ. ಹೀಗೆ ರತಿಯನ್ನು ಸಮಾಧಾನಮಾಡಿದ ಗಿರಿಸುತೆಗೆ ತನ್ನೆಡೆಗೆ ಗಮನವನ್ನೇ ಹರಿಸದೆ ಅಂತರ್ಮುಖಿಯಾದ ಈಶ್ವರನ ಬಗ್ಗೆ ಕೋಪವುಂಟಾಯಿತು. ಅದ್ದರಿಂದ 'ಆನಿರ್ದಲ್ಲಿಗೆ ಸಮಂತು ತನ್ನನೆ ತರ್ಪೆಂ' ಎಂದು ನಿಶ್ಚಯಿಸಿ ಉಗ್ರವಾದ ತಪಸ್ಸಿನಲ್ಲಿ ತೊಡಗುತ್ತಾಳೆ.

ಭಗ್ನ ಮನಮಲ್ಲದ ಚಲಿತೆ
ಲಗ್ನ ವ್ರತೆಯಾಗಿ ಶಂಕರಪ್ರೇಮ ಮನೋ
ನ್ಮಗ್ನಾಂಗಿ ಧೈರ್ಯನಿಧಿ ಪಂ
ಚಾಗ್ನಿಯ ನಡುವೆ ವಿಪುಳತಪದೊಳ್ ನಿಂದಳ್ (ಗಿರಿ.ಕ. ೯–೯)

(ಒಂದೇ ಮನಸ್ಸಿನಿಂದ ನಿಶ್ಚಲಳಾಗಿ ಶಿವನನ್ನೇ ಲಗ್ನವಾಗಬೇಕೆಂಬ ಧ್ಯೇಯದಿಂದ ಶಂಕರನ ಬಗೆಗಿನ ಪ್ರೇಮವು ತುಂಬಿದ ಮನಸ್ಸಿನವಳಾದ ಗಿರಿಜೆಯು ಘೋರ ತಪದಲ್ಲಿ ನಿಂತಳು.) ಅವಳ ತಪಸ್ಸಿನ ಬೆಂಕಿಯಲ್ಲಿ ಎಲ್ಲ ವಸ್ತುಗಳೂ ಸೀದುಹೋಗತೊಡಗಿದವು. ಹೀಗೆ ಬೇಸಿಗೆಯನ್ನು ಗಿರಿಜೆ ಪೂರ್ತಿಯಾಗಿ ತಪಸ್ಸಿನಲ್ಲಿ ಕಳೆದಳು; ಹಾಗೆಯೇ ಮಳೆಗಾಲವಾಯಿತು, ಪಾರ್ವತಿಯ ತಪಸ್ಸು ನಡೆದೇ ಇತ್ತು; ಶರತ್ಕಾಲವೂ ಬಂದಿತು, ಉಮೆ ತಪಸ್ಸಿನಲ್ಲಿ ಕದಲದೆ ಸೇರಿದ್ದಳು; ಹಿಮಗಾಲವು ಪ್ರಪಂಚವನ್ನು ಸುತ್ತಿತ್ತು. ಭವಾನಿಯ ತಪಸ್ಸು ಮುಂದುವರಿದೇ ಇದೆ. ಗಿರಿಜೆಯ ಈ ತಪಃಪ್ರಭಾವವು ವಿರೂಪಾಕ್ಷನ 'ಕರಣಂಗಳೊಳ್ ಬೆರಸಿ ಬಳೆಯೆ', ತಾನು ಇನ್ನು ಸುಮ್ಮನೆ ಕುಳಿತಿಬಾರದೆಂದು ಶಿವನಿಗನ್ನಿಸಿತು.

ಹೀಗೆ ಪಾರ್ವತಿಯ ಮೇಲೆ ಕರುಣೆಯನ್ನು ಪಡೆದ ಶಿವನು ಅವಳಿಗೆ ನೇರವಾಗಿ ಪ್ರತ್ಯಕ್ಷವಾಗಲಿಲ್ಲ: ತನ್ನಿರವನ್ನು ತೋರದ ಹಾಗೆ ಬ್ರಹ್ಮಚಾರಿ ವಟುವಿನ ವೇಷವನ್ನು ತಳೆಯುತ್ತಾನೆ: ತಪಸ್ಸಿನಲ್ಲಿ ತೊಡಗಿದ್ದ ಗಿರಿಜೆಯಲ್ಲಿಗೆ ಬರುತ್ತಾನೆ. ಆ ತಪೋವನಕ್ಕೆ ಶಿವನು ಪ್ರವೇಶಿಸಿದಾಗ:

ಬರೆ ಗಿರಿಶಂ ವಸಂತಋತುವಲ್ಲದೊಡಂ ಮುದದಿಂದೆ ಭೋಂಕನಂ
ಕುರಿಸಿತು ಮಾವು, ಪಲ್ಲವಿಸಿತಲ್ಲಿಯಶೋಕೆ. ವಸಂತದೂತಿಯೊ

ಪ್ಪಿರೆ ನೆಱೆ ಪೂತುದು, ಅನ್ಯಭೃತನುನ್ನತಿಯಿಂ ಕರೆದತ್ತು, ಮಲ್ಲಿಕಾ
ಪರಿಮಳಭಾರದಿಂ ಕುಸಿದು ಮೆಲ್ಲನೆ ತೀಡಿತು ದಕ್ಷಿಣಾನಿಲಂ (ಗಿರಿ.ಕ. ೯-೮೭)

(ಆಗ ವಸಂತಋತುವಲ್ಲದಿದ್ದರೂ ಮಾವು ಚಿಗುರಿತು, ಅಶೋಕವು ಕುಡಿಯೊಡೆಯಿತು, ಅದಿರ್ಮುರ್ತ್ತೆಯೆಂಬ ಬಳ್ಳಿಯಲ್ಲಿ ಹೂಗಳು ಅರಳಿದವು, ಕೋಗಿಲೆಯು ಹಾಡಲು ತೊಡಗಿತು ಮಲ್ಲಿಗೆಯ ಕಂಪನ್ನು ಹೊತ್ತು ತಂಗಾಳಿಯು ಎಲ್ಲೆಡೆಗೆ ಆವರಿಸಿತು.) ಹರಿಹರನ ವರ್ಣನೆಯ ವೈಖರಿಯ ನಿಜಸ್ವರೂಪವನ್ನಿಲ್ಲಿ ನಾವು ಕಾಣಬಹುದು. ಹಿಂದೆ ಹಣೆಗಣ್ಣನ್ನು ತೆರೆದು ಕಾಮನನ್ನು ಕೊಂದಿದ್ದ ಶಿವನು ಈಗ ಸೌಮ್ಯ ರೂಪವನ್ನು ಧರಿಸಿದ್ದಾನೆ. ಶಿವನಲ್ಲಿಯೇ ಆದ ಭಾವವ್ಯತ್ಯಾಸವನ್ನು ಇದಕ್ಕಿಂತಲೂ ಸುಂದರವಾಗಿಯೂ ಸಾಂಕೇತಿಕವಾಗಿಯೂ ವರ್ಣಿಸಲು ಸಾಧ್ಯವಿಲ್ಲ.

ಹಾಗೆ ಕಪಟವಟುವೇಷದ ಪರಶಿವನು ತಪೋವನಕ್ಕೆ ಬಂದಾಗ ಪಾರ್ವತಿಯ ಸಖಿಯರಾದ ಜಯೆ-ವಿಜಯೆ ಎಂಬುವರು ಅವನನ್ನು ಸ್ವಾಗತಿಸಿ ಅತ್ಕರಿಸುತ್ತಾರೆ, ಅವರು ಹಣ್ಣುಹಂಪಲನ್ನು ಕೊಟ್ಟಾಗ 'ಇದನ್ನು ಸ್ವೀಕರಿಸುತ್ತೇನೆ. ಆದರೆ ಅದಕ್ಕೆ ಮೊದಲು ಈ ಸುಂದರಿಯು ಯಾವ ಪುಣ್ಯವಂತನಿಗಾಗಿ ತಪಸ್ಸು ಮಾಡುತ್ತಿದ್ದಾಳೆ? ಎಂದು ಪ್ರಶಿಸುತ್ತಾನೆ. 'ಅವೆಲ್ಲ ನಿಮಗೇಕೆ, ಕೊಟ್ಟದ್ದನ್ನು ತಿಂದು ಹಸಿವನ್ನು ಹಿಂಗಿಸಿಕೊಳ್ಳಿ' ಎಂದು ಸಖಿಯರು ಉತ್ತರಿಸುತ್ತಾರೆ. ಆದರೆ ವಟುವು ಸುಮ್ಮನಾಗಬೇಕಲ್ಲ!

ಬೆಸಗೊಂಡೊಡೆ ದೋಷಮೆ? ಈ
ಪೊಸಕನ್ನೆ ತಪೋನಿರೋಧದಿಂದಿರ್ಪೊಡೆ ಸೈ
ರಿಸಬರ್ಪುದೆ ತಪಮಂ ಮಾ
ಣಿಸುವವರಿಲ್ಲಾ? ಸಹಾಯ ಸಂಪದಮಿಲ್ಲಾ? (ಗಿರಿ.ಕ. ೯-೯೪)

(ಕೇಳಿದರೆ ತಪ್ಪೇನು? ಇಂತಹ ನವಯುವತಿಯು ತಪಸ್ಸು ಮಾಡುತ್ತಿದ್ದರೆ ಅದನ್ನು ನೋಡುತ್ತ ಸಹಿಸಿಕೊಂಡಿರಲು ಸಾಧ್ಯವೇ? ಈಕೆಯ ತಪಸ್ಸನ್ನು ಯಾರು ನಿಲ್ಲಿಸಲಾಗಲಿಲ್ಲವೇ? ಈಕೆಗೆ ಸಹಾಯಕರಿಲ್ಲವೇ?) ಎಂದು ಆ ಯುವತಿಯ ಬಗ್ಗೆ ತುಂಬ ಸಹಾನುಭೂತಿಯಿಂದ ಕೇಳುತ್ತಾನೆ! ಇದನ್ನೆಲ್ಲ ಕೇಳುತ್ತಿದ್ದ ಗಿರಿಜೆಗೆ ಮನಸ್ಸಿನಲ್ಲಿಯೇ ಕೋಪವುಕ್ಕಿತ್ತು. ಜಪಮಾಲೆಯನ್ನು ನಿಧಾನವಾಗಿ ತೆಗೆದಿಟ್ಟು ಕಣ್ತೆರೆದಾಗ ಆ ವಟುವು ಕಾಣಿಸಿದನು. ಮೋಡವು ಕವಿದಿದ್ದರೂ ಚಂದ್ರನು ಲೋಕಕ್ಕೆ ತಂಪನ್ನು ನೀಡುತ್ತಾನೆ. ಹಾಗೆಯೇ ಆ ವಟುವನ್ನು ಕಂಡಾಗ ಗಿರಿಜೆಗೆ ಹರ್ಷವಾಯಿತು. ತನಗೇಕೆ ಅಕಾರಣವಾಗಿ ಇವನನ್ನು ಕಂಡಾಗ ಸಂತೋಷವಾಗುತ್ತಿದೆಯೆಂದು ಅವಳು ಆಶ್ಚರ್ಯದಿಂದ ನೋಡುವಾಗ ಶಿವನು:

ನೆಗೆವ ಜಡೆಮುಡಿಯನೊತ್ತುತ್ತ
ಒಗೆವ ಭುಜಾಳಿಯನಡಂಗಿಸುತ್ತ, ಊರುಗಳಿಂ
ಮಿಗುವ ವೃಷೇಂದ್ರನನೌಂಕು
ತ್ತಗಲದೆ ನಿಜಮೂರ್ತಿಯೊಳಗೆ ಗಜಬಜಿಸುತ್ತಂ (ಗಿರಿ.ಕ. ೯-೯೮)

(ಮೇಲೇಳುವ ತನ್ನ ಜಟೆಯನ್ನು ಒತ್ತುತ್ತ, ಹೊರಬರುವ ಸರ್ಪಗಳನ್ನು ಅಡಗಿಸುತ್ತ,

ಈಚೆಗೆ ಕಾಣುವ ತನ್ನ ವಾಹನವಾದ ವೃಷಭನನ್ನು ಓಕುತ್ತ ತನ್ನತನವನ್ನು ಮರೆಸಿಕೊಳ್ಳಲು ಪ್ರಯತ್ನಿಸುತ್ತ) ಗಿರಿಜೆಯೊಡನೆ ಮಾತಿಗೆ ತೊಡಗುತ್ತಾನೆ.

ನಿನಗೇಕೀ ತರುಣತೆಯೊಳ್
ಘನತಪವೆಡೆಗೊಂಡುದಕಟ, ನವಲತೆಯಂ ಸೂ
ರ್ಯನ ಬಿಸಿಲಿಂ ಕೊರಗಿಪ ದು
ಷ್ಟನಂ ಎನಗಱಿಪಬಲೆ ಸೌಕುಮಾರ್ಯಾರ್ಣವರಣೇ (ಗಿರಿ.ಕ. ೯–೧೦೧)

(ಈ ತಾರುಣದಲ್ಲಿ ನಿನಗೇಕೆ ಈ ತಪಸ್ಸು? ನಿನ್ನಂತಹ ಕೋಮಲವಾದ ಬಳ್ಳಿಯು ತಪಸ್ಸಿನಿಂದ ಒಣಗಲು ಕಾರಣನಾದ ದುಷ್ಟನಾದರೂ ಯಾರು?) ಎಂಬುದೇ ಅವನ ಪ್ರಶ್ನೆ. ವಿಚಾರಿಸುತ್ತಿರುವವನು ವಟುವಾದ್ದರಿಂದ ಅವನನ್ನು ತಪ್ಪು ತಿಳಿಯುವಂತಿಲ್ಲ. ಆದರೂ

ಬೆಸೆಗೊಂಡಪನಮಳ ದ್ವಿಜಂ
ಉಸಿರಲ್ ತಾಂ ಬಾರದು, ಉಸಿರದಿರಬಾರದು ಎನು
ತ್ತಸದೃಶತಪಮಂ, ಮನದು
ಬ್ಬಸದಿಂದೆ ಭವಾನಿ ಮಾನಿ ಮೆಲ್ಲನೆ ನುಡಿದಳ್ (ಗಿರಿ.ಕ. ೯–೧೦೮)

(ವಿಚಾರಿಸುತ್ತಿರುವವನು ಬ್ರಾಹ್ಮಣ ವಟು, ಹೇಳಿದರೆ ಏನೋ, ಹೇಳದಿದ್ದರೆ ಏನೋ– ಎಂದು ಯೋಚಿಸಿದ ಪಾರ್ವತಿಯು ತನ್ನ ಮಾನಸಿಕ ಬೇಗುದಿಯಿಂದ ಅಯಾಸಗೊಂಡು ನಿಧಾನವಾಗಿ ಹೇಳಿದಳು.) ತಾನು ಕಾರುಣ್ಯಾಬ್ಧಿಯಾದ ಶಿವನನ್ನು ಕುರಿತು ಅವನಿಗಾಗಿ ತಪಸ್ಸು ಮಾಡುತ್ತಿರುವುದಾಗಿ ತಿಳಿಸಿದಳು.

ಶಿವನು ಹೆಸರನ್ನು ಕೇಳಿದಾಕ್ಷಣವೇ ಆ ವಟು ಅಟ್ಟಹಾಸದಿಂದ ನಕ್ಕು ಬಿಟ್ಟನು. ಮುಕ್ಕಣ್ಣನಾಗಿ ವಿರೂಪಗೊಂಡವನಲ್ಲಿ, ಶ್ಮಶಾನದಲ್ಲಿ ವಾಸಿಸುವ ಬೈರಾಗಿಯಲ್ಲಿ ಏನೆಂದು ನೀನು ಮನವಿಟ್ಟೆ ಎಂದು ಕೇಳಿದನು.

ನೀನಿನಿಯಳ್ ವಿಷಮಾತಂ,
ನೀನತಿ ಮೃದು ಕಠಿಣಗುಣಗಣಾಶ್ರಯನಾತಂ,
ನೀನಬಲೆ ಉಗ್ರನಾತಂ,
ನೀನುರುತರ ಭೀರು ಸರ್ಪಭೂಷಣನಾತಂ (ಗಿರಿ.ಕ. ೯–೧೩೩)

ಪುಲಿದೊವಲುಡುಗೆಯ, ಹಾವಿನ
ನೆಲೆದೊಡಿಗೆಯ, ನೊಸಲ ಕಣ್ಣ, ಖಟ್ವಾಂಗದ, ಪಂ
ದಲೆಗಳ ಮಾಲೆಯ, ಶೂಲದ
ಕಲಿಗಂಜದೆ ಮನವನೆಂತು ಮಾಡಿದೆ ಮುಗ್ಧೇ (ಗಿರಿ.ಕ. ೯–೧೧೪)

(ನೀನೆಷ್ಟು ಮಧುರೆಯೋ ಆ ಶಿವನು ಅಷ್ಟೇ ವಿಷಪೂರಿತನಾದವನು, ನೀನು ಕೋಮಲೆಯಾದರೆ ಅವನು ಒರಟ, ನೀನು ಅಬಲೆ, ಅವನೋ ಉಗ್ರಸ್ವರೂಪಿ, ನೀನು ಭಯದ ಸ್ವಭಾವದವಳು ಅವನು ಹಾವನ್ನೇ ಧರಿಸಿರುವವನು! ಹುಲಿದೊಗಲು

ಹಾವುಗಳನ್ನು ಧರಿಸಿ, ಹಣೆಯಲ್ಲಿ ಕಣ್ಣನ್ನು ಪಡೆದು ಎಲುಬನ್ನು ಹಿಡಿದು ಹಸಿಯಾದ ತಲೆಬುರುಡೆಗಳ ಹಾರವನ್ನು ಹಾಕಿಕೊಂಡಿರುವ ಆ ಶೂಲಿಗೆ ನೀನು ಒಲಿದುದಾದರೂ ಹೇಗೆ?) ಎಂದು ಆ ವಟುವು ಆಶ್ಚರ್ಯವನ್ನು ತೋರಿಸಿ ಕೇಳುತ್ತಾನೆ. ಈ ಶಿವನಿಂದೆಯನ್ನು ಕೇಳಿ ಗಿರಿಜೆಗೆ ಸಹಿಸಲಾಗಲಿಲ್ಲ. ತನ್ನ ತಪಸ್ಸು ಹಾಗಿರಲಿ, ಶಿವನ ನಿಂದೆಯನ್ನು ಕೇಳುವ ದೌರ್ಭಾಗ್ಯವು ತನಗೊದಗಿತಲ್ಲ ಎಂದು ಅವಳಿಗೆ ದುಃಖ ತಾನು ಉದಾತ್ತ ಧ್ಯೇಯದಿಂದ ತಪಸ್ಸು ಮಾಡುತ್ತಿರುವಾಗ ಕೋಪ ಮಾಡಿಕೊಂಡು ಮನಸ್ಸನ್ನು ಕೆಡಿಸಿಕೊಳ್ಳಬಾರದು; ಆದರೆ ಪತಿನಿಂದೆಯನ್ನಂತೂ ಸಹಿಸಲೇ ಬಾರದು ಎಂದು ಕೋಪದಿಂದ ಗಿರಿಜೆಯು:

ಆದ ನಿರೋಧದ ನಿಂದೆಯ
ನಾದರಿಸದೆ ಭಸಿತದಿಂದೆ ವಿಪ್ರನನಿಡೆ ಪೋ
ಪೋದುದು ವಟುವೇಷಂ ಶಿವ
ನಾದೊಡೇಂ ಪುಸಿ ದಿಟಕ್ಕೆ ನಿಲ್ವುದೆ ಜಗದೊಳ್ (ಗಿರಿ.ಕ. ೯–೧೧೬)

(ನಿಂದೆಯನ್ನು ಕೇಳಲಾರದ ವಿಭೂತಿಯ ಗೆಡ್ಡೆಯಿಂದ ಆ ವಟುವಿಗೆ ಹೊಡೆದಳು. ಆದ್ಭುತ! ವಟುವೇಷವು ಹೋಗಿ ಶಿವನು ಕಣ್ಮುಂದೆ ನಿಂತ! ಶಿವನಾದರೆ ತಾನೇ ಏನು, ಹುಸಿಯು ಸತ್ಯದೆದುರಿಗೆ ನಿಲ್ಲಬಲ್ಲುದೇ?) ಹೀಗೆ ಇದ್ದಕ್ಕಿದ್ದಂತೆ ಶಿವನು ಪ್ರತ್ಯಕ್ಷನಾದುದನ್ನು ಕಂಡ ಪಾರ್ವತಿಗೆ ಒಂದು ಕ್ಷಣ ದಿಗ್ಭ್ರಮೆಯೇ ಆಯಿತು. ಸಂತೋಷ ಆಶ್ಚರ್ಯ ನಾಚಿಕೆ ಹೆದರಿಕೆಗಳೆಲ್ಲ ಒಮ್ಮೆಲೇ ಅವಳಲ್ಲಿ ತುಂಬಿಕೊಂಡವು. ಶಿವನನ್ನು ತಾನು ಹೊಡೆದುಬಿಟ್ಟೆನಲ್ಲ ಎಂದು ಅವಳು ನಾಚಿ ನೀರಾದಳು. ಆದರೆ ತನ್ನ ಅರಾಧ್ಯಮೂರ್ತಿ ಎದುರಿಗೇ ನಿಂತಿದ್ದಾನೆ.

ಅವಲೋಕನದಿಂ ಸೆಳೆದಳ್
ಶಿವನಂ, ಮನದಿಂದೆ ತೆಗೆದಳ್ ಅಪ್ಪಿದಳತ್ಯು
ತ್ಸವದಿಂ, ಚಿತ್ತದೊಳೆಳಸುತೆ
ತವಕಂ ಮಿಗೆ ಚುಂಬಿಸಿದಳಹಂಕಾರದೊಳಂ (ಗಿರಿ.ಕ. ೧೦–೩)

(ಶಿವನನ್ನು ತನ್ನ ನೋಟದಿಂದಲೇ ಪಾರ್ವತಿಯು ಸೆಳೆದು ಉತ್ಸಾಹದಿಂದ ಅಪ್ಪಿದಳು, ತನ್ನ ಚಿತ್ತದಲ್ಲಿಯೇ ಮುದ್ದಿಸಿದಳು.) ಪ್ರೀತಿಯಿಂದ ಶಿವನು

'ಗಿರಿಸುತೆ ಅಟ್ಟಜಿಂ ನಡೆಯ ತಾರಗಿರೀಂದ್ರನಿವಾಸದಲ್ಲಿಗ
ತ್ಯುರುತರಲೀಲೆಯಿಂದಂ' ಎನೆ, 'ದೇವ, ಗಿರೀಶ್ವರನಲ್ಲಿಯೆನ್ನನಾ
ದರದೊಳೆ ಬೇಡಿಯೂರ್ಜಿತವಿವಾಹಮದಚ್ಚರಿಯಪ್ಪ ಮಾಳ್ಕೆಯಿಂ
ಕರುಣಿಪುದು ಎಂದುದಂ ಸಲಿಸವೇಳ್ಪುದು, ಬೇಳ್ಪೆನಿದಂ ಸದಾಶಿವಾ' (ಗಿರಿ.ಕ. ೧೦–೫)

('ಪಾರ್ವತಿ, ಕೈಲಾಸಕ್ಕೆ ಹೋಗೋಣ ನಡೆ' ಎಂದು ಶಿವನು ಹೇಳಿದಾಗ ಆಕೆಯು ದೇವ, ನಮ್ಮ ತಂದೆಯಲ್ಲಿಗೆ ಬಂದು ಮಗಳನ್ನು ಬೇಡಿ ವಿವಾಹವಾಗಿ ಕರೆದೊಯ್ಯಿರಿ' ಎಂದು) ಬೇಡಿಕೊಂಡಳು. ಇಲ್ಲಿ ಶಿವನು ತನಗೆ ದೊರೆತಿದ್ದರೂ ಸದಾಚಾರೆಯಾದ ಪಾರ್ವತಿಯು ತಂದೆಯ ಅನುಮತಿಯನ್ನು ಪಡೆಯಿರೆಂದು ಹೇಳುವುದು ಸಹಜವಾಗಿದೆ.

ಅಷ್ಟರಲ್ಲಿ ರತಿಯು ಬಂದು ಪಾರ್ವತಿ-ಪರಮೇಶ್ವರರಿಗೆ ನಮಸ್ಕರಿಸಿದಳು. ತಾನು ಕಾಮನನ್ನು ಬದುಕಿಸುವಂತೆ ಶಿವನನ್ನು ಬೇಡಿಕೊಳ್ಳುವೆನೆಂದು ರತಿಗೆ ಆಶ್ವಾಸನೆಯಿತ್ತಿದ್ದನ್ನು ಶಿವನಿಗೆ ಪಾರ್ವತಿಯು ರತಿಯ ಮೇಲೆ ಕರುಣೆಯನ್ನಿಡಬೇಕೆಂದು ಬೇಡಿದಳು. ಆಗ ಪ್ರೀತಿಯಿಂದ ಗಿರಿಜೆಯೆಡೆಗೆ ನೋಡುತ್ತ ಶಿವನು 'ಕಾಮನು ದೇಹರಹಿತನಾಗಿ ರತಿಗೆ ಸುಖವನ್ನು ನೀಡಲಿ' ಎಂದು ಅನುಗ್ರಹಿಸಿದನು. ಅನಂತರ ಗಿರಿಜೆಯು ಓಷಧಿಪುರಕ್ಕೆ ಹೊರಟಳು. ತನ್ನ ಮಗಳು ತಪಸ್ಸನ್ನು ಬಿಟ್ಟು ಬರುತ್ತಿರುವ ವಾರ್ತೆಯನ್ನು ಕೇಳಿದ ಗಿರಿರಾಜನು ವೈಭವದಿಂದ ಬಂದು ಮಗಳನ್ನು ಇದಿರ್ಗೊಂಡನು. ಇತ್ತ ಶಿವನು ತನಗೆ ಹೆಣ್ಣನ್ನು ಕೇಳುವ ಸಲುವಾಗಿ ಸಪ್ತಋಷಿಯರನ್ನು ಗಿರಿರಾಜನೆಡೆಗೆ ಕಳುಹಿಸಿದನು. ಗಿರಿರಾಜನು ಸಂತೋಷದಿಂದ ಮಗಳನ್ನು ಶಿವನಿಗೆ ಮದುವೆ ಮಾಡಿಕೊಡಲೊಪ್ಪಿದನು. ಅತ್ಯಂತ ವೈಭವದಿಂದ ಪಾರ್ವತಿ-ಪರಮೇಶ್ವರರ ಮದುವೆಯು ನೆರವೇರಿತು. ಇಷ್ಟು ಹರಿಹರನ 'ಗಿರಿಜಾ ಕಲ್ಯಾಣ'ದ ಕಥೆ. ಮುಂದೆ ಕುಮಾರನು ಹುಟ್ಟಿ ತಾರಕಾಸುರನನ್ನು ಕೊಂದ ಕತೆಯನ್ನು ಕವಿಯು ಹೇಳಿಲ್ಲ. ಪ್ರಾಯಶಃ ಇದಕ್ಕೆ ಕಾರಣ ಹರಿಹರನ ಗಮನವಿದ್ದುದು ಪಾರ್ವತಿಯ ಪಾತ್ರ ಚಿತ್ರಣದಲ್ಲಿ. ಕೃತಿಯ ಹೆಸರೇ ಸೂಚಿಸುವಂತೆ 'ಗಿರಿಜಾ ಕಲ್ಯಾಣ'ದಲ್ಲಿ. ಕಾಮನು ಗೆಲ್ಲಲಾರದ ಶಿವನನ್ನು ಪಾರ್ವತಿಯು ತನ್ನ ಸಾತ್ವಿಕ ಭಕ್ತಿ ನಿಷ್ಠೆಗಳಿಂದ ಗೆದ್ದಳೆಂಬುದು ಈ ಕವಿಗೆ ಮುಖ್ಯ. ಕವಿ ತನ್ನ ಭಕ್ತಿ ನಿಷ್ಠೆಗಳನ್ನೆಲ್ಲ ಪಾರ್ವತಿಯಲ್ಲಿ ಅರೋಪಿಸಿ ತನ್ನ ಭಾವವನ್ನೇ ಆ ಪಾತ್ರದಲ್ಲಿ ಚಿತ್ರಿಸಲು ಪ್ರಯತ್ನಿಸಿದ್ದಾನೆ. ಅದರಲ್ಲಿ ಅವನು ಸಫಲನೂ ಆಗಿದ್ದಾನೆ.

ಒಟ್ಟನಲ್ಲಿ 'ಗಿರಿಜಾ ಕಲ್ಯಾಣ' ಒಂದು ಸುಂದರವಾದ ಚಂಪೂ ಕಾವ್ಯ. ಹರಿಹರನು ಪಂಡಿತರಿಗೂ ಪ್ರಿಯವಾಗುವ ಕಾವ್ಯವನ್ನು ಬರೆಯಬಲ್ಲನೆಂಬುದಕ್ಕೆ ನಿದರ್ಶನವಾಗಿದೆ ಈ ಕಾವ್ಯ. ಆದರೆ ಇದರಲ್ಲಿ ಕೇವಲ ಚಮತ್ಕಾರಗಳಿಂದ ತುಂಬದೆ ಅನೇಕ ಸುಂದರವಾದ ಸನ್ನಿವೇಶಗಳನ್ನು ರಚಿಸಿದ್ದಾನೆ. ಪಾರ್ವತಿಯ ತಪಸ್ಸಿನ ವರ್ಣನೆ, ಕಾಮದಹನ-ರತಿ ಪ್ರಲಾಪಗಳ ವರ್ಣನೆ, ಗಿರಿಜೆಗೆ ಶಿವನು ವಟುವೇಷದಿಂದ ಮೂಡಿ ಪ್ರತ್ಯಕ್ಷವಾದ ಪ್ರಸಂಗ-ಇವುಗಳು ಹರಿಹರನ ಸನ್ನಿವೇಶ ನಿರ್ಮಾಣ ಕೌಶಲಕ್ಕೆ ಉಜ್ವಲವಾದ ಉದಾಹರಣೆಗಳು. ಅದರಲ್ಲೂ ಪಾರ್ವತಿಯು ವಿಭೂತಿಯಿಂದ ಹೊಡೆಯಲು ಶಿವನು ಪ್ರತ್ಯಕ್ಷವಾಗುವ ಸನ್ನಿವೇಶವು ಹರಿಹರನದೇ ಸ್ವಂತ ಕಲ್ಪನೆ. ಇದು ತುಂಬ ನಾಟಕೀಯವಾಗಿ ವರ್ಣಿತವಾಗಿ ರಮ್ಯವಾಗಿರುವುದಲ್ಲದೆ, ಈ ಮೂಲಕ ಕವಿಯು ವಿಭೂತಿಯ ಮಹಿಮೆಯನ್ನೂ ಹೇಳುತ್ತಾನೆ. ಆದರೆ ನಾವಾಗಲೇ ಗಮನಿಸಿದಂತೆ ಸೂಳೆಗೇರಿಯ ವರ್ಣನೆ, ಬೇಟೆಯ ವರ್ಣನೆಗಳು ಈ ಕಾವ್ಯವಸ್ತುವಿಗೆ ಅನುಚಿತವೂ ಭಾರವೂ ಆಗಿವೆಯೆನ್ನಿಸುವಂತಹವು. ಇವಕ್ಕೆ ಕಾರಣ ಕವಿಯು ಚಂಪೂ ಕಾವ್ಯದಲ್ಲಿ ಅನುಸರಿಸಬೇಕಾದ ಸಂಪ್ರದಾಯಗಳು. ಆದ್ದರಿಂದಲೇ ಸ್ವತಂತ್ರ ಪ್ರವೃತ್ತಿಯ ಹರಿಹರನು ತನ್ನದೇ ಆದ ಕಾವ್ಯಮಾರ್ಗವನ್ನು ಸೃಷ್ಟಿಸಿಕೊಂಡು ಸುಂದರವಾದ ರಗಳೆಗಳನ್ನು ರಚಿಸಿದ್ದಾನೆ. 'ಗಿರಿಜಾ ಕಲ್ಯಾಣ'ವು ಈ ಕವಿಯು ತನ್ನ ಸ್ವತಂತ್ರಮಾರ್ಗವನ್ನು ಕಂಡುಕೊಳ್ಳಲು ನಡೆಸುತ್ತಿದ್ದ ಪ್ರಯತ್ನದ ಕಾಲದಲ್ಲಿ ರಚಿತವಾದದ್ದು. ಇಲ್ಲಿಯೇ ಈ

ಕವಿಯು ತನ್ನ ಪ್ರತಿಭೆಯನ್ನು ಪ್ರಕಟಿಸಿದ್ದಾನೆ; ಚಂಪೂ ಕವಿಗಳಲ್ಲಿಯೂ ಗಣ್ಯವಾದ ಸ್ಥಾನವನ್ನು ಸಂಪಾದಿಸಿದ್ದಾನೆ. ಆದರೂ ಹರಿಹರನು ಕೀರ್ತಿ–ಮಹತ್ವ ಸ್ವಂತಿಕೆಗಳೆಲ್ಲ ಅವನ ರಗಳೆಗಳಿಂದಲೇ ಬಂದವು.

ಸುರಂಗ

'ತ್ರಿಷಷ್ಟಿಪುರಾತನ ಚಾರಿತ್ರಂ' ಎಂಬ ದೀರ್ಘ ಚಂಪೂಕಾವ್ಯದ ಕರ್ತೃ ಸುರಂಗನೆಂಬ ಕವಿ. ಇವನು ತನ್ನನ್ನು 'ಕರ್ಣಾಟಕ ಕವಿಚಕ್ರವರ್ತಿ' ಎಂದು ಕರೆದು ಕೊಂಡಿದ್ದಾನೆ. ಇವನ ತಂದೆ–ತಾಯಿಯರು ಸಂಗಮವಿಭು ಹಾಗೂ ಹಾಗೂ ಮಹಾದೇವಿ ಎಂಬ ದಂಪತಿಗಳು. ಇವನು ವೀರಶೈವ ಕವಿಯೆಂಬುದು ಸ್ಪಷ್ಟ. ಆದರೆ ಇವನ ಕಾಲದ ಬಗ್ಗೆ ಮಾತ್ರ ಯಾವುದೇ ಸುಳಿವು ನಮಗೆ ಸಿಕ್ಕುವುದಿಲ್ಲ. ಯಾವ ಕವಿಗಳೂ ಇವನನ್ನು ಹೆಸರಿಸುವುದಿಲ್ಲ. ಕಾವ್ಯದಲ್ಲಿನ ಭಾಷೆ. ಶೈಲಿ ಇತ್ಯಾದಿ ಅಂಶ ಗಳನ್ನು ಗಮನಿಸಿದರೆ ಸುರಂಗನ ಕಾಲವು ಹದಿನೈದು–ಹದಿನಾರನೆಯ ಶತಮಾನಗಳ ಸುಮಾರು ಎಂದು ಹೇಳಬಹುದು. ಇವನು ಯಾರಾದರೂ ರಾಜರ ಅಥವಾ ಮಾಂಡಳಿಕರ ಆಶ್ರಯದಲ್ಲಿದ್ದನೇ ಹೀಗೆ ಎಂಬ ವಿಚಾರವೂ ನಮಗೆ ತಿಳಿಯದು. ಇವನು ಕನ್ನಡ ನಾಡಿನ ಯಾವ ಭಾಗದಲ್ಲಿ ನೆಲಸಿದ್ದನೆಂಬುದು ಸಹ ನಮಗೆ ಖಚಿತ ವಾಗಿ ತಿಳಿಯದ ವಿಷಯವಾದರೂ ಪುಲಿಗೆರೆಯ ಸೋಮನಾಥನು ಈ ಕವಿಯ ಆರಾಧ್ಯದೈವ. ಈ ಕವಿಯು ಪ್ರಾಯಶಃ ಬೇರೆಯ ಕಾವ್ಯಗಳಾವುದನ್ನೂ ರಚಿಸಿಲ್ಲ.

ತ್ರಿಷಷ್ಟಿ ಪುರಾತನ ಚಾರಿತ್ರಂ

ಇದು ಅರವತ್ತುಮೂವರು ಪುರಾತನರೆಂದು ಪ್ರಸಿದ್ಧರಾದ, ತಮಿಳು ನಾಡಿನಲ್ಲಿ ಕ್ರಿ.ಶ. ಆರರಿಂದ ಒಂಬತ್ತನೆಯ ಶತಮಾನಗಳ ನಡುವಣ ಕಾಲದಲ್ಲಿ ಜೀವಿಸಿದ್ದ, ನಾಯನ್ಮಾರರೆಂದು ಜನಪ್ರಿಯರಾದ ಶಿವಭಕ್ತರ ಚರಿತ್ರೆಗಳನ್ನು ಹೇಳುವ ಚಂಪೂಕಾವ್ಯ. ಈ ಪುರಾತನರ ಬಗ್ಗೆ ತಮಿಳಿನಲ್ಲಿ ಶೇಕ್ಕಿಳಾರ್ ಎಂಬ ಕವಿಯು ಹನ್ನೊಂದನೆಯ ಶತಮಾನದಲ್ಲಿಯೇ 'ಪೆರಿಯಪುರಾಣ'ವೆಂಬ ಕಾವ್ಯವನ್ನು ರಚಿಸಿದನು. ಹದಿಮೂರ ನೆಯ. ಶತಮಾನದ ಪ್ರಾರಂಭಕಾಲದಲ್ಲಿದ್ದ ಹರಿಹರನೂ ಈ ಪುರಾತನರ ಬಗ್ಗೆ ರಗಳೆ ಗಳನ್ನು ರಚಿಸಿದ್ದಾನೆ. ಆದರೆ ಸುರಂಗನು ತನ್ನ ಕಾವ್ಯಕ್ಕೆ ಲೈಂಗ್ಯಪುರಾಣವೇ ಆಧಾರ ವೆಂದು ಹೇಳಿಕೊಳ್ಳುತ್ತಾನೆ. ಉಪಮನ್ಯು ಮುನೀಶ್ವರನು ಕಣಾದನಿಗೆ ವಿಸ್ತರಿಸಿದುದನ್ನೇ ತಾನು ಕಾವ್ಯರೂಪದಲ್ಲಿ ಹೇಳುತ್ತಿರುವುದಾಗಿ ಕವಿಯು ತಿಳಿಸುತ್ತಾನೆ. ಇಷ್ಟಾದರೂ ಸುರಂಗ ಕವಿಯ ಮೇಲೆ ಹರಿಹರನ ಪ್ರಭಾವವು ಸಾಕಷ್ಟಿದೆ. ಅದು ಭಾವನೆಗಳಲ್ಲಿ, ಕಥಾಸರಣಿಯಲ್ಲಿ, ವಾಕ್ಯವೃಂದಗಳಲ್ಲಿ ಕಾಣಿಸುತ್ತದೆ. ಆಶ್ಚರ್ಯಕರವೆಂದರೆ ಅವನು ಹರಿಹರನ ಹೆಸರನ್ನೇ ಹೇಳುವುದಿಲ್ಲ.

'ತ್ರಿಷಷ್ಟಿ ಪುರಾತನ ಚಾರಿತ್ರ'ವು ಚಂಪೂ ಪ್ರಕಾರದಲ್ಲಿ ವಿಶಿಷ್ಟತೆಯನ್ನು ಪಡೆದಿದೆ. ಅದು ಒಂದೇ ಕತೆಯನ್ನು ನಿರೂಪಿಸದೆ ಅರವತ್ತುಮೂರು ವಿವಿಧ ಕತೆಗಳನ್ನೊಳಗೊಂಡ ಕಾವ್ಯ. ಈ ಎಲ್ಲ ಕತೆಗಳೂ ಸ್ವತಂತ್ರವಾದವು: ಕೆಲವು ಕತೆಗಳಲ್ಲಿ

ಸ್ವಲ್ಪ ಸಂಬಂಧವಿರುವಂತೆ ನಿರೂಪಿತವಾಗಿರಬಹುದಾದರೂ ಒಂದೊಂದು ಕತೆಯೂ ಸ್ವಯಂಪೂರ್ಣ. ಅವುಗಳನ್ನೆಲ್ಲ ಸೇರಿಸುವ ಕೊಂಡಿಯೆಂದರೆ ಈ ಕತೆಗಳನ್ನು ಉಪಮನ್ಯು ಮುನಿಯು ಹೇಳಿದ ಅಂಶ ಮಾತ್ರ; ಹೀಗೆ ಒಂದೇ ಕತೆಯನ್ನೊಳಗೊಳ್ಳದುದು ಇದರ ವೈಶಿಷ್ಟ್ಯ: ಆದರೆ ಸಾಂಪ್ರದಾಯಿಕವಾದ ವರ್ಣನೆಗಳನ್ನೇನೋ ಕವಿ ಇಲ್ಲಿ ತಂದಿದ್ದಾನೆ. ಇಲ್ಲಿನ ಆಶ್ವಾಸಗಳು ಕತೆಯನ್ನು ವಿವಿಧ ಘಟ್ಟಗಳಾಗಿ ವಿಭಾಗಿಸುವುಗಳಾಗಿರದೆ ಬೇರೆ ಬೇರೆ ನಾಯನ್ಮಾರರುಗಳ ಕತೆಗಳನ್ನು ಹೇಳುವುವಾಗಿವೆ. ಇಲ್ಲಿ ಭಾಷೆಯೂ ಪಂಪಾದಿ ಕವಿಗಳ ಚಂಪೂಕಾವ್ಯಗಳ ಭಾಷೆಯಂತೆ ಬರೀ ಹಳಗನ್ನಡದ ಬಿಗುವಿನಿಂದ ಕೂಡಿರದೆ ದೇಸಿಶಬ್ದಗಳಿಂದಲೂ ಹಳಗನ್ನಡ ವ್ಯಾಕರಣ ನಿಯಮಗಳ ಸಡಿಲುವಿಕೆಯಿಂದಲೂ ಕೂಡಿ ವಿಶಿಷ್ಟವಾಗಿದೆ. ಇದಕ್ಕೆ ಪ್ರಾಯಶಃ ಕಾರಣವೆಂದರೆ ಹೆಚ್ಚು ವಸ್ತುಕ (ಷಟ್ಪದಿ–ಸಾಂಗತ್ಯ–ತ್ರಿಪದಿ ಇತ್ಯಾದಿ ಛಂದಸ್ಸುಗಳಲ್ಲಿ ರಚಿತವಾದ ಹಾಡುಗಬ್ಬ) ಕಾವ್ಯಗಳು ರಚಿತವಾದ ಕಾಲದಲ್ಲಿ ಈ ಕಾವ್ಯವು ಮೂಡಿ ಬಂದದ್ದು.

ಸುರಂಗನು ವರ್ಣನೆಗಳನ್ನು ತನ್ನ ಕಾವ್ಯದಲ್ಲಿ ತಂದಿರುವನಾದರೂ ಅವು ಅತಿಯೆನಿಸುವಂತೆ ಬಂದಿಲ್ಲ. ಅವನ ಮುಖ್ಯ ಉದ್ದೇಶವು ನಾಯನ್ಮಾರರ ಕತೆಗಳನ್ನು ನೇರವಾಗಿ ಹೇಳುವುದಾದ್ದರಿಂದ ಈ ವರ್ಣನೆಗಳು ಕಥಾನಿರೂಪಣೆಗೆ ಆತಂಕವಾಗದೆಯೂ ಕಾವ್ಯಕ್ಕೆ ಭಾರವೆನಿಸದೆಯೂ ಬಂದಿವೆ. ಕೆಲವು ಕಡೆ ಸುರಂಗನ ವರ್ಣನೆಗಳು ಸುಂದರವಾದ ಭಾವನೆಗಳನ್ನೂ ಚಿತ್ರಗಳನ್ನೂ ಒಳಗೊಂಡು ನಮ್ಮನ್ನು ಆಕರ್ಷಿಸುತ್ತವೆ. ನಿದರ್ಶನಕ್ಕಾಗಿ ಕೆಲವು ಪದ್ಯಗಳನ್ನು ನೋಡಬಹುದು. ಮಳೆಗಾಲದಲ್ಲಿನ ಸಿಡಿಲಿನ ವರ್ಣನೆಯಿದು:

ತೊಳಪೆಳಮಿಂಚೆನಿಪ್ಪಸಿಯನಾಂತು ನಿಧಾಘನೃಪಾಲನೊಲ್ ಕರಂ
ಮುಳಿದ ಘನಾಗಮಕ್ಷಿತಿಪನಾಜಿಗೆ ಪೊಯ್ಸಿದ ಭೇರಿಯೆಂಬಿನಂ
ಘುಳುಘುಳು ಧಂದಳಂಧಳಧಳೆಂಬ ಮಹಾಸುರಘೋಷಮುಣ್ಮೆ ಭೂ
ತಳಮದಿರಲ್ ಸಿಡಿಲ್ ಗಜಗಜಿಸುತಿರ್ದುದು ತನ್ನಭೋಂತದೊಳ್

(ತ್ರಿ.ಪು.ಚಾ. ೮–೨೫)

(ಮೋಡರಾಜನು ಬೇಸಿಗೆರಾಜನ ಮೇಲೆಕೋಪಗೊಂಡು ಸೆಳೆಮಿಂಚೆಂಬ ತನ್ನ ಕತ್ತಿಯನ್ನು ಝಳಪಿಸಿ ಯುದ್ಧಕ್ಕೆ ಸಿದ್ಧವಾಗಲು ಹೊಡೆಸಿದ ಭೇರಿಯ ಹಾಗೆ ಘುಳುಘುಳು ಎಂಬ ಭಯಂಕರ ಶಬ್ದವು ಹೊಮ್ಮಲು ಭೂತಳವೇ ಅದುರುವ ಹಾಗೆ ಆಕಾಶದಲ್ಲಿ ಸಿಡಿಲು ಗರ್ಜಿಸಿತು.) ಮುನಿಗಳ ಆಶ್ರಮವೊಂದರಲ್ಲಿನ ಒಂದು ಚಿತ್ರವನ್ನು ಸುಂದರವಾಗಿ ಕೊಡುತ್ತಾನೆ:

ಮಿಸುಗುವ ಪರ್ಣಶಾಲೆಯೊಳೆ ಪೊಕ್ಕುಪಡಲ್ಗೆಯ ಪೂವನೊಕ್ಕು ಶೋ
ಧಿಸಿದ ವಿಭೂತಿಯಂ ತೆಗೆದು ಮುಕ್ಕೆ ಕನಲ್ದುಗಳ್ದುಃಪೆನುತ್ತೆ ಝುಂ
ಕಿಸಲಿದಿರಾಗಿ ಪುರ್ಬಡರೆ ಬಗ್ಗಿಸಿ ಪಲ್ಗಿರಿದೋಡಿ ಪಾಯ್ದು ಲಂ
ಘಿಸಿ ತರುವೇಜಿ ತಾಪಸರ ಮಕ್ಕಳನೇಡಿಸಿತೊಂದು ಮರ್ಕಟಂ (ತ್ರಿ.ಪು.ಚಾ. ೧–೬೧)

(ಒಂದು ಧೂರ್ತಕೋತಿಯು ಸುಂದರವಾದ ಪರ್ಣಶಾಲೆಯನ್ನು ಸೇರಿ ಅಲ್ಲಿದ್ದ ಬುಟ್ಟಿಯಲ್ಲಿನ ಹೂವನ್ನೆಲ್ಲ ಬೀಳಿಸಿತು, ಶೋಧಿಸಿ ಇಟ್ಟಿದ್ದ ವಿಭೂತಿಯನ್ನು ಮುಕ್ಕಿ 'ಉಫ್' ಎಂದು ಊದಿ ಉಗುಳಿತು. ಅದನ್ನು ಕಂಡ ಋಷಿ ಕುಮಾರರು ಕೋತಿಯನ್ನು ಗದ್ದರಿಸಿದರು. ಆ ಕೋತಿಯು ಓಡಿಹೋಗಿ ಮರದ ರೆಂಬೆಯೊಂದರ ಮೇಲೆ ಕುಳಿತು ಆ ಕುಮಾರರನ್ನು ಅಣಕಿಸಿತು.) ಈ ಚಿತ್ರದಲ್ಲಿ ವಿಶೇಷವೇನಿಲ್ಲದಿದ್ದರೂ ಸರಳ ಸನ್ನಿವೇಶವೊಂದನ್ನು ಕಣ್ಣಿಗೆ ಕಟ್ಟುವಂತೆ ಹಿಡಿದಿಡುವುದರಲ್ಲಿ ಕವಿಯು ಸಫಲನಾಗಿದ್ದಾನೆ. ಹಾಗೆಯೇ ಕಣ್ಣಪ್ಪನ ಸ್ವರೂಪವನ್ನು ವರ್ಣಿಸುವಾಗ ಕವಿಯು ಭಾವಚಿತ್ರವನ್ನು ತೆಗದಂತೆ ಬೇಟೆಗಾರನನ್ನು ಚಿತ್ರಿಸುತ್ತಾನೆ:

ಮೆಟ್ಟಿದ ಜಂಕಿನೆಕ್ಕಡ, ಕರಾಗ್ರದ ಕೂರ್ಗಣೆ, ತಾಳ್ದ ಕಾರ್ಮುಕಂ,
ಕಟ್ಟಿದ ದಟ್ಟಿ, ಸಿಕ್ಕಿದಲಗು, ಅಂಜನಶೈಲದ ಕರ್ಪನಾಂತ ಮೆಯ್
ಬಟ್ಟಿದವಪ್ಪ ಕೆಂಪಡರ್ದ ದಿಟ್ಟಿ, ಕುರುಳ್ದಲೆ, ಸೇರ ಮೀಸೆಗಳ್
ನಿಟ್ಟಸಲೊಪ್ಪೆ ವೀರರಸಮೂರ್ತಿಯೊಳೊಪ್ಪಿದನಂದು ಕಣ್ಣಪಂ (ತ್ರಿಪು.ಚಾ. ೨೭-೧೧೦)

(ಜಿಂಕೆಯ ಚರ್ಮದ ಚಪ್ಪಲಿಯನ್ನು ಮೆಟ್ಟಿ, ಕೈಯಲ್ಲಿ ಬಾಣವನ್ನೇರಿಸಿದ ಬಿಲ್ಲನ್ನು ಹಿಡಿದು, ದಟ್ಟಿಯನ್ನು ಕಟ್ಟಿಕೊಂಡು ಕಠಾರಿಯನ್ನು ಸಿಕ್ಕಿಸಿ, ಅಂಜನ ಪರ್ವತದಂತಹ ಕಪ್ಪಾದ ಮೈಬಣ್ಣದಿಂದ ಕೂಡಿ, ದೊಡ್ಡ ಕೆಂಗಣ್ಣುಗಳಿಂದಲೂ ಗುಂಗುರುಗೂದಲುಗಳಿಂದಲೂ ದಟ್ಟವಾದ ಮೀಸೆಯಿಂದಲೂ ಕೂಡಿರುವ ಕಣ್ಣಪ್ಪನು ವೀರರಸವೇ ರೂಪಗೊಂಡಂತೆ ಕಾಣುತ್ತಿದ್ದನು.)

ಸುರಂಗನು ನೇರವಾಗಿ ಕತೆಯನ್ನು ಹೇಳಿ ತನ್ನ ಉದ್ದೇಶವನ್ನು ಸಾಧಿಸಿಕೊಳ್ಳುತ್ತಾನೆ. ಅವನ ಕತೆ ಹೇಳುವ ರೀತಿಯನ್ನು ಅವನ ಮಾತುಗಳಿಂದಲೇ ಪರಿಚಯ ಮಾಡಿಕೊಳ್ಳೋಣ. ತಿರುನೀಲಕಂಠಕುಶವನೆಂಬ ಶಿವಭಕ್ತನ ಕತೆಯನ್ನು ಇಲ್ಲಿ ನಿದರ್ಶನಕ್ಕಾಗಿ ಆರಿಸಿಕೊಳ್ಳಲಾಗಿದೆ.

ನಂಬಿಕೆಗೆ ಅರ್ಹರಾದ ಶಿವಭಕ್ತರಿಂದ ತುಂಬಿರುವ ಚೋಳದೇಶದಲ್ಲಿ ಪೊನ್ನಾಂಬಲವೆಂಬ ಊರಿತ್ತು ಸಮುದ್ರವನ್ನೇ ಗೆಲ್ಲಲು ಅಕಾಶಗಂಗೆಯನ್ನು ಹಿಡಿಯಲು ನೀಡಿದ್ದ ವಿಶಾಲಭುಜಗಳಂತೆ ಅಲ್ಲಿನ ದೊಡ್ಡ ಕೆರೆಗಳಿದ್ದವು. ಆ ಊರಿನ ವೈಭವವನ್ನು ನೋಡುವುದಕ್ಕಾಗಿ ಕೆರೆಗಳು ಕಣ್ತೆರೆದಂತೆ ಸರೋವರಗಳಲ್ಲಿ ಕಮಲಗಳು ಅರಳಿರುತ್ತಿದ್ದುವಂತೆ.

ಶ್ರುತಿದುರ್ಗಂ ಸತ್ಪುರಾಣಂಗಳೆ ಜನಪದವು, ಅತ್ಮಾಗಮಂ ಮಂತ್ರ ಶಾಸ್ತ್ರೋ
ನ್ನತಕೋಶಂ, ಸಿದ್ದಿಗಳ್ಕಿಂಕರರುಂ ಉಪನಿಷದ್ಬಂಧು ತಾಂಗೂಡಿಯಿಂತೂ
ರ್ಜಿತದಿಂ ಸಪ್ತಾಂಗರಾಜ್ಯಾಂತರಮೆಸೆವನ್ ಉಮಾವಲ್ಲಭಂ ಕೂರ್ತೆನಲ್ ಸಂ
ತತವೊಪ್ಪುತ್ತಿರ್ಪ ಪೊನ್ನಾಂಬಲದ ಮಹಿಮೆಯಂ ಬಣ್ಣಿಸಲ್ ಬಲ್ಲನಾವಂ?
(ತ್ರಿಪು.ಚಾ. ೭-೪೧)

(ಪೊನ್ನಾಂಬಲವು ಒಂದು ಶಿವಸಾಮ್ರಾಜ್ಯ. ಅಲ್ಲಿನ ಏಳು ರಾಜ್ಯಾಂಗಗಳೆಂದರೆ: ವೇದಗಳೇ ದುರ್ಗ, ಪುರಾಣಗಳೆ ಜನಸಮೂಹ, ಆತ್ಮಶ್ರೇಯಸ್ಸನ್ನು ಮಾಡುವುದೆ

ಮಂತ್ರಾಲೋಚನೆ, ಶಾಸ್ತ್ರಗಳು ಅಲ್ಲಿನ ಕೋಶ, ಸಿದ್ಧಿಗಳೇ ಸೇವಕರು, ಉಪನಿಷತ್ತೇ ಬಂಧುಮಿತ್ರರುಗಳಂತೆ. ಇಂತಹ ಆ ಊರನ್ನು ಯಾರು ವರ್ಣಿಸಬಲ್ಲರು?) ಇಂತಹ ಊರಿನಲ್ಲಿ ಶ್ರೇಷ್ಠ ಶಿವಭಕ್ತರಾದ ತಿರು ನೀಲಕಂಠಕುಶವರೆಂಬುವರು ವಾಸಿಸುತ್ತಿದ್ದರು. ಅವರ ಹೆಂಡತಿ ಸತ್ಯವತಿ. ಅವರಿಬ್ಬರೂ ಕಲ್ಪವೃಕ್ಷದಂತೆ ದಾನಧರ್ಮಗಳನ್ನು ಮಾಡುತ್ತಿದ್ದರು. ತಿರು ನೀಲಕಂಠರು ಪ್ರತಿದಿನವೂ ಪೊನ್ನಾಂಬಲೇಶ್ವರನಿಗೆ ಮೂರು ಹೊತ್ತು ಪೂಜೆಯನ್ನು ಮಾಡುವ ಪರಿಪಾಠವನ್ನಿಟ್ಟುಕೊಂಡಿದ್ದರು.

ಒಂದು ದಿನ ತಿರುನೀಲಕಂಠರು ತಮ್ಮ ಪ್ರತಿದಿನದ ರೂಢಿಯಂತೆ ರಾತ್ರಿಯ ಶಿವಪೂಜೆಗಾಗಿ ದೇವಸ್ಥಾನಕ್ಕೆ ಹೋದರು. ಪರಮಭಕ್ತಿಯಿಂದ ಶಿವಪೂಜೆಯನ್ನು ನೆರವೇರಿಸಿ ರಾತ್ರಿ ಎರಡು ಯಾಮಗಳಾದ ನಂತರ ಶಿವಸನ್ನಿಧಿಯನ್ನು ಬಿಡಲಾರದೆ ಬಿಡುತ್ತ ಮನೆಗೆ ಮರಳುತ್ತಿದ್ದರು. ಮನೆಗೆ ಬರುವ ದಾರಿಯಲ್ಲಿ ಅವರು ಸೂಳೆಗೇರಿ ಯನ್ನು ಹಾದು ಬರಬೇಕಾಗಿತ್ತು. ಭಕ್ತರಿಗೆ ಎಲ್ಲವೂ ಒಂದೇ. ತಿರುನೀಲಕಂಠರು ಶಿವಧ್ಯಾನಮಾಡುತ್ತ ಅಲ್ಲಿನ ಹಾದಿಯಗುಂಟ ಬರುತ್ತಿದ್ದರು. ವಿಲಾಸಿನಿಯೊಬ್ಬಳು ಊಟಮಾಡಿದ ನಂತರ ಅವಳ ಸೇವಕಿಯು ಎಂಜಲ ನೀರನ್ನು ಮಹಡಿಯ ಮೇಲಿನಿಂದ ಸುರಿದಳು. ಅದು ಭಕ್ತರ ಮೇಲೆ ಬಿದ್ದಿತು. 'ಶಂಭು ಶಂಕರ' ಎಂಬ ನಾಮಸ್ಮರಣೆ ತಿರುನೀಲಕಂಠರ ಬಾಯಿಂದ ಜೋರಾಗಿ ಕೇಳಿಸಿತು. ಈ ಧ್ವನಿ ಒಳಗಿದ್ದ ವೇಶ್ಯೆಗೆ ಕೇಳಿಸಿತು.

ಇದು ತಿರುನೀಲಕಂಠಕುಶವಾಖ್ಯರ ದುಃಖದ ವಾಕ್ಯಮಪ್ಪುದ
ಪ್ಪುದು ಅಕಟಮೆಂಜಲಲ್ಬುಗದೆ ಮಾಣದು ಬೆಂದೆನೆನುತ್ತಮೆರ್ದು, ಗ
ದ್ಗದಿಸುವ ಕಂಠದಿಂ ನಯನದಿಂದೊಗುವಶ್ರುಜಲ ಪ್ರವಾಹದಿಂ
ದೊದವಿದ ಭೀತಿ ಮಿಕ್ಕುವುದು ಬಂದಡಿಯೊಳ್ ಕೆಡೆದಳ್ ಸುಭಕ್ತಿಯಿಂ

(ತ್ರಿ.ಪು.ಚಾ. ೭–೬೭)

(ಇದು ತಿರುನೀಲಕಂಠದ ಧ್ವನಿಯಿದ್ದಂತಿದೆ, ಆವರ ಮೇಲೆ ಎಂಜಲು ನೀರು ಬಿದ್ದರಬೇಕು–ಎಂಬ ಭಯದಿಂದ ಆ ವೇಶ್ಯೆಯೆದ್ದು ಬಂದು ಗದ್ಗದಿತಳಾಗಿ ಆ ಭಕ್ತರಿಗೆ ನಮಸ್ಕರಿಸಿದಳು.) ತನ್ನ ತಪ್ಪನ್ನು ಕೃಪೆಯಿಟ್ಟು ಕ್ಷಮಿಸಬೇಕೆಂದು ಬೇಡಿ ಕೊಂಡು ಭಕ್ತರನ್ನು ಕರೆತಂದು ಸ್ನಾನಮಾಡಿಸಿ, ಪರಿಮಳಗಳನ್ನು ಹಚ್ಚಿ ಉಪಚಾರ ಮಾಡಿ ಕಳುಹಿಸಿಕೊಟ್ಟಳು.

ಹೀಗೆ ತಿರುನೀಲಕಂಠರು ಪರಿಮಳಯುಕ್ತರಾಗಿ ಮನೆಗೆ ಬಂದಾಗ ಸತ್ಯವತಿಗೆ ಏನೋ ಅನುಮಾನವುಂಟಾಗಿ ಕೋಪದ ಮೌನದಿಂದಲೇ ಕಾಲಿಗೆ ನೀರಿತ್ತು ಊಟಕ್ಕೆ ಬಡಿಸಿದಳು. ಆಕೆಯ ಊಟವಾದ ಮೇಲೆ ಹತ್ತಿರ ಬಂದು ಮಲಗಿದಾಗ ಆಕೆಯ ಸಿಡುಕಿನ ಕಾರಣವನ್ನು ಊಹಿಸಿದ ತಿರುನೀಲಕಂಠರಿಗೆ ನಸುನಗೆ, ಸರಸದಿಂದ ಅವಳ ಸೆರಗನ್ನು ಹಿಡಿದು ಹತ್ತಿರ ಸೆಳೆದಾಗ ಸತ್ಯವತಿಯು ಕಡುಕೋಪದಿಂದ

ಎನ್ನಂ ಮುಟ್ಟಿದೆಯಾದೊಡೆ
ಪೊನ್ನಂಬಲನಾಥನಾಣೆಯೆಂದಾಣೆಯಿಡಲ್

ತನ್ನೀ ಸತಿಯಂ ತೊಱೆದಂ
ಸನ್ನುತ ತಿರುನೀಲಕಂಠಕುಶವಸಮಾಖ್ಯಂ (ತ್ರಿ.ಪು.ಚಾ. ೭–೭೪)

('ನನ್ನನ್ನು ಮುಟ್ಟಿದರೆ ಶಿವನಾಣೆ' ಎಂದು ಆಕೆಯು ಆಣೆಯನ್ನಿಟ್ಟಳು: ಅದನ್ನು ಕೇಳಿದ ತಿರುನೀಲಕಂಠರು ಆಕೆಯನ್ನು ಬಿಟ್ಟರು.) ಇದ್ದಕ್ಕಿದ್ದಂತೆ ಶಿವನಾಣೆಯನ್ನು ಕೇಳಿದ ಅವರ ಮನಸ್ಸು ಉರಿಗೆ ಬಿದ್ದ ಹೂವಿನಂತೆ ನಲುಗಿ ಹೋಯಿತು. ಹೀಗೇ ಅವರಿಬ್ಬರೂ ಒಬ್ಬರನ್ನೊಬ್ಬರು ಮುಟ್ಟದಂತೆ ಕಾಲ ಕಳೆಯುತ್ತಿದ್ದರು. ಇವರಿಬ್ಬರೂ ದೂರದೂರವಿರುವ ವಿಷಯವು ಮತ್ತಾರಿಗೂ ತಿಳಿಯದು.

ಹರಪರಿಚರ್ಯದ ಸಂವ
ತ್ಸರಮೆಂಬತ್ತಾಗಲ್ ಆಣೆ ಪಣ್ಣಾದವೊಲಾ
ತಿರುನೀಲಕಂಠಕುಶವರಂ
ಪಿರಿದು ಮುಪ್ಪಿಂದಮೆಸೆವುತಿರ್ಪವಸರದೊಳ್ (ತ್ರಿ.ಪು.ಚಾ. 7–78)

(ಶಿವಪೂಜೆಯಲ್ಲಿ ಎಂಬತ್ತು ವರ್ಷಗಳನ್ನು ಕಳೆದ ತಿರುನೀಲಕಂಠರನ್ನು ಶಿವನಾಣೆಯೇ ಪಕ್ವವಾದಂತೆ ಮುಪ್ಪು ಆವರಿಸಿತು.) ಹೀಗೆ ತನ್ನ ಮೇಲಿನ ಆಣೆಯನ್ನು ಪಾಲಿಸಿದ ಭಕ್ತನ ಮಹಿಮೆಯನ್ನು ಜಗತ್ತಿಗೆ ತೋರಿಸುವುದಕ್ಕಾಗಿ ಶಿವನು ಆಲೋಚಿಸಿದ. ಅದಕ್ಕಾಗಿ ಅವನು ಮುದುಕ ಭಿಕ್ಷುಕನ ವೇಷವನ್ನು ತಾಳಿದ:

ತಳೆದ ವಿಭೂತಿ, ಬೆಂಗೆ ನೆಱೆ ಪತ್ತಿದ ಕುಕ್ಷಿ, ಜರಜ್ಜಟಾಳಿ ಮೇ
ಖಳೆ ಸೆಳೆಗಚ್ಚುಟಂ, ನಿಜಕರಾಗ್ರದ ಲಾಕುಳವಾಂತ ಜೀರ್ಣವ
ಲ್ಕಲವತುಳಪ್ರಮೋದದಿನಿಱುಂಕಿದ ಕಕ್ಷದ ಕರ್ಪರಂ ಮನಂ
ಗೊಳಿಸಿರೆ ಶೂಲಿ ಭಿಕ್ಷುಕನ ವೇಷದಿ ಬಂದನದೊಂದು ಲೀಲೆಯಿಂ (ತ್ರಿ.ಪು.ಚಾ. ೭–೮೦)

(ವಿಭೂತಿಯನ್ನು ಬಳಿದುಕೊಂಡ ಆ ಭಿಕ್ಷುಕನಿಗೆ ಹೊಟ್ಟೆಯು ಬೆನ್ನನ್ನು ಹತ್ತಿತ್ತು, ಅವನ ಕೂದಲೂ ಜೀರ್ಣವಾಗಿತ್ತು, ಹಳೆಯ ಲಂಗೋಟಿಯನ್ನು ಧರಿಸಿ ಒಂದು ಕೈಯಲ್ಲಿ ಕೋಲನ್ನು ಹಿಡಿದುಕೊಂಡು ಮತ್ತೊಂದರ ಕಂಕುಳಲ್ಲಿ ಭಿಕ್ಷಾಪಾತ್ರೆಯನ್ನು ಹಿಡಿದುಕೊಂಡಿದ್ದನು.)

ಈ ರೀತಿ ವೇಷವನ್ನು ತಳೆದ ಶಿವನು ತಿರುನೀಲಕಂಠಕುಶವರ ಮನೆಗೆ ಬಂದ. ಅವರು ಭಿಕ್ಷುಕನ್ನು ಸತ್ಕರಿಸಿದರು. ಭಕ್ತದಂಪತಿಗಳನ್ನು ಹರಸಿದ ನಂತರ ಭಿಕ್ಷುಕನು 'ನನ್ನ ಜೊತೆಯಲ್ಲಿನ ಸಾಧುಗಳು ಪೊನ್ನಾಂಬಲೇಶನ ಗುಡಿಯಲ್ಲಿದ್ದಾರೆ. ನಾನಲ್ಲಿಗೆ ಹೋಗುತ್ತೇನೆ. ಈಗ ಈ ಪಾತ್ರೆಯನ್ನು ನಿಮ್ಮ ಹತ್ತಿರವೇ ಇಟ್ಟುಕೊಂಡಿರಿ. ನಾಳೆ ತೆಗೆದುಕೊಂಡು ಹೋಗುವೆ' ಎಂದು ಹೇಳಿ ತಿರುನೀಲಕಂಠರಿಗೆ ಕೊಟ್ಟ. ಸ್ವಲ್ಪದೂರ ಹೋಗಿ ನಂತರ ಬಂದು

ಗುರುವಿತ್ತ ಸಿದ್ಧಕರ್ಪರ
ಎಱೆವರ್ಗಿಷ್ಟಾರ್ಥಮೀವುತಿರ್ಪುದುಂ ಅದಱಿಂ
ಪರಮಪ್ರಿಯದಿಂ ಜತನದೊ
ಳಿರಿಸಿರ್ಪುದೆನುತ್ತಮುಸಿರ್ದು ಪೋದಂ ಮುನಿಪಂ (ತ್ರಿ.ಪು.ಚಾ. ೭–೮೪)

(ಈ ಪಾತ್ರೆಯನ್ನು ತನ್ನ ಗುರುಗಳು ಕೊಟ್ಟರೆಂದೂ, ಅದು ಕೇಳಿದವರಿಗೆ ಬೇಡಿದ್ದನ್ನು

ಕೊಡುವ ಮಹಿಮೆಯುಳ್ಳುದೆಂದೂ ಆದ್ದರಿಂದ ಅದನ್ನು ಜೋಪಾನವಾಗಿರಿಸ ಬೇಕೆಂದೂ ಎಚ್ಚರಿಸಿಹೋದ.) ಇಷ್ಟು ಹೇಳಿದ್ದರಿಂದ ತಿರುನೀಲಕಂಠರು ಆ ಪಾತ್ರೆಯನ್ನು ಪೆಟ್ಟಿಗೆಯಲ್ಲಿಟ್ಟು ಬೀಗಹಾಕಿ ರಾತ್ರಿಯಿಡೀ ಅದನ್ನು ಕಾಯುತ್ತ ಎಚ್ಚರವಾಗಿದ್ದರು.

ಸರಿ. ಮಾರನೆಯ ದಿನ ಆ ಭಿಕ್ಷುಕ ಜಂಗಮನು ಬಂದು ತನ್ನ ಪಾತ್ರೆಯನ್ನು ಕೊಡಿರೆಂದು ಕೇಳಿದ. ಅದರಂತೆ ತಿರುನೀಲಕಂಠರು ಪೆಟ್ಟಿಗೆಯ ಬೀಗವನ್ನು ತೆಗೆದು ನೋಡುತ್ತಾರೆ, ಪಾತ್ರೆಯೇ ಇಲ್ಲ! ಸಿಡಿಲು ಹೊಡೆದಂತಾಯಿತು. ಪೆಟ್ಟಿಗೆಯೇ ಪಾತ್ರೆಯನ್ನು ನುಂಗಿತೋ ಎಂಬಂತೆ ಪಾತ್ರೆ ಮಾಯವಾಗಿದೆಯಲ್ಲ ಎಂದು ತಿರುನೀಲಕಂಠರು ಭಯ–ದುಃಖಗಳಿಂದ ಹೇಳಿದಾಗ ಆ ಮುದುಕನು:

> **ತವಿವಿಲ್ಲದ ಕರ್ಪರಮಂ**
> **ಶಿವಭಕ್ತಂ ಕೊಂಡು ಕುಡದೆ ಕಾಡುವನೀಗಳ್**
> **ಶಿವಧೋ ಶಿವಧೋ ಎನುತಂ**
> **ಭವನದ ಮುಂಜೂರನುರ್ಚಿ ಮುನಿ ಮೊಱೆಯಿಟ್ಟಂ** (ತ್ರಿಪು.ಚಾ. ೭–೯೩)

(ನಾಶವೇ ಆಗದಂತಹ ಪಾತ್ರೆಯನ್ನು ಈ ಶಿವಭಕ್ತನು ತೆಗೆದುಕೊಂಡು ವಾಪಸ್ಸು ಕೊಡದೆ ಕಾಡುತ್ತಿದ್ದಾನೆ. ಅಯ್ಯೋ ಶಿವನೇ, ಕಾಪಾಡು ಎಂದು ಮನೆಯ ಸೂರಿನ ಮುಂಭಾಗದ ಹುಲ್ಲನ್ನು ಕಿತ್ತು ಕೂಗಿಕೊಂಡ ಆ ಮುದುಕ.) ಹುಲ್ಲನ್ನು ತಲೆಯಮೇಲಿಟ್ಟುಕೊಳ್ಳುವುದು 'ತನಗೆ ಅನ್ಯಾಯವಾಗಿದೆ, ನ್ಯಾಯವನ್ನು ದಯಪಾಲಿಸಿ' ಎಂದು ಬೇಡುವುದಕ್ಕೆ ಹಿಂದೆ ಇದ್ದ ಪದ್ಧತಿ. ಹಾಗೆ ಹೊರಟ ಮುದುಕನು ದೇವಸ್ಥಾನಕ್ಕೆ ಬಂದು ಅಲ್ಲಿ ಊರ ಹಿರಿಯರನ್ನು ಪಂಚಾಯಿತಿಗಾಗಿ ಸೇರಿಸಿದ. ತನ್ನ ಅಮೂಲ್ಯವಾದ ಪಾತ್ರೆಯನ್ನು ತಿರುನೀಲಕಂಠರು ತಮ್ಮಲ್ಲಿಯೇ ಇರಿಸಿಕೊಂಡಿದ್ದಾರೆ. ಅದನ್ನು ತನಗೆ ಕೊಡಿಸಿ ಕೊಡಬೇಕೆಂದು ಹಿರಿಯರಲ್ಲಿ ಬಿನ್ನವಿಸಿದ. ಆದರೆ ಆ ಹಿರಿಯರಿಗೆ ತಿರುನೀಲಕಂಠರು ಅಂತಹವರಲ್ಲವೆಂಬುದು ಗೊತ್ತಿದೆ. ಪಾತ್ರೆಯನ್ನು ಮುದುಕನು ಕೊಟ್ಟಿದ್ದನೆಂದೂ, ಬೆಳಗೆದ್ದು ನೋಡುವಾಗ ಅದು ಮಾಯವಾಗಿತ್ತೆಂದೂ ತಿರುನೀಲಕಂಠರೇ ಒಪ್ಪಿಕೊಂಡಿದ್ದಾರೆ. ಇದೆಲ್ಲಿ ಈ ಭಕ್ತರು ಈ ಘಾಟಿ ಮುದುಕನ ಕೈಲಿ ಸಿಕ್ಕಿಹಾಕಿಕೊಂಡರು ಎಂದು ಅಲ್ಲಿನ ಹಿರಿಯರಿಗೆ (ಮೂವಾಯಿಲರು) ಕನಿಕರ. ಅವರು:

> **ಇನಿಬರ್ಭಕ್ತರ್ ನಾವೆ**
> **ಯ್ದನುನಯದಿಂ ಪೊನ್ನ ಕರ್ಪರಮನೊಂದು ಭೋಂ**
> **ಕನೆ ಮಾಡಿಸಿಕೊಟ್ಟಪೆವೆಲೆ**
> **ಮುನಿವರ ಕೃಪೆಮಾಳ್ಪುದೆಮ್ಮ ಭಕ್ತರ್ಗೊಲವಿಂ** (ತ್ರಿಪು.ಚಾ. ೭–೧೦೨)

(ನಾವೆಲ್ಲ ಸೇರಿ ಈಗಲೇ ನಿಮಗೊಂದು ಚಿನ್ನದ ಪಾತ್ರೆಯನ್ನು ಕೊಡಿಸುತ್ತೇವೆ. ದಯಮಾಡಿ ಒಪ್ಪಿಕೊಂಡು ಈ ಭಕ್ತರನ್ನು ಕಾಪಾಡಬೇಕು) ಎಂದು ಬೇಡಿಕೊಂಡರು. ಆದರೆ ಜಗಳಕ್ಕಾಗಿ ಬಂದ ಮುದುಕನು ಅದಕ್ಕೆ ಒಪ್ಪುತ್ತಾನೆಯೇ!

ಎನಗದು ಗತಿ ಎನಗದು ಮತಿ
ಎನಗದೆ ಗುರು ಎನಗದೆಸೆವ ತೊಡವು ಎನಗದು ಜೇ
ವನಂ ಅದು ಕಾರಣದಿಂದಱಿ
ದೆನಗವನಿಯರೊಡವೆಯೇಕೆ ದೇಹವನೀವೆಂ (ತ್ರಿ.ಚಾ.ಪು. ೭-೧೦೩)

(ಆ ಪಾತ್ರೆಯೇ ನನ್ನ ಗತಿ ಮತಿ ಗುರು, ಆಭರಣ-ಎಲ್ಲವೂ ಅದು ನನ್ನ ಪ್ರಾಣ. ಅದನ್ನು ಬಿಟ್ಟು ಬೇರೆಯದನ್ನು ತಾನೊಪ್ಪುವುದಿಲ್ಲ, ಅದನ್ನುಳಿದು ತಾನು ಬದುಕಲಾರೆ) ಎಂದು ಹೇಳುವನು. ಪಾತ್ರೆಯಲ್ಲದೆ ಮತ್ತೇನೂ ಮುದುಕನಿಗೆ ಬೇಕಿಲ್ಲ: ಆದರೆ ಅದಿಲ್ಲದ್ದರಿಂದ ಅದನ್ನುಳಿದು ಮತ್ತೇನು ಕೊಡಲೂ ಇತರರು ಸಿದ್ಧ. ಹಾವು ಸಾಯದ ಕೋಲುಮುರಿಯದ ಸ್ಥಿತಿ.

ಕೊನೆಗೆ ತಾನೇ ಸೋತಂತೆ ಮುದುಕನು ತಿರುನೀಲಕಂಠ ದಂಪತಿಗಳು ಕೈಗಳನ್ನು ಹಿಡಿದುಕೊಂಡು ಕೊಳದಲ್ಲಿ ಮುಳುಗೆದ್ದರೆ ತಾನು ಕ್ಷಮಿಸುವುದಾಗಿ ಹೇಳುತ್ತಾನೆ. ಆದರೆ ಶಿವನಾಣೆಯಿದೆಯಲ್ಲ? ಆ ಮಾತನ್ನು ಕೇಳಿದ ತಿರು ನೀಲಕಂಠರು ಅದನ್ನು ಬಿಟ್ಟು ಮತ್ತೇನನ್ನಾದರೂ ಮಾಡುತ್ತೇನೆಂದು ಬೇಡಿ ಕೊಳ್ಳುತ್ತಾರೆ. ಅವರ ಛಲವನ್ನು ಕಂಡು ಮುದುಕನಿಗೆ ಮನಸ್ಸಿನಲ್ಲಿಯೇ ಮೆಚ್ಚುಗೆ. ಅನಂತರ, ಆ ದಂಪತಿಗಳಿಬ್ಬರು ಕೋಲೊಂದರ ಎರಡು ತುದಿಗಳನ್ನು ಹಿಡಿದುಕೊಂಡು ನೀರಲ್ಲಿ ಮುಳುಗಿದರೆ ಸಾಕು ಎಂದು ಆ ವೃದ್ಧನು ಹೇಳುತ್ತಾನೆ. ಇದನ್ನು ಕೇಳಿದ ಆ ದಂಪತಿಗಳು ಉತ್ಸಾಹದಿಂದ ಒಪ್ಪುತ್ತಾರೆ.

ತಳೆದಿರ್ದಾ ಲಾಕುಳದಿ
ರ್ಬಳೆಯಂ ಮುನಿಪಿಡಿಸಿ ದೇವಕೂಪದ ಜಲದೊಳ್
ಮುಳುಗಿಸಿ ತೆಗೆಯಲ್ ಪಿಂದಣ
ಸುಲಲಿತ ಯೌವನದೊಳಿರ್ದರಾ ದಂಪತಿಗಳ್ (ತ್ರಿ.ಪು.ಚಾ. ೭-೧೦೯)

(ತನ್ನ ಕೈಲಿದ್ದ ಕಟ್ಟಿಗೆಯ ಎರಡು ತುದಿಗಳನ್ನು ತಿರುನೀಲಕಂಠ-ಸತ್ಯವತಿಯರು ಹಿಡಿಯುವಂತೆ ಮಾಡಿ ದೇವಾಲಯದ ಕೊಳದಲ್ಲಿ ಮುಳುಗುವಂತೆ ಮಾಡಿ ಮೇಲೆತ್ತಿದಾಗ ಆಶ್ಚರ್ಯ ಅವರಿಬ್ಬರೂ ನವಯೌವನದಿಂದ ಕೂಡಿದ್ದರು!) ಮುದುಕನು ಶಿವರೂಪವನ್ನು ತಳೆದ. ತನ್ನಾಣೆಯನ್ನು ದೃಢವಾಗಿ ಪಾಲಿಸಿದ ಆ ದಂಪತಿಗಳಿಗೆ ಕೈಲಾಸದಲ್ಲಿ ಗಣಪದವಿಯನ್ನು ಈಶ್ವರನು ಕರುಣಿಸಿದ. ಹೀಗೆ ಕತೆಯು ಮುಗಿಯುತ್ತದೆ.

ಸುರಂಗನ ಕತೆಯು ತಿರುನೀಲಕಂಠರ ಮೇಲೆ ಹರಿಹರನು ಬರೆದ ರಗಳೆಯ ಕತೆಯನ್ನೇ ಅನುಸರಿಸಿದೆ. ಆದರೆ ನಿರೂಪಣೆಯಲ್ಲಿ ಇಬ್ಬರಿಗೂ ಅದೆಷ್ಟು ವ್ಯತ್ಯಾಸ! ಸುರಂಗನು ಕತೆಯ ಮೂರನೆಯ ಒಂದು ಭಾಗವನ್ನು ಪೊನ್ನಂಬಲದ ವರ್ಣನೆಗೆ ಮೀಸಲಿಡುತ್ತಾನೆ. ಆದರೆ ಅದು ಸಾಂಪ್ರದಾಯಿಕ ವರ್ಣನೆ, ಅಲ್ಲಿ ಬೀದಿಗಳು, ಅಂಗಡಿಗಳು, ಕರೆತೊರೆಗಳು ಇವುಗಳ ಸಾಧಾರಣ ಚಿತ್ರ. ಆದರೆ ಹರಿಹರನು ಕತೆಯ ಸಾರಕ್ಕೆ ತಕ್ಕಂತೆ ಭಕ್ತಿ ವಾತಾವರಣವು ಆ ಊರಿನಲ್ಲಿತ್ತೆಂಬುದನ್ನು ನಲವತ್ತು

ಸಾಲುಗಳಲ್ಲಿ ಚಿತ್ರಿಸುವುದು ತುಂಬ ಸಮಂಜಸವಾಗಿದೆ. ಈ ಕತೆಯ ಮುಖ್ಯಭಾಗ ಭಕ್ತನನ್ನು ಪರೀಕ್ಷೆ ಮಾಡಲು ಬಂದ ಮುದುಕನ ವರ್ತನೆ. ಹರಿಹರನ ರಗಳೆಯ ಮುದುಕನ ಚಿತ್ರ ಅಪ್ರತಿಮವಾದುದು. ಭಕ್ತನನ್ನು ಕಾಡಿಸಿದಾಗ ಅವನು ಸೋಲದಿರುವಷ್ಟೂ ಶಿವನ ಪ್ರೀತಿ ಹೆಚ್ಚುತ್ತದೆಂಬುದನ್ನು ಹರಿಹರನ ಪ್ರತಿಭಾ ಲೇಖನಿ ಸುಂದರವಾಗಿ ಚಿತ್ರಿಸುತ್ತದೆ. ಅದೇ ಸುರಂಗನಲ್ಲಿ ಈ ಭಾಗ ತೀರ ಸಾಧಾರಣವಾಗಿದೆ. ಇಲ್ಲಿ ಹರಿಹರನ ರಗಳೆಯಲ್ಲಿ ಕತೆಯ ಅಸ್ಥಿಪಂಜರ ವಿದೆಯೇ ಹೊರತು ಅಲ್ಲಿನ ರಕ್ತ-ಮಾಂಸಗಳಿಲ್ಲ. ಹೀಗಾಗಿ ಹರಿಹರನ 'ತಿರುನೀಲಕಂಠರ ರಗಳೆ' ಹಾಗೂ ಸಾಧಾರಣ ಬರೆಹಗಾರ ಇವರ ವ್ಯತ್ಯಾಸವು ಗೋಚರಿಸುತ್ತದೆ. ಎಂದರೆ ಸುರಂಗನು ಒಬ್ಬ ಸಾಂಪ್ರದಾಯಿಕ ರೀತಿಯ ಸಾಧಾರಣ ಕವಿ, ಆದರೂ ಅವನ ಕಾವ್ಯವು ವಿಶಿಷ್ಟವಾಗಿರಲು ಕೆಲವು ಕಾರಣಗಳಿವೆ. ಅವೆಂದರೆ: ಅವನು ಅತಿ ವರ್ಣನೆಯಿಂದ ಕಾವ್ಯಭಾರವನ್ನು ಹೆಚ್ಚಿಸದೆ ಬಹುಮಟ್ಟಿಗೆ ನೇರವಾಗಿ ಕತೆಯನ್ನು ಹೇಳುವುದು: ಇದು ಚಂಪೂ ಕೃತಿಯಾದರೂ ತೀರ ಪಾಂಡಿತ್ಯಪೂರ್ಣವಾಗಿ ಕಾವ್ಯರಚನೆಯನ್ನು ಮಾಡದೆ ಸರಳಶೈಲಿಯನ್ನು ಅನುಸರಿಸಿರುವುದು: ಒಂದೇ ಕಥಾವಾಹಿನಿಯಿಲ್ಲದೆಯೇ ಚಂಪೂಕಾವ್ಯವನ್ನು ಪಡೆದಿರುವುದು: ಒಂದೇ ಕಡೆ ಅರವತ್ತುಮೂವರು ಪುರಾತನರ ಕತೆಯನ್ನು ಹೇಳಿರುವುದು–ಇವುಗಳು.

ಷಡಕ್ಷರದೇವ

ಹದಿನೇಳನೆಯ ಶತಮಾನದಲ್ಲಿ ಚಂಪೂ ಕಾವ್ಯಗಳನ್ನು ರಚಿಸಿ ಉತ್ತಮ ಕವಿಯೆನಿಸಿಕೊಂಡ ಷಡಕ್ಷರದೇವನು ಕನ್ನಡ ಚಂಪೂಕಾವ್ಯ ಪರಂಪರೆಯ ಮಹತ್ವದ ಕವಿಗಳಲ್ಲಿ ಈಚಿನ ತುದಿಯಲ್ಲಿ ನಿಲ್ಲುತ್ತಾನೆ. ಇವನ ಕೃತಿಗಳ ರಚನೆಯ ಕಾಲವು ಗ್ರಂಥಗಳಲ್ಲಿ ಉಕ್ತವಾಗಿರುವುದರಿಂದ ('ರಾಜಶೇಕರ ವಿಳಾಸ' ಕ್ರಿ.ಶ. ೧೬೫೫, 'ಬಸವರಾಜ ವಿಜಯ' ಕ್ರಿ.ಶ. ೧೬೭೭) ಆತನು ಹದಿನೇಳನೆಯ ಶತಮಾನದ ಮಧ್ಯ ಹಾಗೂ ಕೊನೆಯ ಭಾಗಗಳಲ್ಲಿ ಜೀವಿಸಿದ್ದನೆಂದು ಹೇಳಬಹುದು. ಮೈಸೂರು ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಎಳಂದೂರು ಷಡಕ್ಷರದೇವನು ಹುಟ್ಟಿದ ಊರು. ಚಿಕ್ಕದೇವರಾಜನ ತಾಯಿಯಾದ ಎಳಂದೂರು ಅಮೃತಾಂಬೆಯ ತವರು ಮನೆಗೆ ಗುರುವಾಗಿದ್ದ ಆರಾಧ್ಯರ ಮಗನಿವನು. ದನುಗೂರು ಮಠಾಧಿಪತಿಯಾಗಿದ್ದ ರೇವಣಸಿದ್ಧನ ಶಿಷ್ಯನಾದ ಚಿಕ್ಕವೀರದೇಶಿಕನ ಶಿಷ್ಯನು ತಾನೆಂದು ಕವಿಯೇ ಹೇಳಿಕೊಂಡಿದ್ದಾನೆ. ಅವನು ಎಳಂದೂರಿನ ಮಠಕ್ಕೆ ಅಧಿಪತಿಯಾಗಿ ಅಲ್ಲಿಯೇ ಕೊನೆಯುಸಿರೆಳೆದನು.

ಇವನು ಸಂಸ್ಕೃತ-ಕನ್ನಡಗಳೆರಡರಲ್ಲಿಯೂ ಉದ್ದಾಮ ಪಂಡಿತ. ಇವನ ಪಾಂಡಿತ್ಯ-ರಸಿಕತೆಗಳಗೆ ಮೆಚ್ಚಿದ ಹದಿನಾಡಿನ ಮಾಡಲಿಂಕನಾದ ಮುದ್ದುರಾಜನೆಂಬುವನು ಷಡಕ್ಷರದೇವನಿಗೆ ಅನೇಕ ಮಠಮಾನ್ಯಗಳನ್ನು ಕಟ್ಟಿಸಿ ಕೊಟ್ಟನು. ಕನ್ನಡದಲ್ಲಿ 'ರಾಜಶೇಖರ ವಿಳಾಸ', 'ಬಸವರಾಜ ವಿಜಯ' ಮತ್ತು 'ಶಬರಶಂಕರ ವಿಳಾಸ'ಗಳೆಂಬ ಚಂಪೂಕಾವ್ಯಗಳನ್ನು ರಚಿಸಿರುವುದಲ್ಲದೆ ಸಂಸ್ಕೃತದಲ್ಲಿ 'ಕವಿಕರ್ಣ ರಸಾಯನ'ವೆಂಬ ಮಹಾಕಾವ್ಯವನ್ನೂ ಬರೆದಿದ್ದಾನೆ: ಇವಲ್ಲದೆ ಅನೇಕ ಸಂಸ್ಕೃತ

ಸ್ತೋತ್ರಕೃತಿಗಳನ್ನೂ ಬರೆದಿರುವನು. ಅವನು ಮಠಾಧಿಪತಿಯಾಗಿ ರಾಜರಿಂದ ಗೌರವವನ್ನು ಪಡೆದಿದ್ದರೂ ರಾಜಾಶ್ರಯದಲ್ಲಿರಲಿಲ್ಲ. ಶಿವ ಮತ್ತು ಶಿವಶರಣರ ಹೊಗಳಿಕೆಯು ಮಾತ್ರವೇ ಶ್ರೇಯಸ್ಕರವೆಂಬ ಧೋರಣೆ ಅವನದು:

ರಸೆಯೊಳ್ ರಸವತ್ ಕವಿತೆಯನ್
ಉಸಿರಲ್ಪಡೆದಸಮನಯನನಂ ಪೊಗಳದೆ ಮಾ
ನಸರಂ ಸುರರಂ ಪೊಗಳ್ವುದು
ಕಸವರಮಂ ಕಳೆದು ಕಸಮನಾಂತವೊಲಕ್ಕುಂ (ರಾಜ ವಿ. ೧-೨೧)

(ಒಳ್ಳೆಯ ಕಾವ್ಯವನ್ನು ಬರೆಯುವ ಶಕ್ತಿಯಿರುವವನು ಶಿವನನ್ನು ಕಾವ್ಯದ ಮೂಲಕ ಹೊಗಳದೆ ಮನುಷ್ಯರನ್ನೋ ದೇವತೆಗಳನ್ನೋ ಹೊಗಳುವುದು ಅಮೂಲ್ಯವಾದ ಚಿನ್ನವನ್ನು ಬಿಸುಟು ಕಸವನ್ನು ತೆಗೆದುಕೊಂಡಂತೆ.) ಈ ಧೋರಣೆಗೆ ಅನುಗುಣವಾಗಿ ಅವನ ಕಾವ್ಯಗಳ ವಸ್ತುವು ಶಿವನ ಲೀಲೆ ಹಾಗೂ ಶಿವಭಕ್ತರ ಸಾಮರ್ಥ್ಯ-ಮಹಿಮೆಗಳನ್ನು ಚಿತ್ರಿಸುವಂತಹವು.

ಷಡಕ್ಷರದೇವನ ಪ್ರಕಾರ ಕಾವ್ಯರಚನಾಸಾಮರ್ಥ್ಯವು ದೈವದತ್ತವಾದದ್ದು ಯಾರು ಬೇಕಾದರೂ ಶಾಸ್ತ್ರದಲ್ಲಿ ಪರಿಣತಿಯನ್ನು ಗಳಿಸಬಹುದು; ಆದರೆ ಕವಿತೆಯೆಂಬ ರತ್ನವು ಶಿವಕೃಪೆಯಿಂದ ಬರುವಂತಹದು ಹೀಗಾಗಿ ಕಾವ್ಯರಚನೆಯನ್ನು ಕಲಿಸಲಾಗುವುದಿಲ್ಲ:

ಕಲಿಸಿದೊಡೆಂ ಬರ್ಕುಮೆ ಸ
ಲ್ಲಲಿತ ಕವಿತ್ವಂ ನಿಸರ್ಗಸುಭಗಂ ರಮಣೀ
ವಿಲಸಿತ ರತಿರಸ ರಸಿಕತೆ
ತಲೆದೋರ್ಪುದು ತಾನೆ ಕಲಿಸಲೇಂ ಬಂದಪುದೇ (ರಾಜ.ವಿ. ೧-೩೦)

(ಸುಂದರ ಕಾವ್ಯವು ಕಲಿತು ಬರೆಯುವಂತಹಯದಲ್ಲ. ಸಹಜವಾಗಿ ಹೊಮ್ಮುವಂತಹುದು, ರಮಣಿಯನ್ನು ಕಂಡಾಗ ರಸಿಕತೆಯು ತಾನೇ ಉಂಟಾಗುತ್ತದೆಯೇ ವಿನಾ ಅದನ್ನು ಕಲಿಸಿದರೆ ಬರುತ್ತದೆಯೇ?) ಆದರೆ ಷಡಕ್ಷರ ದೇವನ ಕಾವ್ಯಗಳು ಇಷ್ಟೊಂದು ಸಹಜವಾಗಿ ಮೂಡಿಬಂದವೆಂದು ಹೇಳಲಾಗದು. ಅವನಲ್ಲಿ ಸ್ವಲ್ಪಮಟ್ಟಿಗೆ ಪ್ರತಿಭೆಯಿದ್ದರೂ ಪಾಂಡಿತ್ಯವು ಅಪಾರವಾದದ್ದು. 'ರಾಜಶೇಖರ ವಿಳಾಸ'ಕ್ಕೆ ಅರ್ಥೈಸಲು ಶಕ್ತನಾದಂತಹ ವ್ಯಕ್ತಿಯನ್ನು ಶ್ರೇಷ್ಠ ವಿದ್ವಾಂಸನೆಂದು ಇತ್ತೀಚಿನವರೆಗೆ ಪರಿಗಣಿಸಲಾಗುತ್ತಿತ್ತು. ಹೀಗೆ ಅವನ ಕೃತಿಗಳು ಪಾಂಡಿತ್ಯವನ್ನಳೆಯುವ ಮಾನದಂಡಗಳಾಗಿದ್ದವೆಂದ ಮೇಲೆ ಅಲ್ಲಿನ ಪಾಂಡಿತ್ಯವನ್ನು ಕುರಿತು ಹೇಳಬೇಕಾದ್ದೇನಿದೆ! ಷಡಕ್ಷರ ದೇವನು ತನ್ನ ಕಾವ್ಯಗಳಲ್ಲಿ ಅಪೂರ್ವವಾದ ವೃತ್ತಗಳನ್ನು ಬಳಸಿದ್ದಾನೆ, ಶ್ಲೇಷಾಲಂಕಾರದಂತಹ ಚಮತ್ಕಾರಗಳನ್ನು ಹೇರಳವಾಗಿ ತರುತ್ತಾನೆ.

ರಾಜಶೇಖರ ವಿಳಾಸ

ಈ ಕಾವ್ಯವು ಷಡಕ್ಷರದೇವನ ಮೊದಲನೆಯ ಕಾವ್ಯ. ಆದ್ದರಿಂದ ಅವನು ಕಿರುಹರೆಯದವನಾಗಿದ್ದಾಗ ಇದನ್ನು ರಚಿಸಿರಬೇಕು. ಹೀಗಾಗಿ ಇದರಲ್ಲಿ ಶೃಂಗಾರ

ರಸವು ತಾನೇ ತಾನಾಗಿ ಹರಿದಿದೆ, ಕಾವ್ಯ ವಸ್ತುವಿನಲ್ಲಿ ಇದಕ್ಕೆ ಹೆಚ್ಚು ಆಸ್ಪದವಿಲ್ಲದಿದ್ದರೂ. ಆದುದರಿಂದಲೇ ಈ ಕಾವ್ಯವು ಕನ್ನಡ ನಾಡಿನಲ್ಲಿ ತುಂಬ ಜನಪ್ರಿಯತೆಯನ್ನು ಪಡೆದಿದೆ. ಈ ದೃಷ್ಟಿಯಿಂದ ಇದು ನೇಮಿಚಂದ್ರನ 'ಲೀಲಾವತಿ'ಗಿಂತಲೂ ಶ್ರೇಷ್ಠವಾದ ಕಾವ್ಯವೆಂದು ಸಾಧಿಸಲು ಒಂದು ದಂತಕತೆಯೇ ಹುಟ್ಟಿಕೊಂಡಿದೆ. ಜೈನರೆಲ್ಲ ಸೇರಿ ಒಂದು ಬಾರಿ ನೇಮಿಚಂದ್ರನ 'ಲೀಲಾವತಿ'ಯನ್ನು ಆನೆಯ ಮೇಲಿಟ್ಟು ಮೆರವಣಿಗೆ ಮಾಡಿದರಂತೆ; ಕಾವ್ಯರಸವು ಭೂಮಿಯ ಮೇಲೆ ಬೀಳಬಾರದೆಂದು ಆನೆಯ ಹೊಟ್ಟೆಗೆ ಬೆಳ್ಳಿಯ ತೊಟ್ಟಿಲನ್ನು ಬೇರೆ ಕಟ್ಟಿದ್ದರಂತೆ! ಷಡಕ್ಷರನಿಗೆ ಈ ವಿಷಯವು ತಿಳಿದು ಅದಕ್ಕಿಂತಲೂ ಸುಂದರವಾದ ಕಾವ್ಯವನ್ನು ತಾನು ಒಂದು ವರ್ಷದೊಳಗಾಗಿ ರಚಿಸುವುದಾಗಿ ಪ್ರತಿಜ್ಞೆ ಮಾಡಿ 'ರಾಜಶೇಖರ ವಿಲಾಸ'ವನ್ನು ಬರೆದನಂತೆ. ರುದ್ರಭಟ್ಟ-ಲಕ್ಷ್ಮೀಶರಿಗೆ ಸಂಬಂಧಿಸಿದಂತೆಯೂ ಇಂತಹುದೇ ಒಂದು ಕತೆಯು ಪ್ರಚಲಿತವಿದೆ (ರುದ್ರಭಟ್ಟನ ವಿಷಯವನ್ನು ಬರೆಯುವಾಗ ಇದರ ಬಗ್ಗೆ ಪ್ರಸ್ತಾಪಿಸಲಾಗಿದೆ.) ಆದರೆ ಷಡಕ್ಷರನ ಕಾಲಕ್ಕೂ ಈ ಕವಿಗಳ ಕಾಲಕ್ಕೂ ಸಾಕಷ್ಟು ಅಂತರವಿರುವುದರಿಂದ ಇವೆಲ್ಲ ಕತೆಗಳು ಮಾತ್ರವಾಗಿವೆ.

'ರಾಜಶೇಖರ ವಿಲಾಸ'ದಲ್ಲಿ ಪಂಚಾಕ್ಷರಿಯ ಮಹಿಮೆಯನ್ನು ತಿಳಿಸುವ ಕಾವ್ಯವಸ್ತುವಿದೆ. ಇದರ ಕತೆಯು ತಮಿಳುನಾಡಿನಲ್ಲಿ ಪ್ರಸಿದ್ಧನಾದ ಸತ್ಯೇಂದ್ರ ಚೋಳನ ಶಿಭಕ್ತಿಯ ಅಧಿಕ್ಯವನ್ನು ತೋರಿಸುವಂಥದು. ಕ್ರಿ.ಶ. ೧೫೩೦ರಲ್ಲಿದ್ದ ಗುಬ್ಬಿಯ ಮಲ್ಲಣಾರ್ಯನು ವಾರ್ಧಕ ಷಟ್ಪದಿಯಲ್ಲಿ 'ಭಾವಾಚಿಂತಾರತ್ನ'ವೆಂಬ ಹೆಸರಿನಿಂದ ಈ ಕತೆಯನ್ನು ವಿಸ್ತರಿಸಿ ಬರೆದನು. ಈ ಕಾವ್ಯವೇ 'ರಾಜಶೇಖರ ವಿಲಾಸ'ಕ್ಕೆ ಅಧಾರ. ಆದರೆ ಷಡಕ್ಷರನು ವರ್ಣನೆಗಳಿಂದ ತುಂಬಿ ತನ್ನ ಕಾವ್ಯವನ್ನು ಹದಿನಾಲ್ಕು ಆಶ್ವಾಸಗಳಿಂದಲೂ ಸುಮಾರು ೧೮೫೦ ಪದ್ಯಗಳಿಂದಲೂ ಕೂಡಿದ ದೀರ್ಘವಾದ ಕಾವ್ಯವನ್ನಾಗಿಮಾಡಿದ್ದಾನೆ. ಇಲ್ಲಿನ ಕತೆಯು ಚಿಕ್ಕದಾದರೂ ಅದನ್ನಾವರಿಸಿರುವ ವರ್ಣನೆಗಳೇ ಹೆಚ್ಚು. ಹೀಗಾಗಿ ಇಲ್ಲಿ ಕತೆಗಿಂತ ವರ್ಣನೆಗಳೇ ಮುಖ್ಯವಾಗಿ ಕತೆಯ ಓಟಕ್ಕೆ ತಡೆಯೆನಿಸುತ್ತದೆ.

ಮೇರುಗಿರಿಗೆ ದಕ್ಷಿಣದಲ್ಲಿ ಭೂಕಾಂತೆಯ ತಲೆಯ ರತ್ನದಂತೆ ಚೋಳ ಮಂಡಲವಿತ್ತು. ಧರ್ಮವತಿಪುರವು ಅದರ ರಾಜಧಾನಿ; ಅತ್ಯಂತ ಸಮೃದ್ಧ ನಗರ. ಆ ರಾಜ್ಯದ ಅರಸನು ಶಿವಭಕ್ತನಾದ ಸತ್ಯೇಂದ್ರಚೋಳ; ಅವನ ಹೆಂಡತಿ ಅಮೃತಮತಿ; ಆ ರಾಜನ ಮಂತ್ರಿಯು ಪತಿಮೋಹಿ. ಅವರಿಗೆ ಎಲ್ಲ ವೈಭವ-ಸಂಪತ್ತುಗಳಿದ್ದರೂ ಮಕ್ಕಳಿರಲಿಲ್ಲ. ಅಮೃತಮತಿಗಂತೂ ಮಗುವಿನದೆ ಹಂಬಲ. ರಾಜನು ಹೆಂಡತಿಯ ಹಂಬಲವನ್ನು ತಿಳಿದು ಈ ರೀತಿ ಸಮಾಧಾನ ಮಾಡುತ್ತಾನೆ:

ಸುರತರುವಿರೆ ಕಿರಿವಡೆವುದು
ಪಿರಿದೆ? ಸರೋಜಾಕ್ಷಿ, ಮದ್ಗುರೂತ್ತಮನೊಲ್ದೊ
ಪ್ಪಿರೆ ತತ್ಪ್ರಸಾದಬಲದಿಂ
ಪಿರಿದು ಮದಿಷ್ಟಮನೆ ಪಡೆಯಲಕ್ಕುಮಮೋಘಂ (ರಾಜ ವಿ. ೩-೭೬)

(ಕಲ್ಪವೃಕ್ಷವಿದ್ದರೆ ಬೇಕಾದ ಐಶ್ವರ್ಯವನ್ನು ಪಡೆಯುವುದು ಕಷ್ಟವೇ? ಹಾಗೆಯೇ ನಮ್ಮ ಗುರುವಿನ ಪ್ರಸಾದಬಲದಿಂದ ಇಷ್ಟಗಳು ನೆರವೇರುತ್ತವೆ.) ಸ್ವಲ್ಪ ಸಮಯಕ್ಕೆ ಅವರ ಇಷ್ಟಾರ್ಥವನ್ನು ಪೂರೈಸಲೆಂಬಂತೆ ಚಿದ್ಘನ ಶಿವಾಚಾರ್ಯರೆಂಬ ಗುರುಗಳು ದಯಮಾಡಿಸುತ್ತಾರೆ. ರಾಜದಂಪತಿಗಳು ಅವರನ್ನು ಗೌರವ-ಭಕ್ತಿಗಳಿಂದ ಸೇವಿಸುತ್ತಾರೆ. ಗುರುಗಳು ಅವರಿಗೆ ಶಿವ ಪಂಚಾಕ್ಷರಿ ಮಂತ್ರವನ್ನು ಉಪದೇಶಿಸಿ, ರಾಣಿಯನ್ನು ಕುರಿತು

ತರುಣಿ ಭವದೀಯಪುಣ್ಯೋ
ದರದೊಳ್ ಪುಟ್ಟುಗುಂ ಇನಾನ್ವಯಾಂಬುಧಿಚಂದ್ರಂ
ಹರಮಂತ್ರಮಿದನೆ ಜಪಿಸು
ತ್ತಿರೆ ತಪ್ಪದಿದೆಂದು ದೇಶಿಕಂ ಕರುಣಿಸಿದಂ (ರಾಜ ಏ. ೪-೫)

(ನಿನ್ನ ಪುಣ್ಯಗರ್ಭದಲ್ಲಿ ಚಂದ್ರವಂಶದ ಮಗನೊಬ್ಬನು ಜನಿಸುತ್ತಾನೆ: ನೀನು ಸದಾ ಶಿವಮಂತ್ರವನ್ನು ಜಪಿಸುತ್ತಿರು) ಎಂದು ಅನುಗ್ರಹಿಸುತ್ತಾರೆ. ಅದರಂತೆ ಆ ರಾಜದಂಪತಿಗಳಿಗೆ ಗಂಡುಮಗುವೊಂದು ಜನಿಸುತ್ತದೆ. ಅದನ್ನು ರಾಜ ಶೇಖರನೆಂದು ಕರೆಯುತ್ತಾರೆ. ಇವನ ಓರಗೆಯುವನು ಮಂತ್ರಿಯ ಮಗನಾದ ಮಿತವಚನ. ಅವರಿಬ್ಬರೂ ಅನ್ಯೋನ್ಯ ಸ್ನೇಹಿತರಾಗಿ ಬೆಳೆಯುತ್ತಾರೆ.

ಒಮ್ಮೆ ಪರಿವಾರ ಸಮೇತ ಯುವರಾಜ ರಾಜಶೇಖರನು ಬೇಟೆಗೆ ಹೋಗಿ ಒಂದು ಸಿಂಹವನ್ನು ಕೊಲ್ಲುತ್ತಾನೆ. ಅದರ ತಲೆಯಲ್ಲಿ ಅಮೂಲ್ಯವಾದ ರತ್ನವಿರುವುದನ್ನು ಕಂಡು ಕೌತುಕಪಡುತ್ತಿರುವಾಗ ಸಿಂಹಳದ ಭಟರು ಬಂದು ಆ ಸಿಂಹವು ತಮ್ಮ ದೇಶದಿಂದ ಬಂದುದೆಂದೂ ಆ ಮಣಿಯು ತಮ್ಮದೆಂದೂ ಜಗಳ ತೆಗೆಯುತ್ತಾರೆ. ಈ ವಿಷಯವು ತಿಳಿದಾಗ ಸಿಂಹಳ ರಾಜನೇ ರಾಜ ಶೇಖರನೊಡನೆ ಯುದ್ಧಕ್ಕೆ ಬರುತ್ತಾನೆ. ರಾಜಶೇಖರನ ಪರಾಕ್ರಮವನ್ನು ಕಂಡು ಸಿಂಹಳರಾಜನು ಅವನಿಗೆ ಕಪ್ಪವನ್ನು ಸಲ್ಲಿಸಲು ಒಪ್ಪಿ ಸಂಧಿಯನ್ನು ಮಾಡಿಕೊಳ್ಳುತ್ತಾನೆ. ಆನಂತರ ಪಟ್ಟಣಕ್ಕೆ ರಾಜಶೇಖರನನ್ನು ಕರೆದೊಯ್ದು ಮೆರಣಿಗೆಯಲ್ಲಿ ಸ್ವಾಗತಿಸುತ್ತಾನೆ. ಅಲ್ಲಿ ರಾಜಶೇಖರನು ಸಿಂಹಳೇಂದ್ರನ ಮಗಳು ಸರ್ವಮಂಗಳೆಯನ್ನು ಕಂಡಾಗ

ಕರ್ಬಿನ ಬಿಲ್ಗೆ ತುಂಬಿವೆದೆಯಂ ಪದೆದೇಱಿಸಿ ಗಂಡ ಗಾಡಿಯಿಂದ
ದುರ್ಬಿ ಸರೋಜಕೋರಕದ ಕೂರ್ಗಣೆಯಂ ತವೆ ತೊಟ್ಟು ಲಕ್ಷ್ಯಮಂ
ದೋರ್ಬಲಶಾಲಿ ನೋಡಿ ಸೆಳೆದೆಚ್ಚನವಂದಿರನೊರ್ಮೆ ತೊಟ್ಟನಂ
ದಿರ್ಬಗಿಯಾಗಿ ತನ್ಮನಮನಂಗಧನುರ್ಧರನಾ ಕ್ಷಣಾರ್ಧದೊಳ್

(ರಾಜ ಏ. ೭-೬೭)

(ಮನ್ಮಥನು ತನ್ನ ಕಬ್ಬಿನ ಬಿಲ್ಲಿಗೆ ತುಂಬಿಯ ಹೆದೆಯನ್ನು ಕಟ್ಟಿ ಕಮಲದ ಮೊಗ್ಗೆಯೆಂಬ ಬಾಣವನ್ನು ಹೂಡಿ ರಾಜಶೇಖರ-ಸರ್ವಮಂಗಳೆಯರ ಮೇಲೆ ಪ್ರಯೋಗಿಸುತ್ತಾನೆ.) ಹೀಗೆ ಅವರಿಬ್ಬರೂ ಪ್ರೇಮಿಗಳಾಗುತ್ತಾರೆ. ಈ ವಿಷಯವನ್ನು ತಿಳಿದ ಸಿಂಹಳೇಂದ್ರನು ಸಂತೋಷದಿಂದ ಸರ್ವಮಂಗಳೆಯನ್ನು ರಾಜಶೇಖರನಿಗಿತ್ತು ಮದುವೆಮಾಡುತ್ತಾನೆ. ಊರಿಗೆ ಬಂದು

ಶಿವಲೀಲಾಕಥನಾವಳೀಶ್ರವಣದಿಂ, ತತ್ಪಾದಪೂಜಾಸಮು
ತ್ಸವದಿಂ, ಶೈವಪುರಾತನವ್ರಜಪುರಾಣಾಕರ್ಣನೋತ್ಸಾಹದಿಂ,
ಶಿವಯೋಗೀಂದ್ರ ಸಮರ್ಚನೈಕ ಸುಖದಿಂ, ಕಾಂತಾಸಮೇತಂ ಮಹೀ
ಧವನೊಪ್ಪಿರ್ದಂ ಅಶೇಷ ಸಜ್ಜನ ಮನಃ ಪದ್ಮಪ್ರಭಾವಲ್ಲಭಂ (ರಾಜ ವಿ. ೯-೨)

(ಶಿವಲೀಲೆಯನ್ನು ಕೇಳುತ್ತ, ಶಿವಪೂಜೆಯಲ್ಲಿ ನಿರತನಾಗಿರುತ್ತ, ಶಿವಭಕ್ತರ ಪುರಾಣಗಳನ್ನು ಆಲಿಸುತ್ತ, ಶಿವಯೋಗಿಗಳ ಸೇವೆಮಾಡುತ್ತ ರಾಜಶೇಖರನು ಸಜ್ಜನರ ಮನಸ್ಸೆಂಬ ಕಮಲವನ್ನು ಅರಳಿಸುವ ಚಂದ್ರನಾಗಿ ಹೆಂಡತಿಯೊಡನೆ ರಾಜ್ಯಭಾರವನ್ನು ಮಾಡುತ್ತಿದ್ದನು.)

ಹೀಗಿರಲು ಒಂದು ದಿನ ಸಿಂಧುರಾಜನು ಎರಡು ಜಾತಿಯ ಕುದುರೆಗಳನ್ನು ಕಾಣಿಕೆಯಾಗಿ ಕಳುಹಿಸುತ್ತಾನೆ. ಅವುಗಳ ಸಲ್ಲಕ್ಷಣಗಳನ್ನು ನೋಡಿದ ರಾಜಶೇಖರನಿಗೆ ಅವುಗಳನ್ನೇರಿ ವಿಹರಿಸುವ ಆಸೆಯುಂಟಾಗುತ್ತದೆ. ಅವನ ಆಸೆಯನ್ನು ಕೇಳಿ ಮಿತವಚನನು ಪಳಗಿಸದ ಹೊಸ ಕುದುರೆಗಳನ್ನೇರಿ ಊರಿನಲ್ಲಿ ವಿಹರಿಸುವುದು ಸರಿಯಾಗಲಾರದೆಂದು ವಿನಯದಿಂದಲೇ ನುಡಿಯುತ್ತಾನೆ. ಆಗ ರಾಜಶೇಖರನು:

ಬಗೆಗೊಗೆದಳ್ತಿಯಂ ಸಲಿಸವೇಳ್ವುದು ಬೇಡೆನವೇಡ, ತಂದೆ ನೆ
ಟ್ಟಗೆ ಮುಳಿದಪ್ಪನೆಂದಣಿಸದರ್, ನಿನಗಾದಪರಾಧಮೆನ್ನದು, ಎಂ
ದಗಣಿತಸಂಭ್ರಮಂ ಮಿಗೆ ತುರಂಗಮಯುಗ್ಮಮನೇಱಿ ನೋಳ್ಪರೊ
ಳ್ನೆಗಳೆ ಮಹೋತ್ಸದಿಂ ವಿಹರಿಪಂ ಪುರದೊಳ್ ಪರಮಾನುರಾಗದಿಂ

(ನನ್ನ ಮನಸ್ಸಿನ ಆಸೆಯನ್ನು ತಳ್ಳಿಹಾಕಬೇಡ, ತಂದೆಯು ಬೈಯುವರೆಂದು ಹೆದರಬೇಡ. ನೀನು ಮಾಡಬಹುದಾದ ಅಪರಾಧದ ಹೊಣೆಯನ್ನೂ ನಾನೂ ಹೊರುತ್ತೇನೆ-ಎಂದು ಆಶ್ವಾಸನೆಯಿತ್ತು ಮಿತ್ರರೊಡನೆ ವಿಹಾರಕ್ಕೆ ಸಿದ್ಧನಾದ.)

ರಾಜಶೇಖರನು ಪವನಗಮನವೆಂಬ ಕುದುರೆಯನ್ನೂ ಮಿತವಚನ ಕುಮಾರನು ಹರಿಣಗತಿಯೆಂಬುದನ್ನೂ ಏರಿ ಹೊರಟರು. ಅವರು ವೈಹಾಳಿಯ ಬಯಲಿಗೆ ಬಂದು ವಿಹರಿಸಿ ವಿನೋದಯುದ್ಧದಲ್ಲಿ ತೊಡಗಿ ಸಂತೋಷಿಸುತ್ತಾರೆ. ಅನಂತರ ಪರಿವಾರ ಸಮೇತರಾಗಿ ಪುರಕ್ಕೆ ವಾಪಸ್ಸು ಹೊರಡುತ್ತಾರೆ. ರಾಜಕುಮಾರ-ಮಂತ್ರಿಕುಮಾರರ ಮೆರವಣಿಗೆಯನ್ನು ನೋಡಲು ಊರಿನ ಜನರೆಲ್ಲ ಸಂಭ್ರಮದಿಂದ ಬೀದಿಗಳಲ್ಲಿ ಸೇರಿರುತ್ತಾರೆ. ಅಲ್ಲಿ ಇವರು ಬರುವ ವೇಳೆಗೆ ತಿರುಕೊಳವಿನಾಚಿಯೆಂಬ ಭಕ್ತೆಯ ಒಬ್ಬನೇ ಮಗನಾದ ಶಂಕರನೆಂಬ ಐದು ವರ್ಷದ ಹುಡುಗನು ತಾಯಿ ನೀರಿಗೆ ಹೋಗಿರುವಾಗ ಒಬ್ಬನೇ ಬೀದಿಗೆ ಬಂದಿರುತ್ತಾನೆ. ಜನರ ಗೊಂದಲದಲ್ಲಿ ನೆಲದಲ್ಲಿ ಬಿದ್ದ ಈ ಹುಡುಗನು ಕೂಗುತ್ತ ಕೈಯನ್ನೂರಿ ಮೇಲೆಳುವಷ್ಟರಲ್ಲಿ

ಶಿವಶಿವ ಪೇಳ್ವೆನೇನ್! ಅವನೀಪತಿ ತನ್ನ ತುರಂಗಮಂ ಮಹಾ
ಜವದೊಳೆ ಕಂಡು ದಾಂಟಿಸಿ ಕೆಲಂದೆಗೆಯೆಂಬನಿತಕ್ಕೆ ಮುಂಚಿ ಮು
ನ್ನವೆ ಸಚಿವಾಳ್ವಮೈದೆ ಕೊಳಗಿಂ ತಲೆ ಖಂಡಿಸಿ ಪಾಱಿ ಮೆಟ್ಟಿತಂ
ದವಿರಳರಕ್ತಧಾರೆ ಪೊಱಿಸೂಸಿರೆ ಬಾಲನ ಕಂಠನಾಳಮಂ (ರಾಜ ವಿ. ೧೩-೯೬)

(ಶಿವಶಿವ, ರಾಜಶೇಖರನು ಜೋರಾಗಿ ಕುದುರೆಯೇರಿ ಬರುತ್ತಿದ್ದವನು ಈ ಹುಡುಗನನ್ನು ಕಂಡು ಕುದುರೆಯನ್ನು ದಾಟಿಸುವಷ್ಟರಲ್ಲಿ ಮಿತವಚನನ ಕುದುರೆಯು ವೇಗವಾಗಿ ಬಂದು ತನ್ನ ಗೊರಸಿನಿಂದ ಝಾಡಿಸಿದಾಗ ಶಂಕರನ ತಲೆಯು ಹಾರಿ ರಕ್ತದ ಪ್ರವಾಹವು ಹರಿಯುತ್ತದೆ.) ಇದರ ಹೊಣೆಯನ್ನೂ ಹೊತ್ತಿದ್ದ ರಾಜಶೇಖರನು ಅಪರಾಧಕ್ಕೆ ತಕ್ಕ ಪ್ರಾಯಶ್ಚಿತ್ತ ಮಾಡಿಕೊಳ್ಳಲು ನಿರ್ಧರಿಸಿ ಅರಮನೆಗೆ ಹಿಂದಿರುಗುತ್ತಾನೆ.

ಇತ್ತ ತನ್ನ ಒಬ್ಬನೇ ಮಗನು ರಾಜನ ಕುದುರೆಯ ಗೊರಸಿಗೆ ಸಿಕ್ಕಿ ಸತ್ತನೆಂದು ತಿಳಿದ ವಿಧವೆಯಾದ ತಿರುಕೊಳವಿನಾಚಿಯು ಕರುಳು ಕತ್ತರಿಸುವಂತೆ ಗೋಳಾಡುತ್ತಾಳೆ. ಈ ಪ್ರಸಂಗವನ್ನು ಕವಿಯು ಕರುಣಾಜನಕವಾಗಿ ಚಿತ್ರಿಸಿದ್ದಾನೆ. ಕವಿಯ ಪ್ರತಿಭೆಯು ಇಲ್ಲಿ ಮಿಂಚಿದೆ. ಆಕೆಯು ಮಗನ ಶವವನ್ನು ತೊಡೆಯ ಮೇಲಿಟ್ಟು ಕೊಂಡು

ಎಳೆಗಿಳಿಯಂ ಕೊರಲ್ಮುಱಿದು ಮೋದಿದರಾರ್? ಮಱಿಯಂಚೆಯಂ ಭಯಂ
ಗೊಳಿಸುತೆಱಂಕೆಯಂ ಪಱಿದು ಪೊಯ್ದವರಾರ್? ಮೃಗಶಾಬಮಂ ಕರಂ
ಮುಳಿದು ಶಿರೋಧಿಯಂ ಕಿಡೆಯಲೆಚ್ಚವರಾರ್? ಬಿಸನಾಳಕಾಂಡಕೋ
ಮಳತರಂಕಂಠಮಂ ಕಡಿದುರುಳ್ಚಿದರಾರ್? ಸುಕುಮಾರಶೇಖರಾ!

(ರಾಜ ಎ. ೧೩–೧೦೫)

(ಅಯ್ಯೋ ಸುಕುಮಾರನೇ, ಎಳೆಗಿಳಿಯ ಕೊರಳನ್ನು ಮುರಿದು ಸಂತೋಷ ಪಡುವಂತಹ ಕೆಲಸ ಮಾಡಿದವರಾರು? ಹಂಸದ ಮರಿಯನ್ನು ಹೆದರಿಸಿ ರೆಕ್ಕೆಗಳನ್ನು ಹರಿದು ಪ್ರಾಣತೆಗೆದವರಾರು? ಜಿಂಕೆಯ ಮರಿಯನ್ನು ಹೊಡೆದುರುಳಿಸಿ ಕೊಂದಂತೆ ಮಾಡಿದವರಾರು? ಕಮಲದ ಎಳೆಯ ದಂಟನ್ನು ಕತ್ತರಿಸಿ ಉರುಳಿಸಿದಂತೆ ನಿನ್ನನ್ನು ಬೀಳಿಸಿದವರಾರು?) ಎಂದು ಗೋಳಾಡುತ್ತಾಳೆ. ರಾಜನ ಕುದುರೆಯ ಗೊರಸಿಗೆ ಸಿಕ್ಕಿ ತನ್ನ ಮಗನು ಸಾಯುವ ಅನಿರೀಕ್ಷಿತ ಪ್ರಸಂಗವುಂಟಾದ್ದರ ಬಗ್ಗೆ ಅವಳಿಗೆ ದುಃಖ- ಆಶ್ಚರ್ಯಗಳು:

ಎಲ್ಲಿಯ ಹಯಮೆಲ್ಲಿಯ ನೃಪ
ನೆಲ್ಲಿಯ ವೈಹಾಳಿಯೆಲ್ಲಿಯತಿಕಳಕಳಮಿಂ
ತೆಲ್ಲಿಯ ದರ್ಶನಗಮನಮಿ
ದೆಲ್ಲಿಯ ಮೃತಿ ನಿನಗೆ ಬಂದುದೆಲೆ ಸುಕುಮಾರಾ (ರಾಜ ಎ. ೧೩–೧೦೭)

(ಎಲ್ಲಿಯ ಕುದುರೆ, ಎಲ್ಲಿಯ ರಾಜ, ಎಲ್ಲಿಯ ಅವನ ವಿನೋದ ವಿಹಾರ, ಎಲ್ಲಿಯ ಜನಜಂಗುಳಿ, ನೋಡಬೇಕೆಂಬ ನಿನ್ನ ಆಸೆಯಲ್ಲಿ–ಇವೆಲ್ಲವೂ ಒಂದಾಗಿ ನೀನು ಸಾಯುವಂತಾಯಿತೇ!) ವಿಧವೆಯಾದ ತಾನು ತನ್ನೆಲ್ಲ ಸೌಭಾಗ್ಯವನ್ನೂ ಕಳೆದು ಕೊಂಡು ಮಗನನ್ನು ನೋಡುತ್ತ ಸಮಾಧಾನ ಪಡುತ್ತಿದ್ದರೆ, ಮಗನು ದೊಡ್ಡವನಾಗಿ ತನ್ನನ್ನು ಸುಖವಾಗಿರಿಸುತ್ತಾನೆಂದು ನಿರೀಕ್ಷಿಸುತ್ತಿದ್ದರೆ, ಈಗ ಬರಸಿಡಿಲೆರಗಿದಂತಾಯಿ ತೆಂದು ಆ ತಾಯಿಯು ಹಲುಬುತ್ತಾಳೆ. ಸಾಯುವಾಗ ಮಗನು ಹೇಗೆ ಪ್ರತಿಕ್ರಿಯೆ ತೋರಿಸಿರಬಹುದೆಂಬುದನ್ನು ಅವಳು ಊಹಿಸಿ ಗೋಳಿಡುತ್ತಾಳೆ.

ಕೊರಲಂ ಮೆಟ್ಟುವ ಪದದೊಳ್
ತುರಗಂ ಕಂಗೆಟ್ಟು ಜನನಿಯೆಂದೆನ್ನಂ ನೀಂ
ಕರೆದೆಯೊ ಮಱೆದೆಯೊ ದೋಷಾ
ಕರೆಯೆಂದೇಂ ತೊಱೆದೆಯೋ ತನೂಜನೆ ಪೇಳೈ (ರಾಜ ವಿ. ೧೩-೧೧೦)

(ರಾಜನ ಕುದುರೆಯು ನಿನ್ನನ್ನು ತುಳಿಯುವಾಗ ನೀನು ಭಯದಿಂದ 'ಅಮ್ಮ' ಎಂದು ಕಿರುಚಿದೆಯಾ? ಅಥವಾ ನನ್ನ ನೆನಪೇ ನಿನಗೆ ಬರಲಿಲ್ಲವೋ? ಬಂದರೂ ಕೆಟ್ಟವಳೆಂದು ಬಯ್ದುಕೊಂಡೆಯಾ?) ಎಂದು ಆಲೋಚಿಸುತ್ತಾಳೆ. ಶಂಕರನು ಇರುತ್ತಿದ್ದ ಜಾಗಗಳು ತನ್ನನ್ನು ಇರಿಯುತ್ತವೆಂದು ಆಕೆಗೆ ಗೊತ್ತು:

ನೀನಾಡಿದೆಡಗಳಂ ಸುತ
ನೀನೊಱಗಿದ ಪಾಸುವಂ ತನೂಭವ ಪದಪಿಂ
ನೀನುಂಡ ತಾಣಮುಮಂ ಇ
ನ್ನಾನೆಂತೀಕ್ಷಿಸುವೆನೆಂತು ಸೈರಿಪೆನಕಟಾ (ರಾಜ ವಿ. ೧೩-೧೧೬)

(ನೀನು ಆಟವಾಡಿದ ಜಾಗಗಳನ್ನಾಗಲೀ, ಮಲಗಿದ ಹಾಸಿಗೆಯನ್ನಾಗಲೀ, ನೀನು ಊಟಮಾಡುತ್ತಿದ್ದ ಎಡೆಯನ್ನಾಗಲೀ ನಾನಿನ್ನು ಹೇಗೆ ನೋಡಲಿ, ಹೇಗೆ ಸೈರಿಸಲಿ) ಎಂದು ಹೃದಯ ಕರುಗುವಂತೆ ಗೋಳಾಡುತ್ತಾಳೆ. ದೇವರು ತನಗೆಂತಹ ಕಷ್ಟವನ್ನಿತ್ತನೆಂದು ಆಕೆಯು ಮರುಗುತ್ತಾಳೆ:

ಪರಮ ಕೃಪಾಕರನೆಂಬೀ
ಬಿರುದಂ ಬಿಸುಟಕಟ ಶಂಕರಾ ಶಂಕರನಂ
ಹರಸಿ ನಡುಗಾಡೊಳಂಧೆಯ
ಕರದಂಡಮನೆಳೆದುಕೊಂಡವೋಲ್ ಮಾಡಿದೆಯೈ (ರಾಜ ವಿ. ೧೩-೧೨೫)

(ಪರಮ ದಯಾಳುವೆಂಬ ನಿನ್ನ ಕೀರ್ತಿಯನ್ನು ಬಿಸುಟು ಕಾಡಿನ ಮಧ್ಯೆಯ ಕುರುಡಿಯ ಕೈಗೋಲನ್ನು ಕಿತ್ತುಕೊಂಡಂತೆ ನನಗೆ ಮಾಡಿದೆಯಲ್ಲಾ ದೇವರೇ.) ವಿಧವೆಯ ಒಬ್ಬನೇ ಮಗ ಸತ್ತಾಗ, ನಡುಗಾಡಿನಲ್ಲಿರುವ ಕುರುಡಿಯ ಕೈಯ ಕೋಲನ್ನು ಕಸಿದಂತಾಯಿತು ಅವಳ ಸ್ಥಿತಿ ಎಂದು ವರ್ಣಿಸಿರುವುದು ತುಂಬ ಉಚಿತವಾಗಿದೆ.

ತಿರುಕೊಳವಿನಾಚಿಯು ತನಗಾದ ದುಃಖ-ನಷ್ಟಗಳನ್ನು ಸತ್ಯೇಂದ್ರ ಚೋಳನಲ್ಲಿ ಬಂದು ತೋಡಿಕೊಂಡು ನ್ಯಾಯವನ್ನು ಬೇಡುತ್ತಾಳೆ. ತನಗೆ ಆರು ಮಕ್ಕಳು ಇದ್ದರು: ಗಂಡನು ಒಮ್ಮೆ ತನ್ನ ಅಪಾರ ವಸ್ತುಗಳನ್ನು ಹಡಗಿನಲ್ಲಿ ಹಾಕಿಕೊಂಡು ದೂರದೇಶಕ್ಕೆ ಪ್ರಯಾಣಮಾಡುವಾಗ ಹಡಗು ಮುಳುಗಿ ಆಸ್ತಿಸಮೇತ ಸತ್ತನು: ಬಡತನದಿಂದಲೂ ಕಾಯಿಲೆಯಿಂದಲೂ ಸ್ವಲ್ಪ ದಿನದಲ್ಲೇ ಆರು ಮಕ್ಕಳೂ ಸತ್ತರು: ಗಂಡ ಸಾಯುವ ವೇಳೆಗೆ ತಾನು ಬಸುರಿಯಾದ್ದರಿಂದ ಅನಂತರ ಹುಟ್ಟಿದ ಮಗನನ್ನು ತುಂಬ ನಿರೀಕ್ಷೆಯಿಂದ ಸಾಕುತ್ತಿರಲು ಅವನು ರಾಜಕುಮಾರನ ಕುದುರೆಯಿಂದ ಸತ್ತಿರುವನೆಂಬುದನ್ನು ರಾಜನಿಗೆ ಹೇಳುತ್ತಾಳೆ. ರಾಜನು ವಿಚಾರಿಸಿದಾಗ ಅಪರಾಧವು ಮಿತವಚನನಿಂದಾಗಿದ್ದರೂ ಅದರ ಹೊಣೆಯು ರಾಜಶೇಖರನದೆಂಬುದು ತಿಳಿಯುತ್ತದೆ. ರಾಜಕುಮಾರನೇ ಇದನ್ನೊಪ್ಪಿಕೊಂಡು 'ತಪ್ಪೆನ್ನದು, ಬಳಿಕೀ ಶಿರಕೆ ಪಳಿಯನೆನ್ನಯ

ಶಿರಮಂ ಪದೆದೀವುದು' ಎಂದು ಕೇಳಿಕೊಳ್ಳುತ್ತಾನೆ. ಅದರಂತೆ ಮಗನಿಗೆ ಶಿರಚ್ಛೇದವನ್ನು ಮಾಡಬೇಕೆಂದು ಸತ್ಯೇಂದ್ರ ಚೋಳನು ವಿಧಿಸುತ್ತಾನೆ. ಸಾಯುವಾಗ ಪಂಚಾಕ್ಷರಿ ಮಂತ್ರವನ್ನು ಜಪಿಸುತ್ತಿದ್ದುದರಿಂದ ರಾಜಶೇಖರನ ತಲೆಯು ದೇಹದಿಂದ ಬೇರೆಯಾದಾಗಲೂ ಮಂತ್ರವನ್ನು ಜಪಿಸುತ್ತಿದ್ದಿತು. ರಾಜಶೇಖರನ ಸೇವಕ ಸಂದಾಯಿಯೂ ತನ್ನ ತಲೆಯನ್ನು ಕತ್ತರಿಸಿಕೊಂಡಾಗ ಅವನ ತಲೆಯೂ ಜಪಿಸಲು ತೊಡಗುತ್ತದೆ. ಇದರಿಂದ ಉತ್ತೇಜಿತವಾಗಿ ಶಂಕರನ ತಲೆಯೂ ಪಂಚಾಕ್ಷರಿಯನ್ನು ಜಪಿಸುತ್ತದೆ, ತನ್ನ ಮಗನ ತಲೆಗೆ ರಾಜಕುಮಾರನ ತಲೆಯೇ ಬಿದ್ದುದನ್ನು ಕಂಡು ತಿರುಕೊಳವಿನಾಚಿಯೂ ತನ್ನ ಶಿರವನ್ನು ತರಿದುಕೊಳ್ಳುತ್ತಾಳೆ. ಅದೂ ಪಂಚಾಕ್ಷರಿ ಜಪವನ್ನು ಮಾಡಲು ತೊಡಗಿತು. ರಾಜಕುಮಾರನ ಶಿರಚ್ಛೇದನವನ್ನು ಮಾಡುವ ಆಜ್ಞೆಯನ್ನು ತಾನು ಜಾರಿಮಾಡಲಾರದೆ ತನ್ನ ತಲೆಯನ್ನೇ ಕತ್ತರಿಸಿಕೊಂಡಿದ್ದ ಪತಿಮೋಹಿಯೆಂಬ ಮಂತ್ರಿಯ ತಲೆಯನ್ನು ಅಲ್ಲಿಗೆ ತರಿಸಿದಾಗ ಅದೂ ಜಪಮಾಡಲು ಹತ್ತಿತು. ರಾಜನು ಅದನ್ನು ಕಂಡು ತಾನೂ ತಲೆಕತ್ತರಿಸಿಕೊಂಡಾಗ ಅದರ ಬಾಯಲ್ಲಿಯೂ ಪಂಚಾಕ್ಷರಿಯೇ! ತಾನು ನಿಜವಾದ ಅಪರಾಧಿಯಾಗಿದ್ದರೂ ಇವರೆಲ್ಲ ಸತ್ತರೆಂದು ಮರುಗಿದ ಮಿತವಚನನು ತನ್ನ ತಲೆಯನ್ನು ಕತ್ತರಿಸಿಕೊಂಡಾಗ ಅದರ ಬಾಯಲ್ಲೂ ಪಂಚಾಕ್ಷರಿಯು ಉಚ್ಚರಿತವಾಗುತ್ತಿತ್ತು. ಈ ವಾರ್ತೆಯನ್ನು ತಿಳಿದು ಅಮೃತಮತಿಯು ರಾಜಶೇಖರ–ಮಿತವಚನರ ಹೆಂಡರೊಂದಿಗೆ ಬರುತ್ತಾಳೆ. ಏಳು ತಲೆಗಳನ್ನು ಕಂಡ ಅವರೆಲ್ಲರೂ ತಮ್ಮ ತಮ್ಮ ತಲೆಗಳನ್ನು ಕತ್ತರಿಸಿಕೊಳ್ಳಲು ಸಿದ್ಧರಾದಾಗ ಪರಶಿವನು ಪ್ರತ್ಯಕ್ಷನಾಗಿ ಎಲ್ಲರನ್ನೂ ಬದುಕಿಸುತ್ತಾನೆ.

ಕತೆಯ ಕೊನೆಯಂತೂ ಅದ್ಭುತ ಪವಾಡವಾಗಿದೆ. ಒಟ್ಟಾರೆ ಕತೆಯ ಹಂದರವು ಕಿರಿದು. ಆದರೂ ವರ್ಣನೆಗಳಿಂದ ತುಂಬಿ ರಾಜಶೇಖರನು ಈ ಕಾವ್ಯವನ್ನು ದೀರ್ಘವಾಗಿ ಮಾಡಿದ್ದಾನೆ. ಅಲ್ಲಿ ಮಿಕ್ಕೆಲ್ಲ ರಸಗಳಿಗಿಂತ ಶೃಂಗಾರವು ಭೋರ್ಗರೆದು ಹರಿದಿದೆ. ಈ ಕತೆಯ ಒಳಮಿಡಿತಕ್ಕೆ ಶೃಂಗಾರವು ಬೇಕಿಲ್ಲ. ಕರುಣ ಇಲ್ಲಿನ ನಾಡಿಮಿಡಿತ. ಅದು ತಿರುಕೊಳವಿನಾಚಿಯ ಪ್ರಸಂಗದಲ್ಲಿ ಚೆನ್ನಾಗಿ ಮೈವೆತ್ತಿದೆ. ಕವಿಯ ಔಚಿತ್ಯಪ್ರಜ್ಞೆ ಹಾಗೂ ಪಾತ್ರಗಳನ್ನು ಅರ್ಥ ಮಾಡಿಕೊಳ್ಳುವ ಶಕ್ತಿಗಳೂ ಈ ಪ್ರಸಂಗ ನಿರೂಪಣೆಯಲ್ಲಿ ಗೋಚರಿಸುತ್ತವೆ. ಮಿಕ್ಕೆಡೆಗಳಲ್ಲಿ ಬಹುಪಾಲು ಶ್ಲೇಷೆ, ಕವಿಸಮಯ, ಪಾಂಡಿತ್ಯ, ಪುನರುಕ್ತ ಕಲ್ಪನೆ ಇವುಗಳು ತುಂಬಿದೆ. ಅಲ್ಲಲ್ಲಿ ಕವಿ ಸರಳವಾಗಿ ಬರೆದರೂ ಕವಿ ಪಾಂಡಿತ್ಯ ಪ್ರಿಯನಾದುದರಿಂದ ಒಟ್ಟು ಕಾವ್ಯವು ಪಾಂಡಿತ್ಯದ ಕಗ್ಗಾಡು. ವರ್ಣನೆಗಳೂ ಹಲವೆಡೆ ತಮ್ಮಲ್ಲಿ ತಾವು ಸುಂದರವಾಗಿವಸ. ಕವಿಯು ಕಲ್ಪನೆ ಭಾವನೆಗಳಿಂದ ಕೂಡಿದವನೆಂಬುದನ್ನು ಕಾವ್ಯದ ಹಲವೆಡೆಗಳಲ್ಲಿ ನಾವು ಕಾಣಬಹುದು.

ಬಸವರಾಜ ವಿಜಯ

ಈ ಕಾವ್ಯವು ಬಸವಣ್ಣನ ಬಗ್ಗೆ ಬರೆದ ಚಂಪೂ ರೂಪದ ಪುರಾಣ ಕಾವ್ಯ. ಇದು ತೆಲುಗಿನಲ್ಲಿ ಪಾಲ್ಕುರಿಕೆ ಸೋಮನಾಥನೂ ಕನ್ನಡದಲ್ಲಿ ಭೀಮ ಕವಿಯೂ

ಬರೆದ 'ಬಸವಪುರಾಣ'ದ ಜಾಡನ್ನೇ ಬಹುಮಟ್ಟಿಗೆ ಅನುಸರಿಸಿರುವ ಕಾವ್ಯ. ವೀರಶೈವ ಪುರಾಣಗಳಲ್ಲಿ ಸಾಮಾನ್ಯವಾಗಿರುವಂತೆ ಕತೆಗೆ ನೇರವಾಗಿ ಸಂಬಂಧಿಸದಿರುವ ಹಲವಾರು ಶಿವಶರಣರ ಕತೆಗಳು ಇಲ್ಲಿಯೂ ಬಂದಿದೆ; ವಾಸ್ತವವಾಗಿ ಇವೇ ಕಾವ್ಯದ ಮುಖ್ಯ ವಸ್ತುವಿಗಿಂತ ಹೆಚ್ಚು ಭಾಗವನ್ನು ಆಕ್ರಮಿಸಿರುವುದು, ಹರಿಹರನ 'ಬಸವರಾಜದೇವರ ರಗಳೆ'ಯ ಪ್ರಭಾವವೂ ಈ ಕಾವ್ಯದ ಮೇಲಾಗಿದ್ದರೂ ಅದು ಪುರಾಣವಲ್ಲದ್ದರಿಂದ ಹರಿಹರನ ಈ ಕಾವ್ಯವನ್ನು ಷಡಕ್ಷರನು ನೆನೆಯದೆ ತೆಲುಗು ಕನ್ನಡ ಸಂಸ್ಕೃತಗಳಲ್ಲಿ ಬಸವ ಪುರಾಣವನ್ನು ಬರೆದ ಸೋಮನಾಥ ಭೀಮಕವಿ ಶಂಕರಾರಾಧ್ಯರನ್ನು ಮಾತ್ರ ಸ್ಮರಿಸುತ್ತಾನೆ.

ಬಾಗೇವಾಡಿಯಲ್ಲಿ ವಾಸಿಸುತ್ತಿದ್ದ ಶೈವಬ್ರಾಹ್ಮಣರಾದ ಮಂಡಗೆಯ ಮಾದಿರಾಜ ಮತ್ತವನ ಹೆಂಡತಿ ಮಾದಲಾಂಬಿಕೆಯರ ಮಗ ಬಸವಣ್ಣ, ಅವನು ನಂದಿಕೇಶ್ವರನ ಕೃಪೆಯಿಂದ ಹುಟ್ಟಿದವನು, ಹುಟ್ಟಿದ ತಕ್ಷಣವೇ ಕಪ್ಪಡಿಯ ಸಂಗಮೇಶ್ವರನು ಅವನಿಗೆ ಲಿಂಗದೀಕ್ಷೆಯನ್ನು ಕೊಟ್ಟಿರುತ್ತಾನೆ. ಬಸವನಿಗೆ ಎಂಟು ವರ್ಷ ವಯಸ್ಸಾದಾಗ ಅವನಿಗೆ ಉಪನಯನವನ್ನು ಮಾಡಲು ತಂದೆಯು ಅಲೋಚಿಸುತ್ತಾನೆ. ಅಗ ಬಸವಣ್ಣನು

> ಶಿವಪಂಚವರ್ಣವಿರೆ ಚೇ
> ಚಿ ವರ್ಣಮೇಕೆ ಶಂಭುಪಾದಾಶ್ರಯಮೊಂ
> ದವಿರತಮಿರೆ ಮಿಕ್ಕಾಶ್ರಮ
> ನಿವಹಂ ತಾನೇಕೆ ಲಿಂಗಪೂಜಾಯಜ್ಞಂ (ಬಸ ಪು. 3–54)

(ಶಿವನ ವರ್ಣಕ್ಕೆ ಸೇರಿದ ಮೇಲೆ ಚತುರ್ವರ್ಣಗಳ ಹಂಗೇಕೆ? ಶಿವನ ಕೃಪೆಯಿರ ಬೇಕಾದರೆ ಇತರ ಆಶ್ರಮಗಳೇಕೆ? ಲಿಂಗಪೂಜೆಯೆಂಬ ಯಜ್ಞ ವಿರಲು) ಬೇರೆ ಯಜ್ಞಗಳೇಕೆ ಎಂದು ಹೇಳಿ ತಾನು ಉಪನಯನಕ್ಕೆ ಒಳಗಾಗುವುದಿಲ್ಲವೆಂದು ತಂದೆ ತಾಯಿಯರಿಗೆ ಹೇಳುತ್ತಾನೆ. ಅವರನ್ನು ಸಮಾಧಾನ ಮಾಡಿ ಅಕ್ಕ ನಾಗಲಾಂಬೆ ಯೊಡನೆ ಕಪ್ಪಡಿಗೆ ಹೋಗುತ್ತಾನೆ. ಅಲ್ಲಿ ಸಂಗಮೇಶ್ವರ ಪೂಜೆಯಲ್ಲಿ ನಿರತನಾಗಿರು ವಾಗ ಕಾಲಕ್ರಮೇಣ ಮಾದಲಾಂಬಿಕೆಯ ತಮ್ಮನಾದ ಬಿಜ್ಜಳರಾಜನ ಮಂತ್ರಿ ಬಲದೇವನ ಮಗಳು ಗಂಗಾಂಬಿಕೆಯೊಡನೆ ಮದುವೆಯಾಗುತ್ತದೆ. ಸ್ವಲ್ಪಕಾಲಾನಂತರ ಬಲದೇವನು ಸಾಯಲು ಮಾವನ ಜಾಗದಲ್ಲಿ ಬಸವಣ್ಣನು ಮಂತ್ರಿಯಾಗುತ್ತಾನೆ. ಒಮ್ಮೆ ರಾಜನ ಆಸ್ಥಾನದಲ್ಲಿ ಬಿದ್ದ ಹರನೋಲೆಯನ್ನು ಓದಿ ಭಂಡಾರದ ಹಣವು ಹೆಚ್ಚಲು ಕಾರಣನಾಗಿ ರಾಜನ ವಿಶ್ವಾಸಕ್ಕೆ ಪಾತ್ರನಾಗುತ್ತಾನೆ.

ಅಲ್ಲಿಂದ ಮುಂದೆ ಬಸವಣ್ಣನ ಸಾಮಾಜಿಕ-ಧಾರ್ಮಿಕ ಕಾರ್ಯ ಕ್ಷೇತ್ರವು ದೊಡ್ಡದಾಗುತ್ತದೆ. ಅವನ ಮಹಿಮೆಯನ್ನು ಕೇಳಿ ಎಲ್ಲೆಡೆಯಿಂದ ಕಲ್ಯಾಣಕ್ಕೆ ಶಿವಶರಣರು ಬರುತ್ತಾರೆ.

> ಸೊಗಯಿಪ ದಿವ್ಯಷಡ್ರಸ ಸುಭೋಜನದಿಂ, ಘನಸಾರಗಂಧಿ ವೀ
> ಟಿಗಳಿಂ, ಅಪೂರ್ವ ಕುಂಕುಮ ಮೃಗೋದ್ಭವ ಚಂದನಗಂಧಲೇಪದಿಂ
> ಮಗಮಗಿಪಚ್ಚ ಪೂಸರದೆ, ಚಾರುಪರಾಂಬರದಿಂದೆ, ಅನರ್ಘ್ಯರ
> ತ್ನಗಣವಿಭೂಷಣಾಳಿಗಳಿಂ ಅರ್ಚಿಸಿದಂ ಚರಲಿಂಗವೃಂದಮಂ (ಬಸ ಪು. ೫–೪೫)

(ಮೃಷ್ಟಾನ್ನ ಭೋಜನಗಳಿಂದಲೂ, ಪರಿಮಳಯುಕ್ತವಾದ ವೀಳೆಯಂದಿದಲೂ, ಅಪೂರ್ವ ಪರಿಮಳಗಳಿಂದಲೂ, ಹೂಸರಗಳಿಂದಲೂ, ಶ್ರೇಷ್ಠ ಬಟ್ಟೆಗಳಿಂದಲೂ, ರತ್ನಾಭರಣಗಳಿಂದಲೂ, ಶಿವಶರಣರನ್ನು ತೃಪ್ತಿಪಡಿಸುತ್ತಾನೆ.) ಇದರಿಂದ ಪರಮತೀಯರಾದ ಹಲವರಲ್ಲಿ ಬಸವಣ್ಣನ ಬಗ್ಗೆ ಅಸೂಯೆಯುಂಟಾಗುತ್ತದೆ. ಬಸವಣ್ಣನು ರಾಜ್ಯಕ್ಕೆ ಸೇರಿದ ಹಣವನ್ನು ಜಂಗಮರಿಗೆ ದಾನವೀಯುತ್ತಿರುವನೆಂಬ ಅಪವಾದವನ್ನು ಪರಮತೀಯರು ಹೊರಿಸುತ್ತಾರೆ. ದೊರೆಯು ತನಿಖೆಯನ್ನು ನಡೆಸಿದಾಗ ಭಂಡಾರದ ಹಣವು ಇರಬೇಕಾದುದಕ್ಕಿಂತ ಹೆಚ್ಚೇ ಇರುತ್ತದೆ.

ಬಸವಣ್ಣನ ಜೀವನದಲ್ಲಿ ಹಲವಾರು ಪವಾಡಗಳು ನಡೆದಂತೆ ಎಲ್ಲ ಪುರಾಣ ಕವಿಗಳೂ ಚಿತ್ರಿಸುತ್ತಾರೆ. ಅವುಗಳನ್ನು ಐತಿಹಾಸಿಕ ಪುರುಷನಾದ ಬಸವಣ್ಣನ ಜೀವನ ದಲ್ಲಿ ನಡೆಯಿತೆಂಬುದನ್ನು ಎಷ್ಟರಮಟ್ಟಿಗೆ ನಂಬಬೇಕೋ ತಿಳಿಯದು. ಆದರೆ ಕೆಲವು ಸಾಂಕೇತಿಕವಾಗಿರಲೂ ಸಾಧ್ಯವಿದೆ. ಷಡಕ್ಷರ ದೇವನೂ ಬಸವಣ್ಣನ ಅನೇಕ ಪವಾಡಗಳನ್ನು ತನ್ನ ಕಾವ್ಯದಲ್ಲಿ ಚಿತ್ರಿಸುತ್ತಾನೆ. ಅಂತಹ ಒಂದು ಉದಾಹರಣೆಯನ್ನು ನೋಡಬಹುದು. ಬಸವಣ್ಣನು ಒಮ್ಮೆ ಶಿವಯೋಗ ನಿದ್ರೆಯಲ್ಲಿದ್ದಾಗ ಒಬ್ಬ ಜಂಗಮನು ಅವನನ್ನು ಕಾಣಲೆಂದು ಬರಲು ಸೇವಕರು ಹಿಂದಕ್ಕೆ ಕಳುಹಿಸುತ್ತಾರೆ. ಅವನೊಡನೆ ಬಸವಣ್ಣನ ಪ್ರಾಣವೂ ಹೋಗಿರುತ್ತದೆ. ಶರಣವೃಂದವೆಲ್ಲ ಕಳವಳದಿಂದ ಬಸವಣ್ಣನ ವಚನ ಭಂಡಾರವನ್ನು ತರಿಸಿ ನೋಡಿದಾಗ ಅಲ್ಲಿ ಒಂದೆಡೆ:

ಪ್ರಾಣಲಿಂಗಮೆ ಧಾತ್ರಿಯೊಳ್ ಶಿವಭಕ್ತ ಸಂತತಿಗೊಚ್ಚತಂ
ಪ್ರಾಣಮಾ ಘನಲಿಂಗಮೂರ್ತಿಗೆ ಸದ್ಗುರೂತ್ತಮನಾಗಳುಂ
ಪ್ರಾಣಮಾ ಗುರು ತಾನೆನಿಪ್ಪ ಸುಜಂಗಮಂ ನಿಜದಿಂದೆ ಮ
ತ್ಪ್ರಾಣಮೆಮ್ಮಯ ಸಂಗಮೇಶನಿದಕ್ಕೆ ಸಾಕ್ಷಿಸಮೀಹಿತಂ (ಬಸ ೭. ೨೩-೮೩)

(ಪ್ರಾಣಲಿಂಗವೇ ಶಿವಭಕ್ತರಿಗೆ 'ಪ್ರಾಣಸಮಾನ': ಲಿಂಗಕ್ಕೆ ಗುರುವೇ ಪ್ರಾಣ ಸ್ವರೂಪ: ಗುರುವೆನಿಸಿದ ಜಂಗಮನೇ ನನ್ನ ಪ್ರಾಣಕ್ಕೆ ಒಡೆಯ: ಶಿವನೇ ಇದಕ್ಕೆ ಸಾಕ್ಷಿ) ಎಂಬ ಅರ್ಥದ ವಚನವಿದ್ದಿತಂತೆ, ಜಂಗಮನೇ ನನ್ನ ಪ್ರಾಣವೆಂದಿದ್ದನ್ನು ಕಂಡು ಜಂಗಮನ ಹಿಂದೆ ಬಸವಣ್ಣನ ಉಸಿರೂ ಹೋಗಿರುವುದೆಂದು ತಿಳಿದು ಆ ಜಂಗಮನನ್ನು ಹುಡುಕಿ ಕರೆತಂದಾಗ ಅವನ ಪ್ರಾಣವೂ ವಾಪಸ್ಸು ಬಂದಿತಂತೆ. ಅದಕ್ಕೆ ಬಸವಣ್ಣನನ್ನು 'ಜಂಗಮ ಪ್ರಾಣಿ' ಎಂದು ಕರೆಯುವುದು. ಬಸವಣ್ಣನ ಜಂಗಮ ಪ್ರೇಮಕ್ಕೆ ಉದಾಹರಣೆಯಾಗಿ ಈ ಕತೆಯನ್ನು ಎಲ್ಲ ಕವಿಗಳೂ ಹೇಳುತ್ತಾರೆ.

ಬಸವಣ್ಣನು ಸಿದ್ಧರಾಮ, ಚೆನ್ನಬಸವ, ಅಲ್ಲಮಪ್ರಭು ಮುಂತಾದವರೊಂದಿಗೆ ಸೇರಿ ವೀರಶೈವಧರ್ಮ ಪ್ರಸಾರದಲ್ಲಿ ತೊಡಗಿದ್ದುದರಿಂದ ಹಲವರಿಗೆ ಕಣ್ಣು ಕಿಸುರಾಗು ತ್ತದೆ. ಬಿಜ್ಜಳನು ಚಾಡಿಕೋರರ ಮಾತುಗಳಿಗೆ ಕಿವಿಕೊಡುತ್ತಿರುತ್ತಾನೆ. ಕೊನೆಗೊಮ್ಮೆ ಅಲ್ಲಯ್ಯ-ಮಧುವಯ್ಯರೆಂಬ ಶಿವಶರಣರ ಕಣ್ಣು ಕೀಳಿಸಿದಾಗ ಬಸವಣ್ಣನು ದುಃಖಿತನಾಗಿ ಶಿವಗಣಗಳ ಸಮೇತ ಕಪ್ಪಡಿ ಸಂಗಮಕ್ಕೆ ಹೋಗಿ ಶಿವೈಕ್ಯನಾಗುತ್ತಾನೆ. ಜಗದೇವ ಮಾಚಯ್ಯನೆಂಬುವನು ಶಿವದ್ರೋಹಿಯಾದ ಬಿಜ್ಜಳನನ್ನು ಕೊಲೆ

ಮಾಡುತ್ತಾನೆ. ಬಸವಣ್ಣನನ್ನು ಶಿವನು ತನ್ನಲ್ಲಿ ಐಕ್ಯ ಮಾಡಿಕೊಂಡುದನ್ನು ಕವಿಯು ಈ ರೀತಿ ಚಿತ್ರಿಸುತ್ತಾನೆ.

ಬೆಳಗಿನೊಳೆ ಬೆಳಗು ಬೆರೆದಂ
ತಳವಿಗೆ ಮಿಗಿಲಾದ ಸುಖವನೊಳಕೊಂಡತಿ ಮಂ
ಗಳಮಯಲಿಂಗದೊಳೊಡವೆರೆ
ದಳಕ್ಷ್ಯಭಾವಮನೆ ತಾಳ್ದು ಮೆರೆದಂ ಬಸವಂ (ಬಸ ವಿ. ೪೨-೪೭)

(ಬೆಳಕಿನಲ್ಲಿ ಬೆಳಕು ಸೇರಿಹೋಗುವಂತೆ ಬಸವಣ್ಣನು ಅನಂತವಾದ ಸುಖವನ್ನು ಪಡೆದ ಲಿಂಗದಲ್ಲಿ ಸೇರಿಹೋದನು.)

ಮುಖ್ಯ ಕತೆಯು ಇಷ್ಟಾದರೂ ಇತರ ಶಿವಶರಣರ ಕತೆಗಳು ಇಲ್ಲಿ ತುಂಬಿ ಹೋಗಿವೆ, ಇದು ವೀರಶೈವಪುರಾಣದ ಲಕ್ಷಣವೂ ಹೌದು. ಕವಿಯು ಹೇಳಬೇಕಾದ ಕತೆಗಳು ಹಲವಾರು; ಆದ್ದರಿಂದ ಕಾವ್ಯವು ದೀರ್ಘವಾಗಿದೆ. 'ಬಸವರಾಜ ವಿಜಯ'ವು ನಲವತ್ತೆರಡು ಆಶ್ವಾಸಗಳಲ್ಲಿ ೩೫೦೦ಕ್ಕೂ ಮಿಗಿಲು ಪದ್ಯಗಳನ್ನೊಳಗೊಂಡ ಕಾವ್ಯ. ಈಗಲೇ ಕಾವ್ಯವು ದೀರ್ಘವಾಗಿರುವುದರಿಂದ ಇಲ್ಲಿ ವರ್ಣನೆಗೆ ಅವಕಾಶವು ಕಡಿಮೆ. 'ರಾಜಶೇಖರ ವಿಳಾಸ'ದೊಂದಿಗೆ ಹೋಲಿಸಿದರೆ ಇಲ್ಲಿ ವರ್ಣನೆಯು ಅನವಶ್ಯಕವಾಗಿ ಬಂದೇ ಇಲ್ಲವೆಂದು ಹೇಳಬೇಕು. ಕೆಲವೆಡೆಗಳಲ್ಲಿನ ಕಲ್ಪನೆಯು ಹೊಸತಾಗಿದೆ. ಉದಾಹರಣೆಗೆ ಈ ಪದ್ಯವನ್ನು ನೋಡಿ:

ಪಳುಕಿನ ಪಾಸರೆಯೊಳ್ ನೆಲ
ದಳದುರಗೇಂದ್ರನ ಫಣಾಮಣಿಯ ಕೆಂಬೆಳಗು
ರ್ಚಳಿಸಿರೆ ಪೊಸ ರಕ್ತಮಿದೆಂ
ದೆಳೆವುಲಿಗಳ್ ನೆಕ್ಕುತಿರ್ಕುಮಾ ನಗತಟದೊಳ್ (ಬಸ ವಿ. ೧೦-೪೭)

(ಪರ್ವತಪ್ರದೇಶದಲ್ಲಿನ ಸ್ಫಟಿಕದ ಹಾಸುಗಲ್ಲುಗಳಿಂದ ಹೊಮ್ಮುತ್ತಿರುವ ಸರ್ಪದ ತಲೆಮಣಿಯ ಕೆಂಬೆಳಗನ್ನು ರಕ್ತವೆಂದು ಭ್ರಮಿಸಿ ಅದನ್ನು ಹುಲಿಯ ಮರಿಗಳು ನೆಕ್ಕುತ್ತಿದ್ದವು!) ಇನ್ನೊಂದೆಡೆ ಷಡಕ್ಷರಿಯು ಬೇಡನ ಚಿತ್ರವನ್ನು ಕಣ್ಣಿಗೆ ಕಟ್ಟುವಂತೆ ನೀಡುತ್ತಾನೆ:

ತೊಳಗುವ ಪೀಲಿದಂಡೆ ಮಿಳಿರ್ದಾಡುವ ನೆತ್ತಿಯ ಚಾಮರಂ ಮನಂ
ಗೊಳಿಪೆಳೆಮುತ್ತಿನೆಕ್ಕಸರಂ ಉಟ್ಟ ತಳಿರ್ಪಸುರಂಗಿ ಗುಂಜಿಕಾ
ವಳಿಯ ವಿಭೂಷಣಂ ಪಿಡಿದ ಬಿಲ್‌ಸರಲ್ ಅಂದದ ಚೆನ್ನಚನ್ನ ಬ
ತ್ತಳಿಕೆ ಮರಂದದಚ್ಚಸೆಯೆ ಬಂದನುದಗ್ರ ಪುಳಿಂದನಾಯಕಂ (ಬಸವ ವಿ.?)

(ಹೊಳೆಯುವ ನವಿಲುಗರಿಯ ದಂಡೆಯು ತಲೆಯಮೇಲೆ ಓಲಾಡುತ್ತಿದೆ, ಏಕಾವಳಿ ಸರವನ್ನು ಬೇಡನು ತೊಟ್ಟಿದ್ದಾನೆ. ಚಿಗುರಿನಿಂದ ಮಾಡಿದ ಹಸಿರುಡುಗೆ, ಗುಲಗಂಜಿಯ ಆಭರಣಗಳು, ಬಿಲ್ಲುಬಾಣಗಳನ್ನು ಕೈಯಲ್ಲಿ ಹಿಡಿದ ಬೇಡನ ಬೆನ್ನ ಓಂದೆ ಬತ್ತಳಿಕೆಯು ಶೋಭಿಸುತ್ತಿದೆ.) ಒಟ್ಟಾರೆ 'ರಾಜಶೇಖರ ವಿಲಾಸ'ವನ್ನು ಬರೆದ ಇಪ್ಪತ್ತೆರಡು ವರ್ಷಗಳ ನಂತರ ಷಡಕ್ಷರನು ಬರೆದ 'ಬಸವರಾಜ ವಿಜಯ'ವು ಹೆಚ್ಚು

ಸಂಯಮದಿಂದ ಕೂಡಿದ ಕಾವ್ಯ. ಅನೇಕ ಉಪಕತೆಗಳನ್ನು ಮೂಲಕತೆಯೊಂದಿಗೆ ಕವಿಯು ಚೆನ್ನಾಗಿ ತೂಗಿಸಿಕೊಂಡು ಹೋಗಿ ಒಂದು ಒಳ್ಳೆಯ ಪುರಾಣಕಾವ್ಯವನ್ನು ನೀಡಿದ್ದಾನೆ. ಮೊದಲಿನ ಕಾವ್ಯದಷ್ಟು ಕಗ್ಗಾಡಿನಂತಿರದೆ ಇದು ಸರಳವಾಗಿಯೂ ರಚಿತವಾಗಿರುವ ಕಾವ್ಯ.

ಶಬರ ಶಂಕರ ವಿಳಾಸ

ಮಹಾಭಾರತದಲ್ಲಿ ಬರುವ ಒಂದು ಪ್ರಸಂಗವೇ ಈ ಕಾವ್ಯದ ವಸ್ತು. ಅರ್ಜುನನು ಇಂದ್ರಕೀಲ ಪರ್ವತದಲ್ಲಿ ತಪಸ್ಸು ಮಾಡಿ ಕಿರಾತ ವೇಷದ ಶಿವನೊಡನೆ ಹೋರಾಡಿ ಅವನನ್ನು ಮೆಚ್ಚಿಸಿ ಪಾಶುಪತಾಸ್ತ್ರಗಳನ್ನು ಪಡೆದುದು ಇಲ್ಲಿಯ ಕತೆ. ಇದು ಕಿರಾತ ರುದ್ರಲೀಲೆಯೆಂಬುದಾಗಿ ಶಿವನ ಇಪ್ಪತ್ತೈದು ಲೀಲೆಗಳಲ್ಲಿ ಒಂದೆಂದು ಪ್ರಸಿದ್ಧವಾಗಿದೆ. ಈ ಪ್ರಸಂಗವನ್ನು ಮಹಾಭಾರತ ವನ್ನು ಹೇಳುವ ಕವಿಗಳೆಲ್ಲರೂ ಪ್ರಾಸಂಗಿಕವಾಗಿ ಹೇಳುತ್ತಾರೆ. ಆದರೆ ಶಿವನ ಲೀಲೆ, ಮಹಿಮೆ ಕಾರುಣ್ಯಗಳನ್ನು ವರ್ಣಿಸಲು ಷಡಕ್ಷರಿಯು ಈ ಪ್ರಸಂಗವನ್ನು ಚಿತ್ರಿಸಿ ಒಂದು ಖಂಡಕಾವ್ಯವನ್ನಾಗಿ ಮಾಡಿದ್ದಾನೆ. ಮೊದಲನೆಯ ಆಶ್ವಾಸದಲ್ಲಿ ಈಶ್ವರನ ಒಡ್ಡೋಲಗದ ವರ್ಣನೆಯೂ, ಎರಡನೆಯದರಲ್ಲಿ ಅರ್ಜುನನ ತಪಸ್ಸಿನ ವರ್ಣನೆಯೂ, ಮೂರನೆಯದರಲ್ಲಿ ಶಿವ-ಪಾರ್ವತಿಯರು ದೇವತೆಗಳೊಡನೆ ಬೇಡ-ಬೇಡಿತಿಯರಾಗಿ ಬೇಟೆಗಾಗಿ ಬಂದ ಸಂಗತಿಯ ವರ್ಣನೆಯೂ, ನಾಲ್ಕನೆಯದರಲ್ಲಿ ಮೂಕದಾನವನೆಂಬ ರಾಕ್ಷಸನು ಹಂದಿಯ ರೂಪದಲ್ಲಿ ಬಂದಾಗ ಅರ್ಜುನನು ಹೊಡೆದುರುಳಿಸುವುದೂ, ಮುಂದೆ ಆ ಕಾರಣದಿಂದ ಬೇಡವೇಷದ ಈಶ್ವರನು ಅರ್ಜುನನೊಡನೆ ಹೋರಾಡುವ ವರ್ಣನೆಯೂ, ಕೊನೆಯ ಆಶ್ವಾಸದಲ್ಲಿ ಶಿವನು ಅರ್ಜುನನಿಗೆ ನಿಜಸ್ವರೂಪವನ್ನು ತೋರಿಸಿ ದಿವ್ಯಾಸ್ತ್ರಗಳನ್ನು ದಯಪಾಲಿಸುವ ವರ್ಣನೆಯೂ ಬರುತ್ತದೆ.

ಅರ್ಜುನನ ತಪಸ್ಸಿನ ವರ್ಣನೆಯಿದು:

ಅರೆಮುಗುಳ್ದಕ್ಷಿಗಳ್, ಮಿಡುಕುಗುಂದದ ಚೆಂದುಟಿ, ನಿಶ್ಚಳಾಂಗಂ, ಉ
ರ್ವರೆಯೊಳ್ ತಳ್ತ ಕಾಲ್ತುದಿ, ಸಮುದ್ಧೃತಬಾಹುಗೆ ಬದ್ಧಚಾಪಭಾ
ಸುರತರಖಡ್ಗಮಗ್ಗದ ಕಠಾರಿಯಡಾಯುಧಂ, ಅಳ್ದ ಬೆನ್ನ ವಿ
ಸ್ಫುರಿತನಿಷಂಗಮೊಪ್ಪೆ ಪೊಸವೇಷದ ತಾಪಸನೊಪ್ಪಿ ತೋಱಿದಂ (ಶ ಶಂ ವಿ. ೨-೭೯)

(ಅರ್ಧಮುಗಿದ ಕಣ್ಣುಗಳಿಂದಲೂ, ಕಾಂತಿಯುಕ್ತವಾದ ತುಟಿಗಳಿಂದಲೂ ಕೂಡಿ ಚಲಿಸದೆ ನಿಂತುಕೊಂಡು ಆ ಹೊಸ ತಪಸ್ವಿಯ ತೋಳಿನಲ್ಲಿ ಬಿಲ್ಲು-ಬಾಣಗಳೂ ಖಡ್ಗ-ಕಠಾರಿಗಳೂ ನೇತಾಡುತ್ತಿವೆ, ಬೆನ್ನಮೇಲೆ ಬತ್ತಳಿಕೆಯಿದೆ.)

ಸ್ಥಿರತರಭಕ್ತಿಯೆಂಬ ಸುಧೆಯಂ ಸವಿದುರ್ಬ್ಬಿತೆ ಕಂದುಕುಂದನಾ
ಳ್ದಿರದೆಸೆವಂಗಂ ಉರ್ವಿದ ಲಸತ್ಪುಳಕಾಂಕುರಮುಜ್ವಲನ್ಮುಖಾಂ
ಬುರುಹಂ ಆರಲ್ದ ಸತ್ವಮಯಮಾನಸನೊಪ್ಪಿರೆ ಚಿತ್ಸುಖಾಬ್ಧಿಯೊಳ್
ಕರಮವಗಾಹಮಿರ್ದನವನೀಶ್ವರಪಾದ ಸರೋಜಷಟ್ಪದಂ (ಶ ಶಂ ವಿ. ೨-೧೦೦)

(ಸ್ಥಿರವಾದ ಭಕ್ತಿಯೆಂಬ ಅಮೃತವನ್ನು ಕುಡಿದು ಉಬ್ಬುತ್ತಿರುವ ರಾಜಪೂಜಿತನಾದ ಅರ್ಜುನನು ಕಾಂತಿಹೀನವಾಗದ ದೇಹದಿಂದಲೂ ಭಕ್ತಿಯಿಂದ ಪಡೆಯುವ ರೋಮಾಂಚನದಿಂದಲೂ ತೇಜಸ್ವಿಯಾದ ಮುಖದಿಂದಲೂ ಸತ್ವದಿಂದ ತುಂಬಿದ ಮನಸ್ಸಿನಿಂದಲೂ ಕೂಡಿ ಚಿತ್ತದಲ್ಲಿ ಭಕ್ತಿಯ ಆನಂದವನ್ನು ಅನುಭವಿಸುತ್ತಿದ್ದನು.)

ಅರ್ಜುನನು ಹೀಗೆ ಘೋರವಾದ ತಪಸ್ಸು ಮಾಡುತ್ತಿರುವಾಗ ಅವನ ಭಕ್ತಿ-ಸ್ಥೈರ್ಯಗಳನ್ನು ಪರೀಕ್ಷಿಸಲು ಈಶ್ವರನು ಬರುತ್ತಾನೆ. ಮೂಕದಾನವನೆಂಬ ರಾಕ್ಷಸನು ಹಂದಿಯ ವೇಷದಲ್ಲಿ ಆ ತಪೋಭೂಮಿಯಲ್ಲೆಲ್ಲ ಸುಳಿದಾಡುತ್ತಾನೆ. ಆ ಹಂದಿಯ ರೂಪದ ವರ್ಣನೆಯು ಸುಂದರವಾಗಿದೆ:

ಬಡಬಜ್ವಾಲೆಯ ವಿಸ್ಫುಲಿಂಗತತಿಯೆಂಬಂತಿರ್ಪ ಕಣ್, ಚಕ್ರದಿ
ರ್ಕಡೆಯಂ ಬಾಯೊಳಿಱುಂಕಿದಂತೆ ಪೊಳೆಪಿಂ ಕೊಂಕಿರ್ದ ಕಾರ್ದಾಡೆ, ಬಲ್
ಸಿಡಿಲುದ್ಯದ್ದ್ರವಮಾಳ್ದ ಭೀಕರಮುಖಂ, ಕಲ್ಪಾಬ್ದಮಂ ಪೋಲ್ವ ಕಾ
ರೊಡಲ್ ಅತ್ಯದ್ಭುತಮಾಗೆ ಬಂದುದು ಮಹಾರೋಷಕರಂ ಸೂಕರಂ

(ಶ ಶಂ ವಿ. ೪-೪)

(ಬಾಡಬಾಗ್ನಿಯ ಉರಿಯ ನಾಲಗೆಯಂತೆ ಉಜ್ವಲವಾದ ಕಣ್ಣುಗಳಿಂದಲೂ, ಚಕ್ರದ ಮಧ್ಯವನ್ನು ಬಾಯಲ್ಲಿ ಇರುಕಿಸಿಕೊಂಡಾಗ ಅರಗಳು ಆಚೆ ಈಚೆಗೆ ಕಾಣುತ್ತಿರುವಂತಹ ಕೋರೆದಾಡೆಗಳಿಂದಲೂ, ಭಯಂಕರವಾದ ಸಿಡಿಲು ನೀರಾದಾಗ ಅದರಲ್ಲಿ ಅದ್ದಿ ತೆಗೆದಂತಹ ಭೀಕರ ಮುಖದಿಂದಲೂ ಪ್ರಳಯ ಕಾಲದ ಮೋಹದಂತೆ ಕಪ್ಪಾದ ದೇಹದಿಂದಲೂ ಕೂಡಿದ ಆ ಹಂದಿಯು ಮಹಾರೋಷದಿಂದ ಉರಿಯುತ್ತಿತ್ತು.) ಆ ಹಂದಿಯನ್ನು ಬೇಡನ ವೇಷದಲ್ಲಿದ್ದ ಈಶ್ವರನು ಬಾಣದಿಂದ ಹೊಡೆದಾಗ ಅದು ಸ್ವಲ್ಪಕಾಲ ಮೂರ್ಛೆ ಹೋಗಿ, ಅನಂತರ ಎದ್ದು ಅರ್ಜುನನಿದ್ದ ತಪೋದಾಮಕ್ಕೆ ಬರುತ್ತದೆ. ತಪಸ್ವಿಗಳಿಗೆ ಕೋಟಲೆಯನ್ನುಂಟುಮಾಡುತ್ತಿದ್ದ ಅದನ್ನು ಕೊಲ್ಲಬೇಕಾದುದು ತನ್ನ ಕರ್ತವ್ಯವೆಂದು ಬಗೆದ ಅರ್ಜುನನು ಆ ಹಂದಿಗೆ ಬಾಣಪ್ರಯೋಗ ಮಾಡುತ್ತಾನೆ. ಆ ಹೊತ್ತಿಗೆ ಸರಿಯಾಗಿ ಕಿರಾತವೇಷದ ಶಿವನು ಬರುತ್ತಾನೆ. ಬಂದು ಅರ್ಜುನನೊಡನೆ ಇಲ್ಲದ ಜಗಳವನ್ನು ತೆಗೆಯುತ್ತಾನೆ; ಅವರ ಸಂಭಾಷಣೆ ಚೆನ್ನಾಗಿದೆ.

ಶಿವ: **'ಈ ಕಿಟಿಯೆಮ್ಮದು. ಆಂ ತವಿಸಿದೆನ್. ಭೂತಗಣಕ್ಕೆ**
ಪೇೞ್ದುದುಮಾಲಿಸುತ್ತ ವಿಕಲಂ ಕೆಡೆದತ್ತು ಇದು ಎನ್ನಯ ಬಾಣದಿಂ,
ಕಡೆಸಾರ್ ಬಿಡು.'

ಅರ್ಜುನ : **'ಎಲೆ ಶಬರ ಕಾಡ ಬಡನರಿ**
ಮೊಲಪುಲ್ಲೆಗಳಲ್ಲಿ ನಿನ್ನ ಸಾಹಸಮುಂ ದೋ
ರ್ಬಲಮುಂ ಮೆಱೆಗುಂ ಅದಲ್ಲದೆ
ಚಲದಂಕನೊಳೆನ್ನೊಳೆಂತುಮೇಂ ಮೆಱೆದಪುದೆ?' **(ಶ ಶಂ ವಿ. ೪-೨೭)**

(ಎಲೈ ಬೇಡ, ಕಾಡಿನಲ್ಲಿನ ಬಡಪಾಯಿ ನರಿಮೊಲಜಿಂಕೆಗಳನ್ನು ಹೊಡೆದು ನಿನ್ನ ಸಾಹಸವನ್ನು ತೋರಿಸಬಹುದೇ ಹೊರತು ಸಾಹಸಿಯಾದ ನನ್ನೊಡನೆ ನೀನು

ಸಣೆಸಲಾರೆ.) ತನ್ನೊಡನೆ ಯುದ್ಧಕ್ಕೆ ಬಂದರೆ ತನ್ನ ಶೌರ್ಯವನ್ನು ತೋರಿಸುವೆ ನೆಂದೂ ಅರ್ಜುನನು ಹೇಳುತ್ತಾನೆ.

ಕರಿ ಕೇಸರಿಯಂ ಕೆಣಕಿದ
ಪರಿಯಂ ಪರುಟವಿಸದಿರ್ ಮದಾಂಧತೆಯಿಂದಾಂ
ತರಿಬಲಬಲಾಹಕಪ್ರ
ಸ್ಫುರಿತಮಹಾನಿಲನೊಳ್ ಅತುಳಬಳಗಾಂಡಿವಿಯೊಳ್ (ಶ ಶಂ ವಿ. ೪–೨೯)

(ಆನೆಯು ಸಿಂಹವನ್ನು ಕೆಣಕಿದ ಹಾಗೆ ಬೊಗಳಬೇಡ. ನಿನ್ನ ಅಹಂಕಾರವು ಸಾಕು. ನೀನು ಮಾತನಾಡುತ್ತಿರುವುದು ಶತ್ರುಗಳೆಂಬ ಮೋಡವನ್ನು ಓಡಿಸುವ ಕಾಳಿಯಂತಿರುವ ಅರ್ಜುನನೊಡನೆ, ಗೊತ್ತೇ?) ಅದಕ್ಕೆ ಶಿವನು ಕೊಡುವ ಉತ್ತರವಿದು: 'ಗೊರವ, ನಿನ್ನಯ ಶೌರ್ಯಮದಿರ್ಕೆ. ಖಡ್ಗಮೀ ಧನುಶರಮೆತ್ತ ನಿನ್ನ ತಪಮೆತ್ತ? ವಿಚಿತ್ರಮಿದಲ್ತೆ ಧಾತ್ರಿಯೊಳ್!' ತಾನು ಬಿಲ್ಲು ಬಾಣಗಳನ್ನು ಹಿಡಿದು ತಪಸ್ಸುಮಾಡುವ ವಿಚಾರದ ಬಗ್ಗೆ ಆ ಬೇಡನು ಕೊಂಕುನುಡಿದಾಗ ಅರ್ಜುನನಿಗೆ ಸಿಟ್ಟು ಬಂದಿತು:

ವಿಪಿನಚರ, ನಿನಗೆ ತಕ್ಕುದು
ಚಪಲಮೃಗವ್ರಜದ ಬೇಂಟೆಯಜ್ಜುಗಂ, ಎಮ್ಮೀ
ತಪದ ವಿಚಾರಂ ತಕ್ಕುದೆ
ವಿಪರೀತಂ ನಿನ್ನ ನುಡಿಯನೊಲ್ವರೆ ಬಲ್ಲರ್? (ಶ ಶಂ ವಿ. ೪–೩೧)

(ಬೇಡ, ನೀನು ಪ್ರಾಣಿಗಳ ಬೇಟೆಯ ಬಗ್ಗೆ ಮಾತನಾಡುವುದು ಸರಿ. ಆದರೆ ನಮ್ಮ ತಪಸ್ಸಿನ ವಿಚಾರವಾಗಿ ಮಾತನಾಡಲು ನಿನಗೆ ಯೋಗ್ಯತೆಯಿಲ್ಲ.)

(ಎಂದವನುಕ್ತಿಯಂ ಗಿರಿಶನಾಲಿಸಿ) ತಾಪಸ ಲೇಸನಾಡಿದಯ್
ಕುಂದದೆ ಬೇಂಟೆಯುಜ್ಜುಗಮಿದೆಮ್ಮಯ ಕಜ್ಜಮಿದಪ್ಪುದಪ್ಪುದು. ಆ
ವಂದದಿಂ ಇಂತು ನಿನ್ನವೊಲದಾವನೊ ಶಾಂತಿಸಮಗ್ರನುಗ್ರ ಶೌ
ರ್ಯಂ ದಿಟಮಸ್ತ್ರಶಸ್ತ್ರಧರನಾದ ತಪಸ್ವಿ ಧರಾತಳದೊಳ್ (ಶ ಶಂ ವಿ. ೪–೩೨)

('ಭೇಷ್ ತಪಸ್ವಿ, ಸರಿಯಾಗಿಯೇ ನುಡಿದೆ. ಬೇಟೆಯೇ ನನ್ನ ಕೆಲಸ ನಿಜ. ನಿನ್ನ ಹಾಗೆ ಶಾಂತನೂ ಶೌರ್ಯವಂತನೂ ಆದ, ಆಯುಧಧಾರಿಯಾದ ತಪಸ್ವಿಯು ಪ್ರಪಂಚದಲ್ಲಿ ಇನ್ನಾರಿದ್ದಾರೆ!' ಎಂದು ಕಟಕಿಯಾಡುತ್ತಾನೆ.) ಈ ಪರಿಹಾಸ್ಯವು ಅರ್ಜುನನಿಗೆ ಅರ್ಥವಾಯಿತು.

ಕಟಕಿಯದೇಂ ಪುಳಿಂದ ಬಿಡು ನಿನ್ನ ದುರುಕ್ತಿಯಂ, ಎಮ್ಮ ವೃತ್ತಿಯಂ
ಪಟುತಪಮಾಂತ ತಾಪಸರೆ ಬಲ್ಲರ್, ಉದಾರಜಟಾರಿ ಮೃಗಾಜಿನ
ಸ್ಫುಟಭಸಿತಂಗಳಂ ಶರಶರಾಸನಖಡ್ಗಮನಾಂತು ತಾಪಸೋ
ತ್ಕಟಮೃಡನಿರ್ಪಂ ಆ ಮೃಡನ ಶಿಷ್ಯತೆಯಾಂತೆನಗೇನಿದೊಪ್ಪದೇ? (ಶ ಶಂ ವಿ. ೪–೩೩)

(ಎಲೈ ಕಿರಾತನೇ, ನಿನ್ನ ಕಟಕಿಯನ್ನು ಸಾಕುಮಾಡು. ನನ್ನ ತಪಸ್ಸಿನ ಬಗೆಯನ್ನು ತಪಸ್ವಿಗಳೇ ಬಲ್ಲರು. ಜಡೆ ಚರ್ಮ ವಿಭೂತಿಗಳನ್ನು ಧರಿಸಿದ ಶಿವನ ಭಕ್ತನಾದ ನನಗೆ ಈ ವೇಷವು ಒಪ್ಪುವುದಿಲ್ಲವೇ?) ಅದಕ್ಕೆ ಆ ಶಿವನು ಈ ರೀತಿ ಮಾರುಗೊಡುತ್ತಾನೆ:

ಏನಾದೊಡೇನೊ ನಿನ್ನ ತ
ಪೋನೀತಿಯದಂತಿರ್ಕೆ, ನಿನ್ನ ಧನುರ್ವಿ
ದ್ಯಾನಿಪುಣತೆಯೆಂತೆತನು
ಮಾನಮದೇಂ ತೋರ್ಪುದೆನ್ನೊಳಡಗಿಸಿ ಸರಿವೆಂ (ಶ ಶಂ ವಿ. ೪-೩೫)

(ನಿನ್ನ ತಪಸ್ಸು ಹಾಗಿರಲಿ, ನಿನ್ನ ಬಿಲ್ಲುವಿದ್ಯೆಯ ನೈಪುಣ್ಯವನ್ನು ತೋರಿಸು. ನಾನು ಅದನ್ನು ಅಡಗಿಸುತ್ತೇನೆ.) ಆಗ ಅರ್ಜುನನ ಕೋಪ ಉರಿಯುತ್ತದೆ. ಅವನ ತಪಸ್ಸು ತಗ್ಗಿ ಕೋಪವೇರುತ್ತದೆ:

ಒಳಸೋರ್ದುದು ಶಾಂತಿರಸಂ,
ಮೊಳೆತುದು ಕೋಪಾಗ್ನಿ, ಪೊಗೆದುದುಸಿರೊಳ್ ನಿಡುಗ
ಣ್ಗಳ ಕಡೆಯೊಳ್ ಕಿಡಿಗೆದರ್ದುದು
ಬಳಿಕಲರ್ದುದು ಮೊಗದೊಳ್ ಅಚಲರಿಪುನಂದನನಾ (ಶ ಶಂ ವಿ. 4-37)

(ಅರ್ಜುನನ ಶಾಂತಿಯು ಸೋರಿಹೋಗಿ ಮನಸ್ಸಿನಲ್ಲಿ ಕೋಪವು ಮೊಳೆಯಿತು: ಅದರ ಹೊಗೆಯು ಉಸಿರಾಗಿ ಹೊರಬಂದು ಕಣ್ಣುಗಳ ತುದಿಯಲ್ಲಿ ಕಿಡಿಗಳಾಗಿ ಹೊಮ್ಮಿ ಮುಖದಲ್ಲಿ ಆವರಿಸಿತು.) ಅನಂತರ ಅವರಿಬ್ಬರ ನಡುವೆ ಭಯಂಕರ ಯುದ್ಧವಾಗಿ ಅರ್ಜುನನ ಛಲ-ಭಕ್ತಿಗಳಿಗೆ ಶಿವನು ಮೆಚ್ಚಿ ಪಾಶುಪತಾಸ್ತ್ರವನ್ನೀಯುತ್ತಾನೆ. ಪಾರ್ವತಿಯು ಅಂಜನಾಸ್ತ್ರವನ್ನು ಕೊಡುತ್ತಾಳೆ.

ಹೀಗೆ ಈ ಕಾವ್ಯವು ವರ್ಣನೆಗಳಿಂದ ತುಂಬಿದೆ. ಮೇಲಿನ ಪ್ರಸಂಗವು ಷಡಕ್ಷರನ ರಚನಾಕೌಶಲಕ್ಕೆ ಸಾಕ್ಷಿಯಾಗಿದೆ. ಆದರೆ ಹಲವಡೆಗಳಲ್ಲಿ ವರ್ಣನೆಯು ಈ ಕಾವ್ಯದಲ್ಲಿಯೂ ಸಾಂಪ್ರದಾಯಿಕವಾಗಿದೆ. ಇಲ್ಲಿಯೂ ಕವಿಯ ಪಾಂಡಿತ್ಯಪ್ರಿಯತೆಯು ನಮಗೆ ಗೋಚರಿಸುತ್ತದೆ.

● ●

ಚಂಪೂ ಪ್ರಕಾರದಲ್ಲಿ ಆದ ಬದಲಾವಣೆಗಳು

■

ದೃಷ್ಟಿ

ಒಂದು ನಾಡಿನ ಸಾಹಿತ್ಯವು ಸ್ವಲ್ಪ ಮಟ್ಟಿಗೆ ಆ ನಾಡಿನ ಸಮಷ್ಟಿಜೀವನದ ಪ್ರತಿಬಿಂಬವಾಗಿರುತ್ತದೆ. ಜನಜೀವನವು ವ್ಯತ್ಯಾಸಗೊಂಡಂತೆಲ್ಲ, ಜನರು ನಂಬಿಕೊಂಡ ಜೀವನ ಮೌಲ್ಯಗಳಲ್ಲಿ ಬದಲಾವಣೆಯಾದಂತೆಲ್ಲ ಸಾಹಿತ್ಯದ ಸ್ವರೂಪವೂ ಅವುಗಳಿಗನುಗುಣವಾಗಿ ಬದಲಾಯಿಸುತ್ತಿರುತ್ತದೆ. ಹಳೆಯ ಜಾಡಿಗೆ ಕಟ್ಟು ಬಿದ್ದ ಎಷ್ಟೋ ಕವಿಗಳು ತಮ್ಮ ಕಾಲದಲ್ಲಿ ಪ್ರಚಲಿತವಾಗಿರದ, ಜನರ ಜೀವನಕ್ಕೆ ಹೊಂದಿಕೊಳ್ಳದ ಪ್ರಕಾರದಲ್ಲಿ ಸಾಹಿತ್ಯ ಕೃತಿಗಳನ್ನು ರಚಿಸಬಹುದು. ಆದರೆ ಇಂತಹ ಕವಿಗಳು ನಾಡಿನ ಮುಖವಾಣಿಯಾಗಬಲ್ಲ ಮಹಾ ಕವಿಗಳಲ್ಲ. ಒಂದು ಜನಸಮುದಾಯವು ಅವಶ್ಯಕತೆಗನುಗುಣವಾಗಿ ಇತರ ಕ್ಷೇತ್ರಗಳಲ್ಲಿ ಹೇಗೆಯೋ ಹಾಗೆ ಸಾಹಿತ್ಯಕ್ಷೇತ್ರದಲ್ಲಿಯೂ ತನ್ನ ಪ್ರತಿನಿಧಿಯನ್ನು ಸೃಷ್ಟಿಸುತ್ತದೆ. ಹೀಗಾಗಿ ಎಲ್ಲ ದೇಶಗಳ ಎಲ್ಲ ಭಾಷೆಗಳ ಸಾಹಿತ್ಯಗಳಲ್ಲಿಯೂ ಆಗಿರುವ ಮಹತ್ವದ ಬದಲಾವಣೆಗಳು ಆ ದೇಶದ ಜನಜೀವನದಲ್ಲಿ ಆದ ಬದಲಾವಣೆಗಳಿಗೆ ಹೊಂದಿಕೊಂಡೇ ಆಗಿರುತ್ತವೆ. ಇಡೀ ಕನ್ನಡ ಸಾಹಿತ್ಯವನ್ನೇ ಪರಿಶೀಲಿಸಿದರೆ ಚಂಪೂಕಾವ್ಯಗಳ ಹುಲುಸು ಬೆಳೆಯ ಕಾಲವಾದ ಮೇಲೆ ವಚನ ಸಾಹಿತ್ಯದ ಕಾಲ, ಅನಂತರ ದಾಸರ ಪದಗಳ ಯುಗ, ಷಟ್ಪದಿ ಹಾಗೂ ಇತರ ಹಾಡುಗಬ್ಬಗಳ ಯುಗ, ಇತ್ತೀಚೆಗೆ ಆಧುನಿಕ ಯುಗ–ಈ ಮಹತ್ವದ ಘಟ್ಟಗಳಿರುವುದು ಗೋಚರಿಸುತ್ತದೆ. ಇದು ಒಟ್ಟು ಕನ್ನಡ ಸಾಹಿತ್ಯವನ್ನೇ ಪರಿಶೀಲಿಸಿದಾಗ ಕಾಣುವ ಮೈಲಿಗಲ್ಲುಗಳು. ಆದರೆ ಈ ಪ್ರಮುಖಘಟ್ಟಗಳಲ್ಲಿಯೇ ಅನೇಕ ಮಾರ್ಪಾಟುಗಳಾಗಿರುವುದನ್ನು ಸೂಕ್ಷ್ಮವಾಗಿ ನೋಡಿದಾಗ ಕಾಣಬಹುದು. ಅದರಂತೆಯೇ ಚಂಪೂ ಕಾವ್ಯರಾಶಿಯನ್ನೆಲ್ಲ ಪರಿಶೀಲಿಸಿದಾಗ ಈ ಸಾಹಿತ್ಯಪ್ರಕಾರವು ಅನೇಕ ಮಾರ್ಪಾಟುಗಳಿಗೊಳಗಾಗಿ ಬೆಳೆಯುತ್ತ ಬಂದಿರುವುದನ್ನು ಗಮನಿಸಬಹುದು.

ಒಟ್ಟು ದೃಷ್ಟಿಯಿಂದ ನೋಡಿದಾಗ ಯಾವುದೋ ಒಂದು ಸಾಹಿತ್ಯ ಪ್ರಕಾರವು ಆಯಾ ಜನಜೀವನದ ಒಂದು ಮನಃಸ್ಥಿತಿಯನ್ನು ಒಳಗೊಂಡಿರುತ್ತದೆಂದು ಹೇಳಬಹುದು. ಕ್ರಿ.ಶ. ಪ್ರಾರಂಭಕಾಲದಿಂದಲೂ ನಮ್ಮ ಕರ್ನಾಟಕದಲ್ಲಿ ಶೂರರೂ ಧೀರರೂ ಬಂದಿರುವುದನ್ನು ಕಾಣಬಹುದು. ಕನ್ನಡನಾಡು ಹಾಗೂ ನುಡಿಗಳ ಸ್ವತಂತ್ರ ವ್ಯಕ್ತಿತ್ವವು ತನಗೇ ವಿಶಿಷ್ಟವಾದ ಕಾವ್ಯಪ್ರಕಾರದಲ್ಲಿ ಹೊರಹೊಮ್ಮಿತು. ಪಂಪನಿಗಿಂತಲೂ ಹಿಂದಿನ

ಶಾಸನ ಸಾಹಿತ್ಯವನ್ನು ನೋಡಿದರೆ ಅಲ್ಲಿ ಕಾಣುವುದು ಬಿಡಿಗವನಗಳು, ಸರಳ ಜೀವನ ಚಿತ್ರಗಳು ಹಾಗೂ ಸಂಸ್ಕೃತವೇ ತುಂಬಿದ್ದ ಭಾಷಾಶೈಲಿ. ಆದರೆ ಪಂಪನಿಗಿಂತ ಸ್ವಲ್ಪ ಕಾಲಕ್ಕೆ ಮುಂಚಿನಿಂದ ಕರ್ನಾಟಕದ ಸ್ವತಂತ್ರವೂ ಸಂಕೀರ್ಣವೂ ಆದ ಜೀವನ ಪ್ರತಿಬಿಂಬವಾಗಿ ಚಂಪೂ ಪ್ರಕಾರವು ಉದಯವಾಯಿತೆಂದು ಹೇಳಬಹುದು. ಇದು ಕನ್ನಡದ ಸ್ವಂತಿಕೆ ಹಾಗೂ ಸಂಸ್ಕೃತ–ಪ್ರಾಕೃತಗಳ ಪ್ರಭಾವದಿಂದ ಬಂದ ಅಂಶಗಳು ಇವುಗಳ ಮಿಶ್ರಣದಿಂದ ರೂಪುಗೊಂಡ ಸಾಹಿತ್ಯಪ್ರಕಾರವಾಗಿದೆ. ಸಂಸ್ಕೃತ ವೃತ್ತಗಳು, ಸಂಸ್ಕೃತ ಭೂಯಿಷ್ಠವಾದ ಭಾಷೆ, ಸಂಸ್ಕೃತ–ಪ್ರಾಕೃತ ಮಹಾಕಾವ್ಯ ವಸ್ತುಗಳು ಇವುಗಳಲ್ಲಿ ಪ್ರಭಾವದ ಅಂಶಗಳನ್ನು ಕಂಡರೆ, ಈ ಕಾವ್ಯಗಳಲ್ಲಿ ಕಾಣುವ ಕನ್ನಡ ದೇಸಿ ವೃತ್ತಗಳು, ಕನ್ನಡದ ಆಡುನುಡಿ ಹಾಗೂ ಕನ್ನಡನಾಡಿನ ಜನರ ಹೃದಯಮಿಡಿತಗಳಲ್ಲಿ ಕನ್ನಡದ ಸ್ವತಂತ್ರ ಅಂಶಗಳನ್ನು ಗುರುತಿಸಬಹುದಾಗಿದೆ.

ಕನ್ನಡ ಸಾಹಿತ್ಯ ಚಂಪೂಪ್ರಕಾರದ ಶ್ರೇಷ್ಠ ಕೃತಿಗಳು ಮೂಡಿಬಂದ ಹತ್ತು–ಹನ್ನೊಂದನೆಯ ಶತಮಾನಗಳನ್ನು 'ವೀರಯುಗ'ವೆಂದು ಕರೆಯುವುದು ವಾಡಿಕೆಯಾಗಿದೆ. ವೀರ ಮನೋಭಾವ, ದಾನಶೀಲತೆ, ಔದಾರ್ಯ, ಛಲ ಮುಂತಾದ ಗುಣಗಳು ಆ ಕಾಲದಲ್ಲಿ ಜನರು ಎತ್ತಿಹಿಡಿಯುತ್ತಿದ್ದ ಜೀವನ ಮೌಲ್ಯಗಳಾಗಿದ್ದವು. ಪುರಾಣ ಪ್ರಸಿದ್ಧರಾದ ಕಾವ್ಯವಸ್ತುಗಳನ್ನು ಪಡೆದಿದ್ದರೂ ಪಂಪ, ರನ್ನ, ಪೊನ್ನ, ನಾಗಚಂದ್ರ ಮುಂತಾದ ಕವಿಗಳ ಕಾವ್ಯನಾಯಕ–ಪ್ರತಿನಾಯಕರು ಕನ್ನಡ ಜನತೆಯ ಆಗಿನ ಆದರ್ಶಗಳ ಸಾಕಾರವೆಂಬಂತೆ ತೋರುತ್ತಾರೆ. ಈ ಗುಣಗಳು ಈ ಕವಿಗಳು ಲೌಕಿಕವೆನ್ನಬಹುದಾದ ಕಾವ್ಯಗಳಲ್ಲಿಯೇ ನಾವು ಕಾಣುವುದು. ಪಂಪನು ಲೌಕಿಕ–ಧಾರ್ಮಿಕವೆಂಬ ಎರಡು ವಿಶಿಷ್ಟ ದೃಷ್ಟಿಯ ಕಾವ್ಯಗಳನ್ನು ರಚಿಸಿದ. ಇದಕ್ಕೆ ಕಾರಣವೆಂದರೆ ಅವನು ತನ್ನ ಜೀವನದಲ್ಲಿ ಒಂದು ಬಗೆಯ ಸಾಮರಸ್ಯವನ್ನು ಒಗ್ಗೂಡಿಸಿಕೊಂಡಿದ್ದುದು. ತ್ಯಾಗ–ಭೋಗವನ್ನು ಸಮರಸಗೊಳಿಸಿದುದಲ್ಲದೆ, ವೈದಿಕ ಜೈನದೃಷ್ಟಿಗಳೆರಡನ್ನೂ ಸಮನ್ವಯಗೊಂಡಿದ್ದವನು ಪಂಪ.[7] ಅವನ 'ಆದಿಪುರಾಣ'ವು ಅವನ ಧಾರ್ಮಿಕ ಆಶೋತ್ತರಗಳ ಪ್ರತೀಕವಾದರೆ, 'ವಿಕ್ರಮಾರ್ಜುನ ವಿಜಯ'ವು ಅವನ ಲೌಕಿಕತೆಯ ಸಂಕೇತ. ಅವನ ಲೌಕಿಕ ಕಾವ್ಯವೂ ವೈದಿಕ ಧರ್ಮದಲ್ಲಿ ಮಾನ್ಯವಾದ ವಸ್ತುವನ್ನು ಪಡೆದಿದೆ. ಅವನ ಲೌಕಿಕ ಕಾವ್ಯವು ಪರಂಪರಾಗತವಾಗಿ ಬಂದ ತನ್ನ ಧರ್ಮದ ಶಾಶ್ವತಾಂಶಗಳನ್ನು ನಿರೂಪಿಸಿದರೆ, ಅವನ ಲೌಕಿಕ ಕಾವ್ಯವು ಬದಲಾವಣೆಗೊಳಗಾಗಬಹುದಾದರೂ ಪ್ರಸ್ತುತದಲ್ಲಿ ಮಾನ್ಯವಾದ ಜೀವನ ಮೌಲ್ಯಗಳ ಪ್ರತಿಪಾದನೆಯಲ್ಲಿ ತೊಡಗಿದೆ. ಹೀಗೆ, ಚಂಪೂ ಸಂಪ್ರದಾಯದ ಶಿಖರವೆಂದು ಕರೆಯಬಹುದಾದ ಪಂಪನ ದೃಷ್ಟಿಯು ಲೌಕಿಕ–ಧಾರ್ಮಿಕ, ಭೋಗ–ತ್ಯಾಗ, ಶಾಶ್ವತ–ಶಾಶ್ವತವಲ್ಲದಿದ್ದರೂ ತತ್ಕಾಲಕ್ಕೆ ಶ್ರೇಷ್ಠ ಎನಿಸಿದ ಭಾವನೆಗಳ ಅಭಿವ್ಯಕ್ತಿಸ್ವರೂಪಗಳಾಗಿ ಅವನ ಕಾವ್ಯಗಳಲ್ಲಿ ಮೂಡಿಬಂದಿದೆ.

ಪಂಪನ ಈ ಮಾರ್ಗವನ್ನು ಇತರ ಕೆಲವು ಚಂಪೂ ಕವಿಗಳು ಅನುಸರಿಸಿ

ದರು. ಆದರೆ ಅವರದು ಸ್ವತಂತ್ರಮಾರ್ಗವಲ್ಲದ್ದರಿಂದ ಅವರ ನಡಿಗೆಯು ಸಂಪೂರ್ಣವಾಗಿ ಸ್ವತಂತ್ರವಾದದ್ದೂ ಅಲ್ಲ, ಪಂಪನದರಷ್ಟು ಶ್ರೇಷ್ಠವು ಅಲ್ಲ. ಪಂಪನಾದ ಮೇಲೆ ಬಂದ ಪೊನ್ನನ ಧಾರ್ಮಿಕ ಕೃತಿಯು ಮಾತ್ರವೇ ನಮಗೆ ದೊರಕಿರುವುದರಿಂದ ಅವನ ಇನ್ನೊಂದು ಕಾವ್ಯದ ಬಗ್ಗೆ ಖಚಿತವಾಗಿ ಏನೂ ಹೇಳಲು ಸಾಧ್ಯವಿಲ್ಲ. ಆದರೆ ರನ್ನನು ಶಕ್ತಿಯುತ ಕವಿಯಾಗಿದ್ದರೂ ಪಂಪನ ನೆರಳನ್ನೇ ಅನುಸರಿಸಿದವನು. ಪಂಪನು ಮೊದಲನೆಯ ತೀರ್ಥಂಕರನನ್ನು ಕುರಿತು ಪುರಾಣವನ್ನು ಬರೆದರೆ ಇವನು ಎರಡನೆಯ ತೀರ್ಥಂಕರನ ಚರಿತ್ರೆಯನ್ನು ರಚಿಸಿದ; ಪಂಪನು ಬರೆದ ಭಾರತಕಾವ್ಯದ ಹದಿಮೂರನೆಯ ಆಶ್ವಾಸವನ್ನೇ ಸುಂದರ ಕಾವ್ಯವನ್ನಾಗಿ ಮಾಡಿದ್ದು ರನ್ನನ ಪ್ರತಿಭೆಗೆ ಸಾಕ್ಷಿ; ಪಂಪನಂತೆಯೇ ಇವನೂ ಆಶ್ರಯದಾತನನ್ನೂ ತನ್ನ ಲೌಕಿಕ ಕಥಾನಾಯಕನೊಡನೆ ಸಮಾವೇಶಗೊಳಿಸಿದ; ಈ ಕಾವ್ಯದ ಪ್ರತಿನಾಯಕನ ಬಗ್ಗೆ ಪಂಪನಂತೆಯೇ ಸಹಾನುಭೂತಿ ಪರವಾದ ದೃಷ್ಟಿಯನ್ನು ರನ್ನನೂ ಹೊಂದಿದ್ದ. ಇವರಿಬ್ಬರ ಕಾವ್ಯಗಳ ಮೂಲದ್ರವ್ಯವೂ ಒಂದೇ, ಆದರೆ ಅವುಗಳಲ್ಲಿ ವೈಯಕ್ತಿಕತೆಯಿಂದಾದ ಸೂಕ್ಷ್ಮ ವ್ಯತ್ಯಾಸಗಳನ್ನು ಕಾಣಬಹುದು. ಪಂಪನ ಗಾಂಭೀರ್ಯವು 'ವಿಕ್ರಮಾರ್ಜುನ ವಿಜಯ'ದಲ್ಲಿ ಕಾಣಿಸಿದಂತೆಯೇ, ರನ್ನನ ಆವೇಶವು ಅವನ 'ಸಾಹಸಭೀಮ ವಿಜಯ'ದಲ್ಲಿ ಕಾಣಿಸುತ್ತದೆ; ಪಂಪನ ಸಂಗ್ರಹ ಪ್ರಜ್ಞೆಯಿಂದಾಗಿ ಭಾರತವೇ 'ವಿಕ್ರಮಾರ್ಜುನ ವಿಜಯ'ದಲ್ಲಿ ಮೈಕುಗ್ಗಿಸಿ ಅಡಗಿದೆ, ಆದರೆ ರನ್ನನದು ಸ್ವಲ್ಪ ವಿವರಪ್ರಿಯತೆಯಾದ್ದರಿಂದ ಪಂಪನ ಕಾವ್ಯದ ಒಂದು ಆಶ್ವಾಸದ ವಸ್ತುವನ್ನು ತನ್ನ ಇಡೀ ಕಾವ್ಯಕ್ಕೆ ಅಳವಡಿಸಿಕೊಂಡ. ಹೀಗೆ ಪಂಪನಿಂದ ಸ್ಥಾಪಿತವಾದ ಸಂಪ್ರದಾಯವು ಹೆಚ್ಚು ಕಡಿಮೆ ಸ್ವಸ್ವರೂಪದಿಂದ ರನ್ನನವರೆಗೂ ಉಳಿದು ಬಂದಿತು.

ಚಂಪೂಕಾವ್ಯ ಪರಂಪರೆಯಲ್ಲಿ ಮುಂದಿನ ಘಟ್ಟ ನಾಗಚಂದ್ರನದು. ಅವನು ತನ್ನನ್ನು 'ಅಭಿನವ ಪಂಪ'ನೆಂದು ಕರೆದುಕೊಂಡು ಸಂತೋಷಿಸಿದ್ದಾನೆ, ಪಂಪನಿಗೆ ಗೌರವವನ್ನು ತೋರಿಸಿದ್ದಾನೆ. ಆದರೆ ಪಂಪ-ಪೊನ್ನರೊಡನೆ ತನ್ನನ್ನು ಸೇರಿಸಿಕೊಂಡು ತಾವು ಮೂವರು 'ರತ್ನತ್ರಯ'ರೆಂದು ಹೇಳಿಕೊಂಡ ರನ್ನನಷ್ಟು ಪಂಪನ ನೆರಳಿನಲ್ಲಿ ನಡೆದವನಲ್ಲ ನಾಗಚಂದ್ರ. ಪಂಪ ರನ್ನರ ಲೌಕಿಕ-ಧಾರ್ಮಿಕ ಸಮನ್ವಯವೂ ನಾಗಚಂದ್ರನಲ್ಲಿಲ್ಲ. ಆ ಕವಿಗಳಂತೆ ಸ್ವಂತ ವಿಷಯವನ್ನು ಇವನು ಹೇಳಿಕೊಳ್ಳುವುದಿಲ್ಲ; ಅದರಂತೆ ಕಾವ್ಯ ನಾಯಕರ ಜೊತೆ ಆಶ್ರಯದಾತನನ್ನು ಹೋಲಿಸುವುದಿಲ್ಲ; (ಆಶ್ರಯದಾತನಿದ್ದರೆ ತಾನೇ ಹೋಲಿಸುವುದು!) ಏಕೆಂದರೆ ನಾಗಚಂದ್ರನ ದೃಷ್ಟಿ ಬಹುವಾಗಿ ಧಾರ್ಮಿಕ ದೃಷ್ಟಿ. ಅವನ ಕಾವ್ಯಗಳು 'ಮಲ್ಲಿನಾಥ ಪುರಾಣ' 'ಪಂಪ ರಾಮಾಯಣ'ಗಳಾದರೂ ಎರಡೂ ಒಂದೇ ದೃಷ್ಟಿಯಿಂದ ರಚಿತವಾದ ಕಾವ್ಯಗಳು. 'ಮಲ್ಲಿನಾಥ ಪುರಾಣ'ದಲ್ಲಿ ಹತ್ತೊಂಬತ್ತನೆಯ ತೀರ್ಥಂಕರನ ಚರಿತ್ರೆಯನ್ನು ಪಂಪನು 'ಆದಿಪುರಾಣ'ದಲ್ಲಿ ಚಿತ್ರಿಸಿದ ಮೊದಲ ತೀರ್ಥಂಕರನ ಚರಿತ್ರೆಯಂತೆಯೇ ನೇರವಾಗಿ ಚಿತ್ರಿಸುತ್ತಾನೆ. ಪ್ರಾಯಶಃ ಈ ದೃಷ್ಟಿಯಿಂದಲೇ ನಾಗಚಂದ್ರನು ತನ್ನನ್ನು 'ಅಭಿನವ ಪಂಪ'ನೆಂದು ಕರೆದು ಕೊಂಡಿರುವುದು. ಆದರೆ ಪಂಪರಾಮಾಯಣ'ವು 'ಪಂಪ

ಭಾರತ'ದಂತಹ ಕೃತಿಯಲ್ಲ. ಅದರ ಮತ್ತೊಂದು ಹೆಸರಾದ 'ರಾಮಚಂದ್ರ ಚರಿತ' ಪುರಾಣವೆಂಬುದೇ ಅದಕ್ಕೆ ಹೆಚ್ಚು ಸಮಂಜಸವಾಗಿದೆ. ಏಕೆಂದರೆ ಅಲ್ಲಿ ನಾಗಚಂದ್ರನು ಹೇಳಿರುವುದು ಬಲದೇವ-ವಾಸುದೇವರ ಕತೆಯನ್ನು-ಇದಕ್ಕಾಗಿ ಅವನು ಜೈನ ಪರಂಪರೆಯ ರಾಮಾಯಣ ವಸ್ತುವನ್ನೇ ಆರಿಸಿದ್ದಾನೆ. ಈ ದೃಷ್ಟಿ ವ್ಯತ್ಯಾಸಕ್ಕೆ ಪ್ರಾಯಶಃ ಕಾರಣವಿದೆ. ಪಂಪ-ರನ್ನರ ಜೈನಧರ್ಮದ ಬಗ್ಗೆ ಕನ್ನಡಿಗರಲ್ಲಿ ಹೆಚ್ಚು ಅರಿವನ್ನುಂಟುಮಾಡಲು ತಮ್ಮ ಧಾರ್ಮಿಕ ಕಾವ್ಯಗಳನ್ನು ಕನ್ನಡದಲ್ಲಿ ಬರೆದಿದ್ದರೂ ಆಗ ಜೈನಮತವು ಕನ್ನಡನಾಡಿನಲ್ಲಿ ಭದ್ರವಾಗಿ ತಳವೂರಿತ್ತು. ಆದ್ದರಿಂದ ಅವರು ವೈದಿಕ ಕಾವ್ಯವಸ್ತುವನ್ನು ತಮ್ಮ ಕಾವ್ಯಕ್ಕೆ ಅಳವಡಿಸಿ ಕೊಳ್ಳುವ ಔದಾರ್ಯವನ್ನು ತೋರಿಸಬಹುದಿತ್ತು. ಆದರೆ ನಾಗಚಂದ್ರನ ಕಾಲದಲ್ಲಿ ಕರ್ನಾಟಕದ ಜೈನಮತವು ಸ್ವಲ್ಪಮಟ್ಟಿಗೆ ಬೇರೆಯ ಮತಗಳ ಪೈಪೋಟಿಯನ್ನು ಎದುರಿಸಬೇಕಾಗಿತ್ತು. ಹಾಗಾಗಿ ಜೈನ ಮತವು ತನ್ನನ್ನು ತಾನು ಸಮರ್ಥಿಸಿಕೊಳ್ಳಬೇಕಾಯಿತು. ಅಲ್ಲದೆ ನಾಗಚಂದ್ರನದು ಹೆಚ್ಚಾಗಿ ಪಾರಲೌಕಿಕ ದೃಷ್ಟಿ; ಹೀಗೆ ತನ್ನ ಧರ್ಮದ ಪರಿಸ್ಥಿತಿ ಹಾಗೂ ವೈಯಕ್ತಿಕ ಮನೋಭಾವಗಳು ಸೇರಿ ಅವನ ಎರಡೂ ಕಾವ್ಯಗಳೂ ಧಾರ್ಮಿಕ ಕಾವ್ಯಗಳಾಗಿ ಪರಿಣಮಿಸಿದವು.

ಕರ್ನಾಟಕದಲ್ಲಿ ಜೈನಧರ್ಮದ ಪ್ರಭಾವವು ಈ ಕಾಲದಿಂದ ಇಳಿಮುಖವಾಗುತ್ತಿದ್ದುದರಲ್ಲಿ ಸಂಶಯವಿಲ್ಲ. ನಾಗಚಂದ್ರನ ಕಾಲದಲ್ಲಿ ಅದರ ಆರಂಭವಾಗಿ, ಮುಂದೆ ಹೆಚ್ಚಾಯಿತು. ಇದಕ್ಕೆ ಕಾರಣ ಶ್ರೀ ವೈಷ್ಣವ ಹಾಗೂ ವೀರಶೈವ ಮತಗಳು. ನಯಸೇನ ಮತ್ತು ಬ್ರಹ್ಮಶಿವರು ಈ ಸಮಸ್ಯೆಯನ್ನು ವಿವಿಧವೂ ವೈಯಕ್ತಿಕವೂ ಆದ ದೃಷ್ಟಿಕೋನಗಳಿಂದ ನೋಡಿ ತಮ್ಮ ಬರವಣಿಗೆಗಳಲ್ಲಿ ತೋರಿಸಿದ್ದಾರೆ. ಜೈನಧರ್ಮವಾಗಲೀ ಮತ್ತಾವುದೇ ಧರ್ಮವಾಗಲೀ ಸಮಾಜದಲ್ಲಿ ಬೇರೂರಬೇಕಾದರೆ ಸಾಮಾನ್ಯರನ್ನು ತಲುಪಿ ಅವರನ್ನಾವರಿಸುವುದು ಅವಶ್ಯಕ. ಅದ್ದರಿಂದ ಧರ್ಮಪ್ರಸಾರದ ದೃಷ್ಟಿಯು ಹೆಚ್ಚಾಯಿತು; ಬರವಣಿಗೆಯಲ್ಲೂ ಇದರ ಪ್ರತಿಬಿಂಬವನ್ನು ನಾವು ಕಾಣಬಹುದು. ಧರ್ಮಪ್ರಸಾರದ ದೃಷ್ಟಿಯಿಂದ ಬರೆಯುವ ಬರೆಹವು ಹೆಚ್ಚು ಜನರಿಗೆ ಅರ್ಥವಾಗುವಂತಿರ ಬೇಕೆಂಬುದನ್ನು ನಯಸೇನನು ತಿಳಿದು ತನ್ನ 'ಧರ್ಮಾಮೃತ'ವನ್ನು ಕತೆಗಳಿಂದ ತುಂಬಿ ಜೈನಮತದ ಶ್ರೇಷ್ಠತೆಯನ್ನು ಈ ಕತೆಗಳ ಮೂಲಕವೇ ಹೇಳಿದ. ಅಲ್ಲಲ್ಲಿ ಅನ್ಯಮತ ವಿಡಂಬನೆಯು ಕಾಣಿಸಿದರೂ ಅವು ನವುರಾಗಿತ್ತು, ಆದರೆ ಬ್ರಹ್ಮಶಿವನು ಒಂದು ದೃಷ್ಟಿಯಲ್ಲಿ ಕೇವಲ ಪದ್ಯರಚನಕಾರ; ಅವನಲ್ಲಿ ಪ್ರತಿಭೆಯಿಲ್ಲ, ಇರುವುದು ಸ್ವಮತ ಸಮರ್ಥನೆಯ ಆವೇಶ. ನಯಸೇನನ ಕಾಲಕ್ಕಿಂತ ಇವನ ಕಾಲದಲ್ಲಿ ಜೈನ ಮತಕ್ಕೆ ಹೆಚ್ಚು ತೀವ್ರವಾದ ಸವಾಲು ವೀರಶೈವ ಮತದಿಂದ ಉಂಟಾದಾಗ ಬ್ರಹ್ಮಶಿವನ ಆವೇಶ ರೋಷಗಳು ಕೇವಲ ಖಂಡನೆಯ ಸ್ವರೂಪವನ್ನು ತಾಳಿತು. ಅದು ಎಷ್ಟರಮಟ್ಟಗಿದೆಯೆಂದರೆ ಸ್ವಮತ ಸಮರ್ಥನೆ. ಪರಮತ ದೂಷಣೆಗಳನ್ನು ಸಾಹಿತ್ಯದ ಚೌಕಟ್ಟಿನಲ್ಲಿ ಸೇರಿಸುವ ತಾಳ್ಮೆಯೂ ಅವನಲ್ಲಿ ಉಳಿಯದೆ ಅವರಿವರನ್ನು ಬೈಯುವುದರಲ್ಲಿಯೇ ಅವನು ತೊಡಗುತ್ತಾನೆ. ಅವನ 'ಸಮಯಪರೀಕ್ಷೆ'ಯು ಪದ್ಯ

ರೂಪದಲ್ಲಿದೆಯೆಂಬ ಕಾರಣಕ್ಕಾಗಿ ಅದನ್ನು ಸಾಹಿತ್ಯಚರಿತ್ರೆಯಲ್ಲಿ ಸೇರಿಸಬೇಕೇ ವಿನಾ ಅದರಲ್ಲಿ ಮತ್ತಾವುದೇ ಸಾಹಿತ್ಯಾಂಶವಿಲ್ಲ.

ಚಂಪೂ ಕಾವ್ಯ ಪರಂಪರೆಯಲ್ಲಿ ಜೈನಕವಿಗಳದು ವಿಶಿಷ್ಟವಾದ ಪಾತ್ರ ಆದ್ದರಿಂದಲೇ ಜೈನಮತದ ಸ್ಥಾನಮಾನಗಳಿಗೂ ಚಂಪೂ ಕಾವ್ಯಗಳಿಗೂ ಇರುವಂತಹ ಸಂಬಂಧವು ಬೇರೆಡೆಯಲ್ಲಿ ಕಾಣುವುದಿಲ್ಲ. ಹಲವಾರು ಬ್ರಾಹ್ಮಣ ಕವಿಗಳೂ ವೀರಶೈವ ಕವಿಗಳೂ ಚಂಪೂ ಕಾವ್ಯಗಳನ್ನು ರಚಿಸಿದ್ದಾರೆ. ಆದರೆ ಎರಡೂ ಮತದ ಕವಿಗಳ ಚಂಪೂ ಕಾವ್ಯದಲ್ಲಿ ಮೇಲೆದ್ದು ಕಾಣುವಂತಹ ಯಾವುದೇ ಬಗೆಯ ಬೆಳವಣಿಗೆ ಯನ್ನು ಕಾಣಲಾರೆವು. ಜೈನಕವಿಗಳು ಕನ್ನಡ ಕಾವ್ಯ ರಚನೆಯನ್ನು ಪ್ರಾರಂಭಿಸಿದುದು (ಅದರೊಡನೆ ಕಾವ್ಯರಚನೆಯೇ ಪ್ರಾರಂಭವಾದುದು) ಚಂಪೂ ಪ್ರಕಾರದಿಂದ. ಜನಸಾಮಾನ್ಯರನ್ನು ತಮ್ಮ ಭಾವನೆ–ಧಾರ್ಮಿಕಾಂಶಗಳು ತಲುಪಬೇಕೆಂಬ ಉದ್ದೇಶ ದಿಂದಲೇ ಜೈನಕವಿಗಳು ಕನ್ನಡದಲ್ಲಿ ಬರೆದರು. ಆದರೆ ಆಗ ಬಳಕೆಯಲ್ಲಿದ್ದುದು ಹಳಗನ್ನಡ ಭಾಷೆ, ಬರೆಹದಲ್ಲಿ ಉಪಯೋಗದಲ್ಲಿದ್ದುದು ಸಂಸ್ಕೃತದಿಂದ ಕೂಡಿದ ಕನ್ನಡ. ಕಾವ್ಯ ವಸ್ತು, ಕಾವ್ಯ ಸ್ವರೂಪ, ಭಾಷೆ, ಛಂದಸ್ಸು. ಈ ಎಲ್ಲ ದೃಷ್ಟಿಗಳಿಂದಲೂ ಈ ಆದ್ಯರಿಗೆ ಸಂಸ್ಕೃತದ್ದೇ ಮಾದರಿ. ಕನ್ನಡದಲ್ಲಿ ಕಾವ್ಯರಚನೆಗೆ ತೊಡಗಿದ ಈ ಕಾಲದ ಜೈನ ಕವಿಗಳು ಸಂಸ್ಕೃತ ಪಂಡಿತರೂ ಆದ್ದರಿಂದ ಅವರ ಶೈಲಿಯು ಚಂಪೂ ಕೃತಿಗಳಲ್ಲಿ ಕಾಣುವಂತೆ ಪ್ರೌಢವಾಯಿತು. ಸಮರ್ಥಕವಿಗಳು ಅದರಲ್ಲಿಯೂ ಕನ್ನಡತನವನ್ನು ತಂದರೆಂಬುದನ್ನೂ ನಾವು ಮರೆಯಬಾರದು. ಕನ್ನಡ ನಾಡಿನಲ್ಲಿ ಜೈನಮತದ ಪ್ರಾಬಲ್ಯವು ಮುಗಿಯುವ ವೇಳೆಗೆ ಶ್ರೇಷ್ಠ ಚಂಪೂ ಕಾವ್ಯ ರಚನೆಯೂ ಇಳಿಮುಖವಾಗಹತ್ತಿತು. ಈ ಹೊತ್ತಿಗೆ ಕನ್ನಡ ಭಾಷೆಯ ಬೆಳವಣಿಗೆಯಲ್ಲಿಯೂ ಒಂದು ಮಹತ್ವದ ಘಟ್ಟವು ಮುಗಿದಿತ್ತು. ಹಳಗನ್ನಡವು ನಡುಗನ್ನಡವಾಗಿ ಮಾರ್ಪಾಟು ಹೊಂದುತ್ತಲಿತ್ತು. ಹೀಗಾಗಿ ಜೈನಮತ–ಹಳಗನ್ನಡ–ಚಂಪೂ ಇವುಗಳು ಪರಸ್ಪರ ಅಭಿನ್ನವೆಂಬಂತೆ ಆದವು. ಅದರಲ್ಲೂ ಹಳಗನ್ನಡಕ್ಕೂ ಚಂಪೂವಿಗೂ ಅನನ್ಯ ನಂಟು. ಈಗಲೂ ಚಂಪೂ ರೂಪದಲ್ಲಿ ಬರೆಯುವುದೆಂದರೆ ಕಂದ ವೃತ್ತಗಳಲ್ಲಿ ಹಳಗನ್ನಡದಲ್ಲಿ ಬರೆಯುವುದೆಂದೇ ಅರ್ಥವೆಂಬಂತಾಗಿದೆ. ಆದರೆ ಕನ್ನಡ ಸಾಹಿತ್ಯದ ವೀರಯುಗ ಮುಗಿದು ವಚನಕಾರರಿಂದ ಪ್ರಾರಂಭವಾದ ಈಚಿನ ಕಾಲದಲ್ಲಿ ಚಂಪೂ ಪ್ರಕಾರದಲ್ಲಿ ಅತಿಶ್ರೇಷ್ಠ ಕೃತಿಗಳು ಬರಲಿಲ್ಲ: ಅಲ್ಲದೆ ಜೈನೇತರ ಕವಿಗಳಾದ ಮೊದಲನೆಯ ನಾಗವರ್ಮ, ದುರ್ಗಸಿಂಹ, ರುದ್ರಭಟ್ಟ ಮುಂತಾದವರು ಸಂಸ್ಕೃತ ಮಯವಾಗಿ ಪಂಡಿತಪ್ರಿಯವಾದ ಕಾವ್ಯರಚನೆಗಾಗಿಯೇ ಚಂಪೂ ಪ್ರಕಾರವನ್ನು ಆರಿಸಿಕೊಂಡರೆನ್ನಿಸುತ್ತದೆ. ಆದರೆ ಅದಕ್ಕಿಂತ ಮುಖ್ಯವಾದ ಅಂಶವೆಂದರೆ, ಈ ಕವಿಗಳಿಗೆ ಸ್ವತಂತ್ರವಾದ ದಾರಿಯನ್ನು ಹಾಕಿಕೊಡುವ ಚೈತನ್ಯವಿಲ್ಲದ್ದರಿಂದ ಅವರೆಗೆ ಬಳಕೆಯಲ್ಲಿದ್ದ ಕಾವ್ಯದ ಹಾದಿಯನ್ನೇ ತುಳಿದರು ಎನ್ನಬಹುದು. ಕನ್ನಡ ಸಾಹಿತ್ಯದಲ್ಲಿ ಚಂಪೂ ಪ್ರಕಾರದಲ್ಲಿ ಶ್ರೇಷ್ಠ ಸ್ಥಾನವನ್ನು ಪಡೆದ ಬ್ರಾಹ್ಮಣ ಕವಿಗಳೇ ಇಲ್ಲ. ಏಕೆಂದರೆ ಇದು ಜೈನಕ್ಕೆ ಹೊಂದಿಕೊಂಡ ಸಂಪ್ರದಾಯ.

ವೀರಶೈವ ಕವಿಗಳ ವಿಷಯದಲ್ಲಿಯೂ ಇದು ನಿಜ. ಇವರಲ್ಲಿ ಹರಿಹರನೇ ಅತ್ಯಂತ ಶ್ರೇಷ್ಠನೂ ಮೊತ್ತಮೊದಲಿಗನೂ ಆದ ಚಂಪೂ ಕವಿ. ಹರಿಹರನ 'ಗಿರಿಜಾ ಕಲ್ಯಾಣ'ವು ಉತ್ತಮವಾದರೂ ಅದು ಈ ಕವಿಯು ಅತ್ಯಂತ ಶ್ರೇಷ್ಠ ಸಾಧನೆಯಲ್ಲ. ಅವನ ಪ್ರತಿಭೆಯು ಪೂರ್ಣವಾಗಿ ಅರಳಿ ಹೊಸ ಮಾರ್ಗವೊಂದಕ್ಕೆ ಆರಂಭಿಸಿದುದು ರಗಳೆಗಳ ಮೂಲಕ. ರಗಳೆಗಳನ್ನು ಬರೆದಾಗ ಜನರು ಪಂಡಿತರು ತನ್ನನ್ನು 'ರಗಳೆಯ ಕವಿ' ಎಂದು ಹಾಸ್ಯ ಮಾಡಿದ್ದಕ್ಕಾಗಿ ತಾನು ಪಂಡಿತಮಾನ್ಯವಾಗುವಂತಹ ಕಾವ್ಯವನ್ನು ಬರೆಯಬಲ್ಲೆನೆಂದು ತೋರಿಸಲು ಹರಿಹರನು 'ಗಿರಿಜಾ ಕಲ್ಯಾಣ'ವನ್ನು ಬರೆದನೆಂಬ ದಂತಕತೆಯ ಬಗ್ಗೆ ನಾವಾಗಲೇ ಪ್ರಸ್ತಾಪಿಸಿದ್ದೇವೆ. ಈ ಕತೆಯು ಎಷ್ಟೇ ಕಲ್ಪನೆಯಿಂದ ಕೂಡಿರಲಿ, ಚಂಪೂವಿಗೂ ಪಾಂಡಿತ್ಯಕ್ಕೂ ಇರುವ ಸಂಬಂಧವು ಆ ಕಾಲಕ್ಕಾಗಲೇ ನಿಶ್ಚಿತವಾಗಿ ಹೋಗಿದ್ದುದು ಸ್ಪಷ್ಟವಾಗುತ್ತದೆ. ಹರಿಹರನ ಕಾಲಕ್ಕೆ ಪಾಂಡಿತ್ಯಪೂರ್ಣವೆನ್ನುವ ಭಾಷೆ ಪಂಪನ ಕಾಲಕ್ಕೆ ಹಾಗಿರಲಿಲ್ಲ ಎನ್ನುವುದನ್ನು ನಾವು ಮರೆಯುವಂತಿಲ್ಲ, ಹಾಡುಗಬ್ಬಗಳ ಭೋರ್ಗರೆವ ಪ್ರವಾಹದಲ್ಲಿ ಮುಂದೆ ರಚಿತವಾದ ಚಂಪೂ ಕೃತಿಗಳ ಮಟ್ಟ ತೀರ ಸಾಮಾನ್ಯವಾದವು. ಹದಿನೇಳನೆಯ ಶತಮಾನದಲ್ಲಿ ಬಂದ ಷಡಕ್ಷರನು ಅಸೀಮ ಪಂಡಿತನಾದದ್ದರಿಂದ ಅವನು ಚಂಪೂ ಕಾವ್ಯಗಳನ್ನು ರಚಿಸಿದ. ಅವನ ಪಾಂಡಿತ್ಯಕ್ಕೆ ಕವಿಸಮಯಗಳಿಗೆ, ವರ್ಣನೆಗಳ ಮಹಾಪೂರಕ್ಕೆ ಮಾರು ಹೋಗಬೇಕೇ ವಿನಾ ಅವನ ಕಾವ್ಯಗಳು ಶ್ರೇಷ್ಠವಾದ ಚಂಪೂಗಳ ಸಾಲಿನಲ್ಲಿ ಮೆರೆಯುವಂತಹವೇನಲ್ಲ. ಈ ಬಗೆಯಲ್ಲಿ ಚಂಪೂ ಸಂಪ್ರದಾಯವನ್ನು, ಅದರಲ್ಲಾದ ಬದಲಾವಣೆಗಳನ್ನು ಜೈನಮತದ ಹಿನ್ನೆಲೆಯಲ್ಲಿಯೇ ನೋಡ ಬೇಕು. ಬ್ರಾಹ್ಮಣ-ವೀರಶೈವ ಕವಿಗಳಿಗೆ ಈ ಪ್ರಕಾರವು ಪ್ರಾಸಂಗಿಕವಾಗಿ ದೊರೆತದ್ದು, ಅವರಲ್ಲಿ ಚಂಪೂ ಕಾವ್ಯಗಳನ್ನು ಬರೆದವರು ಯಾರೂ ಅದರಿಂದಲೇ ಮೊದಲ ಶ್ರೇಣಿಯ ಕವಿಗಳೆನ್ನಿಸಿ ಕೊಂಡಿಲ್ಲ.

ವಸ್ತು

ಚಂಪೂಕವಿಗಳ ದೃಷ್ಟಿಗನುಗುಣವಾಗಿ ಅವರ ಕಾವ್ಯವಸ್ತುವೂ ವ್ಯತ್ಯಾಸಗೊಂಡಿತು. ಪಂಪನ ಸಮನ್ವಯ ದೃಷ್ಟಿಯಿಂದಾಗಿ ಅವನ ಕಾವ್ಯಗಳ ವಸ್ತುವು ಒಂದರಲ್ಲಿ ಧಾರ್ಮಿಕವಾಯಿತು, ಎಂದರೆ ಜೈನ ಪುರಾಣದ ಕತೆಯಾಯಿತು; ಮತ್ತೊಂದರಲ್ಲಿ ವೈದಿಕರಿಗೆ ಮಾನ್ಯವಾದ ಕತೆಯೇ ಲೌಕಿಕವಾಯಿತು.; ಎಲ್ಲಿಯವರೆಗೆ ಕೇವಲ ಮತಪ್ರಸಾರವೇ ಈ ಕವಿಗಳ ಉದ್ದೇಶವಾಗಿರಲಿಲ್ಲವೋ ಅಲ್ಲಿಯವರೆಗೂ ಈ ಲೌಕಿಕ-ಧಾರ್ಮಿಕ ಕಾವ್ಯ ಸಂಪ್ರದಾಯವು ಮುಂದುವರೆಯಿತು. ಆದರೆ ಅನಿವಾರ್ಯ ಪರಿಸ್ಥಿತಿಯಿಂದಾಗಿ ಮತಪ್ರಸಾರಕ್ಕೆ ಹೆಚ್ಚು ಒತ್ತನ್ನು ನೀಡಬೇಕಾದಾಗ ನಾಗಚಂದ್ರನಲ್ಲಿಯಂತೆ ಲೌಕಿಕ-ಧಾರ್ಮಿಕವೆಂಬ ಭಿನ್ನತೆಯು ಹೋಗಿ ಧಾರ್ಮಿಕ ವಸ್ತುವೇ ಉಳಿಯಿತು. ನೇಮಿಚಂದ್ರನಂತಹ ಕವಿಗಳು ಈ ವಸ್ತುಗಳೆರಡನ್ನೂ ಬಳಸಿಕೊಂಡು ಕಾವ್ಯರಚನೆ ಮಾಡಿರುವುದು ನಿಜವಾದರೂ ಅವರದು ಕೇವಲ ಸಂಪ್ರದಾಯ ಪ್ರಿಯತೆಯೆಂಬುದು ಅವರ ಕಾವ್ಯಗಳನ್ನೋದಿದಾಗ ಮನವರಿಕೆಯಾಗುತ್ತದೆ.

ಚಂಪೂ ಸಂಪ್ರದಾಯವು ನಯಸೇನನಲ್ಲಿ ಮಹತ್ವದ ಘಟ್ಟವನ್ನು ತಲುಪಿತೆನ್ನ ಬಹುದು. ಇವನು ಮುನಿಕುಲಲಲಾಮನಾಗಿದ್ದುದರಿಂದ ಜೈನಮತ ಪ್ರಸಾರದ ಬಗ್ಗೆ ಹೆಚ್ಚಿನ ಜವಾಬ್ದಾರಿಯು ಈ ಕವಿಯಾದಾಗಿತ್ತು. ಆದ್ದರಿಂದಲೇ ಜೈನಮತದ ಹಾಗೂ ಅದರ ವಿವಿಧ ತತ್ವಗಳ ಶ್ರೇಷ್ಠತೆಯನ್ನು ಸಾರುವುದೇ ಏಕೈಕ ಉದ್ದೇಶವನ್ನಾಗಿ ಹೊಂದಿ ನಯಸೇನನು 'ಧರ್ಮಾಮೃತ'ವನ್ನು ಬರೆದನು. ಜನರಿಗೆ ಜೈನಮತ ತತ್ವಗಳನ್ನು ಬೋಧಿಸಲು ಕಥೆಯ ಮಾಧ್ಯಮಕ್ಕಿಂತ ಪರಿಣಾಮಕಾರಿಯಾದುದು ಬೇರೆಯದಿಲ್ಲ ವೆಂಬುದನ್ನು ಮನಗಂಡು ಇವನು ಒಂದೊಂದು ತತ್ವದ ಶ್ರೇಷ್ಠತೆಯನ್ನು ಪ್ರತಿಪಾದಿಸುವುದಕ್ಕೆ ಒಂದೊಂದು ಕತೆಯನ್ನು ರಚನೆ ಮಾಡಿದ್ದಾನೆ. ಉತ್ತಮ ಕವಿಯಾದುದರಿಂದ ನಯಸೇನನ ಕಾವ್ಯವು ಮತೀಯ ಅಂಶಗಳಿಂದ ಕಿಕ್ಕಿರಿದು ಬೇಸರ ಹಿಡಿಸದೆ ರಂಜಕವಾದ ಕತೆಗಳ ಸಂಗ್ರಹವಾಗಿದೆ. ಅವುಗಳಲ್ಲಿ ತುಂಬ ನವುರಾಗಿ ಆ ಕಾಲದಲ್ಲಿ ಜೈನಧರ್ಮಕ್ಕೆ ಪ್ರತಿಸ್ಪರ್ಧಿಗಳಾಗಿದ್ದ ಮತಗಳನ್ನು ಪರಿಹಾಸ್ಯ ಮಾಡಿದ್ದಾನೆ. ಅವನು ಮುನಿಯಾಗಿದ್ದರೂ ಅವನ ಲೋಕಾನುಭವವು ಅಪಾರ ವಾಗಿತ್ತು. ಹಾಗಾಗಿ ತನ್ನ ಪಾತ್ರರಚನೆ ಹಾಗೂ ಪ್ರಸಂಗ ನಿರೂಪಣೆಗಳ ಮೂಲಕ ಇತರರನ್ನು ಜೈನರೆಡೆಗೆ ಆಕರ್ಷಿಸುವ ಉದ್ದೇಶದಿಂದ ಕಾವ್ಯ ರಚನೆಯನ್ನು ಮಾಡಿದನು. ಅವನು ತನ್ನ ಕಾವ್ಯೋದ್ದೇಶವನ್ನು ಸ್ಪಷ್ಟವಾಗಿ ಅವನು ಮುಂದಿರಿಸಿ ಕೊಂಡಿದ್ದಾನೆ:

ಜಿನಮತದೊಳೆನಿತು ಸಾರಂ ಅ
ದನಿತುಂ ಲೇಸಾಗಿ ತೋರ್ಪುದೀ ಕೃತಿಯೊಳ್ ಅದೆಂ
ತೆನೆ ಕನ್ನಡಿಯೊಳಗೆ ಜಲ
ಕ್ಕನೆ ತೋರ್ಪವೊಲಿಭದ ರೂಪು ವಿಸ್ತರದಿಂದಂ (ಧರ್ಮಾ – ೧)

(ಜಿನಮತದಲ್ಲಿರುವ ಸಾರವೆಲ್ಲವನ್ನೂ ತನ್ನ ಕೃತಿಯು ಕನ್ನಡಿಯಲ್ಲಿ ಆನೆಯನ್ನು ಅಡಗಿಸಿದಂತೆ ಪ್ರತಿಬಿಂಬಿಸುತ್ತದೆ.) ಈ ಪದ್ಯದ ಪ್ರಶಂಸೆಯು ಸ್ವಲ್ಪ ಮಟ್ಟಿಗೆ ನಿಜವಾದರೂ ನಮಗೆ ಬೇಕಾದುದು ಈ ವಿಷಯವಲ್ಲ. ಈಗ ಜೈನ ಧರ್ಮದ ಸಾರವನ್ನು ಜನತೆಗೆ ತೋರಿಸಿ ಅವರನ್ನು ಅದರೆಡೆಗೆ ಒಲಿಸಿಕೊಳ್ಳುವುದೇ ಇವನ ಆಸೆ. ತನ್ನ ಕೃತಿಯಲ್ಲಿ ಕಾಣುವುದಕ್ಕಿಂತಲೂ ಜೈನ ಧರ್ಮವು ಅಗಾಧವಾದದ್ದು (ಕನ್ನಡಿಯ ಪ್ರತಿಬಿಂಬಕ್ಕಿಂತಲೂ ಮೂಲದ ಆನೆಯಿರುವಂತೆ) ಎಂಬ ಭಾವನೆಯನ್ನು ಜನರಲ್ಲಿ ಉಂಟುಮಾಡುವುದೇ ಇವನ ಬಯಕೆಯಾಗಿತ್ತೆಂಬುದು ಇದರಿಂದ ವಿದಿತವಾಗುತ್ತದೆ. ತನ್ನ ಮಂಗಳ ಪದ್ಯದಲ್ಲಿಯೂ ಈ ಆಸೆಯನ್ನು ಕವಿ ತೋಡಿಕೊಂಡಿದ್ದಾನೆ. "ಜಿನಧರ್ಮಂ ಸಕಲಾವನೀತಳಮಂ ಪರ್ವಿಕ್ಕೆ" ಎಂಬ ಮಾತಿನಂತೆ ಜೈನಮತವು ಪ್ರಪಂಚದಲ್ಲೆಲ್ಲ ಹರಡುವುದೇ ತನ್ನ ಆಸೆ, ಅದಕ್ಕಾಗಿ ಪ್ರಯತ್ನಿಸುವುದರಲ್ಲಿಯೇ ತನ್ನ ಸಾರ್ಥಕತೆಯೆಂಬುದು ಇಡೀ ಕಾವ್ಯಕ್ಕೆ ಆತನು ನೀಡುವ ಸಮರ್ಥನೆ.

ತನ್ನ ಮತವು ಇತರ ಮತಗಳಿಂದ ತೀವ್ರ ಪೈಪೋಟಿಯನ್ನು ಎದುರಿಸಿದಾಗ ಬ್ರಹ್ಮಶಿವನು ತನ್ನ ಕಾವ್ಯ(?)ದ ಮೂಲಕ ಹೋರಾಡುತ್ತಾನೆ. ಅವನ ಪದ್ಯಗಳ

ಉದ್ದೇಶ ಜೈನಮತದ ಶ್ರೇಷ್ಠತೆಯನ್ನು ಘೋಷಣೆಗಳಿಂದ ಕೂಗಿ ಹೇಳುವುದು. ಆಗಿನ ಸ್ಥಿತಿಯಲ್ಲಿ ಇದು ಅನಿವಾರ್ಯವೆನಿಸಿತ್ತವನಿಗೆ, ಇಲ್ಲದಿದ್ದರೆ ಅವನೂ ತನ್ನ ಅಲ್ಪಸ್ವಲ್ಪ ಕಾವ್ಯ ಪ್ರತಿಭೆಯನ್ನು ಯಾವುದಾದರೊಂದು ಕತೆಯನ್ನು ಹೇಳುವುದರ ಮೂಲಕ ವಾಗಿಯೇ ಹೊಮ್ಮಿಸುತ್ತಿದ್ದನೇನೋ, ತಾನು ನಂಬಿರುವ ಮತವು ನಿಜವಾಗಿಯೂ ಶ್ರೇಷ್ಠವೆಂದು ಸಾರಲು ಅವನು ತನ್ನ ಅನುಭವವನ್ನು ಹೇಳಿಕೊಳ್ಳುತ್ತಾನೆ. ತಾನು ಬೇರೆ ಬೇರೆ ಮತಗಳನ್ನವಲಂಬಿಸಿದುದಾಗಿಯೂ ಅಲ್ಲೆಲ್ಲೂ ಮನಃಶಾಂತಿ ದೊರೆಯದೆ ಜೈನ ಮತಕ್ಕೆ ಮತ್ತೆ ಬಂದುದಾಗಿಯೂ ಅದೇ ಎಲ್ಲ ಮತಗಳಲ್ಲಿ ಶ್ರೇಷ್ಠವೆಂಬುದಾಗಿಯೂ ಅವನು ಉದ್ಘೋಷಿಸುತ್ತಾನೆ. ಅವನ ಉದ್ದೇಶವು ಘೋಷಣೆ-ಭಾಷಣಗಳಿಂದ ಜೈನಧರ್ಮದ ಶ್ರೇಷ್ಠತೆಯನ್ನು ಸಾರಿ ಹೇಳುವುದಾದ್ದರಿಂದ ಬರಿಯ ಹೇಳಿಕೆ-ಬೈಗುಳಗಳೇ ಅವನ ಕಾವ್ಯವಸ್ತುವಾಗಿದೆ. ಅನ್ಯಮತೀಯರ ಒಂದೊಂದು ನಂಬಿಕೆ, ಒಂದೊದು ಸಂಪ್ರದಾಯ, ಒಂದೊಂದು ಆಚರಣೆಯನ್ನೂ ಅವನು ವಿಶ್ಲೇಷಿಸಿ ತನ್ನ ತೀರ್ಮಾನವನ್ನು ಹೇಳುತ್ತಾನೆ.

ಜನ್ನನು 'ಅನಂತನಾಥಪುರಾಣ' ಹಾಗೂ 'ಯಶೋಧರ ಚರಿತೆ'ಗಳಲ್ಲಿ ನೇರವಾದ ಮತಪ್ರಸಾರಕಾರ್ಯಕ್ಕೆ ಕೈಹಾಕಲಿಲ್ಲ: ಅವನ ಆಂತರ್ಯದಲ್ಲಿ ಈ ಉದ್ದೇಶವಿದ್ದಿರಬಹುದು. ಅಲ್ಲದೆ ಅವನು ಪ್ರತಿಭಾವಂತನಾದ ಕವಿ. ಆದ್ದರಿಂದಲೇ ಅವನ ಮನಸ್ಸನ್ನು ಮಾನವಜೀವನದ ಸಮಸ್ಯೆಗಳು ಅದರಲ್ಲಿಯೂ ಕಾಮ-ಪ್ರೇಮಗಳದ್ದು ಆವರಿಸಿಬಿಟ್ಟವು. ಸ್ಪರ್ಧೆಯಲ್ಲಿ ನೇರವಾಗಿ ಪಾಲ್ಗೊಳ್ಳುವ ಅನಿವಾರ್ಯ ಕಾಲವಲ್ಲದ್ದರಿಂದ ಕವಿಯು ತನ್ನ ಪಾಡಿಗೆ ತಾನು ತನಗೆ ಪ್ರಿಯವಾದ ಧಾರ್ಮಿಕ ಕತೆಯ ನಿರೂಪಣೆಯಲ್ಲಿ ತೊಡಗುತ್ತಾನೆ.

ಬ್ರಾಹ್ಮಣ-ವೀರಶೈವ ಕವಿಗಳಿಗೆ ಈ ಪ್ರಕಾರವು ಪ್ರಾಸಂಗಿಕವಾದ್ದರಿಂದ ಆ ಕವಿಗಳ ಚಂಪೂ ಕಾವ್ಯಗಳ ವಸ್ತುವಿನಲ್ಲಿ ಯಾವುದೇ ನಿಶ್ಚಿತ ನಿಲವನ್ನು ಕಾಣಲಾಗುವುದಿಲ್ಲ. ಮೊದಲನೆಯ ನಾಗವರ್ಮನು ಸಂಸ್ಕೃತದಲ್ಲಿನ ಗದ್ಯ ಕೃತಿಯನ್ನು ಚಂಪೂರೂಪಕ್ಕೆ ತಿರುಗಿಸಿದುದಕ್ಕೆ ಕಾರಣ ಆ ಕಾಲದ ಪ್ರಚಲಿತ ಕಾವ್ಯಪ್ರಕಾರವು ಚಂಪೂ ಆಗಿದ್ದುದು. ಅದೊಂದು ರಮಣೀಯ ಪ್ರಣಯ ಕಾವ್ಯ. ದುರ್ಗಸಿಂಹನ 'ಪಂಚತಂತ್ರ'ವೂ ವಸುಭಾಗಭಟ್ಟನ ಕಾವ್ಯದ ಅನುವಾದ. ಚಿಕ್ಕವರಿಗೂ ಅರ್ಥವಾಗುವ ಕತೆಗಳು ಇವು-ಉದ್ದೇಶ ರಾಜನೀತಿಯ ಉಪದೇಶ. ಹರಿಹರ-ಸುರಂಗ-ಷಡಕ್ಷರದೇವನೇ ಮುಂತಾದ ಕವಿಗಳು ತಮ್ಮ ನಿಲುಮೆಗೆ ಅನುಗುಣವಾಗಿ ಶಿವಪರವಾದ ವಸ್ತುವನ್ನು ತಮ್ಮ ಕಾವ್ಯಗಳಲ್ಲಿ ಅಳವಡಿಸಿಕೊಂಡರು. ವೀರಶೈವವೂ ಹರಿಹರನ ಕಾಲಕ್ಕೆ ಹಿಂದೆ ಹೊಸದಾಗಿ ಪೊರೆಬಿಟ್ಟಿದ್ದರಿಂದ ವೀರಶೈವ ಕವಿಗಳ ಕಾವ್ಯೋದ್ದೇಶವೂ ಮತಪ್ರಸಾರವಾಗಿತ್ತು. ಹರಿಹರನು ತನ್ನ ಮಾರ್ಗವನ್ನು ಕಂಡುಕೊಳ್ಳುವುದಕ್ಕೆ ಮುಂಚೆ ಆ ಕಾಲಕ್ಕೆ ಸ್ಥಿರವಾಗಿದ್ದ ಚಂಪೂ ಪ್ರಕಾರದಲ್ಲಿ ಕಾವ್ಯರಚನೆಗೆ ತೊಡಗಿದ್ದು ಸಹಜವಾಗಿತ್ತು.

ಭಾಷೆ-ಶೈಲಿ

ಚಂಪೂ ಕಾವ್ಯಪ್ರಕಾರದ ಭಾಷೆಯೆಂದರೆ ಒಟ್ಟಾರೆ ಹಳಗನ್ನಡವೆಂದು ಹೇಳಬಹುದು. ಹಳಗನ್ನಡವೆಂಬುದು ಸುಮಾರು ಒಂಬತ್ತನೆಯ ಶತಮಾನದಿಂದ ಹನ್ನೊಂದನೆಯ ಶತಮಾನದವರೆಗಿನ ಕಾಲದಲ್ಲಿ ಪ್ರಚಾರವಾಗಿದ್ದ ಕನ್ನಡ ಬರವಣಿಗೆ ಭಾಷೆಯ ಸ್ಥಿತಿಗೆ ಅನ್ವಯಿಸುವ ಹೆಸರು. ಆ ಹಂತಕ್ಕೂ ಹಿಂದಿನ ಅವಸ್ಥೆಯನ್ನು ಕವಿರಾಜಮಾರ್ಗಕಾರನು 'ಪಟಗನ್ನಡ'ವೆಂದು ಕರೆದಿದ್ದ ನಾದರೂ ಈಗಿನ ಗ್ರಹಿಕೆಯ ಪ್ರಕಾರ ಹಳಗನ್ನಡವೆಂಬುದು ಮೇಲೆ ಸೂಚಿಸಿದ ಕನ್ನಡ ಭಾಷೆಯ ಹಂತವನ್ನು ಸೂಚಿಸುವಂಥದು. ಅಲ್ಲದೆ ಚಂಪೂವಿನ ಭಾಷೆಯು ಸಂಸ್ಕೃತ ಶಬ್ದಗಳ ಸಮಾಸ ಗಳಿಂದಲೂ, ಸಂಸ್ಕೃತ ವೃತ್ತಗಳಲ್ಲಿಯೇ ಹೆಚ್ಚಾಗಿ ರಚಿತವಾಗಿರುವ ಪದ್ಯಗಳಿಂದಲೂ, ದೀರ್ಘ ವಾಕ್ಯಗಳಿಂದಲೂ ಕೂಡಿರುವ ರೀತಿಯದು. ಆದರೆ ಈ ಹೊರ ಚೌಕಟ್ಟಿನೊಳಗೇ ಅನೇಕ ಕವಿಗಳು ವೈವಿಧ್ಯವನ್ನು ತಂದಿದ್ದಾರೆ. ಈ ವೈವಿಧ್ಯವು ಆಯಾ ಕವಿಯ ವೈಯಕ್ತಿಕ ಮನೋಭಾವವನ್ನು ಅವಲಂಬಿಸಿರುವುದರ ಜೊತೆಗೆ ಆಯಾ ಕಾಲಕ್ಕೆ ಅವಶ್ಯಕವೆನಿಸಿದ ಕವಿದೃಷ್ಟಿ-ಉದ್ದೇಶಗಳನ್ನೂ ಅವಲಂಬಿಸಿದೆ. ಆದ್ದರಿಂದ ಚಂಪೂವಿನ ಒಳಗೇ ಭಾಷೆಯ ಬಳಕೆಯ ದೃಷ್ಟಿಯಿಂದ ಅನೇಕ ಮಾರ್ಪಾಟು ಗಳಾಗಿರುವುದನ್ನು ಕಾಣಬಹುದು.

ಪಂಪನು ಕಾಲಮಾನಕ್ಕನುಗುಣವಾದ ಚಂಪೂ ಪ್ರಕಾರದಲ್ಲಿ ಕಾವ್ಯವನ್ನು ಬರೆದಿದ್ದರೂ ಅವನು ತನ್ನ 'ದೇಸಿ'ಗೆ ಹೆಸರುವಾಸಿಯಾಗಿದ್ದಾನೆ. ಮುಂದೆ ಬಂದ ಕವಿಗಳೆಲ್ಲರೂ ಅವನ ಈ ಗುಣವನ್ನೇ ಹೆಚ್ಚಾಗಿ ಹೊಗಳಿರುವುದು. ಮೊದಮೊದಲು, ಎಂದರೆ "ಆದಿಪುರಾಣದ ಶೈಲಿಯಲ್ಲಿ-ಮುಖ್ಯವಾಗಿ ಅದರ ಗದ್ಯಭಾಗದಲ್ಲಿ-ಪಾಂಡಿತ್ಯದ ಸೆಡೆತ ಹೆಚ್ಚು; ಸಂಸ್ಕೃತದ ಗದ್ಯಕಾವ್ಯಗಳ ಮಾದರಿಯಿಂದ ಮೋಸ ಹೋಗಿ ಪಂಪನು ಇಲ್ಲಿ ಮಾರುದ್ದದ ಸಮಾಸಗಳನ್ನು ಹೆಣೆಯುತ್ತಾನೆ. ವಿಕ್ರಮಾರ್ಜುನ ವಿಜಯವನ್ನು ಬರೆಯುವ ವೇಳೆಗೆ ಅವನಲ್ಲಿ ಸಂಸ್ಕೃತ ಪಾಂಡಿತ್ಯದ ಸೊಕ್ಕು ಇಳಿದಿತ್ತು. ತಿರುಳಗನ್ನಡದ ಇಂಪೂ ಹುರುಳೂ ಅದರ ನುಡಿಗಟ್ಟು ಹದವೂ ಅವನಿಗೆ ವಶವಾಗಿದ್ದವು."[೨] ರನ್ನನು 'ಗದಾಯುದ್ಧ'ದಲ್ಲಿ ಶಕ್ತಿಯುತವಾದ ಶೈಲಿಯನ್ನು ಬಳಸುತ್ತಾನೆ. ಇದಕ್ಕೆ ಅವನು ಕೆಲವೇಳೆ ದೀರ್ಘ ಸಂಸ್ಕೃತ ಸಮಾಸಗಳನ್ನು ಬಳಸುವ ತಂತ್ರವನ್ನುಪಯೋಗಿಸುತ್ತಾನೆ. ಪಂಪ-ರನ್ನರಿಬ್ಬರೂ ರಚಿಸಿದ ಪುರಾಣಗಳು ಅವರ ಧಾರ್ಮಿಕ ನಿಷ್ಠೆಯ ಪ್ರತೀಕಗಳು; ಅವುಗಳ ಎಲ್ಲ ವಿಷಯದಲ್ಲಿಯೂ ಪುರಾಣ ಮಾರ್ಗವನ್ನು ಅನುಸರಿಸಿದ್ದರಿಂದ ಸಂಸ್ಕೃತಮಯತೆಯು ಅಲ್ಲಿ ಹೆಚ್ಚಾಗಿದೆ. ಆದರೆ ಅವರ ಲೌಕಿಕ ಕಾವ್ಯಗಳಲ್ಲಿ ಸ್ವತಂತ್ರ ಮನೋಭಾವದ ವಿಲಾಸವಿರುವುದರಿಂದ ಈ ಕವಿಗಳು ತಮ್ಮ ಸ್ವಭಾವಗಳಿಗನುಗುಣವಾಗಿಯೂ ವೈಯಕ್ತಿಕ ವಿಶಿಷ್ಟತೆಗನುಗುಣ ವಾಗಿಯೂ ತಮ್ಮ ಕಾವ್ಯಭಾಷೆಯನ್ನು ರೂಪಿಸಿ ಕೊಳ್ಳುತ್ತಾರೆ.

ನಯಸೇನನದು ಮುಖ್ಯವಾಗಿ ಜೈನಧರ್ಮಪ್ರಸಾರದ ಉದ್ದೇಶವಾದ್ದರಿಂದ

ತನ್ನ ವಸ್ತುವಿಗಾಗಿ ಹೇಗೆ ಅವನು ರಂಜಕವಾದ ಕತೆಗಳನ್ನು ಆರಿಸಿ ಕೊಳ್ಳುತ್ತಾನೆಯೋ ಹಾಗೆಯೇ ತನ್ನ ಭಾಷೆಯನ್ನೂ ಹಿಂದಿದ್ದುದಕ್ಕಿಂತ ಭಿನ್ನವಾಗಿ ಬದಲಾಯಿಸಿ ಕೊಳ್ಳುತ್ತಾನೆ. ಅವನ ಲೋಕಾನುಭವವು ಅಪಾರ ವಾಗಿದ್ದುದರಿಂದ ಅವನ ಭಾಷೆಯಲ್ಲಿ ಆಡುನುಡಿಯ ಒಗಚು, ಕಾಕು, ಗಾದೆ-ನಾಣ್ಣುಡಿಗಳು ಹೇರಳವಾಗಿ ಸೇರಿಕೊಂಡಿವೆ. ಅವನು ಮನೋಭಾವದಿಂದ ಸಾಮಾನ್ಯರಿಗೆ ಹತ್ತಿರವಾಗಿರುವುದರಿಂದ ಅವನ ಭಾಷೆಯೂ ಸಾಮಾನ್ಯರ ಭಾಷೆಯೇ ಆಗಿದೆ. "ತನ್ನ ಕಾವ್ಯ ಭಾಷೆಯು ತನ್ನ ಕಾಲದ ಆಡುಮಾತಿನಿಂದ ಬಹುವಾಗಿ ಬೇರೆಯಾಗಿರಬೇಕೆಂಬ ಆಸೆಯಾಗಲಿ ಅವನಿಗೆ ಇದ್ದಂತೆ ತೋರದು. ಅವನ ಕಾವ್ಯಭಾಷೆಯು ಚಂಪೂ ಪ್ರಪಂಚದಲ್ಲಿ ಜಾನಪದ ಭಾಷೆಯು ಪಡೆದ ವಿಜಯದ ಸಂಕೇತವಾಗಿದೆ"[೩] ಎಂಬ ಮಾತು ಸಮಂಜಸವಾದುದು. ಜನಜೀವನದ ನಾಡಿಮಿಡಿತವನ್ನು ಬಲ್ಲ ಈ ಕವಿ, ಜನರಲ್ಲಿ ತನ್ನ ಮತದ ಬೇರುಗಳನ್ನು ಇಳಿಸಬಯಸಿದ. ಇವನು ಅವರ ಭಾಷೆಯ ಸತ್ವವನ್ನು ಒಗ್ಗೂಡಿಸಿಕೊಂಡ ಶೈಲಿಯನ್ನು ತನ್ನ ಕಥಾನಿರೂಪಣೆಗಾಗಿ ಬಳಸಿಕೊಂಡಿರುವುದು ಸಹಜವಾಗಿದೆ. ಆದರೆ ಅವನು ತನ್ನ ಹಿಂದಿನ ಸಂಪ್ರದಾಯವನ್ನು ಸಂಪೂರ್ಣವಾಗಿ ಬಿಟ್ಟುಬಿಡುವ ಧೈರ್ಯಶಾಲಿಯಾಗಿರಲಿಲ್ಲವೇನೊ. ಇಲ್ಲದಿದ್ದರೆ ತನ್ನ ಉದ್ದೇಶಕ್ಕೆ ಅನುಗುಣವಾಗಿ ಜನರನ್ನು ತಲುಪಲು ಇನ್ನೂ ಸರಳ ಕಾವ್ಯಮಾರ್ಗವನ್ನು ಅನುಸರಿಸುತ್ತಿದ್ದ. "ನಯಸೇನನ ಸಂಸ್ಕಾರವನ್ನೂ ಮನೋಭಾವವನ್ನೂ ಅನುಭವ ವೈವಿಧ್ಯವನ್ನೂ ಗಮನಿಸಿದಾಗ, ಅವನು ಅವನ ಕಾಲಕ್ಕಿಂತ ಐವತ್ತು ಅಥವಾ ನೂರು ವರ್ಷ ಈಚಿನವನಾಗಿದ್ದು ಕಾವ್ಯ ರಚನೆ ಮಾಡಿದ್ದರೆ ಪ್ರಾಯಶಃ ಅವನು ಚಂಪೂ ಕಾವ್ಯವನ್ನು ಬರೆಯುತ್ತಿದ್ದಿಲ್ಲ."[೪] ನಯಸೇನನು ಚಂಪೂ ಕಾವ್ಯಕ್ಕೆ ಒಂದು ಹೊಸ ಸ್ವರೂಪವನ್ನೇ ಕೊಟ್ಟನೆಂಬುದು ನಿಜ. ಕಾವ್ಯವಸ್ತುವಾಗಿ ಪುರಾಣ ಕತೆಯನ್ನೋ ದೀರ್ಘ ಕಥಾನಕವನ್ನೋ ಆರಿಸಿಕೊಳ್ಳದೆ ಸಣ್ಣ ಕತೆಗಳನ್ನು ರಚಿಸಿರುವುದರಲ್ಲಿ ಪದ್ಯಕ್ಕಿಂತ ಹೆಚ್ಚಾಗಿ ಗದ್ಯವನ್ನೇ ಬರೆಯುವುದರಲ್ಲಿ, ಆಡುನುಡಿಯನ್ನೇ ತನ್ನ ಚಂಪೂ ಚೌಕಟ್ಟಿಗೆ ಅಳವಡಿಸಿಕೊಳ್ಳುವುದರಲ್ಲಿ ಈ ಹೊಸ ತನವನ್ನು ಕಾಣಬಹುದು. "ಸಾಹಿತ್ಯ ಜನತೆಗಾಗಿ ಎಂಬ ಹೊಸಗನ್ನಡದ ಮೊದಲ ಕೋಳಿ ಕೂಗು ಅವನ (ನಯಸೇನನ) ಕೃತಿಯಲ್ಲಿದೆ"[೫] ಎಂಬುದು ಅವನ ಸಾಧನೆಯನ್ನು ಸೂತ್ರೀಕರಿಸುವ ಮಾತಾಗಿದೆ.

ಮುಂದೆ ಬಂದ ಜೈನ ಕವಿಗಳು ತಮ್ಮ ಪುರಾಣ ಕಾವ್ಯಗಳನ್ನು ಹಳೆಯ ರೀತಿಯಲ್ಲಿಯೇ ಬರೆದರು. ನೇಮಿಚಂದ್ರನಂತಹ ಕವಿಗೆ ಪುರಾಣ ಕಾವ್ಯವು ಜೈನಮತದ ಬಗ್ಗೆ ತನ್ನ ಭಕ್ತಿಯನ್ನು ತೋರಿಸುವ ಮಾರ್ಗವಾದರೆ, ಲೌಕಿಕ ಕಾವ್ಯವು ಪಾಂಡಿತ್ಯ-ಕಲ್ಪಕತೆ-ರಸಿಕತೆಗಳಿಗೆ ಅಭಿವ್ಯಕ್ತಿಯೀಯುವ ಸಾಧನವಾಯಿತು. ಜನ್ನನ 'ಅನಂತನಾಥಪುರಾಣ'ವೂ ಸಾಂಪ್ರದಾಯಿಕ ರಚನೆಯೇ. ಆದರೆ 'ಯಶೋಧರ ಚರಿತೆ'ಯು ತುಂಬ ಸರಳವಾದ ಭಾಷೆಯಲ್ಲಿ ರಚಿತವಾಗಿರುವ ಕಾವ್ಯ. ಇದರ ರಚನೆಗೂ ಕಾರಣ ಶ್ರಾವಕರು ಪುಣ್ಯ ಸಂಪಾದನೆ ಮಾಡಲೆಂಬ, ಸಾಮಾನ್ಯರು ಹೆಚ್ಚು ಧರ್ಮಾನುರಾಗಿಗಳಾಗಲೆಂಬ ಭಾವನೆ. ಇದರ ಮೂಲವಾದ ವಾದಿರಾಜನ ಸಂಸ್ಕೃತ

ಕಾವ್ಯವು ಸರಳವಾಗಿದ್ದುದೂ ಈ ಕಾವ್ಯದ ಸರಳತೆಗೆ ಕಾರಣವಿರಬೇಕು. ಆದರೆ ಈ ಸರಳತೆಯು ನಯಸೇನನ ಕಾವ್ಯದಲ್ಲಿರುವಂತೆ ಜನರ ಮಾತಿಗೆ ಹತ್ತಿರವಾದುದಲ್ಲ. ಜನ್ನನ ಉದ್ದೇಶವು ನಯಸೇನನಿಗಿದ್ದಂತೆ ಮತಪ್ರಸಾರವೇ ಅಲ್ಲ. ಇದಕ್ಕೆ ಕಾರಣ ಅವರಿಬ್ಬರ ಕಾಲದಲ್ಲಿದ್ದ ಧಾರ್ಮಿಕ ಪರಿಸ್ಥಿತಿ ಹಾಗೂ ವೈಯಕ್ತಿಕತೆಗಳು. ಜನ್ನನ ಕಾಲಕ್ಕಾಗಲೇ ಮತಗಳ ಘರ್ಷಣೆಯ ಕಾವು ಇಳಿದು, ಮತೀಯ ಘರ್ಷಣೆಗಳು ಯಾವ ಮತಕ್ಕೂ ಗೌರವವನ್ನೂ ತರುವಂತಹುದಲ್ಲವೆಂಬ ಭಾವನೆಯು ಉದಾತ್ತ ವ್ಯಕ್ತಿಗಳಲ್ಲಿ ನೆಲೆಸಿದ್ದಂತೆ ತೋರುತ್ತದೆ. ಆದ್ದರಿಂದಲೇ ಅವನು ಜೈನಮತದ ಶ್ರೇಷ್ಠತೆಯನ್ನು ಪ್ರತಿಪಾದಿಸುವ ವಸ್ತುವನ್ನು ತನ್ನ ಕಾವ್ಯಕ್ಕೆ ಆರಿಸಿಕೊಳ್ಳಲಿಲ್ಲ, ಇದರಿಂದಾಗಿಯೇ ಇತರ ಮತಗಳ ಬಗ್ಗೆ ಅವನಲ್ಲಿ ಅಸಹನೆಯಾಗಲೀ ಕಟಕಿ–ವ್ಯಂಗ್ಯಗಳಾಗಲೀ ಆವೇಶವಾಗಲೀ ಇಲ್ಲ.

ಇನ್ನು ಜೈನಕವಿಗಳ ಪೈಕಿ ಆಂಡಯ್ಯನು ಭಾಷೆಯ ಬಗ್ಗೆ ವಿಶಿಷ್ಟ ಪ್ರಯೋಗವನ್ನು ಮಾಡಿದವನು. ಅವನದು ನಯಸೇನನಂತೆ ವಸ್ತುವಿನಲ್ಲಿ, ಪರಿಸ್ಥಿತಿಯಲ್ಲಿ ಅಡಗಿದ ಮಾರ್ಪಾಟೆಂದು ತೋರುವುದಿಲ್ಲ: ಅದು ಬುದ್ಧಿ ಪೂರ್ವಕವಾದುದು.

ಸೊಗಯಿಪ ಸಕ್ಕದಂ ಬೆರಸಿದಲ್ಲದೆ ಕನ್ನಡದಲ್ಲಿ ಕಬ್ಬಮಂ
ಬಗೆಗೊಳೆ ಪೇಟಲಾಱರಿನಿತುಂ ಸಲೆ ಮುನ್ನಿನ ಪೆಂಪನಾಳ್ದ ಕ
ಬ್ಬಿಗರದು ಮಾತನಾಡಿದವೊಲಂದವನಾಳ್ದಿರೆ ಪೇೞ್ವ ಬಿಲ್ಪು ನೆ
ಟ್ಟಗೆ ದೊರೆಕೊಂಡುದಿಂತಿವನೊಳಲ್ಲದೆ ಕೇಳ್ದೊರೆಕೊಳ್ಳದಾರೊಳಂ (ಕಬ್ಬ ಕಾ. ೧)

(ಸಂಸ್ಕೃತವನ್ನು ಬೆರಸದೆಯೇ ಕನ್ನಡದಲ್ಲಿ ಕಾವ್ಯವನ್ನು ಬರೆಯುವುದು ಅಸಾಧ್ಯವೆಂದು ಹಿಂದಿನ ಕವಿಗಳ ಭಾವನೆಯಾಗಿತ್ತು. ಆದರೆ ಕೇವಲ ಕನ್ನಡದಲ್ಲಿಯೇ 'ಮಾತನಾಡಿದ' ಹಾಗಿರುವಂತೆ ಕಾವ್ಯವನ್ನು ಬರೆಯಲು ಆಂಡಯ್ಯನಲ್ಲದೆ ಬೇರಾರು ಸಮರ್ಥರು?) ಎಂದು ಹಲವರು ಹೇಳಿದ್ದರಿಂದ 'ಕಬ್ಬಿಗರ ಕಾವ'ವನ್ನು ತಾನು ಬರೆದುದಾಗಿ ಆಂಡಯ್ಯನು ಹೇಳಿಕೊಳ್ಳುತ್ತಾನೆ. ಇವನದು ಭಾಷಾ ದೃಷ್ಟಿಯಿಂದ ವೀರನಿಷ್ಠೆ. ಇವನ ಭಾಷಾ ಬಳಕೆಯು ವಸ್ತುವಿಗೆ ನೇರವಾಗಿ ಸಂಬಂಧಿಸಿರುವಂತಹುದುಲ್ಲ, ಎಂದರೆ ಅದು ಸಹಜವಲ್ಲ. ಪ್ರಾಯಶಃ ಅವನ ಕಾಲದಲ್ಲಿ ಸಂಸ್ಕೃತ ಮೋಹವು ಅತಿಯಾಗಿದ್ದುದರಿಂದ ಈ ಬಗೆಯ ಛಲವನ್ನು ಕವಿಯು ಪಡೆಯಬೇಕಾಯಿತು. ಇವನ ಶೈಲಿಯು ವಸ್ತುವಿಗೆ ಅನುಗುಣವಾಗಿ, ಮತಪ್ರಸಾರ ಭಾವನೆಯಿಂದ ಮೂಡಿ ಬಂದುದಾಗಿರದೆ ಭಾಷೆಯ ನೆಲೆಯಲ್ಲೇ ತನ್ನ ಉದ್ದೇಶ–ಮೂಲಗಳನ್ನು ಪಡೆದಿದೆ. ಆದ್ದರಿಂದ ಆಂಡಯ್ಯನ ಶೈಲಿಯು ಚಂಪೂ ಪ್ರಕಾರದಲ್ಲಿ ಇಡಿಕಿರಿಸಿಕೊಂಡು ಅಸ್ತವ್ಯಸ್ತವಾಗಿದೆ. ಅಚ್ಚಗನ್ನಡ ಭಾಷೆಯು ಕನ್ನಡ ಛಂದಸ್ಸುಗಳಲ್ಲಿ ತೋರ್ಪಡಿಸಿಕೊಳ್ಳುವ ಸೊಬಗನ್ನು ಚಂಪೂ ಪ್ರಕಾರದಲ್ಲಿ ತೋರ್ಪಡಿಸಿ ಕೊಳ್ಳಲಾರದು. ಆದ್ದರಿಂದಲೋ ಏನೋ ಚಂಪೂವಿನಲ್ಲಿ ಆಂಡಯ್ಯನು ಮಾಡಿದ ಭಾಷಾ ಪ್ರಯೋಗವು ಮುಂದುವರೆಯಲಿಲ್ಲ. ಆ ಪ್ರಕಾರದಲ್ಲಿ ಅವನು ಬಳಸಿದ ಭಾಷೆಯೂ ಕೃತಕವಾಗಿ ಕಾಣುತ್ತದೆ.

ದುರ್ಗಸಿಂಹನು ಬರೆದ ಪಂಚತಂತ್ರವೂ ವಸ್ತು, ವರ್ಣನೆ, ಭಾಷೆಗಳಲ್ಲಿ ಸಂಪೂರ್ಣವಾಗಿ ಚಂಪೂ ಪ್ರಕಾರದ ಲಕ್ಷಣಗಳನ್ನು ಪಡೆದಿಲ್ಲ. ಅವನು ಪದ್ಯಕ್ಕಿಂತ ಹೆಚ್ಚಾಗಿ ಗದ್ಯವನ್ನೇ ತನ್ನ ಕಥನಕ್ಕೆ ಬಳಸಿದ. ಆ ಗದ್ಯವೂ ಕೂಡ ಅಲಂಕಾರವಿಲ್ಲದೆ, ಭಾವನಾತ್ಮಕವಾಗಿರದೆ ಸರಳವಾಗಿದೆ. ಏಕೆಂದರೆ ಅವನು ಬರೆಯುತ್ತಿದ್ದ ಕತೆಗಳು ಪ್ರಾಣಿಗಳ ಜೀವನದ ಮೂಲಕ ಮನುಷ್ಯನ ಬಾಹ್ಯ ವ್ಯವಹಾರಗಳನ್ನು ನಿರೂಪಿಸುವಂಥವೇ ಹೊರತು ಮಾನವ ಜೀವನದ ಸೂಕ್ಷ್ಮ ಭಾವನಾತರಂಗಗಳನ್ನು ಒಳಗೊಂಡಿಲ್ಲ. ಇದರಿಂದ ದುರ್ಗಸಿಂಹನ ಗದ್ಯವು ಅವನ ಕಾವ್ಯ ವಸ್ತುವಿಗೆ ಅನುಗುಣವಾಗಿಯೇ ಇದೆ. ಅವನ ನಂತರ ಬಂದ ಬ್ರಾಹ್ಮಣ ಚಂಪೂ ಕವಿಗಳು ಈ ಪ್ರಕಾರವನ್ನು ಪಾಂಡಿತ್ಯ ಪ್ರದರ್ಶನಕ್ಕಾಗಿ ಮಾತ್ರವೇ ಬಳಸಿದರು. ಬ್ರಾಹ್ಮಣ ಚಂಪೂ ಕವಿಗಳ ಕೃತಿಗಳಲ್ಲಿ ವಸ್ತು ನಿರೂಪಣೆ, ಉದ್ದೇಶಗಳಲ್ಲಿ ಯಾವುದೇ ಏಕರೂಪತೆಯನ್ನಾಗಲೀ ಏಕೋದ್ದೇಶವನ್ನಾಗಲೀ ಕಾಣುವುದಿಲ್ಲ. ಅವರ ಚಂಪೂ ಕಾವ್ಯಗಳಲ್ಲಿ ಕಲ್ಪಕವಾದ ಪ್ರಣಯ ಕಥೆಗಳು, ಪುರಾಣೇತಿಹಾಸಗಳಿಂದ ಆರಿಸಿದ ಪ್ರಸಿದ್ಧ ಕತೆಗಳು–ಈ ವಸ್ತುಗಳನ್ನು ಕಾಣುತ್ತೇವೆ.

ಬ್ರಾಹ್ಮಣ ಕವಿಗಳ ಚಂಪೂ ಕಾವ್ಯಗಳಂತೆಯೇ ವೀರಶೈವರ ಚಂಪೂ ಕೃತಿಗಳೂ ಹೆಚ್ಚಾಗಿ ಪಾಂಡಿತ್ಯ ಪ್ರದರ್ಶನದಿಂದ ಕೂಡಿರುವಂಥವೇ ಆಗಿವೆ. ಹರಿಹರನಿಂದ ಹಿಡಿದು ಷಡಕ್ಷರಿಯವರೆಗೆ ಅನೇಕ ವೀರಶೈವ ಚಂಪೂ ಕವಿಗಳು ಬಂದರೂ ಬ್ರಾಹ್ಮಣರಲ್ಲಿಯಂತೆ ಇವರಲ್ಲಿಯೂ ಅತಿ ಶ್ರೇಷ್ಠ ಚಂಪೂ ಕವಿಗಳು ಬರಲಿಲ್ಲ. ಆದರೆ "ಹರಿಹರನು ತನ್ನ 'ಗಿರಿಜಾ ಕಲ್ಯಾಣ'ದಲ್ಲಿ ಚಂಪುವಿನ ವಿಷಯ, ರಸ, ರೀತಿಗಳಿಗೆ ತನ್ನದೇ ಆದ ಹೊಸ ತಿರುವನ್ನು ಕೊಟ್ಟನು. 'ಹರಿಹರಮಾರ್ಗ' ಎಂದು ಹೆಸರಾಗಿ ಅದು ಷಡಕ್ಷರಿಯ ಕಾಲದವರೆಗೂ ತನ್ನ ಪ್ರಭಾವ ಬೀರಿತು. ಅದರ ಪ್ರಮುಖ ಲಕ್ಷಣವೆಂದರೆ ಶಿವಭಕ್ತಿಯ, ಶಿವಕಲ್ಪನೆಯ ಮತ್ತು ಶಿವಮಯವರ್ಣನೆ ಹಾಗೂ ಶೈಲಿಯ ಒಂದು ಉತ್ಕಟರಸಾವಿಷ್ಕಾರ."[4]

ಹೀಗೆ ಚಂಪೂ ಪ್ರಕಾರಕ್ಕೂ ಕರ್ನಾಟಕದಲ್ಲಿನ ಜೈನ ಧರ್ಮದ ಆಗುಹೋಗುಗಳಿಗೂ ನೇರವಾದ ಸಂಬಂಧವಿದೆ. ಜೈನಧರ್ಮದ ಸ್ಥಿತಿಯು ಬದಲಾದಂತೆ ಜೈನ ಕವಿಗಳ ಕಾವ್ಯ ದೃಷ್ಟಿಯು ವ್ಯತ್ಯಾಸವಾಯಿತು. ಅದಕ್ಕನುಗುಣವಾಗಿ ಚಂಪೂವಿನ ವಸ್ತು–ಭಾಷೆಗಳು ವ್ಯತ್ಯಾಸವಾದವು. ಈ ರೀತಿಯಾಗಿ ಚಂಪೂವಿನ ವಸ್ತು–ಭಾಷೆ–ದೃಷ್ಟಿಗಳ ಬದಲಾವಣೆಯ ಹಿಂದೆ ಏಕಸೂತ್ರತೆಯಿದೆ. ಆದರೆ ಅದೇ ಬ್ರಾಹ್ಮಣ ಹಾಗೂ ವೀರಶೈವ ಕವಿಗಳು ಬರೆದ ಚಂಪೂ ಕಾವ್ಯಗಳ ಬೆಳವಣಿಗೆಯಲ್ಲಿ ಈ ಸುಸಂಬದ್ಧತೆಯನ್ನು ನಾವು ಕಾಣಲಾರೆವು. ಏಕೆಂದರೆ ಈ ಕಾವ್ಯ ಪ್ರಕಾರವೂ ಈ ಕವಿಗಳ ಕಾವ್ಯೋದ್ದೇಶ ಪ್ರತಿಭಾವಿಲಾಸಗಳೂ ಭಿನ್ನವಾಗಿದ್ದವು.

ಅಡಿ ಟಿಪ್ಪಣಿಗಳು

೧. ಪಂಪನ ಸಮನ್ವಯ ದೃಷ್ಟಿಯನ್ನು ಕುರಿತಾದ ವಿವೇಚನೆಗೆ ನೋಡಿ: ಜಿ.ಎಸ್. ಶಿವರುದ್ರಪ್ಪ: 'ಪಂಪನ ಸಮರಸದೃಷ್ಟಿ' (ಪರಿಶೀಲನ, ೧೯೬೭) ಪು. ೧೨

೨. ತೀ.ನಂ. ಶ್ರೀಕಂಠಯ್ಯ: ಪಂಪ (೧೯೪೩) ಪು. ೫೬–೭

೩. ಎಂ. ಚಿದಾನಂದಮೂರ್ತಿ : 'ನಯಸೇನ, ಕನ್ನಡದ ಒಬ್ಬ ಜಾನಪದ ಚಂಪೂ ಕವಿ' (ಸಂಶೋಧನ ತರಂಗ೨, ೧೯೭೦) ಪು. ೧೧೪

೪. ಅದೇ: ಪು. ೯೫.

೫. ರಂ.ಶ್ರೀ. ಶ್ರೀಮುಗಳಿ: 'ನಯಸೇನನ ಧರ್ಮಾಮೃತ' (ತವನಿಧಿ. ೧೯೫೯) ಪು. ೮೭

೬. ರಂ.ಶ್ರೀ. ಮುಗಳಿ: ಪ್ರಾಚೀನ ಕನ್ನಡ ಸಾಹಿತ್ಯ ರೂಪಗಳು (೧೯೭೩) ಪು. ೭೨

ಕನ್ನಡಕ್ಕೆ ಚಂಪೂ ಕವಿಗಳ ಕೊಡುಗೆ

■

ಚಂಪೂ ಪ್ರಕಾರವು ಕನ್ನಡ ಸಾಹಿತ್ಯಕ್ಕೆ ಭದ್ರವಾದ ಬುನಾದಿಯನ್ನು ಹಾಕಿದೆ. ಪಂಪನಿಗಿಂತ ಹಿಂದೆ ಗುಣನಂದಿ, ಶ್ರೀ ವಿಜಯ, ಅಸಗ ಮುಂತಾದವರು ಚಂಪೂ ಕೃತಿಗಳನ್ನು ಬರೆದಿರಬೇಕೆಂಬುದು ವಿದ್ವಾಂಸರ ಅಭಿಪ್ರಾಯವಾಗಿದೆ. ಇವರಾರ ಗ್ರಂಥಗಳೂ ನಮಗೆ ದೊರಕಿಲ್ಲ. ಪಂಪನಂತಹ ಉದ್ದಾಮ ಕವಿಯು ಚಂಪು ಪ್ರಕಾರವನ್ನು ತನ್ನ ಕಾವ್ಯಮಾಧ್ಯಮಕ್ಕೆ ಆರಿಸಿಕೊಂಡು ಅತ್ಯಂತ ಯಶಸ್ವಿಯಾಗಿ ಅದರ ನಿರ್ವಹಣೆ ಮಾಡಿರುವುದನ್ನು ನೋಡಿದರೆ ಅವನಿಗೆ ಹಿಂದೆ ಚಂಪುವು ಸ್ವಲ್ಪಮಟ್ಟಿಗಾದರೂ ಕಾವ್ಯರೂಪವನ್ನು ಪಡೆದಿತ್ತು ಎಂದೆನಿಸುತ್ತದೆ. ಆದರೆ ಅದರ ಸ್ವರೂಪದ ಬಗ್ಗೆ ಅರಿಯಲು ನಮಗೆ ಯಾವ ಖಚಿತವಾದ ಆಧಾರವೂ ದೊರೆತಿಲ್ಲ. ಹಿಂದಿದ್ದ ಚಂಪೂವನ್ನು ಪಂಪನ ಮಹಾಕವಿಪ್ರತಿಭೆಯು ತನ್ನ ಮನೋಭಾವಕ್ಕನು ಗುಣವಾಗಿ ಮಹತ್ವ ಪೂರ್ಣವಾದ ಬದಲಾವಣೆಗೆ ಒಳಪಡಿಸಿರಬೇಕು.

ಚಂಪೂ ಕವಿಗಳನ್ನು ಹೆಸರಿಸುವಾಗ, ಈ ಪ್ರಕಾರದ ಮಹತ್ವವನ್ನು ಕುರಿತು ಹೇಳುವಾಗ ಮೊದಲು ನಮಗೆ ನೆನಪಿಗೆಬರುವ ಹೆಸರೆಂದರೆ ಪಂಪನದು. ಅವನು ನಮಗೆ ತಿಳಿದಿರುವಂತೆ ಮೊದಲ ಚಂಪೂ ಕವಿ. ಗುಣದಲ್ಲಿಯಂತೂ ಅವನದು ಶ್ರೇಷ್ಠ ವಾದ ಕೃತಿಗಳು. ಕಾವ್ಯಗುಣದ ದೃಷ್ಟಿಯಿಂದ 'ಆದಿಪುರಾಣ' ಹಾಗೂ 'ವಿಕ್ರಮಾರ್ಜುನ ವಿಜಯ'ಗಳು ಎಷ್ಟು ಸುಂದರವಾದ ಕೃತಿಗಳಾಗಿವೆಯೆಂಬುದನ್ನು ನಾವಾಗಲೇ ವಿವರ ವಾಗಿ ಪರಿಶೀಲಿಸಿದ್ದೇವೆ. ಶ್ರೇಷ್ಠ ಪುರಾಣ ಹಾಗೂ ಕಾವ್ಯವನ್ನು ಸೃಷ್ಟಿಸಿದ ಪಂಪನು ಇತರ ಅನೇಕ ಕವಿಗಳು ಅನುಸರಿಸಲು ಯೋಗ್ಯವಾದ ಒಂದು ಭದ್ರವಾದ ಪರಂಪರೆ ಯನ್ನೇ ನಿರ್ಮಾಣಮಾಡಿದ್ದಾನೆ. ಲೌಕಿಕ-ಧಾರ್ಮಿಕ ಕಾವ್ಯಗಳನ್ನು ಬರೆಯುವುದರಲ್ಲಿ, ಲೌಕಿಕ ಕಾವ್ಯದಲ್ಲಿ ರಾಜಕೀಯ ಶ್ಲೇಷೆಯನ್ನು ತರುವುದರಲ್ಲಿ ಹಾಕಿದ ಅವನ ಮಾರ್ಗ ಸಾಕಷ್ಟು ಕಾಲ ಮುಂದುವರೆಯಿತು. ಪಂಪನಿಗಿಂತ ಹಿಂದೆಯೇ ಈ ಪರಂಪರೆ ಯಿದ್ದಿರಬಹುದು; ಗುಣವರ್ಮನ ಕಾವ್ಯಗಳು ಈ ಪರಂಪರೆಯ ಆದ್ಯಕೃತಿಗಳಾಗಿರ ಬಹುದು. ಆದರೆ ಅದರ ಬಗ್ಗೆ ಖಚಿತವಾಗಿ ನಾವೇನನ್ನೂ ಹೇಳಲಾರೆವು.

ಕನ್ನಡ ಭಾಷೆಯ ಬಳಕೆಯ ದೃಷ್ಟಿಯಿಂದಲೂ ಪಂಪನ ಕೊಡುಗೆ ಅಸಾಧಾರಣವಾದದ್ದು. ಅವನು ಆರಿಸಿಕೊಂಡ ಕಾವ್ಯಪ್ರಕಾರವು ಚಂಪುವಾಗಿ ಅದರಲ್ಲಿ ಸಂಸ್ಕೃತವೃತ್ತಗಳೇ ಹೆಚ್ಚಾಗಿ ಬಳಸಬೇಕಾದದ್ದರಿಂದ ಅವನು ಸಂಸ್ಕೃತ ಭಾಷೆಯ ಸಹಾಯವನ್ನು ಹೆಚ್ಚು ಪಡೆದದ್ದು ಸಹಜ. ಆದರೆ ಅದರಲ್ಲಿ ದೇಸಿಯನ್ನು ಅಳವಡಿಸಿ

ಕನ್ನಡದ ಬಳಕೆಯನ್ನು ವಿಶಿಷ್ಟಗೊಳಿಸಿದ್ದಲ್ಲದೆ ಸಂಸ್ಕೃತವೃತ್ತಗಳು ಕನ್ನಡವನ್ನು ಒಳಗೊಂಡು ವಿಶಿಷ್ಟವಾಗುವಂತೆ ಕೂಡ ಮಾಡಿದವನು ಪಂಪ. ಕನ್ನಡ ಭಾಷೆಯ ಸತ್ವವನ್ನು ಗುರುತಿಸಿ ಅದನ್ನು ಕಾವ್ಯದಲ್ಲಿ ಬಳಕೆಗೆ ತಂದ ಮೊದಲಿಗನೂ ಅವನೇ–ನಮಗೆ ತಿಳಿದ ಮಟ್ಟಿಗೆ. "ಹೀಗೆ ಭಾಷೆಯ ರಹಸ್ಯಗಳನ್ನು ತಿಳಿದು ಅದರ ಶಕ್ತಿ ಸಾಧ್ಯತೆಗಳನ್ನು ಬಳಿಸಿಕೊಳ್ಳುವಲ್ಲಿ ಮತ್ತು ಅದರ ಮಿತಿಗಳನ್ನರಿತು ಸಂಸ್ಕೃತ ಶಬ್ದಗಳು, ಸಮಾಸಗಳು ಹಾಗೂ ವಾಕ್ಯರಚನಾವಿಧಾನಗಳನ್ನು ಬಳಸಿಕೊಳ್ಳುವುದರಲ್ಲಿ ಪಂಪ ಕನ್ನಡ ಭಾಷೆಯ ಜೀವಂತಿಕೆಯನ್ನು ಉಳಿಸಿದ್ದಾನೆ; ಅಭಿವ್ಯಕ್ತಿಶಕ್ತಿಗೆ ಸಾಣೆ ಹಿಡಿದಿದ್ದಾನೆ."[1] ಗಾದೆ ಮಾತುಗಳು. ನಾಣ್ನುಡಿಗಳು. ಆಡುಮಾತಿನ ಕಾಕು ಇವುಗಳಿಂದಾಗಿ ಅವನು ತನ್ನ ಭಾಷೆಯನ್ನು ಶಕ್ತಿಯುತವಾಗಿಸಿದ್ದಾನೆ. "ಭಾಷೆಯಾದ ಮೇಲೆ ಪರಂಪರೆಯ ನಿರ್ಮಾಪಕನೆಂದು ಪಂಪನನ್ನು ಗುರುತಿಸುವ ಅಂಶಗಳು ಇನ್ನು ಮುಖ್ಯವಾಗಿ ಮೂರು. ಒಂದು ಪಂಪ ಕವ್ಯಾಭಿವ್ಯಕ್ತಿಗೆ ಹೂಡಿಕೊಂಡ ಚಂಪೂ ಶೈಲಿ; ಎರಡನೆಯದು, ಪಂಪನ ಕಾವ್ಯ ಮತೀಯ ಮಿತಿಗಳಿಂದ ಮುಕ್ತವಾಗಿ ಮಾನವ ಜೀವನದ ಕಡೆಗೆ ಹೊರಳಿಸಿದ ಜೀವನಶ್ರದ್ಧೆಯಾದದ್ದು: ಮೂರು ಕಾವ್ಯಪರಂಪರೆಯ ಪ್ರಜ್ಞೆ."[2]

ಪಂಪನಾದ ನಂತರ ನಮ್ಮ ಗಮನ ಸೆಳೆಯುವವನು 'ಗದಾಯುದ್ಧ'ದ ರನ್ನ ಅವನ ಭಾಷೆ ಸಿಡಿಲಶಕ್ತಿಯನ್ನೊಳಗೊಂಡದ್ದು. ಅವನನ್ನು 'ಶಕ್ತಿ ಕವಿ' ಎಂದು ಕುವೆಂಪು ಕರೆದಿರುವುದು ಸಮಂಜಸವೇ ಆಗಿದೆ. ಪಂಪನು ಕರ್ಣನನ್ನು ಸೃಷ್ಟಿಸಿದಂತೆ ರನ್ನನು ವಿಶಿಷ್ಟಸ್ವರೂಪದ ದುರ್ಯೋಧನನನ್ನು ಸೃಷ್ಟಿಸಿ ತನ್ನ ಪಾತ್ರರಚನಾಕೌಶಲವನ್ನು ತೋರಿಸಿದ್ದಾನೆ. ಅನೇಕ ಹಿಂದಿನ ಕವಿಗಳ ಪ್ರಭಾವವನ್ನು ಜೀರ್ಣಿಸಿಕೊಂಡು ಹೊಸ ಕಾವ್ಯವನ್ನು 'ಸೃಷ್ಟಿಸಿದ' ಪ್ರತಿಭಾವಂತ ಅವನು. ಮಹಾಭಾರತದ ಹಿಂದಿನ ಕತೆಯನ್ನೆಲ್ಲ 'ಸಿಂಹಾವಲೋಕನ'ದ ಹೊಸ ತಂತ್ರದಿಂದ ಹೇಳುವುದು ಅವನ ತಂತ್ರಗಾರಿಕೆಯ ಒಂದು ಸಿದ್ಧಿ. ತನ್ನ ಕಾವ್ಯದಲ್ಲಿ ನಾಟಕವನ್ನು ಅಂತರ್ಗತಗೊಳಿಸಿರುವುದು ಈ ಕವಿಯು ಇನ್ನೊಂದು ಹೆಗ್ಗಳಿಕೆ. ಕೆಲವು ಬದಲಾವಣೆಗಳನ್ನು ಮಾಡಿದರೆ ಈ ಕಾವ್ಯವನ್ನು ನಾಟಕವನ್ನಾಗಿ ಮಾರ್ಪಡಿಸಬಹುದಾದಂತಹ ನಾಟಕೀಯತೆಯನ್ನು ಅಳವಡಿಸಿದ ರನ್ನನು ನಾಟಕವನ್ನೇ ರಚಿಸದಿದ್ದುದು ಆಶ್ಚರ್ಯಕರವೂ ಹೌದು, ನಮ್ಮ ದುರದೃಷ್ಟವೂ ಹೌದು. ಪಂಪನಂತೆಯೇ ಅನೇಕ ಛಂದೋರೂಪಗಳನ್ನೂ ರನ್ನನೂ ಸಮರ್ಥವಾಗಿ ಬಳಸಿಕೊಂಡಿದ್ದಾನೆ. ಇವನ ಹಾಗೆಯೇ ದುರಂತ ಪಾತ್ರವನ್ನು ಚಿತ್ರಿಸಿ ನಾಗಚಂದ್ರನು ಕನ್ನಡ ಸಾಹಿತ್ಯದ ಶ್ರೇಷ್ಠಪಾತ್ರವೊಂದರ ಸೃಷ್ಟಿಮಾಡಿದ್ದಾನೆ. ಪಂಪನ ಕರ್ಣ, ರನ್ನನ ದುರ್ಯೋಧನ, ಹಾಗೂ ನಾಗಚಂದ್ರನ ರಾವಣ ಇವರು ಒಂದೇ ಸ್ವರೂಪ ವ್ಯತ್ಯಾಸವನ್ನು ಪಡೆದ ಪೌರಾಣಿಕ ಪಾತ್ರಗಳು. ನಾಗಚಂದ್ರನು ಅರ್ಥಾಂತರ ನ್ಯಾಸವೆಂಬ ಅಲಂಕಾರವನ್ನು ಉತ್ತಮವಾಗಿಯೂ ಹೇರಳವಾಗಿಯೂ ತನ್ನ ಕಾವ್ಯದಲ್ಲಿ ಬಳಸಿರುವುದು ಅವನ ವೈಶಿಷ್ಟ್ಯವಾಗಿದೆ.

ನಯಸೇನನು ಚಂಪೂ ಪ್ರಕಾರಕ್ಕೆ ಹೊಸ ತಿರುವೊಂದನ್ನು ವಸ್ತು, ಭಾಷೆ ನಿರೂಪಣೆಗಳಲ್ಲಿ ತರುವುದರ ಮೂಲಕ ಕನ್ನಡ ಸಾಹಿತ್ಯದ ಹೊಸ ಮಾರ್ಗವೊಂದಕ್ಕೆ

ಬುನಾದಿಯನ್ನು ಹಾಕಿದ್ದಾನೆ. 'ವಡ್ಡಾರಾಧನೆ'ಯು ಇವನ 'ಧರ್ಮಾಮೃತ'ಕ್ಕಿಂತ ಹಿಂದೆ ರಚಿತವಾಗಿದ್ದರೂ ಕನ್ನಡದ ಕಥಾ ಸಾಹಿತ್ಯವು ಬೆಳೆಯಲು ಧರ್ಮಾಮೃತದಿಂದ ಆದ ಪ್ರೇರಣೆ ಬಹು ದೊಡ್ಡದು. ಅವನು ಬಳಸಿರುವ ಇಲ್ಲಿನ ಭಾಷೆಯು ಹೊಸ ಕಸುವಿನಿಂದ ಕೂಡಿ ಸಾಹಿತ್ಯದ ಮೂಲ ಭೂತ ಉದ್ದೇಶದ ಬಗ್ಗೆಯೇ ಹೊಸ ಅರಿವನ್ನುಂಟುಮಾಡಿತು. ಅವನು ಧರ್ಮಪ್ರಸಾರ ದೃಷ್ಟಿಯಿಂದ ಕಾವ್ಯರಚನೆ ಮಾಡಿದ್ದರೂ ಕಾವ್ಯ ರಚನೆಯು ಭಾಷೆಯ ಪರಂಪರೆಯನ್ನು ನಯಸೇನನು ಹಾಕಿದಂತಾಯಿತು. ಅವನ ಕಾವ್ಯವು ಅದರಲ್ಲಿಯೂ ವಿಪುಲವಾಗಿರುವ ಗದ್ಯವು ಆ ಕಾಲದ ಗಾದೆ ನಾಣ್ಣುಡಿ, ನಂಬಿಕೆ-ಸಂಪ್ರದಾಯಗಳ ಒಂದು ದೊಡ್ಡ ಗಣಿಯಾಗಿದೆ. ಜನರ ಜೀವನವನ್ನು, ಸಾಮಾನ್ಯರ ಹೃದಯವನ್ನು ನಯಸೇನನು ಎಷ್ಟು ಆಳವಾಗಿ ಅರ್ಥಮಾಡಿಕೊಂಡಿದ್ದನೆಂಬುದಕ್ಕೆ ಈ ಕಾವ್ಯವು ಜೀವಂತ ಸಾಕ್ಷಿಯಾಗಿದೆ. ಅವನ ಗದ್ಯದಲ್ಲಿ ಬರುವ ಮಾಲೋಪಮೆಗಳು (ಒಂದಾದ ಮೇಲೊಂದರಂತೆ ಬರುವ ಸಾಲಾದ ಹೋಲಿಕೆಗಳು) ನಯಸೇನನ ವೈಶಿಷ್ಟ್ಯವಾಗಿದೆ.

ಜನ್ನನ 'ಯಶೋಧರ ಚರಿತೆ' ಕನ್ನಡ ಸಾಹಿತ್ಯದಲ್ಲಿ ಕಂಗೊಳಿಸುವ ಒಂದು ಸುಂದರ ಕೃತಿ. ಈ ಕಾವ್ಯವು ಕಿರಿದಾಗಿದ್ದರೂ ಮೇಲುವರ್ಗದ ಕೃತಿಯಾಗಿದೆ. ಜನ್ನನು ಈ ಕೃತಿಯನ್ನು ರಚಿಸಿದ್ದರ ಹಿಂದಿನ ಉದ್ದೇಶವು ಜೀವದಯೆಯ ಶ್ರೇಷ್ಠತೆಯನ್ನು ಎತ್ತಿ ತೋರುವುದು; ಮಾನಸಿಕ ಹಿಂಸೆಯೊಂದರಿಂದಲೇ ಇಲ್ಲಿನ ಚಂದ್ರಮತಿ-ಯಶೋಧರರು ಹೇಗೆ ಜನ್ಮಾಂತರಗಳ ಕೋಟಲೆಗೆ ಒಳಗಾದರು ಎನ್ನುವುದರ ಮೂಲಕ ಕವಿಯು ತನ್ನ ಉದ್ದೇಶವನ್ನು ಸಾಧಿಸಿಕೊಂಡಿದ್ದಾನೆ. ಅಲ್ಲದೆ ನಮ್ಮ ಗಮನವನ್ನು ಸೆಳೆಯುವುದು ಇಲ್ಲಿನ ಅಮೃತಮತಿಯ ಪಾತ್ರ. ಗಂಡನನ್ನು ತೊರೆದು ಪರಪುರುಷನೊಡನೆ ಕೊನೆಯವರೆಗೂ ಸೇರಿದ ಅವಳ ಬಗ್ಗೆ ನಾವು ಗೌರವವನ್ನು ತಳೆಯದೆ ಇರಬಹುದು, ಆದರೆ ಅವಳು ಭೋಗವಿಲಾಸಗಳನ್ನೆಲ್ಲ ತೊರೆದು ಅಷ್ಟವಂಕನಲ್ಲಿ ಅನುರಕ್ತಳಾಗಿ ಕೊನೆಯವರೆಗೆ ಅವನಲ್ಲಿ ಆಳವಾದ ನಿಷ್ಠೆಯನ್ನು ಪಡೆಯಬೇಕಾದರೆ ಅವಳ ಮನಸ್ಸು ತನ್ನ ಪ್ರೇಮಿಯಲ್ಲಿ ಎಷ್ಟು ತೀವ್ರವಾಗಿ ಆಕರ್ಷಿತವಾಗಿದ್ದಿರಬೇಕು, ಎಲ್ಲಕ್ಕಿಂತ ಆ ಕುರೂಪಿಯ ಸಂಗವೇ ಶ್ರೇಷ್ಠವೆನಿಸಬೇಕಾದರೆ ಅವನ ಸೆಳೆತವು ಎಷ್ಟು ಪ್ರಬಲವಾಗಿರಬೇಕು! ಕ್ಷುದ್ರವಾದುದಿರಬಹುದು, ಆದರೆ ಅದರೆಡೆಗೆ ಆಳವಾಗಿ ಆಕರ್ಷಿತವಾಗುವ ಮನಸ್ಸಿನ ವೈಚಿತ್ರದ ಬಗ್ಗೆ ಜನ್ನನು ಈ ಕಾವ್ಯದ ಮೂಲಕ ನಮ್ಮನ್ನು ಆಲೋಚಿಸುವಂತೆ ಮಾಡುತ್ತಾನೆ. 'ಅನಂತನಾಥಪುರಾಣ'ದ ಚಂಡಶಾಸನ-ಸುನಂದೆಯರ ಪ್ರಸಂಗವೂ ಇಂತಹುದೇ ತೀವ್ರ ಪ್ರೇಮವನ್ನು ಚಿತ್ರಿಸುವಂತಹದು, ಇಲ್ಲಿಯೂ ಸ್ನೇಹಿತನ ಹೆಂಡತಿಯನ್ನು ಪ್ರೇಮಿಸಿದ ಚಂಡಶಾಸನದ ಬಗ್ಗೆ ನಮ್ಮ ಗೌರವವು ಹಾಳಾಗುವುದಾದರೂ, ತಾನು ಪ್ರೇಮಿಸಿದ ಹೆಣ್ಣು ಸತ್ತಾಗ 'ಸಾವಿನಲ್ಲಿಯೂ ನಿನ್ನನ್ನು ಸೇರುತ್ತೇನೆ' ಎಂದು ಸಹಗಮನವನ್ನು ಮಾಡುವ ಅವನು ಕೊನೆಗೆ ನಮ್ಮ ಹೃದಯವನ್ನು ಅಪಹರಿಸಿಬಿಡುತ್ತಾನೆ. ಒಂದು ಕಾವ್ಯದಲ್ಲಿ ಹೆಣ್ಣಿನ ಪ್ರೇಮ ಮತ್ತೊಂದರಲ್ಲಿ ಗಂಡಿನ ಪ್ರೇಮ ಈ ರೀತಿ ಎರಡೂ ದೃಷ್ಟಿಕೋನಗಳಿಂದ

ಮಾನವ ಜೀವನದ ಅತ್ಯಂತ ಪ್ರಮುಖ ಸಮಸ್ಯೆಯೆಡೆಗೆ ಜನ್ನನು ನಮ್ಮ ಗಮನ ಸೆಳೆಯುತ್ತಾನೆ. 'ಮೋಹ ಹುಟ್ಟುವಾಗ ಕುಲಪದವಿಗಳನ್ನು ನೋಡುವುದಿಲ್ಲ; ಪಾತ್ರಾ ಪಾತ್ರಗಳನ್ನು ಲೆಕ್ಕಿಸುವುದಿಲ್ಲ. ಒಂದು ದಿಕ್ಕಿಗೆ ಹರಿಯತೊಡಗಿದರೆ, ಅದಕ್ಕೆ ಲಜ್ಜೆಯ ಸೋಂಕಿಲ್ಲ, ನೀತಿಯ ಕಟ್ಟಿಲ್ಲ, ಪಾಪಾಪುಣ್ಯಗಳ ಹಂಗಿಲ್ಲ. ಇದು ಹೀಗಾಗುವುದು ಏಕೆ? ಇಲ್ಲಿ ವಿಧಿಯ ಕ್ರೌರ್ಯವೆಷ್ಟು, ಮಾನವನ ದೌರ್ಬಲ್ಯವೆಷ್ಟು? ಹೀಗೆ ತುಂಬಿದ ಸಂಸಾರಗಳು ಒಡೆದು ದಿವ್ಯಮೂರ್ತಿಗಳು ಮಣ್ಣಿನಲ್ಲಿ ಕೆಡೆದು ಪುಡಿಯಾಗುವುದಕ್ಕೆ ಯಾರು ಯಾರು ಎಷ್ಟೆಷ್ಟು ಹೊಣೆ? ಇದೇ ಸಮಸ್ಯೆ.'[೩] ಈ ಸಮಸ್ಯೆಯ ಅದ್ಭುತ ಚಿತ್ರಣವನ್ನು ಮಾಡಿದ ಜನ್ನನು ಕನ್ನಡ ಸಾಹಿತ್ಯದಲ್ಲಿ ಶಾಶ್ವತನಾದ ಕವಿ.

ಆಂಡಯ್ಯನು ಕನ್ನಡ ಭಾಷಾ ಪ್ರಯೋಗದಲ್ಲಿ ಹೊಸ ದಿಂಗತವನ್ನು ತೆರೆದವನು. ಕನ್ನಡದ ಬಗ್ಗೆ ಇವನಂತಹ ವೀರಪಕ್ಷಪಾತವನ್ನು ಪಡೆದ ಕವಿ ಮತ್ತೊಬ್ಬನಿಲ್ಲ. ಸಂಸ್ಕೃತ ಶಬ್ದಗಳನ್ನೇ ಬಳಸದೆ ಕೇವಲ ಅಚ್ಚಗನ್ನಡ ಹಾಗೂ ತದ್ಭವ ಶಬ್ದಗಳನ್ನು ಮಾತ್ರ ಬಳಸಿ ಕಾವ್ಯವನ್ನು ರಚಿಸುವ ಇವನ ನಿರ್ಧಾರ ಸಮಂಜಸ ವಾದುದೋ ಅಲ್ಲವೋ ಎಂಬುದು ಬೇರೆಯ ವಿಷಯ. ಆದರೆ ಕನ್ನಡದ ಸ್ಥಾನಮಾನ ಗಳು ಎರಡನೆಯ ದರ್ಜೆಗಿಳಿದಿದ್ದಾಗ, ಎಲ್ಲ ಶ್ರೇಷ್ಠಕಾರ್ಯಗಳಿಗೆ ಸಂಸ್ಕೃತವು ಯೋಗ್ಯವೇ ಹೊರತು ಕನ್ನಡವಲ್ಲ ಎಂಬ ಭಾವನೆಯಿದ್ದಾಗ, ಕನ್ನಡದ ಪರ ವೀರಾಭಿಮಾನವನ್ನು ತಳೆದುದು ಅಪರೂಪವಾದ ವಿಷಯ. ಆದರೆ ಅದೇ ಹಳೆಯ ಚಂಪೂ ಜಾಡನ್ನೇ ಲನ್ನ ಕಾವ್ಯವನ್ನು ರಚಿಸಲು ಏಕೆ ಅನುಸರಿಸಿದನೋ! ಕನ್ನಡವನ್ನು ಅತ್ಯಂತ ಸೂಕ್ಷ್ಮಭಾವನೆ ಆಲೋಚನೆಗಳ ಅಭಿವ್ಯಕ್ತಿಗೂ ಸಮರ್ಥವಾಗಿ ಬಳಸಿದ ವಚನ ಕಾರರೊಡನೆ ಹೋಲಿಸಿದಾಗ ಆಂಡಯ್ಯನ ಪ್ರಯೋಗ ಸಪ್ಪೆಯಾಗಿಯೇ ಕಾಣುತ್ತದೆ. ಆದರೆ ಅವನ ಅಭಿಮಾನ ಯೋಗ್ಯವಾದದ್ದೆಂಬುದೂ ಮುಖ್ಯವಾದ ವಿಷಯವೇ.

ನಾಗವರ್ಮ ಮೊದಲನೆಯ ತನ್ನ 'ಕಾದಂಬರಿ'ಯಲ್ಲಿ ಸುಂದರವಾದ ಅನುವಾದ ಕಾವ್ಯವನ್ನು ಕನ್ನಡಕ್ಕಿತ್ತಿದ್ದಾನೆ. ಅದು ಕನ್ನಡದ ಮೊದಲನೆಯ ಪ್ರಣಯ ಕಥೆಯೂ ಹೌದು. ಗಂಟುಗಂಟಾದ ಬಾಣಗದ್ಯವನ್ನು ಸೋಸಿ ಅದನ್ನು ವೃತ್ತ-ಕಂದಗಳ ಚೌಕಟ್ಟಿಗೆ ಅಳವಡಿಸಿದುದು ಸಾಧಾರಣ ಸಾಧನೆಯೇನಲ್ಲ, ದುರ್ಗ ಸಿಂಹನು ಕನ್ನಡ ಕನ್ನ ಕಥಾ ಪ್ರಪಂಚಕ್ಕೆ ತನ್ನದೇ ಆದ ಕಾಣಿಕೆಯನ್ನಿತ್ತವನು. ಚಂಪೂವನ್ನು ಬದಲಾಯಿಸಿಕೊಂಡು ಹೆಚ್ಚು ಗದ್ಯದಿಂದ ಕೂಡಿರುವ, ನಿರಾಭರಣ ಶೈಲಿಯಲ್ಲಿ ಕತೆಗಳನ್ನು ಹೇಳಿ ದುರ್ಗಸಿಂಹನು ಈ ಪ್ರಕಾರದ ರೂಪವ್ಯತ್ಯಾಸಕ್ಕೆ ಕಾರಣನಾಗಿದ್ದಾನೆ. ಹರಿಹರನ ಮಾರ್ಗವು ಬೇರೆಯೇ ಆದರೂ ಅವನು ಚಂಪೂವಿನಲ್ಲಿಯೇ 'ಹರಿಹರ ಮಾರ್ಗ'ವನ್ನು ರೂಪಿಸಿದವನು. ಚಂಪೂವನ್ನು ವೀರಶೈವತ್ವಕ್ಕೆ ಒಗ್ಗಿಸಿಕೊಂಡವನು. ಭಕ್ತಿಯ ಶ್ರೇಷ್ಠತೆಯನ್ನು ಪಾರ್ವತಿಯ ಮೂಲಕ ಚಿತ್ರಿಸುವ 'ಗಿರಿಜಾ ಕಲ್ಯಾಣ'ವು ಈ ದಿಸೆಯಲ್ಲಿ ಹೊಸ ರೀತಿಯನ್ನೇ ರೂಪಿಸಿತು. ಷಡಕ್ಷರನು ತನ್ನ ಅಗಾಧ ಪಾಂಡಿತ್ಯ ದಿಂದ ಹದಿನೇಳನೆಯ ಶತಮಾನದಲ್ಲಿ ಚಂಪೂ ಪ್ರಕಾರವನ್ನು ಪುನರುಜ್ಜೀವನಗೊಳಿಸಿ ದವನು. ಅವನ ಕಾವ್ಯಗಳು ಕವಿಸಮಯ, ಶ್ಲೇಷೆಗಳಿಂದ ಇಡಿಕಿರಿದಿದ್ದರೂ ಅಲ್ಲಲ್ಲಿ

ಸುಂದರ ಸನ್ನಿವೇಶಗಳನ್ನೂ ಕಲ್ಪನೆಗಳನ್ನೂ ಒಳಗೊಂಡಿವೆ. ಅವನ 'ರಾಜಶೇಖರ ವಿಳಾಸ'ವು ಪಾಂಡಿತ್ಯವನ್ನು ಒರೆಗೆ ಹಚ್ಚುವ ಒರೆಗಲ್ಲಾಗಿದ್ದ ಕಾಲವೂ ಒಂದಿತ್ತು. ಚಂಪೂವನ್ನು ಬಳಸಿಕೊಂಡು ಷಡಕ್ಷರನು 'ಶಬರ ಶಂಕರ ವಿಳಾಸ'ದಲ್ಲಿ ಖಂಡಕಾವ್ಯವನ್ನು ರಚಿಸಿದುದು ಹೊಸ ಬಗೆ. 'ಬಸವರಾಜ ವಿಜಯ'ದಲ್ಲಿ ಅವನು ಉತ್ತಮ ವೀರಶೈವ ಪುರಾಣವೊಂದನ್ನು ರಚಿಸಿದ್ದಾನೆ.

ಚಂಪೂ ಸಂಪ್ರದಾಯವನ್ನು ಗುರುತಿಸುವಾಗ ನಾವು ಷಡಕ್ಷರನವರೆಗೆ ಹೆಸರಿಸುವುದೇ ವಾಡಿಕೆ. ಮುಂದೆಯೂ ಅನೇಕ ಕವಿಗಳು ಚಂಪೂ ಕೃತಿಗಳನ್ನು ರಚಿಸಿದರು. ಆದರೆ ಅವೆಲ್ಲ ಸಂಪ್ರದಾಯಕ್ಕೆ ಜೋತುಬಿದ್ದ ನೀರಸ ಕೃತಿಗಳು. ಇಪ್ಪತ್ತನೆಯ ಶತಮಾನದಲ್ಲಿಯೂ ಪಾಂಡಿತ್ಯ-ಸಂಪ್ರದಾಯ ಪ್ರಿಯರಿಂದ ಕೆಲವು ಚಂಪೂ ಕಾವ್ಯಗಳು ರಚಿತವಾಗಿವೆ. ಆದರೆ ಯಾವ ವಿಷಯದಲ್ಲಿಯೂ ಅವು ಹೊಸತನದಿಂದ ಕೂಡಿರದೆ ಪೇಲವವಾಗಿವೆ. ಅಲ್ಲದೆ ಕಾವ್ಯರಚನೆಯ ಬಗ್ಗೆಯೇ ಹೊಸ ಸಿದ್ಧಾಂತ-ಮನೋಭಾವಗಳು ಇರುವ ಈಗ ಕನ್ನಡದ ತೀರ ಹಳೆಯ ಕಾವ್ಯ ಪ್ರಕಾರವನ್ನು ಯಾವ ಹೊಸತನ-ಜೀವಂತಿಕೆಗಳಿಂದಲೂ ಕೂಡಿರದಂತೆ ರಚಿಸುವುದರ ಅವಶ್ಯಕತೆಯೇ ಇಲ್ಲ. ವಿ.ಕೃ.ಗೋಕಾಕರು 'ಇಂದಿಲ್ಲ ನಾಳೆ' ಎಂಬ ಗ್ರಂಥವನ್ನು ಚಂಪೂ ಕೃತಿಯೆಂದು ಕರೆದಿದ್ದಾರೆ. ಅವರು ಅಮೆರಿಕ ಪ್ರವಾಸ ಕೈಗೊಂಡಿದ್ದಾಗ ಪಡೆದ ಅನುಭವಗಳ ಕಥನ ಇದರ ವಸ್ತು. ಎಂದರೆ ಇದೊಂದು ಪ್ರವಾಸಕಥನ. ನಲವತ್ತು ಅಧ್ಯಾಯಗಳಿರುವ ಈ ಗ್ರಂಥದಲ್ಲಿ ಗದ್ಯ-ಪದ್ಯಗಳೆರಡೂ ಸೇರಿದೆ. ಪ್ರತಿ ಅಧ್ಯಾಯವೂ ಲೇಖಕರು ಸಂದರ್ಶಿಸಿದ ಸ್ಥಳಗಳು, ಅಲ್ಲಿನ ಜನಜೀವನ ಇವುಗಳ ಬಗೆಗಿನ ಅನುಭವಗಳನ್ನು, ಅನಿಸಿಕೆಗಳನ್ನು ವಿವರಿಸುತ್ತದೆ. ಗದ್ಯದಲ್ಲಿ ಆಯಾ ವಸ್ತು-ವಿಷಯಗಳ ಬಗ್ಗೆ ವಿವರಗಳನ್ನು ಹೇಳಿದನಂತರ ಲೇಖಕರು ಅದಕ್ಕೆ ಸಂಬಂಧಿಸಿದಂತೆ ಬರೆದ ಪದ್ಯಗಳನ್ನು ಕೊಡುತ್ತಾರೆ. ಇದು ಇಲ್ಲಿಯ ತಂತ್ರ. ಹಿಂದಿನ ಚಂಪೂ ರೀತಿಗೂ ಇಲ್ಲಿನ ರೀತಿಗೂ ಗದ್ಯ-ಪದ್ಯ ಮಿಶ್ರಣವೊಂದನ್ನುಳಿದು ಬೇರೆಯ ಸಾಮ್ಯವಿಲ್ಲ. ಹಿಂದಿನ ಚಂಪೂಗಳಂತೆ ಇಲ್ಲಿನ ಗದ್ಯ-ಪದ್ಯಗಳು ಒಂದಕ್ಕೊಂದು ಹೆಣೆದು ಕೊಂಡಂತೆಯೂ ಇಲ್ಲ. ಇಲ್ಲಿನ ಪದ್ಯಗಳು ಸ್ವತಂತ್ರವಾಗಿರಬಲ್ಲವು. ಗದ್ಯ-ಪದ್ಯಗಳ ಮಿಶ್ರಣವಾಗಿರುವುದ ರಿಂದ ಇದನ್ನು ಚಂಪೂ ಎನ್ನಲಾಗಿದೆ.

ಅಡಿ ಟಿಪ್ಪಣಿಗಳು

೧. ಜಿ.ಎಸ್. ಸಿದ್ಧಲಿಂಗಯ್ಯ: 'ಪಂಪ ಪರಂಪರೆಯ ನಿರ್ಮಾಪಕ' (ಪಂಪ: ಒಂದು ಅಧ್ಯಯನ. ೧೯೭೪) ಪು. ೨೯೨

೨. ಅದೇ: ಪು. ೨೯೪

೩. ತೀ.ನಂ. ಶ್ರೀಕಂಠಯ್ಯ: 'ಜನ್ನನ ಕಾವ್ಯಗಳಲ್ಲಿ ಪ್ರಣಯ ನಿರೂಪಣೆ' (ಕಾವ್ಯ ಸಮೀಕ್ಷೆ. ೧೯೫೭) ಪು. ೭೮-೯

ಅನುಬಂಧ ೧

ಕನ್ನಡ ಚಂಪೂ ಕಾವ್ಯಗಳು

	ಕೃತಿ	ಕವಿ	ಕಾಲ	ಮತ
೧.	ಅಜಿತ ತೀರ್ಥಂಕರ ಪುರಾಣ ತಿಲಕ	ರನ್ನ	ಕ್ರಿ.ಶ. ೯೯೩	ಜೈನ
೨.	ಅನಂತನಾಥ ಚರಿತೆ	ಅನಂತಜಿನೇಶ್ವರ	೧೫೮೫	ಜೈನ
೩.	ಅನಂತನಾಥ ಪುರಾಣ	ಜನ್ನ	೧೨೦೯	ಜೈನ
೪.	ಅಭಿನವ ದಶಕುಮಾರ ಚರಿತೆ	ಚೌಂಡಸರ	೧೩೦೦	ಬ್ರಾಹ್ಮಣ
೫.	ಅರ್ಥಪಂಚಿಕೆ	ಚಿಕ್ಕುಪಾಧ್ಯಾಯ	೧೬೭೨	ಶ್ರೀ ವೈಷ್ಣವ
೬.	ಆದಿಪುರಾಣ	ಪಂಪ	೯೪೧	ಜೈನ
೭.	ಕನ್ನಡ ರತ್ನಕರಂಡಕ	ಆಯತವರ್ಮ	೧೪೦೦	ಜೈನ
೮.	ಕಬ್ಬಿಗರ ಕಾವ	ಆಂಡಯ್ಯ	೧೨೩೫	ಜೈನ
೯.	ಕಮಲಾಚಲ ಮಾಹಾತ್ಯ	ಚಿಕ್ಕುಪಾಧ್ಯಾಯ	೧೬೭೨	ಶ್ರೀ ವೈಷ್ಣವ
೧೦.	ಕರ್ಣಾಟಕ ಕಾದಂಬರಿ	ನಾಗವರ್ಮ ೧	೯೯೦	ಬ್ರಾಹ್ಮಣ
೧೧.	ಕುಸುಮಾವಳಿ	ದೇವಕವಿ	೧೨೦೦	ಬ್ರಾಹ್ಮಣ
೧೨.	ಗಯೋಪಾಖ್ಯಾನ	ವೆಂಕಟರಮಣಯ್ಯ	೧೮೭೫	ಬ್ರಾಹ್ಮಣ
೧೩.	ಗಿರಿಜಾ ಕಲ್ಯಾಣ	ಹರಿಹರ	೧೨೦೦	ವೀರಶೈವ
೧೪.	ಚಂದ್ರಪ್ರಭ ಪುರಾಣ	ಅಗ್ಗಳ	೧೧೮೯	ಜೈನ
೧೫.	ಚಿಕ್ಕದೇವರಾಜವಂಶಾವಳಿ	ವೇಣು ಗೋಪಾಲ ವರಪ್ರಸಾದ	೧೬೮೦	ಬ್ರಾಹ್ಮಣ
೧೬.	ಚಿಕ್ಕದೇವರಾಜ ವಿಜಯ	ತಿರುಮಲಾರ್ಯ	೧೬೭೦	ಶ್ರೀ ವೈಷ್ಣವ
೧೭.	ಚೂಡನಾಸ್ಥಾನ	ಪ್ರಭುಗ	೧೫೨೦	ವೀರಶೈವ
೧೮.	ಜಗನ್ನಾಥ ವಿಜಯ	ರುದ್ರಭಟ್ಟ	೧೧೮೫	ಬ್ರಾಹ್ಮಣ
೧೯.	ಜೀವಸಂಭೋದನೆ	ಬಂಧುವರ್ಮ	೧೨೦೦	ಜೈನ
೨೦.	ತ್ರಿಷಷ್ಟಿ ಪುರಾತನ ಚಾರಿತ್ರ	ಸುರಂಗ	೧೫೦೦	ವೀರಶೈವ
೨೧.	ದಶಾವತಾರ ಚರಿತೆ	ಮಲ್ಲರಸ	೧೬೮೦	ಬ್ರಾಹ್ಮಣ
೨೨.	ದಿವ್ಯಸೂರಿ ಚರಿತೆ	ಚಿಕ್ಕುಪಾಧ್ಯಾಯ	೧೬೭೨	ಶ್ರೀ ವೈಷ್ಣವ
೨೩.	ಧರ್ಮನಾಥ ಪುರಾಣ	ಬಾಹುಬಲಿಪಂಡಿತ	೧೩೫೨	ಜೈನ
೨೪.	ಧರ್ಮನಾಥ ಪುರಾಣ	ಮಧುರ	೧೩೮೫	ಜೈನ
೨೫.	ಧರ್ಮಪರೀಕ್ಷೆ	ವೃತ್ತವಿಲಾಸ	೧೩೬೦	ಜೈನ
೨೬.	ಧರ್ಮಾಮೃತ	ನಯಸೇನ	೧೧೧೨	ಜೈನ
೨೭.	ನನ್ನಯ್ಯಗಳ ಚಾರಿತ್ರ	ಕವಿಮಾದಣ್ಣ	೧೬೫೦	ವೀರಶೈವ
೨೮.	ನಳ ಚರಿತ್ರೆ	ಚೌಂಡರಸ	೧೩೦೦	ಬ್ರಾಹ್ಮಣ
೨೯.	ನಳೋಪಾಖ್ಯಾನ	ಶಿವಶಂಕರ ಶಾಸ್ತ್ರಿ	೧೯ನೇ ಶತ	?
೩೦.	ನೇಮಿನಾಥ ಪುರಾಣ	ನೇಮಿಚಂದ್ರ	೧೧೭೦	ಜೈನ

	ಕೃತಿ	ಕವಿ	ಕಾಲ	ಮತ
೩೧.	ನೇಮಿನಾಥ ಪುರಾಣ	ಮಹಾಬಲ	೧೨೫೪	ಜೈನ
೩೨.	ಪಂಚತಂತ್ರ	ದುರ್ಗಸಿಂಹ	೧೦೨೫	ಬ್ರಾಹ್ಮಣ
೩೩.	ಪಂಚತಂತ್ರ	ಶಂಕರ ಕವಿ	೧೬೪೦-೬೦	?
೩೪.	ಪಶ್ಚಿಮರಂಗ ಮಹಾತ್ಮ	ತಿಮ್ಮ ಕವಿ	೧೬೭೭	ಬ್ರಾಹ್ಮಣ
೩೫.	ಪಾರ್ಶ್ವನಾಥ ಪುರಾಣ	ಪಾರ್ಶ್ವಪಂಡಿತ	೧೨೦೫	ಜೈನ
೩೬.	ಪುಣ್ಯಾಸ್ರವ	ನಾಗರಾಜ	೧೩೩೧	ಜೈನ
೩೭.	ಪುಷ್ಪದಂತ ಪುರಾಣ	ಗುಣವರ್ಮ ೧೧	೧೨೧೫	ಜೈನ
೩೮.	ಬತ್ತೀಸಪುತ್ಥಲಿ ಕತೆ	ದೇವ	೧೭೨೫	ಬ್ರಾಹ್ಮಣ
೩೯.	ಬಸವರಾಜ ವಿಜಯ	ಷಡಕ್ಷರ	೧೬೫೫	ವೀರಶೈವ
೪೦.	ಭವ್ಯಜನ ಚಿಂತಾಮಣಿ	ಚಾರುಕೀರ್ತಿಪಂಡಿತ	೧೮೧೫	ಜೈನ
೪೧.	ಭವ್ಯಾಮೃತ ಮಹಾ ಪುರಾಣ	ಚಂದ್ರಸಾಗರ	೧೮೧೦	ಜೈನ
೪೨.	ಮನ್ಮಥ ವಿಜಯ	ಕವಿಮಲ್ಲ	೧೪೦೦	ಬ್ರಾಹ್ಮಣ
೪೩.	ಮಲ್ಲಿನಾಥ ಪುರಾಣ	ನಾಗಚಂದ್ರ	೧೧೦೦	ಜೈನ
೪೪.	ಯಶೋಧರ ಚರಿತೆ	ಜನ್ನ	೧೨೦೯	ಜೈನ
೪೫.	ಯಾದವಗಿರಿ ಮಾಹಾತ್ಮ್ಯ	ತಿಮ್ಮ ಕವಿ	೧೬೭೭	ಬ್ರಾಹ್ಮಣ
೪೬.	ರಮಾಭ್ಯುದಯ	ವೆಂಕಮಾತ್ಯ	೧೭೭೦	ಬ್ರಾಹ್ಮಣ
೪೭.	ರಸಿಕಮನೋರಂಜನ ವಿಲಾಸ	ಕುಂಡಲಗಿರಿ	೧೫೯೦	?
೪೮.	ರಾಜಶೇಖರ ವಿಳಾಸ	ಷಡಕ್ಷರ	೧೬೫೫	ವೀರಶೈವ
೪೯.	ರಾಜೇಂದ್ರ ವಿಜಯ	ಮುರಿಗೆ ದೇಶಿಕೇಂದ್ರ	೧೫೬೦	ವೀರಶೈವ
೫೦.	ರಾಮಕಥಾವತಾರ	ದೇವಚಂದ್ರ	೧೮೩೮	ಜೈನ
೫೧.	ರಾಮಚಂದ್ರ ಚರಿತ ಪುರಾಣ	ನಾಗಚಂದ್ರ	೧೧೧೦	ಜೈನ
೫೨.	ರುಕ್ಮಾಂಗದ ಚರಿತೆ	ಚಿಕ್ಕುಪಾಧ್ಯಾಯ	೧೬೭೨	ಶ್ರೀ ವೈಷ್ಣವ
೫೩.	ರುಕ್ಮಿಣೀ ಪರಿಣಯ	ಶ್ರೀನಿವಾಸ್ಯೆಂಗಾರ್	೧೯ನೇ ಶತ	ಶ್ರೀ ವೈಷ್ಣವ
೫೪.	ರೇಣುಕ ವಿಜಯ	ಸಿದ್ಧಲಿಂಗದೇವ	೧೭೦೦	ಜೈನ
೫೫.	ಲೀಲಾವತಿ	ನೇಮಿಚಂದ್ರ	೧೧೭೦	ಜೈನ
೫೬.	ವರ್ಧಮಾನ ಪುರಾಣ	ಅಚಣ್ಣ	೧೧೯೫	ಜೈನ
೫೭.	ವರ್ಧಮಾನ ಪುರಾಣ	ನಾಗವರ್ಮ	೧೦೪೨	ಜೈನ
೫೮.	ವಿಕ್ರಮಾರ್ಜುನ ವಿಜಯ	ಪಂಪ	೯೪೧	ಜೈನ
೫೯.	ವಿರೂಪಾಕ್ಷಾಸ್ಥಾನ	ಚಂದ್ರಕವಿ	೧೪೩೦	ವೀರಶೈವ
೬೦.	ವಿಷ್ಣುಪುರಾಣ	ಚಿಕ್ಕುಪಾಧ್ಯಾಯ	೧೬೭೨	ಶ್ರೀ ವೈಷ್ಣವ
೬೧.	ವೀರಭದ್ರ ವಿಜಯ	ವೀರಭದ್ರ ರಾಜ	೧೫೩೦	ವೀರಶೈವ
೬೨.	ವೆಂಕಟಗಿರಿ ಮಾಹಾತ್ಮ್ಯ	ತಿಮ್ಮಕವಿ	೧೬೭೭	ಬ್ರಾಹ್ಮಣ
೬೩.	ವೆಂಕಟೇಶ್ವರ ಪ್ರಬಂಧ	ವೆಂಕಕವಿ	೧೬೫೦	ಬ್ರಾಹ್ಮಣ
೬೪.	ವೈಭೋಗರಾಜಾಸ್ಥಾನ	ಪ್ರಭಾಗ	೧೫೨೦	ವೀರಶೈವ
೬೫.	ಶಬರ ಶಂಕರ ವಿಲಾಸ	ಷಡಕ್ಷರ	೧೬೫೫	ವೀರಶೈವ
೬೬.	ಶಾಂತಿ ಪುರಾಣ	ಪೊನ್ನ	೯೫೦	ವೀರಶೈವ
೬೭.	ಶಾಂತೀಶ್ವರ ಪುರಾಣ	ಕಮಲಭವ	೧೨೩೫	ವೀರಶೈವ
೬೮.	ಶಿವಲಿಂಗಚಾರಿತ್ರ	ಶಾಂತವೀರದೇಶಿಕ	೧೬೫೦	ವೀರಶೈವ
೬೯.	ಶೃಂಗಾರಸಾರ	ಸೋಮರಾಜ	೧೨೨೨	ವೀರಶೈವ

	ಕೃತಿ	ಕವಿ	ಕಾಲ	ಮತ
೭೦.	ಶ್ರೀರಂಗಮಾಹಾತ್ಮ್ಯ	ಮಲ್ಲಿಕಾರ್ಜುನ	೧೬೭೮	ಬ್ರಾಹ್ಮಣ
೭೧.	ಸಮಯ ಪರೀಕ್ಷೆ	ಬ್ರಹ್ಮಶಿವ	೧೧೦೦	ಜೈನ
೭೨.	ಸರಸ್ವತೀ ಪ್ರಬಂಧ	ಹಿರಣ್ಯಗರ್ಭ	೧೮೬೦	ಜೈನ
೭೩.	ಸರಜಾಹನುಮೇಂದ್ರ ಚರಿತೆ	ಕೃಷ್ಣಶರ್ಮ	೧೭೦೦	ಶ್ರೀ ವೈಷ್ಣವ
೭೪.	ಸಾತ್ವಿಕ ಬ್ರಹ್ಮ ವಿದ್ಯಾವಿಲಾಸ	ಚಿಕ್ಕುಪಾಧ್ಯಾಯ	೧೬೭೨	ಶ್ರೀ ವೈಷ್ಣವ
೭೫.	ಸಾಹಸಭೀಮ ವಿಜಯ	ರನ್ನ	೯೯೩	ಜೈನ
೭೬.	ಸುಕುಮಾರ ಚರಿತೆ	ಶಾಂತಿನಾಥ	೧೦೬೮	ಜೈನ
೭೭.	ಹರಿವಂಶ ಪುರಾಣ	ಕರ್ಣಪಾರ್ಯ	೧೧೪೦	ಜೈನ
೭೮.	ಹರಿವಂಶಾಭ್ಯುದಯ	ಬಂಧುವರ್ಮ	೧೨೦೦	ಜೈನ
೭೯.	ಹಸ್ತಿಗಿರಿ ಮಾಹಾತ್ಮ್ಯ	ಚಿಕ್ಕುಪಾಧ್ಯಾಯ	೧೬೭೨	ಶ್ರೀ ವೈಷ್ಣವ
೮೦.	ಹಾಲಾಸ್ಯ ಪುರಾಣ	ಇಮ್ಮಡಿ ಮುರಿಗೆಯ ಸ್ವಾಮಿ	೧೭೨೦	ವೀರಶೈವ
೮೧.	ಹಾಲಾಸ್ಯ ಮಾಹಾತ್ಮ್ಯ	ವೆಂಕಟೇಶ	೧೭೪೦	ಬ್ರಾಹ್ಮಣ
೮೨.	ಹಿತೋಪದೇಶ	ಧೋಂಡೋ ನರಸಿಂಹ ಮುಳಬಾಗಿಲು	೧೯ನೇ ಶತ	ಬ್ರಾಹ್ಮಣ

ಅನುಬಂಧ ೨

ಕನ್ನಡ ಚಂಪೂ ಕಾವ್ಯ ಪರಂಪರೆ

■

ಮೊತ್ತ ಮೊದಲು ಚಂಪೂ ಕಾವ್ಯ ಲಕ್ಷಣವನ್ನು ಹೇಳಿದವನು ದಂಡಿ. ತನ್ನ 'ಕಾವ್ಯಾದರ್ಶ'ದಲ್ಲಿ ಅವನು "ಗದ್ಯಪದ್ಯಮಯೀ ಕಾಚಿತ್ ಚಂಪೂ ರಿತ್ಯಭಿಧೀಯತೇ" ಎಂಬ ಸೂತ್ರವನ್ನಿತ್ತ. ಅದರ ಪ್ರಕಾರ ಚಂಪೂ ಎಂದರೆ ಗದ್ಯಪದ್ಯಗಳು ಸೇರಿದ ಹಾಗೂ ಇತರ ಕೆಲವು ಲಕ್ಷಣಗಳುಳ್ಳ ಕಾವ್ಯ ಪ್ರಕಾರ. ಅದರೆ ಆ ಇತರ ಲಕ್ಷಣಗಳು ಯಾವುದೆಂದು ಅವನು ಸ್ಪಷ್ಟಪಡಿಸಿಲ್ಲ. ಬಲದೇವ ಉಪಾಧ್ಯಾಯರು ತಮ್ಮ 'ಸಂಸ್ಕೃತ ಸಾಹಿತ್ಯದ ಇತಿಹಾಸ' ಎಂಬ ಗ್ರಂಥದಲ್ಲಿ ದಂಡಿಯ ಚಂಪೂ ಕುರಿತ ಈ ಸೂತ್ರವಾಕ್ಯಕ್ಕೆ ಒಂದು ಪಾಠಾಂತರವಿದೆಯೆಂದು ತಿಳಿಸುತ್ತಾರೆ. ಅದೆಂದರೆ, "ಗದ್ಯಪದ್ಯ ಮಯೀ ಕಾಚಿತ್ ಚಂಪೂರಿತ್ಯಭಿವಿದ್ಯತೇ"[1] ಎಂದು ಉಲ್ಲೇಖಿಸುತ್ತಾರೆ. ದಂಡಿಯು ಸ್ವತಃ ಚಂಪೂ ಕಾವ್ಯವಾವುದನ್ನೂ ನೋಡಿರಲಿಲ್ಲ, ಹಾಗಾಗಿ ಅವನ ವ್ಯಾಖ್ಯೆಯು ಇತರರ ಹೇಳಿಕೆಗಳನ್ನು ಆಧರಿಸಿದ್ದು ಎಂದು ಅದಕ್ಕೆ ಅವರು ವ್ಯಾಖ್ಯಾನಿಸುತ್ತಾರೆ. ಅದೇನೇ ಇರಲಿ, ಕನ್ನಡ ಚಂಪೂ ಕಾವ್ಯಗಳ ಲಕ್ಷಣಗಳನ್ನು ಹೀಗೆ ಸಂಗ್ರಹಿಸಬಹುದು: ಗದ್ಯಪದ್ಯ ಮಿಶ್ರಣ; ಗದ್ಯಪ್ರಾಚುರ್ಯ; ಇತರ ಛಂದೋವೃತ್ತಗಳಿದ್ದರೂ ಕಂದಗಳ ಬಳಕೆ ಹೆಚ್ಚು; ಬಳಸುವ ಅಕ್ಷರವೃತ್ತಗಳಲ್ಲಿ 'ಖ್ಯಾತ ಕರ್ಣಾಟಕಗಳು' (ಚಂಪಕಮಾಲಾ, ಉತ್ಪಲಮಾಲಾ, ಮತ್ತೇಭ ವಿಕ್ರೀಡಿತ, ಶಾರ್ದೂಲ ವಿಕ್ರೀಡಿತ, ಸ್ರಗ್ಧರಾ ಹಾಗೂ ಮಹಾಸ್ರಗ್ಧರಾ) ಬಹುಸಂಖ್ಯೆಯವು, ಅದರೆ ಕನ್ನಡ ದೇಶೀ ಛಂದೋರೂಪಗಳಾದ ತ್ರಿಪದಿ, ಅಕ್ಕರ ಮತ್ತಿತರವುಗಳ ಬಳಕೆಯೂ ಉಂಟು; ವಸ್ತು ಮಹಾಕಾವ್ಯದ್ದು; ಕಾವ್ಯವನ್ನು ಲಂಬ ಅಥವಾ ಆಶ್ವಾಸಗಳಾಗಿ ವಿಂಗಡಿಸಲಾಗಿರುತ್ತದೆ; ಮತ್ತು ಕಾವ್ಯದ ಭಾಷೆ ಹಳಗನ್ನಡ. ಸಂಸ್ಕೃತ ಕಾವ್ಯ ಮಾದರಿಯನ್ನನುಸರಿಸಿ ಸಂಸ್ಕೃತಕ್ಕೆ ಸಹಜವಾದ ಅಕ್ಷರ ವೃತ್ತಗಳನ್ನು ಬಳಸುವುದರಿಂದಾಗಿ ಭಾಷೆ ದೀರ್ಘಸಮಾಸಗಳಿಂದ ಕೂಡಿದ ಶೈಲಿಯಲ್ಲಿರುತ್ತದೆ. ಕವಿಗಳು ದೇಸೀ ಛಂದೋರೂಪಗಳಲ್ಲಿ ಕಾವ್ಯ ರಚಿಸತೊಡಗಿದ ಮೇಲೆ ಶೈಲಿಯೂ ಸಹಜವಾಗಿ ಹೆಚ್ಚು ತಿಳಿಯಾಯಿತು ಎಂಬುದನ್ನು ಗಮನಿಸಬಹುದು.

ಚಂಪೂ ಪ್ರಕಾರದ ಮೂಲದ ಬಗ್ಗೆ ವಿವಾದವಿದೆ. ಡಾ. ರಂ.ಶ್ರೀ. ಮುಗಳಿ ಮತ್ತು ಡಾ. ಸಿ.ಆರ್. ದೇಶಪಾಂಡೆ ಅವರ ನಡುವೆ ಈ ಬಗ್ಗೆ ದೀರ್ಘಕಾಲ ಚರ್ಚೆ ನಡೆಯಿತು. ಮುಗಳಿಯವರು ಚಂಪೂ ಕನ್ನಡ ಮೂಲದ್ದು ಎಂದು ಪ್ರತಿಪಾದಿಸಿದರೆ, ದೇಶಪಾಂಡೆ ಅದು ಸಂಸ್ಕೃತದಲ್ಲಿ ಜನ್ಮತಾಳಿದ್ದು ಎಂದು ವಾದಿಸಿದರು. 'ಚಂಪೂ' ಎಂಬ ಶಬ್ದಕ್ಕೆ 'ಚೆನ್' ಎಂಬ ಕನ್ನಡ ಪದವೇ ಮೂಲ; ಕ್ರಿಸ್ತಶಕ ಒಂಬತ್ತನೇ ಶತಮಾನದ ಕನ್ನಡ ಕವಿ ಗುಣವರ್ಮನು ಮೊತ್ತಮೊದಲ ಚಂಪೂ ಕವಿಯಾಗಿರುವ

ಸಾಧ್ಯತೆಯಿದೆ, ಅನಂತರವಷ್ಟೇ ಸಂಸ್ಕೃತದಲ್ಲಿ ಚಂಪೂಕಾವ್ಯಗಳು ಜನ್ಮ ತಾಳಿದವು
ಸಂಸ್ಕೃತದಲ್ಲಿ ಚಂಪೂಕಾವ್ಯಗಳನ್ನು ಬರೆದ ಆದ್ಯರೂ ಕರ್ನಾಟಕದವರು; ಈ
ಪ್ರಕಾರದಲ್ಲಿ ರಚಿತವಾದ ಕಾವ್ಯಗಳಲ್ಲಿ ಕನ್ನಡ ಕಾವ್ಯಗಳೇ ಶ್ರೇಷ್ಠವಾದವು. ಇವ
ಮುಗಳಿಯವರು ತಮ್ಮ ವಾದಕ್ಕೆ ಪೂರಕವಾಗಿ ಮುಂದಿಟ್ಟ ಕಾರಣಗಳು.[೨] ಆದರೆ ಈ
ಬಗ್ಗೆ ಹೆಚ್ಚಿನ ವಿವಾದಕ್ಕೆ ತೊಡಗದೆ ಕನ್ನಡ ಚಂಪೂ ಕಾವ್ಯ ಪರಂಪರೆಯ ಬಗ
ಚರ್ಚೆಯನ್ನು ಮುಂದುವರೆಸಬಹುದು.

ಕ್ರಿಸ್ತಶಕ ೮೫೦ರಲ್ಲಿ ರಚಿತವಾಗಿರಬಹುದಾದ ಕನ್ನಡದ ಅತ್ಯಂತ ಹಳೆಯ ಉಪಲಬ್ಧ ಗ್ರಂಥವಾದ 'ಕವಿರಾಜಮಾರ್ಗ'ದಲ್ಲಿ ಆ ಕಾಲಕ್ಕೆ ಹಿಂದಿದ್ದ ಅನೇ ಗದ್ಯಪದ್ಯ ಕವಿಗಳ ಉಲ್ಲೇಖವಿರುವುದು ಸರ್ವವಿದಿತ. ಆ ಕವಿಗಳಲ್ಲಿ ಕೆಲವರಾದರು ಚಂಪೂ ಕಾವ್ಯಗಳನ್ನು ರಚಿಸಿದವರಿರಬೇಕು ಎಂಬುದು ವಿದ್ವಾಂಸರ ಊಹ 'ಕವಿರಾಜಮಾರ್ಗ'ವು ಹೆಸರಿಸುವ ಇತರ ಕಾವ್ಯಪ್ರಕಾರಗಳ ಜೊತೆಗೆ 'ಗದ್ಯಕಥಾ ಎಂಬುದೂ ಸೇರಿದೆ. ಇದೇ ಚಂಪೂವಿಗೆ ಮೂಲ ವಿರಬೇಕು ಎಂಬುದು ಕೆಲ ವಿದ್ವಾಂಸರ ಅಭಿಪ್ರಾಯ.[೩]

'ಮಹೇಂದ್ರಾಂತಕ' ಎಂಬ ಬಿರುದಿದ್ದ ಹನ್ನೊಂದನೆಯ ಶತಮಾನ ಎರೆಯಪ್ಪ ಎಂಬ ಗಂಗರಾಜನ ಆಸ್ಥಾನಕವಿಯಾದ ಗುಣವರ್ಮನೆಂಬುವವನ 'ಹರಿವಂಶ' ಮತ್ತು 'ಶೂದ್ರಕ' ಎಂಬ ಎರಡು ಕಾವ್ಯಗಳನ್ನು ರಚಿಸಿರು ವನೆಂದ ಹೇಳುತ್ತಾರೆ. ಮೊದಲನೆಯದು ಇಪ್ಪತ್ತೆರಡನೆಯ ನೇಮಿನಾಥನ ಬಗೆಗಿನ ಪುರಾ ಕಾವ್ಯವಾದರೆ, ಎರಡನೆಯದು ಆ ಹೆಸರಿನ ಒಬ್ಬ ರಾಜನನ್ನು ನಾಯಕನನ್ನಾಗಿ ಮಾ ಕೊಂಡಿರುವ ಕಾವ್ಯವಾಗಿರಬಹುದು. ಇದರಲ್ಲಿ ಕಾವ್ಯನಾಯಕನೊಡನೆ ತನ್ನ ಆಶ್ರಯ ದಾತನನ್ನು ಸಮೀಕರಿಸಿರುವ ಸಂಭವವಿದ್ದು, ಇದೇ ಮುಂದಿನ ಪಂಪ ಮುಂತಾ ಕವಿಗಳಿಗೆ ಹಾಗೆ ಮಾಡಲು ಪ್ರೇರಣೆಯಿತ್ತಿರಬಹುದು. ಅಲ್ಲದೆ, ಗುಣವರ್ಮನು ಒಂದ ಪುರಾಣ ಕಾವ್ಯ ಮತ್ತೊಂದು ಲೌಕಿಕ ಕಾವ್ಯ–ಹೀಗೆ ಎರಡು ಕಾವ್ಯಗಳನ್ನು ರಚಿಸು ಪರಂಪರೆಗೂ ಆದ್ಯನಾಗಿರಬಹುದು. ಇವೆರಡೂ ಕಾವ್ಯಗಳು ಈಗ ಉಪಲಬ್ಧವಿಲ್ಲ ಆದರೆ, ವಿದ್ವಾಂಸರು ಮೇಲಿನ ಊಹೆಗಳನ್ನು ಮಾಡುವುದು ಆ ಕಾವ್ಯಗಳದ್ದೆಂದ ಭಾವಿಸಲಾಗಿರುವ ಅನಂತರದ ಸಂಕಲನಗಳಲ್ಲಿ ಸೇರ್ಪಡೆಯಾದ ಪದ್ಯಗಳನ ಆಧಾರವಾಗಿರಿಸಿಕೊಂಡು.

ಕ್ರಿ.ಶ. ೯೫೦ರಲ್ಲಿ 'ಶಾಂತಿಪುರಾಣ'ವನ್ನು ಬರೆದ ಪೊನ್ನ ಹಾಗೂ ಕನ್ನ ಛಂದಸ್ಸಿನ ಬಗ್ಗೆ ಸಂಸ್ಕೃತದಲ್ಲಿ 'ಛಂದೋನುಶಾಸನ'ವೆಂಬ ಹೆಸರಿನ ಗ್ರಂಥ ರಚಿಸಿರು ಜಯಕೀರ್ತಿಯಂತಹವರು ತಮ್ಮ ಕೃತಿಗಳಲ್ಲಿ ಅಸಗನೆಂಬ ಕವಿಯ ಬ ಗೌರವದಿಂದ ಉಲ್ಲೇಖ ಮಾಡುತ್ತಾರೆ. ಅಸಗನು 'ಕುಮಾರ ಸಂಭವ'ವೆಂಬ ಕನ್ನ ಕಾವ್ಯವನ್ನು ರಚಿಸಿರುವನೆಂದು ಇವರು ಸ್ಪಷ್ಟವಾಗಿ ನುಡಿಯುತ್ತಾರೆ. ಈ ಅಸಗನು ಒ ಜೈನಕವಿಯೆಂದೂ, ಹಾಗಾಗಿ ಈ ಕಾವ್ಯವು ಶಿವ–ಪಾರ್ವತಿಯರ ಜನಜನಿ ವಸ್ತುವನ್ನು ಕುರಿತಾಗಿರದೆ ಜೈನಸಂಬಂಧೀ ವಸ್ತುವನ್ನು ಒಳಗೊಂಡಿರಬಹುದೆಂದ

ವಿದ್ವಾಂಸರು ಭಾವಿಸುತ್ತಾರೆ. ಅಸಗನೆಂಬ ಒಬ್ಬ ಸಂಸ್ಕೃತ ಕವಿಯು ರಚಿಸಿರುವ 'ವರ್ಧಮಾನ ಪುರಾಣ' ಮತ್ತು 'ಶಾಂತಿಪುರಾಣ' ಎಂಬ ಎರಡು ಕಾವ್ಯಗಳು ಉಪಲಬ್ಧವಿವೆ. ಕನ್ನಡ ಕವಿಯೂ ಈ ಪುರಾಣಗಳನ್ನು ಬರೆದ ಸಂಸ್ಕೃತ ಕವಿಯೂ ಅಭಿನ್ನರು ಎಂಬುದಕ್ಕೆ ಆಧಾರಗಳಾವುವೂ ಇಲ್ಲ. ಆದರೆ ಕನ್ನಡ ಕಾವ್ಯವಾದ 'ಕುಮಾರಸಂಭವ'ವು ಒಂದು ಚಂಪೂ ಕಾವ್ಯವಾಗಿರುವ ಸಂಭವಗಳು ಹೆಚ್ಚು ಎಂದು ವಿದ್ವಾಂಸರು ಭಾವಿಸುತ್ತಾರೆ.

ಹದಿಮೂರನೆಯ ಶತಮಾನದ ಪ್ರಸಿದ್ಧ ವ್ಯಾಕರಣಕಾರನಾದ ಕೇಶಿ ರಾಜನು ತನ್ನ 'ಶಬ್ದಮಣಿದರ್ಪಣ'ದಲ್ಲಿ ವ್ಯಾಕರಣ ಸೂತ್ರಗಳಿಗೆ ನೀಡಿರುವ ಪ್ರಯೋಗ ಪದ್ಯಗಳಲ್ಲಿ ಕೆಲವು ಗುಣನಂದಿಯ ಕೃತಿಯಿಂದ ಆರಿಸಿದವು ಎಂದು ಹೇಳುತ್ತಾನೆ; ಅದರೆ ಆ ಕೃತಿಯ ಹೆಸರನ್ನು ಉಲ್ಲೇಖಿಸುವುದಿಲ್ಲ. ಅಂತೆಯೇ, 'ಸೂಕ್ತಿ ಸುಧಾರ್ಣವ' ವೆಂಬ ಸಂಕಲನ ಗ್ರಂಥದ ಕರ್ತೃವಾದ ಮಲ್ಲಿಕಾರ್ಜುನನೂ ತನ್ನ ಕೃತಿಯಲ್ಲಿ ಗುಣನಂದಿಯ ಕಾವ್ಯದಿಂದ ಆರಿಸಿದ ಪದ್ಯಗಳಿವೆಯೆಂದು ಹೇಳಿಕೊಳ್ಳುತ್ತಾನೆ; ಅವನೂ ಆ ಕೃತಿಯ ಹೆಸರನ್ನು ನೀಡುವುದಿಲ್ಲ. ಹಾಗಾಗಿ ಈ ಗುಣನಂದಿಯ ಕೃತಿ, ಕಾಲಗಳ ಬಗ್ಗೆ ಯಾವುದೇ ಖಚಿತ ನಿರ್ಣಯಕ್ಕೆ ಬರಲು ಸಾಧ್ಯವಾಗುವುದಿಲ್ಲ.

ಮೇಲೆ ಉಲ್ಲೇಖಿಸಿದವರೆಲ್ಲ 'ಕವಿರಾಜಮಾರ್ಗ' ಹಾಗೂ ಪಂಪನ ಕಾಲ–ಈ ನಡುವಣ ಅವಧಿಗೆ ಸೇರಿದವರು. 'ಕವಿರಾಜಮಾರ್ಗ' ವು ವಿಮಲೋದಯ, ನಾಗಾರ್ಜುನ, ಜಯಬಂಧು, ದುರ್ವಿನೀತ ಮುಂತಾದ ಗದ್ಯಕಾರರನ್ನೂ; ಶ್ರೀವಿಜಯ, ಕವೀಶ್ವರ ಪಂಡಿತಚಂದ್ರ, ಲೋಕಪಾಲ ಮುಂತಾದ ಪದ್ಯರಚನಕಾರರನ್ನೂ ಹೆಸರಿಸುತ್ತದೆ.[೪] ಅದರಲ್ಲಿಯೇ, 'ಗದ್ಯಕಥಾ' ಮತ್ತು 'ಗದ್ಯಪದ್ಯಸಮ್ಮಿಶ್ರಿತ' ಎಂಬ ಎರಡು ಪದ್ಯಕಾವ್ಯ ಪ್ರಭೇದಗಳ ಉಲ್ಲೇಖವೂ ಇದೆ. ಪ್ರಾಯಶಃ 'ಗದ್ಯಕಥಾ' ಎಂಬ ದೀರ್ಘಗದ್ಯವೂ ಗದ್ಯಪದ್ಯಗಳ ಸಮ್ಮಿಶ್ರಣವಾದ 'ಚತ್ತಾಣ'ದಂತಹ ಸಣ್ಣ ರಚನೆಗಳೂ ಸೇರಿ ಚಂಪೂವಿನ ರೂಪವನ್ನು ಪಡೆದಿರಬಹುದು. ಕನ್ನಡದಲ್ಲಿ ಚಂಪೂ ಕೃತಿಗಳನ್ನು ವಸ್ತುಕ ಹಾಗೂ ಮಾರ್ಗ ಕಾವ್ಯಗಳೆಂದೂ ಕರೆಯುವ ಪರಿಪಾಠವಿದೆ.

ಕನ್ನಡದಲ್ಲಿ ಚಂಪೂ ಕಾವ್ಯವಾಹಿನಿಯು ಮೂರು ಧಾರೆಗಳಲ್ಲಿ ಹರಿದಿದೆ; ಅವೆಂದರೆ, ಜೈನ, ಬ್ರಾಹ್ಮಣ ಮತ್ತು ವೀರಶೈವ. ಇವುಗಳಲ್ಲಿ ಜೈನ ಧಾರೆಯು ಅತ್ಯಂತ ಹೆಚ್ಚಿನ ಸ್ವಂತಿಕೆಯನ್ನು ಪಡೆದ ಮತ್ತು ಅತ್ಯಂತ ಸಾರ್ಥಕವಾದ ಕಾವ್ಯಗಳನ್ನು ನೀಡಿದೆ. ಕನ್ನಡದಲ್ಲಿ ದೊರಕುವ ಅತ್ಯಂತ ಪ್ರಾಚೀನ ಚಂಪೂ ಕಾವ್ಯಗಳೆಂದರೆ ಪಂಪನವೇ. ಅವನ 'ಆದಿಪುರಾಣ'ವು ಮೊದಲ ತೀರ್ಥಂಕರನಾದ ಋಷಭದೇವನ ಬಗ್ಗೆ ಬರೆದ ಪುರಾಣಕಾವ್ಯವಾದರೆ, 'ವಿಕ್ರಮಾರ್ಜುನವಿಜಯ'ವು ವ್ಯಾಸನ ಸಮಸ್ತಭಾರತವನ್ನು ಸಂಗ್ರಹವಾಗಿ ಹೇಳಿದ ಲೌಕಿಕ ಕೃತಿಯಾಗಿದೆ. ಪಂಪನನ್ನು ಕನ್ನಡದ 'ಆದಿಕವಿ' ಯೆಂದು ಕರೆಯುವುದು ಅವನ ಕಾವ್ಯಗಳು ಅತ್ಯಂತ ಪ್ರಾಚೀನ ಉಪಲಬ್ಧ ಕೃತಿಗಳೆಂಬ ಕಾರಣದಿಂದ ಮಾತ್ರವಲ್ಲ, ಅವನ ಕಾವ್ಯಗಳ ಗುಣಗಳಿಂದ ಮತ್ತು ಮುಂದಿನ

ಜೈನ ಕವಿಗಳಿಗೆ ಹಾಕಿಕೊಟ್ಟ ರಾಜಮಾರ್ಗದಿಂದ ಹಾಗೂ ಸಾಧಿಸಿರುವ ಹಿರಿಮೆಯಿಂದಲೂ ಹೌದು.

ಚಂಪೂ ಪ್ರಕಾರವೂ ಪಂಪನ ಕಾವ್ಯಗಳಲ್ಲಿ ತನ್ನ ಸಾಧನೆಯ ಶಿಖರ ಸ್ಥಿತಿಯನ್ನು ತಲುಪಿತು; ಅಂದರೆ ಆ ಪ್ರಕಾರಕ್ಕೆ ಅತ್ಯಂತ ನವಿರಾದ ಪರಿಷ್ಕರಣವನ್ನೂ, ವಸ್ತುವಿಗೆ ಗಾಂಭೀರ್ಯವನ್ನೂ ತಂದುಕೊಟ್ಟವನು ಅವನು. ಅವನ ಮೊದಲ ಕಾವ್ಯ 'ಆದಿಪುರಾಣ'ವು ಆದಿನಾಥನ ಕತೆಯಲ್ಲಿ ಭೋಗದ ವಿಫಲತೆಯನ್ನೂ, ಭರತ-ಬಾಹುಬಲಿಗಳ ಪ್ರಸಂಗದಲ್ಲಿ ಅಹಂಕಾರ ನಿರಸನವನ್ನೂ ವರ್ಣಿಸಿದ. ('ಭೋಗ' 'ಅಹಂಕಾರ'ಗಳು ಆಧುನಿಕ ಮನಃಶಾಸ್ತ್ರ ಪರಿಕಲ್ಪನೆಗಳಾದ 'libido' ಮತ್ತು 'ego'ಗಳನ್ನು ಹೋಲುವುದನ್ನು ಗಮನಿಸಿ) ಆದರೆ ತನ್ನ 'ಸಮಸ್ತ ಭಾರತ'ದಲ್ಲಿ ಪಂಪ ತನ್ನ ಪಾತ್ರಗಳಲ್ಲಿ ಸಮಕಾಲೀನ ಲೌಕಿಕ ಮೌಲ್ಯಗಳನ್ನು ಸಂಕೇತಿಸಿದ. ಕರ್ಣ ಮತ್ತು ದುರ್ಯೋಧನರ ಪಾತ್ರಗಳ ಮಾನವೀಕರಣ ಪಂಪನ ದೊಡ್ಡ ಸಾಧನೆ. ಅರ್ಜುನನನ್ನು ಕಾವ್ಯನಾಯಕನನ್ನಾಗಿ ಮಾಡಿಕೊಂಡಿದ್ದರೂ, ಕವಿಯು ಅವನ ಎದುರಾಳಿಯಾದ ಕರ್ಣನ ಬಗ್ಗೆ ತನ್ನ ಅಪರಿಮಿತ ಸಹಾನುಭೂತಿಯನ್ನು ಪ್ರದರ್ಶಿಸಿದ; ಏಕೆಂದರೆ ಪರಿಸ್ಥಿತಿ ಹಾಗೂ ದುಷ್ಟ ಜಾತಿಪದ್ಧತಿಗಳಿಂದಾಗಿ ಕರ್ಣ ತಾನು ಮಾಡಿದ ಅಪರಾಧಗಳಿಗಿಂತಲೂ ಬಹು ಮಿಗಿಲಾಗಿ ದಂಡವನ್ನು ತೆರಬೇಕಾಯಿತು. ತನ್ನ ಮಹಾಭಾರತವನ್ನು ಪಂಪ 'ಕರ್ಣ ರಸಾಯನ' ಎಂದೇ ಕರೆದುಕೊಳ್ಳುತ್ತಾನೆ. 'ವಿಕ್ರಮಾರ್ಜುನ ವಿಜಯ'ದ ಕೊನೆಯಲ್ಲಿ ಮಹಾಭಾರತದ ಒಂದೊಂದು ಮುಖ್ಯ ಪಾತ್ರವನ್ನೂ ತನ್ನ ಕಾಲದ ಒಂದೊಂದು ಆದರ್ಶದ ಸಂಕೇತವೆಂಬಂತೆ ವರ್ಣಿಸುತ್ತಾನೆ.[3] ಪಂಪನ ಬಹು ಮುಖ್ಯವಾದ ಸಾಧನೆಯೆಂದರೆ, ತನ್ನ ಪಾತ್ರಗಳನ್ನು ನಾಯಕ ಮತ್ತು ಖಳ ಎಂಬ ರೀತಿಯಲ್ಲಿ ವರ್ಗೀಕರಿಸುವ ಸಂಪ್ರದಾಯವನ್ನು ಮುರಿದುದು. ಪಾತ್ರಗಳನ್ನು ಕಪ್ಪು-ಬಿಳುಪಾಗಿ ಕಾಣುವ ಈ ಬಗೆಯು ಅಸಹಜವೆಂದು ಅರಿತ ಪಂಪನು, ತನ್ನ ಪ್ರತಿನಾಯಕನಲ್ಲಿಯೂ ಇರುವ ಮಾನವೀಯ ಅಂಶಗಳನ್ನು ಗುರುತಿಸಿದ. 'ವಿಕ್ರಮಾರ್ಜುನವಿಜಯ'ದ ಹದಿಮೂರು ಮತ್ತು ಹದಿನಾಲ್ಕನೆಯ ಆಶ್ವಾಸಗಳನ್ನು ಅನುಸರಿಸಿಯೇ ರನ್ನನು ದುರ್ಯೋಧನನನ್ನು ತನ್ನ 'ಗದಾಯುದ್ಧ'ದ ದುರಂತ ನಾಯಕನನ್ನಾಗಿ ಮಾಡಿಕೊಂಡುದು, ಇದು ಪಂಪನ ಪ್ರಭಾವವು ಅವನ ತರುವಾಯದ ಕವಿಗಳ ಮೇಲೆ ಮಾಡಿದ ಅಗಾಧ ಪರಿಣಾಮದ ಸೂಚಿಯಾಗಿದೆ. ಪಂಪನು ತನ್ನ ಕಥಾವಿನ್ಯಾಸದಲ್ಲಿ ವ್ಯಾಸಭಾರತವನ್ನೇ ಅನುಸರಿಸಿದರೂ, ಕೃಷ್ಣನ ಪಾತ್ರವನ್ನು ದೈವಿಕವೆಂದಾಗಲೀಯಾವುದೇ ಲೌಕಿಕ ಮೌಲ್ಯದ ಸಂಕೇತವಾಗಿಯಾಗಲೀ ಭಾವಿಸುವುದಿಲ್ಲ. ಪ್ರಾಯಶಃ ಅವನ ದೃಷ್ಟಿಯಲ್ಲಿ ಕೃಷ್ಣನು ಒಬ್ಬ ತಂತ್ರ ರಾಜಕಾರಣಿಗಿಂತ ಹೆಚ್ಚಿನವನಲ್ಲ. ಹಾಗಾಗಿ ತನ್ನ ಕಾವ್ಯದ ಕೊನೆಯಲ್ಲಿ ಇತರ ಪಾತ್ರಗಳ ವಿಶೇಷವನ್ನು ಹೇಳುವಾಗ ಕೃಷ್ಣನ ಬಗ್ಗೆ ಒಂದು ಮಾತನ್ನೂ ಆಡುವುದಿಲ್ಲ.

ಪಂಪನನ್ನು ಅನಂತರದ ಕವಿಗಳು ಅವನ "ದೇಸಿ"ಗಾಗಿ ಮುಕ್ತಕಂಠದ

ಪ್ರಶಂಸೆ ಮಾಡುತ್ತಾರೆ. ಪಂಪನೇ ತನ್ನ 'ವಿಕ್ರಮಾರ್ಜುನವಿಜಯ'ದ ಪೀಠಿಕಾ ಸಂಧಿಯಲ್ಲಿ ಶ್ರೇಷ್ಠ ಕಾವ್ಯವು "ದೇಸಿಯೊಳ್ ಪುಗುವುದು" ಎಂದು ಹೇಳಿಕೊಳ್ಳುತ್ತಾನೆ, ಅವನ ದೇಸಿಯ ಲಕ್ಷಣಗಳೆಂದರೆ, ಆಡುಮಾತಿಗೆ ಹತ್ತಿರವಾದ ಕನ್ನಡವನ್ನು ಬಳಸುವುದು; ಸಮಕಾಲೀನ ಸಾಮಾಜಿಕ ಮೌಲ್ಯಗಳನ್ನೂ ಆಶೋತ್ತರಗಳನ್ನೂ ಪಾತ್ರಗಳ ಮೂಲಕ ಪ್ರತಿಪಾದಿಸುವುದು; ತನ್ನ ಕಾಲದ ಸಾಮಾಜಿಕ ಹಾಗೂ ರಾಜಕೀಯ ಸಂಘರ್ಷವನ್ನು ಚಿತ್ರಿಸುವುದು; ಮತ್ತು ಸನ್ನಿವೇಶಗಳನ್ನು ಜಾನಪದೀಯ ಸೊಗಡಿನಿಂದ ವರ್ಣಿಸುವುದು, ತನ್ನ ಆಶ್ರಯದಾತನಾದ ಅರಿಕೇಸರಿಯನ್ನು ಪಂಪನು ಅರ್ಜುನನೊಡನೆ ಸಮೀಕರಿಸಿ ಕಾವ್ಯರಚನೆ ಮಾಡಿದ್ದರೂ, ತನ್ನ ಪಾತ್ರಗಳ ಬಾಯಲ್ಲಿ ರಾಜರ ಅವಿವೇಕದ ಟೀಕೆಯನ್ನು ಮಾಡಿಸಿದ್ದಾನೆ. ಪ್ರಜ್ಞಾಪೂರ್ವಕವಾಗಿ ತನ್ನ ಕುಲ ಮತಗಳ ಬಗ್ಗೆ ಅತೀವ ಪ್ರೇಮವನ್ನು ವ್ಯಕ್ತಮಾಡಿದರೂ, ಅವನ ಪಾತ್ರಗಳು ಜಾತಿ ಪದ್ಧತಿಯನ್ನು ತೀವ್ರವಾಗಿ ಖಂಡಿಸುತ್ತವೆ. ಅವನ ಸಂಗ್ರಹಗುಣವೂ ಪ್ರಖ್ಯಾತವಾದುದು; ಆದರೆ ಇದರಿಂದ ಸನ್ನಿವೇಶದ ಬನಿ ಕಡಿಮೆಯಾಗುವುದಿಲ್ಲ ಎಂಬುದೇ ಕವಿಯ ವೈಶಿಷ್ಟ್ಯ. ಚಂಪೂ ಕಾವ್ಯಗಳ ವಸ್ತುವು ಸಂಸ್ಕೃತ ಮಾದರಿಗಳನ್ನು ಅನುಸರಿಸಿದರೂ, ಅದು ಕನ್ನಡ ಸಂವೇದನೆಯನ್ನು ಒಳಗೊಳ್ಳುವಂತೆ ಸಂಯೋಜಿಸುತ್ತಾನೆ; ಅಕ್ಷರವೃತ್ತಗಳ ಬಳಕೆಯಿಂದಾಗಿ ಹೆಚ್ಚು ಸಮಾಸ ಪದಗಳನ್ನು ಬಳಸಬೇಕಾಗಿ ಬಂದರೂ, ಪಂಪನು ತನ್ನ ಭಾಷೆಯಲ್ಲಿ ದೇಸಿ ಮತ್ತು ಸ್ವೀಕರಣ ಶಬ್ದಗಳ ಹದವನ್ನು ಸಾಧಿಸುತ್ತಾನೆ. ಇದರಿಂದಾಗಿಯೇ ಅವನು ಮುಂದಿನ ಚಂಪೂ ಕವಿಗಳಿಗೆ ಆದರ್ಶಪ್ರಾಯನಾದುದು.

ಪೊನ್ನ ಮತ್ತು ರನ್ನ ಪಂಪನನ್ನು ಅನೇಕ ವಿಧಗಳಲ್ಲಿ ಅನುಸರಿಸಿದರು; ಎರಡು ಕಾವ್ಯಗಳ ರಚನೆ; ಅವುಗಳಲ್ಲಿ ಒಂದು ಜೈನಪುರಾಣ ಮತ್ತೊಂದು ಲೌಕಿಕ ಕಾವ್ಯ; ತಮ್ಮ ಆಶ್ರಯದಾತನನ್ನು ಲೌಕಿಕ ಕಾವ್ಯದ ನಾಯಕನೊಡನೆ ಸಮೀಕರಿಸುವುದು; ತಮ್ಮ ಕಾಲದ ಮೌಲ್ಯಗಳನ್ನು ಎತ್ತಿ ಹಿಡಿಯುವುದು–ಹೀಗೆ. ಪೊನ್ನನು ಕ್ರಿ.ಶ. ೯೩೯–೯೬೮ರ ನಡುವಣ ಕಾಲದಲ್ಲಿ ಆಳಿದ ರಾಷ್ಟ್ರಕೂಟ ಚಕ್ರವರ್ತಿ ಎರಡನೇ ಕೃಷ್ಣನ ಆಸ್ಥಾನಕವಿಯಾಗಿದ್ದವನು. ಅವನು 'ಶಾಂತಿ ಪುರಾಣ' ಮತ್ತು 'ಭುವನೈಕ ರಾಮಾಭ್ಯುದಯ' ಎಂಬ ಎರಡು ಕಾವ್ಯಗಳ ಕರ್ತೃ. ಆದರೆ ಎರಡನೆಯದು ದೊರಕಿಲ್ಲ. 'ಭುವನೈಕ ರಾಮಾಭ್ಯುದಯ'ವು ಲೌಕಿಕ ದೃಷ್ಟಿಯಿಂದ ರಚಿಸಿರುವ ರಾಮಕಥೆಯಾಗಿದ್ದು, ಕಾವ್ಯನಾಯಕನೊಡನೆ ತನ್ನ ಆಶ್ರಯದಾತನನ್ನು ಸಮೀಕರಿಸಿರಬೇಕೆಂಬುದು ವಿದ್ವಾಂಸರ ಊಹೆ, 'ಶಾಂತಿಪುರಾಣ'ವು ಪೂರ್ಣವಾಗಿ ದೊರಕಿದ್ದರೂ, ಅದೊಂದು ಸಾಮಾನ್ಯ ಕಾವ್ಯ ಎನಿಸಿಕೊಂಡಿದೆ. ಅದರಲ್ಲಿ ಶಾಂತಿನಾಥನ ಕತೆಗಿಂತ ಭವಾವಳಿಗೆ ಹೆಚ್ಚು ಪ್ರಾಶಸ್ತ್ಯ ಸಿಕ್ಕಿದೆ. ಆದರೆ ಚಕ್ರವರ್ತಿಯ ಕತೆ ಹೇಳುವುದನ್ನು ಈ ಕವಿ ಕೈಬಿಟ್ಟಿದ್ದಾನೆ.

ರನ್ನನು ಕ್ರಿ.ಶ. ೯೪೯ರಲ್ಲಿ ಜನಿಸಿದ. ಚಾಲುಕ್ಯ ಚಕ್ರವರ್ತಿಗಳಾದ ತೈಲಪ ಮತ್ತವನ ಮಗ ಸತ್ಯಾಶ್ರಯನಲ್ಲಿ ಅಸ್ಥಾನಕವಿಯಾಗಿದ್ದ. ಅವನೂ ಎರಡು ಕಾವ್ಯ

ಗಳನ್ನು ರಚಿಸಿದ್ದಾನೆ; 'ಅಜಿತ ತೀರ್ಥಕರಪುರಾಣ ತಿಲಕ' ಮತ್ತು 'ಗದಾಯುದ್ಧ'ವೆಂದು ಪ್ರಖ್ಯಾತವಾಗಿರುವ 'ಸಾಹಸಭೀಮ ವಿಜಯ'. ರನ್ನನು ತನ್ನ ಕಾವ್ಯದಲ್ಲಿ ಸಮಾಕಾಲೀನ ಚರಿತ್ರೆಯನ್ನು ಸೇರಿಸುವ ವಿಷಯದಲ್ಲಿ ಪಂಪನಿಗಿಂತ ಒಂದು ಹೆಜ್ಜೆ ಮುಂದೆ ಇಟ್ಟವನು. ತನ್ನ ಪುರಾಣದ ಪೀಠಿಕಾ ಸಂಧಿಯಲ್ಲಿ ಆತ ತನ್ನ ಕಾಲದ ಒಬ್ಬ ಅದ್ವಿತೀಯ ಜನೋಪಕಾರಿ ಮಹಿಳೆಯಾಗಿದ್ದ ಅತ್ತಿಮಬ್ಬೆಯನ್ನು ಅಮರಗೊಳಿಸಿದ್ದಾನೆ. ಆ ಕಾವ್ಯದಲ್ಲಿ, 'ಸಗರ ಚಕ್ರವರ್ತಿಯ ಕತೆಯ ಮೂಲಕ ಸಾವಿನ ಬಗ್ಗೆ ಚಿಂತನೆ ನಡೆಸಿದ್ದಾನೆ. 'ಗದಾಯುದ್ಧ'ದಲ್ಲಿ ರನ್ನನು ತನ್ನ ಆಶ್ರಯದಾತನಾದ ಸತ್ಯಾಶ್ರಯನನ್ನು ಕಾವ್ಯ ನಾಯಕನಾದ ಭೀಮನೊಡನೆ ಸಮೀಕರಿಸಿದ್ದಾನೆ. ಮಹಾಭಾರತ ಕತೆಯನ್ನು ಹೇಳಲು ಅವನು ಬಳಸಿದ ಹಿಂದಿನ ಕತೆಯನ್ನು ನೆನೆಯುವ ಮೂಲಕ ಕತೆ ಬಿಚ್ಚಿಕೊಳ್ಳುತ್ತ ಹೋಗುತ್ತದೆ; ಇದನ್ನು ರನ್ನ 'ಸಿಂಹಾವಲೋಕನ ಕ್ರಮ' ಎಂದು ಕರೆದಿದ್ದಾನೆ. ರನ್ನನ ಕಾವ್ಯಕ್ಕೆ ಪಂಪಭಾರತದ ಹದಿಮೂರು ಮತ್ತು ಹದಿನಾಲ್ಕನೇ ಆಶ್ವಾಸಗಳೇ ಆಧಾರವಾದರೂ, ಅವನ ಸ್ವಂತಿಕೆಯಿರುವುದು ದುರ್ಯೋಧನನ ಪಾತ್ರವನ್ನು ಮತ್ತಷ್ಟು ಮಾನವೀಕರಿಸಿರುವುದರಲ್ಲಿ ಹಾಗೂ ಭಾಷೆಯ ಬಳಕೆಯಲ್ಲಿ. ಯುದ್ಧದ ಹದಿನೇಳನೇ ದಿನ ಶರಶಯ್ಯೆಯಲ್ಲಿ ಮಲಗಿದ್ದ ಭೀಷ್ಮರನ್ನು ಕಂಡು ಅವರ ಸಲಹೆ ಪಡೆಯಲು, ಕುರುಕ್ಷೇತ್ರದ ಒಂದು ತುದಿಯಿಂದ ಮತ್ತೊಂದಕ್ಕೆ ಹೋಗುವಾಗ, ತನ್ನ ಪ್ರಿಯರಾದವರೆಲ್ಲರ ಹೆಣಗಳು ಅವನ ಕಣ್ಣಿಗೆ ಬೀಳುತ್ತವೆ. ದ್ರೋಣ, ದುಃಶ್ಯಾಸನ, ಕರ್ಣ ಮತ್ತು ಲಕ್ಷಣಕುಮಾರರಿಗೆ ತನ್ನ ಗೌರವಸಮರ್ಪಣೆ ಮಾಡುವುದಲ್ಲದೆ, ತನ್ನ ವೈರಿಯ ಮಗನಾದ ಅಭಿಮನ್ಯುವನ್ನು ಕುರಿತು "ನಿಜಸಾಹಸೈಕದೇಶಾನುಮರಣಮೆ ಮಗಕ್ಕೆ ಗಡಾ" ಎಂದು ಮನಸಾರೆ ನುಡಿಯುತ್ತಾನೆ. ಅವನ ದುಃಖದಲ್ಲಿ ಅವನ ಹೆಂಗರುಳು ತೆರೆದುಕೊಳ್ಳುತ್ತದೆ. ಅಲ್ಲದೆ, ಸಾವು ಸನ್ನಿಹಿತವಾಗಿರುವ ಅರಿವಾದಾಗ ಎಂಥವನ ಮನಸ್ಸೂ ವಿನೀತವಾಗುವ ಭಾವ ಇಲ್ಲಿ ಚಿತ್ರಿತವಾಗಿದೆ. ಅವನು ಬಳಸುವ ಭಾಷೆ ಅದ್ಭುತ ಶಕ್ತಿಯುಳ್ಳದ್ದು; ಅದಕ್ಕಾಗಿಯೇ ಕುವೆಂಪು ಅವರು ಅವನನ್ನು 'ಶಕ್ತಿಕವಿ' ಎಂದೇ ಕರೆಯುತ್ತಾರೆ. ಅವನು ದುರ್ಯೋಧನ ಪಾತ್ರವನ್ನು ಮಾನವೀಕರಿಸುವುದಲ್ಲದೆ 'ಮಹಾನುಭಾವ' ಎಂದು ಕರೆದು ಗೌರವಾರ್ಪಣೆ ಮಾಡುತ್ತಾನೆ. ಅವನ ಬಗ್ಗೆ ಕವಿಗೆ ಅಷ್ಟು ಕಕ್ಕುಲತೆ. ಮುಂದಿನ ಜೈನ ಕವಿಗಳು ಪಂಪ, ಪೊನ್ನ ಮತ್ತು ರನ್ನರನ್ನು ರನ್ನನಂತೆ 'ರತ್ನತ್ರಯ'ರೆಂದು ಪರಿಗಣಿಸುವ ಪರಿಪಾಠವಿದೆ. ಆದರೆ ಈ ಮೂವರ ಕಾವ್ಯಸಾಮರ್ಥ್ಯದಲ್ಲಿ ವ್ಯತ್ಯಾಸಗಳಿವೆಯೆಂಬುದನ್ನು ಮರೆಯಲಾಗದು.

ಮುಂದೆ ಬಂದ ಮುಖ್ಯ ಕವಿಯೆಂದರೆ ನಾಗಚಂದ್ರ; ಅವನು ಸುಮಾರು ಕ್ರಿ.ಶ. ೧೧೨೦ರ ಹೊತ್ತಿಗೆ ಸೃಜನಶೀಲನಾಗಿದ್ದವನು. ಈತ ತನ್ನನ್ನು 'ಅಭಿನವ ಪಂಪ' ಎಂದು ಹೆಮ್ಮೆಯಿಂದ ಕರೆದುಕೊಳ್ಳುತ್ತಾನೆ. ತನ್ನ ಹಿಂದಿನ ಕವಿಗಳಂತೆಯೇ ನಾಗಚಂದ್ರನೂ ಎರಡು ಕಾವ್ಯಗಳನ್ನು ರಚಿಸಿದರೂ, ಎರಡರ ವಸ್ತುವೂ ಪೌರಾಣಿಕವಾಗಿರುವುದು ಕೇವಲ ಅನುಷಂಗಿಕವಲ್ಲ. 'ಮಲ್ಲಿನಾಥ ಪುರಾಣ'ವು ಹತ್ತೊಂಬತ್ತನೇ ತೀರ್ಥಂಕರನ ಕತೆಯನ್ನು ನಿರೂಪಿಸುತ್ತದೆ. ಇದರಲ್ಲಿ ತನ್ನ ಹಿಂದಿನ 'ರತ್ನತ್ರಯರು'

ಅನುಸರಿಸಿದ ಕೆಲವು ಅಂಶಗಳನ್ನು ಕೈ ಬಿಟ್ಟಿದ್ದಾನೆ. 'ಮಲ್ಲಿನಾಥ ಪುರಾಣ'ದಲ್ಲಿ ಭವಾಳಿಯ ಗೋಜಲಿಲ್ಲ; ಮತ್ತು ಚಕ್ರವರ್ತಿಕತೆಯ ಜೋಡಣೆಯಿಲ್ಲ. 'ರಾಮಚಂದ್ರ ಚರಿತಪುರಾಣ' ಅಥವಾ 'ಪಂಪರಾಮಾಯಣ' ಎಂದು ಪ್ರಸಿದ್ಧವಾಗಿರುವ ಕಾವ್ಯವು ಜೈನ ಪರಂಪರೆಯಲ್ಲಿ ಹೇಳಲಾಗಿರುವ ರಾಮಾಯಣದ ಕತೆ. ನಾಗಚಂದ್ರನು ರಾವಣನ ಪಾತ್ರವನ್ನು ಚಿತ್ರಿಸುವುದರಲ್ಲಿ ಹೊಸತನವನ್ನು ಮೆರೆದಿದ್ದಾನೆ. ತನ್ನ ಹಿಂದಿನ ಕವಿಗಳಿಗಿಂತ ಭಿನ್ನನಾಗಿದ್ದಾನೆ. ಈ ಕಾವ್ಯದ ರಾವಣನು ಜಿನಧರ್ಮದ ನಿಷ್ಠಾವಂತ ಅನುಯಾಯಿ, ಅವನು ಯುದ್ಧಗಳನ್ನು ಮಾಡುವುದು ಜೈನಧರ್ಮವನ್ನು ಸ್ಥಾಪನೆ ಮಾಡಲು. ಅವನು "ಪರಾಂಗನಾವಿರತಿವ್ರತ"ವನ್ನು ಕಟ್ಟುನಿಟ್ಟಾಗಿ ಅನುಸರಿಸುತ್ತಿದ್ದ ಸಂಯಮಿ. ರಾಮ ಮತ್ತು ಲಕ್ಷ್ಮಣರ ಜೊತೆ ಕಾಡಿನಲ್ಲಿರುವ ಸೀತೆಯಲ್ಲಿ ಕಾಣುವ ತನಕ ಅವನ ಈ ಪಾತ್ರಕ್ಕೆ ಚ್ಯುತಿ ಬಂದಿರುವುದಿಲ್ಲ. ಅವನು ಸೀತೆಯಲ್ಲಿ ಮೋಹ ಗೊಳ್ಳುವಂತೆ ವಿಧಿಯೇ ಅವನ ಮೇಲೆ ಸಂಚು ಮಾಡುತ್ತದೆ. ಕೊನೆಯಲ್ಲಿ, ರಾಮನ ಮೇಲೆ ಯುದ್ಧ ಮಾಡಿ ಗೆದ್ದನಂತರ ಸೀತೆಯನ್ನು ಅವನಿಗೊಪ್ಪಿಸುವ ನಿರ್ಧಾರ ಮಾಡುತ್ತಾನೆ ರಾವಣ. ಆದರೆ ಅದೇ ವಿಧಿಯ ಹುನ್ನಾರದಿಂದಾಗಿ ಅನಿರೀಕ್ಷಿತ ಬೆಳವಣಿಗೆಗಳಾಗಿ ರಾಮನಿಂದ ಹತನಾಗುತ್ತಾನೆ. ವಿಧಿ ಅಥವಾ 'ಕಾಲ'ವು ಮನುಷ್ಯನ ಬಾಳಿನಲ್ಲಿ ವಹಿಸುವ ಪಾತ್ರದ ಬಗ್ಗೆ ಕವಿ ಚಿಂತನೆ ನಡೆಸುತ್ತಾನೆ. ನಾಗಚಂದ್ರನ ರಾವಣ ಪಾತ್ರವನ್ನು ಬಿಎಂಶ್ರೀ ಅವರು "ದುರಂತ" ಪಾತ್ರವೆಂದು ಕರೆದರು; ಅದಕ್ಕೆ ಕಾರಣ ಅವನು ಸಹಜವಾಗಿ ಉದಾತ್ತನಾಗಿದ್ದರೂ ವಿಧಿಯ ವಿರುದ್ಧ ಸೆಣೆಸಬೇಕಾದುದು. ಶ್ರೀ ಅವರಿಗೆ ರಾವಣನ ದುರಂತವು ಗ್ರೀಕ್ ದುರಂತ ನಾಯಕರದರಂತೆಯೇ ಕಾಣಿಸಿತು.

ನಾಗಚಂದ್ರನು ತನ್ನ ಎರಡು ಕಾವ್ಯಗಳನ್ನೂ ಜೈನ ಧರ್ಮ ಪ್ರತಿಪಾದನೆಗೆ ಮೀಸಲಿಟ್ಟನೆಂಬುದು ಗಮನಾರ್ಹ ಅಂಶ. ಅವನ ಕಾಲಕ್ಕೆ ಜೈನಧರ್ಮದ ಭದ್ರ ನೆಲೆಗಟ್ಟು ಸಡಿಲಗೊಳ್ಳುತ್ತಿದ್ದುದು ಇದಕ್ಕೆ ಕಾರಣವಿರಬೇಕು. ಈ ಮಾತು ಅವನ ನಂತರ ಬಂದ ಪ್ರಮುಖ ಕವಿ ಜನ್ನನಿಗೂ ಅನ್ವಯಿಸುತ್ತದೆ. ಹನ್ನೊಂದನೆಯ ಶತಮಾನದ ಕೊನೆ ಮತ್ತು ಹನ್ನೆರಡರ ಪ್ರಾರಂಭ ಕಾಲದಲ್ಲಿ ಜೀವಿಸಿದ್ದ ಜನ್ನನು ಕೂಡ ಎರಡು ಕಾವ್ಯಗಳನ್ನು ರಚಿಸಿದ: 'ಅನಂತನಾಥಪುರಾಣ' ಮತ್ತು 'ಯಶೋಧರ ಚರಿತ್ರೆ'. 'ಯಶೋಧರ ಚರಿತ್ರೆ'ಯು ವಾದಿರಾಜನ ಸಂಸ್ಕೃತ ಕಾವ್ಯದ ಮನೋಹರ ವಾದ ಪುನಃಸೃಷ್ಟಿ. ಸುಮಾರು ಇನ್ನೂರೈವತ್ತು ಕಂದಪದ್ಯಗಳು ಮತ್ತು ಕೆಲವು ವೃತ್ತಗಳನ್ನು ಒಳಗೊಂಡ ಈ ಪುಟ್ಟ ಕಾವ್ಯವು 'ಅಹಿಂಸೆ' ಕುರಿತು ಚಿಂತಿಸುವ ಕೃತಿ. ಅಣುಕು ಪ್ರಾಣಿ ಬಲಿಗೆ ನಿರ್ಧರಿಸಿದ ಯಶೋಧರನೆಂಬ ರಾಜನು ಅದಕ್ಕೆ ಪ್ರೇರಿಪಿಸಿದ ತನ್ನ ತಾಯ ಜೊತೆಯಲ್ಲಿ ಮತ್ತೆ ಮಾನವ ಜನ್ಮವನ್ನು ಪಡೆಯುವ ಮುಂಚೆ ಎಂಟು ಜನ್ಮಗಳಲ್ಲಿ ವಿವಿಧ ಜಂತುಗಳಾಗಿ ಹುಟ್ಟುವ ಕತೆ ಇದರದ್ದು. ಆದರೆ ರಾಣಿ ಅಮೃತಮತಿ ಮತ್ತು ಅರಮನೆಯ ಲಾಯದ ಕೆಲಸಗಾರ ಅಷ್ಟಾವಂಕರ ನಡುವಣ ಧರ್ಮವಿರೋಧಿ ಪ್ರಣಯವು ಆಕರ್ಷಕವಾಗಿರುವ ಭಾಗ. ಹೆಣ್ಣು ಬಯಸಬಹುದಾದ ಎಲ್ಲ ಗುಣಗಳನ್ನು ಪಡೆದ ರಾಜನಾದ ಗಂಡನಿರುವಾಗ, ಮಧುರ ಕಂಠದಿಂದ

ಆಕರ್ಷಿತಳಾಗಿ ಒಬ್ಬ ವಿಕಾರರೂಪನನ್ನು ಒಲಿದು, ಗಂಡ-ಅತ್ತೆಯನ್ನು ವಿಷವಿ ಕೊಂದು, ಕೊನೆಯವರೆಗೆ ಅವನೊಡನಿದ್ದುದು ಅಚ್ಚರಿಯುಂಟು ಮಾಡುವಂಥದು ಈ ಸಂಬಂಧದ ಮೂಲಕ ಕವಿ ಲೈಂಗಿಕತೆಯನ್ನು ಕುರಿತ ಅನೇಕ ಪ್ರಶ್ನೆಗಳನು ಎತ್ತುತ್ತಾನೆ. ಇದನ್ನು ಕುವೆಂಪು ಕರೆದಂತೆ "ಕಾಮವಿಕಾರ" ಎಂದು ಸರಳೀಕರಿಸುವುದ ಸರಿಯಲ್ಲ. ಈ ಸಮಸ್ಯೆಯ ಸಂಕೀರ್ಣತೆಯ ಬಗ್ಗೆ ಕವಿಯ ಮನದಾಳದಲ್ಲಿ ಅತೀ ಆಸಕ್ತಿಯಿದ್ದುದು ಸ್ಪಷ್ಟ. ಏಕೆಂದರೆ ಗಂಡು-ಹೆಣ್ಣಿನ ವಿವಾಹೇತರ ಸಂಬಂಧ ಅಧಾರ್ಮಿಕವಾದುದಾದರೂ, ಅದರ ಅದಮ್ಯತೆ ಕವಿಯ ಕುತೂಹಲವನ್ನು ಮತ್ತೊಮ ಕೆರಳಿಸುತ್ತದೆ. ಈ ಬಾರಿ, 'ಅನಂತನಾಥ ಪುರಾಣ'ದ ಅನುಷಂಗಿಕ ಕತೆಯಾ ಚಂಡಶಾಸನ-ಸುನಂದೆಯರ ಪ್ರಸಂಗದಲ್ಲಿ. ತೀರ್ಥಂಕರನ ಕತೆಗೆ ಪಂಪನ ಪೂರಕವಾದ ಚಕ್ರವರ್ತಿಯ ಕತೆ ಬಂದಿದ್ದರೆ, ಇಲ್ಲಿ ಹಾಗಿರದೆ ಬೇರೊಂದ ರೀತಿಯಲ್ಲಿದೆ. ತನ್ನ ಬಾಲ್ಯದ ಗೆಳೆಯ ವಸುಷೇಣನ ಅರಮನೆಗೆ ಒಮ್ಮೆ ಭೇ ನೀಡಿದಾಗ, ಚಂಡಶಾಸನೆಂಬುವವನ ಗೆಳೆಯನ ಹೆಂಡತಿಯಾದ ಸುನಂದೆಯನ ಏಕಮುಖವಾಗಿ ಪ್ರೀತಿಸುತ್ತಾನೆ. ಅವನದು ಆದಮ್ಯ ಮೋಹ. ಅವಳನ ಅಪಹರಿಸಿಕೊಂಡು ಚಂಡಶಾಸನನು ತನ್ನ ಊರಿಗೆ ಬಂದು ಅವಳನ್ನು ಬಂಧ ದಲ್ಲಿಡುತ್ತಾನೆ. ಈ ಸುದ್ದಿ ತಿಳಿದ ವಸುಷೇಣನು ಇವನ ಮೇಲೆ ದಂಡೆತ್ತಿ ಬರುತ್ತಾ ಸುನಂದೆಯನ್ನು ಒಲಿಸಿಕೊಳ್ಳಲು ಚಂಡಶಾಸನನು ಮಾಟದಿಂದ ವಸುಷೇಣನ ರಂತೆಯೇ ಇದ್ದ ರಕ್ತಸಿಕ್ತ ತಲೆಯೊಂದನ್ನು ಸೃಷ್ಟಿಸಿ ಅವಳೆದುರು ಹಿಡಿಯುತ್ತಾ ಅದನ್ನು ಕಂಡ ಸುನಂದೆಯು ಗಂಡ ಸತ್ತನೆಂದೇ ಭಾವಿಸಿ ಎದೆಯೊಡೆದು ಸಾಯ ತ್ತಾಳೆ. ಚಂಡಶಾಸನನು ಚಿತೆಯಲ್ಲಿಯೂ ಅವಳನ್ನು ಅನುಸರಿಸಿ ತನ್ನ ಪ್ರೀತಿಯ ಆಳವನ್ನು ತೋರಿಸು ತ್ತಾನೆ. ಅಮೃತಮತಿ-ಅಷ್ಟಾವಂಕ ಹಾಗೂ ಚಂಡಶಾಸನ ಸುನಂದೆಯರದು ವಿಭಿನ್ನ ಬಗೆಯ ಸಂಬಂಧಗಳು, ಆದರೂ ಎರಡೂ ಧರ್ಮ ವಿರುದ್ಧವಾದವು. ಇದನ್ನು ಬರಿಯ ಮೋಹವೆಂದು ಕರೆಯಬಹುದೋ? ಅಮೃತಮ ಮತ್ತು ಚಂಡಶಾಸನರು ತಾವು ಪ್ರೀತಿಸಿದ ವ್ಯಕ್ತಿಗಳ ಬಗ್ಗೆ ತೋರಿಸುವ ಆದಮ ನಿಷ್ಠೆಯು ಅಚ್ಚರಿ ಹುಟ್ಟಿಸುವಂಥದು. ಈ ನಿರೂಪಣೆಗಳಿಂದಾಗಿ ಜನ್ನನು ಚಂಪ ಕಾವ್ಯಗಳಲ್ಲಿನ ಚಿಂತನಪರತೆಗೆ ಹೊಸ ವಸ್ತುವನ್ನು ಒದಗಿಸಿದ್ದಾನೆ ಮತ್ತು ವಿವಾಹೇತ ಸಂಬಂಧದ ಬಗೆಗಿನ ಚಿಂತನಶೀಲತೆಗೆ ಹೊಸ ಆಯಾಮವನ್ನು ಜೋಡಿಸುತ್ತಾನೆ.

ಈ ಮಧ್ಯೆ ಇಬ್ಬರು ಜೈನ ಕವಿಗಳು ಕನ್ನಡ ಕಾವ್ಯದಲ್ಲಿ ಸಂಸ್ಕೃತ ಬಳ ಅತಿಯಾದುದನ್ನು ದೊಡ್ಡ ದನಿಯಲ್ಲಿ ಪ್ರತಿಭಟಿಸಿದರು, ಕನ್ನಡತನವನ್ನು ಮೆರೆದರ ಅವರುಗಳೆಂದರೆ, ಹನ್ನೆರಡನೆಯ ಶತಮಾನದ ನಯಸೇನ ಮತ್ತು ಹದಿಮೂರನೆ ಶತಮಾನದ ಆಂಡಯ್ಯ. ನಯಸೇನನ ಏಕೈಕ ಕಾವ್ಯ "ಧರ್ಮಾಮೃತ", ಇದ ರಚನೆಯ ಕಾಲ ಕ್ರಿ.ಶ. ೧೧೧೨; ಜೈನಮತದ ಪ್ರಸಾರಕ್ಕೆಂದೇ ನಿರೂಪಿತವಾದ ಕೃ ಈ ಕಾರಣಕ್ಕಾಗಿಯೇ ಅವನು ಚಂಪೂ ಕಾವ್ಯದ ವಸ್ತು ಮತ್ತು ರೂಪಗಳ ಮೂಲಭೂತ ಬದಲಾವಣೆಗಳನ್ನು ಮಾಡಿದ. ಒಂದೇ ದೀರ್ಘ ಕತೆಯನ್ನು ಹೇಳ ಕಥಾಗುಚ್ಛವನ್ನು ಸೃಷ್ಟಿಸಿದ. ಗದ್ಯದ ಬಳಕೆ ತುಂಬ ಹೆಚ್ಚಾಗಿ, ಅದರಲ್ಲಿ ಗಾ

ನಾಣ್ನುಡಿ, ನುಡಿಗಟ್ಟುಗಳು ತುಂಬಿ ಜನನುಡಿಗೆ ಬಹು ಹತ್ತಿರವಾಗುವಂತೆ ಬರೆದ. ಪ್ರಾಯಶಃ ತಾನೇ ಕತೆಗಳನ್ನು ಸೃಷ್ಟಿಸಿ (ಇವನ ಕಾವ್ಯದ ಕತೆಗಳಿಗೆ ಮೂಲ ಯಾವುದು ಎಂಬುದು ತಿಳಿದಿಲ್ಲ. ಪ್ರಾಯಶಃ ಇಲ್ಲವೇ ಇಲ್ಲ) ಹದಿನಾಲ್ಕು ಆಶ್ವಾಸಗಳಲ್ಲಿ, ಒಂದೊಂದರಲ್ಲಿ ಒಂದೊಂದು ಜೈನತತ್ವದ ಪ್ರಮುಖ ಪರಿಕಲ್ಪನೆಗಳ ಶ್ರೇಷ್ಠತೆಯನ್ನು ಸಾರಿದ.[೬] ನಯಸೇನನು ಕತೆ ಹೇಳುವ ರೀತಿ ತುಂಬ ಚೇತೋಹಾರಿಯಾದುದು. ಕೆಲವು ಕಡೆಗಳಲ್ಲಿ, ಒಂದು ಕತೆಯನ್ನು ಹೇಳುವ ಮೂಲಕ ಒಂದು ಅಭಿಪ್ರಾಯವನ್ನು ನಿರೂಪಿಸಿ ಅದಕ್ಕೆ ಉತ್ತರವಾಗಿ ಮತ್ತೊಂದು ಕತೆಯನ್ನು ಹೇಳುವ ತಂತ್ರವನ್ನು ಬಳಸಿ ಕತೆಯ ಸರಪಳಿಯನ್ನು ಸೃಷ್ಟಿಸುವ ಹೊಸ ತಂತ್ರವನ್ನೂ ನಯಸೇನ ಬಳಸುತ್ತಾನೆ. ಹೊಸಗನ್ನಡದಲ್ಲಿ ಕಾವ್ಯವನ್ನು ನಿರೂಪಿಸುವೆನೆಂದು ಹೊರಟ ಕವಿಗಳು ಸಂಸ್ಕೃತವನ್ನು ಬೆರೆಸುವುದನ್ನು ಅವನು ಟೀಕಿಸಿದ.[೭] ಕನ್ನಡದಲ್ಲಿ ಆಲೋಚಿಸುತ್ತ ಸಂಸ್ಕೃತ ಶಬ್ದಗಳನ್ನು ಬಳಸುವಾಗ ಉಂಟಾಗುವ ಗೊಂದಲವನ್ನು ಪ್ರಾಯಶಃ ಕವಿ ಇಲ್ಲಿ ಸೂಚಿಸುತ್ತಾನೆ. ಹಾಗೆಂದು ಇವನಿಗೆ ಸಂಸ್ಕೃತದ ಬಗ್ಗೆ ದ್ವೇಷವೇನಿಲ್ಲ; ಅದು ಕನ್ನಡದ ಹದಗೆಡಿಸ ಬಾರದು ಅಷ್ಟೆ. ಅಚ್ಚಗನ್ನಡದಲ್ಲಿ ಸಂಸ್ಕೃತ ಬೆರೆಸುವುದನ್ನು ಇವನು ತುಪ್ಪದಲ್ಲಿ ಎಣ್ಣೆ ಯನ್ನು ಬೆರೆಸುವುದಕ್ಕೆ ಹೋಲಿಸುತ್ತಾನೆ.[೮] ಮಾಲೋಪಮೆಯ ಬಳಕೆ ನಯಸೇನನ ಮತ್ತೊಂದು ಪ್ರಯೋಗ, ಜೈನಮತದ ಶ್ರೇಷ್ಠತೆಯನ್ನು ಎತ್ತಿ ತೋರಿಸುವುದೇ ಅವನ ಕಾವ್ಯರಚನೆಯ ಉದ್ದೇಶವಾದ್ದರಿಂದ, ಅವನ ಶೈಲಿ ಸರಳವಾಯಿತು; ಅವನನ್ನು ಕೆಲವರು ಜಾನಪದ ಕವಿಯೆಂದು ಕರೆಯುವಷ್ಟರ ಮಟ್ಟಿಗೆ ಜನರಿಗೆ ಅವನು ಹತ್ತಿರವಾದ.

ಅಚ್ಚಗನ್ನಡದ ಮತ್ತೊಬ್ಬ ಪ್ರತಿಪಾದಕನೆಂದರೆ ಆಂಡಯ್ಯ. ಇವನು ಹದಿಮೂರನೇ ಶತಮಾನದ ಮೊದಲ ಭಾಗದಲ್ಲಿ ಕಾರ್ಯಶೀಲನಾಗಿದ್ದವನು. ಅವನೂ ಒಂದೇ ಕಾವ್ಯವನ್ನು ಬರೆದಿದ್ದಾನೆ; ಅದೆಂದರೆ 'ಕಬ್ಬಿಗರ ಕಾವ' ಎಂಬ ಇನ್ನೂರೆಪ್ಪತ್ತು ವೃತ್ತಗಳ ಪುಟ್ಟ ಕಾವ್ಯ. ಜೈನನಾದರೂ ವೈದಿಕ ವಸ್ತುವಾದ ಶಿವ–ಕಾಮರ ಯುದ್ಧದ ಬಗ್ಗೆ ಕಾವ್ಯ ಬರೆದು ಒಂದು ರೀತಿಯಲ್ಲಿ ಧಾರ್ಮಿಕ ಸಾಹಚರ್ಯವನ್ನು ಮೆರೆಯುತ್ತಾನೆ. ಆದರೆ ಇಲ್ಲಿ ಗೆಲವು ಪಡೆಯುವವನು ಕಾಮ, ಶಿವನಲ್ಲ! ಕಾಮನನ್ನು ಗೆಲ್ಲುವವರು ಜೈನಮುನಿಗಳು; ಈ ಬಗೆಯಲ್ಲಿ ಕವಿ ಜೈನ ಶ್ರೇಷ್ಠತೆಯನ್ನು ಸಾಧಿಸುತ್ತಾನೆ. ಅಲ್ಲದೆ, ಬದುಕಿನಲ್ಲಿ ಕಾಮದ ಸ್ಥಾನವೆಂತಹುದೆಂಬು ದನ್ನು ಕಾಮವಿಜಯದಿಂದ ಎತ್ತಿ ಹಿಡಿಯುತ್ತಾನೆ. ಇವನ ಕನ್ನಡ ನಿಷ್ಠೆ ಅದ್ವಿತೀಯ ವಾದುದು. ತನ್ನ ಕವ್ಯದಲ್ಲಿ ಕೇವಲ ದೇಸಿ ಶಬ್ದಗಳು ಮತ್ತು ತದ್ಭವಗಳನ್ನು ಮಾತ್ರ ಬಳಸುತ್ತೇನೆಂದು ಪಣ ತೊಟ್ಟು ಅಂತೆಯೇ ನಿರ್ವಹಿಸಿದವನು. ಸಂಸ್ಕೃತ ಶಬ್ದಗಳನ್ನು ಬಳಸದಿದ್ದುದರಿಂದಾಗಿ ಇವನ ಕಾವ್ಯವೇನೂ ಅರ್ಥೈಸಿಕೊಳ್ಳಲು ಸರಳವಾಗಲಿಲ್ಲ; ಬದಲಿಗೆ ಕಠಿಣವೇ ಆಯಿತು. ತನ್ನ ಹಟ ಸಾಧಿಸಿದ್ದಷ್ಟೆ ಇವನ ಸಾಧನೆ, ಸಂಸ್ಕೃತ ವ್ಯಾಮೋಹದ ಅತಿರೇಕಕ್ಕೆ ಕವಿ ಪ್ರತಿಕ್ರಿಯಿಸಿದ ರೀತಿ ಇದೆಂದು ಭಾವಿಸಬಹುದು "ಶಠಸ್ಯ ಪ್ರತಿ ಶಾಠ್ಯಂ!" (ಇವನ ರೀತಿಯಲ್ಲಿ ತಾನೇ ತದ್ಭವಗಳನ್ನು ಸೃಷ್ಟಿ ಮಾಡಿದ

ಮತ್ತೊಬ್ಬ ಪ್ರಮುಖ ಕವಿ, ಹತ್ತೊಂಬತ್ತನೇ ಶತಮಾನದ ಕೊನೆಯಲ್ಲಿ ಬಂದ ಮುದ್ದಣ.)

ಕನ್ನಡ ಚಂಪೂವಿನ ಎರಡನೆಯ ಧಾರೆ ಎಂದರೆ ಬ್ರಾಹ್ಮಣ ಕವಿಗಳದು. ಬ್ರಾಹ್ಮಣ ಕವಿಗಳು ಕನ್ನಡದಲ್ಲಿ ಕಾಣಿಸಿಕೊಂಡದ್ದು ಹತ್ತನೇ ಶತಮಾನದ ಕೊನೆಯಷ್ಟು ತಡವಾಗಿ, 'ಕರ್ನಾಟಕ ಕಾದಂಬರಿ'ಯ ಕರ್ತೃವಾದ ಮೊದಲನೆಯ ನಾಗವರ್ಮನು ಬಾಣ (ಮತ್ತು ಭೂಷಣಭಟ್ಟ) ಕೃತ ಸಂಸ್ಕೃತ ಗದ್ಯಕೃತಿಯಾದ 'ಕಾದಂಬರಿ'ಯನ್ನು ಚಂಪೂರೂಪದಲ್ಲಿ ಕನ್ನಡಕ್ಕೆ ತಂದ. ನಾಗನರ್ಮನ ಮತ್ತೊಂದು ಕೃತಿ 'ಛಂದೋಂಬುಧಿ'ಯೆಂಬ ಶಾಸ್ತ್ರ ಗ್ರಂಥ. ಬ್ರಾಹ್ಮಣರಿಗೆ ಜೈನ ಕವಿಗಳಿಗಿದ್ದಂತೆ ತಮ್ಮ ಮತವನ್ನು ಪ್ರಸಾರ ಮಾಡುವ ಅಥವಾ ಜನಪ್ರಿಯಗೊಳಿಸುವ ಸವಾಲು ಮುಂದಿರಲಿಲ್ಲ, 'ಕಾದಂಬರಿ'ಯು ತುಂಬ ಸುಂದರವಾದ ಅನುವಾದವಾದರೂ ಅದರಿಂದ ಚಂಪೂ ಸ್ವರೂಪಕ್ಕೆ ಯಾವ ಹೊಸತನವೂ ಪ್ರಾಪ್ತವಾಗಿಲ್ಲ. ಇವನಂತೆಯೇ ಸಂಸ್ಕೃತದಿಂದ ಅನುವಾದ ಮಾಡಿದ ಮತ್ತೊಬ್ಬ ಬ್ರಾಹ್ಮಣ ಕವಿಯೆಂದರೆ ದುರ್ಗಸಿಂಹ. ಇವನು ವಸುಭಾಗಭಟ್ಟನ 'ಪಂಚತಂತ್ರ'ವನ್ನು ಸುಂದರವಾದ ಗದ್ಯಭೂಯಿಷ್ಠ ಶೈಲಿಯಲ್ಲಿ ಕನ್ನಡಸಿದ. ಇಡೀ ಜಗತ್ತಿನಲ್ಲೇ ಉಪಲಬ್ಧವಿರುವ ವಸುಭಾಗಭಟ್ಟ ಪ್ರಣೀತ ಪಂಚತಂತ್ರದ ಮಾದರಿಯೆಂಬ ಕಾರಣಕ್ಕಾಗಿ ಇದಕ್ಕೆ ವಿಶೇಷ ಮಹತ್ವವೂ ಇದೆ. ಕವಿಯು ನೀತಿಯನ್ನು ನಿರೂಪಿಸಲು ಪದ್ಯರಚನೆಯನ್ನೂ ಕಥಾನಿರೂಪಣೆಗೆ ಗದ್ಯವನ್ನೂ ಬಳಸಿಕೊಳ್ಳುತ್ತಾನೆ; ಪದ್ಯಗಳಲ್ಲೂ ವಿಶೇಷವಾಗಿ ಕಂದಗಳು ಹಾಗೂ ಗದ್ಯ ಹೆಚ್ಚು. ಶೈಲಿಯು ಸರಳವಾಗಿಯೂ ಆಕರ್ಷಕವಾಗಿಯೂ ಇದೆ. ಕತೆಗಳ ನಿರೂಪಣೆ ಮನನಂಬುಗುವಂತಿದೆ. ಕನ್ನಡ ಸಾಹಿತ್ಯದಲ್ಲಿ 'ವಡ್ಡಾರಾಧನೆ'ಯ ನಂತರ ಗದ್ಯ ಹಾಗೂ ಕಥೆ ಹೇಳುವ ಸಂಪ್ರದಾಯಕ್ಕೆ ಗಟ್ಟಿತನವನ್ನೊದಗಿಸಿದ ಕೃತಿ 'ಕರ್ನಾಟಕ ಪಂಚತಂತ್ರ'.

ಕನ್ನಡದಲ್ಲಿ ಮೊತ್ತ ಮೊದಲ ಸ್ವತಂತ್ರ ಕಾವ್ಯವನ್ನು ಬರೆದ ಬ್ರಾಹ್ಮಣ ಕವಿ ಎಂಬ ಹೆಗ್ಗಳಿಕೆಗೆ ಪಾತ್ರನಾದವನು ರುದ್ರಭಟ್ಟ. ಹನ್ನೆರಡನೇ ಶತಮಾನದ ಉತ್ತರಾರ್ಧದಲ್ಲಿ ಕ್ರಿಯಾಶೀಲನಾಗಿದ್ದ ಈ ಕವಿಯ ಕಾವ್ಯ, 'ಜಗನ್ನಾಥ ವಿಜಯ'. ಇವನು 'ರಸಕಲಿಕೆ' ಎಂಬ ಲಕ್ಷಣಗ್ರಂಥವೊಂದನ್ನೂ ಬರೆದಿದ್ದಾನೆ. 'ಜಗನ್ನಾಥ ವಿಜಯ'ವು ಕೃಷ್ಣನ ಕತೆಯನ್ನು ಹೇಳುವ ಹದಿನಾಲ್ಕು ಆಶ್ವಾಸಗಳ ದೀರ್ಘ ಕಾವ್ಯ. ವಿಷ್ಣುಪುರಾಣ ಹಾಗೂ ಭಾಗವತಗಳಲ್ಲಿ ಹೇಳಲಾದ ಕೃಷ್ಣಕತೆಯ ಭಾಗಗಳನ್ನು ಆರಿಸಿಕೊಂಡ ರುದ್ರಭಟ್ಟ ಕವಿಯು ಕೃಷ್ಣನ ಹುಟ್ಟಿನಿಂದ ಹಿಡಿದು ಬಾಣಾಸುರ ಸಂಹಾರದವರೆಗಿನ ಕತೆಯನ್ನು ಹೇಳಿದ್ದಾನೆ. ಕೃಷ್ಣನ ಬಾಲಲೀಲೆಗಳು ಹಾಗೂ ಪಾರಿಜಾತಾಪಹರಣದಂತಹ ಸನ್ನಿವೇಶಗಳಲ್ಲಿ ಕವಿಯು ಕಲ್ಪನಾಶ ಗೋಚರವಾಗುತ್ತದೆ. ಕೃಷ್ಣನನ್ನು ವಿಷ್ಣುವಿನ ಅವತಾರ ಎಂದು ಭಾವಿಸಿದ ಕವಿಯು ಭಕ್ತಿಯಿಂದ ಅವನ ಸ್ತುತಿ ಮಾಡುತ್ತಾನೆ. ಇವನು ಸಾಮಾನ್ಯರಿಗೆ ಸುಲಭವಾಗಿ ದಕ್ಕುವ ಕವಿಯಲ್ಲ; ಅವನ ಮಂಗಳಾಚರಣೆಯ ಐದು ಪದ್ಯಗಳ ಅರ್ಥವನ್ನು ವಿವರಿಸಲು ಅಜ್ಞಾತ ಕವಿಯೊಬ್ಬ 'ಪಂಚಪಾಷಾಣ ವಾಖ್ಯಾ' ಎಂಬ ಟೀಕೆಯನ್ನು ಸಂಸ್ಕೃತದಲ್ಲಿ

ಬರೆದಿದ್ದಾನೆ. ಎಂದರೆ ಈ ಕವಿಯ ಶೈಲಿ ಎಂಥದು ಎಂಬ ಊಹೆಯನ್ನು ಮಾಡಬಹುದು. ಆದರೂ ಕೃಷ್ಣನ ಬಾಲಲೀಲೆಗಳು ಮತ್ತು ಕೆಲವು ಪಾತ್ರಗಳು ಹಾಗೂ ಸನ್ನಿವೇಶಗಳು ಯಕ್ಷಗಾನದಂತಹ ಮಾಧ್ಯಮಗಳ ಮೂಲಕ ಸಾಮಾನ್ಯರವರೆಗೆ ಇಳಿದು ಬಂದಿದೆ.

ಕನ್ನಡ ಚಂಪೂವಿನ ಮೂರನೆಯ ಧಾರೆಯೆಂದರೆ ವೀರಶೈವ ಕವಿಗಳದು. ಈ ಧಾರೆಯ ಮೊದಲ ಮತ್ತು ಶ್ರೇಷ್ಠ ಕವಿ ಎಂದರೆ ಹದಿಮೂರನೇ ಶತಮಾನದ ಮೊದಲ ಭಾಗದಲ್ಲಿದ್ದ ಹರಿಹರ, ಅವನ ಚಂಪೂ ಕೃತಿಯಾದ 'ಗಿರಿಜಾ ಕಲ್ಯಾಣ'ವು ಪ್ರಾಯಶಃ ಅವನ ಮೊದಲ ಕೃತಿ; ಮುಂದೆ ಅವನು ಚಂಪೂವನ್ನು ಕೈಬಿಟ್ಟು ರಗಳೆಗಳಲ್ಲಿ ಹೊಸ ಬಗೆಯ ಕಾವ್ಯ ರಚನೆ ಮಾಡಿ ಕನ್ನಡದ ಅಪ್ರತಿಮ ಕವಿಗಳಲ್ಲಿ ಒಬ್ಬನೆನಿಸಿದ್ದಾನೆ. ಹೀಗಾಗಿ ಅವನನ್ನು ಸಮಕಾಲೀನರು 'ರಗಳೆ ಕವಿ' ಎಂದೇ ಗೇಲಿ ಮಾಡಿದರಂತೆ. ಅವನ 'ಗಿರಿಜಾ ಕಲ್ಯಾಣ'ವು ಕಾಳಿದಾಸನ 'ಕುಮಾರ ಸಂಭವ'ಕ್ಕೆ ಋಣಿಯಾಗಿದ್ದರೂ, ವಸ್ತುವನ್ನು ನಿಭಾಯಿಸುವ ರೀತಿ ಸ್ವಂತಿಕೆಯಿಂದ ಕೂಡಿದೆ. ಉಮೆಯು ತನ್ನ ಭಕ್ತಿಯಿಂದ ಶಿವನನ್ನು ಒಲಿಸಿಕೊಂಡ ಕತೆ ಇದು. ಈ ಕಾವ್ಯ ಚೆನ್ನಾಗಿದ್ದರೂ, ಒಟ್ಟು ಚಂಪೂ ಪರಂಪರೆಗೆ ಹೊಸ ಆಯಾಮವನ್ನೇನೂ ಜೋಡಿಸಲಿಲ್ಲ. ಅವನ ಸಾಧನೆಯೇನಿದ್ದರೂ ರಗಳೆಯ ರಚನೆಯಲ್ಲಿ; ಇದರಲ್ಲಿ ಅವನ ಹತ್ತಿರ ಸುಳಿಯುವಷ್ಟು ಶಕ್ತಿಯಿರುವ ಇತರ ಕವಿಗಳಿಲ್ಲ. ಹರಿಹರನು ಮಾರ್ಗ ಮತ್ತು ದೇಸಿಗಳ ಕೊಂಡಿಯಾಗಿದ್ದಾನೆ. ವಸ್ತುಕವನ್ನು ತೊರೆದು ಕನ್ನಡ ಕಾವ್ಯವು ವರ್ಣಕದತ್ತ ಒಲೆದದ್ದು ಹರಿಹರನ ಮೂಲಕ ಎಂಬುದು ಅವನ ಹೆಗ್ಗಳಿಕೆಯನ್ನು ಹೇಳುತ್ತದೆ.

ಚಂಪೂ ಕಾವ್ಯಗಳನ್ನು ಬರೆದ ಇತರ ಕವಿಗಳೂ ಇದ್ದಾರೆ. ಹದಿನೇಳನೇ ಶತಮಾನದ ಬ್ರಾಹ್ಮಣ ಕವಿಯಾದ ಚಿಕ್ಕುಪಾಧ್ಯಾಯ ಹದಿನಾರು ಮತ್ತು ಹದಿನೇಳನೇ ಶತಮಾನದ ವೀರಶೈವ ಕವಿಗಳಾದ ಸುರಂಗ ಮತ್ತು ಷಡಕ್ಷರದೇವ-ಇವರನ್ನು ಆ ಪ್ರಕಾರದಲ್ಲಿ ಕಾವ್ಯರಚನೆ ಮಾಡಿದರು ಎಂಬುದರಿಂದ ಹೆಸರಿಸಬೇಕೇ ಹೊರತು, ಅದಕ್ಕೆ ಏನನ್ನಾದರೂ ಹೊಸದನ್ನು ಸೇರಿಸಿದರು ಎಂಬ ಕಾರಣಕ್ಕಲ್ಲ.

ಈ ಮೂರು ಧಾರೆಗಳಲ್ಲಿ ಜೈನ ಕವಿಗಳು ಚಂಪೂವಿನ ರೂಪ ಮತ್ತು ವಸ್ತುಗಳಿಗೆ ಹೊಸ ಹೊಸ ಆಯಾಮಗಳನ್ನು ಜೋಡಿಸುತ್ತ ಅದರ ಸಮೃದ್ಧ ಬೆಳವಣಿಗೆಗೆ ಕಾರಣರಾದರು ಎಂಬುದು ಈ ಸಮೀಕ್ಷೆಯಿಂದ ಗೊತ್ತಾಗುತ್ತದೆ. ಬ್ರಾಹ್ಮಣ ಮತ್ತು ವೀರಶೈವ ಕವಿಗಳು ಈ ಪ್ರಕಾರವನ್ನು ಆಯ್ದುಕೊಂಡದ್ದು, ಅದು ಆ ಕಾಲದಲ್ಲಿ ಚಾಲತಿಯಲ್ಲಿದ್ದ ಕಾರಣದಿಂದಾಗಿ. ಈ ಎರಡೂ ವರ್ಗದ ಕವಿಗಳು ಬೇರೆ ಬೇರೆ ಪ್ರಕಾರಗಳಲ್ಲಿ ಅದ್ವಿತೀಯ ಸಾಧನೆಯನ್ನು ಮಾಡಿದ್ದಾರೆಂಬುದನ್ನು ಮರೆಯುವಂತಿಲ್ಲ. ಚಂಪೂವಿನ ಹೆಸರು ಹೇಳಿದಾಗ, ಸಹಜವಾಗಿಯೇ ಅನೇಕ ಸಮೀಕರಣಗಳು ಗೋಚರಿಸುತ್ತವೆ; ಹಳಗನ್ನಡದ ಬಳಕೆ, ರಾಜಾಶ್ರಯ, ಅಶ್ರಿತರನ್ನು ಕಾವ್ಯನಾಯಕನೊಂದಿಗೆ ಸಮೀಕರಿಸುವುದು, ಪೌರಾಣಿಕ ಪಾತ್ರಗಳನ್ನು ಮಾನವೀಕರಣಗೊಳಿಸುವುದು, ಮಾನವನ ಬಾಳಿನಲ್ಲಿ ವಿಧಿ-ಕಾಲ-ಕಾಮ-ಮುಂತಾದ ನೈಸರ್ಗಿಕ

ತತ್ವಗಳ ಪಾತ್ರದ ಬಗೆಗಿನ ಚಿಂತನೆ–ಇವುಗಳು. ಜೈನ ಕವಿಗಳು ಈ ಪ್ರಕಾರಕ್ಕೆ ಒಂದು ಗೌರವಯುತ ಸ್ಥಾನವನ್ನು ಗಳಿಸಿಕೊಟ್ಟು, ಕನ್ನಡ ಕಾವ್ಯದಲ್ಲಿ ಅದ್ಭುತ ಒಳನೋಟಗಳನ್ನು ತುಂಬಿ ಅದರ ಮಹತ್ತನ್ನು ಎತ್ತರಕ್ಕೇರಿಸಿದರು.

ಅಡಿಟಿಪ್ಪಣಿಗಳು

೧. ಬಲದೇವ ಉಪಾಧ್ಯಾಯ: 'ಸಂಸ್ಕೃತ ಸಾಹಿತ್ಯದ ಇತಿಹಾಸ' (ಅನುವಾದ; ಎಸ್. ರಾಮಚಂದ್ರಶಾಸ್ತ್ರೀ): ಪು. ೬೪೭

೨. ರಂ.ಶ್ರೀ. ಮುಗಳಿ: 'ಪ್ರಾಚೀನ ಕನ್ನಡ ಸಾಹಿತ್ಯ ಪ್ರಕಾರಗಳು' (೧೯೮೫): ಪು.೨೫–೩೦

೩. ಎಂ.ಎಂ. ಕಲಬುರ್ಗಿ; 'ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ' (೧೯೭೩); ಪು. ೫೩

೪. **ವಿಮಲೋದಯ ನಾಗಾರ್ಜುನ**
ಸಮೇತ ಜಯಬಂಧು ದುರ್ವಿನೀತಾದಿಗಳೀ
ಕ್ರಮದೊಳ್ ನೆಗಳ್ಚಿ ಗದ್ಯಾ
ಶ್ರಮಪದ ಗುರುತಾ ಪ್ರತೀತಿಯಂ ಕೈಕೊಂಡರ್ –ಕವಿರಾಜ ಮಾರ್ಗ ೧, ೨೬

ಪರಮ ಶ್ರೀ ವಿಜಯ ಕವೀ
ಶ್ವರ ಪಂಡಿತಚಂದ್ರ ಲೋಕಪಾಲಾದಿಗಳಾ
ನಿರತಿಶಯ ವಸ್ತುವಿಸ್ತರ
ವಿರಚನೆ ಲಕ್ಷ್ಯಂ ತದಾದ್ಯಕಾವ್ಯಕ್ಕೆಂದುಂ –ಅದೇ ೧, ೩೨

೫. **ಚಲದೊಳ್ ದುರ್ಯೋಧನಂ ನನ್ನಿಯೊಳಿನತನಯಂ ಗಂಡಿನೊಳ್ ಭೀಮಸೇನಂ**
ಬಲದೊಳ್ ಮದ್ರೇಶಂ ಅತ್ಯುನ್ನತಿಯೊಳ್ ಅಮರ ಸಿಂಧೂದ್ಭವಂ ಚಾಪವಿದ್ಯಾ
ಬಲದೊಳ್ ಕುಂಭೋದ್ಭವಂ ಸಾಹಸದ ಮಹಿಮೆಯೊಳ್ ಫಲ್ಗುಣಂ ಧರ್ಮದೊಳ್
ನಿರ್ಮಲಚಿತ್ತಂ ಧರ್ಮಪುತ್ರಂ ಮಿಗಿಲ್ ಇವರ್ಗಳಿನೀ ಭಾರತಂ ಲೋಕಪೂಜ್ಯಂ
ಪಂಪಭಾರತ : ೧೪.೬೪

೬. ಸಮ್ಯಕ್‌ದರ್ಶನ, ನಿಶ್ಯಂಕೆ, ನಿಷ್ಕಾಂಪ್ಷೆ, ನಿರ್ವಿಚಿಕಿತ್ಸೆ, ಅಮೂಢದರ್ಶಿತ್ವ, ಉಪಗೂಹನ, ಸ್ಥಿತಿಗರಣ, ವಾತ್ಸಲ್ಯ ಮತ್ತು ಧರ್ಮ ಪ್ರಭಾವನೆ ಹಾಗೂ ಪಂಚಾಣುವ್ರತಗಳಾದ ಅಹಿಂಸೆ, ಸತ್ಯ, ಅಸ್ತೇಯ, ಬ್ರಹ್ಮಚರ್ಯ ಮತ್ತು ಅಪರಿಗ್ರಹ–ಎಂಬ ಹದಿನಾಲ್ಕು ತತ್ವಗಳು

೭. **ಪೊಸಗನ್ನಸದಿಂ ವ್ಯಾವ**
ರ್ಣಿಸುವೆಂ ಸತ್ಕೃತಿಯನೆಂದು ಕನ್ನಡಮಂ ಚಿಂ
ತಿಸಿ ಕೂಡಲಾರದಕ್ಕಟ
ಮಿಸುಕದ ಸಕ್ಕದಮನಿಕ್ಕುವವನುಂ ಕವಿಯೆ –ಧರ್ಮಾಮೃತ ೧.೪೧

೮. ಅದೇ ೧.೪೨

ಅನುಬಂಧ ೨ (ಅ)

ಕನ್ನಡದಲ್ಲಿ ಚಂಪೂ : ಕೆಲವು ಚಿಂತನೆಗಳು

■

ಚಂಪೂ ಪ್ರಕಾರವು ಮೂಲದಲ್ಲಿ ಕನ್ನಡ ನೆಲೆಯದ್ದೆಂದೂ, ಅನಂತರ ಸಂಸ್ಕೃತದೆಡೆಗೂ ಸಾರಿಗಿಂದೂ ಡಾ. ರಂ.ಶ್ರೀ. ಮುಗಳಿಯಂತಹವರ ವಾದವನ್ನು ಅಲ್ಲಗಳೆಯುವಾಗ ಡಾ. ಸಿ.ಆರ್. ದೇಶಪಾಂಡೆಯವರು ಮುಂದಿಡುವ ಒಂದು ಅಂಶವೆಂದರೆ, ಕಾವ್ಯಮಾರ್ಗದಲ್ಲಿ ಸಂಸ್ಕೃತಕ್ಕೆ ಕನ್ನಡದಂತಹ ಭಾಷೆಗಳು ಏನಾದರೂ ಕಾಣಿಕೆ ನೀಡಬಲ್ಲವೇ ಎಂಬ ಸಂಶಯ. ಸಂಸ್ಕೃತ ಭಾಷೆಯಲ್ಲಿನ ಮೊದಲ ಚಂಪೂ ಕಾವ್ಯಗಳು ಕನ್ನಡ ನಾಡಿನವರಿಂದ ರಚಿತವಾಗಿವೆ; ಹಾಗೂ ಅತ್ಯಂತ ಪ್ರಾಚೀನ ಉಪಲಬ್ಧ ಸಂಸ್ಕೃತ ಚಂಪೂ ಕಾವ್ಯಗಳ ಕಾಲವು ಕ್ರಿ.ಶ. ಹತ್ತನೆಯ ಶತಮಾನದವು; ಕನ್ನಡದಲ್ಲಿ ಬೆಳೆದಂತೆ ಸಂಸ್ಕೃತದಲ್ಲಿ ಉತ್ಕೃಷ್ಟ ಚಂಪೂ ಪರಂಪರೆಯು ಬೆಳೆಯಲಿಲ್ಲ– ಇತ್ಯಾದಿ ವಾದಗಳು ಕನ್ನಡಪರ ಮನಸ್ಸಿನ ಕಾರಣದಿಂದಾಗಿ ಹೊಳೆದಿರಬಹುದಾದರೂ ಅವು ಸತ್ಯವಾಗಿರುವುದರಿಂದ ತಳ್ಳಿ ಹಾಕುವಂತಿಲ್ಲ. ಕನ್ನಡ ಸಂಸ್ಕೃತಕ್ಕೆ ಯಾವುದಾದರೂ ಮಾರ್ಗವನ್ನು ತೋರಿಸಬಲ್ಲುದೇ ಎಂದು ಕೇಳಿದರೆ ಯಾಕಾಗಬಾರದು ಎಂಬ ಮರುಪ್ರಶ್ನೆ ಹಾಕಬೇಕೆನಿಸುತ್ತದೆ.

ವರ್ಧಮಾನ–ಬುದ್ಧರ ಹೊತ್ತಿಗೆ ಸಂಸ್ಕೃತವು ಆಡುಭಾಷೆಯಾಗಿ ಸಂಪೂರ್ಣ ನಿಲುಗಡೆ ಹೊಂದಿದ್ದಂತೆ ಕಾಣುತ್ತದೆ. ಕ್ರಿ.ಶ. ಆರೆಂಟನೆಯ ಶತಮಾನದ ಕಾಲಕ್ಕೆ ಅತ್ಯಂತ ಪ್ರಸಿದ್ಧ ಸಂಸ್ಕೃತ ಕವಿಗಳು ಆಗಿಹೋದ್ದರು. ದೇಶದಲ್ಲಿ ಹಳೆಯ ವ್ಯವಸ್ಥೆಯ ವಿರುದ್ಧ ಪ್ರತಿಭಟನೆಗಳು ಪ್ರಾರಂಭವಾಗಿ ದೀರ್ಘಕಾಲವೇ ಸಂದಿದ್ದಿತು. ಹೊಸ ಮತಗಳು ಉದಯವಾಗಿ ಬುದ್ಧ–ಮಹಾವೀರರಂತಹವರಿಂದ ಜನರನ್ನು ಹೊಸ ಮಾರ್ಗದತ್ತ ಕೊಂಡೊಯ್ಯುವ ಪ್ರಯತ್ನಗಳು ಬಹು ಹಿಂದೆಯೇ ಯಶಸ್ವಿಯಾಗಿದ್ದವು. ಅಲ್ಲದೆ, ಕ್ರಿ.ಶ. ಆರ– ಎಂಟನೆಯ ಶತಮಾನಗಳ ಹೊತ್ತಿಗೆ ಅವೂ ಹಳೆಯವಾಗಿ, ಮತ್ತೊಮ್ಮೆ ಬಿರುಸಿನಿಂದ ವಿವಿಧ ಮಾರ್ಗಗಳು ಜನರನ್ನು ತಲುಪಲು ಪ್ರಾರಂಭಿಸಿದ್ದವು. ಜನರನ್ನು ತಲುಪುವುದು ಅವರಿಗೆ ಅರ್ಥವಾಗುವ ಭಾಷೆಗಳ ಮೂಲಕ ಮಾತ್ರ ಸಾಧ್ಯ. ಹೀಗಾಗಿ ತಮ್ಮ ತಮ್ಮ ಪಂಥಗಳನ್ನು ಜನರ ಎದುರಿಗೆ ಮಂಡಿಸಲು ಜನಭಾಷೆಗಳನ್ನು ಬಯಸುವುದು ಅನಿವಾರ್ಯವೇ ಆಯಿತು. ಹೀಗಾಗಿಯೇ ಬುದ್ಧ ಮಹಾವೀರರಿಂದ ಪಾಲಿ–ಪ್ರಾಕೃತಗಳು ಹೊಸಹುಟ್ಟು ಪಡೆದಂತೆ ಈ ಕಾಲದಲ್ಲಿ ಕನ್ನಡ ತಮಿಳುಗಳಂತಹ ಆಡುಭಾಷೆಗಳು ಕಾವ್ಯ ಮಾಧ್ಯಮವಾಗಲು ಕಾರಣವಾಯಿತೆನಿಸುತ್ತದೆ. ಆದ್ದರಿಂದಲೇ ತಮಿಳು–ಕನ್ನಡಗಳ ಅತ್ಯಂತ ಪ್ರಾಚೀನ ಕಾವ್ಯಮಾದರಿಗಳು ಬೌದ್ಧ–ಜೈನರಿಂದ ಪ್ರಾರಂಭವಾಗಿವೆ. ನೆಲೆನಿಂತ ಸಂಸ್ಕೃತವು

ಜನರನ್ನು ತಲುಪುವುದು ಅಸಾಧ್ಯವಾದಾಗ, ಮತ್ತು ಜನರನ್ನು ತಲುಪುವುದೇ ಮುಖ್ಯೋದ್ದೇಶವಾದಾಗ, ಜನಭಾಷೆಗಳ ಪರಿಣಾಮ ಕಾರಿತನವು ಬುದ್ಧ-ಮಹಾವೀರ ರಿಂದ ಬಹುಹಿಂದೆಯೇ ಸಾಬೀತಾಗಿರುವಾಗ, ಸಹಜವಾಗಿಯೇ ಈ ಕಾಲದಲ್ಲಿ ಹೊಸದನ್ನು ಹೇಳ ಹೊರಟ ಕವಿಗಳು ಜನಭಾಷೆಯನ್ನು ತಮ್ಮ ಮಾಧ್ಯಮವಾಗಿ ಆರಿಸಿಕೊಂಡರು. ನಮ್ಮ ಕನ್ನಡದ ಮಟ್ಟಿಗೆ ಹೇಳುವುದಾದರೆ, ಎಲ್ಲ ಹಿಂದಿನ ಕವಿಗಳೂ ಉಭಯಭಾಷಾ ವಿಶಾರದರು. ಬೇಕೆನ್ನಿಸಿದರೆ ಸಂಸ್ಕೃತದಲ್ಲಿ ಕಾವ್ಯ ರಚಿಸುವುದೇನೂ ಅವರಿಗೆ ಕಷ್ಟಕರವಾದ ಕೆಲಸವಲ್ಲ. ಆದರೂ ಅವರು ಸಂಸ್ಕೃತವನ್ನು ಬಿಟ್ಟು ಕನ್ನಡವನ್ನು ಹಿಡಿದದ್ದೇಕೆ? ಪ್ರಾಯಶಃ ಜನರನ್ನು ತಲುಪುವ ಹಂಬಲ.

ಜನರನ್ನು ತಲುಪುವ ಉದ್ದೇಶ ಹೊಂದಿದ ಕವಿಗೆ ಜನಭಾಷೆಯಲ್ಲಿ ಬರೆಯುವುದು ಅನಿವಾರ್ಯವಾದ ಹಾಗೆಯೇ, ಜನರನ್ನು ತಲುಪುವ ಮಾರ್ಗದಲ್ಲಿ ರಚಿಸುವುದೂ ಅನಿವಾರ್ಯ. ಬಹುತೇಕ ಸಾಮಾನ್ಯರಾದವರಿಗೆ ಹೇಳಬೇಕಾದುದನ್ನು ದೃಶ್ಯಶ್ರವ್ಯಗಳ ಸಮ್ಮಿಶ್ರ ಮಾಧ್ಯಮದಲ್ಲಿ ಹೇಳುವುದು ಅತ್ಯಂತ ಪರಿಣಾಮಕಾರಿ. ಜಾನಪದವು ಇಂತಹ ಅನೇಕ ಮಾರ್ಗಗಳನ್ನು ಒಳಗೊಂಡಿರುವುದು ಸರ್ವವೇದ್ಯ ವಿಚಾರ. ಯಕ್ಷಗಾನ, ಬಹುರೂಪ, ಕಲಕೇತ, ಕೋಡಂಗಿಯಾಟ, ಕೇಳಿಕೆ ಮುಂತಾದ ಜನಪದ ಕಲೆಗಳು ಎದುರಿಗಿರುವ ಜನರ ಕಣ್ಣು-ಕಿವಿಗಳ ಮೂಲಕ ಮನಸ್ಸು ತಲುಪುವಂತಹವು. ಹಾಗಾಗಿ ಯಾವುದೇ ಅಭಿವ್ಯಕ್ತಿ ಮಾಧ್ಯಮವನ್ನು ಅವಲಂಬಿಸುವ ವ್ಯಕ್ತಿಯು ಆದಷ್ಟೂ ಈ ಎರಡರ ಅಂಶಗಳನ್ನೊಳಗೊಂಡ ರೀತಿಯನ್ನು ಅನುಸರಿಸುವುದು ಅಪೇಕ್ಷಣೀಯವಾಗುತ್ತದೆ. ಆದ್ದರಿಂದ ಸಾಹಿತ್ಯವು ಪ್ರಮುಖವಾಗಿ ಶ್ರವ್ಯ ಮಾಧ್ಯಮವಾದರೂ, ತನ್ನಲ್ಲಿಯೇ ನಾಟಕೀಯತೆಯನ್ನು ಹುದುಗಿಸಿಕೊಳ್ಳುವ ಮೂಲಕ ಹೆಚ್ಚು ರಂಜನೀಯವೂ ಪರಿಣಾಮಕಾರಿಯೂ ಆಗಬಲ್ಲದು. ಅಂತೆಯೇ ಜನರನ್ನು ತಲುಪುವ ಉದ್ದೇಶದ ಕವಿಗಳು ತಮ್ಮ ಕಾವ್ಯಗಳಲ್ಲಿ ವೈವಿಧ್ಯವನ್ನು ತಂದು ಏಕತಾನತೆಯನ್ನು ನಿವಾರಿಸಿಕೊಳ್ಳುವುದೂ, ನಿರೂಪಣೆಯ ಮಧ್ಯೆ ನಾಟಕೀಯತೆಯನ್ನು ಸೇರಿಸುವುದೂ ಸಹಜವಾದುದು. ಇಂತಹ ರೀತಿಯ ಕಲಾಪ್ರಕಾರಗಳು ಜನರಲ್ಲಿ ಪರಿಣಾಮಕಾರಿ ರೀತಿಯಲ್ಲಿ ಬಳಕೆಯಲ್ಲಿರುವಾಗ, ಅವುಗಳು ಕವಿಗಳ ಮೇಲೆ ಪ್ರಭಾವ ಬೀರುವುದಾಗಲೀ, ಕವಿಗಳು ಅವುಗಳ ಧಾಟಿಯನ್ನು ತಮ್ಮ ಕಾವ್ಯ ರಚನೆಯಲ್ಲಿ ಬಳಸಿಕೊಳ್ಳುವುದಾಗಲೀ ಹಿಂದಿನಿಂದಲೂ ನಡೆದುಬಂದಿರುವುದೇ ಆಗಿದೆ.

ಈ ಕಾರಣದಿಂದಾಗಿ ಕನ್ನಡದ ಅತ್ಯಂತ ಪ್ರಾಚೀನ ಬರವಣಿಗೆಯ ಮಾದರಿಗಳಲ್ಲಿ ಹೊರನೋಟಕ್ಕೆ ಸಂಸ್ಕೃತದ ಪ್ರಭಾವ ದಟ್ಟವಾಗಿರುವಂತೆ ಕಾಣಬಹುದಾದರೂ, ಆಂತರ್ಯದಲ್ಲಿ ಜಾನಪದ ಅಭಿವ್ಯಕ್ತಿ ಮಾಧ್ಯಮಗಳ ಪ್ರಭಾವವನ್ನು ಅರಗಿಸಿಕೊಂಡ ಬಗೆಯನ್ನು ಗುರುತಿಸಬಹುದೆನಿಸುತ್ತದೆ. ಶಿಷ್ಟ ಸಾಹಿತ್ಯಕ್ಕೆ ತನ್ನದೇ ಆದ ಬಿಗುಮಾನಗಳಿರುತ್ತವೆಂಬುದು ನಿಜವಾದರೂ ಜನಪರ ಧೋರಣೆಯ ಕವಿಗಳ ಮೇಲೆ ಜನಪದದ ಪ್ರಭಾವ ತಂತಾನೆ ಆಗಿ ಅವರ ಶಿಷ್ಟ ಅಭಿವ್ಯಕ್ತಿಯಲ್ಲಿಯೂ ಹೊಕ್ಕಿರುವುದು. ಅಸಂಭವವಲ್ಲ.

ಈ ದೃಷ್ಟಿಯಿಂದ ಚಂಪೂ ಪ್ರಕಾರದ ಚರ್ಚೆಯನ್ನು ಆರಂಭಿಸಬಹುದೆನ್ನಿಸುತ್ತದೆ. 'ಕವಿರಾಜ ಮಾರ್ಗ'ದಲ್ಲಿ ಆಗಲೇ ಕನ್ನಡನಾಡಿನಲ್ಲಿ ಪ್ರಚಲಿತವಾಗಿದ್ದ ಸಾಹಿತ್ಯ ಪ್ರಕಾರಗಳ ಉಲ್ಲೇಖವಿದೆ. ಅವುಗಳಲ್ಲಿ 'ಚಿತ್ತಾಣ' 'ಬೆದಂಡೆ'ಗಳೂ ಇವೆ. ಇದರ ಸ್ವರೂಪದ ಬಗ್ಗೆ ಅನೇಕ ವಿದ್ವಾಂಸರು ಸಾಕಷ್ಟು ಚರ್ಚೆ ನಡೆಸಿದ್ದಾರೆ. ಅದನ್ನು ಪುನರುಕ್ತಿಗೊಳಿಸುವುದಾಗಲೀ, ಮತ್ತೊಂದು ವಾದವನ್ನು ಮಂಡಿಸುವುದಾಗಲೀ ನನ್ನ ಉದ್ದೇಶವಲ್ಲ. ಆದರೆ ಅವುಗಳಲ್ಲಿ ಯಾವುದನ್ನು, ಮೇಲಿನ ಆಲೋಚನೆಯ ಹಿನ್ನೆಲೆಯಲ್ಲಿ, ಪುಷ್ಟಗೊಳಿಸಬಹುದು ಎಂಬ ಬಗ್ಗೆ ಯೋಚಿಸುತ್ತೇನೆ. ಇವೆರಡೂ ಕನ್ನಡಿಗರ ಎರಡು ಕಾವ್ಯದೃಷ್ಟಿಗಳೆಂದೂ, ಚತ್ತಾಣವು ಕತೆಯನ್ನವಲಂಬಿಸಿ ವಸ್ತುಕವಾದರೆ, ಬೆದಂಡೆಯು ವರ್ಣನೆಯನ್ನವಲಂಬಿಸಿ ವರ್ಣಕವಾಯಿತೆಂದು ಕಲಬುರ್ಗಿ ಊಹಿಸುತ್ತಾರೆ.[1] ಬೆದಂಡೆಯು ವಾದ್ಯದೊಡನೆ ಹಾಡುವ ಕಾವ್ಯ ಜಾತಿಯೆಂದು ವಿದ್ವಾಂಸರು ಹೇಳುತ್ತಾರೆ. ಹೀಗಾಗಿ ವಿವಿಧ ಮಟ್ಟುಗಳಲ್ಲಿ ಹಾಡುವ ಪದ್ಯಗಳೂ, ನಿರೂಪಣೆಗಾಗಿ ಗದ್ಯವೂ ಇರುವ ಇಂತಹವು ಚಂಪೂ ಪ್ರಕಾರದ ಮೂಲವಾಗಿರಬಹುದು; ಕನಿಷ್ಠ ಪಕ್ಷ, ಅಂತಹ ಜಾನಪದ ಕಾವ್ಯ ಸ್ವರೂಪಗಳು ಚಂಪೂ ಈಗಿರುವ ಆಕಾರವನ್ನು ಪಡೆಯುವಲ್ಲಿ ಪ್ರಭಾವ ಬೀರಿರುಬಹುದು.

ಚಂಪೂ ಮೇಲುನೋಟಕ್ಕೆ ಕಾಣುವಂತೆ ಗದ್ಯಪದ್ಯಗಳಿಂದ ಕೂಡಿರುವಂತಹುದು. 'ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಭಿಧೀಯತೆ' ಎಂಬ ದಂಡಿಯ ಮಾತು ಅತ್ಯಂತ ಪ್ರಾಚೀನವಾದ ಹಾಗೂ ಮಾನ್ಯವಾದ ಚಂಪೂ ವ್ಯಾಖ್ಯೆ. ಈ ವಾಕ್ಯದ ಇನ್ನೊಂದು ಪಾಠ ಭೇದವಾದ 'ಗದ್ಯಪದ್ಯಮಯೀ ಕಾಚಿತ್ ಚಂಪೂರಿತ್ಯಪಿ ವಿದ್ಯತೇ' ಎಂಬುದನ್ನಾಧರಿಸಿ ಬಲದೇವ ಉಪಾಧ್ಯಾಯರು "ಈ ಲಕ್ಷಣವಾಕ್ಯದಲ್ಲಿರುವ 'ಕಾಚಿತ್' ಮತ್ತು 'ವಿದ್ಯತೇ' ಎಂಬ ಪದಗಳು ಚಂಪೂ ಕಾವ್ಯವು ಆ ಕಾಲದಲ್ಲಿ ಅವಶ್ಯಕವಾಗಿದ್ದುದ್ದನ್ನೂ, ಆದರೆ ದಂಡಿಗೆ ಅದರ ವಿಶಾದವಾದ ಜ್ಞಾನವಿಲ್ಲದುದನ್ನೂ ಸೂಚಿಸುತ್ತದೆ" ಎಂದು ಹೇಳುತ್ತಾರೆ.[2] ಎಂದರೆ ದಂಡಿಯು ಚಂಪೂ ಕಾವ್ಯವನ್ನು ಕಣ್ಣಾರೆ ಕಂಡಿರದೆ, ತಾನು ಕೇಳಿದಂತೆ ಅದರ ಸ್ವರೂಪವನ್ನು ಹೇಳುತ್ತಿದ್ದಾನೆಂಬುದು ಅವರ ಅಭಿಪ್ರಾಯ. ಹೀಗಿದ್ದರೆ, ಆ ಪ್ರಕಾರವು ಎಲ್ಲಿತ್ತು? ಕನ್ನಡದಲ್ಲಿದ್ದಿತೆಂಬ ಅರ್ಥ ಹುದುಗಿದೆಯೇ? ದಂಡಿಯ 'ಕಾವ್ಯಾದರ್ಶ'ವನ್ನು ಅನುಸರಿಸುವ ಕವಿರಾಜಮಾರ್ಗಕಾರನು "ಮಿಗೆ ಕನ್ನಡಗಬ್ಬಂಗಳೊಳಗಣಿತಗುಣ ಗದ್ಯಪದ್ಯ ಸಮ್ಮಿಶ್ರಿತಮಂ ನಿಗದಿಸುವರ್ಗದ್ಯಕಥಾ ಪ್ರಗೀತಿಯಿಂ ತಚ್ಚಿರಂತನಾಚಾರ್ಯರ್ಕಳ್" ಎಂದು ಗದ್ಯ ಕಥೆಯು ಕನ್ನಡಗಬ್ಬವೆಂದು ಸೂಚಿಸುತ್ತಿರುವುದನ್ನು ಕಂಡರೆ ಕನ್ನಡ ಜಾನಪದ ಪ್ರಕಾರಗಳ ಹಿನ್ನೆಲೆಯಲ್ಲಿ ದಂಡಿಯು ಚಂಪೂವಿನ ಸ್ವರೂಪವನ್ನು ಹೇಳಿರಬಹುದೇನೋ ಎನ್ನಿಸುತ್ತದೆ.

ಚಂಪೂ ಎಂಬ ಪದವೇ ಕನ್ನಡದಂತಿದೆ. ಅತ್ಯಂತ ಪ್ರಾಚೀನ ಉಪಲಬ್ಧ ಸಂಸ್ಕೃತ ಚಂಪೂಗಳು ಕನ್ನಡ ನಾಡಿನ ಪರಿಸರದ ಕವಿಗಳಿಂದ ರಚಿತವಾಯಿತು. ಕನ್ನಡದಲ್ಲಿಯೂ ಅದೇ ಕಾಲದಲ್ಲಿ ಚಂಪೂ ಕೃತಿಗಳು ಕಾಣುತ್ತವೆ; ಚಂಪೂ

ಪರಂಪರೆ ಕನ್ನಡದಲ್ಲಿ ಗಟ್ಟಿಯಾದ ನೆಲೆಯೂರಿ ಮುಂದುವರಿಯಿತು–ಈ ಎಲ್ಲ ಕಾರಣಗಳಿಂದ ಈ ಪ್ರಕಾರವು ಕನ್ನಡ ಮೂಲದ್ದು ಎಂದು ಕನ್ನಡದಲ್ಲಿ ಚಂಪೂವಿನ ಮೂಲವನ್ನು ಹುಡುಕುವ ವಿದ್ವಾಂಸರ ಜೊತೆ ನಾವೂ ದನಿಗೂಡಿಸುವಂತಾಗುತ್ತದೆ. ಇದಕ್ಕೆ ಕಾರಣ ನಮ್ಮ ಕನ್ನಡದ ಕಡೆಗೆ ಓಲುವ ಮನೋಭಾವವಿರಬಹುದು. ಆದರೆ ಮೊತ್ತ ಮೊದಲ ಚಂಪೂ ಕೃತಿಯು ಸಂಸ್ಕೃತದಲ್ಲಿಯೇ ರಚಿತವಾಯಿತು, ಆದರ ಸ್ಫೂರ್ತಿಯಿಂದ ಕನ್ನಡದಲ್ಲಿಯೂ ಸಮಾನಾಂತರವಾಗಿ ಈ ಪ್ರಕಾರವು ಬೆಳೆಯಿತು ಎಂಬ ಅಂಶವೇ ಸಾಬೀತಾಯಿತು ಎಂದಿಟ್ಟುಕೊಳ್ಳೋಣ. ಆದರೆ ಅದರಿಂದ ಕನ್ನಡ ಕಾವ್ಯದ ಸ್ವಂತಿಕೆಯನ್ನು ಅಲ್ಲಗಳೆಯುವುದು ಸಾಧ್ಯವಿಲ್ಲ. ಕಥಾವಸ್ತು, ವರ್ಣನ ಸಂಪ್ರದಾಯ, ಕೆಲವು ವೃತ್ತಗಳು ಸಂಸ್ಕೃತ ಮೂಲದಿಂದ ಬಂದು ಕನ್ನಡ ಕವಿಗಳಿಗೆ ಸಹಾಯ ಮಾಡಿವೆ ಎಂದಾಕ್ಷಣ ಕನ್ನಡ ಕಾವ್ಯದ ಸ್ವೋಪಜ್ಞತೆಯನ್ನು ಅಲ್ಲಗಳೆದಂತಲ್ಲ. ಕಚ್ಚಾವಸ್ತು ಯಾವುದಾದರೂ, ಎಲ್ಲಿಂದ ಬಂದರೂ ಅದನ್ನು ಸಿದ್ಧವಸ್ತುವಾಗಿ ಮಾರ್ಪಡಿಸಿ ನೀಡುವುದರಲ್ಲಿಯೇ ಅಲ್ಲವೇ ಕೌಶಲ ಅಡಗಿರುವುದು? ಹೀಗಾಗಿ ಚಂಪೂವಿಗೆ ಕನ್ನಡವೋ ಸಂಸ್ಕೃತವೋ ಯಾವುದಾದರೂ ಹುಟ್ಟುನೆಲೆಯಾಗಿರಲಿ ಕನ್ನಡದ ಚಂಪೂಗಳು ಸಂಸ್ಕೃತ ಚಂಪೂಗಳಿಗಿಂತ ಭಿನ್ನವಾಗಿ ಕನ್ನಡತನವನ್ನು ಮೆರೆಯುತ್ತವೆ. ಇದನ್ನೇ 'ದೇಸಿ' ಎನ್ನುವುದು. ಹೀಗೆ ಕಾವ್ಯಪರಂಪರೆಯ ನಿರ್ಮಾಣ ದಲ್ಲಿ ಒಟ್ಟು ಕನ್ನಡ ಕಾವ್ಯದ ಮಟ್ಟಿಗೆ ಹೇಗೋ ಹಾಗೆಯೇ ಚಂಪೂವಿನ ಮಟ್ಟಿಗೆ ದೇಸಿಯ ಸತ್ವ ತುಂಬಿ ನಮ್ಮ ಕಾವ್ಯವು ಮುಂದೆ ಹರಿಯಬೇಕಾದ ಮಾರ್ಗವನ್ನು ಖಚಿತವಾಗಿ ಹಾಕಿಕೊಟ್ಟವನು ಪಂಪ.

ಪಂಪನು ತನ್ನ ಕಾವ್ಯವು ಇರಬೇಕಾದ ಬಗೆಯನ್ನು ಈ ಪದ್ಯದಲ್ಲಿ ಘೋಷಿಸಿಕೊಂಡಿದ್ದಾನೆ:

ಬಗೆ ಪೊಸತಪ್ಪುದಾಗಿ ಮೃದುಬಂಧದೊಳೊಂದುವುದೊಂದಿ ದೇಸಿಯೊಳ್
ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು ತಳ್ತೊಡೆ ಕಾವ್ಯಬಂಧಮೊ
ಪ್ಪುಗುಮೆಳಮಾವು ಕೆಂದಳಿರ ಪೂವಿನ ಬಿಣ್ಪೊಱೆಯಿಂ ಬಟಿಲ್ದು ತುಂ
ಬಿಗಳಿನೆ ತುಂಬಿ ಕೋಗಿಲೆಯೆ ಬಗ್ಗಿಸೆ ಸುಗ್ಗಿಯೊಳೊಪ್ಪುವಂತೆವೊಲ್ (೧. ೮)

ಕಾವ್ಯಬಂಧವು ಒಪ್ಪುವುದು, ಬಗೆ ಹೊಸದಾಗಿರುವುದು, ಮೃದು ಶಬ್ದಗಳಿಂದ ಕೂಡಿರುವುದು, ದೇಸಿಯಲ್ಲಿ ಸೇರಿರುವುದು–ಇವೆಲ್ಲ ನಡೆದಾಗ; ಹೇಗೆಂದರೆ ಎಳಮಾವು ಕೆಂದಳಿರ ಹೂಭಾರದಿಂದ ಜೋತು, ತುಂಬಿಗಳಿಂದ ತುಂಬಿ, ಕೋಗಿಲೆ ಕುಕಿಲಿನಿಂದ ಕೂಡಿದಾಗ ಸುಗ್ಗಿಯು ಒಪ್ಪುವ ರೀತಿಯಲ್ಲಿ. ಕಾವ್ಯವು ಸುಗ್ಗಿಯಂತೆ ಹೊಸದೃಷ್ಟಿಯನ್ನುಳ್ಳುದು: ಮಾವು ಹಳೆಯದಾದರೂ (ಸುಗ್ಗಿಯಲ್ಲಿ) ಕೆಂದಳಿರಿನಿಂದ ಹೂವಿನಿಂದ ಹೊಸತಾಗುತ್ತದೆ, ತುಂಬಿಗಳಿಂದ ಕೂಡಿ ಫಲವಂತಿಕೆಗೆ ಕಾರಣ ವಾಗುತ್ತದೆ, ಕೋಗಿಲೆಯ ಇಂಪಾದ ಧ್ವನಿಯಂತೆ ಗೇಯವಾಗಿರುತ್ತದೆ. ಪಂಪನ 'ದೇಸಿಯೊಳ್ ಪುಗುವುದು ಪೊಕ್ಕ ಮಾರ್ಗದೊಳೆ ತಳ್ವುದು' ಎಂಬೆಡೆಯಲ್ಲಿ ವಿಶೇಷಾರ್ಥವಿಟ್ಟುರುವಂತೆ ತೋರುತ್ತದೆ. ಹೊಸ ಚಿಂತನೆಗಳು ಕಾವ್ಯದಲ್ಲಿ

ಮೃದುಬಂಧದೊಳೊಂದಿ ದೇಸಿಯಲ್ಲಿ ಹೊಗಬೇಕು; ಹಾಗೆ ದೇಸಿಯಲ್ಲಿ ಹೊಕ್ಕ ಮಾರ್ಗದಲ್ಲೇ ತಳ್ವುದು ಎಂದರೆ ತಂಗಬೇಕು, ಎಂದರೆ ದೇಸಿಯ ಮಾರ್ಗದಲ್ಲಿ 'ಕಾವ್ಯವು' ತಂಗಿದಾಗಲೇ ಕಾವ್ಯವು ಸುಗ್ಗಿಯ ಕಾಲದ ಮಾವಿನಂತೆ ಶೋಭಿಸುವುದು. ಇಲ್ಲಿ ಹಳೆಯದು ಹೊಸತಾಗುವುದು ದೇಸಿಯಿಂದ ಎಂಬ ಭಾವನೆಯನ್ನು ಪಂಪನು ಸೂಚಿಸುತ್ತಿರುವಂತಿದೆ. ಸರಿಯಾದ ಮಾರ್ಗ ಯಾವುದೆಂದರೆ 'ದೇಸಿಯ ಮಾರ್ಗ' ಎಂಬುದು ಅವನ ಅಭಿಪ್ರಾಯ. ಎಂದರೆ ತನ್ನ ಭಾರತವು ಹಳೆಯ ಮಾವಿನ ಮಾವಿನ ಮರದಂತಹುದೇ; ಆದರೆ ಅದು ಸುಗ್ಗಿಯ ಕಾಲದಲ್ಲಿರುವಂತೆ ಶೋಭಾಯ ಮಾನವಾಗಿರುವುದು ಮೃದುಬಂಧ, ದೇಸಿಯ ಮಾರ್ಗ, ಪೊಸ ಬಗೆ ಇವುಗಳಿಂದಾಗಿ ಎಂದು ಅವನು ಹೇಳುತ್ತಿದ್ದಾನೆ.

ಒಟ್ಟಾರೆ ಪಂಪನ ದೃಷ್ಟಿಯಲ್ಲಿ ದೇಸಿಯ ಕಾರಣದಿಂದಾಗಿ ಕಾವ್ಯವು ಮಾರ್ಗವನ್ನು ಸೇರಿದಂತಾಗುತ್ತದೆ. ಹೀಗೆ ಎನ್ನುವಾಗ, 'ಮಾರ್ಗ' ಶಬ್ದವನ್ನು ಶ್ಲೇಷೆಯಿಂದ ಬಳಸುತ್ತಿದ್ದಾನೆ ಅವನು. ಭಾರತದ ಕೊನೆಯಲ್ಲಿ ಪಂಪನು ತನ್ನ ಕಾವ್ಯವು ಮುನ್ನಿನ ಕಬ್ಬಗಳನ್ನೆಲ್ಲ ಇಕ್ಕಿ ಮೆಟ್ಟಲು ಕಾರಣ, ಇತರ ಅಂಶಗಳೊಂದಿಗೆ, 'ಕೃತ ದೇಸಿ' ಎನ್ನುತ್ತಾನೆ, (೧೪. ೫೯) ಹಾಗೆಯೇ ತಾನು 'ನಾಡೊವಜ' ನಾದುದು; ಉಣ್ಮಿ ಪೊಣ್ಮುವ ದೇಸಿಗಳಿಂದ' ಎಂದೂ ಹೇಳಿ ಕೊಳ್ಳುತ್ತಾನೆ. (೧೪. ೬೨) ಎಂದರೆ ಪಂಪನಿಗೆ ತನ್ನ ಕಾವ್ಯದ ವೈಶಿಷ್ಟ್ಯವೆಂದರೆ ತನ್ನ ದೇಸಿಗಳೇ ಎಂದೂ, ಅದು ಹಿಂದೆ ಇರದುದರಿಂದ ತಾನು ಕನ್ನಡದಲ್ಲಿ ಅದನ್ನು ತಂದು 'ನಾಡೊವಜ' ನಾದೆನೆಂದೂ ಪ್ರಜ್ಞಾಪೂರ್ವಕವಾದ ತಿಳಿವಳಿಕೆಯಿದೆ. ಮುಂದೆ ಬಂದ ಚಂಪೂಕವಿಗಳೆಲ್ಲರೂ ಪಂಪನ ದೇಸಿಯ ವೈಶಿಷ್ಟ್ಯವನ್ನು ಮನವಾರೆ ಪ್ರಶಂಸಿಸುತ್ತಾರೆ.

ಹಾಗಾದರೆ ಪಂಪನ ದೇಸಿಯ ಸ್ವರೂಪವೇನು? ಕೃತಿ 'ದೇಸಿಯೊಳ್ ಪುಗುವುದು' ಹೇಗೆ? ಎಂಬ ಪ್ರಶ್ನೆಗಳು ಏಳುತ್ತವೆ. ಪಂಪನ ಆದಿಪುರಾಣಕ್ಕೆ ಜಿನಸೇನಾಚಾರ್ಯರ ಕತೆ ಹಾಗೂ ವಿವರಗಳು ಚೌಕಟ್ಟನ್ನು ಒದಗಿಸಿವೆ; ಅಲ್ಲಿ ಕವಿಗೆ ಸ್ವಾತಂತ್ರ್ಯ ಕಡಿಮೆ; ಹೇಳುತ್ತಿರುವುದೇ ಅಲೌಕಿಕ ವ್ಯಕ್ತಿಯ ಕತೆಯಾದ್ದರಿಂದ ಸಾಮಾನ್ಯ ವ್ಯಕ್ತಿಗಳ ಜೀವನ ನಿರೂಪಣೆಯ ಶೈಲಿ ಅದಕ್ಕೆ ಒಗ್ಗದು. ಹೀಗಾಗಿ ಪಂಪನ ದೇಸಿಗೆ ಅಲ್ಲಿ ಅವಕಾಶವಿಲ್ಲ. ಅದರೆ ತಾನು ಹೇಳುವ ಸಮಸ್ತ ಭಾರತ ಕತೆಯು ಶುದ್ಧಲೌಕಿಕವಾದ್ದರಿಂದ, ಪಂಪನ ಜೀವನಾನುಭವ ಹಾಗೂ ಜೀವನದೃಷ್ಟಿಗಳು ಅಭಿವ್ಯಕ್ತಿ ಪಡೆಯಲು ಅವಕಾಶ ಅಪಾರವಾಗಿದೆ. ಕೇವಲ ಶಬ್ದಗಳು, ಪದ ಸಮುಚ್ಚಯಗಳು, ಸಂಭಾಷಣೆಯ ರೀತಿ–ಇವುಗಳು ಮಾತ್ರವೇ ಪಂಪನ ದೇಸಿಯ ಸತ್ವವಲ್ಲ. ಭಾಷೆಯ ಮೂಲಕವಾಗಿಯೇ ಒಂದು ಜನಾಂಗದ ಸಂಸ್ಕೃತಿಯು ಮುಖ್ಯವಾಗಿ ಹೊರಹೊಮ್ಮುತ್ತದೆಯಾದ್ದರಿಂದ ಪಂಪನು ತನ್ನ ಕಾವ್ಯದ ಬಹು ಹಿಂದಿನ (ಒಂದು ಬಗೆಯಲ್ಲಿ ಪೌರಾಣಿಕ) ಪಾತ್ರಗಳ ಬಾಯಲ್ಲಿ ಕನ್ನಡ ಮಾತುಗಳನ್ನಾಡಿಸುತ್ತಾನೆ, ಸರಿ. ಆದರೆ ವ್ಯಾಸ ಸೃಷ್ಟಿಸಿದ ಸನ್ನಿವೇಶಗಳ ಹೊರ ರೂಪ ಅದೇ ರೀತಿಯಿದ್ದರೂ, ಕನ್ನಡ ಮಾತಾಡುವ ಪಾತ್ರಗಳು ಕೇವಲ ಸಂಸ್ಕೃತದಲ್ಲಿದ್ದ ಮಾತುಗಳನ್ನು ಅಲ್ಲಿ ಕನ್ನಡದಲ್ಲಿ

ಭಾಷಾಂತರಿಸಿ ಹೇಳುವುದಿಲ್ಲ. 'ಕತೆಯ ಮೆಯ್ಗಿಡಲೀಯದೆ' ಪಂಪನು ಭಾರತವನ್ನು ಹೇಳಿದ್ದರೂ, ಅದನ್ನು ದೇಸಿಯಲ್ಲಿ ಎಂದರೆ ಕನ್ನಡ ತನದಲ್ಲಿ ಅದ್ದಿ ತೆಗೆದಿದ್ದಾನೆ ಹೀಗಾಗಿ ಒಟ್ಟು ವ್ಯಾಸನಿರ್ಮಿತ ಭಾರತವಾದರೂ, ಅವರ ವಿವರಗಳು, ಬಣ್ಣ ಹಾಗೂ ಸತ್ವಗಳು ಕನ್ನಡದವು. ಈ ಭಾರತ ಕತೆಯನ್ನು 'ವರ್ಣಕಂ ಕತೆಯೊಳೊಡಂಬಡಂ ಪಡೆಯೆ ಪೇಟಿಬ್ವೊಡೆ ಪಂಪನೆ ಪೇೞ್ಗುಂ' ಎಂದು ಪಂಡಿತರು ಹೇಳಿದರಂತೆ. ಇಲ್ಲಿನ 'ವರ್ಣಕ'ವು ಈ ದೇಸಿಯನ್ನೇ ಸೂಚಿಸುತ್ತದೆ. ಭಾರತದ ಪಾತ್ರೆಯಲ್ಲಿ ಕನ್ನಡತನದ ದ್ರವವನ್ನು ಪಂಪ ತುಂಬಿದ್ದಾನೆ.

ಮಾತುಗಳು ಹಾಗಿರಲಿ, ಅದರ ಬಗ್ಗೆ ಈಗಾಗಲೇ ಸಾಕಷ್ಟು ಜನರು ಹೇಳಿದ್ದಾರೆ. ಅದರೊಡನೆ ಸನ್ನಿವೇಶಗಳ ನಿರೂಪಣೆ, ಮೌಲ್ಯಗಳ ಮೇಲೆ ನೀಡುವ ಒತ್ತು, ಸಂಘರ್ಷ ಚಿತ್ರಣ–ಇಂಥ ಸಂದರ್ಭಗಳನ್ನು ಪಂಪನು ನಿರ್ವಹಿಸುವ ರೀತಿ ಅನನ್ಯವಾದದ್ದು. 'ಪೋಲಿಪೊಡೆನಗಟ್ಟಿಯಾದುದು ಗುಣಾರ್ಣವ ಭೂಭುಜನಂ ಕಿರೀಟಿಯೋಳ್' ಎಂದ ಪಂಪನು ಕೇವಲ ರಾಜಕೀಯ ಶ್ಲೇಷೆಯನ್ನು ಮಾತ್ರ ತನ್ನ ಭಾರತದಲ್ಲಿ ಸಾಧಿಸಿಲ್ಲ; ಭಾರತ ಕತೆಯಲ್ಲಿ ಅವನು ತನಗೆ ದಕ್ಕುವಷ್ಟು ಕನ್ನಡಿಗರ ಜೀವನವನ್ನೂ ಸೇರಿಸಿ ಸಾಂಸ್ಕೃತಿಕ ಶ್ಲೇಷೆಯನ್ನೂ ಸಾಧಿಸಿದ್ದಾನೆ. ಇದು ಪಂಪನು ಮಾತ್ರ ಸಾಧಿಸಿರುವ ಗುಣವೇನೂ ಅಲ್ಲ; ಎಲ್ಲ ದೊಡ್ಡ ಕವಿಗಳೂ ಮಾಡುವುದು ಅದನ್ನೇ–ಹಳೆಯ ಕಥಾವಸ್ತುವಿನಲ್ಲಿ ಹೊಸ ಜೀವನದ್ರವ್ಯವನ್ನು ಸುರಿಯುವುದು. ಆದರೆ ಪಂಪನು ಈ ಕೆಲಸವನ್ನು ಕನ್ನಡದ ಮಟ್ಟಿಗೆ ದೊಡ್ಡ ರೀತಿಯಲ್ಲಿ ಮೊದಲ ಬಾರಿಗೆ ಮಾಡಿದ್ದಾನೆಂಬುದೇ ಅವನಿಗಿರುವ ಹೆಗ್ಗಳಿಕೆ. ಅಥವಾ ಕನ್ನಡಿಗರು ಸಾಹಿತ್ಯದ ಮೂಲಕ ತಮ್ಮತನವನ್ನು ಗುರುತಿಸಿಕೊಳ್ಳಲು ತೊಡಗಿದಂದಿನಿಂದ ಆರಂಭವಾದ ಈ ಕಾರ್ಯವು ಪಂಪನಲ್ಲಿ ಶಿಖರವನ್ನು ಮುಟ್ಟಿದೆಯಾದ್ದರಿಂದ, ಪಂಪನ ಈ 'ದೇಸಿ' ಮುಂದಿನವರಿಗೆ ಮಾದರಿಯಾಯಿತು.

ಶಂತನು–ಸತ್ಯವತಿಯರ ಮದುವೆಯ ಪ್ರಸಂಗ, (೧. ೭೦–೭೩) ಯುದ್ಧ ಕಾಲದಲ್ಲಿ ಸಾವು–ಮುತ್ತೈದೆತನ ಇವುಗಳ ಬಗ್ಗೆ ಮಾತನಾಡಿಕೊಳ್ಳುವ ಸೈನಿಕ ಕುಟುಂಬಗಳ ಚಿತ್ರಣ (೧೦. ೪೪–೪೬). ಇಂತಹ ಸನ್ನಿವೇಶಗಳಲ್ಲಿ ಸಂಗ್ರಹವಾಗಿ ಯಾದರೂ ಚಿತ್ರಿತವಾಗಿರುವ ನಿತ್ಯಜೀವನ ರೀತಿಯಲ್ಲಿ ಕಾಣುವುದು ಪಂಪನ ಕಾಲದ ಕನ್ನಡ ಮನೆಗಳ ಜೀವನ. ತನ್ನ ಕಾಲದ ಜನಗಳ ಮೌಲ್ಯಗಳನ್ನು ಪಂಪನು ಭಾರತ ದಲ್ಲಿ ಹೇಗೆ ಪ್ರತಿಪಾದಿಸಿದ್ದಾನೆಂಬುದು ಈಗಾಗಲೇ ವಿಸ್ತಾರವಾಗಿ ಚರ್ಚಿತವಾಗಿದೆ.[೪] ಹಾಗೆಯೇ 'ಚಲದೊಳ್ ದುರ್ಯೋಧನಂ' ಎಂದು ಆರಂಭವಾಗುವ ಪದ್ಯದಲ್ಲಿ ಭಾರತದ ಮುಖ್ಯಪಾತ್ರಗಳನ್ನು ಪಂಪನು ವಿವಿಧ ಮೌಲ್ಯಗಳೊಂದಿಗೆ ಸಮೀಕರಿಸಿರುವುದು ತನ್ನ ಕಾಲದ ಜೀವನ ನೋಟಕ್ಕೆ ಅನುಗುಣವಾಗಿಯೇ ಎಂಬುದು ಈಗಾಗಲೇ ಸಾಕಷ್ಟು ಚರ್ಚಿತವಾಗಿರುವ ವಿಷಯ.

ಒಂದು ಕಾವ್ಯದ ಶ್ರೇಷ್ಠತೆಯಿರುವುದು ಹಾಗೂ ಕವಿಯ ಪ್ರತಿಭೆಗೆ ನಿಕಷ ವಾಗುವುದು ಅವನು ನಿರ್ವಹಿಸುವ ಸಂಘರ್ಷಗಳ ಚಿತ್ರಣದಲ್ಲಿ. ಮಹಾಭಾರತದ

ಸಂಘರ್ಷಗಳು ದಟ್ಟವಾಗಿರುವುದು ಯುದ್ಧದ ಹಿಂದುಮುಂದಿನ ಸನ್ನಿವೇಶಗಳಲ್ಲಿ. ಹುಟ್ಟು, ನಿಷ್ಠೆ, ಮೌಲ್ಯ-ಇವುಗಳ ಸ್ವರೂಪನಿರ್ಧಾರವಾಗುವ ಬಗೆಯೇ ಈ ಸಂಘರ್ಷದ ಸ್ವರೂಪ. ಪಂಪಭಾರತದಲ್ಲಿ ಇಂತಹ ಸಂಘರ್ಷದ ಭಾಗಗಳು ಉಜ್ವಲವಾಗಿರುವ ಕಾರಣವೆಂದರೆ, ಅಲ್ಲಿ ಕವಿಯು ತೋರ್ಪಡಿಸುವ ಸ್ವಂತಿಕೆ ಮತ್ತು ದೇಸಿತನ. ಕನ್ನಡ ಜನಪದ ಪ್ರಜ್ಞೆಯು ಆ ಕಾಲದಲ್ಲಿ ಎದುರಿಸುತ್ತಿದ್ದ ತೊಳಲಾಟದ ಚಿತ್ರಣ ದಟ್ಟವಾಗಿ ಕಾಣುವುದು ಪಂಪಭಾರತದ ಒಂಬತ್ತನೇ ಆಶ್ವಾಸದಿಂದ ಮುಂದೆ, ಗಾತ್ರದ ದೃಷ್ಟಿಯಿಂದಲೂ ವಿರಾಟಪರ್ವದವರೆಗಿನ ಕತೆಯು ಮುಂದಿನ ಕತೆಗೆ ಸಮಾನವಾಗಿದೆ. ಮೊದಲು ಎಂಟು ಆಶ್ವಾಸಗಳು ೨೨೨ ಪುಟಗಳಲ್ಲಿ ಹರಿದರೆ, ಕೊನೆಯ ಐದು ಆಶ್ವಾಸಗಳೇ ೧೮೬ ಪುಟಗಳಷ್ಟು ದೀರ್ಘವಾಗಿವೆ. ಈ ಎರಡನೆಯ ಭಾಗದಲ್ಲಿಯೇ ಸಂಘರ್ಷಗಳು ಹೆಚ್ಚಿರುವುದು. ಪಂಪನು ಹಿತ ಮಿತ ಮೃದುವಚನನಾದರೂ, ಇದ್ದುದರಲ್ಲಿ ಅವನು ದೀರ್ಘವಾಗುವುದು ಇಂಥ ಸಂಘರ್ಷ ಚಿತ್ರಣದಲ್ಲಿ.

ಭೀಷ್ಮನಿಗೆ ವೀರಪಟ್ಟ ಕಟ್ಟುವ ಸನ್ನಿವೇಶ ಹತ್ತನೆಯ ಆಶ್ವಾಸದ ಪ್ರಾರಂಭದಲ್ಲಿದೆ. ಆಗಿನ ಸಂಘರ್ಷ ಭೀಷ್ಮ-ದ್ರೋಣರಂತಹ ಹಳೆಯ ಪೀಳಿಗೆ ಕರ್ಣನಂತಹ ಹೊಸ ಪೀಳಿಗೆಯ ನಡುವಣದ್ದು; ಅಂತೆಯೇ ಬದಲಾಗುತ್ತಿರುವ ಮೌಲ್ಯಗಳ ಸಂಬಂಧದ್ದು. ಕರ್ಣನು ಜಾತಿಯ ಬಗ್ಗೆ ನೀಡುವ ವ್ಯಾಖ್ಯಾನವಾಗಲೀ, ಕುಲವು ಆಕುಲವನ್ನು ಉಂಟುಮಾಡುವುದೆಂದು ಎಚ್ಚರಿಸುವುದಾಗಲೀ (೧೦. ೨೧) ಎಲ್ಲ ಕಾಲಕ್ಕೂ ಅನ್ವಯಿಸಬಹುದಾದರೂ, ಪಂಪನ ಕಾಲದ ಬದಲಾಗುತ್ತಿದ್ದ ಜಾತಿ ನೆಲೆಗಳಿಗೆ ನೇರವಾಗಿ ಸಂಬಂಧಿಸಿದಂತಿದೆ. ತನ್ನ ಮೂವತ್ತೊಂಬತ್ತನೆಯ ವರ್ಷದಲ್ಲಿ ಭಾರತವನ್ನು ಬರೆದ ಕವಿ ಇನ್ನೂ ಯೌವನದ ಆದರ್ಶ ಪ್ರೌಢನ ವಿವೇಕಗಳನ್ನು ಹೊಂದಿದ್ದ ಪ್ರಜ್ಞೆಯ ಸಂಕೇತವಾಗಿ ಕುಲದ ಟೊಳ್ಳುತನವನ್ನು ಕುರಿತು ಹೇಳುತ್ತಿರುವ ಸನ್ನವೇಶ ಇದಾಗಿದೆ. ಶಲ್ಯನು ಕರ್ಣನಿಗೆ ಸಾರಥಿಯಾಗಬೇಕೆಂದು ಕೇಳಿದಾಗ ದುರ್ಯೋಧನನಿಗೆ ರಾಜನ ಬಗ್ಗೆ ಹೇಳುವ ಮಾತುಗಳು (೧೨. ೯೨) ಆ ಕಾಲದ ಸಾಮ್ರಾಜ್ಯಶಾಹೀ ವಿರೋಧಿ ಒಳಗುದಿತವನ್ನು ಸೂಚಿಸುತ್ತದೆ.

ಭಾರತದ ಕತೆಯ ನಡುವೆಯೇ ಜಾನಪದ ಪದ್ಧತಿಗಳಿಗೆ ಅನುಗುಣವಾದ ಸನ್ನಿವೇಶಗಳನ್ನೂ ಪಂಪ ಬೆಸೆಯುತ್ತಾನೆ. ಎಂಟನೆಯ ಆಶ್ವಾಸದಲ್ಲಿ ಬರುವ ಯಕ್ಷ ಪ್ರಶ್ನೆಯ ಪ್ರಸಂಗದಲ್ಲಿ ಒಂದು ಸನ್ನಿವೇಶವಿದೆ. ದುರ್ಯೋಧನನ ಪುರೋಹಿತ ಕನಕಸ್ವಾಮಿಯು ಮಾಟಮಾಡಿ ಕೀರ್ತಿಗೆಯೆಂಬ ಕ್ಷುದ್ರದೇವತೆಯನ್ನು ಅವಾಹಿಸಿ ಪಾಂಡವರನ್ನು ಕೊಲ್ಲಲು ಪ್ರಯತ್ನಿಸುತ್ತಾನೆ; ಆದರೆ ಪ್ರಸಂಗವಶಾತ್ ಆ ದೇವತೆಯು ಕನಕಸ್ವಾಮಿಯನ್ನೇ ತಿನ್ನುತ್ತದೆ. 'ಕನಕನ ಬೇಳ್ವೆ ತಗುಳ್ದುದು ಕನಕನನ್ ಎಂಬೊಂದು ಮಾತು ಧರೆಗೆಸೆಯೆ' ಎಂದರೆ ಕನ್ನಡ ಜನಪದರಲ್ಲಿ ರೂಢಿಯಲ್ಲಿದ್ದ ಮಾಟ, ತಾನು ಬಯಸುವ ಕೇಡು ತನ್ನನ್ನೇ ಆಹುತಿಗೊಳ್ಳುವುದೆಂಬ ನಂಬಿಕೆ, ಗಾದೆಮಾತು ಎಲ್ಲ ಇಲ್ಲಿ ಸೇರಿದೆ. 'ತಾನಿಟ್ಟ ಬೇತಾಳ ತನ್ನ ತಿಂದಿತು' ಎಂಬ ಗಾದೆಯ ವಚನಗಳಲ್ಲಿ

ಅನುರಣಿಸಿದೆ. ಹೀಗಾಗಿ ಗಾದೆಯ ಹಿಂದಿನ ಜನಪದ ಕತೆಯನ್ನು ಪಂಪ ಅಳವಡಿಸಿ ಈ ಸನ್ನಿವೇಶಕ್ಕೆ ಹೊಸ ಆಯಾಮವನ್ನು ನೀಡುತ್ತಾನೆ.

ಒಟ್ಟಾರೆ, ಪಂಪನು ತನ್ನ ಭಾರತದಲ್ಲಿ ಭಾಷೆ, ಮೌಲ್ಯ ಪ್ರತಿಪಾದನೆ, ಜೀವನ ದೃಷ್ಟಿ, ಜೀವನವಿಧಾನ, ಸಂಘರ್ಷ ಚಿತ್ರಣ–ಈ ಎಲ್ಲಾ ರೀತಿಯಿಂದಲೂ ದೇಸಿಯನ್ನು ಕತೆಯಲ್ಲಿ ತುಂಬಿದ್ದಾನೆ. ಆದಿಪುರಾಣದಲ್ಲಿಯೂ ತನಗಿದ್ದ ಸ್ವಾತಂತ್ರ್ಯದ ಮಿತಿ ಯಲ್ಲಿಯೇ ಭರತ ಬಾಹುಬಲಿಯರ ಪ್ರಸಂಗ ದಂತಹ ಕತೆಯಲ್ಲಿ ತನ್ನ ಕಾಲದ ರಾಜಕೀಯವನ್ನು ಚಿತ್ರಿಸಿದ್ದಾನೆ. ರಾಜ್ಯಲಕ್ಷ್ಮಿಯ ಬಗ್ಗೆ ಅವನು ಹೇಳುವ ಅಭಿಪ್ರಾಯಗಳು ಸೈನ್ಯ–ರಾಜ, ರಾಜ–ರಾಜ, ರಾಜ ಕುಟುಂಬ ಈ ನೆಲೆಯಲ್ಲಿ ಅ ಕಾಲದ ಕನ್ನಡ ನಾಡನ್ನು ಪ್ರತಿಬಿಂಬಿಸುತ್ತವೆ. ಹೀಗೆ ಪಂಪ ಚಂಪೂವಿಗೆ ಮಾತು ಕರ್ನಾಟಕ ವಿಷಯ ಜಾತಿಗಳ ಬಳಕೆ, ಸನ್ನಿವೇಶರಚನೆ, ನಿರೂಪಣಾಶೈಲಿ, ಪ್ರಸಂಗ ಸೇರಿಸುವಿಕೆ, ಮೌಲ್ಯಪ್ರತಿಪಾದನೆ, ಸಂಘರ್ಷ ಚಿತ್ರಣ–ಈ ಎಲ್ಲದರ ಮೂಲಕ ದೇಸಿ ತನವನ್ನು ತುಂಬಿ ಚಂಪೂವನ್ನು ಕನ್ನಡದ್ದೇ ವಿಶಿಷ್ಟ ಪ್ರಕಾರವಾಗಿ ಮಾಡಿರುವುದಲ್ಲದೆ ಮುಂದಿನ ಕನ್ನಡ ಕಾವ್ಯ ಅನುಸರಿಸಬೇಕಾದ ಸ್ವಂತಿಕೆಯ ಜಾಡನ್ನು ತೋರಿಸಿದ್ದಾನೆ.

ಪಂಪನ ಅನಂತರ ಚಂಪೂ ಪ್ರಕಾರವು ಎರಡು ಟಿಸಿಲಾಯಿತು; ಕೆಲಕಾಲ ಈ ಎರಡೂ ಸಮಾನಂತರವಾಗಿ ಹರಿದವು. ಪಂಪನ ನೇರ ವಾರಸುದಾರರಾಗಿ ಪೊನ್ನ–ರನ್ನರು ಕಾವ್ಯ ರಚಿಸಿದರು, ಚಂಪೂ ಮಾರ್ಗದಲ್ಲಿಯೇ ಹರಿದರು. ಅವನಂತೆ ಲೌಕಿಕ–ಧಾರ್ಮಿಕ ಕಾವ್ಯ ಜೋಡಿ; ರಾಜಕೀಯ ಶ್ಲೇಷೆ–ಇವುಗಳ ಸ್ಪಷ್ಟ ಅನುಸರಣೆಯಿದ್ದರೂ, ಪಂಪನ ದೇಸಿ ಅವರಲ್ಲಿ ಇಳಿಮುಖವಾಗಿತ್ತು. ಇನ್ನೊಂದು ಎಸಳಿನಲ್ಲಿ, ಮೊದಲನೆಯ ನಾಗ ವರ್ಮನು ಬಾಣನ 'ಕಾದಂಬರಿ'ಯನ್ನು ಗದ್ಯದಿಂದ ಚಂಪೂ ರೂಪಕ್ಕೆ ತಿರುಗಿಸಿದನು. ದುರ್ಗಸಿಂಹನು ವಸುಭಾಗಭಟ್ಟನನ್ನು ಅನುಸರಿಸಿ 'ಪಂಚ ತಂತ್ರ'ವನ್ನು ರಚಿಸಿದ. ಇವರಿಬ್ಬರಲ್ಲಿ 'ದೇಸಿ' ಎಂಬುದನ್ನು ಪ್ರಯಾಸದಿಂದ ಹುಡುಕಬೇಕು. ಕಾದಂಬರಿಯು ಸಾಮಾನ್ಯರಿಗೆ ಸಂಬಂಧಿಸಿದ ಸನ್ನಿವೇಶಗಳನ್ನು ಹೊಂದದೇ ಇರುವುದರಿಂದಾಗಿ, ಕೇವಲ ಕಲ್ಪಕತೆಯನ್ನು ಅವಲಂಬಿಸಿರುವುದರಿಂದಾಗಿ ಅಲ್ಲಿ ರೂಪದ ಮಾರ್ಪಾಟನ್ನು ಕಾಣಬಹುದೇ ವಿನಾ ಪಂಪನು ಹಳೆಯ ಕತೆಗೆ ತನ್ನ ನಾಡುತನವನ್ನು ತುಂಬುವ ಕಾಯಕಲ್ಪವನ್ನು ಕಾಣಲರೆವು. 'ಪಂಚತಂತ್ರ'ವು ಅನ್ಯೋ ಕಾವ್ಯವಾದ್ದರಿಂದ ಜನರ ನಡವಳಿಕೆಯ ನೇರವಾದ ಚಿತ್ರಣಕ್ಕೆ ಅವಕಾಶವಿಲ್ಲ. ಅಲ್ಲದೆ ಈ ಎರಡೂ ಕಾವ್ಯಗಳು ಸಂಸ್ಕೃತ ಕಾವ್ಯಗಳ ನೇರ ಅನುವಾದಗಳು; ಈ ಕಾವ್ಯಗಳಿಗೆ ಜನರನ್ನು ಯಾವುದೇ ಉದ್ದೇಶಕ್ಕಾಗಿ ತಲುಪುವ ಹಂಬಲ ಇರಲಿಲ್ಲ. ಹಾಗಾಗಿ ತಮ್ಮ ಕಾಲದ ಜನರ ಅಂತಃಸತ್ವದ ಅನುರಣನ ಈ ಕಾವ್ಯಗಳಲ್ಲಿ ಮೊಳಗಲಿಲ್ಲ.

ಪೊನ್ನ–ರನ್ನರು ಪಂಪನಂತೆಯೇ ತಮ್ಮ ಪ್ರಭುಗಳನ್ನು ಕಾವ್ಯ ನಾಯಕ ರೊಂದಿಗೆ, ಸಮೀಕರಿಸಿದ್ದರಿಂದಾಗಿ ದೇಸಿತನಕ್ಕೆ ಅವಕಾಶವಿದ್ದಿತಾದರೂ, ಈ ಕವಿಗಳಿ ಪಂಪತನವಿಲ್ಲದ್ದರಿಂದಾಗಿ ಅದನ್ನು ಅವನಂತೆ ಮೈಗೂಡಿಸಿಕೊಳ್ಳಲಿಲ್ಲ. ಜೊತೆಗೆ ತಮ್ಮ ಪುರಾಣಗಳಲ್ಲಿ ಪೆಡಸುತನವನ್ನು ತಂದುಕೊಂಡರು. ನಾಗಚಂದ್ರನು ತನ್ನ ವೈಯಕ್ತಿ

ದೃಷ್ಟಿಕೋನದಿಂದಾಗಿಯೂ, ತಾನು ಆದರ್ಶವೆಂದು ತಿಳಿದ ಕಾರ್ಯವನ್ನು ಸಾಧಿಸುವುದಕ್ಕಾಗಿಯೂ ಪಂಪನ ಚಂಪೂ ದಾರಿಯಿಂದ ಕೊಂಚ ಭಿನ್ನವಾದ ಜಾಡನ್ನು ತುಳಿದ. ತನ್ನ ನಂಬುಗೆಯ ಮತವು ಜನರಿಂದ ದೂರವಾಗುತ್ತಿದೆಯೆಂಬ ತಿಳಿವಳಿಕೆಯಿಂದಾಗಿಯೋ ಏನೋ, ಪಂಪನಂತೆ ಕಾವ್ಯಯುಗಳವನ್ನು ರಚಿಸಿದರೂ, ಅವುಗಳು ಒಂದೇ ಉದ್ದೇಶವನ್ನು ಪಡೆದವು; ಎರಡೂ ಜೈನಪರವಾದವು. ಭಾಷೆ ತಿಳಿಯಾಯಿತು. ಅವನು ನವಿರು ಚಿತ್ರಣಗಳನ್ನು ಮಾಡಬಲ್ಲ, ಆದರೆ ಅವನು ಜನರ ಸತ್ವವನ್ನು ತನ್ನ ಕಾವ್ಯಗಳಲ್ಲಿ ತಿಳಿಸುವ ಮಣಿಹವನ್ನು ಪಡೆದಿರದ್ದರಿಂದಾಗಿ ಜನರಿಗೆ ತಾನು ಬೇರೆ ಯಾವುದರ ವಿಷಯವನ್ನೋ ಹೇಳಬೇಕೆಂದಿದ್ದುದರಿಂದಾಗಿ, ಅಲ್ಲದೆ ಅವನ ಕಾವ್ಯಭಿತ್ತಿಯು ಜನರನ್ನು ಪ್ರತಿಬಿಂಬಿಸದೆ ಅವರೆಡೆಗೆ ಉದ್ದೇಶಿಸಿದ್ದುದರಿಂದ ಸಾಂಪ್ರದಾಯಿಕತೆಯನ್ನೇ ಆಶ್ರಯಿಸಿತು. ಕಾವ್ಯವಾಗಿ ಅವನ ರಚನೆಗಳು ಸೌಕುಮಾರ್ಯದಿಂದ ಆಕರ್ಷಕವಾದರೂ ಜನಪರತೆಯಿಂದ ದೂರವಾಗಿ ಉಪದೇಶಾತ್ಮಕವಾಯಿತು. ಕರ್ಣಪಾರ್ಯನಂತಹ ಕವಿಗಳದೂ ಇದೇ ರೀತಿ. ಅವನ ಶೈಲಿ ದೇಸಿಯನ್ನು ಕೊಂಚಮಟ್ಟಿಗೆ ಒಳಗೊಂಡಿತಾದರೂ, ಅವನು ಹರಿವಂಶವನ್ನು ನೇಮಿನಾಥ ಪುರಾಣವಾಗಿ ಜೈನ ಸಂಪ್ರದಾಯದ ಪರಿಕಲ್ಪನೆಗೊಳಪಡಿಸಿ ರಚಿಸಿದ. ಹೀಗಾಗಿ "ಪುರಾಣ ರಚನೆಯಲ್ಲಿಯೇ ಕವಿಯು ಸ್ವಾತಂತ್ರ್ಯಕ್ಕೆ ಹೆಚ್ಚು ಅವಕಾಶವಿಲ್ಲ; ಅದರಲ್ಲಿಯೂ ಸ್ವಾತಂತ್ರ್ಯವನ್ನು ವಹಿಸಲೂ ಇಷ್ಟಪಡದ ಕರ್ಣಪಾರ್ಯನ ಈ ಕಾವ್ಯದಲ್ಲಿ ಕಾವ್ಯಧರ್ಮವನ್ನು ನಾವು ಹೆಚ್ಚಾಗಿ ನಿರೀಕ್ಷಿಸಲೂ ಸಾಧ್ಯವಿಲ್ಲ."

ಮುಂದೆ ಬಂದ ಅಗ್ಗಳನ 'ಚಂದ್ರಪ್ರಭಪುರಾಣ'ದಲ್ಲಿ ನೇಮಿಚಂದ್ರನ 'ಲೀಲಾವತಿ', 'ಅರ್ಧನೇಮಿ'ಗಳಲ್ಲಿ, ಅಚಣ್ಣನ 'ವರ್ಧಮಾನಪುರಾಣ'ದಲ್ಲಿಯೂ ನಾವು ಕಾಣುವುದು ಪ್ರೌಢಿಮೆಯಿಂದಾಗಿ ಜನದೂರವಾದ ಕಾವ್ಯರಚನೆಯನ್ನು. ತಮ್ಮ ವಿದ್ವತ್ತಿನ ಪ್ರದರ್ಶನ, ಅದ್ಭುತರಮ್ಯ ಕಥನದಿಂದ ರೋಚಕತೆಯನ್ನು ಸಾಧಿಸುವ ಇಂತಹ ಕವಿಗಳಿಂದ ಜನಮುಖಿಯಾದ ಬರವಣಿಗೆಯನ್ನು ನಿರೀಕ್ಷಿಸಲಾದೀತೇ? ಅವರು ಚಂಪೂ ಸಾಹಿತ್ಯದ ನಡುವಣ ಕೆಲವು ಕೊಂಡಿಗಳೆಂದು ಪರಿಗಣಿಸಬೇಕಾದ ಕವಿಗಳಷ್ಟೇ ಆಗಿ ಉಳಿಯುತ್ತಾರೆ.

ಈ ದೃಷ್ಟಿಯಿಂದ ನಯಸೇನನಿಗೆ ಒಂದು ವಿಶಿಷ್ಟ ಸ್ಥಾನವನ್ನು ಚಂಪೂ ಕವಿಗಳ ಸಾಲಿನಲ್ಲಿ ನೀಡಬೇಕು. ತನ್ನ ಮತವನ್ನು ಪ್ರಚಾರ ಮಾಡುವ ಧ್ಯೇಯ ಹೊಂದಿದ ನಯಸೇನನ ಮಿತಿಗಳೇನೇ ಇರಲಿ, ಅವನ ಉದ್ದೇಶ ಜನಗಳಿಗೆ ತಾನು ಹೇಳುವುದನ್ನು ತಲುಪಿಸಬೇಕೆಂಬುದೇ ಆಗಿದೆ. ಅದಕ್ಕಾಗಿ ಅವನು ಸಣ್ಣ ಕತೆಗಳನ್ನು ಹೆಣೆಯುವ ಮೂಲಕ ತನ್ನ 'ಧರ್ಮಾಮೃತ'ವನ್ನು ರಚಿಸುತ್ತಾನೆ. ತನ್ನ ಹಿಂದಿನ ಕವಿಗಳ ದೀರ್ಘ ಕಥಾನಕವನ್ನು ಅವನು ಕೈಬಿಟ್ಟಿದ್ದಾನೆ, ಮಿಕ್ಕ ಅನೇಕ ಕವಿಗಳಿಗಿಂತ ಹೆಚ್ಚಿನ ಗದ್ಯವನ್ನು ಬಳಸುತ್ತಾನೆ, ಭಾಷೆ ಸರಳವಾಗುತ್ತದೆ, ವರ್ಣನೆಗಳಿಗಿಂತ ಪರಿಣಾಮಕ್ಕೆ ಅವನು ಹೆಚ್ಚು ಗಮನ ಹರಿಸುತ್ತಾನೆ. ಅವನ ಅದರ್ಶದ ಕಾವ್ಯದಲ್ಲಿ 'ನಾಣ್ನುಡಿ ದೇಸಿವೆತ್ತ ಪೊಸನುಡಿ' ಸೇರಿರುತ್ತದೆ. ದೇಸಿಯ ಮೂಲಕವಾಗಿಯೇ

ಜನರನ್ನು ತಲುಪುವುದು ಸಾಧ್ಯವೆಂದು ಅವನ ಭಾವನೆ. ಮೊದಲ ಬಾರಿಗೆ ಸಂಸ್ಕೃತ ಪ್ರಾಚುರ್ಯದ ಬಗ್ಗೆ ನಯಸೇನನು ನೇರವಾಗಿ ಪ್ರತಿಭಟನೆ ಸಲ್ಲಿಸುತ್ತಾನೆ; 'ಕನ್ನಡವನ್ನು ಕೂಡಲಾರದೆ' 'ಮಿಸುಕದ ಸಕ್ಕದವನಿ'ಕ್ಕುವ ಕವಿಗಳ ಬಗ್ಗೆ ತಿರಸ್ಕಾರದಿಂದ ಮಾತನಾಡುತ್ತಾನೆ; ಕನ್ನಡವನ್ನು ತುಪ್ಪಕ್ಕೂ ಸಂಸ್ಕೃತವನ್ನು ಎಣ್ಣೆಗೂ ಹೋಲಿಸಿ ತನ್ನ ಆಕ್ರೋಶವನ್ನು ವ್ಯಕ್ತಪಡಿಸುತ್ತಾನೆ. ಕವಿಯೊಬ್ಬ ನೇರವಾಗಿ ತನ್ನ ಕಾವ್ಯದಲ್ಲಿ ಹೀಗೆ ಭಾಷಾಧೋರಣೆಯನ್ನು ಪ್ರಕಟಪಡಿಸಬೇಕಾದರೆ ಅವನ ಕಾಲದಲ್ಲಿ ಜನಮನೋಭಾವದ ಮುಖ್ಯವಾಹಿನಿ ಇಂಥದೇ ಆಗಿದ್ದಿರಬೇಕು. ಅವನಾದ ಮೇಲೆ ಅನತಿ ಕಾಲದಲ್ಲಿ ಪ್ರಾರಂಭವಾದ ವಚನ ಚಳವಳಿಯು ತಳೆದಿದ್ದ ಜನಪರ ಧೋರಣೆಯ ಬೀಜರೂಪವು ನಯಸೇನನ ಸಂಸ್ಕೃತ ಪ್ರಾಚುರ್ಯವಿರುದ್ಧದ ಪ್ರತಿಭಟನೆಯಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ಜನರನ್ನು ಭಾಷಾಪ್ರೌಢಿಮೆಯಿಂದ ದಂಗುಬಡಿಸಿ ವಂಚಿಸುವುದನ್ನು ಅಲ್ಲಗಳೆಯುವ ಮೂಲಕ ನಯಸೇನ ಮುಂದೆ ಕನ್ನಡ ಕಾವ್ಯವು ತಳೆಯ ಬೇಕಾದ ಭಾಷಾ ನೀತಿಯ ಬಗ್ಗೆ ಎಚ್ಚರಿಕೆ ನೀಡುತ್ತಾನೆ. ತನ್ನ ಬರವಣಿಗೆಯಲ್ಲಿಯೇ, ಶಿಷ್ಟಸಾಹಿತ್ಯದ ಬಿಗುಮಾನಗಳ ಇರುಕಿನ ಕಾರಣದಿಂದ ಅದು ಮಿತಿಗೊಂಡಿತಾದರೂ, ಜನಕ್ಕೆ ಹತ್ತಿರವಾಗಲು ಬಯಸುತ್ತಾನೆ. ಹಾಗಾಗಿ ಅವನ ರಚನೆ ಕನಿಷ್ಠ ಪಕ್ಷ ಭಾಷೆಯ ನೆಲೆಯಲ್ಲಿ ಪೆಡಸಾಗಲಿಲ್ಲ. ಜನರ ಮಿಡಿತಕ್ಕೆ ಅನುಗುಣವಾದ ಭಾಷಾ ಶೈಲಿಯನ್ನು ಅವನು ರೂಢಿಸಿಕೊಳ್ಳುತ್ತಾನೆ. ಆದರೆ ಅವನದು ಮಿತ ಪ್ರತಿಭೆ ಉದ್ದೇಶವೂ ಪ್ರಜ್ಞಾಪೂರ್ವಕವಾದ ನೆಲೆಯದು, ಯಾದೃಚ್ಛಿಕವಾದದ್ದು–ಅವನ ಕಾವ್ಯ ಚೌಕಟ್ಟು ಸಂಘರ್ಷಕ್ಕೆ ಅವಕಾಶವಿಲ್ಲದ್ದು–ಹೀಗಾಗಿ 'ಧರ್ಮಾಮೃತ'ವು ಅನೇಕ ಮಿತಿಗಳಿಗೊಳಗಾಗಿ ಅದರ ಗುಣವೂ ಮಿತಿಗೊಂಡಿದೆ. ಆದರೆ ಅವನು ತನ್ನ ಬರಹವನ್ನು ಜನತೆಯ ಹತ್ತಿರ ತರಲು ಪ್ರಯತ್ನಿಸಿದ್ದು, ಕನ್ನಡದ ಪರವಾಗಿ ಎತ್ತಿದ ಧ್ವನಿಯಲ್ಲಿ ಮಾತಾನಾಡಿದ್ದು ಜನಪರರಾದವರಿಗೆ ಆತ್ಮವಿಶ್ವಾಸವನ್ನುಂಟುಮಾಡಲು ಸಹಾಯಕವಾಗಿರಬೇಕು ಎಂದು ಹೇಳಬಹುದು.

ಜನ್ನನೂ ನಾಗಚಂದ್ರನಂತೆಯೇ ತನ್ನೆರಡೂ ಕಾವ್ಯಗಳಲ್ಲಿ ಜೈನಮತ ವಿಶಿಷ್ಟವಾದ ವಸ್ತುಗಳನ್ನೇ ನಿರೂಪಿಸುತ್ತಾನೆ. ಆದರೆ ಅವನದು ಗಣನೀಯ ಪ್ರಮಾಣದ ಪ್ರತಿಭೆಯಾದುದರಿಂದ 'ಅನಂತನಾಥಪುರಾಣ'ದ ವಸುಷೇಣ–ಸುನಂದೆಯರ ಪ್ರಸಂಗದಲ್ಲಿ ವರ್ಗ–ವರ್ಣ–ಮತಾತೀತವಾದ ವಸ್ತುವಿರುವುದರಿಂದ ಅದು ಎಲ್ಲರನ್ನೂ ಆಕರ್ಷಿಸುತ್ತದೆ. ಇನ್ನು 'ಯಶೋಧರ ಚರಿತೆ' ಜನ್ನನದು ಎಂತಹ ರೂಪಾಂತರ ಪ್ರತಿಭೆಯೇ ಆಗಿರಲಿ, ಅವನಿಗೆ ಮೂಲನಾದ ವಾದಿರಾಜನಿಗೇ ಈ ಕಾವ್ಯದ ಬಹುಪಾಲು ಯಶಸ್ಸು ದೊರೆಯಬೇಕಾದದ್ದು ನ್ಯಾಯ. ಯಶೋಧರನ ಕತೆಯನ್ನು ಸೋಮದೇವನ ಮಾರ್ಗವನ್ನನುಸರಿಸಿ ನಿರೂಪಿಸದೆ ವಾದಿರಾಜನು ಹೊಸಹಾದಿ ಹಿಡಿದನು; ಅದನ್ನು ಜನ್ನನು ಅನುಸರಿಸಿದ. 'ಯಶೋಧರ ಚರಿತೆ'ಯು ಕಂದಪದ್ಯಗಳಿಂದಲೇ (ಒಂದೆರಡು ವೃತ್ತಗಳನ್ನು ಬಿಟ್ಟರೆ) ಕೂಡಿದ ಕಾವ್ಯ; ಗದ್ಯವೇ ಇಲ್ಲ. ಈ ಕಾವ್ಯವನ್ನು ಚಂಪೂ ಎನ್ನಲಾದೀತೇ? ವಾದಿರಾಜನೂ ತನ್ನ ಇಡಿ

ಕಾವ್ಯವನ್ನು ಶ್ಲೋಕ, ಸ್ವಾಗತ ವಂಶಸ್ಥಗಳಿಂದ ರಚಿಸಿದ, ಗದ್ಯವನ್ನು ಬಳಸಲಿಲ್ಲ. ಚಿಕ್ಕ ಚಿಕ್ಕ ಛಂದೋರೂಪಗಳಾದ ಇವೆಲ್ಲಕ್ಕೂ ಪರ್ಯಾಯವಾಗಿ ಜನ್ನನು ಕಂದವನ್ನು ಬಳಸಿದ, ಹಾಗಾಗಿ ಈ ಕಾವ್ಯವು ಚಂಪೂ ಪರಂಪರೆಗೆ ಹೊಸ ತಿರುವನ್ನೇನೂ ನೀಡಿದಂತಾಗಲಿಲ್ಲ. ವಸುಷೇಣ ಪ್ರಸಂಗದಂತೆಯೇ ಧರ್ಮವಿರುದ್ಧ ಪ್ರಣಯವು ಜನ್ನನ ಮನಸ್ಸನ್ನು ಕೆಣಕಿದ್ದರಿಂದಾಗಿಯೂ, ಅಹಿಂಸೆಯ ವೈಶಿಷ್ಟ್ಯವನ್ನು ಪ್ರತಿಪಾದಿಸಲು ಸಹಾಯಕವಾಗಿದ್ದುದರಿಂದಲೂ ಅವನು ಈ ಕಾವ್ಯವನ್ನು ಅಳವಡಿಸಿಕೊಂಡಿರಬೇಕು. ವಸ್ತುವು ಸತ್ವತಃ ಜನರಿಗೆ ಹತ್ತಿರವಾದದ್ದರಿಂದಲೂ, ತನ್ನ ನಿರೂಪಣಾ ಕೌಶಲದಿಂದಲೂ ಜನಪ್ರಿಯನಾದ ಜನ್ನ.

ಆಂಡಯ್ಯನದೊಂದು ವೀರಮಾರ್ಗ. ಸಂಸ್ಕೃತದ ಶಬ್ದಗಳನ್ನು ಬಳಸದೆ ಕಾವ್ಯ ರಚಿಸುವ ಹಟ. ಅವನಲ್ಲಿ ವಿಚಿತ್ರ ದ್ವಂದ್ವಗಳನ್ನು ಕಾಣುತ್ತವೆ. ಅವನು ಬದುಕಿದ್ದು ಹದಿಮೂರನೆಯ ಶತಮಾನದ ಪ್ರಾರಂಭದಲ್ಲಿ; ಸರಿಸುಮಾರು ಹರಿಹರನ ಸಮಕಾಲೀನ. ಅವನ ಬೆನ್ನ ಹಿಂದೆ ಪಂಪಾದಿಗಳ ಚಂಪೂ ಪರಂಪರೆಯಿತ್ತು; ಜೊತೆಗೆ ನೆನಪಲ್ಲಿ ಆಗಿನ್ನೂ ಹಸುರಾಗಿದ್ದಿರಬಹುದಾದ ವಚನ ಚಳವಳಿಯ ಗುಡುಗು-ಸಿಡಿಲುಗಳ ಅನುರಣನವಿತ್ತು. ಆದರೆ ಆಂಡಯ್ಯ (ತನ್ನ ಮತದ ಕಾರಣದಿಂದ ಇರಬಹುದೇ?) ವೀರ ಕನ್ನಡ ವ್ರತವನ್ನು ತೊಟ್ಟರೂ ವಚನಕಾರರ ಸತ್ವಯುತವಾದ ಧೋರಣೆಯನ್ನು ಬಿಟ್ಟು ಘೋಷಣೆಯಲ್ಲಿ ತೊಡಗಿದ್ದರಿಂದಾಗಿ ತನ್ನ ಭಾಷೆಯನ್ನು ಕೃತಕಗೊಳಿಸಿದ. ಅವನ ನಾಡು-ನುಡಿಗಳ ಪ್ರೇಮ ಶ್ಲಾಘ್ಯವಾದರೂ ಬೀದಿ ಚಳವಳಿಯ ಮಾದರಿಯನ್ನು ಅವನು ಅನುಸರಿಸಿದ್ದರಿಂದಾಗಿ, ಹೆಚ್ಚನ್ನು ಸಾಧಿಸಲೂ ಇಲ್ಲ; ಅವನನ್ನು ಬೇರಾರು ಅನುಸರಿಸಲು ಸಾಧ್ಯವಾಗದೆ ಒಂಟಿಯಾಗಿಯೂ ಉಳಿದ. ಅಲ್ಲದೆ ಮಡಿವಂತಿಕೆಯ ಕಾರಣದಿಂದಾಗಿ ಸಂಸ್ಕೃತದಿಂದ ಕೂಡಿದ್ದರೂ ಸಹಜವಾದ ಕನ್ನಡವು ಮಾಡುತ್ತಿದ್ದ ಸಂವಹನವನ್ನು ಅವನ ಭಾಷೆಯು ಮಾಡದೆ, ಅನೇಕ ವೇಳೆ ಗೊಂದಲವನ್ನೇ ಉಂಟುಮಾಡುವಂತಾಯಿತು. ಆದರೆ, "ಅವನ ಕಟ್ಟಾ ಕನ್ನಡದ ಅಭಿಮಾನವು ಆ ಕಾಲದ ಅತಿರೇಕವಾದ ಸಂಸ್ಕೃತ ವ್ಯಾಮೋಹಕ್ಕೆ ಪ್ರತಿಭಟನೆಯಾಗಿ ಬಂದು ವಾಸ್ತವತೆಯೆಡೆಗೆ ಜನರ ಗಮನವನ್ನು ಸೆಳೆಯಲು ಸಹಾಯ ಮಾಡಿರಬಹುದು; ಜೊತೆಗೆ ಮುಂದಿನ ಕವಿಗಳ ಭಾಷಾಧೋರಣೆಯ ಮೇಲೆ ಪ್ರಭಾವವನ್ನೂ ಬೀರಿರಬಹುದು".

ಹರಿಹರನು ತನ್ನ 'ಗಿರಿಜಾ ಕಲ್ಯಾಣ'ದಲ್ಲಿ ಚಂಪೂ ಕಾವ್ಯ ಪ್ರಕಾರಕ್ಕೆ ಅಗತ್ಯವಾಗಿದ್ದ ಹೊಸ ತಿರುವನ್ನೇನೋ ನೀಡಿದ; ಆದರೆ ಅದನ್ನು ಮುಂದುವರಿಸಲು ಅವನ ಪ್ರತಿಭೆ ತಿರಸ್ಕರಿಸಿತು. ಸುಮಾರು ಎಂಬತ್ತು ಭಾಗದಷ್ಟು ಕಂದಪದ್ಯಗಳಿಂದ ಕೂಡಿದ ಈ ಕಾವ್ಯವು ವಿಶಿಷ್ಟವಾಗಿರುವುದು ಅದರ ಪ್ರಕಾರಕ್ಕಿಂತ ಮಿಗಿಲಾಗಿ ಅದರ ವಸ್ತುವಿನ್ಯಾಸದಲ್ಲಿ. ಸರಳ ಭಕ್ತಿಗೆ, ಶರಣಾಗತಿತತ್ವಕ್ಕೆ ಬೆಲೆಯೀಯುವ ಕವಿಯು ಆ ಭಾವಕ್ಕೆ ತಕ್ಕಂತೆ ಭಾಷಾಶೈಲಿಗಳನ್ನು ನೇರವಾಗಿಯೂ ಸರಳವಾಗಿಯೂ ಮಾಡಿಕೊಳ್ಳುವಲ್ಲಿ ಸಫಲನಾದ ನಿಜ, ಆದರೆ ಅದರಲ್ಲಿಯೂ ಕೊರತೆಯನ್ನನುಭವಿಸಿದ.

ಬಸವಾದಿಗಳ ಧೋರಣೆಯನ್ನು ಅದರ ಸಮಷ್ಟಿರೂಪದಲ್ಲಿ ಅರಾಧಿಸುವ ಈ ಕವಿಯು ಪಂಜರದಲ್ಲಿಟ್ಟ ಸಿಂಹದ ಸ್ವಾತಂತ್ರ್ಯವನ್ನು ತಿರಸ್ಕರಿಸಿದ. ಕಾವ್ಯರಚನೆಯಲ್ಲಿ ಅದುವರೆಗೂ ಇದ್ದ ಮಾರ್ಗವೆಂದರೆ ಚಂಪೂವೇ. ವಚನಗಳು ಕಾವ್ಯವೆಂಬಂತೆ ರಚಿತ ವಾದವಲ್ಲ. ಹಾಗಾಗಿ ಹರಿಹರನು ಕಾವ್ಯ ರಚನೆಗೆ ಪ್ರಾರಂಭಿಸಿದಾಗ ಸಿಕ್ಕಿದ್ದು ಚಂಪೂ. ಎಳೆತನದಲ್ಲಿಯೇ ಅವನಲ್ಲಿ ಆಳವಾಗಿದ್ದ ಹೊಸ ದೃಷ್ಟಿಯಿಂದಾಗಿ ಹಳೆಯ ಪ್ರಕಾರವನ್ನು ತನ್ನ ಎತ್ತರಕ್ಕೆ ಬಗ್ಗಿಸಿಕೊಂಡ, ಆದರೆ ಕೊಂಬೆಯನ್ನು ಬಗ್ಗಿಸಿಕೊಳ್ಳ ಬಹುದೇ ಹೊರತು, ಮರವನ್ನಲ್ಲ ಎಂಬ ಅರಿವು ಅವನಿಗಾಗಿ ಬಹುಬೇಗ ಅದನ್ನು ಬಿಟ್ಟು, ರಗಳೆಗಳ ಕಡೆಗೆ ತಿರುಗಿದ. ದೀರ್ಘ ಕಥಾನಕ, ಘೋರ ವರ್ಣನೆಗಳ ಕಾಡುಮೃಗಗಳಿಂದ ಕೂಡಿದ ಚಂಪೂ ಅರಣ್ಯ ಅವನ ಪ್ರತಿಭಾವಿಶಿಷ್ಟತೆಗೆ ಬೇಡ; ಅವನಿಗೆ ಅನುಗುಣವಾದದ್ದು ನೇರ–ಸರಳ ನಿರೂಪಣೆಯ ಭಕ್ತಿ ನಿರ್ಭರತೆಯೆಂಬ ಜಿಂಕೆಗಳಂತಹ ಮೃದು ಪ್ರಾಣಿಗಳು, ಕುಕಿಲುವ ವಿವಿಧ ಪಕ್ಷಿಗಳು. ಚಂಪೂ ವನ್ನಾವರಿಸಿಕೊಂಡು ಸಂಪ್ರದಾಯಕ್ಕೂ ಕೊಂಚ ಜೋತುಬೀಳಬೇಕಾಗಿ ಬಂದ ಹರಿಹರನು, ಅದನ್ನು ಬಿಟ್ಟದ್ದು ಅವನ ಮನೋಭಾವಕ್ಕೆ ತಕ್ಕುದಾಗಿತ್ತು, ಅನಿವಾರ್ಯ ವಾಗಿತ್ತು.

ಮುಂದೆ ಚಂಪೂ ಷಡಕ್ಷರದೇವ, ತಿರುಮಲಾರ್ಯ, ಚಿಕ್ಕುಪಾಧ್ಯಾಯ ರಂತಹವರ ಕೈಯಲ್ಲಿ ಸಿಕ್ಕಿತು. ಷಡಕ್ಷರದೇವನು ಹರಿಹರನಾದ ಮೇಲೆ ನಾನ್ನೂರು ವರ್ಷಗಳಿಗೂ ಹೆಚ್ಚು ಈಚೆಗೆ ಬಂದ ಕವಿಯಾದರೂ ಅವನ ಕಾವ್ಯಗಳು ಹರಿಹರನ ರಚನೆಗಿಂತ ಪೆಡಸಾಗಿವೆ ಎಂಬುದೇ ಅವನ ಕಾವ್ಯ ಸ್ವರೂಪವನ್ನು ವಿವರಿಸುತ್ತದೆ. "ರಾಜಶೇಖರ ವಿಳಾಸ"ವಂತೂ ಪ್ರಕಾರ ಪಳೆಯುಳಿಕೆಯಂತೆ ಇರುವ ಕಾವ್ಯ. ಯುಗಧರ್ಮಕ್ಕೂ ಕಾವ್ಯರಚನೆಗೂ ಸಂಬಂಧವಿಲ್ಲದೆ, ಜನರನ್ನು ಕಡೆಗಣಿಸಿ ಬರೆದರೆ ಇಂತಹ ಕಾವ್ಯಗಳೇ ಬರುವುದು. ಈ ಕಾವ್ಯ ಈಚಿನವರೆಗೆ ವ್ಯಕ್ತಿಯೊಬ್ಬನ ಭಾಷಾವೈದುಷ್ಯವನ್ನು ಪರೀಕ್ಷಿಸಲು ಒಂದು ಸಾಧವವಾಗಿತ್ತು. ಈ ಸ್ಥಿತಿಯು ದಿನಚರಿಯ ಜೀವಂತಿಕೆಯನ್ನು ಮೆರೆಯದೆ, ಪರೀಕ್ಷಾಕಾಲದ ಬಿಗುವಿನಿಂದ ಕೂಡಿದಂತಹ ಕಾವ್ಯ ರೀತಿಗೆ ಪ್ರತಿಮೆಯಾಗಿದೆ. ವಸ್ತುವಿಗೂ ಶೈಲಿಗೂ ಅಜಗಜಾಂತರವೆನಿಸುವ ರಚನೆ ಅದರದ್ದು. ಹೋಗಲಿ 'ಬಸವರಾಜ ವಿಜಯ?'ದ ಕಾವ್ಯಾರಂಭದಲ್ಲಿ ಪಾಲ್ಕುರಿಕೆ ಸೋಮನಾಥ, ಭೀಮಕವಿಗಳನ್ನು ಭಕ್ತಿಯಿಂದ ನೆನೆದು, ಅವರ ಪರಂಪರೆಯಲ್ಲಿ ತಾನು ಕಾವ್ಯ ರಚನೆ ಮಾಡುವುದಾಗಿ ಹೇಳಿಕೊಂಡರೂ, ಅವನ ಕಾವ್ಯದೃಷ್ಟಿಯು ಅವರದಕ್ಕೆ ವಿರುದ್ಧವಾದದ್ದು. ವರ್ಣಕಕ್ಕೆ ಹಾಗೂ ಜನಪರತೆಗೆ ಅವರು ಮಾನ್ಯತೆಯಿತ್ತರೆ ಷಡಕ್ಷರದೇವ ಪಾಂಡಿತ್ಯಕ್ಕೇ ಮಾನ್ಯತೆ ನೀಡುವವನು. ತನ್ನ ಕಾವ್ಯದ ವಸ್ತುವಾದ ಬಸವಣ್ಣನ ವ್ಯಕ್ತಿತ್ವದ ಸರಳತೆಯಾಗಲೀ, ಅವನ ವಚನಗಳ ಆರ್ದ್ರತೆಯಾಗಲೀ ಈ ಕಾವ್ಯದಲ್ಲಿ ಕಾಣದು. ಬಸವಣ್ಣನ ವ್ಯಕ್ತಿತ್ವ ಆದರ್ಶಗಳು ಐನೂರು ವರ್ಷಗಳಲ್ಲಿ ಜನರಲ್ಲಿ ನೆಲೆನಿಂತ ರೀತಿಯನ್ನೇ ಇದು ಧ್ವನಿಸುತ್ತದೆ. 'ಇವ ನಮ್ಮವ, ಇವ ನಮ್ಮವ'ನೆಂದೆನೆಸಿಕೊಂಡಿದ್ದ ಹನ್ನೆರಡನೇ ಶತಮಾನದ ಬಸವಣ್ಣ ಇಲ್ಲಿ ಪುರಾಣಪುರುಷನಾಗಿದ್ದಾನೆ; 'ಇವನಾರವ' ಎನ್ನಿಸಿಬಿಟ್ಟಿದ್ದಾನೆ. ಅವನ ಕೈಯಲ್ಲಿ

ಕನ್ನಡವು ಶಿವ-ಜೀವರನ್ನು ಬೆಸೆದಿದ್ದುದು, ಷಡಕ್ಷರನ ಕೈಯಲ್ಲಿ ಬಿದಿರುಮಳೆಯನ್ನು ಸೇರಿಬಿಟ್ಟಿದೆ. ಭೀಮಕವಿಯದಕ್ಕಿಂತ ಇವನ ಭಾಷೆ-ಶೈಲಿಗಳು ಕಠಿಣವಾಗಿರುವುದರಿಂದ ಬಸವಣ್ಣನನ್ನು ಕಾಣಲು ಹೋಗುವವರು ಸಹಜವಾಗಿಯೇ ಷಡಕ್ಷರನನ್ನು ಬಿಟ್ಟು ಭೀಮಕವಿಯ ಬಳಿಗೇ ಹೋಗಬೇಕು.

ತಿರುಮಲಾರ್ಯ, ಚಿಕುಪಾಧ್ಯಾಯರೂ ಇದಕ್ಕಿಂತ ಜನದೂರರಾದ್ದರಿಂದ ಸುಲಿದ ಬಾಳೆಯ ಹಣ್ಣಿನಂತಹ ಕನ್ನಡವನ್ನು ಮತ್ತೆ ಕಪ್ಪೆಯ ಚಿಪ್ಪಿನಲ್ಲಿಟ್ಟಂತೆ ಇವರು ಮಾಡಿದ್ದಾರೆ. ಪಂಪ ಚಂಪೂವನ್ನೂ ತನ್ನ ಕಾವ್ಯಾಭಿವ್ಯಕ್ತಿಗೆ ಆರಿಸಿಕೊಂಡು, ಅದರಲ್ಲಿ ದೇಸಿಯ ಹೂರಣವನ್ನು ತುಂಬಿದ ಮನೋ ಭಾವಕ್ಕೂ ಇವರ ಮನೋಭಾವಕ್ಕೂ ಇರುವ ವ್ಯತ್ಯಾಸ ಎರಡು ಧ್ರುವಗಳ ನಡುವಣದ್ದು. ಚಂಪೂ ಹರಿಹರನ ನಂತರ ಈ ಗತಿ ಕಂಡರೂ, ನಮ್ಮ ಪುಣ್ಯವಶಾತ್ ಕನ್ನಡ ಕಾವ್ಯವು ಕಾಲ ಕಾಲಕ್ಕೆ ಜನರ ನಾಡಿಮಿಡಿತಕ್ಕೆ ಅನುಗುಣವಾಗಿ ಸ್ಪಂದಿಸುತ್ತ, ವಸ್ತು-ಧೋರಣೆ-ಶೈಲಿ-ಭಾಷೆಗಳ ನೆಲೆಯಲ್ಲಿ ಮಾರ್ಪಾಡುತ್ತ ಜನರಿಗಾಗಿ ಸೃಷ್ಟಿಗೊಂಡಿತು. ಅದು ಬೇರೆಯ ಕತೆ; ಸುಂದರವಾದ ಕತೆ.

ಸಂಸ್ಕೃತದ ದಟ್ಟ ಪ್ರಭಾವದ ನಡುವೆ ಕನ್ನಡದ ಬರಹ ಕಲ್ಲುಗಳ ಮೇಲೆ ಮೂಡಿ, ಕ್ವಚಿತ್ತಾಗಿದ್ದುದು ಹೇರಳವಾಗುತ್ತ, ಓಲೆಗರಿಗಳ ಮೇಲೆ ಮೆರೆದ ಬಗೆಯು ಒಟ್ಟಾರೆ ಕನ್ನಡ ಜನಪದವು ತನ್ನತನವನ್ನೇ ಅಭಿವ್ಯಕ್ತಿಗೊಳಿಸಿಕೊಂಡ ಬಗೆ. ಪಂಪನ ಹೊತ್ತಿಗೆ ಕನ್ನಡತನವನ್ನು ಮೆರೆದ ರೀತಿ ಎಂದರೆ ಅವನ ಕಾವ್ಯಗಳಲ್ಲಿ ದೇಸಿಯು ಕಾಣಿಸಿಕೊಂಡ ರೀತಿಯೇ ಆಗಿದೆ. ಕಚ್ಚಾವಸ್ತು ಬೇರೆಡೆಯಿಂದ ಬಂದಿರಬಹುದು. ಆದರೆ ಅದನ್ನು ಸಿದ್ಧವಸ್ತುವನ್ನಾಗಿ ಮಾಡುವುದರಲ್ಲಿಯೇ ಕೌಶಲ ಅಡಗಿರುವುದು, ಉಪಯುಕ್ತತೆ ಕಾಣುವುದು. ಈ ಜನಪರತೆ-ಜನಹಿತಗಳೆಂದರೆ ಜನಪದಕ್ಕೆ ಸಮಾಂತರವಾಗಿ ಕಾವ್ಯರಚನೆ ಮಾಡುವುದು. ಹಾಗಾಗಿ ಪಂಪ ಕನ್ನಡ ಕಾವ್ಯದಲ್ಲಿ ಕನ್ನಡತನವನ್ನು ತುಂಬಿದ ನಾಡೋಜ. ಅವನ ಮಾರ್ಗವನ್ನು ಅನುಸರಿಸಿ ಮುಂದಿನ ನಮ್ಮ ಶ್ರೇಷ್ಠ ಕವಿಗಳು ನಮ್ಮತನವನ್ನು ಜನಹೃದಯಸ್ಪಂದನಕ್ಕೆ ಅನುಗುಣವಾಗಿ ತಮ್ಮ ಕಾವ್ಯಗಳಲ್ಲಿ ತುಂಬಿದ್ದಾರೆ, ಹೀಗಾಗಿ ಚಂಪೂವಿನ ಉಗಮ ಎಲ್ಲೇ ಆಗಿರಲಿ, ಕನ್ನಡ ಚಂಪೂ ಕನ್ನಡ ಚಂಪೂವೇ ವಿನಾ ಬೇರೆಯಲ್ಲ. ಈ ಮಾತನ್ನು ಇಡೀ ಕನ್ನಡ ಸಾಹಿತ್ಯ ಪರಂಪರೆಗೇ ಅನ್ವಯಿಸಬಹುದು.

ಅಡಿಟಿಪ್ಪಣಿಗಳು

೧ ಎಂ.ಎಂ. ಕಲಬುರ್ಗಿ : ಕವಿರಾಜಮಾರ್ಗ ಪರಿಸರದ ಕನ್ನಡ ಸಾಹಿತ್ಯ: ಪು. ೬೮

೨ ಬಲದೇವ ಉಪಾಧ್ಯಾಯ : 'ಸಂಸ್ಕೃತ ಸಾಹಿತ್ಯದ ಇತಿಹಾಸ' (ಅನು: ಎಸ್. ರಾಮಚಂದ್ರ ಶಾಸ್ತ್ರೀ); ಪು. ೬೪೭

೩ ಡಿ.ಎಲ್.ಎನ್. 'ಪೊಕ್ಕು' ರೂಪ ಬಳಸುತ್ತಾರೆ (ಪಂ.ಭಾ.ದೀಪಿಕೆ) ಅದರೆ ಯಾವ ಹಸ್ತಪ್ರತಿಯಲ್ಲೂ ಆ ರೂಪವಿಲ್ಲ.

'ದೇಸಿ' ಎಂಬುದಕ್ಕೆ ಪಂಪ ಇಲ್ಲಿ ನೀಡುತ್ತಿರುವ ಅರ್ಥಕ್ಕೂ 'ಕವಿರಾಜ ಮಾರ್ಗ'ದಲ್ಲಿ "ದೋಸಮಿನಿತೆಂದು ಬಗೆದುದ್ಭಾಸಿಸಿ ತರಿಸಂದು ಕನ್ನಡಂಗಳೊಳೆಂದುಂ ವಾಸುಗಿಯುಮರಿಯಲಾರದೆ ಬೇಸರಿಗುಂ ದೇಶಿ ಬೇರೆವೇರಪ್ಪುದರಿಂ" (೧.೪೬) ಎಂಬಲ್ಲಿ ಇರುವ ಅರ್ಥಕ್ಕೂ ತುಂಬ ವ್ಯತ್ಯಾಸವಿದೆ. ಕವಿರಾಜಮಾರ್ಗದಲ್ಲಿ 'ದೇಸಿ'ಯನ್ನು ಉಪಭಾಷೆ, ಪ್ರಾದೇಶಿಕ ವೈಲಕ್ಷಣ್ಯ ಎಂಬರ್ಥದಲ್ಲಿ ಬಳಸಲಾಗಿದೆ.

೪ ನೋಡಿ; ಎಂ.ಚಿದಾನಂದಮೂರ್ತಿ; 'ಪಂಪಭಾರತದಲ್ಲಿ ಮೌಲ್ಯಪ್ರಸಾರ' (ಸಂಶೋಧನ ತರಂಗ) ಲೇಖನ.

• •

ಅನುಬಂಧ

ಗ್ರಂಥಸಂಖ್ಯಾ ವಿವರ ಸೂಚಿ

ಸಿದ್ಧಪಡಿಸಿದವರು : ಎಸ್. ಶಿವಣ್ಣ

ಕ್ರಮ ಸಂಖ್ಯೆ	ಸಾಹಿತ್ಯ ಪ್ರಕಾರ	ಒಟ್ಟು ಕೃತಿಗಳು	ವಿವರಗಳು		
			ಧರ್ಮ	ಕವಿಗಳ ಸಂಖ್ಯೆ	ಕೃತಿಗಳ ಸಂಖ್ಯೆ
1.	ಚಂಪೂಕಾವ್ಯ	129	ಜೈನ	37	47
			ವೀರಶೈವ	26	31
			ವೈದಿಕ	33	43
			ಇತರ	8	8
2.	ಷಟ್ಪದೀ ಕಾವ್ಯ	582	ಜೈನ	29	44
			ವೀರಶೈವ	270	311
			ವೈದಿಕ	156	191
			ಇತರ	30	33
			ಕ್ರೈಸ್ತ	3	3
3.	ರಗಳೆ	212	ಜೈನ	1	1
			ವೀರಶೈವ	53	201
			ವೈದಿಕ	7	7
			ಇತರ	3	3
4.	ಶತಕ	184	ಜೈನ	6	11
			ವೀರಶೈವ	77	102
			ವೈದಿಕ	38	50
			ಕ್ರೈಸ್ತ	1	1
			ಇತರ	19	20
5.	ಸಾಂಗತ್ಯ	232	ಜೈನ	54	69
			ವೀರಶೈವ	93	102
			ವೈದಿಕ	39	51
			ಇತರ	8	10

ಕ್ರಮ ಸಂಖ್ಯೆ	ಸಾಹಿತ್ಯ ಪ್ರಕಾರ	ಒಟ್ಟು ಕೃತಿಗಳು	ವಿವರಗಳು		
			ಧರ್ಮ	ಕವಿಗಳ ಸಂಖ್ಯೆ	ಕೃತಿಗಳ ಸಂಖ್ಯೆ
6.	ತ್ರಿಪದಿ	66	ಜೈನ	6	11
			ವೀರಶೈವ	52	60
			ವೈದಿಕ	2	2
			ಇತರ	3	3
7.	ಗದ್ಯಕೃತಿ	423	ಜೈನ	51	54
			ವೀರಶೈವ	82	101
			ವೈದಿಕ	128	179
			ಕ್ರೈಸ್ತ	21	21
			ಇತರ	68	68
8.	ವಚನ ಸಾಹಿತ್ಯ :		ವೀರಶೈವ		
	(ವಚನಕಾರರು)		ಅ. ಪುರುಷರು	304	–
	346		ಆ. ಸ್ತ್ರೀಯರು	42	–
9.	ಹರಿದಾಸ ಸಾಹಿತ್ಯ :		ವೈದಿಕ		
	(ಕೀರ್ತನಕಾರರು)		ಅ. ಪುರುಷರು	293	–
	300		ಆ. ಸ್ತ್ರೀಯರು	7	–
10.	ಹರಿದಾಸೇತರ		ಜೈನ	1	–
	(ಕೀರ್ತನಕಾರರು)		ವೀರಶೈವ	60	–
	75		ಕ್ರೈಸ್ತ	8	–
			ಮುಸ್ಲಿಂ	4	–
			ಇತರ	2	–
11.	ಪುರಾಣಗಳು	129	ಜೈನ	28	31
			ವೀರಶೈವ	61	65
			ವೈದಿಕ	17	23
			ಕ್ರೈಸ್ತ	4	4
			ಇತರ	6	6
12.	ಲೌಕಿಕವೆಂದು ಕರೆಯಬಹುದಾದ ಕೃತಿಗಳು	14	ಜೈನ	3	3
			ವೀರಶೈವ	1	1
			ವೈದಿಕ	8	10

ಕ್ರಮ ಸಂಖ್ಯೆ	ಸಾಹಿತ್ಯ ಪ್ರಕಾರ	ಒಟ್ಟು ಕೃತಿಗಳು	ವಿವರಗಳು		
			ಧರ್ಮ	ಕವಿಗಳ ಸಂಖ್ಯೆ	ಕೃತಿಗಳ ಸಂಖ್ಯೆ
13.	ಚಾರಿತ್ರಿಕ ಕಾವ್ಯಗಳು	59	ಜೈನ	2	2
			ವೀರಶೈವ	4	4
			ವೈದಿಕ	8	10
			ಇತರ	43	43
14.	ಅನ್ಯಭಾಷೆಗಳಿಂದ ಅನುವಾದ	126	ಸಂಸ್ಕೃತದಿಂದ	–	27
			ತಮಿಳಿನಿಂದ	–	19
			ತೆಲುಗಿನಿಂದ	–	20
			ಇತರ	–	60
15.	ಕನ್ನಡದಿಂದ ಬೇರೆ ಭಾಷೆಗಳಿಗೆ	29	ಇಂಗ್ಲಿಷ್	–	4
			ಜರ್ಮನ್	–	2
			ತಮಿಳು	–	1
			ತೆಲುಗು	–	6
			ಮರಾಠಿ	–	8
			ಸಂಸ್ಕೃತ	–	8
16.	ಶಾಸ್ತ್ರಸಾಹಿತ್ಯ ಅರ್ಥಶಾಸ್ತ್ರ	4	ವೈದಿಕ	2	2
			ಇತರ	2	2
17.	ಅಲಂಕಾರ	26	ಜೈನ	5	6
			ವೀರಶೈವ	3	4
			ವೈದಿಕ	11	11
			ಇತರ	5	5
18.	ಅಶ್ವಶಾಸ್ತ್ರ	8	ಜೈನ	2	2
			ವೈದಿಕ	4	4
			ಇತರ	2	2
19.	ಆರೋಗ್ಯ ಶಾಸ್ತ್ರ	24	ವೈದಿಕ	14	15
			ಕ್ರೈಸ್ತ	3	3
			ಇತರ	6	6

ಕ್ರಮ ಸಂಖ್ಯೆ	ಸಾಹಿತ್ಯ ಪ್ರಕಾರ	ಒಟ್ಟು ಕೃತಿಗಳು	ವಿವರಗಳು		
			ಧರ್ಮ	ಕವಿಗಳ ಸಂಖ್ಯೆ	ಕೃತಿಗಳ ಸಂಖ್ಯೆ
20.	ಕಾಮಶಾಸ್ತ್ರ	11	ಜೈನ	1	1
			ವೀರಶೈವ	1	1
			ವೈದಿಕ	2	2
			ಇತರ	7	7
21.	ಕಾವ್ಯಮೀಮಾಂಸೆ	1	ವೈದಿಕ	1	1
22.	ಖಗೋಳಶಾಸ್ತ್ರ	1	ಕ್ರೈಸ್ತ	1	1
23.	ಖಡ್ಗಶಾಸ್ತ್ರ	2	ಇತರ	2	2
24.	ಖನಿಜ ಶಾಸ್ತ್ರ	2	ವೈದಿಕ	2	2
25.	ಗಜಶಾಸ್ತ್ರ	3	ಜೈನ	1	1
			ಇತರ	2	2
26.	ಗಣಿತಶಾಸ್ತ್ರ	23	ಜೈನ	4	10
			ವೈದಿಕ	7	7
			ಇತರ	6	6
27.	ಗೋವೈದ್ಯ	13	ಜೈನ	3	3
			ವೀರಶೈವ	1	1
			ವೈದಿಕ	4	5
			ಇತರ	4	4
28.	ಛಂದಸ್ಸು	16	ಜೈನ	4	4
			ವೀರಶೈವ	4	4
			ವೈದಿಕ	5	5
			ಇತರ	3	3
29.	ಜ್ಯೋತಿಷ	119	ಜೈನ	7	7
			ವೀರಶೈವ	1	1
			ವೈದಿಕ	26	33
			ಇತರ	78	78
30.	ಧನವಾಸ್ತು	2	ಇತರ	2	2

ಕ್ರಮ ಸಂಖ್ಯೆ	ಸಾಹಿತ್ಯ ಪ್ರಕಾರ	ಒಟ್ಟು ಕೃತಿಗಳು	ವಿವರಗಳು		
			ಧರ್ಮ	ಕವಿಗಳ ಸಂಖ್ಯೆ	ಕೃತಿಗಳ ಸಂಖ್ಯೆ
31.	ನಾಟ್ಯಶಾಸ್ತ್ರ	5	ವೈದಿಕ	2	2
			ಇತರ	3	3
32.	ನಾಣ್ಯಶಾಸ್ತ್ರ	1	ಇತರ	1	1
33.	ನ್ಯಾಯಶಾಸ್ತ್ರ	21	ವೀರಶೈವ	1	1
			ವೈದಿಕ	11	11
			ಕ್ರೈಸ್ತ	1	1
			ಇತರ	13	13
34.	ನಿಘಂಟು	72	ಜೈನ	10	10
			ವೀರಶೈವ	9	9
			ವೈದಿಕ	18	18
			ಕ್ರೈಸ್ತ	6	6
			ಇತರ	29	29
35.	ನೀತಿಶಾಸ್ತ್ರ	20	ಜೈನ	2	2
			ವೀರಶೈವ	2	2
			ವೈದಿಕ	8	9
			ಇತರ	7	7
36.	ಪ್ರಶ್ನಶಾಸ್ತ್ರ	9	ಜೈನ	3	3
			ವೈದಿಕ	1	1
			ಇತರ	5	5
37.	ಪಾಕಶಾಸ್ತ್ರ	12	ಜೈನ	1	1
			ವೀರಶೈವ	1	1
			ವೈದಿಕ	3	3
			ಇತರ	7	7
38.	ಪ್ರಾಣಿಶಾಸ್ತ್ರ	2	ವೈದಿಕ	2	2
39.	ಭಾಷಾಶಾಸ್ತ್ರ	2	ವೈದಿಕ	2	2
40.	ಭೂಮಿಯ ಅಳತೆ	2	ವೈದಿಕ	1	1
			ಇತರ	1	1

ಕ್ರಮ ಸಂಖ್ಯೆ	ಸಾಹಿತ್ಯ ಪ್ರಕಾರ	ಒಟ್ಟು ಕೃತಿಗಳು	ವಿವರಗಳು		
			ಧರ್ಮ	ಕವಿಗಳ ಸಂಖ್ಯೆ	ಕೃತಿಗಳ ಸಂಖ್ಯೆ
41.	ಯೋಗಶಾಸ್ತ್ರ	1	ಜೈನ	1	1
42.	ರತ್ನಶಾಸ್ತ್ರ	4	ವೈದಿಕ	1	1
			ಇತರ	3	3
43.	ಲೋಕವಿಭಾಗ	4	ಜೈನ	4	4
			ಇತರ	1	1
44.	ವ್ಯವಸಾಯ	5	ವೀರಶೈವ	1	1
			ವೈದಿಕ	2	2
			ಕ್ರೈಸ್ತ	1	1
			ಇತರ	1	1
45.	ವಾದ್ಯಶಾಸ್ತ್ರ	1	ಇತರ	1	1
46.	ವಾಸ್ತುಶಿಲ್ಪ	7	ವೈದಿಕ	1	1
			ಇತರ	6	6
47.	ವ್ಯಾಕರಣ	51	ಜೈನ	5	5
			ವೀರಶೈವ	6	8
			ವೈದಿಕ	21	22
			ಇತರ	5	5
48.	ವಿಶ್ವಕೋಶ	2	ವೀರಶೈವ	1	1
			ವೈದಿಕ	1	1
49.	ವೃಷ್ಟಿಶಾಸ್ತ್ರ	12	ಜೈನ	1	1
			ವೈದಿಕ	1	1
			ಇತರ	10	10
50.	ವೈದ್ಯಶಾಸ್ತ್ರ	144	ಜೈನ	13	13
			ವೀರಶೈವ	5	7
			ವೈದಿಕ	33	41
			ಕ್ರೈಸ್ತ	4	4
			ಇತರ	79	79
51.	ಶಿಲ್ಪಶಾಸ್ತ್ರ	4	ಇತರ	4	4
52.	ಸಸ್ಯಶಾಸ್ತ್ರ	4	ವೈದಿಕ	4	4

ಕ್ರಮ ಸಂಖ್ಯೆ	ಸಾಹಿತ್ಯ ಪ್ರಕಾರ	ಒಟ್ಟು ಕೃತಿಗಳು	ವಿವರಗಳು		
			ಧರ್ಮ	ಕವಿಗಳ ಸಂಖ್ಯೆ	ಕೃತಿಗಳ ಸಂಖ್ಯೆ
53.	ಸಂಗೀತ ಶಾಸ್ತ್ರ	5	ಇತರ	5	5
54.	ಸುಗಂಧ ಶಾಸ್ತ್ರ	3	ಇತರ	3	3
55.	ಸಿಡಿಮದ್ದಿನ ಶಾಸ್ತ್ರ (Fire Works)	1	ವೈದಿಕ	1	1
	ಶಾಸ್ತ್ರಸಾಹಿತ್ಯ ಕೃತಿಗಳ ಒಟ್ಟು ಸಂಖ್ಯೆ	654			
56.	ಇತರ ಬಗೆ	124	ಜೈನ	7	7
	ಕೃತಿಗಳು : ಸಂಕಲನ		ವೀರಶೈವ	8	115
			ಕ್ರೈಸ್ತ	1	1
			ಇತರ	1	1
57.	ಟೀಕೆ	830	ಜೈನ	159	172
			ವೀರಶೈವ	214	278
			ವೈದಿಕ	201	232
			ಇತರ	148	148
58.	ಕನ್ನಡ	177	ಜೈನ	1	1
	ಕವಯಿತ್ರಿಯರು		ವೀರಶೈವ	50	56
59.			ವೈದಿಕ	25	117
			ಕ್ರೈಸ್ತ	2	2
			ಇತರ	1	1

ಸೂಚನೆ : ಪ್ರಸ್ತುತ ಸೂಚಿ ಆರಂಭ ಕಾಲದಿಂದ ಕ್ರಿ.ಶ. 1900ರವರೆಗಿನ ಕೃತಿಗಳನ್ನು ಕುರಿತದ್ದಾಗಿದೆ. ಈ ಸೂಚಿ ನಮ್ಮ ತಿಳಿವಳಿಕೆಗೆ ಬಂದ ಕೃತಿಗಳ ಸಂಖ್ಯೆಯನ್ನು ನಿರ್ದೇಶಿಸುತ್ತದೆ.

ಈ ಯೋಜನೆಯ ಹೆಸರೇ ಸೂಚಿಸುವಂತೆ, ಇದು ಸಾಮಾನ್ಯರಿಗಾಗಿ ಬರೆದ ಸಾಹಿತ್ಯ ಚರಿತ್ರೆ. ಸಾಹಿತ್ಯ ಚರಿತ್ರೆಯನ್ನು ಕುರಿತು ಇತ್ತೀಚೆಗೆ ಕರ್ನಾಟಕದಲ್ಲಿ ನಡೆಯುತ್ತಿರುವ ಕೆಲಸಗಳೆಲ್ಲ ಬಹುಮಟ್ಟಿಗೆ, ವಿದ್ವಾಂಸರನ್ನೋ, ಸಾಹಿತ್ಯವನ್ನು ವಿಶೇಷವಾದ ರೀತಿಯಲ್ಲಿ ಅಧ್ಯಯನ ಮಾಡುವವರನ್ನೋ ಉದ್ದೇಶಿಸಿದವುಗಳು. ಆದರೆ ಈ ಪ್ರೌಢ ಪರಿಣತ ವರ್ಗದ ಆಚೆ ಇರುವ, ಸಾಹಿತ್ಯಾಸಕ್ತರಾದ ಸಾಮಾನ್ಯರಿಗೆ, ಕನ್ನಡ ಸಾಹಿತ್ಯ ಚರಿತ್ರೆಯನ್ನು ಮುಟ್ಟಿಸುವ ಪ್ರಯತ್ನಗಳು ಅಷ್ಟಾಗಿ ನಡೆದಿಲ್ಲವೆಂದೇ ಹೇಳಬೇಕು. ಈ ದಿಕ್ಕಿನಲ್ಲಿ ಈಗ ಸಿದ್ಧವಾಗಿರುವ ಈ ಹತ್ತು ಕಿರು ಸಂಪುಟಗಳು ಮೊದಲ ಪ್ರಯತ್ನವೆನ್ನಬಹುದು.

ಸಂಪಾದಕರ ಮಾತಿನಿಂದ...

ಸಪ್ನ ಬುಕ್ ಹೌಸ್®
3ನೇ ಮುಖ್ಯ ರಸ್ತೆ, ಗಾಂಧಿನಗರ, ಬೆಂಗಳೂರು - 560 009
ದೂರವಾಣಿ : 40114455

ISBN : 978-81-280-1094-1
ಬೆಲೆ ರೂ. 125/-